विश्वविद्याग्रन्थमाला-१२

श्रीवेदव्यासप्रणीतं

# श्रीमद्भागवतम्

स्कन्धः-3

श्रीराघವೇಂದ್ರದಾಸಕೃತ

ವಿಜಯಧ್ವಜೀಯವ್ಯಾಖ್ಯಾನಾನುಸಾರಿ ಕನ್ನಡಾನುವಾದ

# ಶ್ರೀಮದ್ಭಾಗವತ ಸುಧಾಸೌರಭ


सम्पादकः

सि. आर् प्रदीपसिंहाचार्यः चतुर्वेदः



प्रकाशनम्

वेदवेदान्ताध्यनशोधसंसस्थानम्

नवदेहली, वसन्तकुञ्ज

२०२०

विश्वविद्याग्रन्थमाला-१२

**श्रीवेदव्यासप्रणीतं श्रीमद्भागवतम्, स्कन्धः-3**

**ಶ್ರೀರಾಘವೇಂದ್ರದಾಸಕೃತ ವಿಜಯಧ್ವಜೀಯವ್ಯಾಖ್ಯಾನಾನುಸಾರಿ**

**ಕನ್ನಡಾನುವಾದ ಶ್ರೀಮದ್ಭಾಗವತ ಸುಧಾಸೌರಭ**


सम्पादकः -

सि. आर् प्रदीपसिंहाचार्यः चतुर्वेदः



प्रकाशनम्

वेदवेदान्ताध्यनशोधसंसस्थानम्

नवदेहली, वसन्तकुञ्ज

पत्राणि - 342 peges

प्रथममुद्रणम् 2020

मुद्रितप्रतयः 250

मूल्यम्- 200

जगद्गुरुश्रीमन्मध्वाचार्यमूलमहासंस्थानम्-

श्रीपेजावरअधोक्षजमठः-उडुपि

## श्रीविश्वप्रसन्नतीर्थश्रीपादानाम्

## अनुग्रहसन्देशः

श्रीपेजावरमठाधीशैः यतिकुलचक्रवर्तीत्यादिबिरुदाङ्कितैः अस्मद्गुरुचरणैः श्रीविश्वेशतीर्थश्रीपादैः उत्तरभारतक्षेत्रे माध्वतत्वप्रसारणाय राजधान्यां नवदेहलीप्रदेशे श्रीरामविठ्ठलशिक्षणसेवासमितिमुखेन संस्थापितं वेदवेदान्ताध्ययनशोधसंस्थानम् । महान्तमिमं भारमुदूह्य वेद-वेदान्त-इतिहास-पुराण-काव्यादीनां भाषान्तर-संशोधन-ग्रन्थप्रकाशन-प्रसारणादिनानाकर्मणा श्रीमन्मध्ववेदव्याससेवां कुर्वदिदं संशोधनमन्दिरं माध्वततेर्महान्तम् उपकारं विदधत् अस्मदादरपात्रं वर्तते । संशोधनादिकर्मणि नियुक्ता अस्मच्छिष्या विपश्चितः यावच्छक्ति ग्रन्थादि संशोध्य अनूद्य च व्यास-मध्वसेवां व्यदधुः । तमिमं ग्रन्थवरं संशोधयित्रे विदुषे, प्रकाशयित्रे वेदवेदान्ताध्ययनशोधसंस्थान-कार्यकारिसमित्यै, निदेशकाय च अस्मदुपास्यचरणौ श्रीरामविट्ठलौ श्रेयो दत्तामिति सम्प्रार्थयामहे ।

इति नारायणस्मृतयः

# निदेशकवाचांसि

मानवानां परमपुरुषार्थसाधनायाध्यात्मतत्वज्ञानमावश्यकम् । तच्चोत्तरभारते बहुन्यूनमिति तत्रापि माध्वतत्वज्ञानप्रसारणाय नवदेहलीप्रान्ते श्रीपेजावरमठाधीशैः श्रीविश्वेशतीर्थ-श्रीमच्चरणैः स्थापितमिदं वेद-वेदान्ताध्ययनशोधसंस्थानम् । परमपूज्यानां पमहंसप्रवराणां यतिकुल-चक्रवर्तिनां श्रीविश्वेशतीर्थश्रीमच्चरणानां तथा तच्छिष्याणां श्रीविश्वप्रसन्न तीर्थश्रीपादानां परमानुग्रहेण मार्गदर्शनेन च वरीवर्धमानमिदं श्रीचरणानां प्रेरणया विश्वविद्याग्रन्थमालानाम्ना विश्वतोमुखतया वेद-वेदान्त-इतिहास-काव्य-व्याकरणादिग्रन्थानां भाषान्तर-प्रकाशन-प्रसरणादि-महत्कर्मणि सहर्षं सोत्साहं समुद्यतम् । अध्येतृसुजनवृन्दश्चानेन ग्रन्थप्रकटनेन समुत्कट-प्रयोजनजातमभिसम्पद्यतामित्यभिकामये ।

विश्वविद्याग्रन्थमालायाः द्वादशकुसुमत्वेन ग्रन्थमिमं सारस्वतलोकं प्रति समर्प्यते । शास्त्रज्ञाः सहृदयाः अस्य ग्रन्थस्य स्वागतं व्याहरन्तीति मन्ये । महति कार्येस्मिन् भागभाग्भ्यः सर्वेभ्यः, ग्रन्थस्य सम्पादन-संशोधनकर्मणि सहकृतवद्भ्यः विद्वद्भ्यः, मुद्रकेभ्यश्च अधमर्णोहम् ।

निदेशकः

# ಸಂಪಾದಕೀಯ

ಶ್ರೀಮದ್ಭಾಗವತವು ಪುರಾಣರಾಜ. ಇದರ ಮೊಟ್ಟ ಮೊದಲನೆಯ ಕನ್ನಡೀಕರಣವು ಶ್ರೀವರದಪ್ರಲ್ಹಾದ-ಹರಿವಿಠಲಾಂಕಿತರಾದ ಮೈಸೂರುರಾಘವೇಂದ್ರದಾಸರಿಂದ ಆಗಿರತಕ್ಕಂತದ್ದು. ಶ್ರೀವಿಜಯಧ್ವಜತೀರ್ಥರ ಪದರತ್ನಾವಲೀ ಟೀಕೆಯ ಅಭಿಪ್ರಾಯಗಳನ್ನೊಳಗೊಂಡಂತೆ ಅನೇಕ ಟಿಪ್ಪಣಿಗಳ ವಿಷಯಗಳನ್ನೂ ಸಹ ಇಲ್ಲಿ ಅನುವಾದ ಮಾಡಿದ್ದಾರೆ. ಮೂಲಗ್ರಂಥ ಹಾಗೂ ಕನ್ನಡಾನುವಾದವನ್ನು ಬರೆದ ಇವರ ಹಸ್ತಪ್ರತಿಯಲ್ಲಿ ಎಲ್ಲೂ ಸಹ ತಪ್ಪುಬರೆದು ನಂತರ ತಿದ್ದಿದ ಚಿಹ್ನೆ ಕಾಣಿಸುವುದಿಲ್ಲ. ವಿದ್ವಾಂಸರೂ ಸಹ ಇದನ್ನು ಅಧ್ಯಯನ ಮಾಡಿದರೆ ಭಾಗವತದ ಸರಿಯಾದ ಭಾವವು ಸ್ಪಷ್ಟವಾಗುವುದರಲ್ಲಿ ಸಂದೇಹವಿಲ್ಲ ಕೆಲವು ಕಡೆ ವ್ಯಾಖ್ಯಾನಗಳಲ್ಲಿ ಕಂಡುಬರದಿರುವ ಅರ್ಥಗಳನ್ನು ಬರೆದಿರುವುದೂ ಕಂಡುಬರುತ್ತದೆ. ಈ ಅನುವಾದದ ಕೆಲವು ವಿಶೇಷಅಂಶಗಳನ್ನು ಹೀಗಿವೆ. ತೃತೀಯಸ್ಕಂಧದಲ್ಲಿ ವರಾಹಾವತಾರಕಥೆಯನ್ನು ನಿರೂಪಿಸುವಾಗ ವಿಶೇಷಾಂಶ ಎಂದು ಭಾಗವತತಾತ್ಪರ್ಯದ ವಿಷಯವನ್ನು ವಿವರಿಸಿದ್ದಾರೆ. ಚತುರ್ಥಸ್ಕಂಧದಲ್ಲಿ ರುದ್ರಗೀತೆಯ ತ್ರೈಲೋಕ್ಯಪಾಲಕ ಎಂಬ ಶಬ್ದಕ್ಕೆ ನೂತವಾದ ಅರ್ಥವನ್ನು ವಿವರಿಸಿ ಇದು ತತ್ವದೇವತೆಗಳು ಸೂಚಿಸಿದ ಅರ್ಥ ಎಂದು ಬರೆದಿದ್ದಾರೆ. ಅಷ್ಟಮಸ್ಕಂಧದಲ್ಲಿ ವಾಮನದೇವರ ಮೂರುಹೆಜ್ಜೆ ಬೇಡಿದ್ದರ ರಹಸ್ಯಾರ್ಥವನ್ನು ವಿಶೇಷಾಂಶದಲ್ಲಿ ತಿಳಿಸಿದ್ದಾರೆ. ಹನ್ನೊಂದನೇ ಸ್ಕಂಧದಲ್ಲಿ ಪ್ರಮಾಣವಾಕ್ಯಗಳನ್ನು ವಿವರಿಸುವಾಗ ಶ್ರೀನಿವಾಸತೀರ್ಥರ ಟಿಪ್ಪಣಿಯ ವಿಷೇಶಾಂಶಗಳು, ಸತ್ಯಧರ್ಮತೀರ್ಥರ ಟಿಪ್ಪಣಿಯ ವಿಸ್ತಾರವಾಗಿ ಹೇಳಿರುವುದು ಅತ್ಯಂತ ಗಮನೀಯವಾದ ಅಂಶ. ಇಷ್ಟೆಲ್ಲ ವಿಶೇಷಾಂಶಗಳನ್ನು ಬರೆದಿದ್ದರೂ ಸಹ ಇವೆಲ್ಲವೂ ತಮ್ಮೊಳಗೆ ನಿಂತು ಬರೆಸಿದ ತತ್ವಾಭಿಮಾನಿದೇವತೆಗಳ ಅನುಗ್ರಹ ಎಂದು ಹೇಳಿಕೊಂಡಿರುವುದು ಇವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ.

ಈ ಗ್ರಂಥವನ್ನು ಸಂಪಾದನೆ ಮಾಡಲು ಹರಿ-ಗುರುಗಳ ಅನುಗ್ರಹವೇ ಬಲ. ಇದಕ್ಕೆ ಬೆನ್ನೆಲುಬಾದ ನನ್ನ ವಿದ್ಯಾಗುರುಗಳಾದ ಶ್ರೀವಿಶ್ವೇಶತೀರ್ಥಶ್ರೀಪಾದರಿಗೆ ಸಾಷ್ಟಾಂಗಪ್ರಣಾಮಗಳು. ಹಾಗೂ ನನಗೆ ಮೂರು ವೇದಗಳನ್ನು ಉಪದೇಶಿಸಿ ಅನುಗ್ರಹಿಸಿದ ಶ್ರೀವಿಶ್ವಪ್ರಸನ್ನತೀರ್ಥರಿಗೆ ಸಾಷ್ಟಾಂಗಪ್ರಣಾಮಗಳು. ಹಾಗೂ ನನಗೆ ಭಾಗವತಗ್ರಂಥವನ್ನು ವಿಜಯಧ್ವಜೀಯಟೀಕಾ ಸಹಿತ ಪಾಠ ಮಾಡಿದ ಶ್ರೀವಿಶ್ವನಂದನತೀರ್ಥರಿಗೆ ಸಾಷ್ಟಾಂಗಪ್ರಣಾಮಗಳು.

ಈ ಗ್ರಂಥವನ್ನು ದೆಹಲಿಯ ವೇದವೇದಾಂತ ಅಧ್ಯಯನಶೋಧಸಂಸ್ಥಾನವು ಓದುಗರ ದೃಷ್ಟಿಯಿಂದ ಅನೇಕ ಭಾಗಗಳಲ್ಲಿ ಪ್ರಕಾಶನ ಪಡಿಸುತ್ತಿದೆ. ಇದನ್ನು ಮುದ್ರಣ ಮಾಡಲು ಅವಕಾಶ ನೀಡಿದ ಸಂಸ್ಥೆಯ ನಿರ್ದೇಶಕರು, ಆಡಳಿತ ಮಂಡಲಿ, ಮುದ್ರಕರು ಎಲ್ಲರಿಗೂ ಧನ್ಯವಾದಗಳು.

श्रीमन्मध्वमहाचार्यपदपद्मैकसद्मनाम्
अणूनां महतां चापि भवतात् करुणा मयि ।।

तवैवेदं मने वस्तु तुभ्यमेव समर्पये ।
श्रद्धया परयाविष्ठः प्रणिपातपुरस्सरम् ।।

प्रसरीसर्तु लोकेस्मिन् पावनी ते सरस्वती ।
प्राकृतोपि च तं विद्यादेतदर्था कृतिर्मम ।।

# श्रीवेदव्यासप्रणीतं श्रीमद्भागवतम्

# तृतीयस्कन्धः

## अथ प्रथमोऽध्यायः

**श्री शुक उवाच**

एवमेतत् पुरा पृष्टो मैत्रेयो भगवान् किल।
क्षत्त्रा वनं प्रविष्टेन त्यक्त्वा स्वगृहमृद्धिमत्॥ १ ॥

यदा त्वयं मन्त्रकृद् वो भगवानखिलेश्वरः।
पौरवेन्द्रपुरं हित्वा प्रविवेशात्मसात्कृतम्॥ २ ॥

परीक्षिदुवाचकुत्र क्षत्तुर्भगवता मैत्रेयेणास सङ्गमः।
कदा वा सह संवाद एतद् वर्णय नः प्रभो॥ ३ ॥

न ह्यल्पार्थोदयस्तस्य विदुरस्यामलात्मनः।
तस्मिन् वरीयसि प्रश्नः साधुवादोपबृंहितः॥ ४ ॥

**सूत उवाच**

स एवमृषिवर्योऽयं पृष्टो राज्ञा परीक्षिता।
प्रत्याह तं सुबहुवित् प्रीतात्मा श्रूयतामिति॥ ५ ॥

**श्रीशुक उवाच**

यदा तु राजा स्वसुतानसाधून् पुष्णन्नधर्मेण विनष्टदृष्टिः।
भ्रातुर्यविष्ठस्य सुतान् विबन्धून् प्रवेश्य लाक्षाभवने ददाह॥ ६ ॥

यदा सभायां कुरुदेवदेव्याः  केशाभिमर्शं सुतकर्म गर्ह्यम्।
न वारयामास नृपः स्नुषाया अस्रैर्हरन्त्याः कुचकुङ्कुमानि॥ ७ ॥

द्यूते त्वधर्मेण जितस्य साधोः  सत्यावलम्बस्य वनागतस्य।
न याचितोऽदात् समयेन दायं तमो जुषाणो यदजातशत्रोः॥ ८ ॥

यदा तु पार्थप्रहितः सभायां जगद्गुरुर्यानि जगाद कृष्णः।
न तानि पुंसाममृतायनानि राजाऽनुमेने हतपुण्यलेशः॥ ९ ॥

यदोपहूतो भवनं प्रविष्टो मन्त्राय पृष्टः किल पूर्वजेन ।
अथाह तं मन्त्रदृशां वरीयान् यन्मन्त्रिणो वैदुरिकं वदन्ति ॥ १० ॥

अजातशत्रोः प्रतियच्छ दायं तितिक्षतो दुर्विषहं तवागः ।
सहानुजो यत्र वृकोदरो हि स्वशत्रुहा यं त्वमलं बिभेषि ॥ ११ ॥

यदा तु पार्थान् भगवान् मुकुन्दो गृहीतवान् सक्षितिदेवदेवः ।
आस्ते स्वपुर्यां यदुदेवदेवो विनिर्जिताशेषनृदेवदेवः ॥ १२ ॥

स एष दोषः पुरुषद्विडास्ते गृहं प्रविष्टो यमपत्यमत्या ।
पुष्णासि कृष्णाद् विमुखो गतश्रीस्त्यजाश्वथैनं कुलकौशलाय ॥ १३ ॥

इत्यूचिवांस्तत्र सुयोधनेन प्रवृद्धकोपस्फुरिताधरेण ।
असत्कृतः सत्स्पृहणीयशीलः क्षत्ता सकर्णानुजसौबलेन ॥ १४ ॥

क एनमत्रोपजुहाव जिह्मं दास्याः सुतं यद्बलिनैव पुष्टः ।
तस्मिन् प्रतीपः परकृत्य आस्ते निर्वास्यतामाशु पुराच्छ्वसानः ॥ १५ ॥

स इत्थमत्युल्बणकर्णबाणैर्भ्रातुः पुरो मर्मसु ताडितोऽपि ।
स्मयन् धनुर्द्वारि निधाय मायां गतव्यथोऽयादुरु मानयानः ॥ १६ ॥

स निर्गतः कौरवपुण्यलब्धगजाह्वयात् तीर्थपदः पदानि ।
अन्वाक्रमत् पुण्यचिकीर्षयोर्व्यामधिष्ठितो यानि सहस्रमूर्तिः ॥ १७ ॥

वनेषु पुण्योपवनाद्रिकुञ्जेष्वपङ्कतोयेषु सरित्सरस्सु ।
अनन्तलिङ्गैः समलङ्कृतेषु चचार तीर्थायतनेष्वनन्यः ॥ १८ ॥

गां पर्यटन् मेध्यविविक्तवृत्तिः सदाऽऽप्लुतोऽधःशयनावधूतः ।
अलक्षितः स्वैरवधूत(केशो)वेषो व्रतानि चेरे हरितोषणानि ॥ १९ ॥

इत्थं व्रजन् भारतमेव वर्षं कालेन यावद् गतवान् प्रभासम् ।
तावच्छशास क्षितिमेकचक्रामेकातपत्रामजितेन पार्थः ॥ २० ॥

तत्राथ शुश्राव सुहृद्विनष्टिं वनं यथा वेणुजवह्निनाऽऽश्रयम् ।
संस्पर्धया दग्धमथानुशोचन् सरस्वतीं प्रत्यगियाय तूष्णीम् ॥ २१ ॥

तस्यां त्रितस्योशनसो मनोश्च पृथोरथाग्नेरसितस्य वायोः ।
तीर्थं सुदासस्य गवां गुहस्य यच्छ्राद्धदेवस्य स आसिषेवे ॥ २२ ॥

अन्यानि चेह द्विजदेवदेवैः कृतानि नानायतनानि विष्णोः ।
प्रत्यङ्गमुख्याङ्कितमन्दिराणि यद्दर्शनात् कृष्णमनुस्मरन्ति ॥ २३ ॥

ततस्त्वतिव्रज्य सुराष्ट्रमृद्धं सौवीरमत्स्यान् कुरुजाङ्गलांश्च ।
कालेन तावद् यमुनामुपेत्य तत्रोद्धवं भागवतं ददर्श ॥ २४ ॥

स वासुदेवानुचरं प्रशान्तं बृहस्पतेः प्राक्तनयं प्रतीतम् ।
आलिङ्गय गाढं प्रणयेन भद्रं स्वानामपृच्छद् भगवत्प्रजानाम् ॥ २५ ॥

कच्चित् पुराणौ पुरुषौ स्वनाभ्यपद्मानुवृत्त्येह कला(किला)वतीर्णौ ।
आसात उर्व्याः कुशलं विधाय कृतक्षणौ कुशलं शूरगेहे ॥ २६ ॥

कश्चित् कुरूणां परमः सुहृन्नो भामः स आस्ते सुखमङ्ग शौरिः ।
यो वै स्वसॄणां पितृवद् ददाति वरान् वदान्यो वरतर्पणेन ॥ २७ ॥

कच्चिद् वरूथाधिपतिर्यदूनां प्रद्युम्न आस्ते सुखमङ्ग वीरः ।
यं रुक्मिणी भगवतोऽभिलेभे आराध्य विप्रान् स्मरमादिसर्गे ॥ २८ ॥

कच्चित् सुखं सात्वतवृष्णिभोजदाशार्हकाणामधिपः सः आस्ते ।
यमभ्यषिञ्चच्छतपत्रनेत्रो नृपासनाधिं परिहृत्य दूरात् ॥ २९ ॥

कच्चिद्धरेः सौम्यसुतः सदृक्षआस्तेऽग्रणी रथिनां साधु साम्बः ।
असूत यं जाम्बवती व्रताढ्या देवं गुहं योऽम्बिकया धृतोऽग्रे ॥ ३० ॥

क्षेमं स कच्चिद् युयुधान आस्ते यः फल्गुनाल्लब्धधनूरहस्यः ।
लेभेऽञ्जसाऽऽधोक्षजसेवयैव गतिं तदीयां यतिभिर्दुरापाम् ॥ ३१ ॥

कच्चिद् बुधः स्वस्त्यनमीवआस्ते श्वफल्कपुत्रो भगवत्प्रपन्नः ।
यः कृष्णपादाङ्कितमार्गपांसुष्वचेष्टत प्रेमविभिन्नधैर्यः ॥ ३२ ॥

कच्चिच्छिवं देवकभोजपुत्र्या विष्णुप्रजाया इव देवमातुः ।
या वै स्वगर्भेण बभार देवं त्रयी यथा यज्ञवितानमर्थम् ॥ ३३ ॥

अपिस्विदास्ते भगवान् सुखं वा यः सात्वतां कामदुघोऽनिरुद्धः।
यमामनन्ति स्म हि शब्दयोनिं मनोमयं सत्वतुरीयमर्थम्॥ ३४ ॥

अपिस्विदन्ये च निजात्मदैवमनन्यवृत्त्या समनुव्रता ये।
हार्दिक्यसत्यात्मजचारुदेष्णगदादयः स्वस्ति चरन्ति सौम्य॥ ३५ ॥

अपि स्वदोर्भ्यां विजयाच्युताभ्यां धर्मेण धर्मः परिपाति सेतुम्।
दुर्योधनोऽतप्यत यत्सभायां साम्राज्यलक्ष्म्या विजयानुवृत्त्या॥ ३६ ॥

किं वा कृताघेष्वघमत्यमर्षी भीमोऽहिवद् दीर्घतमं व्यमुञ्चत्।
यस्यांघ्रिपातं रणभूर्न सेहे मार्गं गदायाश्चरतो विचित्रम्॥ ३७ ॥

कच्चिद् यशोधा रथयूथपानां गाण्डीवधन्वोपरतारिरास्ते।
अलक्षितो यच्छरकूटगूढो मायाकिरातो गिरिशस्तुतोष॥ ३८ ॥

यमावुतस्वित् तनयौ च माद्याः पार्थैर्वृतौ पक्ष्मभिरक्षिणीव।
रेमात उद्धृत्य मृधे स्वरिक्थं सुधां सुपर्णाविव वज्रिवक्रात्॥ ३९ ॥

अहो पृथाऽपि ध्रियतेऽर्भकार्थे

राजर्षिवर्येण विनापि तेन।

यस्त्वेक वीरोऽतिरथो विजिग्ये

धनुर्द्वितीयः ककुभश्चतस्रः॥ ४० ॥

सौम्यानुशोचे तमधः पतन्तं भ्रात्रे परेताय विदुद्रुहे यः।

निर्यापितो येन सुहृत् स्वपुर्या

अहं स्वपुत्रान् समनुव्रतेन॥ ४१ ॥

सोऽहं हरेर्मर्त्यविडम्बनेन दृशो नृणां चालयतो विधातुः।
नान्योपलक्ष्यः पदवीं प्रसादाच्चरामि पश्यन् गतविस्मयोऽत्र॥ ४२ ॥

नूनं नृपाणां त्रिमदोत्पथानां महीं मुहुश्चालयतां चमूभिः।

वधात् प्रपन्नार्तिजिहीर्षयेशो ह्यपैक्षताघं भगवान् कुरूणाम्॥ ४३ ॥

अजस्य जन्मोत्पथनाशनाय कर्माण्यकर्तुर्ग्रहणाय पुंसाम् ।
न त्वन्यथा कोऽर्हति देहयोगं परो गुणानामुत कर्मतन्त्रम् ॥ ४४ ॥

तस्य प्रपन्नाखिललोकपानामवस्थितानामनुशासने स्वे ।
अर्थाय जातस्य यदुष्वजस्य वार्तां सखे कीर्तय तीर्थकीर्तेः ॥ ४५ ॥

## ॥ इति श्रीमद्भागवते (तृतीयस्कन्धे(*3) प्रथमोऽध्यायः ॥

# ॥ ಶ್ರೀಮದ್ಭಾಗವತೇ ತೃತೀಯಸ್ಕಂಧಃ ॥

## ॥ ಅಥ ಪ್ರಥಮೋಧ್ಯಾಯಃ ॥

## ಹಸ್ತಿನಾವತಿಯಿಂದ ವಿದುರನ ನಿರ್ಗಮನ

ಶ್ರೀಮದ್ವಿಜಯಧ್ವಜತೀರ್ಥರು ಶ್ರೀಮದ್ಭಾಗವತ ತೃತೀಯ ಸ್ಕಂಧದ ವ್ಯಾಖ್ಯಾನಾರಂಭದಲ್ಲಿ, ಇಷ್ಟದೇವತೆಯಾದ ಶ್ರೀವಿಠ್ಠಲನಿಗೆ ಈ ರೀತಿ ನಮಸ್ಕರಿಸಿ ಮಂಗಳಾಚರಣೆಯನ್ನು ಮಾಡುತ್ತಾರೆ:-

ಯಾವ ಶ್ರೀಪರಮಾತ್ಮನ ಮಹಿಮೆಗಳೆಂಬ ಜಲರಾಶಿಯ ಅಲೆಗಳಲ್ಲಿ ಸ್ನಾನ ನಿರತರಾದ ಮನುಷ್ಯೋತ್ತಮರ ಸಂಸಾರ ಕ್ಲೇಶಗಳೆಂಬ ಸಮುದ್ರವು, ಅಗ್ನಿಯಿಂದಾವರಿಸಲ್ಪಟ್ಟ ಒಣ ಕಟ್ಟಿಗೆಯಂತೆ ಬತ್ತಿ ಹೋಗುವುದೋ, ಯಾರಿಂದ ನಿಖಿಳ ಜಗಸೃಷ್ಟ್ಯಾದಿಗಳು ಆಗುತ್ತವೆಯೋ, ಯಾರು ಸಕಲ ಜೀವಜಡಾತ್ಮಕ ಪ್ರಪಂಚದಿಂದ ಆತ್ಯಂತ ಭಿನ್ನನೂ, ಶ್ರೇಷ್ಠನೂ ಆಗಿರುವನೋ, ಯಾರಿಂದ ಜ್ಞಾನಿಗಳಾದ ದೇವತೆಗಳೂ ತಮ್ಮ ಅಭೀಷ್ಟವೆಂಬ ಮೋಕ್ಷವನ್ನು ಪಡೆಯುವರೋ, ಅಂತಹ ಸರ್ವಪಾಪ ಪರಿಹಾರಕ ಸ್ವಾಮಿಯೂ, ಇಷ್ಠದೇವತೆಯೂ ಆದ ಶ್ರೀ ಸಹಿತನಾದ ವಿಠ್ಠಲನಿಗೆ ಭಕ್ತಿಯಿಂದ ನಮಸ್ಕರಿಸುತ್ತೇನೆ ಎಂದು ಮಂಗಳಾಚರಣೆಯನ್ನು ಮಾಡಿರುತ್ತಾರೆ. ನಂತರ ಈ ಮೂರನೆಯ ಸ್ಕಂಧದಲ್ಲಿ ಮೋಕ್ಷಾಪೇಕ್ಷಿಗಳಿಗೆ ತಮತಮಗೆ ಯೋಗ್ಯವಾದ ಅಪರೋಕ್ಷಜ್ಞಾನವನ್ನು ಪಡೆಯುವುದಕ್ಕೆ ಪ್ರಧಾನವಾದ ಸಾಧನವು ಶ್ರೀಪರಮಾತ್ಮನ ಪಾದಾರವಿಂದಗಳಲ್ಲಿ ಭಕ್ತಿ ಮಾಡುವುದೇ ಎಂದೂ, ಆ ಭಕ್ತಿಯು ಹುಟ್ಟುವುದಕ್ಕಾಗಿಯೇ ಭಗವತ್ಕಥಾಶ್ರವಣಾದಿ ಎಲ್ಲಾ ಇತರ ಸಾಧನಗಳೆಂದೂ ಮುಖ್ಯತಃ ನಿರೂಪಿಸಲ್ಪಡುತ್ತೆ.

ದ್ವಿತೀಯಸ್ಕಂಧದ ಅಂತ್ಯಭಾಗದಲ್ಲಿ ಶ್ರೀ ಪರೀಕ್ಷಿದ್ರಾಜನು ಮಾಡಿದ ಪ್ರಶ್ನೆಗಳಿಗೆ ಉತ್ತರ ಹೇಳಲು

ಆರಂಭಿಸಿ, ಶ್ರೀ ಶುಕಮಹರ್ಷಿಗಳು, ಎಲೈ! ಪರೀಕ್ಷಿದ್ರಾಜನೇ! ನೀನು ಕೇಳಿದಂತೆಯೇ ಪ್ರಶ್ನೆಗಳನ್ನು ವಿದುರನು ತೀರ್ಥಯಾತ್ರಾ ಕಾಲದಲ್ಲಿ ಮೈತ್ರೇಯರನ್ನು ಸಂಧಿಸಿ ಅವರನ್ನು ಕೇಳಿ, ಉತ್ತರರೂಪವಾಗಿ ಶ್ರೀಮದ್ಭಾಗವತವನ್ನೇ ಶ್ರವಣ ಮಾಡಿದನು. ಆದುದರಿಂದ, ನಾನು ಆ ವಿದುರ ಮೈತ್ರೇಯ ಸಂವಾದರೂಪವಾದ ಭಾಗವತವನ್ನು ನಿನಗೆ ಹೇಳುವೆನು ಎಂದರು.

ಆಗ ಪರೀಕ್ಷಿದ್ರಾಜನು, ಎಲೈ! ಪೂಜ್ಯರಾದ ಶುಕ ಋಷಿಗಳೇ, ಏನು ಕಾರಣದಿಂದ ನಮ್ಮ ಹಿರಿಯನಾದ ವಿದುರನು ವೈರಾಗ್ಯವನ್ನು ವಹಿಸಿ ತೀರ್ಥಯಾತ್ರೆಗೆ ಹೊರಟನು? ಎಲ್ಲಿ? ಏತಕ್ಕಾಗಿ ಮೈತ್ರೇಯರನ್ನು ಸಂಧಿಸಿ ಪ್ರಶ್ನೆಗಳನ್ನು ಮಾಡಿದನು? ಪರಮಜ್ಞಾನಿಯಾದ ವಿದುರನು ಸಾಧಾರಣ ಪ್ರಯೋಜನಕ್ಕಾಗಿ ಪ್ರಶ್ನೆಗಳನ್ನು ಮಾಡುವವನಲ್ಲ. ಆದುದರಿಂದ ಆ ವಿದುರನ ಮಹತ್ಪ್ರಶ್ನೆಗಳಿಗೆ ಉತ್ತರಗಳನ್ನು, ಮೈತ್ರೇಯರು ಹೇಳಿದ ರೀತಿಯಲ್ಲಿ ನನಗೆ ಹೇಳಿರಿ? ಎಂದು ಪ್ರಾರ್ಥಿಸಿದನು. ಈ ರೀತಿ ಪರೀಕ್ಷಿದ್ರಾಜನು ಕೇಳಿದ ಪ್ರಶ್ನೆಯಿಂದ ಶ್ರೀ ಶುಕರು ಸಂತೋಷಪಟ್ಟು ಈ ರೀತಿ ಹೇಳಿದರು:-

ಯಾವಾಗ ಧೃತರಾಷ್ಟ್ರನು ದುಷ್ಟರಾದ ತನ್ನ ಮಕ್ಕಳನ್ನು ಪುಷ್ಟಿಮಾಡುತ್ತಾ, ಅಧರ್ಮದಿಂದ ವಿವೇಕಶೂನ್ಯನಾಗಿ, ತನ್ನ ತಮ್ಮನ ಮಕ್ಕಳಾದ ಪಾಂಡವರಿಗೆ ಲಾಕ್ಷಾಗೃಹವನ್ನು ಪ್ರವೇಶಿಸಿ ಆ ಗೃಹವನ್ನು ಸುಟ್ಟನೋ! ಯಾವಾಗ ನಡುಸಭೆಯಲ್ಲಿ ಧರ್ಮರಾಯನ ರಾಣಿಯಾದ ದ್ರೌಪದಾದೇವಿಯನ್ನು ದುಶ್ಶಾಸನನು ಮುಡಿ ಹಿಡಿದೆಳೆತರುತ್ತಿದ್ದುದನ್ನು ಕೇಳಿಯೂ ಸುಮ್ಮನಿದ್ದನೋ! ಯಾವ ತನ್ನ ಸೊಸೆಯಾದ ದ್ರೌಪದಾದೇವಿಯ ವಸ್ತ್ರಾಪಹರಣ ಮಾಡುತ್ತಿದ್ದರೂ, ಬೇಡವೆಂದು ನಿಲ್ಲಿಸದೇ ಇದ್ದನೋ! ಸಾಧುವಾದ ಧರ್ಮರಾಯನನ್ನು ಕಪಟ ದ್ಯೂತದಿಂದ ಸೋಲಿಸಿ, ಅವನಿಗೆ ಸಲ್ಲಬೇಕಾದ ರಾಜ್ಯವನ್ನು ವಂಚನೆಯಿಂದ ಕಿತ್ತುಕೊಂಡು ಅವನನ್ನು ತಮ್ಮಂದಿರ ಸಹಿತ ಅರಣ್ಯಕ್ಕಟ್ಟಿದನೋ!

ಧರ್ಮರಾಯನಿಂದ ಸಂಧಿಕಾರ್ಯಕ್ಕಾಗಿ ಕಳುಹಿಸಲ್ಪಟ್ಟ ಲೋಕಗುರುವಾದ ಶ್ರೀಕೃಷ್ಣನ ಅಮೃತವಾಕ್ಯಗಳೆಂಬ ಹಿತವನ್ನು, ಬಹು ಪಾಪ ವುಳ್ಳವನೂ ಸ್ವಲ್ಪ ಪುಣ್ಯವುಳ್ಳವನೂ ಆದ ಧೃತರಾಷ್ಟ್ರನು ಉಪೇಕ್ಷಿಸಿ, ಇದ್ದ ಸ್ವಲ್ಪ ಪುಣ್ಯವನ್ನೂ ಕಳೆದುಕೊಂಡನೋ! ಯಾವಾಗ ಧೃತರಾಷ್ಟ್ರನು ಸಂಧಿ ವಿಷಯದಲ್ಲಿ ಏನು ಮಾಡಲೆಂದು, ವಿದುರನನ್ನು ಕರೆಸಿ ಕೇಳಿದಾಗ, ವಿದುರನು, ಎಲೈ! ಜ್ಯೇಷ್ಠಭ್ರಾತೃವೇ! ಲೋಕರಕ್ಷಕನಾದ ಶ್ರೀಕೃಷ್ಣನು ಪಾಂಡವರಿಗೆ ಸಲ್ಲಬೇಕಾದ ರಾಜ್ಯವನ್ನು ಬಿಟ್ಟುಕೊಡೆಂದು ನಿನಗೆ ಹೇಳಿರುವುದರಿಂದ, ಶ್ರೀಕೃಷ್ಣನು ಪಾಂಡವರಿಗೆ ಸಲ್ಲಬೇಕಾದ ರಾಜ್ಯವನ್ನು ಕೊಡಿಸುವವನಾದುದರಿಂದಲೂ, ಭೀಮಸೇನನ ಬಾಹುಬಲಕ್ಕೆ ಎದುರಿಲ್ಲವಾದುದರಿಂದಲೂ, ಮುಂದೆ ನಿನ್ನ ಸರ್ವನಾಶಕ್ಕೆ ಕಾರಣನಾದ ಈ ನಿನ್ನ ಮಗ ದುರ್ಯೋಧನನನ್ನು ತ್ಯಜಿಸು, ಪಾಂಡವರಿಗೆ

ಅವರ ಪಾಲನ್ನು ಕೊಟ್ಟು ನಿನ್ನ ವಂಶವನ್ನೂ ಕೀರ್ತಿಯನ್ನೂ ಉಳಿಸಿಕೋ! ಎಂದು ಹೇಳಲಾಗಿ, ಅದನ್ನು ಕೇಳಿ ಕೋಪದಿಂದ ದುಷ್ಟ ದುರ್ಯೋಧನನು, ಓಹೋ! ನಮ್ಮ ಮನೆ ಅನ್ನ ತಿಂದು ಪುಷ್ಟಿಯಾಗಿರುವ ಈ ದಾಸೀಪುತ್ರನು ತೆಗೆದಿದ್ದಾನೆ ದೊಡ್ಡದಾಗಿ ಉಸುರನ್ನು! ಇವನನ್ನು ತಕ್ಷಣ ರಾಜ್ಯದಿಂದಾಚೆಗೆ ದಾಟಿಸಿರೆಂದು ಹೇಳಿದನೊ! ಅದನ್ನು ಕೇಳಿ ಧೃತರಾಷ್ಟ್ರನು ನಗುತ್ತಾ ಸುಮ್ಮನಿದ್ದನೋ! ಆ ಸಂದರ್ಭದಲ್ಲಿ ಮಹಾನುಭಾವನಾದ ವಿದುರನು ಮಾತನಾಡದೇ ಶಾಂತಿಯಿಂದ, ಅರಮನೆ ಬಾಗಿಲ ಪಕ್ಕದಲ್ಲಿ ತನ್ನ ಧನುಸ್ಸನ್ನು ಮುರಿದು ಬಿಸಾಟಿ, ರಾಜ್ಯ ಪರಿತ್ಯಾಗಮಾಡಿ ವೈರಾಗ್ಯದಿಂದ ಶ್ರೀಕೃಷ್ಣನ ಪಾದಕಮಲಗಳನ್ನು ಧ್ಯಾನಿಸುತ್ತಾ ತೀರ್ಥಯಾತ್ರೆಗೆ ಹೊರಟನು.

ಶ್ರೀಕೃಷ್ಣನ ಪಾದಚಿನ್ಹೆಗಳಿಂದ ಪವಿತ್ರವಾಗಿದ್ದ ಹಸ್ತಿನಾಪುರವೇ ಪುಣ್ಯಕ್ಷೇತ್ರವೆಂಬ ಅನುಸಂಧಾನದಿಂದ, ಕೇವಲ ಕಾಲುನಡಗೆಯಿಂದಲೇ, ಹಸ್ತಿನಾಪುರವನ್ನೂ, ಕೌರವನ ರಾಜ್ಯವನ್ನು ಬಿಟ್ಟು, ಪರಮಾತ್ಮನ ಸಹಸ್ರಾರು ಮೂರ್ತಿಗಳಿಗೆ ಸನ್ನಿಧಾನಗಳಾದ ಅನೇಕ ಪರ್ವತ, ಕ್ಷೇತ್ರಗಳನ್ನು ಸಂಚಾರಮಾಡುತ್ತಾ, ಪುಣ್ಯತೀರ್ಥಗಳಲ್ಲೂ, ಪುಣ್ಯಸರೋವರಗಳಲ್ಲೂ ತ್ರಿಕಾಲ ಸ್ನಾನಮಾಡುತ್ತಾ, ಕೇವಲ ಪರ್ಣಾಹಾರವನ್ನು ಸ್ವೀಕರಿಸುತ್ತಾ, ಕೂದಲನ್ನು ಗಾಳಿಗೆ ಹಾರಿಬಿಟ್ಟು, ಸ್ಮಶ್ರುಗಳನ್ನು ಬೆಳೆಸಿಕೊಂಡು, ಕೇವಲ ಬಾಂಧವರೇ ಕಂಡರೂ ಗುರ್ತು ಸಿಕ್ಕದಂತೆ ಆಗಿ, ಬಹಳ ವಿರಕ್ತ ಮನೋಭಾವನೆಯಿಂದ, ಪ್ರತಿ ದಿನದಲ್ಲೂ, ಭೂಮಿಯಲ್ಲೇ ಮಲಗುತ್ತಾ ವೃಂದಾವನ, ಸಿಂಹಗಿರಿ, ಶ್ರೀಶೈಲ, ವೇಂಕಟಗಿರಿ, ನೃಸಿಂಹಶೈಲ ಮುಂತಾದ ಭಾರತವರ್ಷದ ನಿಖಿಳ ಪುಣ್ಯಕ್ಷೇತ್ರಗಳನ್ನು ಸೇವಿಸುತ್ತಾ, ನಿರಂತರ ಭಗವಧ್ಯಾನ, ಭಗವತ್ಪ್ರಿಯಗಳಾದ ವ್ರತಗಳು, ಇವುಗಳನ್ನು ಮಾಡುತ್ತಾ ಅವಧೂತವೃತ್ತಿಯಿಂದ ಸಂಚರಿಸಿದರು.

ಹೀಗೆ ವಿದುರನು ಬಹುಕಾಲ ಸಂಚಾರ ಮಾಡಿ ಆಕಸ್ಮಾತ್ ಪ್ರಭಾಸ ಕ್ಷೇತ್ರಕ್ಕೆ ಬಂದು, ಅಲ್ಲಿ ಜನರಿಂದ ಕೌರವ ಪಾಂಡವರ ಯುದ್ಧಾಂತ್ಯವನ್ನೂ, ಯಾದವರ ನಾಶಕ್ಕಾಗಿ ಆದ ಬ್ರಾಹ್ಮಣ ಶಾಪ ವಿಚಾರವನ್ನೂ ಕೇಳಿ, ಉಂಟಾದ ಮನಸ್ತಾಪವನ್ನು ಸಹಿಸುವನಾಗಿ, ಮಾತನಾಡದೇ ಸರಸ್ವತೀ ನದೀ ತೀರಕ್ಕೆ ಹೊರಟುಹೋದನು.

## ವಿದುರ ಮತ್ತು ಉದ್ಧವರ ಸಮಾಗಮ

ಆ ಪುಣ್ಯನದೀ ಸ್ನಾನಮಾಡಿ, ಜ್ಞಾನಿಯಾದ ಆ ವಿದುರನು ಮನುಷ್ಯ ಜನ್ಮದ ಅಶಾಶ್ವತೆಯನ್ನು ತಿಳಿದವನಾದಕಾರಣ, ಭೂಭಾರ ಹರಣಾರ್ಥವಾಗಿ ಶ್ರೀಕೃಷ್ಣನು, ಕೌರವಪಾಂಡವರಲ್ಲಿಯೂ, ಯಾದವರಲ್ಲಿಯೂ ಯುದ್ಧವನ್ನು ಹುಟ್ಟಿಸಿ, ಆ ಯುದ್ಧಾಗ್ನಿಯಿಂದ ಕೌರವ ಪಾಂಡವ ಯಾದವರೆಂಬ

ಅರಣ್ಯಗಳನ್ನು ಸುಟ್ಟನೆಂದು ಚಿಂತಿಸುತ್ತಾ, ಇನ್ನೂ ಮನಶುದ್ಧಿಗಾಗಿ ಶ್ರೀಕೃಷ್ಣನ ಮತ್ತು ಅವತಾರಗಳ ಮೂರ್ತಿಗಳಿಂದ ಚಿನ್ಹಿತಗಳಾದ ದೇವತಾ ಮಂದಿರಗಳನ್ನು ಸಂಚರಿಸುತ್ತಾ, ಯಾವಾಗ ಧರ್ಮರಾಯನು ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಿದ್ದನೋ ಆವಾಗ, ಯಮುನಾತೀರಕ್ಕೆ ಬಂದು, ಅಲ್ಲಿ ಪರಮಭಗವದ್ಭಕ್ತನಾದ ಉದ್ಧವನನ್ನು ಕಂಡನು. ನಂತರ ಉದ್ಧವನನ್ನು ಪ್ರೀತಿಪೂರ್ವಕ ಬಿಗಿದಪ್ಪಿ ಆಲಿಂಗಿಸಿ, ನಂತರ ಈ ರೀತಿ ಕುಶಲಪ್ರಶ್ನೆಗಳನ್ನು ಮಾಡಿದನು.

ಎಲೈ ಉದ್ಧವನೇ! ನಾಭಿಯಿಂದ ಬ್ರಹ್ಮನನ್ನು ಪಡೆದು, ಸರ್ವಲೋಕ ರಕ್ಷಣಾಶೀಲನಾದ, ಪಾಂಡವ ಪ್ರಿಯನೂ, ಸಕಲ ಸದ್ಗುಣ ಪರಿಪೂರ್ಣನೂ, ಲಾವಣ್ಯಮೂರ್ತಿಯೂ, ಪುರಾಣಪುರುಷನೂ ಆದ ಶ್ರೀಕೃಷ್ಣನು ಕುಶಲನೇ? ಈ ಪ್ರಶ್ನೆಯನ್ನು ಏಕೆ ಮಾಡುವಿ? ನಿತ್ಯನೂ, ಪೂರ್ಣಸುಖಾತ್ಮನೂ, ಜನ್ಮಾದಿದೋಷರಹಿತನೂ ಆದ ಶ್ರೀಕೃಷ್ಣನಿಗೆ ಸರ್ವದಾ ಕ್ಷೇಮವಿರುವಾಗ? ಎಂದರೆ, ಯಾವಾತನು ಭೂಲೋಕದಲ್ಲಿ ತನ್ನ ಅವತಾರದಿಂದ ಸನ್ನಿಹಿತನಾಗಿದ್ದರೆ, ಎಲ್ಲರಿಗೂ ಕ್ಷೇಮವು ಉಂಟಾಗುವುದೋ ಆ ಕಾರಣದಿಂದ, ಲೋಕದ ಕ್ಷೇಮವನ್ನಪೇಕ್ಷಿಸಿ, ಶ್ರೀಕೃಷ್ಣನ ಕ್ಷೇಮವನ್ನು ವಿಚಾರಿಸುತ್ತೇನೆನ್ನುತ್ತಾನೆ.

ಯದುಸೈನ್ಯದಲ್ಲಿ ಅಧಿಪತಿಯಾದ ಪ್ರದ್ಯುಮ್ನನೂ, ಜಾಂಬವತೀ ಪುತ್ರನಾದ ಸಾಂಬನೂ, ಫಲ್ಗುಣನಿಂದ ಧನುರ್ವಿದ್ಯೆ ಕಲಿತ ಯುಯುಧಾನನೂ, ಅಕ್ರೂರನೂ, ದೇವಕೀ ವಸುದೇವ, ಉಗ್ರಸೇನರೂ, ಅನಿರುದ್ಧನೂ, ಕೃಷ್ಣಪತ್ನಿಯರೇ ಮುಂತಾದ ಸಕಲ ಯಾದವರು ಸುಕ್ಷೇಮಿಗಳೇ ಹೇಳು. ಸತ್ಯಭಾಮಾದೇವಿಯ ಮಕ್ಕಳು, ಚಾರುದೇಷ್ಣ, ಗದಾದಿಗಳೂ ಕ್ಷೇಮದಿಂದಿರುವರೇ? ಶ್ರೀಕೃಷ್ಣ ಪಾರ್ಥರ ದಿಗ್ವಿಜಯದಿಂದ ಗಳಿಸಲ್ಪಟ್ಟ ಸಂಪತ್ತಿನಿಂದ ಕೂಡಿದ ಧರ್ಮರಾಯನು ಧರ್ಮದಿಂದ ರಾಜ್ಯಪಾಲನೆಯನ್ನು ಮಾಡುತ್ತಿರುವನೆ? ಯಾವ ಭೀಮನ ವಿಚಿತ್ರಗದಾವಿನ್ಯಾಸಗಳ ಎದುರಿಗೆ ಯಾರೂ ನಿಲ್ಲಲಾರದೆ, ಧರ್ಮದ್ರೋಹಿಗಳಾದ ದುರ್ಯೋಧನಾದಿಗಳು ಸಂಹರಿಸಲ್ಪಟ್ಟು ಕೆಳಗೆ ಬಿದ್ದರೋ ಆ ಧರ್ಮ, ಭೀಮಾರ್ಜುನರೂ, ರಣರಂಗದಲ್ಲಿ ರೆಪ್ಪೆಗಳಿಂದ ಕಣ್ಣುಗಳು ಹೇಗೆ ಸಂರಕ್ಷಿಸಲ್ಪಡುವವೋ ಹಾಗೆ ಅರ್ಜುನನಿಂದ ಸಂರಕ್ಷಿಸಲ್ಪಟ್ಟ ಮಾದ್ರೀಪುತ್ರರಾದ ನಕುಲ ಸಹದೇವರೂ ಕ್ಷೇಮದಲ್ಲಿರುವರೇನು? ಪಾಂಡುರಾಜನನ್ನು ಕಳೆದುಕೊಂಡು, ಬಂಧುರಹಿತರಾದ ತನ್ನ ಪುತ್ರರಾದ ಧರ್ಮಾದಿಗಳಿಗಾಗಿ ಜೀವಿಸುತ್ತಿರುವ ಕುಂತೀದೇವಿಯು ಕ್ಷೇಮವೇ?

ಭೀಮಸೇನನ ಗದೆಂದ ತನ್ನ ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ ಗಾಂಧಾರೀ ಇವರ ಸ್ಥಿತಿಗಾಗಿ ನಾನು ವ್ಯಸನಪಡುತ್ತೇನೆ. ಆದರೂ ಆ ಪರಮಾತ್ಮನ ಪ್ರಸಾದದಿಂದ, ಲೋಕವಿಡಂಬನಾರ್ಥವಾಗಿ ಶ್ರೀಕೃಷ್ಣನು ಮಾಡಿದ ಈ ಲೀಲೆಗಳನ್ನೆಲ್ಲಾ ಶಾಸ್ತ್ರದೃಷ್ಟಿಯಿಂದ ನೋಡಿ, ವ್ಯಥೆ ಇಲ್ಲದವನಾಗಿ, ಕೇವಲ

ಉದಾಸೀನಭಾವದಿಂದ ನಾನು ತೀರ್ಥಸೇವೆ ಮಾಡುತ್ತಾ ಇಲ್ಲಿಗೆ ಬಂದಿರುತ್ತೇನಾಗಿ, ಈ ವಿಚಾರಗಳನ್ನು ನಿನ್ನಿಂದ ತಿಳಿಯಲು ಕುತೂಹಲನಾಗಿದ್ದೇನೆ. ಸ್ವಯಂ ಪ್ರಾಕೃತ ಶರೀರರಹಿತನಾದ ಶ್ರೀಕೃಷ್ಣನು ಪುರುಷಾಕಾರದಿಂದ ನಮ್ಮ ದೃಷ್ಟಿಗೆ ಗೋಚರನಾಗಿರುವುದು, ನಮಗೆ ಶ್ರವಣ ಮನನ, ಧ್ಯಾನಾದಿ ಸತ್ಸಾಧನೆಗಳುಂಟಾಗುವುದಕ್ಕೆ ಕಾರಣೀಭೂತಗಳಾದ ಅನಂತ ಲೀಲೆಗಳನ್ನು ತೋರಿಸುವುದಕ್ಕಾಗಿಯೂ, ಸ್ವಪ್ರಯೋಜನವು ಲೇಶವಿಲ್ಲದಿದ್ದರೂ, ಯಶೋದಾ ನಂದಗೋಪ, ದೇವಕೀ ವಸುದೇವಾದಿಗಳಿಗೆ ಆನಂದವನ್ನೂ, ಕ್ಷೇಮವನ್ನೂ ಉಂಟುಮಾಡುವುದಕ್ಕಾಗಿಯೂ, ಕಂಸ, ಶಿಶುಪಾಲ, ಜರಾಸಂಧಾದಿ ಲೋಕಕಂಟಕರ ಸಂಹಾರಕ್ಕಾಗಿಯೂ, ಶಿಷ್ಟರಾದ ಪಾಂಡವರನ್ನು ಸಂರಕ್ಷಿಸಿ ಧರ್ಮಸಂಸ್ಥಾಪನೆಗಾಗಿಯೂ ಆಗಿರುವುದರಿಂದ, ಆ ಶ್ರೀಕೃಷ್ಣನು ಯಾವ ಯಾದವರಲ್ಲಿ ಅವತರಿಸಿದನೋ, ಆ ಯಾದವ, ಪಾಂಡವರ ಕ್ಷೇಮ ವಾರ್ತೆಗಳನ್ನು ನನಗೆ ಹೇಳು, ಎಂದನು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಮೊದಲನೆಯ ಅಧ್ಯಾಯವು ಮುಗಿಯಿತು.**

## अथ द्वितीयोऽध्यायः

**शुक उवाच**

इति भागवतः पृष्टः क्षत्त्रा वार्तां प्रियाश्रयाम् ।
प्रतिवक्तुं न चोत्सेहे औत्कण्ठ्यात् स्मारितेश्वरः ॥ १ ॥

यः पञ्चहायनो मात्रा प्रातराशाय याचितः ।
नैच्छत् तद् रचयन् यस्य सपर्यां बाललीलया ॥ २ ॥

स कथं सेवया तस्य कालेन जरसं गतः ।
पृष्टो वार्तां प्रतिब्रूयाद् भर्तुः पादावनुस्मरन् ॥ ३ ॥

स मुहूर्तमभूत् तूष्णीं कृष्णांघ्रिसुधया भृशम् ।
तीव्रेण भक्तियोगेन निमग्नः साधु निर्वृतः ॥ ४ ॥

पुलकोद्भिन्नसर्वाङ्गो मुञ्चन् मीलद्दृशाऽश्रु सः ।
पूर्णार्थो लक्षितस्तेन स्नेहप्रसरसंप्लुतः ॥ ५ ॥

शनकैर्भगवल्लोकान्नृलोकं पुनरागतः ।
विमृज्य नेत्रे विदुरं प्रत्याहोद्धव उत्स्मयन् ॥ ६ ॥

### उद्धव उवाच

कृष्णद्युमणिनिम्लोचे गीर्णेष्वजगरेण ह।
किं नु नः कुशलं ब्रूयां गतश्रीषु यदुष्वहम्॥ ७ ॥

दुर्भगो बत लोकोऽयं यदवो नितरामपि।
ये संवसन्तो न विदुर्हरिं मीना यथाऽम्भसि ॥ ८ ॥

इङ्गितज्ञाः पुरुप्रौढा एकारामाश्च सात्वताः।
सात्वतामृषभं सर्वे भूतावासममंसत॥ ९ ॥

देवस्य मायया स्पृष्टा ये चान्ये असदाश्रयाः।
भ्राम्यते धीर्नतद्वाक्यैरात्मन्युप्तात्मनाम्॥ १० ॥

प्रदर्श्यातप्ततपसामवितृप्तदृशां नृणाम्।
आदायान्तरधाद् यस्तु स्वबिम्बं लोकलोचनम्॥ ११ ॥

यन्मर्त्यलीलौपयिकं स्वयोगमायाबलं दर्शयता गृहीतम्।
विस्मापनं स्वस्य च सौभगर्द्धेः परं पदं भूषणभूषणाङ्गम्॥ १२ ॥

यद्धर्मसूनोर्बत राजसूये निरीक्ष्य दृक्स्वस्त्ययनं त्रिलोकः।
कार्त्स्न्येन चात्रोपगतं विधातुरर्वाक् सृतौ कौशलमित्यमन्यत॥ १३ ॥

यस्यानुरागप्लुतहासरासलीलावलोकप्रतिलब्धमानाः।
व्रजस्त्रियो दृग्भिरनुप्रवृत्तधियोऽवतस्थुः किल कृत्यशेषाः॥ १४ ॥

स्वशान्तरूपेष्वितरैश्च रूपैरभ्यर्द्यमानेष्वनुकम्पितात्मा।
परावरेशो महदंशयुक्तो ह्यजोऽपि जातो भगवान् यथाऽग्निः॥ १५ ॥

मां खेदयत्येतदजस्य जन्मविडम्बनं यद्वसुदेवगेहे।
व्रजे च वासोऽरिभयादिव स्वयं पुराद् व्यवात्सीद् यदनन्तवीर्यः॥ १६ ॥

दुनोति चेतः स्मरतो ममैतद् यदाह पादावभिवन्द्य पित्रोः।
ताताम्ब कंसादुरुकम्पितानां प्रसीदतं नोऽकृतनिष्कृतीनाम्॥ १७ ॥

को वा अमुष्याङ्घ्रिसरोजरेणुं विस्मर्तुमीशेत पुमान् विजिघ्रन्।

यो विस्फुरद्भ्रूविटपेन भूमेर्भारं कृतान्तेन तिरश्चकार ॥ १८ ॥
दृष्टा भवद्भिर्ननु राजसूये चैद्यस्य कृष्णं द्विषतोऽपि सिद्धिः ।
यां योगिनः संस्पृहयन्ति सम्यग्योगेन कस्तद्विरहं सहेत ॥ १९ ॥
तथैव चान्ये नरलोकवीरा य आहवे कृष्णमुखारविन्दम् ।
नेत्रैः पिबन्तो नयनाभिरामं पार्थास्त्रपूताः पदमापुरस्य ॥ २० ॥

स्वयं त्वसाम्यातिशयस्त्र्यधीशः स्वराज्यलक्ष्म्याप्तसमस्तकामः ।
बलिं हरद्भिः सुरलोकपालैः किरीटकोट्येडितपादपीठः ॥ २१ ॥
तत्तस्य कैङ्कर्यमलं भृतान्नो विग्लापयत्यङ्ग यदुग्रसेनम् ।
तिष्ठन् निषण्णं परमेष्ठिधिष्ण्ये न्यबोधयद् देव निधारयेति ॥ २२ ॥

अहो बकीयं स्तनकालकूटं जिघांसया पाययदप्यसाध्वी ।
लेभे गतिं धात्र्युचितां ततोऽन्यं कं वा दयालुं शरणं व्रजेम ॥ २३ ॥
मन्येऽसुरान् भागवतांस्त्र्यधीशे संरम्भमार्गाभिनिविष्ठचित्तान् ।
ये संयुगेऽचक्षत तार्क्ष्यपुत्रस्यांसे सुनाभायुधमापतन्तम् ॥ २४ ॥

वसुदेवस्य देवक्यां जातो भोजेन्द्रबन्धने ।
चिकीर्षुर्भगवांच्छर्म अब्जजेनाभियाचितः ॥ २५ ॥

ततो नन्दव्रजमितः पित्रा कंसाद् विबिभ्यता ।
एकादशसमस्तत्र गूढार्चिः सबलोऽवसत् ॥ २६ ॥

परीतो वत्सपैर्वत्सांश्चारयन् व्यहरद्धरिः ।
यमुनोपवने कूजद्विजसंकुलिताघ्रिपे ॥ २७ ॥

कौमारा दर्शयंश्चेष्टाः प्रेक्षणीया व्रजौकसाम् ।
रुदन्निव हसन् मुग्धबालसिंहावलोकनः ॥ २८ ॥

स एव गोकुलं लक्ष्म्या निकेतं सितगोवृषम् ।
चारयन्ननुगान् गोपान् रणद्वेणुररीरमत् ॥ २९ ॥

प्रयुक्तान् भोजराजेन मायिनः कामरूपिणः ।

लीलया व्यनुदत् तांस्तान् बालः क्रीडनकानिव ॥ ३० ॥

विपन्नान् विषपानेन निगृह्य भुजगाधिपम् ।
उत्थाप्यापाययद् गावस्तत्तोयं प्रकृतिस्थितम् ॥ ३१ ॥

अयाजयद् गोसवेन गोपराजं द्विजोत्तमैः ।
वित्तस्य चोरुभारस्य चिकीर्षन् सद्व्ययं विभुः ॥ ३२ ॥

वर्षतीन्द्रे व्रजः कोपाद् भग्नमानेऽतिविह्वले ।
गोत्रलीलातपत्रेण त्रातो भद्रानुगृह्णता ॥ ३३ ॥

शरच्छशिकरैर्मृष्टं मानयन् रजनीमुखम् ।
गायन् कलपदं रेमे स्त्रीणां मण्डलमण्डनः ॥ ३४ ॥

## ॥ इति श्रीमद्भागवते (तृतीयस्कन्धे( *3) द्वितीयोऽध्यायः ॥

**॥ ಎರಡನೆಯ ಅಧ್ಯಾಯ ॥**

ಈ ಅಧ್ಯಾಯದಿಂದ ಮೂರು ಅಧ್ಯಾಯಗಳಲ್ಲಿಉದ್ಧವ ವಿದುರ ಸಂವಾದ ರೂಪದಿಂದ ಪೂರ್ತಿಯಾಗಿ ಭಾಗವತದಲ್ಲಿ ಪ್ರತಿಪಾದಿತವಾದ ಶ್ರೀಕೃಷ್ಣ ಚರಿತ್ರೆಯ ಸಾರಾಂಶವು ಹೇಳಲ್ಪಡುತ್ತೆಂದು, ಶ್ರೀಶುಕರು ಪರೀಕ್ಷಿದ್ರಾಜನಿಗೆ ನಿರೂಪಿಸಿದ್ದನ್ನು, ಸೂತರು ಶೌನಕಾದಿಗಳಿಗೆ ಹೇಳುತ್ತಾರೆ:-

## ಉದ್ಧವ ವಿದುರರ ಸಂವಾದ

ಶ್ರೀಕೃಷ್ಣನ ಸ್ಮರಣೆಯನ್ನುಂಟುಮಾಡುವ ವಿದುರನ ಪ್ರಶ್ನೆಗಳನ್ನು ಉದ್ಧವನು ಕೇಳಿ, ಉದ್ಧವನು ಮನಸ್ಸಿನಲ್ಲಿ ಶ್ರೀಕೃಷ್ಣನನ್ನು ಭಾವಿಸಿ ಅತ್ಯಂತ ಭಕ್ತಿ ಉದ್ರೇಕದಿಂದ ಅರೆಗಣ್ಣುಗಳನ್ನು ಮುಚ್ಚಿಕೊಂಡು ಕಣ್ಣಿನಿಂದ ಧಾರಾಕಾರವಾಗಿ ಕಂಬನಿಗರೆಯುತ್ತಾ, ಪರಮಾತ್ಮನಲ್ಲಿ ಸ್ವಾಭಾವಿಕವಾಗಿ ತನಗಿದ್ದ ಪ್ರೇಮಾತಿಶಯದಿಂದ ಗದ್ಗದಕಂಠ ವುಳ್ಳವನಾಗಿ ಒಂದು ಕ್ಷಣಕಾಲ ಏನೂ ಮಾತನಾಡಲಾರದೇ ದುಃಖಿಸುತ್ತಿದ್ದನು. ಉದ್ಧವನು ಐದು ವರ್ಷ ಬಾಲಕನಾಗಿದ್ದಾಗಲೇ ಮಕ್ಕಳ ಆಟದಲ್ಲಿ ನಾನು ಕೃಷ್ಣನ ಪೂಜೆಮಾಡುತ್ತಿದ್ದೇನೆಂದು ಕುಳಿತಿದ್ದಾಗ ಅವನ ತಾಯಿಯು ಬೆಳಗಿನ ತಿಂಡಿ ತಿನ್ನುವುದಕ್ಕೆ ಬಾ ಎಂದು ನಾನಾ ವಿಧವಾಗಿ ಕರೆದರೂ, ಉದ್ಧವನು ಕೃಷ್ಣನ ಪೂಜೆ ಆಗುತ್ತಿದೆ! ನನಗೆ ತಿಂಡಿ ಬೇಕಾಗಿಲ್ಲವೆಂದು ಹೇಳಿದನು. ನಂತರ ಶ್ರೀಕೃಷ್ಣನ ಸಾಕ್ಷಾತ್ ಸಹವಾಸ, ಸೇವೆಗಳಲ್ಲಿಯೇ ವಯೋವೃದ್ಧನೂ ಆದನು. ಇಂತಹ

ಪರಮಭಕ್ತನಿಗೆ ಈ ರೀತಿ ಭಕ್ತ್ಯುದ್ರೇಕವಾದದ್ದು ಏನು ಅತಿಶಯ! ನಂತರ ಒಂದು ಮೂಹೂರ್ತಕಾಲ ಶ್ರೀಕೃಷ್ಣನ ವಿಮಲಚರಿತ್ರೆಗಳನ್ನು ಮನಸ್ಸಿನಲ್ಲಿ ಧ್ಯಾನಿಸಿ, ವಿದುರನಿಗೆ ಈ ರೀತಿ ಉತ್ತರ ಕೊಡಲು ಆರಂಭಿಸಿದನು:-

## ಉದ್ಧವನ ಶ್ರೀಕೃಷ್ಣ ಚಿಂತನೆ

ಒಂದು ಮುಹೂರ್ತ ಸಮಾಧಿಯೋಗದಿಂದ ಧ್ಯಾನಾಸಕ್ತನಾಗಿದ್ದ ಉದ್ಧವನು, ವೈಕುಂಠದಿಂದ ಪುನಃ ಭೂಲೋಕಕ್ಕೆ ಬಂದವನಂತೆ ದೇಹಾಭಿಮಾನರೂಪವಾದ ಮನಸ್ಸಿಗೆ ಎಡೆಕೊಟ್ಟು, ಕಣ್ಣುಗಳಿಂದ ಹರಿಯುತ್ತಿದ್ದ ನೀರನ್ನು ವರೆಸಿಕೊಂಡು, ಮನಸ್ಸನ್ನು ಸ್ಥಿಮಿತಕ್ಕೆ ತಂದು, ಒಂದು ಸಲ ಮುಗುಳುನಗೆಯಿಂದ ನಕ್ಕು, ಎಲೈ! ಪ್ರಿಯ ಭಕ್ತಬಂಧುವಾದ ವಿದುರನೆ! ಬ್ರಾಹ್ಮಣರ ಶಾಪದಿಂದ ಶ್ರೀಕೃಷ್ಣನೆಂಬ ಸೂರ್ಯನು ಅಸ್ತಂಗತನಾಗುವ ಕಾಲವು ಸಮೀಪಿಸುತ್ತಿರುವಾಗ ಯಾದವರಾದ ನಮಗೆ ಇನ್ನು ಏನು ತಾನೇ ಕ್ಷೇಮವಿರುತ್ತೆ?

ನಷ್ಟವಾದ ಸಕಲ ಸಂಪತ್ತುಳ್ಳವರೂ, ಕೇವಲ ಸಂಸಾರಕ್ರೀಡೆಗಳಲ್ಲಿಯೂ, ಭೋಜನಾದಿ ಭೋಗಗಳಲ್ಲಿಯೂ ಮಾತ್ರ ಆಸಕ್ತರಾಗಿ, ತಮ್ಮ ಜೊತೆಯಲ್ಲಿಯೇ ಸಾಧಾರಣನಂತೆ ಇರುವ, ಪರಮ ಯೋಗೇಶ್ವರನೂ, ಭೂಭಾರಹರಣ ವ್ಯಾಜದಿಂದ ಲೋಕಕ್ಕೆ ಜ್ಞಾನೋಪದೇಶ ಮಾಡಲು ಅವತರಿಸಿರುವ ಶ್ರೀಕೃಷ್ಣನ ಮಹಿಮೆಯನ್ನು ಏನೂ ತಿಳಿಯದೇ ಯಾದವರು ಮೂಢರೂ, ಅಜ್ಞಾನಿಗಳೂ ಆಗಿರುತ್ತಾರೆ.

ಇತರರಾದ ಪಟ್ಟಣವಾಸಿಗಳೂ ಕೂಡ ಸರ್ವಭೂತಾತ್ಮನಾದ ಶ್ರೀಕೃಷ್ಣನ ಮಾಯಾ ಎಂಬ ಇಚ್ಛೆಯಿಂದ ಬದ್ಧರಾಗಿ ಅನ್ನಪಾನ, ಭೋಗಾಸಕ್ತರಾಗಿ ಪಾಮರರಾಗಿರುತ್ತಾರೆ. ಜನರು ಈ ರೀತಿ ಮೂಢರಾಗಿಯೇ ಇರುವುದನ್ನು ನೋಡಿ ನನ್ನ ಮನಸ್ಸು ವ್ಯಥೆಯನ್ನುಂಟುಮಾಡುತ್ತಿದೆ. ಶ್ರೀಕೃಷ್ಣನು ಜ್ಞಾನಿಗಳ ಬುದ್ಧಿಗೆ ಗೋಚರನಾಗತಕ್ಕವನು. ಈ ಜ್ಞಾನಿಗಳೇ ಶ್ರೀಕೃಷ್ಣನನ್ನು ಸಚ್ಚಿದಾನಂದ ಲಕ್ಷಣನಾದ ತಮ್ಮ ಹೃತ್ಕಮಲದಲ್ಲಿ ಧ್ಯಾನಗೋಚರನಾಗುವ ಬಿಂಬನಿಂದ ಅಭಿನ್ನನೆಂದು ತಿಳಿಯುತ್ತಾರೆ.

ಅಜ್ಞಾನಿಗಳ ದೃಷ್ಟಿಗೆ ಪ್ರಾಕೃತಪುರುಷನಂತೆ ಕಾಣುವ ಈ ಶ್ರೀಕೃಷ್ಣನು ಶ್ರವಣ, ಮನನ, ನಿಧಿಧ್ಯಾಸನಾದಿ ಸಾಧನಗಳಿಂದ ಜ್ಞಾನಭಕ್ತಿಗಳನ್ನು ಸಂಪಾದಿಸಿದವರಿಗೆ ಮಾತ್ರ ತನ್ನ ನಿಜಸ್ವರೂಪವಾದ ದೇವದೇವತ್ವವನ್ನು ಕಾಣಿಸುವನು. ಆದುದರಿಂದ ಶ್ರೀಕೃಷ್ಣನು ಜ್ಞಾನಿಗಳಿಗೆ ಸಾಕ್ಷಾದ್ಭಗವಂತನಂತೆಯೂ, ಇತರರಿಗೆ ಮನುಷ್ಯನಂತೆಯೂ, ತನ್ನ ಯೋಗಮಾಯಾಶಕ್ತಿಯಿಂದ ತೋರುತ್ತಾನೆ. ಲೋಕವಿಲಕ್ಷಣ ಸೌಂದರ್ಯವುಳ್ಳ ಭುವನಮೋಹನನಾದ ಶ್ರೀಕೃಷ್ಣರೂಪವೂ, ಅಂಗಾಂಗಗಳೂ, ಅವನ ಬಾಲಲೀಲಾದಿ

ಕ್ರೀಡೆಗಳೂ, ಜ್ಞಾನಿಗಳಿಗೆ ಸರ್ವ ಶೃಂಗಾರಗಳಿಗೂ ಶೃಂಗಾರಕೊಡತಕ್ಕಂತೆ ಶೋಭಾಯಮಾನಗಳಾಗಿ, ದೈವಿಕ ಸೌಂದರ್ಯ ವಿಶೇಷವನ್ನು ಮೋಕ್ಷಾನಂದ ಸದೃಶದಂತೆ ಕಾಣುವವು.

ಅಜ್ಞಾನಿಗಳಿಗೆ ಸಾಧಾರಣ ಸುಂದರ ಪುರುಷನಂತೆಯೂ, ಸಾಧಾರಣ ಜನರಂತೆ ಸಂಸಾರಿಯಂತೆಯೂ ಕಾಣುವವು. ಅಜ್ಞಾನಿಗಳಿಗೆ ಕೃಷ್ಣನ ಅಲೌಕಿಕ ಸೌಂದರ್ಯವಾಗಲೀ, ಅಮಾನುಷ ಲೀಲೆಗಳಾಗಲೀ ಆಶ್ಚರ್ಯ ಸಂತೋಷಗಳನ್ನು ಹುಟ್ಟಿಸುವುದಿಲ್ಲ. ಇಂತಹ ಭಗವದ್ವಿಮುಖರಾದವರು ಹತಭಾಗ್ಯರಲ್ಲವೆ? ಧರ್ಮರಾಯನ ರಾಜಸೂಯ ಯಾಗದಲ್ಲಿ ಅಗ್ರಪೂಜೆ ಮಾಡಿಸಿಕೊಂಡಾಗ ಈ ಶ್ರೀಕೃಷ್ಣರೂಪವು ಎಷ್ಟು ಲೋಕಮಂಗಳಕರವಾಗಿಯೂ, ಹದಿನಾಲ್ಕು ಲೋಕದ ಸೌಂದರ್ಯಗಳನ್ನೆಲ್ಲಾ ಬ್ರಹ್ಮದೇವರು ಒಟ್ಟುಗೂಡಿಸಿ ಒಂದು ವಿಗ್ರಹವನ್ನು ಮಾಡಿದ್ದರೂ, ಈ ಶ್ರೀಕೃಷ್ಣನ ಸೌಂದರ್ಯ ಆನಂದಮಯ ರೂಪಕ್ಕೆ ಲೇಶಲೇಶವೂ ಸಾಟಿಯಾಗಲಾರದಾಗಿತ್ತು! ಇಂತಹ ಸೌಂದರ್ಯವನ್ನು ತಿಳಿಯಲಾರದೆ, ಸಾಮಾನ್ಯದೃಷ್ಟಿಯಿಂದ ನೋಡಿದ ಸಾಧರಣ ಜನರ ಅಜ್ಞಾನದ ಪರಿಮಿತಿಯು ಎಷ್ಟು ಅಗಾಧವಾದದ್ದು? ಅಹೋ! ಆಶ್ಚರ್ಯ!!.

ರಾಸಕ್ರೀಡಾ ಸಮಯದಲ್ಲಿ ವ್ರಜದ ಸ್ತ್ರೀಯರನ್ನು ಶ್ರೀಕೃಷ್ಣನು ಯಾವ ಅನುರಾಗಪೂರ್ವಕ, ನಗುಮುಖದಿಂದ, ಪ್ರೇಮದೃಷ್ಟಿಗಳಿಂದ ನೋಡುತ್ತಿದ್ದನೋ! ಆ ದೃಷ್ಟಿಯಿಂದ ಮೋಹಿತರಾಗಿದ್ದ ಆ ವ್ರಜಸ್ತ್ರೀಯರು ತಮ್ಮ ನೋಟಗಳನ್ನು ಹೇಗೆ ಕೃಷ್ಣನ ರೂಪದಿಂದ ಹಿಂತೆಗೆಯಲಾರದೇ ಅತೃಪ್ತರಂತಿರುತ್ತಿದ್ದರೋ ಆ ದೃಶ್ಯವು ಸ್ಮರಣೀಯವಾದದ್ದು. ಸರ್ವಜೀವ ನಿವಾಸನಾದ ಶ್ರೀಪರಮಾತ್ಮನು, ತನಗೆ ಶಾಂತರೂಪರೆನಿಸುವ ದೇವತೆಗಳು, ಘೋರರೂಪರೆನಿಸುವ ದೈತ್ಯರಿಂದ ಹಿಂಸಿಸಲ್ಪಡುತ್ತಿರಲಾಗಿ, ದೇವತೆಗಳಲ್ಲಿ ಕನಿಕರವುಳ್ಳವರಾಗಿ, ಬ್ರಹ್ಮದೇವರಿಂದ ಪ್ರಾರ್ಥಿತನಾಗಿ, ದೇವಕೀ ವಸುದೇವರೆಂಬ ಕಟ್ಟಿಗೆಗಳ ಮಥನದಿಂದ ಹುಟ್ಟಿದ ಅಗ್ನಿಯೋ ಎಂಬಂತೆ, ಶ್ರೀಕೃಷ್ಣಾವತಾರ ಮಾಡಿ, ಅಗ್ನಿಯಂತೆಯೇ ಸಕಲದೈತ್ಯಾಂಶ ರಾಜರುಗಳನ್ನು ವಂಶಪರಿವಾರ ಸಹಿತ ಕಾಡಿನಂತೆ ಸುಟ್ಟು, ಅಗ್ನಿಯ ಪ್ರಕಾಶದಂತೆ ಸರ್ವೋತ್ತಮ ಜ್ಞಾನವನ್ನೂ, ಸುಖವನ್ನೂ ದೇವಾಂಶರಾದವರಿಗೆ ಕೊಟ್ಟು ಸಂರಕ್ಷಿಸಿದನು.

ಸ್ವಯಂ ಜನ್ಮಾದಿದೋಷರಹಿತನಾದ ಈ ಶ್ರೀಕೃಷ್ಣನು, ವಸುದೇವನ ಪುತ್ರನಂತೆ ಹುಟ್ಟಿಯೂ, ಶತೃಗಳಿಂದ ಭಯಪಟ್ಟವನಂತೆ ತೋರಿಸುತ್ತ ಸಮುದ್ರಮಧ್ಯದಲ್ಲಿ ದ್ವಾರಕಾಪಟ್ಟಣದ ನಿರ್ಮಾಣ ಮಾಡಿಸಿ, ತೋರಿಸಿದ ಲೋಕವಿಡಂಬಗಳನ್ನು ನೋಡಿ ನನಗೆ ಬಹಳ ಮನಃಖೇದ ಉಂಟಾಗುತ್ತದೆ. ತಂದೆತಾಯಿಗಳಿಗೆ ಸರ್ವಲೋಕ ನಮಸ್ಕೃತನಾದ ತಾನು ನಮಸ್ಕರಿಸಿ ಅಮ್ಮಾ, ಅಪ್ಪಾ ಎಂದು ಕರೆಯುತ್ತಾ, ಸಕಲ ಲೋಕಸಂರಕ್ಷಕನಾದ ತಾನು, ಅವರಿಂದ ಸಂರಕ್ಷಿಸಲ್ಪಡುವವನಂತೆ ಇದ್ದದ್ದನ್ನು

ನೋಡಿ ನನಗೆ ಬಹಳ ಮನೋವ್ಯಥೆಯುಂಟಾಗುತ್ತೆ.

ದ್ವೇಷ ಮಾಡುತ್ತಿದ್ದ ಶಿಶುಪಾಲನನ್ನು ಶ್ರೀಕೃಷ್ಣನು ಚಕ್ರದಿಂದ ಸಂಹರಿಸಿದ ಕಾಲದಲ್ಲಿ, ಆ ಶಿಶುಪಾಲನ ದೇಹದಿಂದ ಅವನ ತೇಜಸ್ಸು ಯಾವ ಯೋಗಿಗಳಿಗೂ ಲಭ್ಯವಾಗಲಾರದೋ ಅಂತಹ ಶ್ರೀಕೃಷ್ಣನನ್ನೇ ಪ್ರವೇಶಿಸಿತು. ಇದರಿಂದ ಜೀವದ್ವಯಾವೇಶವುಳ್ಳ ಆ ಶಿಶುಪಾಲನ ಶರೀರದಲ್ಲಿದ್ದ ಜಯನಾಮಕ ದ್ವಾರಪಾಲಕನಿಗೆ, ಕೃಷ್ಣನ ಪ್ರವೇಶವೂ, ದ್ವೇಷಿಸುತ್ತಿದ್ದ ದೈತ್ಯನಿಗೆ ಅಂಧಂತಮಸ್ಸಾಯಿತೆಂದು ಜ್ಞಾನಿಗಳಿಂದ ಕೇಳಿದ್ದೇನೆ. ಆದರೆ ಲೋಕದಲ್ಲಿ ಜನರಿಗೆ ದ್ವೇಷಮಾಡಿದವರಿಗೂ ಭಗವತ್ಪ್ರಾಪ್ತಿಯಾಯಿತೆಂಬಂತೆ ಇದರಿಂದ ಭ್ರಾಂತಿ ಜ್ಞಾನ ಉಂಟಾಗುತ್ತೆ. ಇಂತಹ ಭಕ್ತರ ಅಪರಾಧಕ್ಷಮಾಶೀಲನೂ, ಹುಬ್ಬಿನಾಟ ಮಾತ್ರದಿಂದ ಸಮಸ್ತ ದೈತ್ಯರನ್ನು ಧೂಳೀಪಟಲ ಮಾಡಿದ ಕರುಣಾಳು, ಲೋಕೈಕ ವೀರ ಶ್ರೀಕೃಷ್ಣನ ವಿಷಯದಲ್ಲಿ ಉಪೇಕ್ಷೆ ಯಾರು ಮಾಡಿಯಾರು? ಯುದ್ಧದಲ್ಲಿ ಪಾರ್ಥನ ಬಾಣಗಳಿಂದ ಪವಿತ್ರಮಾಡಲ್ಪಟ್ಟ ಯಾವ ದೈತ್ಯಸದೃಶರಾದ ರಾಜರೂ ಕೂಡ, ಶ್ರೀಕೃಷ್ಣನ ಮಂಗಳರೂಪ ದರ್ಶನವನ್ನು ಭಕ್ತಿಯಿಂದ ಮಾಡಿ, ಘಾಯಗಳಿಂದ ಮರಣಹೊಂದಿದರೋ ಅವರೂ ಸದ್ಗತಿಯನ್ನೇ ಪಡೆದರು. ದ್ವೇಷಬುದ್ಧಿಯಿಂದ ನೋಡಿ ಸತ್ತವರು ಅಂಧಂತಮಸ್ಸಿಗೇ ಹೋದರು.

ನಿಖಿಳ ಬ್ರಹ್ಮಾಂಡಕೋಟಿನಾಯಕನೂ, ಬ್ರಹ್ಮಾದಿ ಲೋಕಪಾಲಕರ, ದೇವತೆಗಳ ಕೋಟ್ಯಾನುಕೋಟಿ ಕಿರೀಟಗಳಿಂದ ಅಲಂಕರಿಸಲ್ಪಟ್ಟ ಶಿರಸ್ಸುಗಳಿಂದ ಭಕ್ತಿಪೂರ್ವಕ ನಮಸ್ಕೃತವಾದ ಪಾದಪೀಠ ವುಳ್ಳವನೂ, ಸಕಲಲೋಕಗಳ ಭಾಗ್ಯದೇವತೆಯಾದ ಲಕ್ಷ್ಮೀದೇವಿಯಿಂದ ಸೇವೆಮಾಡಿಸಿಕೊಳ್ಳುವನೂ, ಆದ ಶ್ರೀಕೃಷ್ಣನು, ಆ ಉಗ್ರಸೇನನನ್ನು ಸಿಂಹಾಸನದ ಮೇಲೆ ಕೂಡಿಸಿ, ತಾನು ಕೆಳಗೆ ನಿಂತು ಪರಾಕು ಹೇಳುವುದನ್ನು ನೋಡಿದರೆ, ನನ್ನ ಹೃದಯವು ಕತ್ತಿಯಿಂದಿರಿದಂತಾಗುತ್ತದೆ. ಘೋರವಾದ ವಿಷವನ್ನು ಸ್ತನ್ಯಪಾನಮಾಡಿಸಿ ಶ್ರೀಕೃಷ್ಣನಿಗೆ ಉಣಿಸಿದ ಆ ಪೂತನಿಯನ್ನು ಕೊಂದು, ಅವಳಿಗೆ ತನ್ನ ತಾಯಿಯೋಪಾದಿಯಲ್ಲಿ ಉತ್ತಮಗತಿಯಿತ್ತ ಕೃಷ್ಣನಿಗಿಂತ ಕರುಣಾಳುವನ್ನು ಎಲ್ಲಿ ತರೋಣ? ಆದುದರಿಂದ ಗರುಡಾರೂಢನಾದ, ಶಂಖಚಕ್ರಧಾರಿಯಾದ ಶ್ರೀಕೃಷ್ಣನಲ್ಲಿ ಭಕ್ತಿಭಾವವುಳ್ಳ ದೈತ್ಯರೂ ಕೂಡ, ಅಲ್ಪಕಾಲದಲ್ಲಿ ದ್ವೇಷಾದಿಗಳನ್ನು ಕಾರಣಾಂತರದಿಂದ ಮಾಡಿದಾಗ್ಯೂ, ಆಂತರ್ಯಭಕ್ತಿಯುಳ್ಳವರಾಗಿ ಸದ್ಗತಿ ಪಡೆಯುವರೆಂದು ತಿಳಿಯಬೇಕು.

ಇಂತಹ ಶ್ರೀಕೃಷ್ಣನು ವಸುದೇವ ದೇವಕಿಯರೆಂಬ ಭೋಜಕುಲದವರಲ್ಲಿ, ಅವರಿಗುಂಟಾದ ಬಂಧನ ಮುಂತಾದ ಕಷ್ಟಗಳನ್ನು ಬಿಡಿಸಿ ಕಂಸನ ಸಂಹಾರಾರ್ಥವಾಗಿ ಶಿಶುವಾಗವತರಿಸಿದನು. ಅಲ್ಲಿಂದ ಕಂಸನ ಭಯದಿಂದಲೋ ಎಂಬಂತೆ ನಂದಗೋಪ ಯಶೋದಾದೇವಿಯರನ್ನು ಎರಡನೆಯ

ತಂದೆತಾಯಿಗಳಂತೆ ಮಾಡಿಕೊಂಡು ಗೋಕುಲಕ್ಕೆ ಬಂದನು. ಅಲ್ಲಿ ಬಾಲಕ್ರೀಡೆಯಲ್ಲೇ ಶಕಟ, ಹಂಸ, ಡಿಬಿಕ ಮೊದಲಾದ ಅನೇಕ ದೈತ್ಯರನ್ನು ಸಂಹರಿಸಿದನು. ಬಲರಾಮನಿಂದ ಕೂಡಿಕೊಂಡು, ಗೋವುಗಳನ್ನೂ ಕರುಗಳನ್ನೂ ಕಾಯುತ್ತಾ, ಬಹು ಬಾಲಲೀಲೆಗಳಿಂದ ನಂದವ್ರಜಕ್ಕೆ ಆನಂದವನ್ನಿತ್ತು, ಗೋಕುಲದಲ್ಲಿ ಸಾಕ್ಷಾತ್ ಲಕ್ಷ್ಮೀನಿವಾಸ ಸ್ಥಳದಂತೆ ಐಶ್ವರ್ಯವನ್ನುಂಟು ಮಾಡಿದನು.

ಗೋಪಾಲಕರನ್ನು ಕೂಡಿ, ವಿನೋದದಿಂದ ಅ, ಥಟಕ್ಕನೆ ನಗುತ್ತಲೂ, ಆ ಬಾಲಕರ ಮಧ್ಯೆ ಸಿಂಹದ ಮರಿಯಂತೆ ಕಂಗೊಳಿಸುತ್ತಿದ್ದನು. ಕಾಳಿಂದಿ ವಿಷದ ನೀರನ್ನು ಕುಡಿದ ಗೋಪಾಲಕರೂ ಗೋವುಗಳೂ ಸತ್ತು ಬಿದ್ದಿರಲಾಗಿ, ತನ್ನ ಕೃಪಾದೃಷ್ಟಿಯಿಂದ ನೋಡಿ ಅವರನ್ನು ಬದುಕಿಸಿ, ಕಾಳಿಂಗಮರ್ದನ ಮಾಡಿ, ಕಾಳಿಂಗ ಮಡುವಿನ ಉದಕವನ್ನು ಪಾನಾರ್ಹವನ್ನಾಗಿ ಮಾಡಿದನು. ದೇವೇಂದ್ರನಿಗಾಗಿ ಮಾಡುತ್ತಿದ್ದ ಗೋಸವ ಎಂಬ ಯಾಗವನ್ನು ಗೋವರ್ಧನ ಪರ್ವತಕ್ಕೆ ಮಾಡಿರೆಂದು ಮಾಡಿಸಿ, ಆ ಪರ್ವತರೂಪದಿಂದ ಎಲ್ಲವನ್ನೂ ತಾನೇ ಸ್ವೀಕರಿಸಿದನು. ಕೋಪಗೊಂಡ ಇಂದ್ರನು ಪ್ರಳಯಮೇಘಗಳಿಂದ ಘೋರವಾದ ಮಳೆಗರೆಯಲು, ಎಡಗೈಕಿರುಬೆರಳಿಂದ ಗೋವರ್ಧನಗಿರಿಯನ್ನು ಕೊಡೆಯಂತೆ ಎತ್ತಿಹಿಡಿದು, ಅದರ ಬುಡದಲ್ಲಿ ಗೋಪಾಲಕರನ್ನೂ, ಗೋವುಗಳನ್ನೂ ನಿಲ್ಲಿಸಿ ಏಳುದಿನಗಳ ಕಾಲ ಸಂರಕ್ಷಿಸಿದನು. ಶರದೃತುವು ಪ್ರಾಪ್ತವಾಗಲು, ಆ ಶರಚ್ಚಂದಿರನ ಕಿರಣಗಳಿಂದ ಶೋಭಾಯಮಾನವಾದ ಮಧುವನದಲ್ಲಿ, ಮಧುರವಾಣಿಯುತರಾದ ಮದಗಜಗಮನೆಯರಿಂ ದೊಡಗೂಡಿ, ಮಂದಮಾರುತನ ತಂಗಾಳಿಯಲ್ಲಿ, ಮಂದಸ್ಮಿತ ವದನಾರವಿಂದ ಸುಂದರತಮ ಶ್ರೀಕೃಷ್ಣನು ಮಂದಗಮನೆಯರೊಡನೆ ಮದನಕ್ರೀಡೆ, ರಾಸಕ್ರೀಡಾ ವಿನೋದಗಳಿಂದ ಉಂಟಾದ ನಗುವಿನಿಂದಲೂ, ಪ್ರೇಮವಾಕ್ಯಕಲಾಪಗಳಿಂದಲೂ, ವನದಲ್ಲೆಲ್ಲಾ ಕಿಲಕಿಲಾರವವನ್ನುಂಟು ಮಾಡಿದನು.

**ಇತಿ ಶ್ರೀಮದ್ಭಾಗವತ ತೃತೀಯ ಸ್ಕಂಧದ ಎರಡನೆಯ ಅಧ್ಯಾಯವು ಮುಗಿಯಿತು.**

## अथ तृतीयोऽध्यायः

**उद्धव उवाच**

ततः स आगत्य पुरं स्वपित्रोश्चिकीर्षयाशां बलदेवसंयुतः ।
निपात्य तुङ्गाद् रिपुयूथनाथं हतं व्यकर्षद् व्यसुमोजसोर्व्याम् ॥ १ ॥

सान्दीपिनेः सकृत् प्रोक्तं ब्रह्माधीत्य सविस्तरम् ।
तस्मै प्रादाद् वरं पुत्रं मृतं पञ्चजनोदरात् ॥ २ ॥

समाहुता भीष्मककन्यया ये श्रियः सवर्णेन जिहीर्षयैषाम्।
गान्धर्ववृत्त्या मिषतां स्वभागं जह्रे पदं मूर्ध्नि दधत् सुपर्णः॥ ३ ॥

ककुद्मतोऽविद्धनसो दमित्वा स्वयंवरे नाग्नजितीमुवाह।
तान् भग्नमानानभिगृध्यतोऽज्ञान् जघ्नेऽक्षतः शस्त्रभृतश्च शस्त्रैः॥ ४ ॥

प्रियं प्रभुर्ग्राम्य इव प्रियाया विधित्सुरार्च्छद् द्युतरुं यदर्थे।
वज्र्याद्रवत् तं सगणो रुषाऽन्धः स्वार्थे पुरा तैर्यमयाचतानतः॥ ५ ॥

सुतं मृधे स्वं(खं) वपुषा ग्रसन्तं दृष्ट्वा सुनाभोन्मथितं धरित्र्याः।
आमन्त्रितस्तत्तनयाय शेषं दत्वा तदन्तःपुरमाविवेश॥ ६ ॥

तत्राहृतास्ता नरदेवकन्याः कुजेन दृष्ट्वा हरिमार्तबन्धुम्।
उत्थाय सद्यो जगृहुः प्रहर्षव्रीडानुरागप्रहितावलोकैः॥ ७ ॥

आसां मुहूर्त एकस्मिन् नानागारेषु योषिताम्।
सविधिं जगृहे पाणीन् पुरुरूपः स्वमायया॥ ८ ॥

तास्वपत्यान्यजनयदात्मतुल्यानि सर्वतः।
एकैकस्यां दश दश प्रकृतेर्विबुभूषया॥ ९ ॥

कालमागधशाल्वादीननीकै रुन्धतः पुरम्।
अजीघनत् स्वयं दिव्यं स्वपुंसां तेज आदिशन्॥ १० ॥

शंबरं विविदं बाणं मुरं बल्वलमेव च।
अन्यांश्च दन्तवक्रादीनवधीत् कांश्च घातयन्॥ ११ ॥

अथ ते भ्रातृपुत्राणां पक्षयोः पतितान् नृपान्।
चचाल भूः कुरुक्षेत्रं येषामापततां बलैः॥ १२ ॥

सकर्णदुःशासनसौबलानां कुमन्त्रपाकेन हतश्रियायुषम्।
सुयोधनं सानुचरं शयानं भग्नोरुमुर्व्यां स ननन्द पश्यन्॥ १३ ॥

कियान् भुवोऽयं क्षपितोरुभारो यद् द्रोणभीष्मार्जुनभीमशल्यैः।
अष्टादशाक्षौहिणिको मदंशैरास्ते बलं दुर्विषहं यदूनाम्॥ १४ ॥

मिथो यदैषां भविता विवादो माध्व्या मदात् ताम्रविलोचनानाम्।
नैषां वधोपाय इयानतोऽन्यो मय्युद्यतेऽन्तर्दधते स्वयं स्म॥ १५ ॥

एवं सञ्चिन्त्य भगवान् स्वाराज्ये स्थाप्य धर्मजम्।
नन्दयामास सुहृदः साधूनां वर्त्म दर्शयन्॥ १६ ॥

उत्तरायां धृतः पूरोर्वंशः साध्वभिमन्युना।
स वै द्रौण्यस्त्रसंछिन्नः पुनर्भगवता धृतः॥ १७ ॥

अयाजयद् धर्मसुतमश्वमेधैस्त्रिभिर्विभुः।
सोऽपि क्ष्मामनुजै रक्षन् रेमे कृष्णमनुव्रतः॥ १८ ॥

भगवानपि विश्वात्मा लोकवेदपथानुगः।
कामान् सिषेवे द्वार्वत्यामसक्तः साङ्ख्यमास्थितः॥ १९ ॥

स्निग्धस्मितावलोकेन वाचा पीयूषकल्पया।
चरित्रेणानवद्येन श्रीनिकेतेन चात्मना॥ २० ॥

इमं लोकममुंश्चैव रमयन् सुतरां यदून्।
रेमे क्षणदया दत्तक्षणः स्त्रीक्षणसौहृदः॥ २१ ॥

तस्येत्थं रममाणस्य संवत्सरगणान् बहून्।
गृहमेधेषु योगेषु विरागः समजायत॥ २२ ॥

दैवाधीनेषु कामेषु दैवाधीनः स्वयं पुमान्।
को विश्रंभेत योगेन योगेश्वरमनुव्रतः॥ २३ ॥

पुर्यां कदाचित् क्रीडद्भिर्यदुभोजकुमारकैः।
कोपिता मुनयः शेपुर्भगवन्मतकोविदाः॥ २४ ॥

ततः कतिपयैर्मासैर्वृष्णिभोजान्धकादयः।
ययुः प्रभासं संहृष्टा रथैर्देवविमोहिताः॥ २५ ॥

तत्र स्नात्वा पितॄन् देवान् ऋषींश्चैव तदंभसा।
तर्पयित्वाऽथ विप्रेभ्यो गावो बहुगुणा ददुः॥ २६ ॥

हिरण्यं रजतं शय्यां वासांस्यजिनकम्बलान् ।
हयान् रथानिभान् कन्यां धरां वृत्तिकरीमपि ॥ २७ ॥

अन्नं चोरुरसं तेभ्यो दत्वा भगवदर्पणम् ।
गोविप्रार्थासवः शूराः प्रणेमुर्भुवि मूर्धभिः ॥ २८ ॥

## ॥ इति श्रीमद्भागवते (तृतीयस्कन्धे( *3) तृतीयोऽध्यायः ॥

**॥ ಮೂರನೆಯ ಅಧ್ಯಾಯ ॥**

ಈ ಅಧ್ಯಾಯದಲ್ಲಿ ಉದ್ಧವನು ವಿದುರನಿಗೆ, ಅಪ್ರಿಯವಾರ್ತೆಗಳನ್ನು ಏಕಾಏಕಿಯಾಗಿ ಸಜ್ಜನರು ಹೇಳುವುದಿಲ್ಲವೆಂಬುದನ್ನು ತಾನೇ ತೋರಿಸುತ್ತಾ, ಹೇಳಬೇಕಾದ ಅಪ್ರಿಯವಾರ್ತೆಯನ್ನು ಆದಷ್ಟು ಸಾವಕಾಶವಾಗಿ ಹೇಳಬೇಕೆಂದು, ಶ್ರೀಕೃಷ್ಣನ ಲೀಲೆಗಳನ್ನೇ ಮುಂದುವರಿಸುತ್ತಾನೆ.

## ಉದ್ಧವನಿಂದ ಕೃಷ್ಣಲೀಲಾವರ್ಣನೆ :-

ಹೀಗೆ ರಾಸಕ್ರೀಡಾದಿಗಳಿಂದ ಗೋಕುಲದ ವ್ರಜಸ್ತ್ರೀಯರಿಗೆ ಶ್ರೀಕೃಷ್ಣನು ಆನಂದವನ್ನುಂಟುಮಾಡಿ, ನಂತರ ತನ್ನ ತಂದೆಯಾದ ವಸುದೇವನ, ತಾಯಿಯಾದ ದೇವಕಿಯ ದುಃಖವನ್ನು ಪರಿಹರಿಸಿ ಅವರಿಗೆ ಸಂತೋಷ ಉಂಟುಮಾಡುವುದಕ್ಕಾಗಿ, ಕಂಸನ ರಾಜಧಾನಿಗೆ ಬಲರಾಮನ ಸಹಿತನಾಗಿ ಬಂದು ಮಲ್ಲರನ್ನೂ, ಗಜವನ್ನೂ ಸಂಹರಿಸಿ, ದೈತ್ಯಶ್ರೇಷ್ಠನಾದ ಕಂಸನನ್ನು ಸಂಹರಿಸಿ, ತಾಯಿತಂದೆಯರ ಭಯ ಪರಿಹರಿಸಿದನು.

ನಂತರ ಸಾಂದೀಪನಾಚಾರ್ಯರಲ್ಲಿ ಸಾಂಗವೇದಾಭ್ಯಾಸಮಾಡಿ ಅವರಿಗೆ ಗುರುದಕ್ಷಿಣೆಗಾಗಿ, ಅವರ ಮೃತಪುತ್ರನನ್ನು ಬದುಕಿಸಿ ಮೃತ್ಯುವಿನ ಬಾಯಿಂದ ವಾಪಸು ತಂದಿತ್ತನು. ಭೀಷ್ಮಕಪುತ್ರಿಯಾದ ಸಾಕ್ಷತ್ ಲಕ್ಷ್ಮೀಸ್ವರೂಪಳಾದ ರುಕ್ಮಿಣೀದೇವಿಯಿಂದ ಪ್ರಾರ್ಥಿತನಾಗಿ, ಗರುಡಾರೂಢನಾಗಿ ಹೋಗಿ ಸಮಸ್ತ ಖಳರಾಜರ ಎದುರಿಗೇ ರುಕ್ಮಿಣೀಯನ್ನಪಹರಿಸಿ, ರಥದ ಮೇಲೆ ಕುಳ್ಳಿರಿಸಿಕೊಂಡು ಬಂದು ವಿಧಿಪೂರ್ವಕವಾಗಿ ವಿವಾಹವಾದನು.

ಸ್ವಯಂವರದಲ್ಲಿ ಸ್ವಬಾಹುಶಕ್ತಿಯಿಂದ ಪ್ರಬಲಗಳಾದ ಗೂಳಿಗಳನ್ನು ಹಿಡಿದು ಅವುಗಳ ಮೂಗುಗಳು ಛಿದ್ರವಾಗಲು ಅವುಗಳನ್ನು ಕಟ್ಟಿಹಾಕಿ, ಬಂದಿದ್ದ ರಾಜರುಗಳನ್ನು ಶಸ್ತ್ರಾಸ್ತ್ರಗಳಿಂದ ಸೋಲಿಸಿ

ನೀಲಾದೇವಿಯನ್ನು ಮದುವೆಯಾದನು. ಸ್ತ್ರೀಕಾಮುಕರಾದ ಪುರುಷರಂತೆ, ಸತ್ಯಭಾಮಾದೇವಿಯಿಂದ ಪ್ರಾರ್ಥಿತನಾದ ಶ್ರೀಕೃಷ್ಣನು, ಸತ್ಯಭಾಮಾಸಹಿತ ಗರುಡನನ್ನೇರಿ ಸ್ವರ್ಗಲೋಕಕ್ಕೆ ಹೋಗಿ, ಪಾರಿಜಾತವೃಕ್ಷವನ್ನು ಕಿತ್ತುಕೊಂಡು ಬರುತ್ತಿರುವಾಗ, ಇಂದ್ರನು ಸೈನ್ಯಸಮೇತ ಬಂದು ವಜ್ರಾಯುಧ ಪ್ರಯೋಗಿಸಿದಾಗ, ಅನಾಯಾಸದಿಂದ ಆ ವಜ್ರಾಯುಧವನ್ನು ಶ್ರೀಕೃಷ್ಣನು ಒಂದು ಆಟದ ಸಾಮಾನಿನಂತೆ ಕೈಲಿ ಹಿಡಿದು ಇಂದ್ರನನ್ನು ಪರಾಜಿತನನ್ನಾಗಿ ಮಾಡಿ, ಪುನಃ ವಜ್ರಾಯುಧವನ್ನು ಅವನಿಗೆ ಕೊಟ್ಟು, ಪಾರಿಜಾತವೃಕ್ಷವನ್ನು ಸತ್ಯಭಾಮಾದೇವಿಯ ಅರಮನೆಯ ಮುಂಭಾಗದಲ್ಲಿ ಸ್ಥಾಪಿಸಿದನು.

ಭೂಮಿಯ ಪುತ್ರನಾದ ನರಕಾಸುರನು ಸಮಸ್ತರಾಜರನ್ನೂ ಗೆದ್ದು ಸೆರೆಮನೆಯಲ್ಲಿಟ್ಟು, ರಾಜಪುತ್ರಿಯರನ್ನು ಅಂತಃಪುರಕ್ಕೆ ಸೇರಿಸಿರಲಾಗಿ, ಆ ರಾಜರ ಮೊರೆಯನ್ನು ಲಾಲಿಸಿ, ನರಕಾಸುರನ ಮಗನಿಗೆ ರಾಜ್ಯಾಭಿಷೇಕಮಾಡಿ, ಅಂತಃಪುರಕ್ಕೆ ಪ್ರವೇಶಿಸಿದಾಗ, ಆ ರಾಜಪುತ್ರಿಯರೆಲ್ಲಾ ಶ್ರೀಕೃಷ್ಣನನ್ನು ನೋಡಿ ಕಾಮಾತುರರಾಗಿ, ಪ್ರೇಮಪೂರಿತವಾದ ನೋಟಗಳಿಂದ ನೋಡುತ್ತಾ ಮನೋವ್ಯಥೆ ಪಡುತ್ತಿರುವುದನ್ನು ಶ್ರೀಕೃಷ್ಣನು ತಿಳಿದು, ಅವರಷ್ಟೂ ಜನರನ್ನೂ ಏಕಕಾಲದಲ್ಲಿ ಬೇರೆ ಬೇರೆ ರೂಪಗಳಿಂದ ವಿಧ್ಯುಕ್ತವಾಗಿ ಪಾಣಿಗ್ರಹಣ ಮಾಡಿಕೊಂಡು ಅವರನ್ನು ದ್ವಾರಕಾಪಟ್ಟಣಕ್ಕೆ ಕರೆತಂದು ಪ್ರತಿಯೊಬ್ಬರನ್ನೂ ಬೇರೆ ಬೇರೆ ದಿವ್ಯಭವನಗಳಲ್ಲಿಟ್ಟನು. ಅಷ್ಟು ಜನ ಪತ್ನಿಯರ ಜೊತೆಯಲ್ಲೂ ಸಂಸಾರಮಾಡುವನಾಗಿ ಒಬ್ಬೊಬ್ಬ ಸ್ತ್ರೀಯಲ್ಲಿ ಹತ್ತು ಹತ್ತು ಗಂಡು ಮಕ್ಕಳನ್ನು ಪಡೆದನು. ಅವರು ಕೃಷ್ಣನಂತೆ ರೂಪ ವುಳ್ಳವರೂ, ವೀರ್ಯಔದಾರ್ಯಾದಿ ಸದ್ಗುಣ ವುಳ್ಳವರೂ, ಭೂದೇವಿಗೆ ಆಭರಣ ಸದೃಶರೂ ಆಗಿದ್ದರು.

ಕಾಲಯವನ, ಮಾಗಧ, ಶಾಲ್ವರು ಸೈನ್ಯಸಮೇತ ಮಥುರೆಗೆ ಮುತ್ತಿಗೆ ಹಾಕಲು, ತನ್ನ ಬಾಹುಬಲದಿಂದ ಮಾಗಧ, ಶಾಲ್ವರನ್ನು ಸೈನ್ಯಸಹಿತ ಸಂಹರಿಸಿ, ಕಾಲಯವನನಿಗೆ ಹೆದರಿದವನಂತೆ ಓಡಿ, ಗುಹೆಯಲ್ಲಿ ಮಲಗಿದ್ದ ಮುಚುಕುಂದರಾಜನಿಂದ ಕಾಲಯವನನನ್ನು ದೃಷ್ಟಿಮಾತ್ರದಿಂದ ಸುಟ್ಟುಬೂದಿ ಮಾಡಿಸಿದನು. ಶಂಬರ, ವಿವಿದ, ಬಾಣಾಸುರ, ಮುರ, ಬಿಲ್ವಲ, ದಂತವಕ್ತ್ರ ಮೊದಲಾದವರನ್ನು ಸದೆಬಡಿದು ನಾಶಮಾಡಿದನು. ಬಾಣಾಸುರನನ್ನು ಹಿಂಸಿಸಿ, ಮಹದೇವರ ಪ್ರಾರ್ಥನೆಯಂತೆ ಬಿಟ್ಟುಬಿಟ್ಟನು. ನಂತರ ನಿನ್ನ ಜ್ಯೇಷ್ಠ ಭ್ರಾತೃವಾದ ಧೃತರಾಷ್ಟ್ರನ ಮಕ್ಕಳ ಪಕ್ಷವನ್ನು ವಹಿಸಿದ ಸಮಸ್ತ ರಾಜರನ್ನೂ, ಸೈನ್ಯಸಹಿತ ಕುರುಕ್ಷೇತ್ರಯುದ್ಧದಲ್ಲಿ ಸಂಹರಿಸಿದನು.

ಕರ್ಣ, ದುಶ್ಯಾಸನ, ಸೌಬಲರ ಕುಮಂತ್ರಗಳನ್ನು ಸ್ವೀಕರಿಸಿ ಹತಭಾಗ್ಯನಾಗಿದ್ದ ದುರ್ಯೋಧನನೂ, ರಣರಂಗದಲ್ಲಿ ತಮ್ಮಂದಿರಿಂದಲೂ, ಕರ್ಣ, ಸೌಬಲರಿಂದಲೂ ಕೂಡಿ ಹತನಾದನು. ಭೀಮಸೇನದೇವರ ಗದೆಯಿಂದ ಮುರಿಯಲ್ಪಟ್ಟ ತೊಡೆ ವುಳ್ಳ ದುರ್ಯೋಧನ, ದುಶ್ಯಾಸನರು ರಣರಂಗದಲ್ಲಿ ನೆಲದ

ಮೇಲೆ ಬಿದ್ದಿರುವುದನ್ನು ಶ್ರೀಕೃಷ್ಣನು ನೋಡಿ, ಇಂದಿಗೆ ಭೂಭಾರಹರಣ ಕಾರ್ಯವಾಯಿತೆಂದು ಸಂತೋಷಪಟ್ಟನು. ದ್ರೋಣ ಭೀಷ್ಮಾದಿಗಳೂ ದುಷ್ಟರ ಪಕ್ಷವನ್ನು ವಹಿಸಿದ್ದರಿಂದ ಹತರಾದರು. ಆದರೆ ತನ್ನಿಂದ ಸಂರಕ್ಷಿಸಲ್ಪಟ್ಟ ಯಾದವಸೈನ್ಯವು ಮಾತ್ರ ಉಳಿದಿದೆ. ಮುಂದೆ ಇದನ್ನು ಮದ್ಯಪಾನದಿಂದ ಮತ್ತರನ್ನಾಗಿ ಮಾಡಿ ಪರಸ್ಪರ ಹೊಡೆದಾಡಿಸಿ ಸಂಹಾರಮಾಡಿ, ತನ್ನ ಈ ಶ್ರೀಕೃಷ್ಣಾವತಾರವನ್ನು ಪರಿಸಮಾಪ್ತಿ ಮಾಡಬೇಕೆಂದು ಸಂಕಲ್ಪಿ ಸಿದನು.

ನಂತರ ಧರ್ಮರಾಯನನ್ನು ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ, ಅವನಿಂದ ಮೂರು ಸಲದಂತೆ ಶ್ರೀಕೃಷ್ಣ, ಪರಶುರಾಮ, ವೇದವ್ಯಾಸದೇವರ ಸನ್ನಿಧಾನ ವಿಶೇಷದಿಂದ ಒಂದೇ ಅಶ್ವಮೇಧಯಾಗ ಮಾಡಿಸಿ ಸ್ವಲ್ಪ ಕಾಲ ಅವರೊಡನೆ ಇದ್ದು, ನಂತರ ದ್ವಾರಕಾ ಪಟ್ಟಣಕ್ಕೆ ಬಂದು, ಸಕಲ ಸೌಭಾಗ್ಯ, ಸುಖಸಾಧನಗಳಿಂದಲೂ, ಸರ್ವ ಯಾದವರನ್ನೂ ಸುಖಪಡಿಸುತ್ತಾ ತಾನೂ ೧೬,೧೦೮ ಭಾರ್ಯೆಯರೊಡನೆ ನಾನಾ ರೀತಿ ಸುಖಪಡುತ್ತಾ ಇದ್ದನು. ಹೀಗೆಯೇ ಬಹಳ ವರ್ಷಗಳು ಕಳೆದವು. ನಂತರ ಮನೆಮನೆಗಳಲ್ಲಿ ಸಣ್ಣಪುಟ್ಟ ಮನಸ್ತಾಪಗಳೂ ಕಲಹಗಳೂ ದೈವಯೋಗದಿಂದ ಷುರುವಾದವು.

ಒಂದು ದಿನ ಯದುಭೋಜರ ಬಾಲಕರು ವನಕ್ರೀಡೆಗೆ ಹೋಗಿ ಅಲ್ಲಿ ವಿನೋದ ನೆವದಿಂದ ಅಲ್ಲಿದ್ದ ತಪಸ್ವಿಗಳಿಗೆ ಕೋಪಉಂಟುಮಾಡಿ, ಅವರಿಂದ ತಮ್ಮತಮ್ಮ ಕುಲನಾಶದ ಶಾಪವನ್ನು ಪಡೆದರು. ಇದಾದ ಕೆಲವು ತಿಂಗಳಲ್ಲಿ, ಯಾದವ, ಭೋಜ, ವೃಷ್ಣಿ, ಅಂಧಕರೆಲ್ಲಾ ಪ್ರಭಾಸಕ್ಷೇತ್ರಕ್ಕೆ ಹೊರಟರು. ಅಲ್ಲಿ ಸ್ನಾನಾದಿಗಳಿಂದ ಪವಿತ್ರರಾಗಿ ದೇವ, ಪಿತೃ, ಬ್ರಾಹ್ಮಣ ಪೂಜೆಗಳನ್ನು ಮಾಡಿ, ಬ್ರಾಹ್ಮಣರಿಗೆ ಗೋ, ಭೂ, ಹಿರಣ್ಯ, ಪರ್ಯಂಕ, ವಸ್ತ್ರ, ಧನ, ಗ್ರಾಮಾದಿ ವೃತ್ತಿಗಳ ಬಹುದಾನಗಳನ್ನು ಮಾಡಿ, ಶ್ರೀಪರಮಾತ್ಮನಿಗೆ ಪ್ರೀತಿಯಾಗಲೆಂದು, ಭಗವದರ್ಪಣೆಯನ್ನು ಮಾಡಿ, ಬ್ರಾಹ್ಮಣರಲ್ಲಿ ಬಹಳ ಭಕ್ತಿಯುಳ್ಳವರಾಗಿ, ಎಲ್ಲರೂ ಭೂಮಿಯ ಮೇಲೆ ಸಾಷ್ಟಾಂಗ ಪ್ರಣಾಮದಿಂದ ಬ್ರಾಹ್ಮಣರ ಪಾದಕಮಲಗಳನ್ನು ಮುಟ್ಟಿ ಶಿರಸ್ಸನ್ನು ಪಾದಗಳ ಮೇಲಿಟ್ಟು ನಮಸ್ಕರಿಸಿದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಮೂರನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

## अथ चतुर्थोऽध्यायः

**उद्धव उवाच**

अथ ते तदनुज्ञाता भुक्त्वा पीत्वा च वारुणीम् ।
तया विभ्रंशितज्ञाना दुरुक्तैर्मर्म पस्पृशुः ॥ १ ॥

तेषां मैरेयदोषेण विषमीकृतचेतसाम् ।
निम्लोचति रवावासीद् वेणूनामिव मर्दनम् ॥ २ ॥

भगवानात्ममायाया गतिं तामवलोक्य सः ।
सरस्वतीमुपस्पृश्य वृक्षमूलमुपाविशत् ॥ ३ ॥

अहं चोक्तो भगवता प्रपन्नार्तिहरेण ह ।
बदरीं त्वं प्रयाहीति स्वकुलं सञ्जिहीर्षुणा ॥ ४ ॥

अथापि तदभिप्रेतं जानन्नहमरिंदम ।
पृष्ठतोऽन्वगमं भर्तुः पादविश्लेषणाक्षमः ॥ ५ ॥

अद्राक्षमेकमासीनं विचिन्वन् दयितं पतिम् ।
श्रीनिकेतं सरस्वत्यां कृतकेतमकेतनम् ॥ ६ ॥

श्यामावदातं विरजं प्रशान्तारुणलोचनम् ।
दोर्भिश्चतुर्भिर्विदितं पीतकौशाम्बरेण च ॥ ७ ॥

वाम ऊरावधिश्रित्य दक्षिणाघ्रिसरोरुहम् ।
अपाश्रितार्भकाश्वत्थमकृशं त्यक्तपिप्पलम् ॥ ८ ॥

तस्मिन् महाभागवतो द्वैपायनसुहृत् सखा ।
लोकाननुचरन् सिद्ध आससाद यदृच्छया ॥ ९ ॥

तस्यानुरक्तस्य मुनेर्मुकुन्दः प्रमोदभारानतकन्धरस्य ।
आशृण्वतो मामनुरागहाससमीक्षया विश्रमयन्नुवाच ॥ १० ॥

**भगवानुवाच**

वेदाहमन्तर्मनसीप्सितं ते ददामि यत् तद् दुरवापमन्यैः ।
सत्रे पुरा विश्वसृजां मनूनां मत्सिद्धिकामेन वसो त्वयेष्टः ॥ ११ ॥

स एष साधो चरमो भवानामासादितस्ते मदनुग्रहोऽयम् ।
यन्मां नृलोकं रह उत्सृजन्तं दिष्ट्या ददृश्वान् विशदानुवृत्त्या ॥ १२ ॥

पुरा मया प्रोक्तमजाय नाभ्ये पद्मे निषण्णय ममादिसर्गे ।
ज्ञानं परं मन्महिमावभासं यत् सूरयो भागवतं वदन्ति ॥ १३ ॥

इत्यादरोक्तः परमस्य पुंसः प्रतीक्षणानुग्रहभाजनोऽहम् ।
स्नेहोत्थरोमा स्खलिताक्षरस्तं मुञ्चन् शुचः प्राञ्जलिराबभाषे ॥ १४ ॥

को न्वीश ते पादसरोजभाजां सुदुर्लभोऽर्थेषु चतुर्ष्वपीह ।
तथापि नाहं प्रवृणोमि भूमन् भवत्पदाम्भोजनिषेवणोत्सुकः ॥ १५ ॥

कर्माण्यनीहस्य भवोऽभवस्य ते दुर्गाश्रयोऽथारिभयात् पलायनम् ।
कालात्मनो यत् प्रमदायुताश्रयः स्वात्मन्रतेः खिद्यति धीर्विदामपि ॥ १६ ॥

मन्त्रेषु मां वा उपहूय यत् त्वकुण्ठिताखण्डसदात्मबोधः ।
पृच्छेः प्रभो मुग्ध इवाप्रमत्तस्तन्नो मनो मोहयतीव देव ॥ १७ ॥

ज्ञानं परं स्वात्मरहः प्रकाशं प्रोवाच कस्मै भगवान् समग्रम् ।
अपि क्षमं नो ग्रहणाय भर्तर्वदाञ्जसा यद् वृजिनं तरेम ॥ १८ ॥

इत्यावेदितहार्दाय मह्यं स भगवान् परः ।
आदिदेशारविन्दाक्ष आत्मनः परमां स्थितिम् ॥ १९ ॥

स एवमाराधितपादतीर्थादधीततत्त्वात्मविबोधमार्गः ।
प्रणम्य पादौ परिवृत्य देवमिहागतोऽहं विरहातुरात्मा ॥ २० ॥

सोऽहं त्वद्दर्शनाह्लादवियोगार्तियुतः प्रभो ।
गमिष्ये दयितं तस्य बदर्याश्रममण्डलम् ॥ २१ ॥

यत्र नारायणो देवो नरश्च भगवान् ऋषिः ।
मृदु तीव्रं तपो दीर्घं तेपाते लोकभावनौ ॥ २२ ॥

**शुक उवाच**

इत्युद्धवादुपाकर्ण्य सुहृदां दुःसहं वधम् ।
ज्ञानेनाशमयत् क्षत्ता शोकमुत्पतितं बुधः ॥ २३ ॥

स तं महाभागवतं व्रजन्तं कौरवर्षभ ।
विश्रम्भादभ्यधत्तेदं मुख्यं कृष्णपरिग्रहे ॥ २४ ॥

ज्ञानं परं स्वात्मरहः प्रकाशं यदाह योगेश्वर ईश्वरस्ते ।
वक्तुं भवान् नोऽर्हति यद्धि विष्णोर्भृत्याः स्वभृत्यार्थकृतश्चरन्ति ॥ २५ ॥

**उद्धव उवाच**

ननु ते तत्त्वसंराद्ध ऋषिः कौषारवोऽन्ति मे ।
साक्षाद् भगवताऽऽदिष्टो मर्त्यलोकं जिहासता ॥ २६ ॥

**सूत उवाच**

इति सह विदुरेण विश्वमूर्तेर्गुणकथया सुधया प्लुतोरुतापः ।
क्षणमिव पुलिने यमस्वसुस्तां समुषित औपगविर्निशां ततोऽगात् ॥ २७ ॥

राजोवाचनिधनमुपगतेषु वृष्णिभोजेष्वधिरथयूथपयूथपेषु मुख्यः ।
स तु कथमवशिष्ट उद्धवो यद्धरिरपि तत्यज आकृतिं त्र्यधीशः ॥ २८ ॥

**शुक उवाच**

ब्रह्मशापापदेशेन कालेनामोघवाञ्छितः ।
संहृत्य स्वकुलं नूनंत्यक्ष्यन् देहमचिन्तयत् ॥ २९ ॥

अस्माल्लोकादुपरते मयि ज्ञानं मदाश्रयम् ।
अर्हत्युद्धव एवाद्धा सम्प्रत्यात्मवतां परः ॥ ३० ॥

नोद्धवोऽण्वपि मन्न्यूनो यद्गुणैर्निर्जितः प्रभुः ।
अतो मद्वत् पुनर्लोकं ग्राहयन्निह तिष्ठतु ॥ ३१ ॥

एवं त्रिलोकगुरुणा सन्दिष्टः शब्दयोनिना ।
बदर्याश्रममासाद्य हरिमीजे समाधिना ॥ ३२ ॥

विदुरोऽप्युद्धवात् श्रुत्वा कृष्णस्य परमात्मनः ।
क्रीडयोपात्तदेहस्य कर्माणि श्लाघितानि च ॥ ३३ ॥

देहन्यासं च तस्यैवं धीराणां धैर्यवर्धनम् ।
अन्येषां दुष्करतरं पशूनां विक्लवात्मनाम् ॥ ३४ ॥

आत्मानं च कुरुश्रेष्ठ कृष्णेन मनसेक्षितम् ।
ध्यायन् गते भागवते रुरोद प्रेमविह्वलः ॥ ३५ ॥

कालिन्द्याः कतिभिर्विद्वानहोभिर्भरतर्षभ ।
प्रापद्यत द्युसरितं यत्र मित्रासुतो मुनिः ॥ ३६ ॥

# ॥ इति श्रीमद्भागवते (तृतीयस्कन्धे(*3) चतुर्थोऽध्यायः ॥

### ॥ ನಾಲ್ಕನೆಯ ಅಧ್ಯಾಯ ॥

## ಮುಂದುವರೆದ ಕೃಷ್ಣಕಥಾ

ಉದ್ಧವನು ಪುನಃ ಹೇಳುತ್ತಾನೆ:- ಈ ರೀತಿ ಭಕ್ತಿಯಿಂದ ಬ್ರಾಹ್ಮಣರನ್ನು ಸಂತೋಷಪಡಿಸಿ, ಬ್ರಾಹ್ಮಣರಿಂದ ಆಜ್ಞಾಪ್ತರಾಗಿ ಯದು, ಭೋಜ, ಅಂಧಕರು ಭೋಜನಾದಿಗಳನ್ನು ಮಾಡಿ, ನಂತರ ವಾರುಣೀ ಎಂಬ ಮದ್ಯಪಾನವನ್ನು ಸಮೃದ್ಧಿಯಾಗಿ ಮಾಡಿದರು. ಆ ಮದ್ಯದಿಂದ ಉನ್ಮಾದಾವಸ್ಥೆಯನ್ನು ಹೊಂದಿ, ಮೈಮೇಲೆ ಎಚ್ಚರವಿಲ್ಲದಿರುವವರಾಗಿ, ಪರಸ್ಪರ ಮರ್ಮ ತಾಡಕಗಳಾದ ಮಾತುಗಳಿಂದ ಬೈದಾಡಿಕೊಂಡು, ಕೆಂಪಾದ ಕಣ್ಣುಳ್ಳವರಾಗಿ ಪರಸ್ಪರ ಹೊಡೆದಾಡಲನುವಾಗುತ್ತಿದ್ದಾಗ, ಶ್ರೀಕೃಷ್ಣನು ತನ್ನ ಇಚ್ಛೆ ಎಂಬ ಮಾಯಾಶಕ್ತಿಯಿಂದ ಯಾದವರೆಲ್ಲಾ ಮೋಹಿತರಾಗಿ ತಮ್ಮತಮ್ಮಲ್ಲೇ ಹೊಡೆದಾಡಿ ಮರಣೋನ್ಮುಖ ರಾಗುತ್ತಿರುವುದನ್ನು ತಿಳಿದು, ಸಮೀಪದಲ್ಲಿದ್ದ ನನ್ನನ್ನು ಕರೆದು, ಎಲೈ! ಉದ್ಧವನೇ ಈ ಯಾದವರ ವಿನಾಶಕಾಲವೂ, ನಾನೂ ಬ್ರಾಹ್ಮಣಶಾಪದಂತೆ ಕುಲನಾಶಕವಾದ ಒನಕೆಯ ಶೇಷದಿಂದ ದೇಹತ್ಯಾಗಮಾಡುವಂತೆ ತೋರಿಸುವ ಕಾಲವೂ ಸಮೀಪಿಸಿದೆ ಇನ್ನು ನೀನಿಲ್ಲಿರಬೇಡ. ಬೇಗ ಬದರಿಕಾಶ್ರಮಕ್ಕೆ ಹೋಗೆಂದು ಹೇಳಿ ಶ್ರೀಕೃಷ್ಣನು ಮೆಲ್ಲನೆ ಸರಸ್ವತೀತೀರದಲ್ಲಿ ಒಂದು ವೃಕ್ಷದ ಬುಡದ ಬಳಿಗೆ ಹೋಗಿ, ನದಿಯಲ್ಲಿ ಕೈಕಾಲ್ತೊಳೆದುಕೊಂಡು ಶುದ್ಧಾಚಮನಮಾಡಿ, ಆ ವೃಕ್ಷದ ಬುಡದಲ್ಲಿ ಮಲಗಿಕೊಂಡು, ಎಡಗಾಲನ್ನು ಮಡಿಸಿಕೊಂಡು, ಆ ಎಡಮಂಡಿಯ ಮೇಲೆ ತನ್ನ ಬಲ ಪಾದವನ್ನಿಟ್ಟುಕೊಂಡು ವಿಶ್ರಮಿಸಿಕೊಳ್ಳುವನಂತೆ ಮಲಗಿದನು.

ನಾನಾದರೂ ಪರಮಾತ್ಮನಿಂದ ಬದರಿಕಾಶ್ರಮಕ್ಕೆ ಹೋಗೆಂದು ಹೇಳಲ್ಪಟ್ಟಿದ್ದರೂ, ಶತೃಗಳು ಬಂದರೆ ಫಲಾಯನ ಮಾಡುವ ಹೇಡಿಗಳಂತೆ, ಸನ್ನಿಹಿತವಾದ ಮೃತ್ಯುವಿನಿಂದ ಪಾರಾಗಲು ಇಷ್ಟವಿಲ್ಲದೆಯೂ, ಶ್ರೀಕೃಷ್ಣನ ಪಾದಾರವಿಂದಾಶ್ರಯವನ್ನು ಬಿಟ್ಟು ಬೇರೆ ಹೋಗಲು ಸಮರ್ಥವಾಗಲಿಲ್ಲವಾಗಿಯೂ, ಮೆಲ್ಲಮೆಲ್ಲನೆ ಶ್ರೀಕೃಷ್ಣನ ಹೆಜ್ಜೆಗಳನ್ನೇ ಅನುಸರಿಸಿ, ಅವನು ಮಲಗಿದ್ದ ಮರವನ್ನೇ ಸಮೀಪಿಸಿದೆನು. ಶ್ರೀಕೃಷ್ಣನನ್ನು ನೋಡಲಾಗಿ ನೀಲಮೇಘ ಶ್ಯಾಮಲವರ್ಣದಿಂದ, ನೋಡುವವರ ಅಜ್ಞಾನಾಖ್ಯ ಕತ್ತಲೆಯನ್ನು ಓಡಿಸುವಂತೆ ಪ್ರಕಾಶಮಯವಾದ, ಶಾಂತವಾದ, ಪೂರ್ಣಸುಖಾತ್ಮಕವಾದ ಆಕೃತಿಯಿಂದ ಕೂಡಿದವನಾಗಿ, ಮುಗುಳುನಗೆಯಿಂದ ತನ್ನ ಅವತಾರಕಾರ್ಯವು ಪೂರೈಸಿದ್ದನ್ನು ಚಿಂತಿಸುತ್ತಾ ಈ

ಭೂಲೋಕತ್ಯಾಗಕ್ಕೆ ಸಿದ್ಧನಾಗುತ್ತಿರುವುದಾಗಿ ಕಾಣಬರುತ್ತಿತ್ತು. ಅದೇ ಸಮಯದಲ್ಲಿ ಅಕಸ್ಮಾತ್ ದೇಶದೇಶಗಳನ್ನು ತಿರುಗಿಕೊಂಡು, ವೇದವ್ಯಾಸರ ಸ್ನೇಹಿತರಾದ ಮೈತ್ರೇಯ ಋಷಿಗಳು ಆ ಶ್ರೀಕೃಷ್ಣನನ್ನು ಸಮೀಪಿಸಿ, ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿದರು. ಈ ಸಮಯದಲ್ಲಿ ನಾನೂ ಹೋಗಿ ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿ, ಸವಿನಯರಾಗಿ, ಶಿರಬಾಗಿ ನಾವಿಬ್ಬರೂ ನಿಂತಿರಲಾಗಿ, ಶ್ರೀಕೃಷ್ಣನು ತನ್ನ ಪರಮ ಕರುಣಾವಲೋಕನದಿಂದ ನಮ್ಮಿಬ್ಬರನ್ನೂ ನೋಡಿ, ಈ ರೀತಿ ಹೇಳಿದನು.

ಎಲೈ! ಉದ್ಧವಾ! ಎಲೈ ಮೈತ್ರೇಯರೇ! ನೀವು ನನ್ನ ಈ ದೇಹಾವಸಾನ ಅಂದರೆ ಅವತಾರ ಪೂರ್ತಿಯಾಗುವ, ವ್ಯಕ್ತವಾಗುವ ಈ ಕೃಷ್ಣರೂಪವನ್ನು ಮರೆಮಾಡಿಕೊಳ್ಳುವ ಕಾಲದಲ್ಲಿ ನನ್ನನ್ನು ಹುಡುಕಿಕೊಂಡು ನಾನಿದ್ದಲ್ಲಿಗೇ ಏಕೆ, ಏನು ಮನೋಭಾವನೆಯಿಂದ ಬಂದಿರಿ ಎಂಬುದು ನನಗೆ ಗೊತ್ತಿದೆ. ನನ್ನ ಭೂಲೋಕದ ಅಭಿವ್ಯಕ್ತಿಯ ಅಂತ್ಯಕಾಲದಲ್ಲಿ ನನ್ನ ಸಮೀಪದಲ್ಲಿರುವ ಯೋಗವು ನಿಮ್ಮಂತಹ ಏಕಾಂತಭಕ್ತರಿಗಲ್ಲದೆ ಇತರರಿಗೆ ಸಾಧ್ಯವಿಲ್ಲ. ನಿಮಗೆ ನನ್ನಲ್ಲಿರುವ ಪರಮಭಕ್ತಿಯನ್ನು ನೋಡಿ ನಿಮ್ಮ ವಿಚಾರದಲ್ಲಿ ನನ್ನ ಮನಸ್ಸು ಕರಗಿದೆ. ಆದುದರಿಂದ ನಿಮ್ಮ ಪೂರ್ವವಿಚಾರವನ್ನು ನಿಮಗೆ ತಿಳಿಸುತ್ತೇನೆ. ಹಿಂದೆ ಬಹುದಿನಕಲ್ಪಗಳಲ್ಲಿ ನೀವು ಸತ್ರಯಾಗಗಳಲ್ಲಿ ತಪೋನಿಷ್ಠರಾಗಿ, ಮನೋಯೋಗದಿಂದ ನನ್ನರ್ಚಿಸಿ, ಸಾಕ್ಷಾತ್ತಾಗಿ ನನ್ನಿಂದ ಜ್ಞಾನೋಪದೇಶ ಪಡೆಯಲು ಸಾಧನೆ ಮಾಡಿ ನನ್ನನ್ನು ಮೆಚ್ಚಿಸಿ ನನ್ನಿಂದ ವರ ಪಡೆದಿದ್ದೀರಿ. ಆದುದರಿಂದ ಇತರ ಸಮಸ್ತರಿಂದಲೂ ಸಮೀಪಿಸಲ್ಪಡದೇ ಇದ್ದ ನನ್ನ ಈ ಏಕಾಂತಸ್ಥಳಕ್ಕೆ ಈಗ ನೀವು ಬಂದಿರುವಿರಿ. ಈಗ ನಾನು ನಿಮಗೆ ಹೇಳಿರುವ ಮಾತುಗಳಿಂದ ನಿಮ್ಮ ಮನಸ್ಸಿನಲ್ಲಿ ಈಗ ಆ ವರರೂಪವಾದ ಜ್ಞಾನೋಪದೇಶವನ್ನು ಹೊಂದುವ ಕಾಲವು ಬಂದಿದೆ ಎಂದು ತಿಳಿದು ನೀವು ನನ್ನನ್ನು ಸಮೀಪಿಸಿದ್ದೀರಿ. ಆಗಲಿ! ನಾನು ಆದಿಬ್ರಹ್ಮಕಲ್ಪದಲ್ಲಿ ನನ್ನ ನಾಭೀಕಮಲದಲ್ಲುತ್ಪನ್ನನಾದ ಬ್ರಹ್ಮದೇವರಿಗೆ ಯಾವ ಜ್ಞಾನೋಪದೇಶವನ್ನು ಮಾಡಿದೆನೋ, ಅದಕ್ಕೆ ಕೇವಲ ಭಗವತ್ಪರಜ್ಞಾನವಾದುದರಿಂದ ಜ್ಞಾನಿಗಳು ಭಾಗವತವೆಂದು ಕರೆಯುವರೋ! ಅಂತಹ ಜ್ಞಾನವನ್ನು ನಿಮಗೆ ಉಪದೇಶಿಸುವೆನೆಂದನು.

ಶ್ರೀಕೃಷ್ಣನ ಪರಮಸ್ನೇಹಯುಕ್ತವಾದ, ಮಹೋನ್ನತ ಉದಾರತೆ ಯಿಂದ ಕೂಡಿದ ಈ ಮಾತುಗಳನ್ನು ನಾನು ಕೇಳಿದಾಕ್ಷಣ, ಕೃಷ್ಣ ಸ್ನೇಹದಿಂದ ನನಗೆ ಮೈಯೆಲ್ಲಾ ರೋಮಾಂಚನವಾಯ್ತು. ಕಂಠವು ಬಿಗಿದುಬಂದು ಕಣ್ಣುಗ್ಗಳಲ್ಲಿ ಅಶೃಗಳು ತುಳುಕುತ್ತಿರಲು, ನಾನು ಎರಡು ಕೈಗಳನ್ನೂ ಮುಗಿದುಕೊಂಡು ಅಂದರೆ ಅಂಜಲೀಬದ್ಧನಾಗಿ ಗದ್ಗದಸ್ವರದಿಂದ ಈ ರೀತಿ ವಿಜ್ಞಾಪಿಸಿಕೊಂಡೆನು.

ಸ್ವಾಮಿ! ಸರ್ವಲೋಕೇಶನಾದ ನಿನ್ನ ಪಾದಾರವಿಂದಗಳ ಸೇವಕನಿಗೆ ಚತುರ್ವಿಧ ಪುರುಷಾರ್ಥಗಳೂ ಬೇಡದೇ ಇದ್ದರೂ ಲಭಿಸುವುವು. ಆದುದುರಿಂದ ನಿನ್ನ ಅಪರೋಕ್ಷಜ್ಞಾನ ಸಾಧನವಾದ, ನಿನ್ನ

ಶ್ರೀಪಾದಾರವಿಂದ ಭಕ್ತಿಯ ಹೊರತು ನಾನು ಬೇರೆ ಏನೂ ಅಪೇಕ್ಷಿಸುವುದಿಲ್ಲ. ಆದರೆ ಲೀಲಾಮಾನುಷ ವಿಗ್ರಹನಾದ ನಿನ್ನ ಕೆಲವು ಚರ್ಯೆಗಳನ್ನು ನಾನು ತಿಳಿಯದೇ ಮನಸ್ಸಿನಲ್ಲಿ ಖೇದ ಪಡುತ್ತಿದ್ದೇನೆ.

ಅವು ಯಾವುವೆಂದರೆ ಸ್ವಾಮಿ, ಸಕಲಲೋಕಗಳಿಗೂ ಸರ್ವಭಯಗಳನ್ನೂ ಉಂಟುಮಾಡತಕ್ಕ ಯಾವ ದುರ್ಗಾದೇವಿಯೂ ನಿನಗೆ ಹೆದರಿ ನಿನ್ನನ್ನನುವರ್ತಿಸುತ್ತಿರುವಳೋ ಅಂತಹ ನೀನು, ಕಾಲಯವನನಿಗೆ ಅಂಜಿ ಓಡಿಹೋದಂತೆ ಲೋಕಕ್ಕೆ ತೋರಿಸಿರುತ್ತೀಯೆ ! ಭಯದೂರನಾದ ನಿನಗೆ ಅಂಜಿಕೆಯುಂಟೆ ? ಎಂದು ನನ್ನನ್ನು ಬಾಧಿಸುತ್ತಿದೆ. ಯಾವ ಲಕ್ಷ್ಮೀದೇವಿಯರನ್ನು ಅಪೇಕ್ಷಿಸದೆ ನಿನ್ನ ಹೊಕ್ಕಳಿಂದ ಕಮಲದಲ್ಲಿ ಬ್ರಹ್ಮದೇವರನ್ನು ಸೃಷ್ಟಿಸಿದೆಯೋ, ತಂದೆತಾಯಿಗಳನ್ನಪೇಕ್ಷಿಸದೆ ಕಂಬದಿಂದ ಪ್ರಹ್ಲಾದನಿಗೊಲಿದು ಆವಿರ್ಭವಿಸಿದೆಯೋ! ಅಂತಹ ನೀನು ದೇವಕೀವಸುದೇವರ ಗರ್ಭದಲ್ಲಿ ಜನಿಸಿದವನಂತೆ ಲೋಕಕ್ಕೆ ತೋರಿಸಿಯು, ಅನೇಕ ಸಾವಿರ ಹೆಂಗಸರಿಗೆ ಮರುಳಾಗಿ ಸ್ತ್ರೀಕಾಮುಕನಂತೆ ಸಂಸಾರ ಮಾಡಿಯೂ ತೋರಿಸಿರುತ್ತೀಯೆ! ಈ ನಿನ್ನ ಆಟದ ಮಹಿಮೆಯನ್ನು ಬ್ರಹ್ಮಾದಿಗಳು ಮನಗಾಣದಿರಲು ನಾನು ಹೇಗೆ ತಾನೇ ತಿಳಿದೇನು?

ಬ್ರಹ್ಮಾದಿಸಕಲ ದೇವೋತ್ತಮರಾದ ಮಹಾವಿಜ್ಞಾನ ಶಿರೋಮಣಿಗಳಿಗೆ ಸದಾ ಸುಜ್ಞಾನಪ್ರದನೂ, ಉಪದೇಶಕನಾದ ನೀನು ಯಾವಾಗಲೂ ಏನಾದರೂ ಕಾರ್ಯಮಾಡಬೇಕಾದರೆ ನನ್ನನ್ನು ಬರಮಾಡಿಕೊಂಡು, ಉದ್ಧವಾ! ಈ ಕಾರ್ಯವನ್ನು ಹೇಗೆ ಮಾಡೋಣ? ಎಂದು ನನ್ನನ್ನು ಮಂತ್ರಾಲೋಚನೆಯನ್ನು ಕೇಳಿದ್ದೀ ಸ್ವಾಮಿ ! ನಿನ್ನ ಮಾಯೆಯಿಂದ ಮೋಹಿತನಾದ ನಾನು ಅನೇಕವೇಳೆ ನಿನಗೆ ಮುಗ್ಧನಾಗೆ ಸಲಹೆಗಳನ್ನು ಕೊಟ್ಟಿರುತ್ತೇನೆ ಸ್ವಾಮಿ! ಇದರಿಂದಲೇನೆ ನಾನು ಎಷ್ಟು ಅಜ್ಞಾನಿ ಎಂದು ಪ್ರದರ್ಶಿಸಲ್ಪಟ್ಟಿದೆ.

ಆದುದರಿಂದ ಈಗ ನೀನು ಪರಮಾನುಗ್ರಹ ಮಾಡಿ ನಮಗೆ ಆದಿಯಲ್ಲಿ ಬ್ರಹ್ಮದೇವರಿಗೆ ಉಪದೇಶಿಸಿದ ಭಾಗವತಾಖ್ಯ ಜ್ಞಾನವನ್ನು ಉಪದೇಶಿಸಿ ನಮ್ಮಲ್ಲಿರುವ ಅಜ್ಞಾನವನ್ನು ನಾಶಮಾಡಿ, ನಿರಂತರ ನಿನ್ನ ವಿಷಯಕವಾದ ನಿಶ್ಚಯಜ್ಞಾನವು ನಮಗೆ ಉಂಟಾಗುವಂತೆ ಉಪದೇಶರೂಪವಾದ ಅನುಗ್ರಹ ಮಾಡು, ಎಂದು ನಮಸ್ಕರಿಸಿ, ಮನಸ್ಸಿನಲ್ಲಿ ಭಯ ಆತುರಗಳಿಂದ ನನ್ನ ಶರೀರವೆಲ್ಲಾ ನಡುಗುತ್ತಿರಲಾಗಿ, ಶ್ರೀಕೃಷ್ಣನ ಸುಮಂಗಳಮೂರ್ತಿಯನ್ನು ನೋಡುತ್ತಾ ನಿಂತುಕೊಂಡೆನು. ಈ ರೀತಿಯಲ್ಲಿ ನಮ್ರತೆಯಿಂದ ಕಾತುರನಾಗಿ ನಿಂತಿದ್ದ ನನಗೂ, ಮೈತ್ರೇಯರಿಗೂ ಶ್ರೀಕೃಷ್ಣನು ತನ್ನ ವಿಷಯಕವಾದ ನಿಶ್ಚಯ ರಹಸ್ಯ ಜ್ಞಾನಗಳನ್ನುಪದೇಶಿಸಿದನು. ಈ ರೀತಿ ಸಕಲ ವೇದ ರಹಸ್ಯಗಳನ್ನೂ ಕೇಳಿ ತೀರ್ಥಪಾದನಾದ ಶ್ರೀಕೃಷ್ಣನಿಗೆ ನಮಸ್ಕರಿಸಿ ಅವನ ಆಜ್ಞೆಯಂತೆ, ಶ್ರೀಕೃಷ್ಣನನ್ನೇ ಸ್ಮರಿಸುತ್ತಾ

ಬದರಿಕಾಶ್ರಮಕ್ಕೆ ಹೊರಡುವನಾಗಿ ನಾನು ಇಲ್ಲಿಗೆ ಬಂದಿರುವೆನು, ಎಂದು ಉದ್ಧವನು ವಿದುರನಿಗೆ ಹೇಳಿದನು. ಭಾಗವತೋತ್ತಮನಾದ ವಿದುರನೇ ನಿನ್ನನ್ನು ನೋಡಿ ನನಗೆ ಸಂತೋಷವೂ, ಶ್ರೀ ಕೃಷ್ಣನ ವಿರಹದಿಂದ ಮಹತ್ತರವಾದ ಶೋಕವೂ ಏಕಕಾಲದಲ್ಲಿ ಉಂಟಾಗಿದೆ. ನಾನು ಬದರಿಕಾಶ್ರಮಕ್ಕೆ ತೆರಳುವೆನು, ಎಂದನು.

ಅದಕ್ಕೆ ವಿದುರನು ಎಲೈ ಉದ್ಧವಾ! ನಿನ್ನಂತಹ ಜ್ಞಾನಿಗಳಾದ ಭಕ್ತಶಿರೋಮಣಿಗಳು ಸಕಲ ಜ್ಞಾನೋಪದೇಶ ಮಾಡಿ ಉದ್ಧರಿಸುವುದಕ್ಕೇ ಸಂಚಾರ ಮಾಡುವರು. ಆದುದರಿಂದ ಯಾವ ಪರಮರಹಸ್ಯ ಜ್ಞಾನಗಳನ್ನು ನೀನು ಶ್ರೀಕೃಷ್ಣನಿಂದ ತಿಳಿದಿರುವೆಯೋ ಅವನ್ನು ನನಗೂ ಉಪದೇಶಿಸು, ಎಂದನು.

ಉದ್ಧವನು, ಎಲೈ ವಿದುರನೆ! ಮಹಾತ್ಮನಾದ ಮೈತ್ರೇಯ ಋಷಿಯು ಇತರ ಋಷಿಗಳಿಗೆ ಗಂಗಾತೀರದಲ್ಲಿ ಸತ್ರಯಾಗ ದೀಕ್ಷಿತರಾಗಿರುವವರಿಗೆ ಉಪದೇಶಿಸುತ್ತಿರುವನು. ನೀನೂ ಅಲ್ಲಿಗೆ ಹೋಗಿ ಉಪದೇಶ ಹೊಂದು. ನಾನು ಸಮಾಧಿಯೋಗದಿಂದ ಪ್ರಾಪಂಚಿಕ ಜ್ಞಾನಶೂನ್ಯನಾಗಿ ಸಂಚರಿಸುತ್ತಾ ನಿನ್ನನ್ನೂ ಕಂಡದ್ದರಿಂದ ಪುನಃ ಪ್ರಾಪಂಚಿಕ ವಿಷಯಜ್ಞಾನಕ್ಕೆ ಹಿಂತಿರುಗಿ ಭಗವದ್ಗುಣಾನುವರ್ಣನಾ ರೂಪದಿಂದ ನಿನಗೆ ಸ್ಥಿತಿಗಳನ್ನೂ ತಿಳಿಸಿದ್ದೇನೆ! ಪುನಃ ಸಮಾಧಿಯೋಗದಿಂದ ಬದರಿಕಾಶ್ರಮಕ್ಕೆ ಹೋಗುವೆನೆಂದು ಹೇಳಿ ಉದ್ಧವನು ಮುಂದಕ್ಕೆ ಪ್ರಯಾಣಮಾಡಿದನು. ಬಂಧುನಾಶ, ಆಪ್ತನಾಶ ಸಮಾಚಾರಗಳಿಂದ ಮನೋವ್ಯಥೆಯನ್ನು ಹೊಂದಿದ ವಿದುರನು ಮಹಾಸ್ಥೈರ್ಯದಿಂದಲೂ, ಪರಮಾತ್ಮನ ಮಹಾತ್ಮೆಗಳ ಚಿಂತನೆಯಿಂದಲೂ ಮನಸ್ಸನ್ನು ಸ್ಥಿಮಿತ ಮಾಡಿಕೊಂಡು ಕೆಲವು ದಿನ ಕಾಳಿಂದೀ ತೀರ್ಥದಲ್ಲಿ ಸ್ನಾನಾದಿಗಳನ್ನು ಮಾಡಿ, ನಂತರ ಗಂಗಾತೀರಕ್ಕೆ ಹೋಗಿ ಅಲ್ಲಿ ಮೈತ್ರೇಯ ಋಷಿಗಳನ್ನು ಕಂಡನು.

**ಎಂಬಲ್ಲಿಗೆ ಶ್ರೀಮದ್ಭಾಗವತ ತೃತೀಯ ಸ್ಕಂಧದ ನಾಲ್ಕನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು ॥**

## अथ पञ्चमोऽध्यायः

**शुक उवाच**

द्वारि द्युनद्या ऋषभः कुरूणां मैत्रेयमासीनमगाधबोधम् ।
क्षत्ताऽभिसृत्याच्युतभावशुद्धः पप्रच्छ सौशील्यगुणातितृप्तम् ॥ १ ॥

**विदुर उवाच**

सुखाय कर्माणि करोति लोको न तैः सुखं नान्यदुपारमं वा।
विन्देत भूयस्तत एव दुःखं यदत्र युक्तं भगवान् वदेन्नः॥ २ ॥
जनस्य कृष्णाद् विमुखस्य दैवादधर्मशीलस्य सुदुःखितस्य।
अनुग्रहायेह चरन्ति नूनं भूतानि भव्यानि जनार्दनस्य॥ ३ ॥
तत् साधुवर्यादिश शर्मवर्त्म संराधितो भगवान् येन पुंसाम्।
हृदि स्थितो यच्छति भक्तिपूते ज्ञानं स्वसत्ताधिगमं पुराणम्॥ ४ ॥
करोति कर्माणि कृतावतारो यान्यात्मतन्त्रो भगवांस्त्र्यधीशः।
यथा ससर्जाग्र इदं निरीहः संस्थाप्य वृत्तिं जगतो विधत्ते॥ ५ ॥
यथा पुनः स्वे ख इदं निवेश्य शेते गुहायां स निवृत्तवृत्तिः।
योगेश्वराधीश्वर एक एतदनुप्रविष्टो बहुधा यथाऽऽसीत्॥ ६ ॥
क्रीडन् विधत्ते द्विजगोसुराणां क्षेमाय कर्माण्यवतारभेदैः।
मनो न तृप्यत्यपि शृण्वतां नः सुश्लोकमौलेश्चरितामृतानि॥ ७ ॥
यैस्तत्त्वभेदैरधिलोकनाथो लोका नलोकान् सह लोकपालान्।
अचीक्लृपद् यत्र हि सर्वसत्वनिकायभेदोऽधिकृतः प्रतीतः॥ ८ ॥
येन प्रजानामुत वाऽऽत्मकर्मरूपाभिधानेन भिदां व्यधत्त।
नारायणो विश्वसृगात्मयोनिरेतच्च नो वर्णय विप्रवर्य॥ ९ ॥
परावरेषां भगवन् कृतानि श्रुतानि मे व्यासमुखादभीक्ष्णम्।
न तृप्नुमः कर्णसुखावहानां तेषामृते कृष्णकथामृतौघात्॥ १० ॥
कस्तृप्नुयात् तीर्थपदोऽभिधानात् सत्रेषु वः सूरिभिरीड्यमानात्।
यः कर्णनाडीं पुरुषस्य यातो भयप्रदां गेहरतिं छिनत्ति॥ ११ ॥
मुनिर्विवक्षुर्भगवद्गुणानां सखाऽपि ते भारतमाह कृष्णः।
यस्मिन् नृणां ग्राम्यसुखानुवादैर्मतिर्गृहीता न हरेः कथायाम्॥ १२ ॥
सा श्रद्धधानस्य विवर्धमाना विरक्तिमन्यत्र करोति पुंसः।

हरेः सदाऽनुस्मृतिनिर्वृतस्य समस्तदुःखाप्ययमाशु धत्ते ॥ १३ ॥
ताञ्छोच्यशोच्यानविदोऽनुशोचे हरेः कथायां विमुखानघेन ।
क्षिणोति देवोऽनिमिषस्तु तेषामायुर्वृथावादगतिस्मृतीनाम् ॥ १४ ॥

तदस्य कौषारव शर्मदातुर्हरेः कथामेव कथासु सारम् ।
उद्धृत्य पुष्पेभ्य इवार्तबन्धो शिवाय नः कीर्तय तीर्थकीर्तेः ॥ १५ ॥
स विश्वजन्मस्थितिसंयमार्थे कृतावतारः प्रगृहीतशक्तिः ।
चकार कर्माण्यतिपौरुषाणि यानीश्वरः कीर्तय तानि मह्यम् ॥ १६ ॥

**शुक उवाच**

स एवं भगवान् पृष्टः क्षत्रा कौषारविर्मुनिः ।
पुंसां निःश्रेयसार्थाय तमाह बहुमानयन् ॥ १७ ॥

**मैत्रेय उवाच**

साधु पृष्टं त्वया साधो लोकान् साध्वनुगृह्णता ।
कीर्तिं वितन्वता लोके आत्मनोऽधोक्षजात्मनः ॥ १८ ॥

नैतच्चित्रं त्वयि क्षत्तर्बादरायणवीर्यजे ।
गृहीतोऽनन्यभावेन यत् त्वया हरिरीश्वरः ॥ १९ ॥

माण्डव्यशापाद् भगवान् प्रजासंयमनो यमः ।
भ्रातुः क्षेत्रे भुजिष्यायां जातः सत्यवतीसुतात् ॥ २० ॥

भवान् भगवतो नित्यं सम्मतः सानुगस्य हि ।
ज्ञानोपदेशाय च मामादिशद् भगवान् व्रजन् ॥ २१ ॥

अथ ते भगवल्लीला योगमायोपबृंहिताः ।
विश्वस्थित्युद्भवांतार्था वर्णयाम्यनुपूर्वशः ॥ २२ ॥

**॥ इति श्रीमद्भागवते (तृतीयस्कन्धे(*3) पञ्चमोऽध्यायः ॥**

**॥ ಐದನೆಯ ಅಧ್ಯಾಯ ॥**

## ವಿದುರ ಮೈತ್ರೇಯರ ಸಮಾಗಮ ಮತ್ತು ವಿದುರನ ಪ್ರಶ್ನೆ

ಈ ಅಧ್ಯಾಯದಲ್ಲಿ ವಿದುರನು, ಗಂಗಾದ್ವಾರದಲ್ಲಿ ಆಶ್ರಮ ಮಾಡಿಕೊಂಡು ಸುಖಾಸೀನರಾಗಿ ಕುಳಿತಿರುವ ಅತಿಶಯ ಜ್ಞಾನಿಗಳಾದ ಮೈತ್ರೇಯ ಋಷಿಗಳನ್ನು ಸಮೀಪಿಸಿ, ಭಗವದ್ಗುಣಾನುಕಥನ ರೂಪ ಜ್ಞಾನವನ್ನು ಅವರಿಂದಪೇಕ್ಷಿಸುವವನಾಗಿ ಪ್ರಶ್ನೆ ಮಾಡಿದ ರೀತಿಯನ್ನು ಹೇಳುತ್ತಾರೆ.

ಅಚ್ಯುತನ ಮಹಿಮೆಗಳಲ್ಲೇ ಆಸಕ್ತವಾದ ಮನೋವೃತ್ತಿಯುಳ್ಳ ವಿದುರನು ಭಾವಶುದ್ಧಿಯನ್ನು ಹೊಂದಿದವನಾಗಿ, ಸೌಶೀಲ್ಯಾದಿ ಗುಣಗಳಿಂದ ತೃಪ್ತರಾದ ಮಹಾಪ್ರಾಜ್ಞ ಮೈತ್ರೇಯರನ್ನು ಕುರಿತು, ಎಲೈ! ಮೈತ್ರೇಯರೇ! ಈ ಲೋಕದಲ್ಲಿ ಜನರು ತಮಗೆ ಸುಖಪ್ರಾಪ್ತಿಯಾಗಲೆಂದು ನಾನಾ ವಿಧ ಲೌಕಿಕ ಕರ್ಮಗಳನ್ನು ಮಾಡಿ, ಅದರಿಂದ ಸುಖಲೇಶವನ್ನೂ ಹೊಂದದೆ ದುಃಖ ಮತ್ತು ವಿಪತ್ಪರಂಪರೆಗಳನ್ನೇ ಹೊಂದುತ್ತಿರುತ್ತಾರೆ! ಕೃಷ್ಣನಿಂದ ವಿಮುಖರಾಗಿ, ಅಧರ್ಮಶೀಲರಾಗಿ, ಭಗವದಿಚ್ಛೆಯಿಂದ ಅಧರ್ಮಫಲವಾದ ದುಃಖಸಮುದ್ರದಲ್ಲಿ ಮುಳುಗಿರುವ ಅಜ್ಞಾನಿಗಳು, ಯಾವ ರೀತಿಯಲ್ಲಿ ಜ್ಞಾನವನ್ನು ಪಡೆದು ಪರಮಾತ್ಮನ ಆರಾಧನೆಮಾಡಿ ಕೃತಾರ್ಥರಾದರೋ, ಆ ರೀತಿಯಲ್ಲಿ ಜ್ಞಾನೋಪದೇಶ ಮಾಡಲು ಅಲ್ಲಲ್ಲಿ ಸಂಚರಿಸುವ ತಾವು, ನಮ್ಮ ಹೃತ್ಸ್ಥಲದಲ್ಲಿರುವ ಪುರಾಣಪುರುಷನಾದ ಭಗವಂತನಲ್ಲಿ ನಮಗೆ ಭಕ್ತಿಯುಂಟಾಗತಕ್ಕ ಜ್ಞಾನವನ್ನು, ಯಾವುದನ್ನು ನೀವು ಸಾಕ್ಷಾತ್ತಾಗಿ ಶ್ರೀಕೃಷ್ಣನಿಂದುಪದೇಶ ಹೊಂದಿದರೋ ಅದನ್ನು, ಶಿಷ್ಯವೃತ್ತಿಯಿಂದ ನಿಮ್ಮನ್ನನುಸರಿಸಿ ಬಂದಿರುವ ನನಗಾಗಿ ಹೇಳಿರಿ, ಎಂದನು.

ಎಲೈ! ಮೈತ್ರೇಯರೇ! ನಿಮ್ಮಂತಹ ಸಾಧುಗಳೂ, ಶ್ರೀಜನಾರ್ದನನಿಗೆ ಪ್ರತಿಮಾರೂಪರೂ, ಲೋಕದಲ್ಲಿ ಜನರ ಅನಿಷ್ಟನಿವೃತ್ತಿಯಾಗಿ, ಇಷ್ಟಪ್ರಾಪ್ತಿಯಾಗುವಂತಹ, ಭಗವಂತನ ಜ್ಞಾನವನ್ನು ಬೋಧಿಸುವುದಕ್ಕಾಗಿಯೇ, ಭಗವದ್ವಿಭೂತಿ ರೂಪರಾಗಿ ಅವತರಿಸಿರುತ್ತೀರಿ. ಭಗವಂತನ ಸೃಷ್ಟ್ಯಾದಿ ಗುಣಕರ್ಮಗಳು ಕೇಳಲು ಕಿವಿಗಳಿಗೆ ಬಹಳ ಸುಖವನ್ನು ಕೊಡತಕ್ಕವಾಗಿವೆ. ಪರಮಾತ್ಮನು ಆದಿಯಲ್ಲಿ ಸೃಷ್ಟಿಯನ್ನು ಹೇಗೆ ಮಾಡಿದನು? ಸ್ಥಿತಿಕಾಲದಲ್ಲಿ ಹೇಗೆ ಸಂರಕ್ಷಿಸುವನು? ಪ್ರಳಯವನ್ನು ಹೇಗೆ ಉಂಟುಮಾಡುತ್ತಾನೆ? ಪ್ರಳಯಾನಂತರ ಹೇಗೆ ಈ ಜಗತ್ತನ್ನೆಲ್ಲಾ ತನ್ನುದರದೊಳಗಿಟ್ಟು ಪ್ರಳಯೋದಕದಲ್ಲಿ ಮಲಗುತ್ತಾನೆ? ಸೃಷ್ಟಿಮಾಡಿದ ಮೇಲೆ ಒಬ್ಬನೇ ಆದ ಆ ಶ್ರೀಪರಮಾತ್ಮನು ಅನೇಕರೂಪಗಳನ್ನು ಹೇಗೆ ಹೊಂದಿ, ಎಲ್ಲಾ ಜೀವರಲ್ಲೂ, ಪದಾರ್ಥಗಳಲ್ಲೂ ಪ್ರವೇಶಿಸುತ್ತಾನೆ? ಯೋಗೇಶ್ವರರಾದ ಬ್ರಹ್ಮ, ರುದ್ರ, ಸನಕಾದಿಗಳಿಗೊಡೆಯನಾದ ಪರಮಾತ್ಮನು ಬ್ರಾಹ್ಮಣ, ಗೋವು ಮತ್ತು ದೇವತೆಗಳ

ಕ್ಷೇಮಕ್ಕಾಗಿ, ಹೇಗೆ ನಾನಾವತಾರಗಳನ್ನು ಮಾಡುತ್ತಾನೆ? ಮಂಗಳಕರ ಚರಿತ್ರನಾದ ಪರಮಾತ್ಮನ ಲೀಲಾವಿನೋದ ಕಥೆಗಳನ್ನು ಕೇಳುವ ವಿಚಾರದಲ್ಲಿ ನಮಗೆ ತೃಪ್ತಿಯು ಇಲ್ಲವಾಗಿದೆ. ಮಹತ್ತತ್ವಾದಿ, ಇಪ್ಪತ್ತೂಮ್ರು ತತ್ವಭೇದಗಳಿಂದ, ಲೋಕಗಳನ್ನೂ, ಅಲೋಕಗಳನ್ನೂ, ಲೋಕಾಧಿಪತಿಗಳನ್ನೂ ಸೃಷ್ಟಿಸಿ, ಅವರವರ ಕಾರ್ಯಗಳೆಲ್ಲವನ್ನು ನಿಯಮಿಸಿದನು. ಅವರಲ್ಲಿ ಪುನಃ ಅಂತರ್ಯಾಮಿಯಾಗಿ, ತಾನೇ ಪ್ರೇರಕನಾದ್ದರಿಂದ, ಪ್ರೇರ್ಯರಾದ ಬ್ರಹ್ಮಾದಿಗಳಾದ ಇತರರಿಂದ ಪರಮಾತ್ಮನು ಭಿನ್ನನೂ, ಸ್ವತಂತ್ರನೂ ಎಂದು ಪ್ರಸಿದ್ಧನಾಗಿರುವನು.

ಲೋಕಗುರುವೂ, ಸರ್ವಜೀವೋತ್ತಮನೂ ಆದ ಬ್ರಹ್ಮನೂ ಕೂಡ, ದೇವ ಮನುಷ್ಯಾದಿಗಳಲ್ಲಿ, ಅಂತಂತಹ ರೂಪಗಳಿಂದ ಪ್ರವೇಶಿಸಿ ದೇವರು ಮಾಡತಕ್ಕ ವ್ಯಾಪಾರವಿಶೇಷಗಳನ್ನು ವೇದವ್ಯಾಸದೇವರನ್ನು ಕೇಳಿ ನಾನು ತಿಳಿದುಕೊಂಡೆನೆಂದು ಹೇಳಿರುವುದರಿಂದ, ಬ್ರಹ್ಮಾದಿಗಳು ಸೃಷ್ಟ್ಯಾದಿ ವ್ಯಾಪಾರಗಳನ್ನು ಪರಮಾತ್ಮನ ಅಧೀನರಾಗಿ ಹೇಗೆ ಮಾಡಿದರೆಂಬುದನ್ನು ತಿಳಿಯಲು ನಾವು ಅಪೇಕ್ಷಿಸುವುದು ಏನು ಆಶ್ಚರ್ಯ? ಇಂತಹ ಆತ್ಮಮಾಯೆಯಿಂದ ಪ್ರಪಂಚದ ಸೃಷ್ಟ್ಯಾದಿಗಳನ್ನು ಮಾಡುವ ನಾರಾಯಣನ ಮಹಾತ್ಮೆಗಳನ್ನು ನನಗೆ ಹೇಳಿರಿ. ಬ್ರಹ್ಮಾದಿಗಳ ಮಹಿಮೆಗಳೂ, ಶ್ರೀಪರಮಾತ್ಮನ ಮಹಿಮೆಗಳನ್ನು ಹೇಳತಕ್ಕವುಗಳೇ ಆಗಿವೆಯಾಗಿ, ಪರಮಾತ್ಮನ ಮತ್ತು ಅವನ ಭಕ್ತರಮಹಿಮೆಗಳು ನಿರಂತರ ಕೇಳಲು ಆನಂದದಾಯಕಗಳಾಗಿವೆ. ಅವುಗಳಲ್ಲಿ ಶ್ರೀಕೃಷ್ಣನ ಅನಂತ ವ್ಯಾಪಾರಗಳು ಅಡಕವಾಗಿವೆ, ಕೇಳುವ ನಮಗೆ ಕರ್ಣಾಮೃತಪ್ರಾಯವಾಗಿ, ಇನ್ನೂ ಕೇಳಬೇಕೆಂಬ ಇಚ್ಛೆಯುಂಟಾಗುತ್ತದೆ. ಈ ಕೃಷ್ಣಚರಿತೆಯು ಪುರುಷನ ಕರ್ಣಪುಟಗಳೆಂಬ ನಾಡಿದ್ವಾರವಾಗಿ, ಅವನ ಹೃದಯವನ್ನು ಪ್ರವೇಶಿಸಿದರೆ, ಅದು ಅವನ ಸಂಸಾರಭಯ ರೂಪವಾದ ಹೃದಯಗ್ರಂಥಿಯನ್ನು ಕತ್ತರಿಸಿ ಹಾಕುತ್ತದೆ.

ಕೇವಲ ವಿಷಯಾಸಕ್ತರಾದ ಮೂರ್ಖರು ಮಾತ್ರ ಭಗವತ್ಕಥಾಶ್ರವಣ ವಿಷಯದಲ್ಲಿ ಅಪೇಕ್ಷೆ ಇಲ್ಲದವರಾಗುತ್ತಾರೆ. ಅಂತಹವರಿಗೆ ಗ್ರಾಮ್ಯವಾದ ವಿಷಯಸುಖಗಳನ್ನು ಹೇಳುವ ದುಷ್ಟಕಥೆಗಳಲ್ಲಿಯೇ ಆಸಕ್ತಿಯುಂಟಾಗುತ್ತೆ. ಭಗವತ್ಕಥೆಗಳನ್ನು ಪುರುಷನು ಕೇಳಿದರೆ, ಅವನಿಗೆ ದೇವರಲ್ಲಿ ಭಕ್ತಿಯುಂಟಾಗಿ, ವಿಷಯವಿರಕ್ತಿಯುಂಟಾಗುವುದು. ಪುನಃಪುನಃ ಕೇಳುವುದರಿಂದ ಪರಮಾತ್ಮನಲ್ಲಿ ನಿರಂತರ ಭಕ್ತಿಯುಕ್ತವಾದ ಮನಸ್ಸಂಯೋಗದಿಂದ, ಅವನಿಗೆ ಸಮಸ್ತ ದುಃಖಗಳ ನಾಶವಾಗಿ, ಜಾಗ್ರತೆಯಾಗಿಯೇ ಶಾಶ್ವತಸುಖವೂ ಉಂಟಾಗುವುದು. ನಾನು ಭಗವದ್ವಿಮುಖರಾದವರ ವಿಷಯದಲ್ಲಿ, ಬಹಳ ಶೋಕ ವುಳ್ಳವನೂ, ಕನಿಕರ ವುಳ್ಳವನಾಗಿದ್ದೇನೆ. ಅವರು ಕನಿಕರಕ್ಕೆ ಪಾತ್ರರಲ್ಲದವರಾದರೂ, ಸ್ವಯಂ ಇತರರಲ್ಲಿ ಕನಿಕರವಿಲ್ಲದ ಕ್ರೂರಿಗಳಾದಾಗ್ಯೂ, ಅವರ ಉದ್ಧಾರವಿಷಯದಲ್ಲಿ ನಾನು ಆಸಕ್ತನಾಗಿ, ಮಾರ್ಗಕಾಣದೆ

ವ್ಯಾಕುಲಚಿತ್ತನಾಗಿದ್ದೇನೆ. ಆದುದರಿಂದ ಅಂತಹವರನ್ನುದ್ಧರಿಸಲು ಸಹಕಾರವಾದ ಜ್ಞಾನವನ್ನು ತಾವು ನನಗೆ ಬೋಧಿಸಬೇಕು. ಪರಮಾತ್ಮನ ಯಶಸ್ಸುಗಳು ಕೇಳುವುದಕ್ಕೆ ಅನಂತಗಳಾಗಿರುವುದರಿಂದ, ಪುಷ್ಪ ಗಳನ್ನು ಕುಯ್ಯುವರು ಹೇಗೆ ಒಳ್ಳೆಯದನ್ನೇ ಆರಿಸಿಕೊಂಡು ಸ್ವೀಕರಿಸುವರೋ ಅದರಂತೆ, ಮುಖ್ಯವಿಷಯಗಳನ್ನು ತಾವು ನನಗೆ ಹೇಳಬೇಕೆಂದನು. ಜಗತ್ಸೃಷ್ಟಿ, ಪಾಲನ, ಲಯಕ್ಕಾಗಿ ತನ್ನ ವಶವಾದ ಮಾಯಾಶಕ್ತಿಯನ್ನು ಗ್ರಹಿಸಿ, ಶ್ರೀಪರಮಾತ್ಮನು ಜಗದ್ಧಿತಾರ್ಥಕ್ಕಾಗಿ ಯಾವ್ಯಾವ ಅವತಾರಗಳನ್ನು ಮಾಡಿ, ಏನೇನು ಮುಖ್ಯಕಾರ್ಯಗಳನ್ನು ಮಾಡಿದನೆಂಬುದನ್ನೂ ತಿಳಿಸಿರಿ, ಎಂದನು. ಮೈತ್ರೇಯರು ವಿದುರನ ಪ್ರಶ್ನೆಗಳನ್ನು ಕೇಳಿ, ವಿದುರನಿಗೆ ಭೂತಮಾತ್ರದಲ್ಲಿರುವ ದಯೆಯನ್ನು ಶ್ಲಾಘಿಸಿ, ಈ ರೀತಿ ಉತ್ತರ ಹೇಳಿದರು.

ಎಲೈ! ಸಾಧುಶ್ರೇಷ್ಠನಾದ ವಿದುರನೇ! ನಿನ್ನ ಪ್ರಶ್ನೆಗಳು ಪರಮಉತ್ಕೃಷ್ಟಗಳೂ, ಲೋಕೋದ್ಧಾರಕ್ಕಾಗಿ ಕೇಳಲ್ಪಟ್ಟವುಗಳೂ ಆಗಿವೆ. ಸಾಕ್ಷಾತ್ ಬಾದರಾಯಣದೇವರ ಪುತ್ರನಾದವನಿಗೆ, ಇಂತಹ ಭೂತದಯಾ, ಔದಾರ್ಯ, ಭಗವದ್ಭಕ್ತಿಗಳು ಸಹಜಗಳಾದಕಾರಣ, ಇವುಗಳು ನಿನ್ನನ್ನಾಶ್ರಯಿಸಿರುವುದು ಆಶ್ಚರ್ಯವಲ್ಲ. ಶ್ರೀಕೃಷ್ಣನೂ ನಿನ್ನನ್ನು ಅನನ್ಯ ಭಕ್ತನೆಂದು ಸ್ವೀಕರಿಸಿ, ನಿನ್ನ ಮನೆಗೇ ಬಂದು ಒಕ್ಕುಡಿಕೆ ಹಾಲಿನಿಂದ ತೃಪ್ತನಾದನಷ್ಟೆ? ನೀನು ಮಾಂಡವ್ಯರ ಶಾಪದಿಂದ, ವೇದವ್ಯಾಸ ದೇವರಿಂದ ಅವರ ಭ್ರಾತೃವಿನ ಪತ್ನಿಯಿಂದ ಕಳಿಸಲ್ಪಟ್ಟ ದಾಸಿಯಲ್ಲಿ, ಪುತ್ರನಾಗಿ ಶೂದ್ರತ್ವವನ್ನು ವಹಿಸಿ ಹುಟ್ಟಿದ ಸರ್ವಜನರ ನಿಯಾಮಕನಾದ ಸಾಕ್ಷಾತ್ ಯಮದೇವರ ಅಂಶನು ಆಗಿರುತ್ತೀಯೆ. ನೀನು ಪರಮಾತ್ಮನಿಗೆ ಇಷ್ಟಭಕ್ತನೂ, ಸದಾ ಪರಮಾತ್ಮನನ್ನು ಸೇವಿಸಿ ಅನುಸರಿಸತಕ್ಕವನೂ ಅಗಿರುತ್ತೀಯೆ. ಇಂತಹ ನೀನು ನನ್ನನ್ನು, ಜ್ಞಾನೋಪದೇಶ ಮಾಡೆಂದು ಹೇಳುತ್ತಿರುವುದು, ನಾನು ಆಜ್ಞಾರೂಪದಿಂದ ಸ್ವೀಕರಿಸಿ, ನಿನಗೆ ಅಪೇಕ್ಷಿತವಾದ, ಭಗವಂತನ ಸೃಷ್ಟಿ ಸ್ಥಿತಿ ಪ್ರಳಯಾದಿ ವ್ಯಾಪಾರಗಳನ್ನು, ಉದಾಹರಣೆ, ಪೂರ್ವೋತ್ತರ ವಿಚಾರಸಹಿತವಾಗಿ ಹೇಳುವೆನು, ಎಂದರು.

**ಇತಿ ಶ್ರೀಮದ್ಭಾಗವತ ತೃತೀಯ ಸ್ಕಂಧದ ಐದನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು ॥**

## अथ षष्ठोऽध्यायः

**मैत्रेय उवाच**

भगवानेक आसेदमग्र आत्मात्मनां विभुः ।
आत्मेच्छानुगतो ह्यात्मा नानाशक्त्युपलक्षितः ॥ १ ॥

स वा एष तदा द्रष्टा नापश्यद् विश्वमेकरा।
मेनेऽसन्तमिवात्मानं सुप्तशक्तिरसुप्तदृक् ॥ २ ॥

सा वा एतस्य सन्द्रष्टुः शक्तिः सदसदात्मिका।
माया नाम महाभाग ययेदं निर्ममे विभुः ॥ ३ ॥

कालवृत्त्यां तु मायायां गुणमय्यामधोक्षजः।
पुरुषेणात्मभूतेन वीर्यमाधत्त वीर्यवान् ॥ ४ ॥

ततोऽभवन्महत्तत्त्वमव्यक्तात् कालचोदितात्।
विज्ञानात्मात्मदेहस्थं विश्वं व्यञ्जंस्तमो नुदन् ॥ ५ ॥

सोऽप्यंशगुणकालात्मा भगवद्दृष्टिगोचरः।
आत्मानं व्यकरोदात्मा विश्वस्यास्य सिसृक्षया ॥ ६ ॥

महत्तत्त्वाद् विकुर्वाणादहन्तत्त्वमजायत।
कार्यकारणकर्त्रात्मा भूतेन्द्रियमनोभवः ॥ ७ ॥

वैकारिकस्तैजसश्च तामसश्चेत्यहं त्रिधा।
अहंतत्त्वाद् विकुर्वाणान्मनो वैकारिकादभूत् ॥ ८ ॥

वैकारिकाश्च ये देवा अर्थाभिव्यञ्जनं यतः।
तैजसानीन्द्रियाण्येव ज्ञानकर्ममयानि च ॥ ९ ॥

तामसो भूतसूक्ष्मादिर्यतः खं लिङ्गमात्मनः ॥ १० ॥

कालमायांशयोगेन भगवद्वीक्षितं नभः।
तामसानुसृतं स्पर्शं विकुर्वन् निर्ममेऽनिलम् ॥ ११ ॥

अनिलोऽपि विकुर्वाणो नभसोरुबलान्वितः।
ससर्ज रूपतन्मात्रां ज्योतिर्लोकस्य लोचनम् ॥ १२ ॥

अनिलेनान्वितं ज्योतिर्विकुर्वत् परवीक्षितम्।
आधत्ताम्भो रसमयं कालमायांशयोगतः ॥ १३ ॥

ज्योतिषाम्भोऽनुसंसृष्टं विकुर्वत् परवीक्षितम्।

महीं गन्धगुणामाधात् कालमायांशयोगतः ॥ १४ ॥

भूतानां नभआदीनां यद्यद् भाव्यं परात् परम् ।
तेषां परानुसंसर्गाद् यथासङ्ख्यं गुणान् विदुः ॥ १५ ॥

एते देवाः कला विष्णोः कालमायांशलिङ्गिनः ।
नानात्वात् स्वक्रियानीशाः प्रोचुः प्राञ्जलयो विभुम् ॥ १६ ॥

देवा ऊचुःनताः स्म ते देव पदारविन्दं प्रपन्नतापोपशमातपत्रम् ।
यन्मूलकेता यतयोऽञ्जसोरुसंसारदुःखं बहिरुत्क्षिपन्ति ॥ १७ ॥

ऋते यदस्मिन् भव ईश जीवास्तापत्रयेणाभिहता न शर्म ।
आत्मल्लँभन्ते भगवंस्तवाङ्घ्रिच्छायांशविद्यामत आश्रयेम ॥ १८ ॥

मार्गन्ति यत् ते मुखपद्मनीडैश्छन्दःसुपर्णैरृषयो विविक्ते ।
यच्चाघमर्षो द्युसरिद्वरायाः  परं पदं तीर्थपदः प्रपन्नाः ॥ १९ ॥
यच्छ्रद्धया श्रुतवत्या च भक्त्या संमृज्यमाने हृदयेऽवधार्य ।
ज्ञानेन वैराग्यबलेन धीरा व्रजन्ति यत् तेऽङ्घ्रिसरोजपीठम् ॥ २० ॥
विश्वस्य जन्मस्थितिसंयमार्थे कृतावतारस्य पदाम्बुजं ते ।
व्रजेम सर्वे शरणं यदीश स्मृतं प्रयच्छत्यभयं स्वपुंसाम् ॥ २१ ॥
यत् सानुबन्धेऽसति देहगेहे ममाहमित्यूढदुराग्रहाणाम् ।
पुंसां सुदूरं वसतोऽपि पुर्यां भजेम तत् ते भगवन् पदाब्जम् ॥ २२ ॥
तं त्वामसद्वृत्तिभिरक्षिभिर्ये पराहृतान्तर्मनसः परेश ।
अथो न पश्यंत्युरुगाय नूनं यत् ते पदन्यासविलासलक्ष्म्याः ॥ २३ ॥
पानेन ते देव कथासुधायाः  प्रवृद्धभक्त्या विशदाशया ये ।
वैराग्यसारं प्रतिलभ्य बोधं यथाऽञ्जसा त्वेयु(त्वाऽऽपु)रकुण्ठधिष्ण्यम् ॥ २४ ॥
तथापरे चात्मसमाधियोगबलेन जित्वा प्रकृतिं बलिष्ठाम् ।
त्वामेव धीराः पुरुषं विशन्ति तेषां श्रमः स्यान्नतु सेवया ते ॥ २५ ॥
तत् ते वयं लोकसिसृक्षयाऽद्य त्वया विसृष्टास्त्रिभिरात्मभिर्ये ।

सर्वे वियुक्ताः स्वविहारतन्त्रं न शक्नुमस्तत् प्रतिकर्तवे ते ॥ २६ ॥
यावद् बलिं तेऽज हराम काले यथा वयं चान्नमदाम यत्र ।
तथोभयेषां त इमे ह लोका बलिं हरन्तोऽन्नमदन्त्यनीशाः ॥ २७ ॥
त्वं नः सुराणामसि सान्वयानां कूटस्थ आद्यः पुरुषः पुराणः ।
त्वं देव शक्त्यां गुणकर्मयोनौ रेतस्त्वजायां कविरादधेऽजः ॥ २८ ॥
ततो वयं सत्प्रमुखा यदर्थे बभूविमात्मन् करवाम किं ते ।
त्वं नः स चक्षुः परिदेहि शक्त्या देव क्रियार्थे यदनुग्रहेण ॥ २९ ॥

## ॥ इति श्रीमद्भागवते (तृतीयस्कन्धे( *3) षष्ठोऽध्यायः ॥

**॥ ಆರನೆಯ ಅಧ್ಯಾಯ ॥**

## ಮೈತ್ರೇಯರಿಂದ ಸೃಷ್ಟಿವರ್ಣನೆ :-

ಮೈತ್ರೇಯರು ವಿದುರನಿಗೆ ಈ ರೀತಿಯಾಗಿ ಸೃಷ್ಟಿಕ್ರಮವನ್ನು ವರ್ಣಿಸುತ್ತಾರೆ:- ಸೃಷ್ಟಿಗೆ ಮುಂಚೆ, ಸಕಲ ಜೀವರಿಗೆ ನಿಯಾಮಕನೂ, ಸ್ವಾಮಿಯೂ, ಆದಾನಾದಿಕರ್ತನೂ ಆದ ಪುರುಷನಾಮಕ ಪರಮಾತ್ಮನೊಬ್ಬನೇ ಇದ್ದನು. ತನ್ನ ಸ್ವಾಧೀನದಲ್ಲಿಯೇ ಇದ್ದ ನಾನಾ ಜ್ಞಾನೇಚ್ಛಾ ಕ್ರಿಯಗಳಿಗೆ ಅಭಿವ್ಯಕ್ತಿ ಇಲ್ಲದೇ ಇದ್ದ ಜೀವರನ್ನೂ, ಸರ್ವಕ್ರಿಯಾಭಿವ್ಯಂಜಕಳಾದ ಚಿತ್ಪ್ರಕೃತಿ, ಜಡಪ್ರಕೃತ್ಯಭಿಮಾನಿಯಾದ ಲಕ್ಷ್ಮೀದೇವಿಯೆಂಬ, ತನ್ನ ಇಚ್ಛಾಧೀನಳಾದ, ತನ್ನ ಸ್ವಶಕ್ತಿಯಿಂದ ಪ್ರೇರಿತಳಾದ ಮಾಯನಾಮಕಳನ್ನೂ ನೋಡಿ, ಜಗತ್ತು ದೇಹಗಳಿಂದೊಡಗೂಡಿದ ಜೀವಸಮುದಾಯಗಳಿಂದಲೂ, ಕ್ರಿಯಾಭಿವ್ಯಕ್ತಿ ಸ್ಥಾನಗಳಾದ ಲೋಕಗಳಿಂದಲೂ, ಶೂನ್ಯವಾದದ್ದನ್ನು ನೋಡಿ, ಏನೂ ಇಲ್ಲದೆ ಆಕಾಶ ಸದೃಶವಾದ ಪ್ರದೇಶವನ್ನು, ಲೋಕಗಳಿಂದಲೂ, ಜ್ಞಾನೇಚ್ಛಾ ಕ್ರಿಯಾಶಕ್ತಿಗಳನ್ನು ಅಭಿವ್ಯಕ್ತಿ ಮಾಡಲು ಸಹಕಾರಗಳಾದ ಶರೀರಗಳಿಂದೊಡಗೂಡಿದ, ದೇವಾಸುರ ನರ ತಿರ್ಯಗ್ರೂಪ ಚೇತನ ಸಮುದಾಯಗಳನ್ನೂ ಸೃಷ್ಟಿಮಾಡಿ, ಕೇವಲ ಲೀಲೆಯಿಂದ ಸೃಷ್ಟಿಸಿದ ಜೀವರನ್ನು ಉದ್ಧಾರ ಮಾಡಲಪೇಕ್ಷಿಸಿದವನಾಗಿ, ತನ್ನ ಮನಸ್ಸಿನಲ್ಲಿ ಸೃಷ್ಟಿಮಾಡುವೆನೆಂಬ ಭಾವವನ್ನು ಹೊಂದಿದನು.

## ರಮಾ ನಾರಾಯಣರ ರಮಣ

ಮಹಾಪ್ರಳಯಕಾಲದಲ್ಲಿ ಸರ್ವಜೀವಸಮುದಾಯದ ಸ್ಥೂಲಶರೀರಗಳೂ ನಾಶವಾಗಿ, ನಾಶರಹಿತರಾದ ಲಿಂಗಭಂಗ ಹೊಂದಿದ ಜೀವರು ಧ್ಯಾನಯುಕ್ತರಾಗಿಯೂ, ಮುಕ್ತರಾಗದೇ ಲಿಂಗಶರೀರ ಮಾತ್ರ ವುಳ್ಳ ಜೀವರು ಕ್ರಿಯಾದಿಗಳಿಂದ ರಹಿತರಾಗಿ ಸುಪ್ತರಾಗಿ ಪರಮಾತ್ಮನ ಉದರವನ್ನು ಪ್ರವೇಶಿಸಿದ ಕಾರಣವೂ ಮತ್ತು ಚೇತನಪ್ರಕೃತಿ ನಾಮಕಳಾದ ರಮಾದೇವಿಯು, ಜಲಶಾಯಿಯಾದ ಶ್ರೀಪರಮಾತ್ಮನಿಂದ ಆಲಂಗಿತಳಾಗಿ, ಆ ಆನಂದೋದ್ರೇಕದಿಂದ, ತಾನು ದೇವರಂತೆ ನಿತ್ಯಳಾದರೂ, ತನ್ನನ್ನೇ ಮರೆತು ಪರಿಣಾಮ ಕಾರ್ಯರಹಿತಳಾಗಿ ಪರಮಾತ್ಮನಲ್ಲಿ ಲೀನಳಾಗಿದ್ದುದರಿಂದಲೂ, ಪ್ರಾರಂಭದಲ್ಲಿ ದೇವರು ಒಬ್ಬನೇ ಇದ್ದನೆಂದು ಹೇಳಲ್ಪಟ್ಟಿತೆಂದು ಭಾವಿಸಬೇಕು. ಪರಮಾತ್ಮ ಭಾವದಿಂದ ಉದ್ರೇಕವಾದ ಆನಂದಪರವಶಳಾಗಿ ಜಗತ್ಕಾರ್ಯ ವರ್ಜಿತಳಾಗಿ, ಪರಮಾತ್ಮನಿಂದ ಆಲಿಂಗಿತಳಾಗಿರುವುದೇ ಲಕ್ಷ್ಮೀದೇವಿಗೆ ಪರಮಾತ್ಮನಲ್ಲಿ ಲಯ. ಜೀವರು ಪ್ರಕೃತ್ಯಧೀನರಾಗಿ, ಪ್ರಕೃತಿಯಲ್ಲಿ ಲಯಹೊಂದಿದ್ದರಿಂದಲೂ, ಪ್ರಕೃತಿಯ ಅವ್ಯಕ್ತತತ್ವಾಭಿ ಮಾನಿಯಾದ ಲಕ್ಷ್ಮೀದೇವಿಯಲ್ಲಿ ಸೂಕ್ಷ್ಮರೂಪ ಹೊಂದಿ ಲಯವಾಗಿದ್ದಿದುದರಿಂದಲೂ, ಆ ಲಕ್ಷ್ಮೀಯು ಆ ಪರಮಾತ್ಮಾಧೀನಳಾಗಿ ಆತನಿಂದ ಆಲಂಗಿತಳಾಗಿ, ನಿರತಿಶಯಾನಂದ ಪೂರ್ಣಳಾಗಿ, ಸ್ವವ್ಯಾಪಾರ ರಹಿತಳಾಗಿದ್ದುದರಿಂದಲೂ, ದೇವರು ತನ್ನಧೀನದಲ್ಲಿ ಸರ್ವಚೇತನ ಸಮುದಾಯ, ಸರ್ವ ಕ್ರಿಯಾ ಜ್ಞಾನೇಚ್ಛ ಶಕ್ತಿಗಳುಳ್ಳವನಾಗಿದ್ದನೆಂಬುದು ಸ್ವಷ್ಟವಾಗುತ್ತದೆ. ಈ ರೀತಿಯಾಗಿ ಜಗತ್ಸೃಷ್ಟಿ ಮಾಡುವೆನೆಂದು ಸಂಕಲ್ಪಿಸಿ, ದೇವರು ತಾನು ಮುಚ್ಚಿದ್ದ ಅರೆಗಣ್ಣನ್ನು ತೆರೆದು, ಆಲಂಗಿತಳಾದ ಪತ್ನಿಯನ್ನು ನೋಡಿದ ಮಾತ್ರದಿಂದ, ಆನಂದ ಪರವಶಳಾಗಿ ವ್ಯಾಪಾರ ರಹಿತಳಾದ ಪ್ರಕೃತಿ ರೂಪ ಸರ್ವಶಕ್ತಿಮಯಳಾದ ಲಕ್ಷ್ಮೀದೇವಿಯು ಎಚ್ಚೆತ್ತು, ಶ್ರೀಪರಮಾತ್ಮನನ್ನು ನೋಡಿದಳು.

ಪ್ರಳಯಾನಂತರ ಸರ್ವಜೀವರನ್ನೂ ತನ್ನ ಉದರಲ್ಲಿ ದೇವರು ಇಟ್ಟುಕೊಂಡಿದ್ದನಾದುದರಿಂದಲೂ, ತನ್ನ ಪ್ರಿಯೆಯಾದ ಲಕ್ಷ್ಮೀದೇವಿಗೆ ರತಿಕ್ರೀಡೆಯಿಂದ ಆನಂದ ಕೊಡುವುದಕ್ಕಾಗಿಯೂ, ದೇವರು ತನ್ನ ಸ್ತ್ರೀರೂಪವನ್ನು ಲಕ್ಷ್ಮೀದೇವಿಯರಲ್ಲಿಟ್ಟು, ಅವಳೊಡನೆ ರಮಿಸಿ, ವೀರ್ಯರೂಪದಿಂದ, ನೂತನ ಬ್ರಹ್ಮಕಲ್ಪದಲ್ಲಿ ಸೃಷ್ಟಿಗೆ ಬರಬೇಕಾದ, ಲಿಂಗಶರೀರ ಸಹಿತರಾದ ಸರ್ವ ಜೀವರನ್ನೂ ಸರ್ವ ಶಕ್ತ್ಯಾತ್ಮಕಳಾದ ರಮಾದೇವಿಯ ಉದರದಲ್ಲಿಟ್ಟು, ಅದರಿಂದ ಅವಳಲ್ಲಿದ್ದ ಶಕ್ತಿಯನ್ನು ಉದ್ರೇಕಿಸಿ ಕಾರ್ಯೋನ್ಮುಖಿಗಳನ್ನಾಗಿ ಮಾಡುವವನಾದನು.

ಇದರಿಂದಲೂ ಯಾವ ಕಾರಣದಿಂದ ಪರಮಾತ್ಮನು ಸ್ವಭಾರ್ಯೆಯಲ್ಲಿ ವೀರ್ಯವನ್ನಿಟ್ಟು, ಅವಳ ಸರ್ವಶಕ್ತಿಗಳೂ ಕಾರ್ಯೋನ್ಮುಖಿಗಳಾಗುವಂತೆ ಮಾಡಿದನೋ, ಅದರಂತೆ ಇತರ ಮಿಥುನೀ ಭಾವ ಹೊಂದಿದ ಜೀವರು ತಮ್ಮ ತಮ್ಮ ಭಾರ್ಯರಲ್ಲಿ ವೀರ್ಯವಿಟ್ಟ ನಂತರ ತಾವೂ, ತಮ್ಮ ಭಾರ್ಯಸಹಿತರಾಗಿ ಆಸಕ್ತರಾಗುವ ಕಾರಣ, ಶ್ರೀಪರಮಾತ್ಮನು ಜೀವರಿಂದ ಅತ್ಯಂತ ಭಿನ್ನನೂ, ವಿಲಕ್ಷಣನೂ, ಅಪರಿಮಿತ ಶಕ್ತನೂ ಎಂದೂ ತಿಳಿಯಬಹುದು. ಇತರ ಜೀವರು ಭಾರ್ಯೆಯರಲ್ಲಿಟ್ಟ ವೀರ್ಯವನ್ನು ತಮಗೆ ಬೇಕಾದಂತೆ ಪರಿಣಾಮ ಹೊಂದಿಸಲು ಶಕ್ತರಲ್ಲ. ಆದರೆ, ಶ್ರೀಪರಮಾತ್ಮನು ತನ್ನ ಭಾರ್ಯೆಯಲ್ಲಿಟ್ಟ ವೀರ್ಯವನ್ನು, ಅವ್ಯಕ್ತತತ್ವ ಸ್ವರೂಪ ಸರ್ವಶಕ್ತಿಮಯಳಾದ ರಮಾದೇವಿಯ ಗರ್ಭದಲ್ಲಿ ಅವಳ ಸರ್ವಶಕ್ತಿಗಳಲ್ಲಿ ಸ್ವಲ್ಪ ಸ್ವಲ್ಪ ಭಾಗಗಳಾದ ಅನಂತ ಕ್ರಿಯಾಶಕ್ತಿಯಿಂದ ಕೂಡಿದ ಪರಿಮಾಣುಗಳಿಂದ, ಮಹತ್ತತ್ವವೆಂಬ ಉಜ್ವಲ, ಜ್ಞಾನ, ಕ್ರಿಯಾ, ಇಚ್ಛಾ ಶಕ್ತಿಗಳಿಂದ ಕೂಡಿದ ಬ್ರಹ್ಮದೇವರ ಶರೀರವನ್ನು ರೂಪುಗೊಳಿಸಿದನು.

## ಬ್ರಹ್ಮನ ಸೃಷ್ಟಿ

ಇಂತಹ ಅಪರಿಮಿತ ಶಕ್ತಿಯುಳ್ಳ, ಅಚಿಂತ್ಯಾದ್ಭುತ ಮಹಿಮನಾದ ಪುರುಷನಾಮಕ ಪರಮಾತ್ಮನನ್ನು, ಅಲ್ಪಶಕ್ತನೂ, ಅಲ್ಪಜ್ಞಾನಿಯೂ, ಸರ್ವದಾ ಅಲ್ಪರಿಗೆ ಅಧೀನನೂ, ನಿರಂತರ ಭಯ, ದುಃಖ, ರೋಗಾದಿಗಳಿಂದ ಕೂಡಿದವನೂ ಆದ ಜೀವನು, ಚೇತನಾಭಾಸಾಭಾಸನು ಹೇಗೆ ತಾನೇ ಹೋಲುವುದಕ್ಕೆ ಸಾಧ್ಯ?

ಈ ರೀತಿ ಪರಮಾತ್ಮನ ಸರ್ವೋತ್ತಮತ್ವ, ಸಕಲರಿಂದ ಅನ್ಯತ್ವ, ವಿಲಕ್ಷಣತ್ವವನ್ನೇ ನಿರ್ದುಷ್ಟಜ್ಞಾನಸ್ವರೂಪಗಳಾದ ವೇದವಾಕ್ಯಗಳು ಸಾರುತ್ತವೆ. ಈ ಭಾವನೆಯೇ ಜ್ಞಾನ, ಬೇರೆ ವಿಧ ತಿಳಿಯುವುದೇ ಅಜ್ಞಾನ. ಆ ಮಹತ್ತತ್ವಾತ್ಮಕ ಶರೀರದಲ್ಲಿ ಬ್ರಹ್ಮಪದಯೋಗ್ಯನಾದ ಜೀವನು, ವಿಜ್ಞಾನ ಸ್ವರೂಪನಾಗಿ, ಸೂರ್ಯನು ಕತ್ತಲೆಯನ್ನು ನಾಶಪಡಿಸುವಂತೆ, ಸಮಸ್ತ ಅಜ್ಞಾನಾಖ್ಯ ಕತ್ತಲೆಯನ್ನು ನಿರ್ಮೂಲಗೊಳಿಸುವಂತಹ ಜ್ಞಾನಪ್ರಕಾಶದಿಂದ ಬೆಳಗುವವನಾಗಿ, ಈ ಮಹತ್ತತ್ವಾತ್ಮಕ ಶರೀರವು ನನ್ನದೆಂಬ ಜ್ಞಾನರೂಪ ಸ್ವಲ್ಪ ಅಭಿಮಾನದಿಂದ ಕೂಡಿದವನಾಗಿ, ಮಹತ್ತತ್ವಾತ್ಮಕ ಶರೀರವನ್ನು ನಿಯಮಿಸುವವನಾಗಿ ಅಧಿಷ್ಠಿತನಾದನು. ಪ್ರಪಂಚದ ಸೃಷ್ಟಿಯನ್ನು ಈ ಮಹತ್ತತ್ವಶರೀರವುಳ್ಳ ಸಕಲಜೀವಾಭಿಮಾನಿಗಳಾದ ಬ್ರಹ್ಮದೇವರಿಂದ ಮಾಡಿಸಲಪೇಕ್ಷಿಸಿ, ಅಧಿಷ್ಠಿತರಾದ ಚತುರ್ಮುಖಬ್ರಹ್ಮದೇವರನ್ನು ತನ್ನ ಕೃಪಾಕಟಾಕ್ಷದಿಂದ ದೇವರು ನೋಡಿದನು.

## ಅಹಂಕಾರತತ್ವಸೃಷ್ಟಿ

ದೇವರ ಕೃಪಾದೃಷ್ಟಿಯಿಂದ ಉದ್ರೇಕವುಳ್ಳ ವಿಜ್ಞಾನದಿಂದ ಬ್ರಹ್ಮದೇವರು ಪುಳಕಿತರಾಗಿ, ಶ್ರೀಪರಮಾತ್ಮನ ಇಚ್ಛಾನುಸಾರವಾಗಿ ಮುಂದೆ ಏನೇನು ಯಾವ ಯಾವ ಕಾಲಗಳಲ್ಲಿ ಸೃಷ್ಟಿಸಲ್ಪಡಬೇಕೋ ಅವನ್ನೆಲ್ಲಾ ತಮ್ಮ ಜ್ಞಾನದಿಂದ ಪ್ರತ್ಯಕ್ಷ ಮಾಡಿ ಕೊಂಡು, ಆ ಸೃಷ್ಟಿಗೆ ಸಹಕಾರಗಳಾದ ಸಮಸ್ತವಸ್ತುಗಳಿಂದ ತುಂಬಿದ್ದ ಆ ಮಹತ್ತತ್ವಾತ್ಮಿಕ ಶರೀರವನ್ನು ಕಾರ್ಯದಲ್ಲಿ ಪ್ರೇರಿಸುವುದಕ್ಕಾಗಿ, ಆ ಶರೀರದಲ್ಲಿ ತಮ್ಮ ಶರೀರವೆಂಬ ಅಭಿಮಾನವನ್ನು ಭಗವತ್ಪ್ರೀತಿಗೋಸ್ಕರವಾಗಿ ಮಾಡಿದರು. ಆವಾಗ ಬ್ರಹ್ಮದೇವರ ಶರೀರವು ಹುಟ್ಟಿತು. ಈ ಬ್ರಹ್ಮಶರೀರವು ಗುಣ, ಕಾಲ, ಆತ್ಮರುಗಳಿಂದ ಸನ್ನಿಹಿತವಾದದ್ದು. ಬ್ರಹ್ಮದೇವರು ಪರಮಾತ್ಮನ ಭಿನ್ನಾಂಶ ಸ್ವರೂಪರು. ಸಾಕ್ಷಾತ್ಪರಮಾತ್ಮನ ಅವತಾರರಲ್ಲ. ಪರಮಾತ್ಮನಿಂದ ಪ್ರೇರಿತವಾದ ಬ್ರಹ್ಮದೇವರ ಮಹತ್ತತ್ವ ಶರೀರದ ವಿಕಾರ ರೂಪವಾಗಿ ವೈಕಾರಿಕ, ತೈಜಸ, ತಾಮಸಗಳೆಂಬ ಅಹಂಕಾರಗಳೂ, ಕಾರ್ಯ ಎಂಬ ಗರುಡ, ಶೇಷ, ರುದ್ರರ ಶರೀರಗಳೂ, ಕಾರಣಗಳೆಂಬ ತೈಜಸಗಳಾದ ಜ್ಞಾನಕರ್ಮೇಂದ್ರಿಯಗಳೆಂಬ ದಶೇಂದ್ರಿಯಗಳೂ, ಕರ್ತೃವೆಂಬ ತಾಮಸಾಹಂಕಾರ ರೂಪಗಳಾದ ದೇವತೆಗಳೂ ಹುಟ್ಟಿದರು. ಇಂದ್ರಿಯಾಭಿಮಾನಿ, ಮನೋಭಿಮಾನಿಗಳಾದ ದೇವತೆಗಳೂ ಹುಟ್ಟಿದರು.

ವೈಕಾರಿಕಾಹಂಕಾರದಿಂದ ಶರೀರಗಳನ್ನು ಹೊಂದಿದ, ವೈಕಾರಿಕ ನಾಮಕರಾದ ಗರುಡ, ಶೇಷ, ರುದ್ರಾದಿ ತತ್ವಾಭಿಮಾನಿ ದೇವತೆಗಳಿಂದ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಂದಲೂ, ಮನಸ್ಸಿನ ಸಂಬಂಧವು ಜೀವರಿಗೆ ಉಂಟಾಗಿ, ಇಂದ್ರಿಯವಿಷಯಗಳಾದ ರೂಪ, ಸ್ಪರ್ಶ, ಶಬ್ದ, ಗಂಧ, ರಸಗಳ ಅನುಭವವು ಉಂಟಾಗುವುದು. ತಾಮಸಾಹಂಕಾರದಿಂದ ಭೂಮಿ, ಜಲ, ವಾಯು, ಅಗ್ನಿ, ಆಕಾಶಗಳೆಂಬ ಸರ್ವ ಶರೀರಗಳಿಗೆ ಕಾರಣಗಳಾದ ಪಂಚಭೂತಗಳೂ ಹುಟ್ಟಿದವು.

## ಪಂಚಭೂತಗಳ ಸೃಷ್ಟಿ

ಈ ಪಂಚಭೂತಗಳ ಸೃಷ್ಟಿಕ್ರಮವು ಹೇಗೆಂದರೆ:- ಆಕಾಶದಲ್ಲಿ ಪಂಚಭೂತಗಳೂ ಸೂಕ್ಷ್ಮರೂಪದಿಂದ ಅವ್ಯಕ್ತವಾಗಿರುವವು. ಈ ಆಕಾಶವು ಮನುಾಮಕ ಪರಮಾತ್ಮನಿಂದ, ಮನಸತ್ವ ವಿಕಾರರೂಪದಿಂದ ಸೃಷ್ಟಿಸಲ್ಪಟ್ಟದ್ದು. ಈ ಆಕಾಶದಲ್ಲಿರುವ ರೂಪ ತನ್ಮಾತ್ರದಿಂದ, ಚಕ್ಷುರಿಂದ್ರಿಯವೆಂಬ ಕಣ್ಣೂ, ಕಣ್ಣಿಗೆ ಅಭಿಮಾನಿಯಾದ ಸೂರ್ಯನೂ, ತೇಜಸ್ಸಿಗೆ ಅಭಿಮಾನಿಯಾದ ಅಗ್ನಿಯೂ ಉತ್ಪನ್ನರಾದರು. ಕಾಲನಾಮಕ ಪರಮಾತ್ಮನಿಂದಲೂ, ಮಾಯಾನಾಮಕ ಪ್ರಕೃತಿಯಿಂದಲೂ, ನೋಡಲ್ಪಟ್ಟು ಉದ್ರೇಕಿತವಾದ ಆಕಾಶದಲ್ಲಿ, ಶಬ್ದವೂ, ಆ ಶಬ್ದದಿಂದ ವಾಯುವೂ, ಸ್ಪರ್ಶಗುಣದಿಂದ

ಸಹಿತವಾಗಿ ತ್ವಗಿಂದ್ರಿಯವೂ, ನಿಯಾಮಕ ಅಹಂಕಾರಿಕ ಪ್ರಾಣನ ಸಹಿತವಾಗಿ ಉತ್ಪತ್ತಿಯಾಯಿತು. ಕಾಲ, ಮಾಯಾ, ಆಕಾಶ ಸಹಿತವಾದ ವಾಯುವು ಪರಮಾತ್ಮನಿಂದ ಪ್ರೇರಿತವಾಗಿ, ಹಿಂದೆ ಹೇಳಿದ ರೂಪತನ್ಮಾತ್ರವನ್ನು ಉತ್ಪತ್ತಿಮಾಡಿತು. ಕಾಲಮಾಯಾಂಶಗಳಿಂದೊಡಗೂಡಿದ ಅಗ್ನಿಯು, ವಾಯುವಿಂದ ಉದ್ರೇಕಹೊಂದಿ ರಸವೆಂಬ ಜಲೋತ್ಪತ್ತಿಯನ್ನೂ, ರಸನೇಂದ್ರಿಯವನ್ನೂ, ತದಭಿಮಾನಿ ವರುಣನನ್ನೂ ಉತ್ಪತ್ತಿಮಾಡಿತು. ಅಗ್ನಿಯಿಂದ ಪ್ರೇರಿತವಾದ ಜಲವು ಕಾಲಮಾಯಾರೂಪ ಹರಿಯಿಂದ ಪ್ರೇರಿತವಾಗಿ, ಗಂಧತನ್ಮಾತ್ರವನ್ನೂ, ಘ್ರಾಣೇಂದ್ರಿಯವನ್ನೂ, ಅಶ್ವಿನೀದೇವತೆಗಳನ್ನೂ, ಹಿರಣ್ಯಗರ್ಭನಾಮಕ ಪೃಥುವ್ಯಾತ್ಮಕ ಬ್ರಹ್ಮಾಂಡವನ್ನೂ ಉತ್ಪತ್ತಿಮಾಡಿತು.

## ಪಂಚಭೂತಗಳ ಗುಣಗಳು

ಆಕಾಶವನ್ನು ಶಬ್ದಗುಣದಿಂದ ಕೂಡಿದ್ದೆಂದೂ, ವಾಯುವನ್ನು ಶಬ್ದ, ಸ್ಪರ್ಶಗುಣ ವುಳ್ಳದ್ದೆಂದೂ, ಜಲವನ್ನು ಶಬ್ದ, ಸ್ಪರ್ಶ, ರಸಗುಣಗಳುಳ್ಳದ್ದೆಂದೂ, ಅಗ್ನಿಯನ್ನು ಶಬ್ದ, ಸ್ಪರ್ಶ, ರಸರೂಪಗುಣ ವುಳ್ಳದ್ದೆಂದೂ, ಪೃಥ್ವಿಯನ್ನು ಶಬ್ದ, ಸ್ಪರ್ಶ, ರಸ, ರೂಪ, ಗಂಧಗುಣ ವುಳ್ಳದ್ದೆಂದೂ ಜ್ಞಾನಿಗಳು ತಿಳಿಯುತ್ತಾರೆ. ಈ ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಮನಸ್ಸು ಒಂದು, ತನ್ಮಾತ್ರಗಳ ಸಹಿತ ಪಂಚಭೂತಗಳೂ ಸೇರಿ, ಹದಿನಾರು ಕಲೆಗಳು ಕಾಲನಾಮಕ ಪರಮಾತ್ಮನ ಮತ್ತು ಮಾಯಾನಾಮಕ ಪ್ರಕೃತಿಯ, ಅಂಶಗಳೆಂದೂ, ಅವರಿಂದ ಅಭಿವ್ಯಕ್ತಗಳಾಗಿ, ಅವರನ್ನು ತಿಳಿಸುವುದಕ್ಕೆ ಸಹಕಾರಿಗಳಾಗಿ ಕಾಲಮಾಯಾಲಿಂಗಗಳೆಂದು ಕರೆಯಲ್ಪಡುವವು.

ಆಕಾಶದಲ್ಲಿನ ಶಬ್ದ ಎಂಬ ವೇದರಾಶಿಗಳು ಪರಮಾತ್ಮನನ್ನು ಜ್ಞಾನಮೂಲಕ ತಿಳಿಸುವುದರಿಂದ, ಪರಮಾತ್ಮನಿಗೆ ಆಕಾಶವು ಲಿಂಗವೆಂದೆನಿಸುವುದು. ಈ ಹದಿನಾರು ಕಲೆಗಳೂ, ಕಲಾಭಿಮಾನಿ ತತ್ವದೇವತೆಗಳೂ, ಪರಮಾತ್ಮನ ದೇಹದಿಂದುತ್ಪನ್ನರಾಗಿ, ಆತನ ಭಿನ್ನಾಂಶರಾಗಿ ಭಗವದ್ವಿಭೂತಿ ವುಳ್ಳವರೆಂದೆನಿಸುತ್ತಾರೆ. ಈ ರೀತಿ, ಷೋಡಶಕಲೆಗಳ ಮತ್ತು ಷೋಡಶ ಕಲಾಭಿಮಾನಿದೇವತೆಗಳ ಉತ್ಪತ್ತಿಕ್ರಮವನ್ನು ಹೇಳಿ, ಇವರಿಂದ ಸಹಿತವಾಗಿ ಬ್ರಹ್ಮಾಂಡವು ಹೇಗೆ ಸೃಷ್ಟಿಸಲ್ಪಟ್ಟಿತು ಎಂಬುವುದನ್ನು ನಿರೂಪಿಸುತ್ತಾರೆ:- ಹೀಗೆ ಬೇರೆ ಬೇರೆ ಶಕ್ತಿಗಳಿಂದ ಕೂಡಿದ ತತ್ವಾಭಿಮಾನಿ, ಕಲಾಭಿಮಾನಿದೇವತೆಗಳೂ, ಮುಂದೆ ತಾವೇನು ಮಾಡಬೇಕೆಂಬುವುದನ್ನು ತಿಳಿಯದೇ, ಯಾವ ಮಹತ್ಕಾರ್ಯಮಾಡಲೂ ಶಕ್ತಿ ಇಲ್ಲದವರಾಗಿ, ಪರಸ್ಪರ ನ್ಯೂನರಾಗಿದ್ದ ಕಾರಣ ಒಟ್ಟುಗೂಡಿ ಮುಂದಿನ ಕಾರ್ಯ ಮಾಡಲಿಚ್ಛಿಸಿ, ಅದಕ್ಕೆ ಬೇಕಾದ ಶಕ್ತಿ, ಜ್ಞಾನಗಳನ್ನು ಪಡೆಯುವುದಕ್ಕಾಗಿ, ಸರ್ವರೂ ಕರಗಳನ್ನು ಜೋಡಿಸಿ, ಅವನತ ಶಿರರಾಗಿ ಶ್ರೀಪರಮಾತ್ಮನನ್ನು ಈ ರೀತಿ ಸ್ತೋತ್ರಮಾಡಲುಪಕ್ರಮಿಸಿದರು:-

ಶರಣ ಜನರ ಅಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ ತಾಪಗಳೆಂಬ ಬಿಸಿಲಿಗೆ ಕೊಡೆಯೋಪಾದಿಯಲ್ಲಿ ತಾಪನಿವಾರಕವೂ, ಇಂದ್ರಿಯನಿಗ್ರಹಾದಿಲಕ್ಷಣಗಳಿಂದ ಕೂಡಿದ ಯತಿಗಳಿಗೆ ಅನಾದಿ ಸಂಸಾರವೆಂಬ ಬಂಧನ ನಿವೃತ್ತಿಯೂ, ಯಾವ ನಿನ್ನ ಪಾದಾಶ್ರಯದಿಂದ ಉಂಟಾಗುವವೋ ಅಂತಹ ನಿನ್ನ ಪಾದಕಮಲಗಳಿಗೆ ನಾವು ನಮಸ್ಕರಿಸುತ್ತೇವೆ.

ಸ್ವಾಮಿ! ಅಣಿಮಾದಿ ಅಷ್ಟೈಶ್ವರ್ಯಪೂರ್ಣನಾದ ಪರಬ್ರಹ್ಮನೇ! ಈ ಸಂಸಾರದಲ್ಲಿರುವ ಜೀವರು, ಬಂಧಮೋಕ್ಷಪ್ರದವಾದ ನಿನ್ನ ಪಾದಾರವಿಂದ ಸೇವೆಯಿಂದಲೇ ತೃಪ್ತರಾಗುವರು. ನಿನ್ನ ಸೇವೆಮಾಡದಿದ್ದರೆ ಜನರಿಗೆ ಸುಖವಿರುವುದಿಲ್ಲ. ಆದುದರಿಂದ ನಿನ್ನಲ್ಲಿ ಭಕ್ತಿಜ್ಞಾನಾದಿಗಳನ್ನು ಉಂಟುಮಾಡುವ ಬ್ರಹ್ಮಚ್ಛಾಯೆ ಎಂಬ ನಿನ್ನ ನೆರಳಿನ ಸದೃಶವಾದ ಬ್ರಹ್ಮವಿದ್ಯೆಯ ಒಂದು ಭಾಗವನ್ನೇ ಆಶ್ರಯಿಸಿ ನಾವು ಪುನೀತರಾಗುತ್ತೇವೆ.

ಈ ಬ್ರಹ್ಮವಿದ್ಯೆಯೇ ದೇವತೆಗಳ ಶರೀರಗಳೂ. ಆದುದರಿಂದ ದೇವತೆಗಳು ನಿನ್ನ ಛಾಯಾಸ್ವರೂಪರು. ಸರ್ವವಿದ್ಯೆ ಎಂಬುದು ಲೋಕಗುರುಗಳಾದ ಬ್ರಹ್ಮದೇವರ ಶರೀರ. ಸರ್ವವಿದ್ಯೆಯಿಂದ ಬ್ರಹ್ಮದೇವರು ನಿನ್ನನ್ನು ಸರ್ವಗುಣ ಸಂಪೂರ್ಣನೆಂದು ಗುಣೋಪಸಂಹಾರಮಾಡಿ ಉಪಾಸನೆ ಮಾಡುತ್ತಾರೆ. ಈ ರೀತಿಯಲ್ಲಿ ನಾವುಗಳೂ, ಬೇರೆ ಬೇರೆ ಜ್ಞಾನಕ್ರಿಯಾ ಶಕ್ತಿಗಳುಳ್ಳವರಾದುದರಿಂದ ನಮ್ಮಲ್ಲಿ ನೀಚೋಚ್ಚಭಾವದಿಂದ ತಾರತಮ್ಯ ವುಳ್ಳವರಾಗಿರುತ್ತೇವೆ. ಆದುದರಿಂದ ನಿನ್ನ ಉತ್ಕೃಷ್ಟ ಮಹಿಮೆಗಳನ್ನು ತಿಳಿಯಬೇಕೆಂದು, ಜ್ಞಾನಾಪೇಕ್ಷಿಗಳಾಗಿ, ಪೂರ್ಣಜ್ಞಾನನಾದ ನಿನ್ನನ್ನು ಸ್ತುತಿಸುತ್ತೇವೆ!

ಯಾವ ನಿನ್ನ ಮುಖಾರವಿಂದಗಳಿಂದ ನಿರಂತರ ಛಂದೋಮಯವಾದ ವೇದೋಚ್ಚಾರಣಾರೂಪ ಉಪದೇಶದಿಂದ ಬ್ರಹ್ಮಾದಿಗಳು, ತಮಗೆ ಯೋಗ್ಯವಾದ ಜ್ಞಾನಾದಿಗಳನ್ನು ಹೊಂದಿ ನಿನ್ನನ್ನು ವಿಶೇಷವಾಗಿ ತಿಳಿಯುತ್ತಾರೋ! ಅಂತಹ ಜ್ಞಾನಪ್ರದವೂ, ಸರ್ವದುಃಖ ನಿವಾರಕವೂ ಆದ ನಿನ್ನ ಪಾದಾರವಿಂದಗಳಲ್ಲಿ ಮೊರೆಹೊಕ್ಕಿರುತ್ತೇವೆ.

ಸ್ವಾಮಿ! ಯಾವ ನಿನ್ನ ಪಾದನಖಸ್ಪರ್ಶದಿಂದ ದೇವಗಂಗೆಯು ಉದ್ಭವಿಸಿ ಲೋಕ ಪಾವನಮಾಡಿತೋ, ಅಂತಹ ಪವಿತ್ರ ಪಾದಾಶ್ರಯವನ್ನು ನಾವು ಕೇವಲ ಶ್ರದ್ಧಾ ಭಕ್ತಿ ವೈರಾಗ್ಯಗಳೆಂಬ ಸಾಧನೆಗಳಿಂದ ಕೂಡಿದವರಾಗಿ ದೀನರಾಗಿ, ಅವರ ಹೃತ್ಸ್ಥಲದಲ್ಲೇ ಸಮೀಪಸ್ಥನಾಗಿ ನೀನಿದ್ದರೂ ಯಾವ ನಿನ್ನನ್ನು ಅವರು ತಿಳಿಯಲಾರರೋ, ಅಂತಹ ಅವ್ಯಕ್ತಮಹಿಮನಾದ ನಿನಗೆ ನಮಸ್ಕಾರ. ಅಸದ್ವೃತ್ತಿಗಳಿಂದ ತಮ್ಮ ಇಂದ್ರಿಯಗಳನ್ನು ಕಲ್ಮಷ ವುಳ್ಳವುಗಳನ್ನಾಗಿ ಮಾಡಿಕೊಂಡು, ಕೇವಲ ಹೊರಗಿನ

ಜ್ಞಾನಮಾತ್ರ ವುಳ್ಳವುಗಳನ್ನಾಗಿ ಮಾಡಿಕೊಂಡು, ಕೇವಲ ಹೊರಗಿನ ಜ್ಞಾನಮಾತ್ರ ವುಳ್ಳವರಾಗಿ, ಒಳಗೆ ಜ್ಞಾನಪ್ರಕಾಶರಹಿತರಾಗಿ ದುರ್ಜನರು, ಸಮೀಪದಲ್ಲೇ ಇರುವ ನಿನ್ನನ್ನು ತಿಳಿಯುವುದಿಲ್ಲ. ಇಂದ್ರಿಯಗಳನ್ನು ನಿಯಮಿಸಿ, ಶ್ರವಣ ಮನನಾದಿಗಳಿಂದ ಜ್ಞಾನವನ್ನು ಸಂಪಾದಿಸಿದ ಹಂಸರೂ, ಪರಮಹಂಸರೂ, ನಿರ್ಮಲಾಂತಃಕರಣರಾಗಿ ನಿನ್ನನ್ನು ತಮ್ಮ ಹೃತ್ಕಮಲದಲ್ಲಿಯೇ ನೋಡುತ್ತಾರೆ.

ಈ ರೀತಿ ನಿನ್ನ ದರ್ಶನಕ್ಕೆ ಸಾಧಕಗಳಾದ, ನಿನ್ನ ಕಥಾಮೃತ ಪಾನದಿಂದಲೂ, ಉತ್ಕೃಷ್ಟಭಕ್ತಿಯಿಂದ, ನಿನ್ನ ಮಹಿಮೆಗಳನ್ನು ನಿನ್ನ ಭಕ್ತರು ಉಚ್ಚಕಂಠದಿಂದ ಸ್ತೋತ್ರಮಾಡಿ, ನಿನ್ನನುಗ್ರಹ ಸಂಪಾದಿಸಿ ಮುಕ್ತರಾಗುತ್ತಾರೆ! ಇನ್ನು ಕೆಲವರು ಶ್ವಾಸನಿರೋಧಾದಿರೂಪವಾದ ಯೋಗಗಳಿಂದಲೂ, ಆಸನಜಯ, ಮಿತಭೋಜನಾದಿಗಳಿಂದ, ಯೋಗಾಸಕ್ತರಾಗಿ ನಿನ್ನ ಪ್ರಸಾದ ಪಡೆದು ಮುಕ್ತರಾಗುತ್ತಾರೆ! ಆದರೆ ಭಕ್ತಿಯೋಗಮಾಡಿ, ಶಾಸ್ತ್ರಶ್ರವಣ, ಗುಣಕೀರ್ತನಾದಿಗಳನ್ನು ಮಾಡುವವರಿಗೆ ಶ್ರಮವಿಲ್ಲದೆ ಮೋಕ್ಷಸಾಧನೆಯಾಗುವುದು. ಯೋಗಮಾರ್ಗಿಗಳಿಗೆ ಬಹುಕಷ್ಟದಿಂದ ಮೋಕ್ಷಸಾಧನೆಯಾಗುವುದು. ಆದುದರಿಂದ ಪ್ರಪಂಚದ ಸೃಷ್ಟಿಗಾಗಿ ಉದ್ದೇಶಿಸಿ ನಿನ್ನಿಂದ ಸೃಷ್ಟಿಸಲ್ಪಟ್ಟ ನಾವು, ಸೃಷ್ಟಿಕಾರ್ಯದಲ್ಲಿ ಶಕ್ತರಾಗದೇ ಸೃಷ್ಟಿಕಾರ್ಯಗಳಲ್ಲಿ ನಮ್ಮನ್ನು ಶಕ್ತಿಯುಳ್ಳವರನ್ನಾಗಿ ಮಾಡಬೇಕೆಂದು ನಿನ್ನನ್ನು ಮೊರೆಹೊಕ್ಕು ಸ್ತುತಿಸುತ್ತೇವೆ.

ಸ್ವಾಮಿ! ಮುಂದೆ ನಿನ್ನಿಂದ ದತ್ತವಾದ ಜ್ಞಾನಭಕ್ತ್ಯಾದಿ ರೂಪ, ಶ್ರವಣಮನನಾದಿ ರೂಪ ಹವಿರ್ಭಾಗಗಳೆಂಬ ಅನ್ನವನ್ನು ನಿನಗೆ ನಾವು ಸಮರ್ಪಿಸುತ್ತೇವೋ! ಯಾವ ಅನೀಶರೆಂಬ ಜೀವರು ನಮ್ಮಿಂದ ಕೊಡಲ್ಪಟ್ಟ, ಜ್ಞಾನಭಕ್ತಿ, ಶ್ರವಣ, ಮನನನಾಮಕ ಅನ್ನಗಳನ್ನು ತಾವು ತಿಂದು, ನಿನ್ನ ಸ್ಮರಣಮನನ, ಧ್ಯಾನ, ಅರ್ಚನಾರೂಪ, ಯಜ್ಞರೂಪ ಅನ್ನವನ್ನು ನಿನಗರ್ಪಿಸುವರೋ! ಅಂತಹ ಬ್ರಹ್ಮಾಂಡ ಸೃಷ್ಟಿವಿಷಯದಲ್ಲಿ ನಮ್ಮನ್ನು ಸಮರ್ಥರನ್ನಾಗಿ ಮಾಡು.

ಸ್ವಾಮಿ! ಕೂಟಸ್ಥನೆಂಬ, ಲಕ್ಷ್ಮೀಸಹಿತನಾದ ಆದಿಪುರುಷನೇ! ನೀನು ಕೇವಲ ಪ್ರಕೃತ್ಯಾದಿ ವಿಕಾರರಹಿತನಾದಾಗ್ಯೂ, ನಿನ್ನ ಭಾರ್ಯೆಯೂ ಜಗತ್ತನ್ನು ಸುರಾಸುರನರಾದಿ ಭೇದ ಪುತ್ರರೂಪಗಳಿಂದ ಹೊಂದುವ ಸ್ವಭಾವದವಳಾದಾಗ್ಯೂ, ಕೇವಲಲೀಲೆಯಿಂದ ಪುರುಷನಾಮಕನಾಗಿ, ಲಕ್ಷ್ಮೀದೇವಿಯಲ್ಲಿ ವೀರ್ಯವಿಟ್ಟು, ನೀನು ಬ್ರಹ್ಮದೇವರನ್ನೂ, ನಮ್ಮನ್ನೂ ಸೃಷ್ಟಿಸಿ, ನಮಗೆ ದೇವತೆಗಳೆಂದು ಹೆಸರಿಟ್ಟಿರುತ್ತೀಯೆ! ಆದುದರಿಂದ ನೀನು ನಮಗೆ ಪಿತೃವೂ, ನಾವು ನಿನ್ನ ಪುತ್ರನೂ ಆಗಿರುವುದರಿಂದ ನಾವು ನಿನ್ನನ್ನೇ ಪ್ರಾರ್ಥಿಸುತ್ತೇವೆ. ನಮ್ಮನ್ನು ಸೃಷ್ಟಿಸಿರುವುದಲ್ಲದೇ ಮುಂದಕ್ಕೆ ನಮ್ಮ ನಮ್ಮ ಸಂತತಿಗಳನ್ನೂ ನೀನು ಸೃಷ್ಟಿಸಬೇಕಾಗಿರುವುದರಿಂದ, ನಮಗೆ ದಿವ್ಯ ಚಕ್ಷುಗಳೆಂಬ ಜ್ಞಾನಬಲವನ್ನು ಕೊಟ್ಟು, ನಮ್ಮಲ್ಲಿ

ಸನ್ನಿಹಿತನಾಗಿ, ನಿನ್ನ ಇಚ್ಛಾರೂಪವಾದ, ದೇವತೆಗಳಿಗೆ ಹಿತಕಾರಣವಾದ ಸೃಷ್ಟಿ ವ್ಯಾಪಾರಾದಿಗಳನ್ನು ಪ್ರೇರಿಸಿ ಮಾಡಿಸು ಸ್ವಾಮಿ! ಎಂದರು.

**ಇತಿ ಶ್ರೀಮದ್ಭಾಗವತ ತೃತೀಯ ಸ್ಕಂಧದ ಆರನೆಯ ಅಧ್ಯಾಯವು ಮುಗಿಯಿತು.ಶ್ರೀಕೃಷ್ಣಾರ್ಪಣಮಸ್ತು.**

## अथ सप्तमोऽध्यायः

**ऋषिरुवाच**

इति तासां स्वशक्तीनामसतीनां समेत्य सः ।
प्रसुप्तलोकतन्त्राणां निशम्य गिरमीश्वरः ॥ १ ॥

कालसंज्ञां तदा देवीं बिभ्रच्छक्तिमुरुक्रमः ।
त्रयोविंशतितत्त्वानां गणं युगपदाविशत् ॥ २ ॥

सोऽनुप्रविष्टो भगवान् चेष्टारूपेण तं गणम् ।
भिन्नं संयोजयामास सुप्तं कर्म प्रबोधयन् ॥ ३ ॥

प्रबुद्धकर्मा दैवेन त्रयोविंशतिको गणः ।
प्रेरितोऽजनयत् स्वाभिर्मात्राभिरधि(भि) पूरुषम् ॥ ४ ॥

परेण विशता स्वस्मिन् मात्रया विश्वसृग् गणः ।
चुक्षोभान्योन्यमासाद्य यस्मिन् लोकाश्चराचराः ॥ ५ ॥

हिरण्मयः स पुरुषः सहस्रपरिवत्सरान् ।
आण्डकोश उवासाप्सु सर्वसत्त्वोपबृंहितः ॥ ६ ॥

स वै विश्वसृजां गर्भो दैवकर्मात्मशक्तिमान् ।
विबभाजात्मनाऽत्मानमेकधा दशधा त्रिधा ॥ ७ ॥

एष ह्यशेषसत्त्वानामात्मांशः परमात्मनः ।
आद्योऽवतारो यत्रासौ भूतग्रामो विभाव्यते ॥ ८ ॥

साध्यात्मं साधिदैवं च साधिभूतमिति त्रिधा ।
विरााणो दशविध एकधा हृदयेन च ॥ ९ ॥

स्मरन् विश्वसृजामीशो विज्ञापितमधोक्षजः ।

विराजमतपत् स्वेन तेजसैषां विवृद्धये ॥ १० ॥

अथ तस्याभितप्तस्य कतिचायतनानि ह ।
निरभिद्यन्त देवानां तानि मे गदतः शृणु ॥ ११ ॥

तस्याग्निरास्यं निर्भिण्णं लोकपालोऽविशत् पदम् ।
वाचा स्वांशेन वक्तव्यं ययासौ प्रतिपद्यते ॥ १२ ॥

निर्भिण्णं तालु वरुणो लोकपालोऽविशद्धरेः ।
जिह्वयांशेन च रसान् ययाऽसौ प्रतिपद्यते ॥ १३ ॥

निर्भिण्णे अश्विनौ नासे विष्णोराविशतां पदम् ।
घ्राणेनांशेन गन्धस्य प्रतिपत्तिर्यतो भवेत् ॥ १४ ॥

निर्भिण्णे अक्षिणी त्वष्टा लोकपालोऽविशत् प्रभोः ।
चक्षुषांशेन रूपाणां प्रतिपत्तिर्यतो भवेत् ॥ १५ ॥

निर्भिण्णान्यथ चर्माणि लोकपालोऽनिलोऽविशत् ।
प्राणोनांशेन संस्पर्शं येनासौ प्रतिपद्यते ॥ १६ ॥

कर्णावस्य विनिर्भिण्णौ धिष्ण्यं स्वं विविशुर्दिशः ।
श्रोत्रेणांशेन शब्दस्य सिद्धिं येन प्रपद्यते ॥ १७ ॥

त्वचमस्य विनिर्भिण्णां विविशुर्धिष्ण्यमोषधीः ।
अंशेन रोमभिः कण्डूं यैरसौ प्रतिपद्यते ॥ १८ ॥

मेढ्रं तस्य विनिर्भिण्णं स्वधिष्ण्यं क उपाविशत् ।
रेतसांऽशेन येनासावानन्दं प्रतिपद्यते ॥ १९ ॥

गुदं पुंसो विनिर्भिण्णं मित्रो लोकेश आविशत् ।
पायुनांऽशेन येनासौ विसर्गं प्रतिपद्यते ॥ २० ॥

हस्तावस्य विनिर्भिण्णाविन्द्रः स्वर्पतिराविशत् ।
वार्तयांऽशेन पुरुषो यया वृत्तिं प्रपद्यते ॥ २१ ॥

पादावस्य विनिर्भिण्णौ लोकेशो विष्णुराविशत् ।

गत्या स्वांशेन पुरुषो यया प्राप्यं प्रपद्यते ॥ २२ ॥

हृदयं चास्य निर्भिण्णं चन्द्रमा धिष्ण्यमाविशत् ।
मनसांऽशेन येनासौ विक्रियां प्रतिपद्यते ॥ २३ ॥

आत्मानं चास्य निर्भिण्णं वाचस्पतिरुपाविशत् ।
बुद्ध्या स्वांशेन येनासौ निश्चयं प्रतिपद्यते ॥ २४ ॥

अहं चास्य विनिर्भिण्णमभिमानोऽविशत् पदम् ।
कर्त्रा स्वांशेन येनासौ कर्तव्य प्रतिपद्यते ॥ २५ ॥

सत्त्वं चास्य विनिर्भिण्णं महान् धिष्ण्यमुपाविशत् ।
चित्तेनांशेन येनासौ विज्ञानं प्रतिपद्यते ॥ २६ ॥

शीर्ष्णोऽस्य द्यौर्धरा पद्भ्यां खं नाभेरुदपद्यत ।
गुणानां वृत्तयो येषु प्रतीयन्ते सुरादयः ॥ २७ ॥

औत्पत्तिकेन सत्त्वेन दिवं देवाः प्रपेदिरे ।
धरां रजःस्वभावेन पणयो ये चताननु ॥ २८ ॥

तार्तीयेन स्वभावेन भगवन्नाभिमाश्रिताः ।
उभयोरन्तरं व्योम ये रुद्रपार्षदा गणाः ॥ २९ ॥

मुखतोऽवर्तत ब्रह्म पुरुषस्य कुरूद्वह ।
यत्रोन्मुखत्वाद् वर्णानां मुख्योऽभूद् ब्राह्मणो गुरुः ॥ ३० ॥

बाहुभ्योऽवर्तत क्षत्रं क्षत्रियस्तदनुव्रतः ।
यो जातस्त्रायते वर्णान् पुरुषान् कण्टकक्षतात् ॥ ३१ ॥

विशोऽवर्तन्त तस्योर्वो र्लोकवृत्तिकरीर्विभोः ।
वैश्यस्तदुद्भवो वार्तां नृणां यः समवर्तयत् ॥ ३२ ॥

पद्भ्यां भगवतो जज्ञे शुश्रूषाकर्मसिद्धये ।
तस्यां जातः पुरा शूद्रो यद्वृत्त्या तुष्यते हरिः ॥ ३३ ॥

एते वर्णाः स्वधर्मेण यजन्ते स्वगुरुं हरिम् ।

श्रद्धयाऽत्मविशुद्ध्यर्थं यज्जाताः सह वृत्तिभिः ॥ ३४ ॥

एतत् क्षत्तर्भगवतो दैवकर्मात्मरूपिणः ।
कः श्रद्दध्यादुदाहर्तुं योगमायाबलोदयम् ॥ ३५ ॥

अथापि कीर्तयाम्यङ्ग यथामति यथाश्रुतम् ।
कीर्तिं हरेः स्वां संस्कर्तुं गिरमन्याभिधां सतीम् ॥ ३६ ॥

एकान्तलाभं वचसो नु पुंसः सुश्लोकमौलेर्गुणवादमाहुः ।
श्रुतेश्च विद्वद्भिरुपाकृतायाः कथासुधाया उत संप्रयोगम् ॥

आत्मनोऽवसितो वत्स महिमा कविनादिना ।
संवत्सरसहस्रान्ते धिया योगविपक्वया ॥ ३८ ॥

अतो भगवतो मायां मायिनामपि मोहिनीम् ।
यत् स्वयं चात्मवर्त्मात्मा न वेद किमुतापरे ॥ ३९ ॥

यतोऽप्राप्य निवर्तन्ते वाचश्च मनसा सह ।
अहं चान्य इमे देवास्तस्मै भगवते नमः ॥ ४० ॥

## ॥ इति श्रीमद्भागवते (तृतीयस्कन्धे(*3) सप्तमोऽध्यायः ॥

**॥ ಏಳನೆಯ ಅಧ್ಯಾಯ ॥**

## ಮುಂದುವರೆದ ಸೃಷ್ಟಿವಿವರಣೆ

ಮೈತ್ರೇಯರು, ಎಲೈ! ವಿದುರನೇ! ಈ ರೀತಿಯಾಗಿ ತತ್ವಗಳಿಂದಧಿಷ್ಠಿತರಾದ ತತ್ವದೇವತೆಗಳು ಏನು ಕಾರ್ಯ ಮಾಡಲೂ ಸ್ವಶಕ್ತಿ ಇಲ್ಲದೇ, ಮಾಡಿದ ಸ್ತೋತ್ರವಾಕ್ಯಗಳನ್ನು ಪರಮಾತ್ಮನು ಕೇಳಿ, ಆ ಪಂಚಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಪಂಚಭೂತ, ಪಂಚತನ್ಮಾತ್ರ, ಮನಸ್ಸು, ಅಹಂಕಾರ, ಮಹತ್ತತ್ವಗಳೆಂಬ ಇಪ್ಪತ್ಮೂರು ತತ್ವಾಭಿಮಾನಿ ದೇವತೆಗಳೂ, ಮಹತ್ತತ್ವಾಭಿಮಾನಿಯಾದ ಬ್ರಹ್ಮನೆಂಬ ಜೀವನೂ ಸೇರಿ, ಇಪ್ಪತ್ನಾಲ್ಕು ತತ್ವಾಭಿಮಾನಿಗಳೂ, ಪ್ರತ್ಯೇಕ ಪ್ರತ್ಯೇಕರಾಗಿದ್ದುದರಿಂದಲೂ, ತಮ್ಮತಮ್ಮ ತತ್ವಗಳನ್ನು ಅದರ ಕಾರ್ಯಮಾಡಲು ಪ್ರೇರಿಸುವ ಶಕ್ತಿಯೂ ಇಲ್ಲದ್ದನ್ನು ದೇವರು ನೋಡಿ, ಇಪ್ಪತ್ತೈದನೆಯ, ಪಂಚವಿಂಶತಿಗನೆಂದು ಪ್ರಖ್ಯಾತನಾದ ಪುರುಷನಾಮಕನು ಸರ್ವಶಕ್ತಿಮಯಿಯಾದ,

ತನ್ನ ಪತ್ನಿ ರಮಾದೇವಿಯಿಂದ ಸಹಿತನಾಗಿ ಈ ಎಲ್ಲಾ ಉಳಿದ ಇಪ್ಪತ್ನಾಲ್ಕು ತತ್ವಗಳಲ್ಲೂ, ತತ್ವಾಭಿಮಾನಿದೇವತೆಗಳಲ್ಲೂ ಅಂಶದಿಂದ ಪ್ರವೇಶಿಸಿ, ಒಂದೊಂದು ತತ್ವದಲ್ಲೂ ಉಳಿದ ಎಲ್ಲಾ ತತ್ವಗಳ ತತ್ವಾಭಿಮಾನಿ ದೇವತೆಗಳನ್ನೂ ತೇಜೋಂಶಗಳಿಂದ ಪ್ರವೇಶಿಸಿ, ಎಲ್ಲರೂ ಒಟ್ಟಿಗೆ ಸೇರಿ ಸೃಷ್ಟಿಕಾರ್ಯ ಮಾಡಲು ಶಕ್ತಿಯನ್ನುಂಟುಮಾಡಿದನು.

ಜೀವನ ಸಮೇತ ಇಪ್ಪತ್ನಾಲ್ಕು ತತ್ವಗಣನೆ ಮಾಡಿರುವುದರಲ್ಲಿ, ಜಡಪ್ರಕೃತಿಯು ಮಹದಾದಿ ಇಪ್ಪತ್ಮೂರು ತತ್ವಗಳಲ್ಲಿ ಪ್ರವಿಷ್ಟರೂಪದಿಂದ ಇರುವುದರಿಂದ ಎಣಿಕೆಗೆ ಸೇರಿಲ್ಲ. ಎಣಿಕೆಗೆ ಸೇರಿಸಿದರೆ, ಆಗ ಜಡಪ್ರಕೃತಿಯು ಇಪ್ಪತ್ನಾಲ್ಕನೇ ತತ್ವವೂ, ಜೀವನು ಇಪ್ಪತ್ತೈದನೆಯ ತತ್ವನೂ, ಚಿತ್ಪ್ರಕೃತಿಯು ಇಪ್ಪತ್ತಾರನೇ ತತ್ವವೂ, ಪರಮಾತ್ಮನು ಇಪ್ಪತ್ತೇಳನೆಯ ತತ್ವವೆಂದೂ ಪರಿಗಣಿಸುವುದುಂಟು. ಈ ರೀತಿ ಪರಮಾತ್ಮನ ಮತ್ತು ಚಿತ್ಪ್ರಕೃತಿಯ ಪ್ರವೇಶಾಂಶದಿಂದ ಕ್ರಿಯಾಶಕ್ತಿಯನ್ನು ಪಡೆದ ತತ್ವಾಭಿಮಾನಿದೇವತೆಗಳು, ಬ್ರಹ್ಮದೇವರ ಶರೀರ ನಿರ್ಮಾಣಕ್ಕೆ ಕಾರಣವಾದ ಬ್ರಹ್ಮಾಂಡವನ್ನು ಎಲ್ಲರೂ ಸೇರಿ ನಿರ್ಮಿಸಿದರು.

ನಂತರ ಜ್ಞಾನಾನಂದಾತ್ಮಕ ಕರಚರಣಾದಿ ಸರ್ವಾವಯವವುಳ್ಳ, ಹಿರಣ್ಮಯನಾಮಕ ಸಹಸ್ರಶೀರ್ಷಾದಿ ಪುರುಷಸೂಕ್ತ ಪ್ರತಿಪಾದ್ಯನಾದ ಪರಮಾತ್ಮನು, ಈ ತತ್ವದೇವತೆಗಳಿಂದಲೂ, ತನ್ನುದರದಲ್ಲಿದ್ದ ಚರಾಚರವಸ್ತುಗಳಿಂದಲೂ ಸಹಿತನಾಗಿ ಆ ಸುವರ್ಣ ಬ್ರಹ್ಮಾಂಡವನ್ನು ಪ್ರವೇಶಿಸಿ, ಆ ಬ್ರಹ್ಮಾಂಡದ ಒಳಗೆ ತುಂಬಿದ್ದ ಉದಕದ ಮೇಲೆ, ಸಹಸ್ರ ಹೆಡೆಗಳುಳ್ಳ ಸ್ವರೂಪ ಶೇಷನ ಮೇಲೆ ಒಂದು ಸಹಸ್ರ ವರ್ಷಕಾಲ ಯೋಗನಿದ್ರಾ ಲೋಲನಾಗಿ ಮಲಗಿಕೊಂಡನು.

ಈ ಪುರುಷನಾಮಕನು ತತ್ವಗಳಲ್ಲಿ ಪ್ರವೇಶಿಸಿದ್ದರಿಂದ ದೈವಕರ್ಮನೆಂದೂ, ಬ್ರಹ್ಮಾದಿ ತತ್ವದೇವತೆಗಳಲ್ಲಿ ಪ್ರವೇಶಿಸಿದ್ದರಿಂದ ಆತ್ಮನೆಂದೂ, ಸುಖದುಃಖಾದಿಗಳನ್ನೀಯುವ ಪ್ರಕೃತಿಯನ್ನು ಪ್ರವೇಶಿದ್ದರಿಂದ ಶಕ್ತಿಮಾನ್ ಎಂದೂ, ದೈವಕರ್ಮಾತ್ಮ ಶಕ್ತಿಮಾನ್ ಎಂದು ಕರೆಯಲ್ಪಟ್ಟನು. ಸಹಸ್ರವರ್ಷಾನಂತರ ಬ್ರಹ್ಮದೇವರ ವಿರಾಟ್ ಎಂಬ ಬ್ರಹ್ಮಾಂಡಧಾರಕ ರೂಪವನ್ನು ಸೃಷ್ಟಿಮಾಡಲಪೇಕ್ಷಿಸಿ, ಇಪ್ಪತ್ನಾಲ್ಕು ತತ್ವವಿಮಿಶ್ರಿತವಾದ ಅಂಡಾಕಾರವಾದ ಬ್ರಹ್ಮಾಂಡವೆಂಬ ಬ್ರಹ್ಮಶರೀರವನ್ನು ಪ್ರವೇಶಿಸಿ, ಆ ಬ್ರಹ್ಮಾಂಡದಲ್ಲಿ ಶಿರ ಮೊದಲು ಮಾಡಿ ಪಾದಪರ್ಯಂತ ಅಂಗಾಂಗಳನ್ನು ವಿಂಗಡಿಸುವುದಕ್ಕಾಗಿ, ತಾನೇ ಬ್ರಹ್ಮಾಂಡವನ್ನು ರಮಾಸಮೇತನಾಗಿ ವ್ಯಾಪಿಸಿದನು.

ಹೀಗೆ ವ್ಯಾಪ್ತವಾದ ತನ್ನರೂಪದಲ್ಲಿ, ಶಿರಾದಿ ಸರ್ವಾಯವಗಳನ್ನೂ ಒಂದೊಂದಾಗಿ ಅಭಿವ್ಯಕ್ತಿಮಾಡಿ, ತನ್ನ ಅಂಗಗಳಲ್ಲಿ ಬೇರೆಬೇರೆ ತತ್ವಾಭಿಮಾನಿ ದೇವತೆಗಳಿಗೆ ಸ್ಥಾನಗಳನ್ನು ಮಾಡಿಕೊಟ್ಟ,

ಈ ಸಾಕ್ಷಾತ್ ವಿರಾಡ್ರೂಪವು ಶ್ರೀಪರಮಾತ್ಮನ ಮೊದಲನೆಯ ಅವತಾರವು.

ಈ ಪುರುಷನಾಮಕನು ಪ್ರಥಮಾವತಾರದಿಂದ ಒಂದು ರೂಪುಳ್ಳವನಾಗಿಯೂ, ದೇಹಗತ ಪ್ರಾಣಾದಿ ಪಂಚಕ, ನಾಗಾದಿ ಪಂಚಕ ದಶಪ್ರಾಣರಲ್ಲಿದ್ದು ಕಾರ್ಯಶಕ್ತಿಕೊಡುವುದಕ್ಕಾಗಿ ಹತ್ತುರೂಪುಗಳನ್ನೂ, ಜಗತ್ಸೃಷ್ಟಿ, ಪಾಲನೆ ಸಂಹಾರಮಾಡುವುದಕ್ಕಾಗಿ ಬ್ರಹ್ಮ, ವಿಷ್ಣು, ರುದ್ರರೆಂಬ ಮೂರು ರೂಪಗಳಿಂದಲೂ ಆವಿರ್ಭೂತನಾದನು ಮತ್ತು ಸರ್ವಭೂತಮಯನಾದ ಪುರುಷನಾಮಕ ಪರಮಾತ್ಮನ ಶರೀರದಿಂದಲೇ ಸಮಸ್ತ ಚರಾಚರ ಪ್ರಪಂಚವು ಹುಟ್ಟಿತಾದಕಾರಣ, ಅವುಗಳಲ್ಲಿ ಪ್ರವೇಶಿಸಿ, ಪ್ರತ್ಯೇಕ ಪ್ರತ್ಯೇಕ ಭಿನ್ನಾಂಶಗಳಿಂದ ಕಾರ್ಯೋನ್ಮುಖಗಳನ್ನಾಗಿ ಮಾಡುವುದಕ್ಕಾಗಿ ಅಸಂಖ್ಯಾತ ರೂಪಗಳುಳ್ಳವನಾಗಿಯೂ ಆದನು.

ವಿರಾಡ್ರೂಪನು ಅಧ್ಯಾತ್ಮ, ಅಧಿಭೂತ, ಅಧಿದೈವರೂಪಗಳುಳ್ಳವನಾದನು. ಪ್ರತಿಯೊಬ್ಬರ ಹೃದಯದಲ್ಲೂ ಆತ್ಮಶಬ್ದನಾಗಿ ಒಂದೊಂದು ರೂಪ ವುಳ್ಳವನಾದನು. ನಂತರ ಬ್ರಹ್ಮಶರೀರದಲ್ಲಿ ಪ್ರವಿಷ್ಟನಾದ ಪುರುಷರೂಪನು, ಬ್ರಹ್ಮಶರೀರದಲ್ಲಿ ತನ್ನನ್ನು ಸ್ತುತಿಸಿದ ತತ್ವಾಭಿಮಾನಿ ದೇವತೆಗಳಿಗೆ ವಾಸಸ್ಥಳಗಳನ್ನು ಈ ರೀತಿ ನಿರ್ಮಿಸಿ, ಅವರವರಿಗೆ ಹಂಚಿಕೊಟ್ಟನು:-

## ಇಂದ್ರಿಯಾಭಿಮಾನಿಗಳ ಸೃಷ್ಟಿ

ದೇಹಕ್ಕೆ ಮುಖವೇ ಪ್ರಧಾನವಾದುದೆಂದು ತಿಳಿಸುವುದಕ್ಕಾಗಿ, ಮೊದಲು ಮುಖವೆಂಬ ಗೋಳಕವನ್ನು, ಅದರಲ್ಲಿ ಬಾಯನ್ನೂ ಅಭಿವ್ಯಕ್ತಿ ಮಾಡಿದನು. ಆ ಬಾಯನ್ನು ಅಗ್ನಿಯು ವಾಗೀಂದ್ರಿಯಸಹಿತನಾಗಿ ಪ್ರವೇಶಿಸಿ ವಾಸಮಾಡುವವನಾದನು. ಆದುದರಿಂದ ವಾಕ್ಕು ಬಾಯಿಂದ ಉಚ್ಚರಿಸಲ್ಪಡುತ್ತೆ. ಬಾಯಲ್ಲಿ ಕಾಲು ಇಂದ್ರಿಯವೂ ನಾಲಿಗೆಯೂ ಅಭಿವ್ಯಕ್ತಿಯಾಯಿತು. ಅದನ್ನು ವರುಣನು, ರಸನೇಂದ್ರಿಯ ಸಹಿತನಾಗಿ ಪ್ರವೇಶಿಸಿ ವಾಸಿಸಿದನು. ಆದುದರಿಂದ ನಾಲಿಗೆಯಿಂದ ಎಲ್ಲಾ ರುಚಿಗಳೂ ಅಭಿವ್ಯಕ್ತವಾಗುತ್ತವೆ.

ನಂತರ ಮೂಗು ಉತ್ಪನ್ನವಾಗಲು ಅಶ್ವಿನೀದೇವತೆಗಳು ಘ್ರಾಣೇಂದ್ರಿಯಸಹಿತ ಹೊಕ್ಕು ವಾಸಿಸಿದರು. ಆದ್ದರಿಂದ ಮೂಗಿನಿಂದ ಎಲ್ಲಾ ಗಂಧಗಳ ವಾಸನೆಗಳೂ ತಿಳಿಯುತ್ತೆ. ನಂತರ ಕಣ್ಣುಗಳೆಂಬ ಗೋಳಕಗಳು ಹುಟ್ಟಿದವು. ತ್ವಷ್ಟ್ರುನಾಮಕಸೂರ್ಯನು ದರ್ಶನೇಂದ್ರಿಯ ಸಹಿತನಾಗಿ ಹೊಕ್ಕು ವಾಸಿಸಿ, ರೂಪಗಳನ್ನು ಗ್ರಹಿಸುವ ಶಕ್ತಿಪ್ರದನಾಗಿರುತ್ತಾನೆ.

ಚರ್ಮವು ನಂತರ ಅಭಿವ್ಯಕ್ತಿಯಾಯಿತು. ವಾಯುವು, ಪ್ರಾಣವಾಯುವಿನಿಂದ ಕೂಡಿ ಸ್ಪರ್ಶೇಂದ್ರಿಯ ಸಹಿತನಾಗಿ ಅದನ್ನು ಪ್ರವೇಶಿಸಿ ವಾಸಿಸಿದನು. ಅದರಿಂದ ಶೀತೋಷ್ಣ, ಮೃದು, ಕಠಿಣಾದಿ ಸ್ಪರ್ಶಗುಣಗಳು ತಿಳಿಯುವವು. ನಂತರ ಕಿವಿಗಳು ಅಭಿವ್ಯಕ್ತವಾಗಲು, ದಿಗ್ದೇವತೆಗಳು ಶ್ರೋತ್ರೇಂದ್ರಿಯ ಸಹಿತರಾಗಿ ಪ್ರವೇಶಿಸಿ, ವಾಸಿಸಿ, ಶಬ್ದಗಳನ್ನು ಕೇಳುವ ಶಕ್ತಿ ಕೊಡುವವರಾದರು. ತ್ವಗೀಂದ್ರಿಯದಲ್ಲಿ ಕಜ್ಜಿ, ತುರಿ, ಹುಣ್ಣು ಮುಂತಾದವು ಉಂಟಾಗಿ ಅವುಗಳಲ್ಲಿ ರಸ ಉತ್ಪತ್ತಿಯಾಗುತ್ತದೆ. ಜನನೇಂದ್ರಿಯವು ಅಭಿವ್ಯಕ್ತವಾಗಲು, ಪ್ರಜಾಪತಿಯು ರೇತಸ್ಸಿನಿಂದೊಡಗೂಡಿ ಪ್ರವೇಶಿಸಿ ವಾಸಿಸಿದನು. ಇದರಿಂದ ರೇತೋತ್ಸರ್ಜನವೂ ಆನಂದವೂ ಅಭಿವ್ಯಕ್ತಿಯಾಗುತ್ತದೆ.

ಗುದೇಂದ್ರಿಯವು ಉತ್ಪನ್ನವಾಗಲು, ಮಿತ್ರನಾಮಕ ಸೂರ್ಯನು ಪಾಯ್ವಿಂದ್ರಿಯಸಹಿತನಾಗಿ ಪ್ರವೇಶಿಸಿ, ಮಲವಿಸರ್ಜನೆ ಎಂಬ ಕಾರ್ಯಮಾಡುವ ಶಕ್ತಿಪ್ರದನಾದನು. ಕೈಗಳು ಅಭಿವ್ಯಕ್ತವಾಗಿ, ಇಂದ್ರದೇವರು ವೃತ್ತೀಂದ್ರಿಯದಿಂದ ಸಹಿತರಾಗಿ ಪ್ರವೇಶಿಸಿ ಕರ್ಮಶಕ್ತಿ ಕೊಡುವವರಾದರು. ಪಾದಗಳು ಉತ್ಪನ್ನವಾಗಲು ಸ್ವಯಂ ವಿಷ್ಣುವು ಅದನ್ನು ಪ್ರವೇಶಿಸಿ, ಗಮನಾಗಮನ ಶಕ್ತಿಯನ್ನು ಕೊಡುವನಾದನು. ಇದರಿಂದ ಜೀವನು ತನಗೆ ಬೇಕಾದಲ್ಲಿಗೆ ಹೋಗಲು ಶಕ್ತನಾಗುತ್ತಾನೆ.

ಹೃದಯವು ಆವಿರ್ಭವಿಸಲು, ಚಂದ್ರನು ಮನಸ್ಸಿನಿಂದ ಕೂಡಿ ಪ್ರವೇಶಿಸಿದನು. ಇದರಿಂದ ಸಂಕಲ್ಪವಿಕಲ್ಪಗಳು ಜೀವರಿಗೆ ಉಂಟಾಗುವವು. ಆತ್ಮನಾಡೀ ಎಂಬ ಬ್ರಹ್ಮನಾಡಿ, ಸುಷುಮ್ನವು ಉತ್ಪನ್ನವಾಗಲು, ಅದನ್ನು ಬೃಹಸ್ಪತಿ ಶಬ್ದವಾಚ್ಯರಾದ ಬ್ರಹ್ಮದೇವರು, ಬುದ್ಧಿ ಅಂಶದಿಂದ ಕೂಡಿದವರಾಗಿ ಪ್ರವೇಶಿಸಿ ವಾಸಿಸಿದರು. ಇದರಿಂದ ಜೀವರಿಗೆ ನಿಶ್ಚಯಜ್ಞಾನ ಉಂಟಾಗುತ್ತದೆ. ನಂತರ ಅಹಂನಾಡಿಯು ಅಭಿವ್ಯಕ್ತಿಯಾಯಿತು. ಇದನ್ನು ರುದ್ರದೇವರು ನಾನೇ ಕರ್ತಾ ಎಂಬ ಅಭಿಮಾನಕಾರಣವಾದ ಅಹಂಕಾರ ತತ್ವಸಹಿತರಾಗಿ ಪ್ರವೇಶಿಸಿ ವಾಸಿಸುತ್ತಾ, ಜೀವರಿಗೆ ಕರ್ತೃತ್ವ , ಭೋಕ್ತೃತ್ವಾಭಿಮಾನಗಳನ್ನು ಕೊಡುತ್ತಾರೆ.

ಸತ್ವನಾಡೀ ಎಂಬ ಸುಷುಮ್ನಾಂತರ್ನಾಡಿಯನ್ನು ಬ್ರಹ್ಮನಾಮಕ, ಬ್ರಹ್ಮಾಂತರ್ಯಾಮಿಯಾದ ಪರಮಾತ್ಮನು ಚಿತ್ತನಾಮಕಳಾದ ರಮಾದೇವಿಯ ಸಹಿತ ಪ್ರವೇಶಿಸಿ, ಜೀವರಿಗೆ ವಿಜ್ಞಾನಪ್ರದನಾದನು. ಈ ರೀತಿ ಅಂಗಾಂಗಗಳು ಉತ್ಪನ್ನವಾಗಿ, ಅಲ್ಲಲ್ಲಿ ತತ್ವಾಭಿಮಾನಿ ದೇವತೆಗಳು ಸ್ಥಳಗಳನ್ನು ಪಡೆದು ಆಯಾಯ ಇಂದ್ರಿಯಗಳ ಕಾರ್ಯ ಮಾಡಿಸಲು ಶಕ್ತರಾದರು. ಪರಮಾತ್ಮನ ಶಿರಸ್ಸಿನಿಂದ ದ್ಯುಲೋಕಗಳೆಂಬ ದೇವತಾ ವಾಸಯೋಗ್ಯ ಲೋಕಗಳು ಹುಟ್ಟಿದವು. ಅದನ್ನು ಸತ್ವಗುಣಪ್ರಧಾನರಾದ ದೇವತೆಗಳು ವಾಸಸ್ಥಾನಗಳನ್ನಾಗಿ ಪಡೆದರು. ಪಾದಗಳಿಂದ ಭೂಲೋಕವು ಅಲ್ಲಿ ರಜೋಗುಣ ಪ್ರಧಾನರಾದ ಮನುಷ್ಯರು ವಾಸಸ್ಥಾನ ಪಡೆದರು. ನಾಭಿಯಿಂದ ಅಂತರಿಕ್ಷಲೋಕವು, (ಪಂಚಮಸ್ಕಂಧದ ರೀತಿಯಾಗಿ

ಇದು ಭೂಮಿಯ ಮೇಲ್ಭಾಗದಲ್ಲಿ ೧೨೦೦ ಮೈಲಿ ದೂರದಿಂದ ಆರಂಭಿಸಿ, ದ್ಯುಲೋಕದ ಅಂತರಾಳದವರೆಗೆ ಇರುತ್ತೆ.) ಇಲ್ಲಿ ತಮೋಗುಣಪ್ರಧಾನರಾದ ರುದ್ರಗಣಗಳು ವಾಸಸ್ಥಾನಗಳನ್ನೂ ಪಡೆದವು.

ದೇವರ ಮುಖದಿಂದ ಬ್ರಹ್ಮನೂ, ಬ್ರಾಹ್ಮಣರೂ ಹುಟ್ಟಿದರು. ಮುಖವು ಪ್ರಧಾನಾಂಗವಾದುದರಿಂದ ಬ್ರಾಹ್ಮಣರು ಶ್ರೇಷ್ಠರೂ, ಗುರುಗಳೂ ಆದರು. ಭುಜಗಳಿಂದ ಕ್ಷತ್ರಿಯರು ಹುಟ್ಟಿದರು. ಇವರು ತಮ್ಮ ಭುಜಪರಾಕ್ರಮದಿಂದ ಲೋಕಕಂಟಕರನ್ನು ಶಿಕ್ಷಿಸಿ, ಜನಸಂರಕ್ಷಕರಾಗಿ ಧರ್ಮಸ್ಥಾಪಕರಾದರು. ತೊಡೆಗಳಿಂದ ವೈಶ್ಯರು ಹುಟ್ಟಿ, ಜನಜೀವನ ವೃತ್ತಿಗೆ ಸಹಾಯವಾದ ಧರ್ಮವುಳ್ಳವರಾದರು. ಶೂದ್ರರು ಪಾದದಿಂದ ಹುಟ್ಟಿದರು. ಇವರು ಮೇಲೆ ಹೇಳಿದ ತ್ರಿವರ್ಣದವರ ಹಿತವನ್ನು ಮಾಡುವವರಾಗಿ, ಅವರ ಸೇವಾವೃತ್ತಿಯಲ್ಲಿ ನಿರತರಾಗಿ, ಪರಮಾತ್ಮನಿಗೆ ಪ್ರೀತಿಪಾತ್ರರಾದರು.

ಈ ರೀತಿ ಚಾತುರ್ವರ್ಣದವರೂ, ಅವರ ಧರ್ಮಗಳೂ ಹುಟ್ಟಿದವು. ಆದುದರಿಂದ ಈ ಚಾತುರ್ವರ್ಣದವರೆಲ್ಲರೂ, ತಮ್ಮ ಸ್ವವರ್ಣೋಚಿತ ಕರ್ಮಗಳನ್ನು ಶ್ರೀಪರಮಾತ್ಮ ಪ್ರೀತ್ಯರ್ಥವಾಗಿ ಆಚರಿಸಿ, ಆ ಪರಮಾತ್ಮನನ್ನು ತಮ್ಮನ್ನು ಸೃಷ್ಟಿಸಿದ ಕಾರಣ ಪಿತೃತ್ವದಿಂದಲೂ, ಎಂದರೆ ತಂದೆಯೆಂದೂ, ಸಕಲ ಜ್ಞಾನಪ್ರದನಾದುದರಿಂದ ಗುರುವೆಂದೂ, ಸಕಲ ಸೌಖ್ಯಪ್ರದನಾದುದರಿಂದ ಇಷ್ಟದೇವತೆ ಎಂದೂ, ಸದ್ಗತಿ ಕೊಡುವವನದ್ದರಿಂದ ಸ್ವಾಮಿ ಎಂದೂ, ಉಪಾಸನೇ ಮಾಡಿ, ಅದರಿಂದ ನಿರ್ಮಲಾಂತಃಕರಣರಾಗಿ ಮುಕ್ತರಾಗುವರು.

ಹೀಗೆ ಪರಸ್ಪರ ಆಶ್ರಯಹೊಂದಿ ಎಲ್ಲರೂ ಸ್ಥಿತಿಕಾಲದಲ್ಲಿ ಜೀವನರೂಪ ಪರಮಾತ್ಮಾರಾಧನೆ ಮಾಡಿ, ಸ್ವರೂಪಾವಿರ್ಭಾವ ಹೊಂದಲೆಂದೇ ವರ್ಣಚತುಷ್ಟಯಗಳನ್ನು ದೇವರು ನಿರ್ಮಿಸುವನಾಗಿ, ಅವರಲ್ಲಿ ಪ್ರವಿಷ್ಟನಾಗಿ ದೈವ, ಕರ್ಮ, ಆತ್ಮರೂಪಗಳಿಂದಿರುತ್ತಾರೆ. ಈ ರೀತಿ ಶ್ರೀಪರಮಾತ್ಮನ ಸೃಷ್ಟ್ಯಾದಿ ಶಕ್ತಿಗಳು ಅನಂತಗಳಾಗಿಯೂ, ಅಪರಿಮಿತಗಳಾಗಿಯೂ ಇವೆ! ಇವುಗಳನ್ನು ಯಾರು ತಾನೇ ವರ್ಣಿಸಿ ತಿಳಿಸಲು ಸಾಧ್ಯ? ಆದರೂ ಕೂಡ ಪ್ರಾಯಶಃ ನಮ್ಮ ವಾಕ್ಕುಗಳು ಬಹುಕಾಲ ಭಗವದೇತರ ಶುಷ್ಕವಿಚಾರಗಳಲ್ಲೇ ಪ್ರಯುಕ್ತವಾಗಿ, ಅಶುದ್ಧಗಳಾಗಿರುವ ಕಾರಣ, ವಾಙ್ಮನಸ್ಸುಗಳ ನಿರ್ಮಲತೆಯನ್ನು ಹೊಂದುವುದಕ್ಕಾಗಿ , ಎಷ್ಟು ತಿಳಿಯಲೂ, ಹೇಳಲೂ ಸಾಧ್ಯವೋ ಅಷ್ಟು ಭಗವನ್ಮಹಿಮಾವರ್ಣನರೂಪ ವಾಕ್ಕುಗಳಿಂದ ನಾನು ಪವಿತ್ರನಾಗಲು, ಎಲೈ ವಿದುರನೇ, ಈ ವಿಚಾರಗಳನ್ನು ನಿನಗೆ ಹೇಳುವವನಾಗಿರುತ್ತೇನೆ.

ಭಗವದ್ಗುಣ ವರ್ಣನೆಯೇ ನಿರಂತರ ವಾಗೀಂದ್ರಿಯಕ್ಕೆ ಅತಿಶಯವಾದ ಮುಖ್ಯ ಪ್ರಯೋಜನ

ಮತ್ತು ಶ್ರೇಯಸ್ಸು. ನಿರಂತರ ಹರಿಕಥಾಶ್ರವಣವೇ ಕಿವಿಗಳಿಗೆ ಏಕಾಂತ ಸಾಧನ ಮತ್ತು ಸಾಫಲ್ಯ. ಬ್ರಹ್ಮದೇವರು ಸಹಸ್ರ ವರ್ಷಗಳು ಸಮಾಧಿ ಯೋಗದಿಂದ ಶ್ರೀಪರಮಾತ್ಮನ ಧ್ಯಾನಮಾಡಿ, ಅದರಿಂದುಂಟಾದ ಅಪರಿಮಿತ ಜ್ಞಾನಸಾಮರ್ಥ್ಯದಿಂದ, ಶ್ರೀಪರಮಾತ್ಮನ ಅನಂತಗುಣಗಳನ್ನು ತಿಳಿಯುವಂತಹ ಪರೋಕ್ಷಜ್ಞಾನ ವುಳ್ಳವರಾಗಿರುತ್ತಾರೆಯೇ, ಹೊರತು ದೇವರ ಒಂದು ಗುಣವನ್ನೂ ಪೂರ್ತಿಯಾಗಿ ಗ್ರಹಿಸಿ ತಿಳಿಯಲು ಶಕ್ತರಾಗಿಲ್ಲ.

ಅದುದರಿಂದ ಪರಮಾತ್ಮನ ಇಚ್ಛಾ ಕ್ರಿಯಾ ಜ್ಞಾನ ಶಕ್ತಿಗಳು, ಮಹಾಜ್ಞಾನಿಗಳನ್ನೂ ಮೋಹಗೊಳಿಸುತ್ತದೆ. ಇಂತಹ ಪರಮಾತ್ಮನನ್ನು ಯಾರುತಾನೆ ತಿಳಿದಾರು? ಮತ್ತು ವರ್ಣಿಸ್ಯಾರು? ಆದುದರಿಂದ ಬ್ರಹ್ಮಾದಿ ದೇವತೆಗಳಿಂದ ಹಿಡಿದು ನಮ್ಮಗಳ ಪರ್ಯಂತ ನಮ್ಮೆಲ್ಲರ ವಾಙ್ಮನಸ್ಸುಗಳು ಒಟ್ಟಿಗೆ ಸೇರಿಯೂ, ಯಾವ ಪರಮಾತ್ಮನ ಮಹಿಮೆಗಳನ್ನು ತಿಳಿಯಲಾರದೆ ಹಿಂತಿರುಗುವವೋ, ಅಂತಹ ಶ್ರೀಪರಮಾತ್ಮನ ಶ್ರೀ ಚರಣಾರವಿಂದಗಳಿಗೆ ಭಕ್ತಿಯುತ ನಮಸ್ಕಾರ, ಎಂದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಏಳನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು ॥**

## अथ अष्टमोऽध्यायः

एवं ब्रुवाणं मैत्रेयं द्वैपायनसुतो बुधः ।
प्रीणयन्निव भारत्या विदुरः प्रत्यभाषत ॥ १ ॥

**विदुर उवाच**

ब्रह्मन् कथं भगवतश्चिन्मात्रस्याविकारिणः ।
लीलया चापि युज्येरन् निर्गुणस्य गुणाः क्रियाः ॥ २ ॥

क्रीडाया मुद् यतोऽर्हस्य कामं चिक्रीडिषाऽन्यतः ।
स्वतस्तृप्तस्य तु कथं निर्वृतस्य सदात्मनः ॥ ३ ॥

अस्राक्षीत् भगवान् विश्वं गुणमय्याऽऽत्ममायया ।
तथा संस्थापयत्येतद् भूयः प्रत्यभिधास्यति ॥ ४ ॥

देशतः कालतो योऽसाववस्थातः स्वतोऽन्यतः ।
अविलुप्तावबोधात्मा स युज्येताजया कथम् ॥ ५ ॥

भगवानेष एवैकः सर्वक्षेत्रेष्ववस्थितः ।

अमुष्य दुर्भगत्वं वा क्लेशो वा कर्मभिः कुतः ॥ ६ ॥

एतस्मिन् मे मनो विद्वन् खिद्यतेऽज्ञानसंकटे ।
तन्नः पराणुद विभो कश्मलं मानसं महत् ॥ ७ ॥

**शुक उवाच**

स इत्थं चोदितः क्षत्त्रा तत्त्वजिज्ञासुना मुनिः ।
प्रत्याह भगवच्चित्तः स्मयन्निव गतस्मयः ॥ ८ ॥

**मैत्रेय उवाच**

सेयं भगवतो माया न्याय्यं येन विरुध्यते ।
ईश्वरस्य विमुक्तस्य कार्पण्यमुत बन्धनम् ॥ ९ ॥

यथाऽर्थेन विनाऽमुष्य पुंस आत्मविपर्ययः ।
प्रतीयत उपद्रष्टुः स्वशिरश्छेदनादिकः ॥ १० ॥

यथा जले चन्द्रमसः कम्पादिस्तत्कृतो गुणः ।
दृश्यतेऽसन्नपि द्रष्टुरात्मनोऽनात्मनो गुणः ॥ ११ ॥

स वै निवृत्तिधर्मेण वासुदेवानुकम्पया ।
भगवद्भक्तियोगेन तिरोधत्ते शनैरिह ॥ १२ ॥

यदेन्द्रियोपरामार्थो द्रष्टात्मनि परे हरौ ।
विलीयन्ते तदा क्लेशाः संसुप्तस्येव कृत्स्नशः ॥ १३ ॥

अशेषसंक्लेशशमं विधत्ते गुणानुवादश्रवणं मुरारेः ।
किं वा पुनस्तच्चरणारविन्दपरागसेवारतिरात्मलब्धा ॥ १४ ॥

**विदुर उवाच**

संछिन्नः संशयो मह्यं तव सूक्तासिना विभो ।
उभयत्रापि भगवन्मनो मे सम्प्रधावति ॥ १५ ॥

साधु तद् व्याहृतं विद्वन्नात्ममायायनं हरेः ।
आभात्यपार्थं निर्मूलं विश्वमूलं न यद् बहिः ॥ १६ ॥

यश्च मूढतमो लोके यश्च बुद्धेः परं गतः ।

तावुभौ सुखमेधेते क्लिश्यत्यन्तरितो जनः ॥ १७ ॥

अर्थाभावं विनिश्चित्य प्रतीतस्याप्यनात्मनः ।
तां चापि युष्मच्चरणसेवयाऽहं पराणुदे ॥ १८ ॥

यत्सेवया भगवतः कूटस्थस्य मधुद्विषः ।
रतिरासो भवेत् तीव्रः पादयोर्व्यसनार्दनः ॥ १९ ॥

दुरापा ह्यल्पतपसः सेवा वैकुण्ठवर्त्मसु ।
यत्रोपगीयते नित्यं देवदेवो जनार्दनः ॥ २० ॥

सृष्ट्वाऽग्रे महदादीनि सविकाराण्यनुक्रमात् ।
तेभ्यो विराजमुद्धृत्य तमनु प्राविशद् विभुः(प्रभुः) ॥ २१ ॥

यमाहुराद्यं पुरुषं सहस्राङ्घ्र्यूरुबाहुकम् ।
यत्र विश्व इमे लोकाः सविकाराः समासते ॥ २२ ॥

यस्मिन् दशविधः प्राणः सेन्द्रियार्थेन्द्रियस्त्रिवृत् ।
त्वयेरिता यतो वर्णास्तद्विभूतीर्वदस्व नः ॥ २३ ॥

यत्र पुत्रैश्च पौत्रैश्च नप्तृभिः सह गोत्रजैः ।
प्रजा विचित्राकृतय आसन् याभिरिदं ततम् ॥ २४ ॥

प्रजापतीनां स पतिश्चक्लृपे कान् प्रजापतीन् ।
सर्गांश्चैवानुसर्गांश्च मनून् मन्वन्तराधिपान् ॥ २५ ॥

एतेषामपि वंशांश्च वंशानुचरितानि च ।
उपर्यधश्च ये लोका भूमेर्मित्रात्मजासते ।
तेषां संस्थां प्रमाणं च भूर्लोकस्य च वर्णय ॥ २६ ॥

तिर्यमानुषदेवानां सरीसृपपतत्रिणाम् ।
वद नः सर्गसंव्यूहं गर्भस्वेदद्विजोद्भिदाम् ॥ २७ ॥

गुणावतारैर्विश्वस्य सर्गस्थित्यप्ययात्मनः ।
सृजतः श्रीनिवासस्य व्याचक्ष्वोदारविक्रमम् ॥ २८ ॥

वर्णाश्रमविभागांश्च रूपशीलस्वभावतः ॥ २९ ॥

ऋषीणां जन्मकर्माणि वेदस्य च विकर्षणम् ।
यज्ञस्य च वितानानि योगस्य च पथः प्रभो ॥ ३० ॥

नैष्कर्म्यस्य च सांख्यस्य तन्त्रं वा भगवत्स्मृतम् ।
पाषण्डपथवैषम्यं प्रतिलोमनिवेशनम् ॥ ३१ ॥

जीवस्य गतयो याश्च यावतीर्गुणकर्मजाः ।
धर्मार्थकाममोक्षाणां निमित्तान्यविरोधतः ॥ ३२ ॥

वार्ताया दण्डनीतेश्च श्रुतस्य च विधिं पृथक् ।
श्राद्धस्य च विधिं ब्रह्मन् पितॄणां सर्गमेव च ॥ ३३ ॥

ग्रहनक्षत्रतारणां कालावयवसंस्थितिम् ।
दानस्य तपसो वापि यच्चेष्टापूर्तयोः फलम् ॥ ३४ ॥

प्रवासस्थस्य यो धर्मो यश्च पुंस उतापदि ।
येन वा भगवांस्तुष्येद् धर्मयोनिर्जनार्दनः ॥ ३५ ॥

सम्प्रसीदति वा येषामेतदाख्याहि मेऽनघ ।
अनुव्रतानां शिष्याणां पुत्राणां च द्विजोत्तम ॥ ३६ ॥

अनापृष्टमपि ब्रूयुर्गुरवो दीनवत्सलाः ।
तत्त्वानां भगवस्तेषां कतिधा प्रतिसंक्रमः ॥ ३७ ॥

तत्रेमं क उपासीरन् क उ स्विदनुशेरते ।
पुरुषस्य च संस्थानं स्वरूपं वा परस्य च ।
ज्ञानं च नैगमं यत् तद् गुरुशिष्यप्रयोजनम् ॥ ३८ ॥

निमित्तानि च तस्येह प्रोक्तान्यनघ सूरिभिः ।
स्वतो ज्ञानं कुतः पुंसां भक्तिर्वैराग्यमेव वा ॥ ३९ ॥

एतान् मे पृच्छतः प्रश्नान् हरेः कर्मविवित्सया ।
ब्रूहि मेऽन्धस्य मित्रत्वादजया नष्टचक्षुषः ॥ ४० ॥

सर्वे वेदाश्च यज्ञाश्च तपोदानानि चानघ ।
जीवाभयप्रदानस्य न कुर्वीरन् कलामपि ॥ ४१ ॥

**श्रीशुक उवाच**

स इत्थमापृष्टपुराणकल्पः कुरुप्रधानेन मुनिप्रधानः ।
प्रवृद्धहर्षो भगवत्कथायां संचोदितस्तं प्रहसन्निवाह ॥ ४२ ॥

## ॥ इति श्रीमद्भागवते (तृतीयस्कन्धे( *3) अष्टमोऽध्यायः ॥

**॥ ಎಂಟನೆಯ ಅಧ್ಯಾಯ ॥**

## ಅಪ್ರಾಕೃತನಿಂದ ಪ್ರಾಕೃತ ಸೃಷ್ಟಿ ಸರಿಯೆ? :-

ಶುಕರು ಪರೀಕ್ಷಿದ್ರಾಜನಿಗೆ ಎಲೈ! ಪರೀಕ್ಷಿದ್ರಾಜನೇ, ಮೈತ್ರೇಯರು ಹೇಳಿದ ಬ್ರಹ್ಮದೇವರ ದೇಹವಾದ ವೈರಾಜನಾಮಕ ಪುರುಷರೂಪವನ್ನು ಅಭಿವ್ಯಕ್ತಿ ಮಾಡಿದ ದೇವರ ಮಹಿಮೆಯನ್ನು ವಿದುರನು ಕೇಳಿ, ಆ ಮಹಿಮಾ ಶ್ರವಣದಿಂದ ಸಂತೋಷವುಳ್ಳವನಾಗಿ, ಪುನಃ ಮೈತ್ರೇಯರನ್ನು ಯಾವ ರೀತಿ ಪ್ರಶ್ನೆಗಳನ್ನು ಮಾಡಿದನು, ಎಂಬುವುದನ್ನು ಹೇಳುತ್ತೇನೆ, ಕೇಳು ಎಂದರು:-

ವಿದುರನು ಮೈತ್ರೇಯರನ್ನು ಎಲೈ ಬ್ರಹ್ಮಜ್ಞಾನಿಗಳಾದ ಮೈತ್ರೇಯರೇ! ಶ್ರೀಪರಮಾತ್ಮನು, ಜ್ಞಾನಾನಂದಾತ್ಮಕ ಶರೀರನು. ಪ್ರಾಕೃತವಿಕಾರ ರಹಿತನು. ಸತ್ವಾದಿ ಪ್ರಾಕೃತಗುಣ ರಹಿತನು. ನಿರ್ದೋಷನು. ಇಂತಹ ಪರಮಾತ್ಮನು, ಪ್ರಾಕೃತಗುಣಗಳುಳ್ಳ ಸೃಷ್ಟ್ಯಾದಿ ವ್ಯಾಪಾರಗಳನ್ನು ಹೇಗೆ ತಾನೇ ಕೇವಲ ಲೀಲೆಗೋಸ್ಕರವಾದರೂ ಮಾಡ್ಯಾನು? ಯಾಕೆಂದರೆ, ಕೇವಲ ಕಾಮಾದಿ ಅತೃಪ್ತಿಯುಳ್ಳವನಿಗೇ ಕ್ರೀಡಾದಿಗಳನ್ನು ತನ್ನ ಸಮಾನಿಕರಲ್ಲಿ ಮಾಡುವ ಸಂಭವವಿರುತ್ತೆ. ಶ್ರೀಪರಮಾತ್ಮನಾದರೋ ಆಪ್ತಪೂರ್ಣಕಾಮನು. ಸಮಾನರಹಿತನು. ಆದುದರಿಂದ ತನಗಿಂತ ಹೀನರಾದವರೊಡನೆ ಕಲೆತು, ತನ್ನದಲ್ಲದ ಹೀನಗುಣಗಳಾದ ಸತ್ವಾದಿ ಪ್ರಾಕೃತ ಗುಣಗಳ ಮೂಲಕ, ಕ್ರೀಡಾದಿಗಳು ತನಗೆ ಅವಶ್ಯವಿಲ್ಲದಿದ್ದರೂ, ಈ ಪ್ರಕೃತಿಯಲ್ಲೂ ಜೀವರಲ್ಲೂ ನಾನಾರೂಪಗಳಿಂದ ಪ್ರವೇಶಿಸಿ, ಜಗತ್ಸೃಷ್ಟಿ ಮಾಡುತ್ತಾನೆಂಬುವುದು ಹೇಗೆ ಕೂಡುತ್ತದೆ?

ದೇವರು ನಿರಪೇಕ್ಷ, ನಿಷ್ಕ್ರಿಯ, ನಿರ್ಗುಣನೆಂದು ಶೃತಿಗಳು ಸಾರುತ್ತಿರಲಾಗಿ, ಪರಮಾತ್ಮನು ರಜೋಗುಣದಿಂದ ತನ್ನ ಸ್ವಾಧೀನದಲ್ಲಿರುವ ಪ್ರಕೃತಿಯನ್ನು ಪ್ರೇರಿಸಿ, ಸೃಷ್ಟಿಸುವನು, ಎಂದರೆ ದೇವರಿಗೆ

ಪ್ರಾಕೃತಗುಣ ಸಂಬಂಧ ಬಂದಿತಲ್ಲಾ ಎಂದು ನನಗೆ ಸಂಶಯವುಂಟಾಗುತ್ತದೆ? ಅದಕ್ಕೇನು ಪರಿಹಾರ?

ದೇಶತಃ ಕಾಲತಃ ಸರ್ವತ್ರ ಸ್ವಾಭಾವಿಕ ವ್ಯಾಪ್ತಿಯುಳ್ಳ ದೇವರಿಗೆ, ಪೂರ್ಣಜ್ಞಾನಾತ್ಮಕನಿಗೆ, ಪುನಃ ಪ್ರಕೃತಿಯಲ್ಲಿ ಪ್ರವೇಶಿಸಿ, ಬ್ರಹ್ಮದೇವರ ಶರೀರದಲ್ಲಿ ಪ್ರವೇಶಿಸಿ ಎಂದು ಹೇಳಿದರೆ, ಮೊದಲೇ ವ್ಯಾಪ್ತನಾಗಿರುವಾಗ, ಪುನಃ ಪ್ರವೇಶಿಸಿದನು ಎಂದು ಹೇಳುವುದರ ಅರ್ಥವು ನನಗೆ ತಿಳಿದಿಲ್ಲ, ಹೇಳಬೇಕು.

ನಿತ್ಯನಿರವಧಿಕ ಐಶ್ವರ್ಯ, ಆನಂದ, ಜ್ಞಾನಪೂರ್ಣನಾದ ದೇವರು, ಅವಿದ್ಯಾದಿಗಳಿಂದ ಕೂಡಿ ರಾಗ, ದ್ವೇಷ, ದಾರಿದ್ರ್ಯ, ಜರಾ, ರೋಗ, ಮರಣಾದಿ ಸಕಲ ದುಃಖಗಳಿಗೆ ಆಸ್ಪದಗಳಾದ ಈ ಸಂಸಾರಿ ಜೀವರಲ್ಲಿ ಬೇರೆ ಬೇರೆ ಒಂದೊಂದು ರೂಪದಿಂದ ಪ್ರವೇಶಿಸಿ, ಇದ್ದರೆ, ಈ ದುಃಖಾದಿಗಳ ಸಂಬಂಧವನ್ನು ಆ ರೀತಿ ದೇವರು ಹೊಂದಲು ತಾತ್ಪರ್ಯವೇನು? ನಿತ್ಯಸುಖಸಂಪೂರ್ಣನು ನಿತ್ಯದುಃಖಾದಿಗಳನ್ನು ಅಪೇಕ್ಷಿಸುವಿದಿಲ್ಲವಷ್ಟೆ? ಆದುದರಿಂದ ಪೂರ್ಣನಾದ ಪರಮಾತ್ಮನು ಏಕೆ ಅಪೂರ್ಣರಾದ ಜೀವರಲ್ಲಿ ಬೇರೆ ಬೇರೆ ರೂಪದಿಂದ ಪ್ರವೇಶಿಸಿ ಅವರಿಂದ ಗುಣಕಾರ್ಯಗಳನ್ನು ಮಾಡಿಸಬೇಕು? ಈ ರೀತಿಯಾಗಿ ಚಿಂತನೆಗಳಿಂದ ನನ್ನ ಮನಸ್ಸು ತಾಪಪಡುತ್ತಿದೆ. ಆದುದರಿಂದ ನನ್ನ ಈ ಸಂಶಯಗಳನ್ನು ತಾವು ತತ್ವಜ್ಞಾನವನ್ನು ಸ್ಪಷ್ಟಮಾಡಿ ಪರಿಹರಿಸಬೇಕು ಎಂದನು.

## ಮೈತ್ರೇಯರು ನೀಡಿದ ಸಮಾಧಾನ

ಈ ರೀತಿ ಪ್ರಶ್ನೆಗಳನ್ನು ಮೈತ್ರೇಯರು ಕೇಳಿ ಮನಸ್ಸಿನಲ್ಲಿ ಪರಮಾತ್ಮನ ಪಾದಾರವಿಂದಗಳನ್ನು ಧ್ಯಾನಿಸಿ, ಸ್ಥಿರಬುದ್ಧಿಂದ ಗಂಭೀರಭಾವ ವುಳ್ಳವರಾದರೂ, ಸ್ವಲ್ಪ ನಗುಮುಖದಿಂದ ವಿದುರನಿಗೆ ಈ ರೀತಿ ಹೇಳಿದರು:-

ಶ್ರೀಪರಮಾತ್ಮನು, ದುಃಖ, ನಾಶಾದಿಗಳಿಂದ ಕೂಡಿದ ಪ್ರಾಕೃತ ಶರೀರಗಳನ್ನು ಪ್ರವೇಶಿಸಿದಾಗ್ಯೂ, ಸ್ವತಂತ್ರನೂ, ಪ್ರಕೃತಿಸಂಬಂಧ ರಹಿತನೂ, ನಿರ್ಲಿಪ್ತನೂ, ಆದುದರಿಂದ ದುಃಖಾದಿಗಳೂ, ನ್ಯೂನತೆಗಳೂ, ಮರಣಾದಿಗಳೂ ಪರಮಾತ್ಮನಿಗಿಲ್ಲ. ಅವು ದೇಹದಲ್ಲಿ ಅಧಿಷ್ಠಿತನಾದ ಜೀವನಿಗೇನೆ. ಐಶ್ವರ್ಯಪೂರ್ಣನೂ, ನಿತ್ಯಮುಕ್ತನೂ ಆದುದರಿಂದ ಪ್ರಾಕೃತಗುಣ ಸಂಬಂಧದಿಂದ ಉಂಟಾಗುವ ಕಾರ್ಪಣ್ಯಾದಿ ದೋಷಗಳು ದೇವರಿಗಿಲ್ಲ. ಗುಣಸಂಬಂಧಗಳಿಂದೊಡಗೂಡಿದ ಜಡ, ಚಿತ್ಪ್ರಕೃತಿಯು, ಅವಿದ್ಯಾ ಅಥವ ಮಾಯಾ ಎಂಬ ಹೆಸರುಳ್ಳ ಪರಮಾತ್ಮನ ಇಚ್ಛೆಯಿಂದ ಜೀವರನ್ನು ಬಂಧಿಸಿ, ದೇಹಾದಿ ಸಂಬಂಧ ಉಂಟುಮಾಡುವಳೇ ಹೊರತು, ಸ್ವಯಂ ತಾನೇ ಸರ್ವಶಕ್ತನಾದ ಪರಮಾತ್ಮಾಧಿ

ೀನಗಳಾದ ಕಾರಣ, ಪ್ರಕೃತ್ಯಾದಿಗಳು, ಹೇಗೆ ಕುಂಬಾರನಿಗೆ ಮಣ್ಣು ಮಡಿಕೆ ಮುಂತಾದವನ್ನು ಮಾಡಲು ಉಪಾದಾನ ಕಾರಣವೋ ಅದರಂತೆ, ಜಡಚೇತನ ಪ್ರಕೃತಿಗಳು ನಿತ್ಯಗಳಾದ ಕಾರಣ, ಪರಮಾತ್ಮಾಧೀನಗಳಾಗಿ ನಿರಂತರವೂ ಇರುವುದಾದ ಕಾರಣ, ಅವು ಸೃಷ್ಟಿಗೆ ಉಪಾದಾನ ಕಾರಣಗಳಾಗಿವೆಯೇ ಹೊರತು, ಪರಮಾತ್ಮನಿಗೆ ವಿರೋಧಗಳಲ್ಲ.

ಅಜ್ಞಾನಿಗಳು ಪ್ರಪಂಚವನ್ನು ಇಂದ್ರಜಾಲ ಸೃಷ್ಟಿ ಎಂದೂ, ಸ್ವಪ್ನದಲ್ಲಿ ತನ್ನ ಶಿರಚ್ಛೇದನಾದಿಗಳನ್ನು ಹೇಗೆ ಕಂಡರೂ ಎದ್ದ ನಂತರ ಸುಳ್ಳಾಗುವುದೋ ಹಾಗೆ, ಭ್ರಾಂತಿಯಿಂದ ನಿಜದಂತೆಯೂ, ಸಹಜವಾಗಿ ಸುಳ್ಳಾಗಿಯೂ ಸೃಷ್ಟಿಯು ಇರುತ್ತೆ ಎಂದು ಹೇಳುತ್ತಾರೆ. ಸೃಷ್ಟಿಮಾಡುವ ಪರಮಾತ್ಮನೂ, ಉಪಾದಾನ ಕಾರಣವಾದ ಜಡಚೇತನ ಪ್ರಕೃತಿಯೂ, ಅಂದರೆ ಜೀವ ಜಡ ಸಮೂಹಗಳೂ, ಮಾಯಾ ಶಬ್ದವಾಚ್ಯಳಾದ ಜಡಚೇತನ ಪ್ರಕೃತಿ ನಿಯಾಮಕಳಾದ ಲಕ್ಷ್ಮೀದೇವಿಯೂ, ಸತ್ಯರಾದ ಕಾರಣ, ಸತ್ಯವಾದ ಪದಾರ್ಥಗಳಿಂದ ನಿರ್ಮಿತವಾದ ಈ ಜಗತ್ತೂ, ಪ್ರಜೆಗಳೂ, ಸತ್ಯವಾದಾರೇ ಹೊರತು ಹೇಗೆ ಸುಳ್ಳಾಗುವರು?

ಶಾಸ್ತ್ರದೃಷ್ಟಿಯಿಂದ ಸ್ವಪ್ನವೂ ಸತ್ಯವಾದದ್ದೇ ಸುಳ್ಳಲ್ಲ. ಏಕೆಂದರೆ ಸ್ವಪ್ನವು ದೇವರ ಇಚ್ಛೆ ಭ್ರಾಂತಿಯಿಂದ ಜೀವನ ಅನೇಕ ಪೂರ್ವಜನ್ಮಗಳಲ್ಲಿ ಸತ್ಯವಾಗಿ ಕಂಡು ಅನುಭವಿಸಿದ ಪದಾರ್ಥಗಳೂ, ವಿಷಯಗಳೂ, ಅನಾದಿ ಭ್ರಾಂತಿಯಿಂದ ಸಂಸ್ಕಾರರೂಪವಾಗಿ, ವಾಸನಾಮಯವಾಗಿ ಜೀವನ ಮನಸ್ಸಿನಲ್ಲಿದ್ದದ್ದನ್ನೇ ಪುನಃ ಇವನಿಗೆ ಅನುಭವಕ್ಕೆ ಬರುವುದೆಂಬುದನ್ನು ಸೂಚಿಸುವುದಕ್ಕಾಗಿ, ಪರಮಾತ್ಮನಿಂದ ಸೃಷ್ಟಿಸಲ್ಪಟ್ಟು ಜೀವನಿಗೆ ಮನಸ್ಸಿನ ದ್ವಾರಾ ತೋರಿಸಲ್ಪಡುತ್ತವೆ, ಈ ಸ್ವಪ್ನದೃಷ್ಟ ಪದಾರ್ಥಗಳೂ, ಸ್ವಶಿರಚ್ಛೇದನಾದಿಗಳೂ, ಹಿಂದೆ ಸತ್ಯವಾಗಿ ನಡೆದು, ಮನಸ್ಸಿನಲ್ಲಿ ವಾಸನಾರೂಪದಿಂದ ಇದ್ದವುಗಳೇ. ಸ್ವಪ್ನದಲ್ಲಿ ಸೃಷ್ಟಿಸಲ್ಪಟ್ಟು ತೋರಿಸಿದಾಗ, ಜೀವನಿಗೆ ನಿಜವಾಗಿಯೂ ಅದರಿಂದ ಭಯ, ಕ್ಲೇಶಾದಿಗಳು ಆ ಕಾಲದಲ್ಲಿ ಅನುಭವಕ್ಕೆ ಬರುವವಾದ ಕಾರಣ, ಅವು ಸತ್ಯಗಳೇ ಹೊರತು ಸುಳ್ಳಲ್ಲ. ಅದರಂತೆ ಪ್ರಪಂಚವೂ ಸತ್ಯವಾದದ್ದೇ. ಭ್ರಾಂತಿಕಲ್ಪಿತವೂ, ಸುಳ್ಳಾದದ್ದೂ ಅಲ್ಲ.

ಹಾಗಾದರೆ ಅಜ್ಞಾನಿಗಳಿಗೆ ಏಕೆ ಸುಳ್ಳಾಗಿ ತೋರುತ್ತೆ? ಎಂದರೆ, ನಿರ್ಮಲವಾದ ನದಿಯ ನೀರಿನಲ್ಲಿ ಚಂದ್ರನ ಬಿಂಬವನ್ನು ನೋಡುತ್ತಿರುವ ಒಬ್ಬ ಅಜ್ಞಾನಿಯು ಹೇಗೆ ನೀರಲ್ಲಲುಗಾಡುವ ಚಂದ್ರಬಿಂಬವನ್ನು, ಚಂದ್ರನು ಅಲುಗಾಡುತ್ತಿದ್ದಾನೆ ಎಂದು ತಿಳಿಯುವನೋ, ಅದರಂತೆ ಅಜ್ಞಾನಿಯು, ಸ್ವಪ್ನವನ್ನೂ, ಪ್ರಪಂಚವನ್ನೂ ಸುಳ್ಳೆಂದೂ, ಮಾಯೆ ಎಂದೂ ತಿಳಿಯುವನು. ಜ್ಞಾನಿಯು ಚಂದ್ರಬಿಂಬವು ಸ್ಥಿರವಾಗಿದೆಯೆಂದೂ, ಅಲುಗಾಡುವುದು ನದಿಯ ಹರಿಯುವ ನೀರೆಂದೂ ಸಹಜವಾಗಿ ಹೇಗೆ

ತಿಳಿಯುತ್ತಾನೋ, ಹಾಗೆಯೇ ಸ್ವಪ್ನವನ್ನೂ, ಪ್ರಪಂಚವನ್ನೂ ಸತ್ಯಗಳೆಂದೇ ಸರಿಯಾಗಿ ತಿಳಿಯುತ್ತಾನೆ.

ಅಜ್ಞಾನಿಯ ಭ್ರಾಂತಿಜ್ಞಾನಕ್ಕೆ ಅವನು ನಾನೇ ಕರ್ತಾ, ನಾನೇ ಸುಖೀ, ನಾನೇ ದುಃಖೀ ಎಂಬ ಅವಿದ್ಯೆ ಎಂಬ ಭಾವನೆಯೇ ಕಾರಣವಾಗುತ್ತದೆ. ಈ ಅವಿದ್ಯೆಯೂ, ಅಜ್ಞಾನವೂ, ನಾಶವಾಗಬೇಕಾದರೆ, ಪರಮಾತ್ಮನಲ್ಲಿ ಭಕ್ತಿಮಾಡಿ, ಗುರುಮುಖದಿಂದ ಶಾಸ್ತ್ರಶ್ರವಣಾದಿ ಜನ್ಯಜ್ಞಾನದಿಂದ, ಪರಮಾತ್ಮನೇ ಸ್ವತಂತ್ರ, ಪರಮಾತ್ಮನೇ ಕರ್ತಾ, ನಾನು ಅವನ ಅಧೀನನೂ, ಅವನಿಂದ ಪೋಷಿತನೂ ಆಗಿರುತ್ತೇನೆ. ಅವನ ಪ್ರಸಾದದಿಂದ ಶಾಶ್ವತಸುಖವನ್ನೂ ಪಡೆಯುತ್ತೇನೆಂಬ ದೃಢವಾದ ನಂಬಿಕೆ ಭ್ರಾಂತಿಯಿಂದ, ಪರಮಾತ್ಮನ ಉಪಾಸನೆ ಮಾಡಬೇಕು.

ಹೀಗೆ ಸಂಸಾರದಿಂದ ಉಂಟಾಗುವ ಸಕಲ ಕ್ಲೇಶಪರಿಹಾರಕನು ದೇವರೆಂದು ನಂಬಿ, ಭಕ್ತಿ ಜ್ಞಾನ ಉಪಾಸನೆಗಳಿಂದ ದೇವರ ಅನುಗ್ರಹ ಪಡೆದಿರುವ ಅಪರೋಕ್ಷಜ್ಞಾನಿಗಳಿಗೇ, ಈ ಶರೀರಸಂಬಂಧ, ಪ್ರಕೃತಿಸಂಬಂಧದಿಂದುಂಟಾಗುವ ಕ್ಲೇಶಗಳು ಉಂಟಾಗುವುದಿಲ್ಲವೆಂದ ಮೇಲೆ, ದೇವರ ಭಕ್ತರನ್ನೇ ತೊಂದರೆ ಪಡಿಸಲಾರದ ಪ್ರಾಕೃತಗುಣಸಂಬಂಧವು ದೇವರಿಗೆ ಹೇಗೆ ತಾನೇ ಉಂಟಾದೀತು. ಇದು ಶಾಸ್ತ್ರದೃಷ್ಟಿ ಭ್ರಾಂತಿಯಿಂದಲೂ, ಅಪರೋಕ್ಷಜ್ಞಾನಿಗಳ ಸ್ವಾನುಭವದಿಂದಲೂ ಕಂಡಿದ್ದಾಗಿರುತ್ತದೆ. ಆದುದರಿಂದ ಪರಮಾತ್ಮನು ಸರ್ವದೋಷದೂರ, ನಿರ್ದುಃಖ, ಸುಖಾನಂದಪೂರ್ಣ, ನಿರತಿಶಯಜ್ಞಾನಪ್ರಕಾಶರೂಪನೆಂದೂ, ಸರ್ವಜೀವರಲ್ಲಿರುವ ಬೇರೆ ಬೇರೆ ಭಗವದ್ರೂಪಗಳೂ ಪರಮಾತ್ಮನಿಂದ ಅಭಿನ್ನಗಳಾದ ಕಾರಣ ದುಃಖಾಸ್ಪೃಷ್ಟಗಳೆಂದು ತಿಳಿದು, ಜ್ಞಾನಿಗಳು ಈ ಜಗತ್ಸೃಷ್ಟ್ಯಾದಿ ವ್ಯಾಪಾರಗಳಿಂದ ದೇವರಿಗೆ ಏನೂ ಹಾನಿಯಾಗಲೀ, ಸುಖಾಪೇಕ್ಷೆಯಾಗಲೀ, ನ್ಯೂನತೆಯಾಗಲೀ ಇಲ್ಲವೆಂದು ಭಾವಿಸಿ ಮನೋಕಶ್ಮಲ ರಹಿತರಾಗುವರು. ಇಂದ್ರಿಯವಿಷಯೋಪಭೋಗೇಚ್ಛೆಯು ನಿವೃತ್ತವಾಗಿ, ಪರಮಾತ್ಮನಲ್ಲಿ ಭಕ್ತಿಯೋಗವು ಉಂಟಾದರೆ, ಆ ಪರಮಾತ್ಮನಲ್ಲಿ ಸನ್ನಿಹಿತವಾದ ಮನಸ್ಸಿಗೆ, ಸರ್ವಕ್ಲೇಶ ಪರಿಹಾರವಾಗಿ, ಉತ್ಕೃಷ್ಟ ಶಾಂತಿಯೂ ಉಂಟಾಗುವದು ಎಂದರು.

ಆಗ ವಿದುರನು, ಎಲೈ ಮಹಾತ್ಮರಾದ ಮೈತ್ರೇಯರೇ! ನಿಮ್ಮೀ ಉಪದೇಶದಿಂದ ನನ್ನ ಸಂಶಯಗಳೆಲ್ಲವೂ ಪರಿಹಾರವಾಗಿ, ನನಗೆ ನಿಮ್ಮ ಕೃಪೆ ಭ್ರಾಂತಿಯಿಂದ ನಿಶ್ಚಯಜ್ಞಾನ ಉಂಟಾಯಿತು. ಪರಮಾತ್ಮತತ್ವ ವಿಷಯದಲ್ಲಿ ಬ್ರಹ್ಮಸಾಕ್ಷಾತ್ಕಾರ ಜ್ಞಾನವುಳ್ಳ ನಿಮ್ಮಂತಹವರಿಗೇ ನಿಶ್ಚಯಜ್ಞಾನ ಬೋಧನಾಶಕ್ತಿ ಇರುತ್ತದೆ. ಬ್ರಹ್ಮಸೃಷ್ಟಿಯಲ್ಲಿ ಕೇವಲ ಮೂಢನಿಗೆ ಕೇವಲ ನಿಶ್ಚಿಂತೆ ಭ್ರಾಂತಿಯಿಂದ ಸುಖವೂ, ಪರಮಜ್ಞಾನಿಗಳಿಗೆ ನಿಶ್ಚಿತ ತತ್ವಜ್ಞಾನದಿಂದ ಸುಖವೂ ಉಂಟಾಗುತ್ತದೆ. ಇವೆರಡೂ ಇಲ್ಲದ ಮಧ್ಯಮ ಜ್ಞಾನಿಗಳಾದ ನನ್ನಂಥವರಿಗೇ ಉಭಯ ಜ್ಞಾನವೆಂಬ ಸಂಶಯ ಜ್ಞಾನವು ಉಂಟಾಗುತ್ತದೆ.

ಇಂತಹ ಸಂಶಯಜ್ಞಾನವನ್ನೂ ಕೂಡ ನಾನು ನಿಮ್ಮ ಪಾದಸೇವೆಯಿಂದ ಕಳೆದುಕೊಂಡು, ನಿಶ್ಚಯಜ್ಞಾನವನ್ನು ಅವಲಂಬಿಸಿರುತ್ತೇನೆ.

ಸರ್ವದುಃಖ ಪರಿಹಾರಕಗಳಾದ ಶ್ರೀಪರಮಾತ್ಮನ ಪಾದಾರವಿಂದಗಳಲ್ಲಿ ಸೇವಾನಿರತರಾದ ನೀವು ಲಕ್ಷ್ಮೀಸಮೇತನಾದ ಮಧುವೈರಿ ಮುಕುಂದನನ್ನೇ ಅತಿಶಯ ಭಕ್ತಿಪ್ರೇಮಗಳಿಂದ ನಿರಂತರ ಕೂಡಿದವರಾಗಿ ಆರಾಧಿಸಿ ನಿರ್ದುಃಖರಾಗಿರುತ್ತೀರಿ. ಸಂಶಯರಹಿತರಾಗಿರುತ್ತೀರಿ. ಅಲ್ಪತಪಸ್ಸುಳ್ಳವರಿಗೆ ಪರಮಾತ್ಮನನ್ನು ನಿರಂತರ ಸೇವಿಸುವುದು ಸಾಧ್ಯವಿಲ್ಲ. ನೀವು ಇದ್ದ ಸ್ಥಳದಲ್ಲಿ ಪರಮಾತ್ಮನ ಮಹಿಮೆಗಳು ಯಾವಾಗಲೂ ಹೇಳಲ್ಪಡುತಿರುತ್ತವೆ.

ತಾವು ಹಿಂದೆ ಹೇಳಿದಂತೆ, ಪುರುಷರೂಪ ಪರಮಾತ್ಮನು ಮೊದಲು ಮಹತ್ತತ್ವವನ್ನೂ, ಅವುಗಳ ವಿಕಾರರೂಪಗಳಿಂದ ಅಹಂಕಾರಾದಿ ಎಲ್ಲಾ ತತ್ವಗಳನ್ನೂ, ಅವುಗಳಿಂದ ಬ್ರಹ್ಮಶರೀರವನ್ನೂ ಸೃಷ್ಟಿಸಿ ಆ ಬ್ರಹ್ಮಶರೀರದಲ್ಲಿ ಪ್ರವೇಶಿಸಿದನು. ಆ ಪುರುಷನನ್ನೇ ಸಹಸ್ರಶೀರ್ಷ, ಬಾಹು ಪಾದಗಳುಳ್ಳ ಮೊದಲನೆಯ ಪುರುಷಾವತಾರನೆಂದೂ, ಅವನ ಅವಯವಗಳಲ್ಲೇ ಸಕಲಸೃಷ್ಟಿಗೆ ಬರಬೇಕಾದ ಚರಾಚರಪ್ರಪಂಚವು, ವಿಕಾರಗಳ ಸಹಿತವಾಗಿ ಆಶ್ರಯಹೊಂದಿವೆ ಎಂದೂ ಹೇಳಿದಿರಿ. ಆ ಬ್ರಹ್ಮಶರೀರದಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೃಕಲ, ಕೂರ್ಮ, ದೇವದತ್ತ, ಧನಂಜಯ ಎಂಬ ಹತ್ತುವಿಧ ಪ್ರಾಣಗಳು ಓಜಸ್ಸಹೋಬಲವೆಂಬ ಮೂರು ಗುಣಗಳಿಂದ ಕೂಡಿರುವುವೆಂದು ಹೇಳಿದಿರಲ್ಲಾ, ನನಗೆ ದಶಪ್ರಾಣರ ವಿಭೂತಿ ಎಂದರೆ ಸ್ವರೂಪಾ ಐಶ್ವರ್ಯವನ್ನು ಹೇಳಿರಿ.

ಚಾತುರ್ವರ್ಣಗಳ ಲಕ್ಷಣಗಳನ್ನೂ, ಚಾತುರ್ವರ್ಣದಲ್ಲಿ ಹುಟ್ಟಿದವರ ಮತ್ತು ಅವರ ವಂಶಾವಳಿ, ಆಪ್ತ, ಬಂಧು ಮಿತ್ರರ ವಿಭೂತಿರೂಪಗಳನ್ನು ನನಗೆ ತಿಳಿಯುವಂತೆ ಹೇಳಿ. ವಿಚಿತ್ರ ಆಕೃತಿ, ಸ್ವಭಾವಗಳುಳ್ಳ ಜೀವರನ್ನು ಯಾವ ಪ್ರಜಾಪತಿನಾಮಕ ಪರಮಾತ್ಮನು ಸೃಷ್ಟಿಸಿ ಧರಿಸಿರುತ್ತಾನೋ, ಅವನು ಎಷ್ಟು ಜನರನ್ನು ಪ್ರಜಾಧಿಪತಿಗಳನ್ನಾಗಿ ನಿಯಮಿಸಿದನು? ಅವರ್ಯಾರ್ಯಾರು? ಸರ್ಗ, ಅನುಸರ್ಗ, ಮನುಗಳು, ಮನ್ವಂತರಗಳು, ಮನುಗಳ ವಂಶಗಳನ್ನೂ, ಅವರವರ ಚರಿತ್ರೆಗಳನ್ನೂ, ಭೂಮಿಯ ಮೇಲಿನ, ಕೆಳಗಿನ ಲೋಕಗಳನ್ನೂ, ಅವುಗಳ ಪರಿಮಾಣಗಳನ್ನೂ, ಅವುಗಳಿರುವ ಸ್ಥಾನಗಳನ್ನೂ ವರ್ಣಿಸಿರಿ.

ದೇವ, ಮಾನುಷ, ತಿರ್ಯಕ್, ಪ್ರಾಣಿಗಳ ಸಮೂಹಗಳ ವಿವರವನ್ನೂ, ಮಹಾವೃಕ್ಷ, ಜಲಚರ, ಖೇಚರ ಪ್ರಾಣಿಗಳ ಉತ್ಪತ್ತಿ ಕ್ರಮವನ್ನೂ, ಸ್ವೇದಜ, ಉದ್ಭಿಜ, ಅಂಡಜ, ಜರಾಯುಜ ಪ್ರಾಣಿಗಳ ಸೃಷ್ಟಿಯನ್ನೂ, ವರ್ಣನೆಯನ್ನು, ಪ್ರಪಂಚ ಸೃಷ್ಟಿಕರ್ತನಾದ ಶ್ರೀನಿವಾಸನ ಅವತಾರಗಳನ್ನೂ,

ಗುಣಗಳನ್ನೂ, ಅದ್ಭುತ ಪರಾಕ್ರಮವನ್ನೂ, ವರ್ಣಾಶ್ರಮಗಳ ವಿಭಾಗಗಳನ್ನೂ, ಆ ಆಶ್ರಮಸ್ಥರ ರೂಪ, ಶೀಲಾದಿ ಲಕ್ಷಣಗಳನ್ನೂ, ಋಷಿಗಳ ಉತ್ಪತ್ತಿ, ಅವರ ಕಾರ್ಯಗಳು; ವೇದವಿಭಾಗಾದಿಗಳು, ವಿವಿಧ ಯಜ್ಞಗಳ ಸ್ವರೂಪಗಳು, ಯೋಗಮಾರ್ಗಗಳು, ನಿಷ್ಕಾಮಕರ್ಮ, ಸಾಂಖ್ಯಯೋಗ, ತಂತ್ರಗಳು, ವಾರ್ತೆಗಳು, ಪಾಷಂಡಿಗಳ ಮತಗಳಿಂದುಂಟಾದ ಬುದ್ಧಿವೈಷಮ್ಯ ಮತ್ತು ಪ್ರತಿಲೋಮಗಳನ್ನೂ, ಬೇರೆ ಬೇರೆ ಜೀವರ ಉತ್ಕ್ರಮಣ ರೀತಿಯನ್ನೂ, ಅವರವರ ಗುಣಕರ್ಮಗಳನ್ನೂ, ಧರ್ಮಾರ್ಥ ಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಿಗೆ ಸಾಧನಗಳನ್ನೂ, ದಂಡನೀತಿ, ಶೃತಿಗನುಸರಿಸಿದ ಧರ್ಮಮಾರ್ಗಗಳನ್ನೂ, ಶ್ರಾದ್ಧವಿಧಿಯನ್ನೂ, ಪಿತೃಗಳ ಸೃಷ್ಟಿಯನ್ನೂ, ಗ್ರಹನಕ್ಷತ್ರ ತಾರಾಗಣಗಳ, ಕಾಲಗತಿಗಳನ್ನೂ; ದಾನ, ತಪಸ್ಸು, ಇಷ್ಟಾಪೂರ್ತಗಳೆಂಬ ಯಾಗಗಳು, ಇವುಗಳ ಫಲಗಳನ್ನೂ, ಪ್ರವಾಸಿಗಳ ಧರ್ಮ, ಆಪದ್ಧರ್ಮಗಳನ್ನೂ, ಒಟ್ಟಿನಲ್ಲಿ ಯಾವ ಯಾವ ಧರ್ಮಾಚರಣೆಯಿಂದ ಶ್ರೀಜನಾರ್ಧನನಾಮಕ ಪರಮಾತ್ಮನು ಪ್ರೀತನಾಗುವನೋ ಅವುಗಳನ್ನೂ, ಶಿಷ್ಯನೂ, ಶ್ರದ್ಧೆಯುಳ್ಳವನೂ, ನಿಮ್ಮನ್ನನ್ನುಸರಿಸಿರುವವನೂ, ಅದ ನನಗೆ, ನಿಮ್ಮ ದಯೆಗೆ ನಾನು ಪಾತ್ರನಾಗಿದ್ದರೆ ಅನುಗ್ರಹಿಸಿ ತಿಳಿಸಿರಿ.

ಶಿಷ್ಯರಲ್ಲಿ ಪುತ್ರವಾತ್ಸಲ್ಯ ವುಳ್ಳ ಗುರುಗಳು, ಶಿಷ್ಯರು ಕೇಳದೇ ಇದ್ದ ಇತರ ತಿಳಿಯಬೇಕಾದ ವಿಷಯಗಳನ್ನೂ ಕೂಡ, ಶಿಷ್ಯರ ಉದ್ಧಾರಾರ್ಥವಾಗಿ ಕೃಪೆಯಿಂದ ತಾವಾಗಿಯೇ ಹೇಳುತ್ತಾರೆ. ಅದರಂತೆ ನನಗೂ ಎಲ್ಲಾ ತಿಳಿಯಬೇಕಾದ ವಿಚಾರಗಳನ್ನೂ ಹೇಳಿರಿ! ತತ್ವಗಳನ್ನು ಎಷ್ಟು ವಿಧವಾಗಿ, ಯಾವ್ಯಾವ ರೀತಿ ಪರಿಗಣಿಸುತ್ತಾರೆ? ಆ ತತ್ವಗಳನ್ನು ಪ್ರವೇಶಿಸಿದವರುಗಳಲ್ಲಿ ಸರ್ವದಾ ಜಾಗ್ರತರಾಗಿ, ಶಕ್ತರಾಗಿರುವರು ಯಾರು? ಉದಾಸೀನರಾಗಿ, ಸುಪ್ತರಂತೆ ಇರುವವರು ಯಾರು? ಪುರುಷನು ತತ್ವಗಳ ಪೈಕಿ ಎಷ್ಟನೆಯವನು? ಅವನ ಸ್ಥಾನ ಮತ್ತು ಸ್ವರೂಪಗಳೇನು? ಗುರುಶಿಷ್ಯರ ಸಂವಾದರೂಪವಾದ ಶಾಸ್ತ್ರಜ್ಞಾನದ ಲಕ್ಷಣವೇನು? ಪ್ರಯೋಜನವೇನು?

ವೇದಾನುಸಾರವಾದ ನಿಶ್ಚಯಜ್ಞಾನವನ್ನು ಗುರೂಪದೇಶದಿಂದ ಹೊಂದುವುದಕ್ಕೆ ಬೇಕಾದ ಸಾಧನೋಪಾಯಗಳ್ಯಾವುವು? ಗುರುಶುಶ್ರೂಷಾ, ಶ್ರವಣ ಮನನಾದಿ ಸಾಧನೆಗಳನ್ನು ಮಾಡಿಕೊಳ್ಳದೇ ಇರುವ ಪುರುಷರಿಗೆ ಜ್ಞಾನಭಕ್ತಿವೈರಾಗ್ಯಗಳು, ಅಪ್ರಯತ್ನದಿಂದ, ತನ್ನಷ್ಟಕ್ಕೆ ತಾನೇ ಉಂಟಾಗುವುದಿಲ್ಲ. ಅದುದರಿಂದ ಅಜ್ಞಾನಾಖ್ಯ ಕತ್ತಲೆಯಲ್ಲಿ ಮುಳುಗಿ, ಕಷ್ಟದಲ್ಲಿ ಸಿಕ್ಕಿರುವ ನಾನು, ಆಪದ್ರಕ್ಷಕರಾದ ಮಿತ್ರರಂತೆಯೂ, ಅಜ್ಞಾನಾಡ್ಯಿ ಕತ್ತಲೆಯನ್ನು ನಿರ್ಮೂಲಗೊಳಿಸುವ ಜ್ಞಾನಾಖ್ಯ ಸೂರ್ಯರಂತೆಯೂ ಇರುವ ತಮ್ಮನ್ನು ಆಶ್ರಯಿಸಿ ಬೇಡುತ್ತಿದ್ದೇನೆ! ನನಗೆ ಈ ಎಲ್ಲಾ ವಿಚಾರಗಳನ್ನೂ ತಿಳಿಸಬೇಕು. ಸರ್ವ ದಾನ, ತಪಸ್ಸು, ಯಜ್ಞ, ಧರ್ಮಗಳೂ, ಆರ್ತರಿಗೆ ಅಭಯದಾನ ಮಾಡುವುದರ ಏಕದೇಶ ಫಲವನ್ನೂ

ಕೊಡಲಾರವು. ಆದುದರಿಂದ ಜ್ಞಾನಾರ್ತನಾದ ನನಗೆ ಉಪದೇಶರೂಪವಾದ ಅಭಯವನ್ನು ಕೊಟ್ಟು ರಕ್ಷಿಸಿರಿ, ಎಂದನು.

ಈ ರೀತಿ ಪ್ರಶ್ನಿಸಲ್ಪಟ್ಟ ಮೈತ್ರೇಯರು ಮನಸ್ಸಿನಲ್ಲಿ ಸಂತೋಷಪಟ್ಟು, ಈ ಪ್ರಶ್ನೆಗಳ ಸಮೂಹಗಳು, ಭಾಗವತ ಪುರಾಣ ಪ್ರವಚನಕ್ಕೇ ದಾರಿತೋರುವವುಗಳಾಗಿವೆ ಎಂದು ಭಾವಿಸಿ, ತಾವು ಶ್ರೀಕೃಷ್ಣನಿಂದ ಶ್ರವಣ ಮಾಡಿದ ಸರ್ವ ವೇದರಹಸ್ಯ ಪ್ರಮೇಯಗಳಿಂದ ಕೂಡಿದ ಭಾಗವತವನ್ನು ಹೇಳಲು ಅನುವಾದರು, ಎಂದು ಶುಕರು ಪರೀಕ್ಷಿದ್ರಾಜನಿಗೆ ಹೇಳಿದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಎಂಟನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

## अथ नवमोऽध्यायः

**मैत्रेय उवाच**

सत्सेवनीयो बत पूरुवंशो यल्लोकपालो भगवत्प्रधानः ।
बभूविथेहाजितकीर्तिमालां पदे पदे नूतनयस्यभीक्ष्णम् ॥ १ ॥

सोऽहं नृणां क्षुल्लसुखाय दुःखं महद् गतानां विरमाय तुभ्यम् ।
प्रवर्तये भागवतं पुराणं यदाह साक्षाद् भगवान् ऋषिभ्यः ॥ २ ॥

आसीनमुर्व्यां भगवन्तमाद्यं सङ्कर्षणं देवमकुण्ठसत्वम् ।
विवित्सवस्तत्त्वमतः परस्य कुमारमुख्या मुनयोऽन्वपृच्छन् ॥ ३ ॥

स्वमेव धिष्ण्यं बहुमानयन्तं यं वासुदेवाभिधमामनन्ति ।
प्रत्यक्धृताक्षाम्बुजकोषमीषदुन्मीलयन्तं विबुधोदयाय ॥ ४ ॥

स्वर्धुन्युदारैः स्वजटाकलापैरुपस्पृशन्तश्चरणोपधानम् ।
पद्मं यदर्चन्त्यहिराजकन्याः सप्रेम नानाबलिभिर्वरार्हाः ॥ ५ ॥

मुहुर्गृणन्तो वचसाऽनुरागस्खलत्पदेनास्य कृतानि तज्ज्ञाः ।
किरीटसाहस्रमणिप्रवेकप्रद्योतितोद्दामफणासहस्रम् ॥ ६ ॥

प्रोक्तं किलैतद् भगवत्तमेन निवृत्तिधर्माभिरताय तेन ।
सनत्कुमाराय स चाह पृष्टः सांख्यायनायाङ्गधृतव्रताय ॥ ७ ॥

सांख्यायनः पारमहंस्यमुख्यो विवक्षमाणो भगवद्विभूतीः ।

जगाद सोऽस्मद्गुरवेऽन्वितायपराशरायाथ बृहस्पतेश्च ॥ ८ ॥
प्रोवाच मह्यं स दयालुरुक्तो मुनिः पुलस्त्येन पुराणमाद्यम् ।
सोऽहं तवैतत् कथयामि वत्स श्रद्धालवे नित्यमनुव्रताय ॥ ९ ॥
उदप्लुतं विश्वमिदं तदासीद्यन्निद्रया मीलितदृ न्यमीलयत् ।
अहीन्द्रतल्पेऽधिशयान एकः कृतक्षणः स्वात्मरतावनीहः ॥ १० ॥
सोऽन्तःशरीरेऽर्पितभूतसूक्ष्मः कालात्मिकां शक्तिमुदीरयाणः ।
उवास तस्मिन् सलिले पदे स्वे यथाऽनलो दारुणि रुद्धवीर्यः ॥ ११ ॥
चतुर्युगानां च सहस्रमप्सु स्वपंस्तयोदीरितया स्वशक्त्या ।
कालाख्ययाऽसादितकर्मतन्त्रो लोकानपीमान् ददृशे स्वदेहे ॥ १२ ॥
तस्यात्मसूक्ष्माभिनिविष्टदृष्टेरन्तर्गतोऽर्थो रजसाऽतनीयान् ।
गुणेन कालानुगतेन विद्धः शुष्यंस्तदाऽभिद्यत नाभिदेशात् ॥ १३ ॥
स पद्मकोषः सहसोदतिष्ठत् कालेन कर्मप्रतिबोधितेन ।
स्वरोचिषा तत् सलिलं विशालं विद्योतयन्नर्क इवात्मयोनिः ॥ १४ ॥
तल्लोकपद्मं स उ एव विष्णुः प्रावीविशत् सर्वगुणावभासम् ।
तस्मिन् स्वयं वेदमयो विधाता स्वयम्भुवं यं स्म वदन्ति सोऽभूत् ॥ १५ ॥
तस्यां स चाम्भोरुहकर्णिकायामवस्थितो लोकमपश्यमानः ।
परिक्रमन् व्योम्नि विवृत्तनेत्रश्चत्वारि लेभेऽनुदिशं मुखानि ॥ १६ ॥
तस्माद् युगान्तश्वसनावघूर्णमहोर्मिचक्रात् सलिलाद् विरूढम् ।
अपाश्रितः कञ्जमु लोकतन्त्रं नात्मानमद्धाऽविददादिदेवः ॥ १७ ॥
क एष योऽसावहमब्जपृष्ठ एतत् कुतो वाऽब्जमनन्यदप्सु ।
अस्ति ह्यधस्तादिह किञ्चनैतदधिष्ठितं यत्र सताऽनुभाव्यम् ॥ १८ ॥
स इत्थमुद् वीक्ष्य तदब्जनालनालीभिरन्तर्जलमाविवेश ।
नार्वाग्गतस्तत्खरनालनालीः स वै विचिन्वंस्तदविन्दताजः ॥ १९ ॥
तमस्यपारे विदुरात्मसर्गं विचिन्वतोऽभूत् सुमहांस्त्रिनेमिः ।

यो देहभाजां भयमीरयाणः  परिक्षिणोत्यायुरजस्य हेतिः ॥ २० ॥

ततो निवृत्याप्रतिलब्धकाष्ठः  स्वधिष्ण्यमास्थाय पुनः स देवः ।
शनैर्जितश्वासनिवृत्तचित्तो न्यषीददारूढसमाधियोगः ॥ २१ ॥

कालेन सोऽजः पुरुषायुषाऽभिप्रवृद्धयोगेन विरूढबोधः ।
स्वयं तदन्तर्हृदयेऽवभातमपश्यतापश्यत यन्न पूर्वम् ॥ २२ ॥

मृणालगौरायतशेषभोगपर्यङ्क एकं पुरुषं शयानम् ।
फणासहस्रायुतमूर्धरत्नद्युभिर्हतध्वान्तयुगान्ततोये ॥ २३ ॥

प्रेक्षां क्षिपन्तं हरितोपलाद्रेः  सन्ध्याभ्रनीवेरुरुरुक्ममूधर्नः ।
रत्नोदधेरोषधिसौमनस्यवनस्रजो वेणुभुजाङ्घ्रिपाङ्घ्रेः ॥ २४ ॥

आयामतो विस्तरतः समानदेहेन लोकत्रयसंग्रहेण ।
विचित्रदिव्याभरणांशुकानां कृतश्रियोपाश्रितदिव्यवेषम् ॥ २५ ॥

पुंसां स्वकामाय विविक्तमार्गैरभ्यर्चतां कामदुधाङ्घ्रिपद्मम् ।
प्रदर्शयन्तं कृपया नखेन्दुमयूखभिन्नाङ्गुलिचारुपत्रम् ॥ २६ ॥

मुखेन लोकार्तिहरस्मितेन परिस्फुरत्कुण्डलमण्डितेन ।
शोणायितेनाधरबिम्बभासा प्रत्यर्हयन्तं सुनसेन सुभ्र्वा ॥ २७ ॥

कदम्बकिञ्जल्कपिशङ्गवाससा स्वलङ्कृतं मेखलया नितम्बे ।
हारेण चानन्तधनेन वत्स श्रीवत्सवक्षस्थलवल्लभेन ॥ २८ ॥

परार्ध्यकेयूरमणिप्रवेकपर्यस्तदोर्दण्डसहस्रशाखम् ।
अव्यक्तमूलं भुवनाङ्घ्रिपेन्द्रमहीन्द्रभोगैरधिवीतवल्कम् ॥ २९ ॥

चराचरौको भगवन्महीध्रमहीन्द्रबन्धुं सलिलोपगूढम् ।
किरीटसाहस्रहिरण्यशृङ्गमाविर्भवत्कौस्तुभरत्नगर्भम् ॥ ३० ॥

निवीतमाम्नायमधुव्रताश्रयस्वकीर्तिमय्या वनमालया हरिम् ।
सूर्येन्दुवाय्वग्न्यगमत्रिधामभिः  परिक्रमत्प्राधनिकैर्दुरासदम् ॥ ३१ ॥

तर्ह्येव तन्नाभिसरःसरोजमात्मानमम्भः श्वसनं वियच्च ।

दद‍र्श देवो जगतो विधाता नातः परं लोकविसर्गदृष्टिः ॥ ३२ ॥
स्वकर्मबीजं रजसोपरक्तः प्रजाः सिसृक्षन्नियदेव दृष्ट्वा ।
अस्तौद् विसर्गाभिमुखस्तमीशमव्यक्तवर्त्मन्यभिवेशितात्मा ॥ ३३ ॥

## ॥ इति श्रीमद्भागवते (तृतीयस्कन्धे(*3) नवमोऽध्यायः ॥

**॥ ಒಂಭತ್ತನೆಯ ಅಧ್ಯಾಯ ॥**

## ಬ್ರಹ್ಮದೇವರ ಉತ್ಪತ್ತಿಕ್ರಮ

ಈ ಅಧ್ಯಾಯದಲ್ಲಿ ಸರ್ವಜೀವೋತ್ತಮರಾದ ಹಿರಣ್ಯಗರ್ಭನಾಮಕ ಬ್ರಹ್ಮದೇವರ ಉತ್ಪತ್ತಿಕ್ರಮವನ್ನು ಹೇಳುವವರಾಗಿ ಅದರಿಂದ ಬ್ರಹ್ಮದೇವರನ್ನೂ ಸೃಷ್ಟಿಸಿದ ಶ್ರೀಪರಮಾತ್ಮನ ಸರ್ವೋತ್ತಮತ್ವವು ಪ್ರತಿಪಾದಿಸಲ್ಪಟ್ಟು, ಮೋಕ್ಷಾಪೇಕ್ಷಿಗಳು ಪ್ರಯತ್ನಪೂರ್ವಕವಾಗಿ ಹರಿಸರ್ವೋತ್ತಮತ್ವ ಜ್ಞಾನವನ್ನು ತಮ್ಮ ಸಕಲಶ್ರೇಯಸ್ಸಿಗಾಗಿ ಪಡೆಯತಕ್ಕದೆಂದು ನಿರೂಪಿಸುತ್ತಾರೆ:-

ವಿದುರನ ಪ್ರಶ್ನೆಗಳಿಗೆ ಉತ್ತರವಾಗಿ ಶ್ರೀಮದ್ಭಾಗವತವೆಂಬ ವೇದಾರ್ಥಸಾರಜ್ಞಾನವನ್ನು ಹೇಳುವೆನೆಂದು ಮೈತ್ರೇಯರು ಹಿಂದೆ ನಿರೂಪಿಸಿದ್ದರಷ್ಟೆ? ಈಗ, ತಮಗೆ ಶ್ರೀಕೃಷ್ಣನು ಉಪದೇಶಿಸಿದ ರೀತಿಯಲ್ಲಿ ವಿದುರನಿಗೆ ಭಾಗವತ ಉತ್ಪತ್ತಿಕ್ರಮವನ್ನು, ವಿದುರನ ಪ್ರಶ್ನೆಗಳ ಪ್ರಶಂಸಾಪೂರ್ವಕವಾಗಿ ಹೇಳುತ್ತಾರೆ.

ಎಲೈ! ವಿದುರನೆ! ನೀನು ನಿನ್ನ ಪ್ರಶ್ನೆಗಳಿಂದ, ಯಾವ ಸಕಲ ಸಜ್ಜನರಿಂದ ಮಾನ್ಯವಾದ ಪುರುವಂಶದಲ್ಲಿ ಜನ್ಮಾದಿರಹಿತನೂ ಜಗಜ್ಜನ್ಮಾದಿಕಾರಣನಾದ ಶ್ರೀಕೃಷ್ಣನೇ, ಪ್ರಧಾನವಾಗಿ ಅವತರಿಸಿದನೋ, ಆ ಯಾವ ಶ್ರೀಕೃಷ್ಣನ ಪರಮಮಂಗಳಚರಿತ್ರೆಯು, ಲೋಕಕ್ಕೇ ಮಂಗಳಪ್ರದವೋ, ಕೇಳಲು ಕಿವಿಗಳಿಗೆ ಆನಂದಪ್ರದಗಳೋ, ಶ್ರವಣಮಾತ್ರದಿಂದ ಉತ್ತಮಜ್ಞಾನವನ್ನು, ಸಂಸಾರದಲ್ಲಿ ಬಿದ್ದು ದುಃಖಿಸುವ ಜನರಿಗೆ ಕೊಡತಕ್ಕದ್ದೋ, ಅಂತಹ ಚರಿತ್ರೆಯನ್ನು ನನ್ನಿಂದ ಹೇಳಿಸಲು ಕಾರಣಗಳಾಗಿವೆಯಾದ್ದರಿಂದ, ನನಗೆ ಬಹು ಸಂತೋಷವಾಗಿರುತ್ತೆ. ನೀನೂ ಆ ಶ್ರೀಕೃಷ್ಣನ ವಂಶದಲ್ಲಿಯೇ ಯಮಾಂಶನಾದ ಅವತಾರ ಪುರುಷನಾದ್ದರಿಂದ, ಭೂತದಯಾಪರನಾಗಿ, ಲೋಕದಲ್ಲಿನ ಉತ್ತಮ ಜ್ಞಾನವು ಉಂಟಾಗಲೆಂದು, ಈ ರೀತಿ ನನ್ನಿಂದ ಲೋಕದ ಸಾಮಾನ್ಯ ಜನರು ಉಪದೇಶ ಹೊಂದಲು ಪ್ರಶ್ನೆ ಕೇಳಿರುವುದು ಯೋಗ್ಯವಾಗಿಯೇ ಇರುತ್ತವೆ.

ಹಿಂದೆ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತರು ಪಾತಾಳಲೋಕದಲ್ಲಿ ಸುಖಾಸೀನನಾಗಿದ್ದ ಬ್ರಹ್ಮಾಂಡಾಧಾರಕನೂ, ನಿರುಪಮಶಕ್ತನೂ, ಆದಿಪುರುಷನೂ ಆದ ಸಂಕರ್ಷಣನನ್ನು ಸಮೀಪಿಸಿ, ಭಗವತ್ತತ್ವ ಜ್ಞಾನಾಪೇಕ್ಷೆಯಿಂದ, ತತ್ವಜ್ಞಾನವನ್ನು ತಮಗೆ ಉಪದೇಶಿಸಬೇಕೆಂದು ಕೇಳಿಕೊಂಡರು. ಆ ಕಾಲದಲ್ಲಿ ಶ್ರೀಸಂಕರ್ಷಣನು ತನ್ನ ಮೂಲರೂಪವೇ ಆದ ಯಾವ ವಾಸುದೇವ ರೂಪದಿಂದ ಸಂಕರ್ಷಣ ರೂಪವು ಅಭಿವ್ಯಕ್ತವಾಯಿತೋ, ಆ ವಾಸುದೇವ ರೂಪವನ್ನು ತನ್ನ ಹೃತ್ಸ್ಥಲದಲ್ಲಿ ಧ್ಯಾನಿಸುತ್ತಾ, ಅನುರೂಪರಾದ ಪತಿಗಳನ್ನು ವರ ಮುಖದಿಂದ ಪಡೆಯುವುದಕ್ಕಾಗಿ ದೇವಗಂಗೆಯಲ್ಲಿ ಸ್ನಾನಾದಿಗಳನ್ನು ಮಾಡಿ, ಸರ್ವಾಲಂಕೃತರಾದ ಅನೇಕ ನಾಗಕನ್ಯೆಯರಿಂದ ಪದ್ಮಪುಷ್ಪ , ಸುಗಂಧ, ದಿವ್ಯಾಲಂಕಾರಗಳಿಂದ ಪೂಜಿಸಲ್ಪಟ್ಟು ನಮಸ್ಕೃತನಾಗಿ ಆ ನಾಗಕನ್ನಿಕೆಯರ ಸಮೂಹಗಳಿಂದ ಅಲಂಕೃತವಾದ ದಿವ್ಯಪೀಠ ವುಳ್ಳವನಾಗಿ, ಬಂದಂಥಾ ಸನಕಾದಿಋಷಿಗಳಿಗೆ ಜ್ಞಾನೋಪದೇಶ ಮಾಡುವ ಉದ್ದೇಶದಿಂದ, ಸ್ವಲ್ಪ ಕಣ್ಣು ತೆರೆಯುವನೂ, ಮುಚ್ಚುವನೂ ಆಗಿ ಯೋಗಾಸಕ್ತನಾಗಿದ್ದನು. ಉಜ್ವಲ ಪ್ರಕಾಶಮಾನಗಳಾದ ಸಂಕರ್ಷಣಮೂರ್ತಿಯ ಸಾವಿರ ಹೆಡೆಗಳು, ರಮ್ಯವಾದ ನವರತ್ನಖಚಿತ ಕಿರೀಟ, ಕುಂಡಲ, ಶಿರಸ್ಸಿನ ಮಣಿಗಳಿಂದ ಶೋಭಿತವಾಗಿ, ಅನೇಕ ಸೂರ್ಯಪ್ರಕಾಶಗಳಂತೆ ದಿಕ್ಕುದಿಕ್ಕುಗಳನ್ನೆಲ್ಲಾ ಬೆಳಗುತ್ತಿದ್ದವು. ಇಂತಹ ಸಂಕರ್ಷಣ ನಾಮಕ ಶೇಷದೇವರಿಂದ ಭಾಗವತವು ಸನತ್ಕುಮಾರರಿಗೆ ಉಪದೇಶಿಸಲ್ಪಟ್ಟಿತು. ಅದನ್ನೇ ಶ್ರೀಕೃಷ್ಣನು ನನಗುಪದೇಶಿಸಿದನು. ಅದನ್ನು ಈಗ ನಿನಗೆ ಹೇಳುವೆನು, ಕೇಳು:-

ಪ್ರಳಯಾನಂತರ ಸಕಲಲೋಕಗಳೂ ನಷ್ಟಹೊಂದಿ, ಅಗಾಧ ಪ್ರಳಯೋದಕ ಒಂದೇ ಎಲ್ಲೆಲ್ಲೂ ತುಂಬಿತ್ತು. ಆ ಪ್ರಳಯೋದಕದ ಮೇಲೆ, ನಾಗತಲ್ಪದಮೇಲೆ ಯೋಗನಿದ್ರಾಲೋಲನಾಗಿ, ಆತ್ಮರತನಾಗಿ, ಶ್ರೀಪರಮಾತ್ಮನೇ ಮಲಗಿದ್ದನು. ಹೀಗೆ ಮಲಗಿದ್ದ ನಾರಾಯಾಣಾಖ್ಯ ಮೂಲರೂಪನು, ಪ್ರಳಯದಲ್ಲಿ ನಾಶಮಾಡಲ್ಪಟ್ಟ ಸ್ಥೂಲದೇಹಗಳಿಂದ ಕೇವಲ ಲಿಂಗದೇಹಸಹಿತರಾದ ಜೀವರಾಶಿಗಳನ್ನೂ, ಭೂತಪಂಚಕ, ತನ್ಮಾತ್ರಗಳಿಂದುತ್ಪನ್ನರಾಗಿ ಲಯಹೊಂದಿದ್ದ ಜಡಸಮೂಹವನ್ನೂ, ಹೇಗೆ ಬಿದಿರುಮೆಳೆಯು ಅಭಿವ್ಯಕ್ತವಾಗದೇ ಇದ್ದ ಅಗ್ನಿಯಿಂದ ಕೂಡಿರುತ್ತೆಯೋ, ಅದರಂತೆ ತನ್ನ ಉದರದ ಆಕಾಶದ ಏಕದೇಶದಲ್ಲಿ ಧರಿಸಿದವನಾಗಿ, ಚಿತ್ಪ್ರಕೃತಿಯಾದ ತನ್ನ ಪತ್ನಿ ರಮಾದೇವಿಯನ್ನು, ಭೋಗಕ್ಕಾಗಿ ಪ್ರೇರಿಸಿದವನಾಗಿ, ರಮಾದೇವಿಯಿಂದ ಆಲಿಂಗಿತನಾಗಿ, ಸ್ವಲ್ಪ ಮಾತ್ರ ತೆರೆದ ಕಣ್ಣುಗಳುಳ್ಳವನಾಗಿ ಮಲಗಿದ್ದನು.

ಹೀಗೆ ಚತುರ್ಯುಗಗಳು ಒಂದು ಸಾವಿರ ಆವರ್ತಿ ಆಗುವಷ್ಟು ಕಾಲ ಯೋಗನಿದ್ರೆಯಿಂದಿದ್ದವನಂತೆ, ಸೃಷ್ಟ್ಯಾದಿ ಸಕಲ ವ್ಯಾಪಾರ ರಹಿತನಾಗಿ ಮಲಗಿದ್ದನು. ಈ ನಾಲ್ಕು ಯುಗಗಳು ಸಾವಿರ ಸಲ ಆಗುವಷ್ಟು

ಕಾಲವು ಬ್ರಹ್ಮದೇವರಿಗೆ ಒಂದು ರಾತ್ರೆ ಅಥವ ಹಗಲು ಅಂದರೆ ಅರ್ಧ ದಿನದಷ್ಟು ಕಾಲವು ಆಗುತ್ತದೋ ನಂತರ ಆ ಪ್ರಳಯಕಾಲಕ್ಕೆ ಅಭಿಮಾನಿಯಾದ ಲಕ್ಷ್ಮೀದೇವಿಯು ಸೃಷ್ಟಿಕಾಲವು ಪ್ರಾಪ್ತವಾದದ್ದನ್ನು ತಿಳಿದು ದೇವರನ್ನು ಅನಂತ ವೇದಗಳಿಂದ ಸ್ತುತಿಸಿ, ಬ್ರಹ್ಮಾದಿ ಸಮಸ್ತ ಜೀವರ ಸೃಷ್ಟಿಯಾಗಬೇಕೆಂದು ಪ್ರಾರ್ಥಿಸಲಾಗಿ, ದೇವರು ತನ್ನ ದೇಹದಲ್ಲಿಯೇ ಸೂಕ್ಷ್ಮರೂಪದಿಂದ ಪರಮಾಣು ಅನಂತ್ಯಗಳಿಂದ ಕೂಡಿದ್ದ, ಲೋಕಗಳನ್ನೂ ಜಡಚೇತನ ಸಮೂಹಗಳನ್ನು ಪ್ರತ್ಯಕ್ಷ ನೋಡುವವನಾಗಿ ಜಗತ್ಸೃಷ್ಟಿಗಾಗಿ ತನಗೆ ಹೆಂಡತಿಯಾದ ಲಕ್ಷ್ಮಿಯೂ ಬೇಕಿಲ್ಲವೆಂಬುದನ್ನೂ, ತನ್ನ ಸೃಷ್ಟಿಗೆ ಕುಂಬಾರನಿಗೆ ಮಣ್ಣು, ಚಕ್ರ, ಕೋಲು ಮುಂತಾದವು ಬೇಕಾಗುವಂತೆ, ತನಗೆ ತನ್ನ ಸ್ವತಂತ್ರ ಶಕ್ತಿ, ಇಚ್ಛೆಗಳಲ್ಲದೇ ಬೇರೆ ಸಹಾಯ ಬೇಕಾಗಿಲ್ಲವೆಂಬುದನ್ನೂ, ತೋರಿಸುವುದಕ್ಕಾಗಿ ಎಲ್ಲೆಲ್ಲೂ ಆವರಿಸಿದ ಮಹಾಪ್ರಳಯೋದಕವನ್ನು ಸ್ವಲ್ಪ ಶೋಷಣೆ ಮಾಡಿ, ಹಾಗೆ ಉಂಟು ಮಾಡಿದ ಆಕಾಶದಲ್ಲಿ, ತನ್ನ ನಾಭಿಯಿಂದ, ಅಗಾಧ ನಾಳದಿಂದ ಕೂಡಿದ ಹದಿನಾಲ್ಕು ದಳಗಳುಳ್ಳ, ಹದಿನಾಲ್ಕು ಲೋಕಾತ್ಮಕವಾದ ಕಮಲವನ್ನು ನಿರ್ಮಿಸಿದನು.

ನಂತರ ಸಕಲಜೀವಜಡಾತ್ಮಕ ರೂಪಗಳನ್ನೂ ಒಟ್ಟು ಗೂಡಿಸಿ, ಅವುಗಳಲ್ಲಿ ಬ್ರಹ್ಮಸೃಷ್ಟಿಗೆ ಬರಬೇಕಾದವುಗಳನ್ನು ತನ್ನ ದೃಷ್ಟಿಯಿಂದ ನೋಡಿ, ಪ್ರಕೃತಿಗುಣ ಸಾಮ್ಯವಾಗಿದ್ದುದನ್ನು ರಜೋಗುಣದಿಂದ ಉದ್ರೇಕಿಸಿ, ಸಕಲ ಜೀವಜಡ ಸಮುದಾಯದಿಂದ ಸಹಿತವಾಗಿ ಬ್ರಹ್ಮದೇವರ ಸ್ಥೂಲದೇಹವನ್ನು ನಿರ್ಮಿಸಿ ಆ ಕಮಲದಲ್ಲಿಟ್ಟನು. ಕೆಲವು ಕಾಲಾನಂತರ ಭಗವದಿಚ್ಛೆಯಿಂದ ಮೊಗ್ಗಿನಂತೆ ಇದ್ದು ಬ್ರಹ್ಮದೇವರ ಶರೀರಕ್ಕೆ ಗರ್ಭದೋಪಾದಿಯಲ್ಲಿದ್ದ ಕಮಲವು ಅರಳಿ, ಬ್ರಹ್ಮದೇವರ ದೇಹವು ಸೂರ್ಯಕೋಟಿ ಪ್ರಕಾಶದಂತೆ ಬೆಳಗುತ್ತಾ ಕತ್ತಲೆಯನ್ನೆಲ್ಲಾ ಅಡಗಿಸಿತು. ಈ ಹದಿನಾಲ್ಕು ದಳಗಳುಳ್ಳ, ಹದಿನಾಲ್ಕು ಲೋಕಸ್ವರೂಪವಾದ, ಅಂದರೆ ಬ್ರಹ್ಮಾಂಡ ಸ್ವರೂಪವಾದ ಈ ಕಮಲವು, ಹಿರಣ್ಯವೆಂಬ ದೇವರ ಒಡವೆಗಳು ಮಾಡಲ್ಪಟ್ಟ ಬಂಗಾರದಿಂದ, ರಚಿತವಾಗಿದ್ದ ಕಾರಣದಿಂದಲೂ, ಹಿರಣ್ಯವೆಂಬ ಸುವರ್ಣಾತ್ಮಕ ಕಮಲಗರ್ಭದಿಂದ ಉತ್ಪನ್ನರಾದ ಬ್ರಹ್ಮದೇವರಿಗೆ ಹಿರಣ್ಯಗರ್ಭರೆಂದು ಹೆಸರಾಯಿತು.

ಅದೂ ಅಲ್ಲದೆ, ದೇವರ ಸರ್ವಾಭರಣಗಳೂ ಲಕ್ಷ್ಮ್ಯಾತ್ಮಕಗಳು. ಹೇಗೆಂದರೆ ದೇವರ ಎಲ್ಲಾ ಆಭರಣಗಳೂ ಭಗವದ್ರೂಪಗಳೇ ಸೇರಿ ನವರತ್ನಖಚಿತ ಆಭರಣಗಳಂತೆ ದರ್ಶನ ಮಾಡುವವರಿಗೆ ಕಾಣುತ್ತೆ. ದೇವರ ಆಭರಣಗಳು ಈ ರೀತಿ ದೇವರಿಂದ ಭಿನ್ನಗಳಲ್ಲ. ಹೀಗೆ ಓತಪ್ರೋತವಾದ ಎಲ್ಲಾ ಆಭರಣಾಕಾರ ಭಗವದ್ರೂಪಗಳಲ್ಲಿಯೂ, ಲಕ್ಷ್ಮೀದೇವಿಯರು, ವನಮಾಲಾ, ವಕ್ಷಸ್ಥಳ, ಶ್ರೀವತ್ಸ ಚಿನ್ಹಾದಿಗಳಲ್ಲಿ ಸದಾ ನಿವಾಸಮಾಡುತ್ತಿರುವರು. ಆದ್ದರಿಂದ ಶ್ರೀಸೂಕ್ತದಲ್ಲಿ । ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ। ಎಂದು ಲಕ್ಷ್ಮೀದೇವಿಗೆ, ಹಿರಣ್ಮಯಿಯೆಂದೂ ಹೆಸರಿದೆ. ಆದುದರಿಂದ ಬ್ರಹ್ಮದೇವರು

ಉದ್ಭವಿಸಿದ ಕಮಲವು ಹಿರಣ್ಯಕಮಲವಾದುದರಿಂದ, ಶ್ರೀಪರಮಾತ್ಮನು ತನ್ನ ಅಚಿಂತ್ಯಾದ್ಭುತ ಶಕ್ತಿಯಿಂದ ಹಿರಣ್ಮಯಿಯಾದ, ತನ್ನ ವಶಳಾದ ಲಕ್ಷ್ಮೀಯನ್ನೇ, ಕಮಲಾಕಾರವನ್ನಾಗಿ ಮಾಡಿಕೊಂಡು ಅವಳ ಗರ್ಭದಲ್ಲೇ ಬ್ರಹ್ಮದೇವರನ್ನು ಲೋಕವಿಲಕ್ಷಣವಾಗಿ ಪಡೆದನೆಂದು ಜ್ಞಾನಿಗಳು ಭಾವಿಸಿ, ಇದರಿಂದ ಪ್ರಕೃತಿನಾಮಕಳಾದ ಲಕ್ಷ್ಮಿಯು ದೇವರಿಗೆ ಎಷ್ಟು ಅಧೀನಳೆಂದೂ, ದೇವರು ಎಷ್ಟು ಸ್ವತಂತ್ರನೂ, ಸರ್ವೋತ್ತಮನೂ ಎಂದು ತಿಳಿದು ಆನಂದಿಸಬಹುದಾಗಿದೆ. ಪರಮಾತ್ಮನ ಸರ್ವೋತ್ತಮತ್ವ ಜ್ಞಾನಕ್ಕೆ ಇದು ದೃಷ್ಟಾಂತವಾಗಿದೆ.

ಬ್ರಹ್ಮದೇವರು ಕಮಲದಲ್ಲಿ ಒಬ್ಬರೇ ಅನ್ಯರ ಅಪೇಕ್ಷೆ ಇಲ್ಲದೆ, ಗರ್ಭಾದಿವಾಸ ರಹಿತರಾಗಿ, ಶುದ್ಧಸತ್ವಾತ್ಮಕರಾಗಿ ತಾವೇ ಉತ್ಪನ್ನರಾದ್ದರಿಂದ ಅವರಿಗೆ ಸ್ವಯಂಭೂ ಎಂದೂ ಹೆಸರಾಯಿತು. ಬ್ರಹ್ಮದೇವರನ್ನು ದೇವರು ಸೃಷ್ಟಿಸುವ ಕಾಲದಲ್ಲಿ ತನ್ನ ಪೂರ್ಣ ವಿಜ್ಞಾನಮಯ ದೃಷ್ಟಿಯಿಂದ ನೋಡಿದನಾಗಿ, ಬ್ರಹ್ಮದೇವರು ಉತ್ಪನ್ನರಾದಾಗಲೇ ಅತಿರೋಹಿತ ವಿಜ್ಞಾನಾತ್ಮಕ ಶರೀರ ವುಳ್ಳವರಾದರು. ಸರ್ವಶ್ರೇಷ್ಠ ಜ್ಞಾನಿಗಳಾದರು. ಸರ್ವಜೀವರಲ್ಲಿ ಮೊದಲು, ರಮಾದೇವಿಯರಿಂದ ಅನಂತ ವೇದಗಳಿಂದ ಸ್ತುತಿಸಲ್ಪಟ್ಟ ದೇವರು, ಅನಂತ ವೇದಮಹಿಮೆಗಳುಳ್ಳವರಾಗಿ, ಬ್ರಹ್ಮದೇವರನ್ನು ತಮ್ಮ ಕೃಪಾಕಟಾಕ್ಷದಿಂದ ನೋಡಿದ್ದರಿಂದ, ರಮಾ ಪರಮಾತ್ಮರ ನಂತರ ಬ್ರಹ್ಮದೇವರು ಸರ್ವವೇದಗಳಿಂದ ಪ್ರತಿಪಾದ್ಯರಾಗಿ, ವೇದಮಯ ಶರೀರ ವುಳ್ಳವರೆಂದು ಪ್ರಖ್ಯಾತರಾದರು.

ಇಂತಹ ಬ್ರಹ್ಮದೇವರು, ಕಮಲವು ಅರಳಿದ ನಂತರ ತಮ್ಮ ವಿಜ್ಞಾನಮಯ ಚಕ್ಷುಗಳನ್ನು ತೆರೆದು, ನಾನು ಎಲ್ಲಿದ್ದೇನೆ? ಎಂದು ಎಲ್ಲಾ ಕಡೆಯಲ್ಲೂ ತಿರುಗಿ ಸುತ್ತಲೂ ನೋಡಲು ಪ್ರಯತ್ನಿಸಿದಾಗ, ತನ್ನಷ್ಟಕ್ಕೆ ತಾನೇ ನಾಲ್ಕು ದಿಕ್ಕುಗಳಲ್ಲಿಯೂ, ನಾಲ್ಕು ಮುಖಗಳಾದವು. ನಂತರ ಸುತ್ತಲೂ ನೋಡಿ ತಾವೊಬ್ಬರಲ್ಲದೇ ಬೇರೆ ಯಾವುದನ್ನೂ ಕಾಣದೇ, ಪ್ರಳಯ ಕಾಲದ ಬಿರುಗಾಳಿಯೋಪಾದಿಯಲ್ಲಿ ಬೀಸುವ ಪ್ರಚಂಡ ಗಾಳಿಯಿಂದ ಪದ್ಮದ ಸುತ್ತಲೂ, ಆ ಪ್ರಳಯೋದಕವು ಅಲ್ಲೋಲ ಕಲ್ಲೋಲ ಮಾಡಲ್ಪಟ್ಟು, ಅಂತರಿಕ್ಷಕ್ಕೆ ಹಾರಾಡುವ ಅಲೆಗಳ ಹೊಡೆತದಿಂದ ಭಯಂಕರವಾಗಿ ಸುತ್ತುವ ಸುಳಿಗಳ ಹೊರತು ಬೇರೆ ಯಾವ ಪ್ರಪಂಚವನ್ನಾಗಲೀ, ಲೋಕಗಳನ್ನಾಗಲೀ ಕಾಣಲಿಲ್ಲ. ನಂತರ ತಾವು ಒಂದು ಸುವರ್ಣಕಮಲದ ಮಧ್ಯದಲ್ಲಿರುವುದನ್ನೂ ಆ ಕಮಲಕ್ಕೆ ಇದ್ದ ನಾಳವನ್ನು ಕಂಡು, ಈ ಕಮಲಕ್ಕೆ ಆಧಾರವಾದ ಒಂದು ವಸ್ತುವು ಇರಬೇಕು, ನಾಳದಲ್ಲಿ ಪ್ರವೇಶಿಸಿ ನೋಡಿ ಕಂಡುಹಿಡಿಯಲಾಗದೆ ಪುನಃ ಮೇಲಕ್ಕೆ ಬಂದು, ಕಮಲ ಮಧ್ಯದಲ್ಲಿ ಕುಳಿತು, ತಮಗೆ ಸ್ವಾಭಾವಿಕವಾದ ಸಮಾಧಿಯೋಗ ವಿಜ್ಞಾನಗಳಿಂದ, ಕಮಲಕ್ಕೆ ಆಧಾರನನ್ನು ತಿಳಿಯುವುದಕ್ಕಾಗಿ ತಪಸ್ಸನ್ನು ಮಾಡಿದರು.

ಸಕಲೇಂದ್ರಿಯಗಳನ್ನೂ ನಿಯಮಿಸಿ, ಏಕಾಗ್ರಚಿತ್ತದಿಂದ ಬ್ರಹ್ಮದೇವರು ಈ ರೀತಿ ಚಿಂತಿಸಿದರು. ಕಾಲಾಖ್ಯ ಅನಾದ್ಯನಂತ ಕಾಲವು ಕಾಲಚಕ್ರರೂಪನಾದ, ನಾಲ್ಕು ಮಾಸಗಳ ಮೂರೆಂಬ ಗುಂಭಗಳಿಂದಲೂ, ಹನ್ನೆರಡು ಕವಲು ಕೋಲುಗಳೆಂಬ ಮಾಸಗಳಿಂದ ನಿರ್ಮಿತವಾದ ಸಂವತ್ಸರ ನಾಮಕ ಪರಮಾತ್ಮ ಸ್ವರೂಪವಾಗಿರುತ್ತದೆ. ಈ ಸಂವತ್ಸರವೆಂಬ ಕಾಲಚಕ್ರದ ತಿರುಗುವಿಕೆಯಿಂದ, ನನಗೆ ಆಧಾರವಾದ ಈ ಕಮಲವೂ, ನಾನೂ ಉತ್ಪನ್ನನಾಗಿರುವುದು ತಿಳಿದುಬಂದಿದೆ. ಈ ಕಮಲಕ್ಕೂ ನನಗೂ ಮೂಲಾಧಾರನೂ ಯಾರೆಂದು ಕಾಣಬೇಕಾಗಿದೆ ಎಂದು ಭಾವಿಸಿ, ಅನಾದಿ ವಿಜ್ಞಾನಯುತ ಭಕ್ತಿವಿಶೇಷದಿಂದ ತಮ್ಮ ಹೃತ್ಸ್ಥಲದಲ್ಲಿ ಪರಮಾತ್ಮನ ರೂಪ ಸಾಕ್ಷಾತ್ಕಾರಕ್ಕಾಗಿ ಧ್ಯಾನಾಸಕ್ತರಾದರು.

ಅಗ ಬ್ರಹ್ಮದೇವರಿಗೆ ಹೃತ್ಸ್ಥಲದಲ್ಲಿ ಒಂದು ಪ್ರಕಾಶವು ಉತ್ಪನ್ನವಾಯಿತು. ದಿನದಿನದಲ್ಲಿ ಶುಕ್ಲಪಕ್ಷದ ಚಂದ್ರನು ವೃದ್ಧಿಹೊಂದುವಂತೆ, ಭಗವದ್ದರ್ಶನವು ಸ್ಪಷ್ಟವಾಗುತ್ತಾ ಬಂದಿತು. ಕ್ರಮವಾಗಿ ಕಮಲನಾಳದ ಬುಡದಲ್ಲಿ, ಹಿಂದೆಲ್ಲೂ ನೋಡದೇ ಇದ್ದಂತಹ, ಸಹಸ್ರ ಬೇರೆ ಬೇರೆ ಇರತಕ್ಕ ಹೆಡೆಗಳಿಂದ ಕೂಡಿ, ಅವುಗಳ ಮೇಲೆ ಬೇರೆ ಬೇರೆ ಇರುವ ಪ್ರಕಾಶಮಾನಗಳಾದ ರತ್ನಗಳಕಾಂತಿಯಿಂದ, ಎಲ್ಲೆಲ್ಲೂ ಆವೃತವಾದ ಪ್ರಚಂಡ ಪ್ರಳಯೋದಕದಲ್ಲೂ ವ್ಯಕ್ತವಾಗಿದ್ದ ಕತ್ತಲೆಯನ್ನು ಪರಿಹರಿಸಿ, ಅಲ್ಲಿ ಮೇಘಕಾಂತಿಯಂತೆ ಸ್ವಚ್ಛನೀಲ ಪ್ರಭೆಯಿಂದ ಕೂಡಿದ ಶೇಷಪರ್ಯಂಕವನ್ನು, ಒಂದು ಅಗಾಧವಾದ ಪರ್ವತದಂತೆ ಉನ್ನತವಾಗಿಯೂ, ವಿಶಾಲವಾಗಿಯೂ, ಮೃದುವಾಗಿಯೂ ಇರುವುದನ್ನೂ, ಅದರ ಮೇಲೆ ಕೇವಲ ಅಪ್ರಾಕೃತನಾಗಿ ಮಲಗಿರುವ ಒಬ್ಬ ಪುರುಷರೂಪನನ್ನೂ, ಆ ಪುರುಷನ ನಾಭಿದೇಶದಿಂದ ಬಂದಿರತಕ್ಕ ತಾವಿರುವ ಕಮಲನಾಳವನ್ನು ಕಂಡರು. ಈ ರೀತಿ ತಮ್ಮ ಉತ್ಪತ್ತಿಗೆ ಕಾರಣನಾದ ಮೂಲಪುರುಷನನ್ನು ಕಾಣುವವರಾದರು.

ಆ ಪುರುಷನು, ಸಂಧ್ಯಾಕಾಲದಲ್ಲಿ ಸೂರ್ಯನ ಸುವರ್ಣ ಛಾಯೆಯಿಂದ ಅನೇಕ ಸುವರ್ಣ ಕಿರೀಟಗಳೋಪಾದಿಯಲ್ಲಿ ಒಪ್ಪುವ ಶಿಖರಗಳಿಂದ ಕೂಡಿದ ನೀಲ ಪರ್ವತದಂತೆ, ಸಹಸ್ರ ಹೆಡೆಗಳಲ್ಲಿ ಥಳಥಳಿಸುವ ಸುವರ್ಣ ರತ್ನಖಚಿತ ಕಿರೀಟಗಳೇ ಶಿಖರಗಳಂತೆ ಕಾಣುವ ಶೇಷತಲ್ಪದಲ್ಲಿ, ತಾನೂ ನೀಲಮೇಘಶ್ಯಾಮಲನಾಗಿಯೂ, ಪೀತಾಂಬರ, ವನಮಾಲಾ, ವೈಜಯಂತಿ, ಕೌಸ್ತುಭ, ಕಿರೀಟಗಳಿಂದಲಂಕೃತನಾಗಿ, ಪ್ರಣತ ಜನರ ಅರ್ತಿಯನ್ನು ನಾಶಮಾಡತಕ್ಕ ಪಾದಕಮಲ ವುಳ್ಳ ಪರಮಾತ್ಮನು ಶೋಬಿಸುತ್ತಿದ್ದನು. ಮೂರು ಲೋಕಗಳೆಂಬ ಪಾತಾಳ, ಸ್ವರ್ಗ, ಸತ್ಯಲೋಕಗಳ ವಿವಕ್ಷಯಾ, ಹದಿನಾಲ್ಕು ಲೋಕಗಳಿಗೂ ಆಶ್ರಯವೋ, ಎಂಬಂತೆ ಬಹಳ ಸುಂದರವಾದ, ಸರ್ವಾಭರಣಭೂಷಿತವಾದ, ನೀಳವಾದ ಪರಮಾತ್ಮನ ಮಲಗಿರುವ ರೂಪವು ನೋಡುವವರಿಗೆ

ಪರಮಾಶ್ಚರ್ಯವನ್ನೂ, ಭಯಭರಿತ ಭಕ್ತಿಯನ್ನೂ ಉಂಟುಮಾಡುವಂತೆ ಇತ್ತು. ಆ ಸರ್ವಾಭರಣಗಳು ಸಾಕ್ಷಾತ್ ಶ್ರೀದೇವಿಯರ ಸಾನ್ನಿಧ್ಯದಿಂದ ಕೂಡಿವೆಯೋ ಎಂಬಂತೆ ಸರ್ವಾಲಂಕಾರ ಸೌಂದರ್ಯಗಳ ಮೂಲಸ್ಥಾನದಂತಿದ್ದವು.

ಈ ರೀತಿ ಬ್ರಹ್ಮದೇವರಿಗೆ ತೋರಿಸಲ್ಪಟ್ಟ ದೇವರ ಪಾದಕಮಲಗಳು ಸಮಸ್ತ ಭಕ್ತರಿಗೂ ಕಾಮಧೇನುವಿನಂತೆ ಸರ್ವಾಭೀಷ್ಟಗಳನ್ನು ಕೊಡತಕ್ಕದ್ದು. ಪದ್ಮದಂತೊಪ್ಪುತ್ತಿದ್ದ ಪಾದಗಳಲ್ಲಿ ಬೆರಳುಗಳು ಬೇರೆ ಬೇರೆ ಸಹಸ್ರ ಚಂದ್ರಕಾಂತಿಯುಳ್ಳ ಚಂದ್ರರಂತೆ ಪ್ರಕಾಶಿಸುತ್ತಲೂ, ಉಗುರುಗಳು ಚಂದ್ರಕಿರಣಗಳಂತೆಯೂ ಶೋಭಿಸುತ್ತಿದ್ದವು. ಶರಣಾಗತರನ್ನು ಸನ್ಮಾನಿಸುವಂತಿರುವ ಮುಖದಿಂದಲೂ, ಲೋಕಾರ್ತಿಹರವಾದ ಮಂದಹಾಸದಿಂದಲೂ, ಕೆಂಪಾದ ಕೆಳತುಟಿಯಿಂದಲೂ, ಸುಲಕ್ಷಣವಾದ ಮೂಗಿನಿಂದಲೂ, ಮನೋಹರವಾದ ಹುಬ್ಬುಗಳಿಂದಲೂ, ಕೂಡಿದ ಪರಮಾತ್ಮನ ಕರುಣಾಪೂರ್ಣ ಮುಖಾರವಿಂದವು ಪರಮಾಹ್ಲಾದದಾಯಕವಾಗಿತ್ತು. ಅನರ್ಘ್ಯವಾದ ಉಜ್ವಲ ಪೀತಾಂಬರ, ಮೇಖಲ, ಹಾರಗಳು, ಶ್ರೀವತ್ಸಚಿನ್ಹ, ಕಿರೀಟ, ಕುಂಡಲಾದಿಗಳಿಂದ ಅಲಂಕೃತವಾಗಿ, ದಿವ್ಯ ಶೇಷಪರ್ಯಂಕದ ಮೇಲೆ ಮಲಗಿರುವ ಪುರುಷನು, ಮುಕ್ತರಾದ ಸೂರ್ಯ, ಅಗ್ನಿ, ವಾಯು, ಬ್ರಹ್ಮ ದೇವತೆಗಳಿಂದ ಪರಿವೃತನಾಗಿ ಸೇವಿಸಲ್ಪಡುತ್ತಿದ್ದನು.

ಈ ಪರಮಾತ್ಮನ ಶ್ವಾಸೋಚ್ಛ್ವಾಸರೂಪ ವಾಯುವಿನ ಹೊಡೆತದಿಂದ, ಆ ಪ್ರಳಯೋದಕದ ಅದ್ಭುತ ಅಲೆಗಳೂ, ಅಗಾಧ ಭಯಂಕರ ಸುಳಿಗಳೂ, ಭಯ ಹುಟ್ಟಿಸುವಂತೆ ಸರ್ವತ್ರ ಅಲ್ಲಾಡುತ್ತಿರುವ ನಾಳ ಸಹಿತ ತನಗೆ ಆಧಾರವಾದ ಪದ್ಮವನ್ನೂ ಬ್ರಹ್ಮದೇವರು ಕಂಡು, ಯಾವ ರಜೋ ಅಂಶದಿಂದ ತಾನು ಸೃಷ್ಟಿಕಾರ್ಯಕ್ಕಾಗಿ ಆ ಭಗವಂತನಿಂದ ಸೃಷ್ಟಿಸಲ್ಪಟ್ಟಿದ್ದನೋ ಆ ಕಾರ್ಯವು ಸಫಲವಾಗುವುದಕ್ಕಾಗಿ, ತನಗೆ ಪ್ರಸನ್ನನಾಗಿ ದೃಷ್ಟಿಗೋಚರನಾದ ಮೂಲಪುರುಷನನ್ನು ಬ್ರಹ್ಮದೇವರು ಸ್ತೋತ್ರ ಮಾಡಲಿಚ್ಛಿಸಿದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಒಂಭತ್ತನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

## अथ दशमोऽध्यायः

**ब्रह्मोवाच**

ज्ञातोऽसि मेऽद्य सुचिरान्ननु देहभाजां न ज्ञायते भगवतो गतिरित्यवद्यम् ।
नान्यत् त्वदस्ति भगवन्नपि तत्त्वशुद्धं मायागुणव्यतिकराद् यदुरुर्विभासि ॥ १ ॥

रूपं यदेतदवबोधरसोदयेन शश्वन्निवृत्ततमसः सदनुग्रहाय ।
आदौ गृहीतमवतारशतैकबीजं यन्नाभिपद्मभवनादहमाविरासम् ॥ २ ॥

नातः परं परम यद् भवतः स्वरूपमानन्दमात्रमविकारमविद्धवर्चः ।
पश्यामि विश्वसृजमेकमविश्वमाद्यं भूतेन्द्रियात्मकमदस्त उपाश्रितोऽस्मि ॥ ३ ॥

यद् वा इदं भुवनमङ्गलमङ्गलं यद् ध्यानात्मनो दर्शितं त उपासकानाम् ।
तस्मै नमो भगवतेऽनुविधेम तुभ्यं योऽनादृतो निरयभाग्भिरसत्प्रसङ्गैः ॥ ४ ॥

ये तु त्वदीयचरणाम्बुजकोशगन्धं जिघ्रन्ति कर्णविवरैः श्रुतिवातनीतम् ।
भक्त्या गृहीतचरणः परया च तेषां नापैषि नाथ हृदयाम्बुरुहात् स्वपुंसाम् ॥ ५ ॥

तावद् भयं द्रविणगेहसुहृन्निमित्तं शोकः स्पृहा परिभवो विपुलश्च लोभः ।
तावन्ममेत्यसदवग्रह आर्तिमूलं यावन्न तेऽङ्घ्रिमभयं प्रवृणीत लोकः ॥ ६ ॥

दैवेन ते हतधियो भवतः प्रसङ्गात् सर्वाशुभोपशमनाद् विमुखेन्द्रिया ये ।
कुर्वन्ति कामसुखलेशलवाय दीना लोभाभिभूतमनसोऽकुशलानि शश्वत् ॥ ७ ॥

क्षुत्तृत्रिधातुभिरिमा मुहुरर्द्यमानाः शीतोष्णवातवर्षैरितरेतराच्च ।
कामाग्निनाऽच्युत रुषा च सुदुर्भरेण संपश्यतो मन उरुक्रम सीदते मे ॥ ८ ॥

यावत् पृथक्त्वमयमात्मन इन्द्रियार्थं मायाबलं भगवतो जन ईश पश्येत् ।
तावन्न संसृतिरसौ प्रतिसङ्क्रमेत व्यर्थाऽपि दुःखनिवहं वहती क्रियार्था ॥ ९ ॥

अध्याहृतार्थकरणा निशि निःशयाना नानामनोरथधियः क्षणभग्ननिद्राः ।
दैवाहतार्थरचना ऋषयोऽपि देव युष्मत्प्रसङ्गविमुखा इह संसरन्ति ॥ १० ॥

त्वद्भावयोगपरिभावितहृत्सरोजा ये सच्छ्रुतेक्षितपथा ननु नाथ पुंसाम् ।
यद् यद् धिया त उरुगाय विभावयन्ति तत् तद् बपुः प्रणयसे तदनुग्रहाय ॥ ११ ॥

नातिप्रसीदसि ततोपचितोपचारैराराधितः सुरगणैर्हृदि बद्धकामैः ।
यः सर्वभूतदययाऽसदलभ्ययैको नानाजनेष्ववहितः सुहृदन्तरात्मा ॥ १२ ॥

पुंसामतो विविधकर्मभिरध्वराद्यैर्दानेन चोग्रतपसा व्रतचर्यया च ।
नाराधनं भगवतस्तव सत्क्रियार्थो धर्मोऽर्पितः कर्हिचित् क्रियते न यत्र ॥ १३ ॥

शश्वत् स्वरूपमहसैव निपीतभेदमोहाय बोधधिषणाय नमः परस्मै ।
विश्वोदयस्थितिलयेषु निमित्तलीलारामाय ते नम इदं चकृमेश्वराय ॥ १४ ॥

यस्यावतारगुणकर्मविडम्बनानिनामानि येऽसुविगमे विवशा गृणन्ति ।
ते नैकजन्मशमलं सहसैव हित्वा संयान्त्यपावृतमृतं तमजं प्रपद्ये ॥ १५ ॥

यो वा अहं च गिरिशश्च विभुः स्वयं च स्थित्युद्भवप्रलयहेतव आत्ममूलाः ।
भूत्वा त्रिपाद् ववृध एक उरुप्ररोहस्तस्मै नमो भगवते भुवनद्रुमाय ॥ १६ ॥

लोको विकर्मनिरतः कुशले प्रमत्तः कर्मण्ययं त्वदुदिते भवदर्चने स्वे ।
यस्तावदस्य बलवानिह जीविताशां सद्यश्छिनत्त्यनिमिषाय नमोऽस्तु तस्मै ॥ १७ ॥

यस्माद् बिभेम्यहमपि द्विपरार्धधिष्ण्यमध्यासितः सकललोकनमस्कृतं यत् ।
तेपे तपो बहुतपोऽवरुरुत्समानस्तस्मै नमो भगवते विसखाय तुभ्यम् ॥ १८ ॥

तिर्यमनुष्यविबुधादिषु जीवयोनिष्वात्मेच्छयाऽत्मकृतसेतुपरीप्सया यः ।
रेमेऽनिरस्तरतिरप्युपलब्धकाष्ठस्तस्मै नमो भगवते पुरुषोत्तमाय ॥ १९ ॥

योऽविद्ययानुपहतोऽपि दशार्धवृत्त्या निद्रामुवाह जठरीकृतलोकयात्रः ।
अन्तर्जलेऽहिकशिपुस्पर्शानुकूलं भीमोर्मिमालिनि जनस्य सुखं विवृण्वन् ॥ २० ॥

यन्नाभिपद्मभवनादहमासमद्य लोकत्रयोपकरणो यदनुग्रहेण ।
तस्मै नमस्त उदरस्थभवाय योगनिद्रावसानविकसन्नलिनेक्षणाय ॥ २१ ॥

सोऽयं समस्तजगतां सुहृदेक आत्मासत्त्वेन यन्मृडयते भगवान् भगेन ।
तेनैव मे दृशमनुस्पृशताद् यथाऽहं स्रक्ष्यामि पूर्ववदिदं प्रणतप्रियोऽसौ ॥ २२ ॥

एष प्रपन्नवरदो रमयाऽत्मशक्त्या यद् यत् करिष्यति गृहीतगुणावतारः ।
तस्मिन् स्वविक्रम इदं सृजतोऽपि चेतो युञ्जीत कर्मशमलं च यथा विजह्याम् ॥ २३ ॥

नाभिह्रदादिह सतोऽम्भसि यस्य पुंसो विज्ञानशक्तिरहमासमनन्तशक्तेः ।
रूपं विचित्रमिदमस्य विवृण्वतो मे मा रीरिषीष्ट निगमस्य गिरां विसर्गः ॥ २४ ॥

सोऽसावदभ्रकरुणो भगवान् विवृद्धप्रेमस्मितेन नयनाम्बुरुहं विजृम्भन् ।
उत्थाय विश्वविजयाय मनोविषादं माध्व्या गिराऽपनयतात् पुरुषः पुराणः ॥ २५ ॥

**मैत्रेय उवाच**

स्वसम्भवं निशाम्यैवं तपोविद्यासमाधिभिः।
यावन्मनोवचः स्तुत्वा विरराम स खिन्नवत्॥ २६ ॥

अथाभिप्रेतमालक्ष्य ब्रह्मणो मधुसूदनः।
विषण्णचेतसस्तेन कल्पव्यतिकराम्भसा॥ २७ ॥

लोकसंस्थानविज्ञान आत्मनः परिखिद्यतः।
तमाहागाधया वाचा कश्मलं शमयन्निव॥ २८ ॥

**भगवान् उवाच**

मा वेदगर्भ गास्तन्द्रीं सर्ग उद्यममावह।
तन्मया चोदितं ह्यग्रे यन्मां प्रार्थयते भवान्॥ २९ ॥

भूयश्च तप आतिष्ठ विद्यां चैव मदाश्रयाम्।
ताभ्यामन्तर्हृदि ब्रह्मन् लोकान् द्रक्ष्यस्यपावृतान्॥ ३० ॥

तत आत्मनि योगेन भक्तियुक्तः समाहितः।
द्रष्टाऽसि मां ततं ब्रह्मन् मयि लोकांस्त्वमात्मनि॥ ३१ ॥

यदा तु सर्वभूतेषु दारुष्वग्निमिव स्थितम्।
प्रतिचक्षीत मां लोको जह्यात् तर्ह्येव कश्मलम्॥ ३२ ॥

यदा रहितमात्मानं भूतेन्द्रियगुणाशयैः।
स्वरूपेण मयोपेतं पश्यन् स्वाराज्यमृच्छति॥ ३३ ॥

नानाकर्मविपाकेन प्रजा बह्वीः सिसृक्षतः।
नात्मावसीदत्यस्मिंस्ते वर्षीयान् मदनुग्रहः॥ ३४ ॥

ऋषिमाद्यं न बध्नाति पापीयांस्त्वां रजोगुणः।
यन्मनो मयि निर्बद्धं प्रजाः संसृजतोऽपि ते॥ ३५ ॥

ज्ञातोऽहं भवता त्वद्य दुर्विज्ञेयोऽपि देहिनाम्।
यन्मां त्वं मन्यसे युक्तं भूतेन्द्रियगुणात्मभिः॥ ३६ ॥

तुभ्यं मद्विचिकित्सायामात्मा मे दर्शितो बहिः ।
नालेन सलिले मूलं पुष्करस्य विचिन्वतः ॥ ३७ ॥

यच्चकर्थ मम स्तोत्रं मत्कथाभ्युदयाङ्कितम् ।
यद् वा तपसि निष्ठा च स एष मदनुग्रहः ॥ ३८ ॥

प्रीतोऽहमस्तु भद्रं ते लोकानां विजयेच्छया ।
यदस्तौषीद् गुणमयं निर्गुणं माऽनुवर्णयन् ॥ ३९ ॥

य एतेन पुमान् नित्यं स्तुत्वा स्तोत्रेण मां भजेत् ।
तस्याहं सम्प्रसीदेयं सर्वकामवरेश्वरः ॥ ४० ॥

पूर्तेन तपसा यज्ञैर्दानैर्योगैः समाधिना ।
राज्यं निःश्रेयसं पुंसां मत्प्रीतिस्तत्त्वविन्मतम् ॥ ४१ ॥

अहमात्मात्मनां धातः प्रेष्ठः सन् प्रेयसामपि ।
अतो मयि रतिं कुर्याद् देहादिर्यत्कृते प्रियः ॥ ४२ ॥

सर्ववेदमयेनेमा आत्मनाऽऽत्मात्मयोगिना ।
प्रजाः सृज यथापूर्वं याश्च मय्यनुशेरते ॥ ४३ ॥

**मैत्रेय उवाच**

तस्मा एवं जगत्स्रष्टा प्रधानपुरुषेश्वरः ।
व्यज्येदं स्वेन रूपेण कञ्जनाभस्तिरोदधे ॥ ४४ ॥

## ॥ इति श्रीमद्भागवते (तृतीयस्कन्धे( *3) दशमोऽध्यायः ॥

**॥ ಹತ್ತನೆಯ ಅಧ್ಯಾಯ ॥**

## ಬ್ರಹ್ಮದೇವರಿಂದ ಪುರುಷನಾಮಕನ ಸ್ತುತಿ

ಬ್ರಹ್ಮದೇವರು ತಮ್ಮ ದೃಷ್ಟಿಗೆ ಗೋಚರನಾದ ಶೇಷಶಾಯಿಯಾದ ಪದ್ಮನಾಭ ರೂಪವನ್ನು ನೋಡಿ, ಎಲೈ ಸ್ವಾಮಿಯೇ! ಬಹು ತಪಸ್ಸನ್ನು ಮಾಡಿದ ನಂತರ ಈಗ ನನಗೆ ಈ ದಿವ್ಯರೂಪ ದರ್ಶನವನ್ನು ಅನುಗ್ರಹಿಸಿರುತ್ತೀಯೆ. ಸ್ವತಃ ನೀನು ಪ್ರಾಕೃತಸಂಬಂಧ ಶರೀರವಿಲ್ಲದವನಾದುದರಿಂದ

ಅವ್ಯಕ್ತಸ್ವರೂಪವಾದ ದಿವ್ಯಜ್ಞಾನಾನಂದಮಯ ದೇಹ ವುಳ್ಳವನಾದರೂ, ಭಕ್ತಿಜ್ಞಾನಪೂರ್ವಕ ಉಪಾಸನೆಯನ್ನು ಮಾಡುವವರಿಗೆ ಒಲಿದು ದೃಷ್ಟಿಗೋಚರನಾಗುತ್ತೀಯೆ. ದೇಹಸುಖಕ್ಕಾಗಿಯೇ ಪ್ರಯತ್ನ ಮಾಡುವ ಮೂಢ ಜೀವರು, ಸದಾ ಪಾಪಕರ್ಮ ನಿರತರಾಗಿ, ನಿನ್ನನ್ನು ಸ್ವಾಮಿ, ಉದ್ಧಾರಕನೆಂದು ತಿಳಿಯದೇ ಇರುವುದರಿಂದ ಅವರಿಗೆ ನೀನು ಗೋಚರನಾಗುವುದಿಲ್ಲ. ನಿನ್ನಿಂದ ಭಿನ್ನವಾದ ಸಕಲ ಜಗತ್ತೂ, ಪ್ರಾಕೃತ ಗುಣಗಳಿಂದ ಬದ್ಧವಾದ್ದರಿಂದ ಅಶುದ್ಧಗಳು. ಲೋಕದಲ್ಲಿ ನೀನೊಬ್ಬನೇ, ಅಪ್ರಾಕೃತಳಾದ ಲಕ್ಷ್ಮೀ ಸಮೇತನಾಗಿ ಸದಾ ಪವಿತ್ರನಾಗಿರುತ್ತೀಯೆ. ಲೋಕಜನರು ಅಪವಿತ್ರರಾಗಿರುವ ತನಕ ನಿನ್ನನ್ನು ತಿಳಿಯಲಾರರು.

ನೀನು ಪ್ರಕೃತಿಯ ಗುಣಗಳಾದ ಸತ್ವರಜಃಸ್ತಮೋಗುಣಗಳನ್ನು ವಿಕಾರ ಹೊಂದಿಸಿ ಮಹತ್ತತ್ವ, ಅಹಂಕಾರತತ್ವಾದಿಗಳನ್ನು ಸೃಷ್ಟಿಸಿ, ಅದರಲ್ಲಿ ಪ್ರವೇಶಿಸಿದರೂ, ನಿರ್ಲೇಪನಾಗಿ ಪರಿಶುದ್ಧನಾಗಿಯೇ ಇರುತ್ತೀಯೆ. ಸರ್ವರಲ್ಲಿಯೂ ಇರುವ ಬೇರೆ ಬೇರೆ ನಿನ್ನ ಅಂತರ್ಯಾಮಿ ರೂಪಗಳು ಎಲ್ಲಾ ಒಂದೇ! ಅವು ನಿನ್ನ ಸಾಕ್ಷಾತ್ಸ್ವರೂಪವೇ ಆಗಿರುತ್ತವೆ. ಅಪರೋಕ್ಷಜ್ಞಾನವು ಅಭಿವೃದ್ಧಿಯಾಗಲಾಗಿ ಜ್ಞಾನಿಗಳು ನಿನ್ನ ಮತ್ಸ್ಯಾದ್ಯವತಾರಗಳನ್ನೂ, ನಿನ್ನ ಮೂಲರೂಪದಲ್ಲಿ ಯಾವ ನಾಭಿಕಮಲದಿಂದ ನಾನು ಹುಟ್ಟಿದೆನೋ ಆ ರೂಪವನ್ನೂ ಸಹ ನೋಡಲು ಸಮರ್ಥರಾಗುವರು. ಈ ನಿನ್ನ ಪದ್ಮನಾಭರೂಪವೇ ಎಲ್ಲಾ ಅವತಾರರೂಪಗಳಿಗೂ ಮೂಲಸ್ಥಾನವಾಗಿರುವುದು.

ನೀನು ಅನಾದಿನಿತ್ಯನು. ನಿರ್ವಿಕಾರನು. ಸದಾನಂದ ಜ್ಞಾನೈಕದೇಹನು. ಅಪ್ರತಿಹತ ತೇಜಸ್ಸ್ವರೂಪನು. ಸರ್ವ ಜಗತ್ಸೃಷ್ಟ್ಯಾದ್ಯಷ್ಟಕರ್ತನು. ಪ್ರಪಂಚದಿಂದ ವಿಲಕ್ಷಣನು. ಸರ್ವಕ್ಕೂ ಕಾರಣನು. ಸರ್ವರಿಗೂ ಉಪಜೀವ್ಯನು. ಭೂತೇಂದ್ರಿಯ ಮನೋಬುದ್ಧಿಗಳಲ್ಲಿ ವ್ಯಾಪಕನು. ಇಂತಹ ನಿನ್ನ ರೂಪವನ್ನು ನಾನು ಆಶ್ರಯಿಸಿರುತ್ತೇನೆ. ನಿನ್ನ ಸರ್ವಾಂತರ್ಯಾಮಿ ರೂಪಗಳೆಲ್ಲವನ್ನೂ, ನಿನ್ನ ರೂಪವೆಂಬ ಜ್ಞಾನವುಳ್ಳವನು. ಸರ್ವಾಂತರ್ಯಾಮಿರೂಪಗಳ ಏಕತತ್ವವನ್ನನ್ನುಭವಿಸುವವನು.

ನಿನ್ನನ್ನು ಭಕ್ತಿಯಿಂದ ಉಪಾಸಿಸುವ ಸರ್ವರಿಗೂ, ಅವರವರ ಯೋಗ್ಯತಾನುಸಾರವಾಗಿ ಗೋಚರನಾಗುತ್ತೀಯೆ. ಇಂದ್ರಿಯವಿಷಯಾಸಕ್ತರಿಗೆ ನೀನು ದೊರಕುವವನಲ್ಲ. ಆದುದರಿಂದ ಅವರು ನರಕವನ್ನೂ, ಅಂಧತಮಸ್ಸನ್ನೂ ನಿನ್ನ ಉಪಾಸನೇ ಇಲ್ಲದವರಾದ ಕಾರಣ ಹೊಂದುವರು. ಈ ರೀತಿಯಿಂದ, ಸಾಧನಸಂಪತ್ತಿಯುಳ್ಳವರಿಗೆ ಕಾಣಿಸತಕ್ಕವನೂ, ಅಸಜ್ಜನರಿಗೆ ದೂರನೂ ಆದ ನಿನಗೆ ನಮಸ್ಕಾರ. ಗುರುಮುಖದಿಂದ ವೇದಶಾಸ್ತ್ರ ಉಪನಿಷತ್ತುಗಳನ್ನು ಅಧ್ಯಯನ ಮಾಡಿ, ಅರ್ಥಗಳನ್ನು ತಿಳಿದು, ಏಕಾಂತ ಭಾವದಿಂದ ನಿನ್ನನ್ನು ಭಕ್ತಿಯಿಂದ ಆರಾಧಿಸುವವರ, ಹೃದಯಕಮಲದಲ್ಲಿ, ನಿನ್ನ

ಕ್ಷೀರಾಬ್ಧಿಶಾಯಿಯಾದ ಈ ಪದ್ಮನಾಭರೂಪವೆಂಬ, ನಿನ್ನ ನಾಭಿಕಮಲ ಗಂಧವು ಉತ್ಪನ್ನವಾಗಿ, ಅವರ ಜ್ಞಾನದೃಷ್ಟಿಗೆ ಈ ನಿನ್ನ ರೂಪವು ಗೋಚರವಾಗುತ್ತೆ. ಹೃತ್ಸ್ಥಲದಲ್ಲಿ ಕಾಣುವ ಪರಮಾತ್ಮನ ರೂಪಕ್ಕೆ, ಪರಮಾತ್ಮನ ಗಂಧವೆಂದು ಹೆಸರು. ಭಕ್ತರ ಹೃದಯದಲ್ಲಿ ಅಭಿವ್ಯಕ್ತನಾದ ನೀನು ಅವರ ಭಕ್ತಿಗೆ ಒಲಿದು ತಿರೋಧಾನವಾಗದೇ, ಅವರು ಧ್ಯಾನಿಸುವಷ್ಟು ಕಾಲವೂ ಕಾಣುತ್ತಿರುತ್ತೀಯೆ. ಭಕ್ತರು ನಿನ್ನ ಪಾದಾಶ್ರಯದಿಂದ ಭಯರಹಿತರಾಗುವರು.

ನಿನ್ನ ಪಾದಾರವಿಂದಗಳಲ್ಲಿ ವಿಮುಖರಾದವರಿಗೇ, ಬಂಧು, ಮಿತ್ರ, ದ್ರವ್ಯ ಗೇಹಾದಿ ವಿಯೋಗ ರೂಪ ಭಯಗಳೂ, ದುಃಖವೂ, ಆಶೆಯೂ, ಅಪಜಯವೂ, ಬಹಳವಾದ ಲೋಭವೆಂಬ ಜಿಪುಣತ್ವವೂ, ನಾನು ನನ್ನದು ಎಂಬ ಅಭಿಮಾನವೂ, ಸರ್ವದಾ ಉಂಟಾಗಿ, ಅವರನ್ನು ದೀನರನ್ನಾಗಿ ಮಾಡಿ ದುಃಖಪಡಿಸುತ್ತವೆ. ಅಲ್ಪವಾದ ವಿಷಯಸುಖಗಳನ್ನು ಹೊಂದಲು ಸದಾ ಪ್ರಯತ್ನಿಸುತ್ತಾ, ನಿತ್ಯವೂ ಹಶಿವು, ಬಾಯಾರಿಕೆ, ಶೀತೋಷ್ಣ ಸುಖದುಃಖ, ಕಾಮಗಳಿಂದ ಪೀಡಿತರಾಗಿ ದೀನರಾಗಿರುವ ಕಾರಣ, ಪರಮಾತ್ಮನಿಂದ ವಿಮುಖರಾಗಿ, ಪರಮಾತ್ಮನ ಆರಾಧನೆಯಿಂದ ಸರ್ವಾಭೀಷ್ಟಗಳನ್ನು ಹೊಂದಲು ಸಾಧ್ಯವಿದ್ದರೂ, ಅದಕ್ಕೆ ಪ್ರಯತ್ನಿಸದೆ, ನರಕಾಗ್ನಿಯಲ್ಲಿ ಬಿದ್ದು ನರಳುತ್ತಿರುವ ಅಲ್ಪಜೀವರನ್ನು ಕಂಡು ನನಗೆ ಬಹಳ ಮನಸ್ಸಿನಲ್ಲಿ ತಾಪ, ಎಂದರೆ ಕನಿಕರ ಉಂಟಾಗುತ್ತಿದೆ

ಸ್ವಾಮಿ! ಸುಖವನ್ನಪೇಕ್ಷಿಸಿ ಅಜ್ಞಾನಿಗಳು ಕಾಮಕರ್ಮಗಳನ್ನು ಮಾಡಿ, ಅದರಿಂದ ದುಃಖಪರಂಪರೆಗಳನ್ನೇ ಹೊಂದುತ್ತಾ ಭಗದರ್ಪಿತವಾದ್ದರಿಂದ ವ್ಯರ್ಥವಾದ ಕರ್ಮಗಳನ್ನು ಮಾಡುತ್ತಾ ಬಳಲುತ್ತಾರೆ. ಜ್ಞಾನಿಗಳಾದ ಮೋಕ್ಷಯೋಗ್ಯ ಜನರು, ಸಕಲ ಇಂದ್ರಿಯಾದಿ ವ್ಯಾಪಾರಗಳೂ, ಸಕಲ ವೇದೋಕ್ತ ವಿಹಿತ ಕರ್ಮಗಳೂ, ಭಗವದಧೀನಗಳೆಂದೂ, ಭಗವತ್ಪ್ರೀತಿಗಾಗಿ ಪರಮಾತ್ಮನಿಂದ ಪ್ರೇರಿತವಾಗಿ ಜೀವರಿಂದ ಮಾಡಲ್ಪಡುತ್ತದೆಂದೂ ತಿಳಿದು, ಅಹಮಮತಾದಿ ದೋಷರಹಿತರಾಗಿ, ವೈರಾಗ್ಯ ಸಂಪಾದಿಸಿ, ಭಕ್ತಿ ಮಾಡಿ, ದೇವರ ದಯದಿಂದ ಸಂಸಾರದಿಂದ ಮುಕ್ತರಾಗುತ್ತಾರೆ.

ನಿತ್ಯಸಂಸಾರಿ ಲಕ್ಷಣವುಳ್ಳ ಜೀವರು, ಅಜ್ಞಾನವೆಂಬ ಕತ್ತಲೆಯಲ್ಲಿ ಕ್ಕಿ, ಇಂದ್ರಿಯ ತೃಪ್ತಿಗಾಗಿ ನಾನಾ ವಿಕಾರ ವುಳ್ಳ ಮನಸ್ಸಿನ ಬಯಕೆಗಳಿಂದ ಅವುಗಳನ್ನು ಪಡೆಯುವುದಕ್ಕಾಗಿ ಬೇಕಾದ್ದು ದುಷ್ಟಕರ್ಮಗಳನ್ನಾಚರಿಸುತ್ತಾ, ವಿಹಿತಕರ್ಮಗಳನ್ನು ಮಾಡದೇ ಉಪೇಕ್ಷಿಸುವವರಾಗಿ, ಅಪೇಕ್ಷಿಸುವ ಕಾಮಗಳನ್ನು ಪಡೆಯದೇ ಕ್ಲೇಶವನ್ನೇ ಹೊಂದುತ್ತಾ, ಅವರು ಭೂಮಿ, ನರಕ, ಸ್ವರ್ಗಗಳಲ್ಲಿ ವಾಸಮಾಡುವವರಾಗುತ್ತರೆ. ನಿತ್ಯಲೋಪವಾದ ವಿಹಿತಕರ್ಮದಿಂದ ಕರ್ಮಭ್ರಷ್ಟರಾಗಿ, ದೇವರ ಉಪೇಕ್ಷೆಯಿಂದ ಸರ್ವಸುಖಸಂಪತ್ತಿಗಳ ನಾಶವನ್ನೂ ಹೊಂದುತ್ತಾರೆ.

ತಮೋಯೋಗ್ಯರು ಭೂತಹಿಂಸೆ, ಕ್ಷುದ್ರತನ, ನಿರ್ದಯತೆ, ಇವುಗಳಿಂದ ಮಹಾಪಾಪಿಗಳಾಗಿ, ನರಕ, ಅಂಧಂತಮಸ್ಸುಗಳಿಗೆ ಹೋಗಿ ಸರ್ವದಾ ದುಃಖಿಸುತ್ತಾರೆ. ಹೀಗೆ ತ್ರಿವಿಧಜೀವರ ಸ್ವಭಾವ, ಗತಿಗಳು ಕರ್ಮಾನುಸಾರ ಬೇರೆಬೇರೆಯಾಗಿರುತ್ತವೆ. ಕೇವಲ ಋಷಿಕುಲೋತ್ಪನ್ನರಾದರೂ ಕೂಡ ಇಂದ್ರಿಯ ತೃಪ್ತಿ, ದೇಹ ಸಂರಕ್ಷಣಾ ರೂಪ ಕರ್ಮಗಳಲ್ಲೇ ಆಸಕ್ತರಾಗಿ, ಭಗವದ್ವಿಮುಖರಾದರೆ ಹತಭಾಗ್ಯರಾಗುತ್ತರೆ. ವೇದಾಂತಾದಿ ಸಚ್ಛಾಸ್ತ್ರಗಳ ಶ್ರವಣದಿಂದ ಉತ್ಪನ್ನವಾದ ಭಕ್ತಿಯೋಗದಿಂದ, ನಿರ್ಮಲವಾದ ಇಂದ್ರಿಯ ಅಂತಃಕರಣಗಳುಳ್ಳವರಾದ ನಿನ್ನ ಭಕ್ತರು,

ಎಲೈ ಸರ್ವಜಗನ್ನಿಯಾಮಕನಾದ ವಿಷ್ಣುವೇ! ಯಾವ ಯಾವ ಭಾವನೆಗಳಿಂದ, ಎಷ್ಟೆಷ್ಟು ಗುಣಗಳನ್ನು ಉಪಸಂಹಾರರೂಪ ಉಪಾಸನೆಗಳಿಂದ ತಮ್ಮತಮ್ಮ ಹೃತ್ಸ್ಥಲದಲ್ಲಿ ಭಾವಿಸುವರೋ ಅದಕ್ಕೆ ತಕ್ಕ ತಕ್ಕ ರೂಪಗಳಿಂದ ನೀನು ಅವರಿಗೆ ಹೃತ್ಸ್ಥಲದಲ್ಲಿ ಗೋಚರನಾಗುತ್ತೀಯೆ! ಮತ್ತು ಅವರ ಉದ್ಧಾರಾರ್ಥವಾಗಿ ಹೊರಗೂ ಮತ್ಸ್ಯಾದಿ, ಕಪಿಲಾದಿ, ರಾಮಕೃಷ್ಣಾದ್ಯವತಾರಗಳನ್ನೂ ಮಾಡಿ, ದುಷ್ಟಸಂಹಾರ, ಶಿಷ್ಟಸಂರಕ್ಷಣ, ಧರ್ಮಸಂಸ್ಥಾಪನ ಮತ್ತು ಜ್ಞಾನಪ್ರಕಾಶ ಕಾರ್ಯಗಳನ್ನು ಮಾಡುತ್ತೀಯೆ! ಮನಸ್ಸಿನಲ್ಲಿ ಕಾಮಾಪೇಕ್ಷೆಗಳಿಂದ ಕೂಡಿದವರಾಗಿ, ನಾನಾ ದ್ರವ್ಯ ಉಪಚಾರಗಳಿಂದ ನಿನ್ನನ್ನು ಪೂಜಿಸಿ, ದೇವತೆಗಳು ಆರಾಧಿಸಿದರೂ ಕೂಡ, ಅವರಿಗೆ ನಿನ್ನ ಅತ್ಯುತ್ತಮ ಪ್ರಸಾದವಾಗಲಾರದು.

ಕೇವಲ ಸಾಧಾರಣ ಮನುಷ್ಯನಾದರೂ, ಭೂತದಯಾಶೀಲನಾಗಿ, ನಿರಪೇಕ್ಷೆಯಿಂದ ಇಂದ್ರಿಯಗಳನ್ನು ನಿಗ್ರಹಿಸಿ, ವೇದೋಕ್ತ ಜ್ಞಾನದಿಂದುಂಟಾದ ಭಕ್ತಿಯುಳ್ಳವನಾಗಿ, ಕೇವಲ ಉದಕ ಅಥವ ಗರಿಕೇಹುಲ್ಲಿನಿಂದ ನೀನು ಅರ್ಚಿಸಲ್ಪಟ್ಟರೂ, ಪರಮತೃಪ್ತನಾಗಿ ದೇವತೆಗಳಿಗೂ ಅಪ್ರಾಪ್ಯವಾದ ಅನುಗ್ರಹವನ್ನು ಅವನಿಗೆ ನೀನು ಮಾಡುತ್ತೀಯೆ! ಆದುದರಿಂದ ಭಕ್ತಿರಹಿತವಾಗಿ, ಸಕಾಮರಾಗಿ, ಜನರು ಮಾಡುವ ನಾನಾ ವ್ರತ, ನಿಯಮಾದಿ ಕರ್ಮಗಳೂ, ಯಜ್ಞ ಯಾಗಾದಿಗಳೂ, ನಾನಾ ವಿಧ ದಾನಗಳೂ, ಕಠಿಣ ತಪಸ್ಸೂ, ಕೂಡ ಕೇವಲ ದುಃಖಗಳನ್ನು ಅಂತ್ಯದಲ್ಲುಂಟುಮಾಡುವ, ತಾತ್ಕಲಿಕವಾಗಿ ಸುಖದಂತೆ ತೋರುವ ಐಹಿಕ ಫಲಗಳನ್ನೇ ಕೊಡುವುದಲ್ಲದೆ, ನಿನ್ನನುಗ್ರಹರೂಪವಾದ ಉತ್ತಮಫಲಗಳನ್ನು ಕೊಡುವುದಿಲ್ಲ. ಎಕೆಂದರೆ ಅಂತಃಪೂಜೆಯು ನಿನಗೆ ಭಕ್ತಿಯಿಂದ ಸಮರ್ಪಿಸಲ್ಪಡದೇ ಇದ್ದುದರಿಂದ ನೀನು ಸ್ವೀಕರಿಸುವುದಿಲ್ಲ. ಕೇವಲ ವ್ಯರ್ಥವಾಗಿ, ಆ ಕರ್ಮಮಾಡಿದ ಶ್ರಮ, ಧನವ್ಯಯ ಮಾತ್ರ ಅವರಿಗಾಗುವ ಫಲಗಳಾಗುತ್ತವೆ. ನಿತ್ಯನೂ, ಪೂರ್ಣಸ್ವರೂಪಜ್ಞಾನನೂ, ಷಡ್ವಿಧ ಭೇದಮೋಹರಹಿತನೂ, ಸಕಲ ಸುಜ್ಞಾನಬೋಧಕನೂ, ಸಕಲ ಜಗದ್ವಿಲಕ್ಷಣನೂ ಆದ ಪರಮಾತ್ಮನಿಗೆ ನಮಸ್ಕಾರ!

ಆರು ವಿಧ ಭೇದ ಮೋಹಗಳು ಯಾವುವೆಂದರೆ, ದೇವರು ಅಪೂರ್ಣನೆಂದೂ, ಬೇರೆ ನಿಯಾಮಕವುಳ್ಳವನೆಂದೂ, ದೇವರ ಅವತಾರಗಳು ಪರಸ್ಪರ ಭೇದ ವುಳ್ಳವುಗಳೆಂದೂ, ಜೀವನೇ ಬ್ರಹ್ಮಸ್ವರೂಪನೆಂದೂ, ದೇವರೇ ಜೀವನಾಗಿದ್ದಾನೆಂದೂ, ದೇವರೇ ಜಡಪ್ರಕೃತಿ ರೂಪ ಪ್ರಪಂಚನಾಗಿದ್ದಾನೆಯೆಂದೂ ತಿಳಿಯುವುದು, ಆರು ವಿಧ ಭೇದ ಮೋಹಗಳೆಂಬ ಅಜ್ಞಾನಗಳು ದೇವರಿಗಿಲ್ಲ. ದೇವರ ಪ್ರಸಾದದಿಂದ ಜೀವೋತ್ತಮರಿಗೆ, ಅಂದರೆ ಸಜ್ಜನರಿಗೆ ಕ್ರಮವಾಗಿ ಈ ಆರು ವಿಧ ಅಜ್ಞಾನಗಳೂ ನಿವೃತ್ತವಾಗಿ, ಪರಮಾತ್ಮನ ನಿಶ್ಚಯಜ್ಞಾನ ಉಂಟಾಗುತ್ತದೆ.

ನಿತ್ಯ ಅಪ್ರಾಕೃತಜ್ಞಾನನಿಧಿಯಾದವನಿಗೆ, ಸರ್ವಸ್ವತಂತ್ರ, ಸರ್ವಶಕ್ತ, ಸರ್ವತ್ರವ್ಯಾಪ್ತ, ಸುಖಸಂಪೂರ್ಣ ಸರ್ವನಿಯಾಮಕ ಸ್ವಾಮಿಗೆ, ಅಪೂರ್ಣತೆ ಎಂಬ ಕುಂದು ಹೇಗೆ ಉಂಟಾದೀತು? ತನ್ನ ವಶದಲ್ಲಿ ಸರ್ವದೇಶ, ಕಾಲ, ಪ್ರಕೃತಿ, ಜೀವರನ್ನು ಸದಾ ಹೊಂದಿರುವವನಿಗೆ ಬೇರೆ ನಿಯಾಮಕನು ಎಲ್ಲಿ ಬಂದಾನು? ದೀಪದಿಂದ ದೀಪ ಹಚ್ಚುವಂತೆ ಅನಂತಾವತಾರಗಳುಳ್ಳ ಪೂರ್ಣದೇಹನಿಗೆ, ತನ್ನ ಮೂಲರೂಪದಿಂದ ತಾನೇ ಅಭಿವ್ಯಕ್ತಮಾಡಿದ ಅಪ್ರಾಕೃತ ಅವತಾರರೂಪಗಳಿಂದ ಭಿನ್ನತ್ವ ಹೇಗೆ ಬಂದೀತು? ಕಾಲ ಕರ್ಮ ಗುಣಗಳಧೀನನಾಗಿ ಜನನ ಮರಣ ಸ್ವರೂಪ ಅಶಾಶ್ವತ, ಹೀನದೇಹಗಳನ್ನು ಹೊಂದುವ, ಸದಾ ಪರಮಾತ್ಮನ ಆಶ್ರಯದಲ್ಲಿರುವ ಜೀವನು ಹೇಗೆ ಬ್ರಹ್ಮನಾದಾನು? ಸಕಲ ಜೀವಜಡಾತ್ಮಕ ಪ್ರಪಂಚಕ್ಕೆ ಅತ್ಯಂತ ವಿಲಕ್ಷಣನೂ, ನಿಯಾಮಕನೂ, ಆದ ಪರಮಾತ್ಮನು, ಹೇಗೆ ಅಲ್ಪನಾದ ಅಜ್ಞಾನಿಯಾದ ಜೀವನೇ ಆಗಲೀ, ಚೇತನ, ಜ್ಞಾನಶೂನ್ಯವಾದ ಜಡರೂಪನೇ ಆಗಲಿ ಆದಾನು? ಇವೆಲ್ಲಾ ಅಸಂಭವಗಳಾದ ಕಾರಣ ಮಿಥ್ಯಾಜ್ಞಾನಗಳು.

ಈ ಮಿಥ್ಯಾಜ್ಞಾನವನ್ನು ಹೊಂದಿದವರು ತಮೋಗುಣದವರು, ನರಕಾದ್ಯನರ್ಥಭಾಗಿಗಳು. ಲೋಕವಿಡಂಬನಾರ್ಥವಾಗಿ ನೀನು ಮಾಡಿದ ಯಾವ ರಾಮಕೃಷ್ಣಾದ್ಯವತಾರಗಳ, ಪರಮಮಂಗಳ ನಾಮೋಚ್ಚಾರಣೆ ಮಾತ್ರದಿ ಮರಣಕಾಲದಲ್ಲಿ ಸ್ವಾಭಾವಿಕವಾಗಿ ನಿನ್ನ ಭಕ್ತರು ಮಾಡಿ, ಸಕಲ ದುಃಖನಿವೃತ್ತಿ ಹೊಂದಿ ಮುಕ್ತರಾಗುವರೋ, ಅಂತಹ ನಾನಾವತಾರ ಸ್ವರೂಪನಾದ ನಿನಗೆ ನಮಸ್ಕಾರ, ಬ್ರಹ್ಮನೆಂಬ ನಾನೂ, ಗಿರೀಶನೆಂಬ ರುದ್ರನೂ, ವಿಷ್ಣುವೆಂಬ ನೀನೂ ಸಹ ಸೃಷ್ಟಿ, ಸಂಹಾರ, ಪಾಲನೆ ಎಂಬ ಮೂರು ಕವಲುಗಳುಳ್ಳ, ಎಲೈ ಪದ್ಮನಾಭನೆಂಬ ಜಗದಾಖ್ಯವೃಕ್ಷನೇ ನಿನಗೆ ನಮಸ್ಕಾರ.

ಪ್ರಪಂಚದ ಜನರು ದುಷ್ಟಕರ್ಮ ನಿರತರೂ, ಸತ್ಕರ್ಮದಲ್ಲಿ ಆಸಕ್ತಿಇಲ್ಲದವರೂ ಆಗಿ, ನಿನ್ನ ಪೂಜಾಸ್ವರೂಪಗಳಾದ ಸತ್ಕರ್ಮಗಳ ಸ್ವರೂಪವನ್ನು ತಿಳಿಯದೇ, ಕೇವಲ ಮೂಢರಾಗಿ ಜೀವನದಲ್ಲಿ ಅತ್ಯಂತ ಆಶೆಯುಳ್ಳವರಾಗಿರುತ್ತಾರೆಯೋ, ಅಂತಹ ದುರ್ಜನರ ಸರ್ವಸುಖ, ಜೀವನಾಶೆಗಳು

ಯಾರ ಸಂಕಲ್ಪದಿಂದ ನೆರವೇರದೇ ಹತಾಶರಾಗುತ್ತಾರೆಯೋ, ಅಂತಹ ದುರ್ಜನರಿಂದ ತಿಳಿಯಲ್ಪಡದ ನಿನ್ನ ಪಾದಾರವಿಂದಗಳಿಗೆ ನಮಸ್ಕರಿಸುತ್ತೇನೆ. ಸತ್ಯಲೋಕ ಪದವಿ ಎಂಬ ನನಗೆ ದೇವರು ಕೊಟ್ಟ ವಿಭೂತಿರೂಪ ಐಶ್ವರ್ಯವೂ ಕೇವಲ ನನ್ನ ನೂರು ವರ್ಷ ಆಯುಃಪ್ರಮಾಣ ವುಳ್ಳದ್ದೆಂದು ತಿಳಿದಿರುವುದರಿಂದ, ಆ ಕಾಲನಿಯಾಮಕನಾದ ಹೇ ಅಪರಿಮಿತಗುಣ ಪೂರ್ಣನಾದ ಸ್ವಾಮಿಯೇ! ನಾನೂ ನಿನ್ನ ಅಪರಿಮಿತಶಕ್ತಿಗೆ ಅಧೀನನಾಗಿ, ಭಯಪಟ್ಟು, ಭಕ್ತಿಯಿಂದ ನಿನ್ನನ್ನಾಶ್ರಯಿಸಿರುತ್ತೇನೆ!

ನಿನ್ನ ವಿಷಯಕ ಉತ್ತಮಜ್ಞಾನ ಪ್ರಾಪ್ತಿಗಾಗಿಯೂ, ಮೋಕ್ಷದಲ್ಲಿ ಆನಂದೋದ್ರೇಕಕ್ಕಾಗಿಯೂ, ನಿನ್ನ ಪ್ರೀತಿಯನ್ನು ಉಂಟುಮಾಡುವ ಬಹುವಿಧ ತಪಸ್ಸುಗಳಿಂದ ಸ್ವಾಮಿನ್! ನಾನು ನಿನ್ನನ್ನಾರಾಧಿಸುವೆನು. ಇತರ ಜೀವರಿಗೆ ತಿರ್ಯಗ್ಯೋನಿಗಳು ಪ್ರಾಪ್ತವಾದರೆ ಅಜ್ಞಾನವು ಉಂಟಾಗುವುದು. ನೀನು, ಮತ್ಸ್ಯ, ಕೂರ್ಮ, ವರಾಹ, ನಾರಸಿಂಹಾದಿ ಅವತಾರಗಳನ್ನು ನಿನ್ನ ಸ್ವೇಚ್ಛೆಯಿಂದ ಸ್ವೀಕರಿಸಿದರೂ, ಮನುಷ್ಯರಲ್ಲಿ ರಾಮಕೃಷ್ಣದ್ಯವತಾರ ಮಾಡಿದಾಗ್ಯೂ, ದೇವತೆಗಳಲ್ಲಿ ವಾಮನ, ನರ, ನಾರಾಯಣಾದಿ ಅವತಾರಗಳನ್ನೂ, ಋಷಿಗಳಲ್ಲಿ ವೇದವ್ಯಾಸ, ಕಪಿಲ, ದತ್ತಾತ್ರೇಯ ಮಹಿದಾಸಾದಿ ಅವತಾರಗಳನ್ನು ಮಾಡಿದಾಗ್ಯೂ, ಆ ಎಲ್ಲಾ ರೂಪಗಳಿಂದಲೂ ಅಪ್ರಾಕೃತಜ್ಞಾನಾನಂದಾದಿ ಸ್ವರೂಪನೇ ಆಗಿದ್ದು, ಅವಿದ್ಯೆಗಳಿಂದ ಮುಟ್ಟಲ್ಪಡದೇ ಇದ್ದ ಮತ್ತು ನಾಭಿಕಮಲದಿಂದ ನನ್ನನ್ನು ಪಡೆದಿದ್ದರಿಂದ ನನಗೆ ತಂದೆಯಾದ ಶೇಷಶಾಯಿ ಶ್ರೀಪದ್ಮನಾಭನೇ ನಿನಗೆ ನಮಸ್ಕಾರ.

ಎಲೈ! ಪದ್ಮನಾಭನೇ ನೀನು ಅವಿದ್ಯೆಯೆಂಬ ಅಜ್ಞಾನದಿಂದ ರಹಿತನಾದಾಗ್ಯೂ, ತಮೋಗುಣ ವ್ಯಾಪಾರವಾದ ನಿದ್ರೆಯುಳ್ಳವನಂತೆ ಶೇಷತಲ್ಪದಲ್ಲಿ ಮಲಗಿದ್ದುದು ಕೇವಲಲೀಲೆಯಿಂದ ಅರೆಗಣ್ಣು ಮುಚ್ಚಿಕೊಂಡು ಸಕಲ ಪ್ರಪಂಚವನ್ನು ಉದರದಲ್ಲಿ ಧರಿಸಿ, ಯೋಗನಿದ್ರೆಯಂತೆ ತೋರಿಸಿದ ಭಾವವೇ ವಿನಃ ನೀನು ನಿದ್ರೆಯ ನಿಮಿತ್ತ ಉಂಟಾಗತಕ್ಕ ವಿಸ್ಮೃತಿ ಮುಂತಾದ ದೋಷರಹಿತನು. ಈಗ ನನ್ನಿಂದ ಮುಂದೆ ಸೃಷ್ಟಿ ಮಾಡಿಸಬೇಕೆಂಬ ಉದ್ದೇಶದಿಂದ ನಿನ್ನ ಕಣ್ಣುಗಳನ್ನು ತೆರೆದು, ನನಗೆ ನಿನ್ನ ದರ್ಶನವನ್ನನುಗ್ರಹಿಸಿರುತ್ತೀಯೆ!

ಜಗತ್ಸುಹೃತ್ತಾದವನೂ, ಸರ್ವಾತ್ಮಕನೂ, ಷಡ್ಗುಣಪೂರ್ಣನೂ, ಸರ್ವೈಶ್ವರ್ಯಮಯನೂ ಆದ, ಮಾಯಾನಾಮಕ ಲಕ್ಷ್ಮೀಕಾಂತನೇ, ನೀನು ನಿನ್ನ ಇಚ್ಛಾ ಪ್ರಕಾರ ಮುಂದೆ ಸೃಷ್ಟಿಸಬೇಕಾದ ಸಕಲವನ್ನೂ ನಾನು ಹೇಗೆ ತಿಳಿದು ಸೃಷ್ಟಿಸೇನೋ ಅಂತಹ ಶಕ್ತಿಪ್ರದನಾಗು! ನಿನ್ನ ನಾಭಿ ಸರೋವರದಲ್ಲಿನ ಕಮಲದಲ್ಲಿ ಹುಟ್ಟಿದ ನನಗೆ, ಸರ್ವ ವೇದಪ್ರಣೀತವಾದ ಯಾವ ವಿಜ್ಞಾನದಿಂದ ನಿನ್ನ ರೂಪದರ್ಶನವಾಯಿತೋ, ಅಂತಹ ವಿಜ್ಞಾನವೂ ನಿನ್ನ ರೂಪವೂ ಯಾವಾಗಲೂ ಮನಸ್ಸಿನಲ್ಲಿ ಲೋಪವಾಗದೇ ಸನ್ನಿಹಿತವಾಗಿರಲಿ.

ಭಕ್ತಾನುಕಂಪಿಯೂ, ಅನುಗ್ರಹೋನ್ಮುಖನೂ ಆದ ನಿನಗೆ ನಮಸ್ಕಾರ, ಎಂದು ಹೇಳಿ ಸುಮ್ಮನಾದರು.

## ಭಗವಂತನಿಂದ ಬ್ರಹ್ಮದೇವರಿಗೆ ಸೃಷ್ಟಿ ಮಾಡಲು ಆಜ್ಞಾ ಸಂದೇಶ

ನಂತರ ಪರಮಾತ್ಮನು ಗಂಭೀರವಾದ ಧ್ವನಿಯಿಂದ, ಪ್ರೀತಿಪೂರ್ವಕ ಬ್ರಹ್ಮದೇವರನ್ನು ನೋಡುತ್ತಾ, ಎಲೈ! ವೇದಗರ್ಭನೇ! ಭಯಪಡಬೇಡ, ನಾನು ಸೃಷ್ಟಿಮಾಡೆಂದು ಹೇಳಿದ ಮಾತಿನಿಂದ ಹರ್ಷವುಳ್ಳವನಾಗಿ, ಸುಖರೂಪವಾಗಿಯೇ ನೀನು, ನನ್ನನುಗ್ರಹದಿಂದ ಹಿಂದೆ ಸೃಷ್ಟಿಸಿದ್ದ ಪ್ರಪಂಚವು ಹೇಗಿದ್ದಿತೆಂಬುದನ್ನು ತಿಳಿದು ಅನಾಯಾಸದಿಂದ ಸೃಷ್ಟಿಮಾಡುವಿ. ಆದುದರಿಂದ ನೀನು ಪುನಃ ನನ್ನನ್ನೂ, ನನ್ನ ಶಕ್ತಿ ಎನಿಸುವ ಮಾಯಾನಾಮಕ ಲಕ್ಷ್ಮಿಯನ್ನೂ ಕುರಿತು ಪುನಃ ತಪಸ್ಸು ಮಾಡುವವನಾಗು. ಆಗ ಯಾವ ಲಕ್ಷ್ಮಿಯಲ್ಲಿ ಸಕಲ ಪ್ರಪಂಚವೂ ಲಯ ಹೊಂದಿದೆಯೋ ಆ ಪ್ರಪಂಚವು ಪೂರ್ವಸೃಷ್ಟಿಯಲ್ಲಿದ್ದಂತೆ, ಲಕ್ಷ್ಮೀದೇವಿಯಲ್ಲಿ ಆಕೆಯ ಅನುಗ್ರಹದಿಂದ ನಿನಗೆ ಕಾಣಿಸುವುದು. ನಂತರ ನಿನ್ನ ಹೃತ್ಸ್ಥಲದಲ್ಲೇ ಲಕ್ಷ್ಮೀಸಹಿತನಾಗಿ, ಲಕ್ಷ್ಮಿಯನ್ನೂ ಸಕಲಲೋಕಗಳನ್ನೂ ಅಂಗಾಂಗಗಳಲ್ಲಿ ಧರಿಸಿರುವ ನನ್ನನ್ನೂ ಕಾಣುತ್ತೀಯೆ! ನಿನ್ನಲ್ಲಿ ಸನ್ನಿಹಿತನಾದ ಶಕ್ತಿಯಿಂದ ಮುಂದಿನ ಎಲ್ಲಾ ಸೃಷ್ಟಿಯೂ ನಿರ್ವಿಘ್ನವಾಗಿ ನೆರವೇರುವವು.

ಬಿದಿರಲ್ಲಿ ಅಗ್ನಿ ಇರುವಂತೆ ಸರ್ವ ಭೂತರಾಶಿಗಳಲ್ಲಿ ನನ್ನನ್ನು ತಿಳಿದು, ಈ ಅಗಾಧ ಪ್ರಳಯೋದಕದ ಹೊಡೆತದಿಂದ ಏನು ಸ್ವಲ್ಪ ಭಯಪಟ್ಟವನಂತೆ ಆದೆಯೋ, ಆ ಭಯವನ್ನೂ ಬಿಡು. ನಿರ್ಭಯನಾಗು. ನಾನಾ ಕರ್ಮವಿಪಾಕ ವುಳ್ಳ ಜೀವರನ್ನು ನಾನಾ ವಿಕಾರ ವುಳ್ಳ ಪ್ರಾಕೃತ ಶರೀರಗಳಿಂದ ಸೃಷ್ಟಿಸಿ, ಅವರಲ್ಲಿ ಪ್ರವೇಶಿಸಿ, ಅವರ ಭೂತೇಂದ್ರಿಯಗಳ ಕಾರ್ಯ ಮಾಡಿಸಿದರೂ, ನಾನು ಆ ಭೂತೇಂದ್ರಿಯ, ಪ್ರಾಕೃತ ಶರೀರ ಸಂಬಂಧರಹಿತನೂ, ಜ್ಞಾನಾನಂದೈಕ ಸ್ವರೂಪನೂ ಎಂದು ನನ್ನನ್ನು ತಿಳಿದ ಜ್ಞಾನಿಗಳಿಗೇ, ಪ್ರಕೃತಿ ಗುಣಗಳು ಬಾಧೆಪಡಿಸಲಾರವು ಎಂಬಲ್ಲಿ, ಸರ್ವಲೋಕಗುರುವೂ, ಉತ್ಕೃಷ್ಟ ವಿಜ್ಞಾನ ಸ್ವರೂಪನೂ ಅದ ನಿನ್ನನ್ನು ಸರ್ವಥಾ, ಸೃಷ್ಟಿಕಾರ್ಯಕ್ಕಾಗಿ ರಜೋಗುಣವನ್ನು ಸ್ವೀಕರಿಸಿದ ನಿನ್ನನ್ನು ರಜೋಗುಣವು ಬಾಧಿಸಲಾರದು. ಇದುವರಿಗೂ ನೀನು ಏನು ತಪಸ್ಸು ಮಾಡಿ, ನನ್ನನ್ನು ದಿವ್ಯಲೋಕ ವಿಲಕ್ಷಣ ಸ್ತೋತ್ರದಿಂದ ಸಂತೋಷ ಪಡಿಸಿದ್ದೀಯೋ, ಅದೂ ನನ್ನನುಗ್ರಹದಿಂದಲೇ ಆದದ್ದೆಂದು ತಿಳಿ. ಇಷ್ಟಾಪೂರ್ತಾದಿ ಯಜ್ಞಗಳೂ, ತಪಸ್ಸೂ, ದಾನಗಳೂ, ಸಮಾಧಿ ಯೋಗವು, ರಾಜ್ಯೈಶ್ವರ್ಯಾದಿ ಸಕಲಭೋಗಗಳೂ, ನನ್ನ ಪ್ರೀತಿಗಾಗಿಯೇ ಆಚರಿಸತಕ್ಕದ್ದೆಂದು ಜ್ಞಾನಿಗಳ ಮತ. ನಾನು ಸರ್ವಾಂತರ್ಯಾಮಿಯಾಗಿ ಆತ್ಮನೆಂದೆನಿಸುತ್ತೇನೆ. ಸರ್ವವನ್ನೂ ಸ್ವಶಕ್ತಿಯಿಂದ ಧರಿಸಿರುತ್ತೇನೆ. ಸರ್ವರಿಗೂ ಪ್ರಿಯವಾದ ಇಷ್ಟಾರ್ಥಗಳನ್ನು ಕೊಡತಕ್ಕವನು. ಸರ್ವಹಿತರಾದ, ಪತ್ನೀ, ಪುತ್ರ, ಬಂಧು,

ಸ್ನೇಹಿತರಲ್ಲಿರತಕ್ಕವನು. ಆದುದರಿಂದ ಸರ್ವಪ್ರಾಣಿಗಳಿಗೂ ಹಿತವಾಗುವಂತೆ ಆಚರಿಸಿ ನನ್ನಲ್ಲಿ ಭಕ್ತಿಮಾಡಬೇಕು. ನಿಖಿಳ ವೇದಪ್ರತಿಪಾದ್ಯನಾದ ನನ್ನಲ್ಲಿ ವ್ಯಕ್ತವಾಗುವ ಪೂರ್ವಕಲ್ಪ ಸೃಷ್ಟಿಕ್ರಮದಂತೆ, ಎಲೈ! ಸರ್ವವೇದಜ್ಞಾನಿಯಾದ ಬ್ರಹ್ಮನೇ ನೀನೂ ತಿಳಿದು, ನನ್ನ ಆಜ್ಞಾಪರಿಪಾಲಕನೆಂದು ತಿಳಿದು ಪ್ರಜೆಗಳನ್ನೂ, ಲೋಕಗಳನ್ನೂ ಸೃಷ್ಟಿಸುವನಾಗು ಎಂದನು. ಈ ರೀತಿಯಾಗಿ ಹೇಳಿ ಬ್ರಹ್ಮದೇವರಿಗೆ ತೋರಿಸಿದ್ದ ತನ್ನ ರೂಪವನ್ನು ಅಂತರ್ಧಾನವನ್ನಾಗಿ ಮಾಡಿಕೊಂಡು, ದೇವರು ಕಣ್ಣಿಗೆ ಗೋಚರನಾಗದಂತವನಾದನು, ಎಂದು ಮೈತ್ರೇಯರು ವಿದುರನಿಗೂ, ಶುಕರು ಪರೀಕ್ಷಿತನಿಗೂ, ಹೇಳಿದ್ದನ್ನು ಸೂತರು ಶೌನಕಾದಿಗಳಿಗೆ ಹೇಳಿದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಹತ್ತನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

## अथ एकादशोऽध्यायः

**विदुर उवाच**

अन्तर्हिते भगवति ब्रह्मा लोकपितामहः ।
प्रजाः ससर्ज कतिधा दैहिकीर्मानसीर्विभुः ॥ १ ॥

ये च मे भगवन् पृष्टास्त्वय्यर्था बहुवित्तम ।
तान् वदस्वानुपूर्व्येण छिन्धिः नः सर्वसंशयान् ॥ २ ॥

**शुक उवाच**

एवं सञ्चोदितस्तेन क्षत्त्रा कौषारवो मुनिः ।
प्रीतः प्रत्याह तान् प्रश्नान् हृदिस्थानथ भार्गव ॥ ३ ॥

**मैत्रेय उवाच**

विरिञ्चोऽपि तथा चक्रे दिव्यं वर्षशतं तपः ।
आत्मन्यात्मानमावेश्य यथाऽह भगवानजः ॥ ४ ॥

तद् विलोक्याब्जसंभूतो वायुना यदधिष्ठितम् ।
पद्ममम्भश्च तत्कालकृतवीर्येण कम्पितम् ॥ ५ ॥

तपसा ह्येधमानेन विद्यया चात्मसंस्थया ।
विवृद्धविज्ञानबलो न्यपाद् वायुं सहाम्भसा ॥ ६ ॥

तद् विलोक्य वियद्व्यापि पुष्करं यदधिष्ठितः ।
अनेन लोकान् प्राग्लीनान् कल्पितास्मीत्यचिन्तयत् ॥ ७ ॥

पद्मकोशं तदाविश्य भगवान् कर्मचोदितः ।
एकं व्यभाङ्क्षीदुरुधा त्रिधा भाव्य द्विसप्तधा ॥ ८ ॥

एतावान् जीवलोकस्य संस्थाभेदः समासतः ।
धर्मस्य ह्यनिमित्तस्य विपाकः परमेष्ठिनः ॥ ९ ॥

**विदुर उवाच**

यदात्थ बहुरूपस्य हरेरद्भुतकर्मणः ।
कालाख्यं लक्षणं ब्रह्मन् यथा वर्णय नः प्रभो ॥ १० ॥

**मैत्रेय उवाच**

गुणव्यतिकराकारो निर्विशेषोऽप्रतिष्ठितः ।
पुरुषस्तदुपादानमात्मानं लीलयाऽसृजत् ॥ ११ ॥

विश्वं वै ब्रह्मतन्मात्रं संस्थितं विष्णुमायया ।
ईश्वरेण परिच्छिन्नं कालेनाव्यक्तमूर्तिना ॥ १२ ॥

यथेदानीं तथा चाग्रे पश्चादप्येतदीदृशम् ।
सर्गो नवविधस्तस्य प्राकृतो वैकृतश्च यः ॥ १३ ॥

कालद्रव्यगुणैरस्य त्रिविधः प्रतिसङ्क्रमः ।
आद्यस्तु महतः सर्गो गुणवैषम्यमात्मनः ॥ १४ ॥

द्वितीयस्त्वहमस्तत्र द्रव्यज्ञानक्रियादयः ।
भूतसर्गस्तृतीयस्तु तन्मात्रद्रव्यशक्तिमान् ॥ १५ ॥

चतुर्थ ऐन्द्रियः सर्गो यस्तु ज्ञानक्रियात्मकः ।
वैकारिको देवसर्गः पञ्चमो यन्मयं मनः ॥ १६ ॥

षष्ठस्तु तमसः सर्गो यस्त्वबुद्धिकृतः प्रभोः ।
षडिमे प्राकृताः सर्गा वैकृतानपि मे शृणु ॥ १७ ॥

रजोभाजो भगवतो लीलेयं हरिमेधसः ।

सप्तमो मुख्यसर्गस्तु षविधस्तस्थुषां च यः ॥ १८ ॥

वनस्पत्योषधिलता त्वक्सारा वीरुधो द्रुमाः ।
उत्स्रोतसस्तमःप्राया अन्तःस्पर्शा विशोषिणः ॥ १९ ॥

तिरश्चामष्टमः सर्गः सोऽष्टाविंशद्विधो मतः ।
अविदो भूरितमसो घ्राणज्ञा हृदि(द्य)वेदिनः ॥ २० ॥

गौरजो महिषः कृष्णः सूकरो गवयो रुरुः ।
द्विशफाः पशवश्चेमे अविरुष्ट्रश्च सत्तम ॥ २१ ॥

खरोऽश्वोऽश्वतरो गौरः शरभश्चमरी तथा ।
एते चैकशफाः क्षत्तः शृणु पञ्चनखान् पशून् ॥ २२ ॥

श्वा सृगालो वृको व्याघ्रो मार्जारः शशशल्यकौ ।
सिंहः कपिर्गजः कूर्मो गोधा च मकरादयः ॥ २३ ॥

कङ्कगृध्रबकश्येना भासवल्लूरबर्हिणः ।
हंससारसचक्राह्वकाकोलूकादयः स्वगाः ॥ २४ ॥

अर्वाक्स्रोतस्तु नवमः क्षत्तरेकविधो नृणाम् ।
रजोऽधिकाः कर्मपरा दुःखे च सुखमानिनः ॥ २५ ॥

वैकृतास्त्रय एवैते देवसर्गश्च सत्तम ।
वैकारिकश्च यः प्रोक्तः कौमारस्तूभयात्मकः ॥ २६ ॥

देवसर्गश्चाष्टविधो विबुधाः पितरोऽसुराः ।
गन्धर्वाप्सरसः सिद्धा यक्षरक्षांसि चारणाः ॥ २७ ॥

भूतप्रेतपिशाचाश्च विद्याध्रा किन्नरादयः ।
दशैते विदुराख्याताः सर्गास्ते विश्वसृक्कृताः ॥ २८ ॥

अतः परं प्रवक्ष्यामि वंशान् मन्वतराणि च ।
एवं रजःप्लुतः स्रष्टा कल्पादिष्वात्मभूर्हरिः ।
सृजत्यमोघसङ्कल्प आत्मैवाऽत्मानमात्मना ॥ २९ ॥

गुणव्यत्यय एतस्मिन् मायावत्त्वादधीशितुः ।
न पौर्वापर्यमिच्छन्ति नद्यां भ्राम्यद्भ्रमेर्यथा ॥ ३० ॥

देवासुरादयः क्षत्तः कल्पेऽस्मिन् ये प्रकीर्तिताः ।
त एव नामरूपाभ्यामासन् मन्वन्तरान्तरे ॥ ३१ ॥

## ॥ इति श्रीमद्भागवते (तृतीयस्कन्धे(*3) एकादशोऽध्यायः ॥

**॥ ಹನ್ನೊಂದನೆಯ ಅಧ್ಯಾಯ ॥**

## ದಶವಿಧ ಸೃಷ್ಟಿ ವಿಚಾರ

ವಿದುರನು ಎಲೈ, ಮೈತ್ರೇಯರೇ ಪರಮಾತ್ಮನು ಅಂತರ್ಧಾನನಾಗಲು ಬ್ರಹ್ಮದೇವರು ಯಾವ ರೀತಿಯಲ್ಲಿ ದೈಹಿಕ ಮಾನಸಿಕ ಸೃಷ್ಟಿಯನ್ನು ಮಾಡಿದರೋ ಅವುಗಳನ್ನು ವಿವರಿಸಿ ಹೇಳಿರಿ ಎಂದು ಕೇಳಲು, ಮೈತ್ರೇಯರು ಪ್ರೀತರಾಗಿ ಈ ರೀತಿ ಹೇಳುವವರಾದರು:-

ದೇವರು ಅಂತರ್ಧಾನನಾದ ನಂತರ ಬ್ರಹ್ಮದೇವರು ಒಂದು ನೂರು ದಿವ್ಯ ದೇವತಾ ವರ್ಷಗಳು ತಪಸ್ಸು ಮಾಡಿ, ವಿರಾಡ್ರೂಪ ಧಾರಿಯಾದ ಪರಮಾತ್ಮನನ್ನು ಹೃತ್ಸ್ಥಲದಲ್ಲಿ ಧ್ಯಾನಿಸಿ, ಅಭಿವೃದ್ಧವಾದ ತಪಸ್ಸಿನಿಂದ ಪರಮಾತ್ಮನು ತಮ್ಮ ದೇಹದಲ್ಲಿ ಸನ್ನಿಹಿತನಾದದ್ದನ್ನು ತಿಳಿದು, ನಂತರ ದೇವರ ಆಜ್ಞಾರೂಪವಾಗಿ ಸೃಷ್ಟಿಸುತ್ತೇನೆಂದು ಸಂಕಲ್ಪಿಸಿ ಕಣ್ಣು ತೆರೆದಾಗ, ಪ್ರಚಂಡಗಾಳಿಯಿಂದ ಪ್ರಳಯೋದಕವು ಅಲ್ಲೋಲ ಕಲ್ಲೋಲವಾಗಿ, ನಾಳ ಸಹಿತ ಕಮಲವನ್ನು ಅಲ್ಲಾಡಿಸುತ್ತಿರುವುದನ್ನು ಕಂಡು, ನಾನು ಇರುವ ಈ ಕಮಲವು ನೀರಿನ ಹೊಡೆತದಲ್ಲಿ ಮುಳುಗಿರುವುದರಿಂದ ಅಂತರ್ಹಿತವಾದ ಲೋಕಗಳೂ ಕಾಣಿಸದಂತಾಗಿವೆ ಎಂದು ತಿಳಿದು, ತಮ್ಮ ತಪಶ್ಶಕ್ತಿಯಿಂದ ಆ ಬಿರುಗಾಳಿಯನ್ನೂ, ಪ್ರಳಯೋದಕವನ್ನೂ ಪಾನ ಮಾಡಿ, ಚತುರ್ದಶ ದಳಾತ್ಮಕ ಕಮಲವೂ ಆಕಾಶದಲ್ಲಿ ಕಾಣಿಸುವಂತೆ ಮಾಡಿಕೊಂಡರು.

ನಂತರ ಆ ಕಮಲದೊಳಗೆ ಪ್ರವೇಶಿಸಿ, ಆ ಕಮಲವನ್ನು ಮೊದಲು ಭೂಮಿ ಅಂತರಿಕ್ಷ ಸ್ವರ್ಗವೆಂಬ ಮೂರು ಭಾಗ ಮಾಡಿ, ನಂತರ ಕೆಳಗಿನ ಏಳು ಲೋಕಗಳು, ಮೇಲಿನ ಏಳು ಲೋಕಗಳು ಎಂಬ ಎರಡು ವಿಧವಾಗಿ, ಹಿಂದಿನ ಬ್ರಹ್ಮಕಲ್ಪದಲ್ಲಿದ್ದಂತೆ ಹದಿನಾಲ್ಕು ಲೋಕಗಳನ್ನೂ ಸೃಷ್ಟಿಸಿದರು. ಇವುಗಳೇ ಸಮಸ್ತ ಪ್ರಜೆಗಳು ಉತ್ಪನ್ನರಾಗಿ ಇರಲು ಸ್ಥಾನವಾದವು ಎಂದು ಸಂಕ್ಷೇಪದಿಂದ ಲೋಕ ಸೃಷ್ಟಿಯನ್ನು ಹೇಳಿರುತ್ತೇನೆ. ಈ ರೀತಿ ಬ್ರಹ್ಮದೇವರ ಸೃಷ್ಟಿಯಿಂದ ಬ್ರಹ್ಮದೇವರಿಗೆ ಭಗವತ್ಪ್ರೀತಿ ಮಾತ್ರ ಕಾರಣವೇ

ಹೊರತು, ಏನೂ ಸ್ವಪ್ರಯೋಜನವಿಲ್ಲವಾಗಿ, ಅನಿಮಿತ್ತ ಧರ್ಮವೆಂದೆನಿಸಿಕೊಳ್ಳುತ್ತದೆ ಎಂದರು.

ನಂತರ ವಿದುರನು ಎಲೈ ಬ್ರಹ್ಮಜ್ಞಾನಿಗಳಾದ ಮೈತ್ರೇಯರೇ ನನಗೆ ಬಹುರೂಪನಾದ ಪರಮಾತ್ಮನ ಕಾಲಾಖ್ಯ ಸ್ವರೂಪವನ್ನು ಉಪದೇಶಿಸಿರೆಂದು ಕೇಳಿದನು. ಅದಕ್ಕೆ ಮೈತ್ರೇಯರು, ಎಲೈ! ವಿದುರನೇ, ಪ್ರಕೃತ್ಯಾದಿ ವಿಕಾರ ರಹಿತನೂ, ತನಗಿಂದುತ್ತಮರೂ ಸಮರೂ ಇಲ್ಲವಾದ್ದರಿಂದ ನಿರ್ವಿಶೇಷನೆಂದು ಕರೆಯಲ್ಪಡುವ ಅಖಂಡವ್ಯಾಪ್ತನಾದ ಕಾಲನಾಮಕ ಷಡ್ಗುಣೈಶ್ವರ್ಯ ಸಂಪನ್ನನಾದ ಪುರುಷ ರೂಪನು, ಪ್ರಳಯ ಕಾಲದಲ್ಲಿ ಗುಣಸಾಮ್ಯವಾಗಿದ್ದುದನ್ನು ಗುಣವಿಕಾರ ಮಾಡುವುದಕ್ಕಾಗಿ ತನ್ನ ಸ್ವೇಚ್ಛೆಯಿಂದ ಮೂರು ರೂಪಗಳನ್ನು ಮಿಶ್ರಮಾಡಿ ರಜೋಪ್ರಧಾನ ಗುಣದಿಂದ ವಿರಿಂಚಿನಾಮಕ ಚತುರ್ಮುಖ ಬ್ರಹ್ಮದೇವರನ್ನು ಸೃಷ್ಟಿಸಿ, ಸ್ವಯಂ ಬ್ರಹ್ಮನಾಮಕನಾಗಿ ಬ್ರಹ್ಮದೇವರಲ್ಲಿ ಪ್ರವೇಶಿಸಿ ಅವರಿಂದ ಸಕಲ ಜಗತ್ಸೃಷ್ಟಿಕಾರ್ಯವನ್ನು ಮಾಡಿಸುವನು. ತನ್ನದೇ ಆದ ವಿಷ್ಣು ರೂಪವನ್ನು ಪ್ರಧಾನ ಸತ್ವಗುಣಕ್ಕೆ ಪ್ರೇರಕವಾಗಿ ಸ್ವೀಕರಿಸಿ ಜಗತ್ತನ್ನು ಸಂರಕ್ಷಿಸುವನು.

ತಮೋಗುಣ ಪ್ರಧಾನದಿಂದ ರುದ್ರದೇವರ ಶರೀರವನ್ನು ನಿರ್ಮಿಸಿ, ಐದು ಮುಖ ವುಳ್ಳ ರುದ್ರದೇವರನ್ನು ಅಧಿಷ್ಠಿಸಿ, ಸ್ವಯಂ ಕಾಲ ನಾಮಕನಾಗಿ ತಮೋಗುಣದಿಂದ, ತಾನು ಚಕ್ಷುರಾದ್ಯಗೋಚರನಾಗಿ ಮಹೇಶ್ವರನೆಂಬ ಹೆಸರಿನಿಂದ ಸಕಲ ಜಗತ್ಸಂಹಾರ ಮಾಡುವನು. ಈ ರೀತಿಯಾಗಿ, ಬ್ರಹ್ಮ, ರುದ್ರ, ವಿಷ್ಣು ರೂಪಗಳಿಂದ ಮೂರು ರೂಪುಳ್ಳವನಾಗಿ, ಮೂರು ರೂಪಗಳಿಂದಲೂ, ಬ್ರಹ್ಮ ರುದ್ರರಿಗೂ ಅವ್ಯಕ್ತ ಗೂಢ ರೂಪನಾಗಿ, ಕಾಲನಾಮಕ ಪರಮಾತ್ಮನು ಸರ್ವರಲ್ಲೂ ಸರ್ವತ್ರದಲ್ಲೂ ಅಪರಿಚ್ಛಿನ್ನ ವ್ಯಾಪ್ತಿಯುಳ್ಳವನಾಗಿರುತ್ತಾನೆ.

ಬ್ರಹ್ಮ ಶರೀರದಲ್ಲಿರುವ ಬ್ರಹ್ಮನಾಮಕ ಶ್ರೀಹರಿಯು, ಹಿಂದಿನ ಕಲ್ಪಗಳಲ್ಲಿ ಮಾಡಿದ್ದಂತೆಯೇ ಸೃಷ್ಟಿಯನ್ನು ಒಂಭತ್ತು ವಿಧವಾಗಿ ಪ್ರಾಕೃತ, ವೈಕೃತಗಳೆಂಬ ಎರಡು ಭೇದಗಳುಳ್ಳವನನ್ನಾಗಿ ಮಾಡಿದನು. ಈ ನವ ವಿಧ ಸೃಷ್ಟಿಯು ಪ್ರವಾಹ ರೂಪವಾದದ್ದು ಮತ್ತು ಸತ್ಯವಾದದ್ದು. ಇಂದ್ರಜಾಲದಂತೆ ಮಿಥ್ಯಾಸೃಷ್ಟಿಯಲ್ಲ. ಏಕೆಂದರೆ ಈಗಿನ ಪ್ರಾಕೃತ ಸೃಷ್ಟಿಯಲ್ಲಿ ಸರ್ವರಿಗೂ ಸತ್ಯವಾದ ಪದಾರ್ಥಗಳು, ಕ್ರಿಯೆಗಳೂ, ಕಾರ್ಯಗಳೂ ಅನುಭವಸಿದ್ಧವಾಗಿ ಕಂಡುಬಂದಿವೆಯಾಗಿ, ಸೃಷ್ಟಿಯು ಪ್ರತ್ಯಕ್ಷಸತ್ಯವಾದದ್ದು. ಪ್ರಳಯ ಕಾಲದಲ್ಲಿ ಜಗತ್ತೆಲ್ಲಾ ನಾಶವಾಗಿ ಸೂಕ್ಷ್ಮದಿಂದ ಪರಮಾತ್ಮನ ಉದರದಲ್ಲಿದ್ದಾಗ, ಬ್ರಹ್ಮಾದಿ ಅತಿರೋಹಿತ ವಿಜ್ಞಾನಿಗಳೂ, ಋಷಿಗಳೂ ಹಿಂದಿನ ಸೃಷ್ಟಿಯಲ್ಲಿ ತಾವು ಸ್ವಯಂ ಇದ್ದು, ಅವುಗಳನ್ನು ಪ್ರತ್ಯಕ್ಷವಾಗಿ ಸತ್ಯವಾಗಿ ಅನುಭವಿಸಿ ತಿಳಿದು, ತಾವೂ ಸತ್ಯವಾಗಿ ಇರುವುದರಿಂದ ಸೃಷ್ಟಿಯು ಹಿಂದೂ ಸತ್ಯವಾದದ್ದೇ ಆಗಿತ್ತು.

ಸತ್ಯನಾದ ಶಾಶ್ವತನಾದ ಪರಮಾತ್ಮನ ಸತ್ಯವಾದ ಜ್ಞಾನದಲ್ಲಿ ಮುಂದಿನ ಸೃಷ್ಟಿಯು ಈ ರೀತಿ ಮಾಡಬೇಕಾದ್ದೆಂದು ತಿಳಿದು ಇರುವುದರಿಂದಲೂ, ಅದರಂತೆ ಮುಂದಿನ ಸೃಷ್ಟಿಯು ಪ್ರತ್ಯಕ್ಷ ಸತ್ಯವಾಗಿ ಅಭಿವ್ಯಕ್ತವಾಗಿ, ದ್ರವ್ಯ, ಕಾರ್ಯ, ಕ್ರಿಯಾದಿ ಅನುಭವ ರೂಪವಾಗುವುದರಿಂದ, ಸೃಷ್ಟಿಯು ಭೂತ ಭವಿಷ್ಯದ್ವರ್ತಮಾನ ಕಾಲಗಳಲ್ಲಿಯೂ ಸತ್ಯವಾದದ್ದು. ಬ್ರಹ್ಮಾಂಡದ ಹೊರಗಿನ ಸೃಷ್ಟಿಯು ಪ್ರಾಕೃತ ಸೃಷ್ಟಿ ಎನಿಸುವುದು. ಬ್ರಹ್ಮಾಂಡ ಸೃಷ್ಟಿಯೂ, ಬ್ರಹ್ಮಾಂಡದೊಳಗಿನ ಸೃಷ್ಟಿಯೂ ವೈಕೃತ ಸೃಷ್ಟಿ ಎನಿಸುವುದು.

ಈ ಸೃಷ್ಟಿಯಾದ ಪ್ರಪಂಚದ ನಾಶವು ಕಾಲ ದ್ರವ್ಯ ಗುಣ ನಿಮಿತ್ತದಿಂದ ಮೂರು ಭೇದ ವುಳ್ಳದ್ದು. ಹೇಗೆಂದರೆ ಬ್ರಹ್ಮದೇವರ ನೂರು ವರ್ಷಗಳ ನಂತರ ಮಹಾ ಪ್ರಳಯವೆಂಬ ನಿಯಮದಿಂದ ಕಾಲ ನಿಮಿತ್ತ ಲಯ. ಘಟಾದಿ ಪದಾರ್ಥಗಳ ನಾಶದಿಂದ ದ್ರವ್ಯ ನಿಮಿತ್ತ ಲಯ. ಪ್ರವೃದ್ಧವಾದ ಸತ್ವ ಗುಣದಿಂದ ಪ್ರೇರಿತವಾದ ತಮೋ ಗುಣಾಧಿಕ್ಯದಿಂದ ಸಾತ್ವಿಕ ಸುಖ ಕಾರಣವಸ್ತುಗಳ ಲಯವೂ, ರಜೋ ಪ್ರಚುರವಾದ ಸಾತ್ವಿಕ ತಾಮಸ ಗುಣದಿಂದ ಸಾತ್ವಿಕ ಸುಖ ಕಾರಣ ವಸ್ತುಗಳ ಲಯವೂ, ರಜೋ ಪ್ರಚುರವಾದ ಸಾತ್ವಿಕ ತಾಮಸ ಗುಣದಿಂದ ರಾಜಸ ಪದಾರ್ಥಗಳ ಲಯವೂ, ತಮೋ ಗುಣ ಪ್ರಚುರ ಸಾತ್ವಿಕ ರಾಜಸ ಗುಣದಿಂದ ತಾಮಸ ಪದಾರ್ಥಗಳ ನಾಶವೂ, ಗುಣ ವೈಶಮ್ಯ ಕಾಲಭೇಧಗಳಿಂದುಂಟಾಗುವವು. ಇವು ಗುಣ ನಿಮಿತ್ತ ಪ್ರಳಯ. ಬ್ರಹ್ಮದೇವರ ದಿನ ಪ್ರಳಯ, ಮನ್ವಂತರ ಪ್ರಳಯಗಳೂ ಕಾಲ ನಿಮಿತ್ತ ಪ್ರಳಯಗಳು. ಪ್ರಾಕೃತ ಸೃಷ್ಟಿಯು ಅವ್ಯಕ್ತತತ್ವದ ಗುಣವೈಷಮ್ಯ ಮಾಡುವುದರಿಂದ ಮೊದಲು ಬ್ರಹ್ಮದೇವರ ಶರೀರವಾಗಿ, ಬ್ರಹ್ಮದೇವರಿಂದ ಅಭಿಮಾನಿಸಲ್ಪಡುವ ಮಹತ್ತತ್ವದ ಸೃಷ್ಟಿಯು ಮೊದಲನೆಯ ವಿಧವಾದದ್ದು.

ಈ ಮಹತತ್ತ್ವ ಸೃಷ್ಟಿಯು ಹೇಗೆಂದರೆ, ಶ್ರೀ ಪರಮಾತ್ಮನು, ಅವ್ಯಕ್ತ ತತ್ವದಲ್ಲಿದ್ದ ಸತ್ವ ರಜ ಸ್ತಮೋ ಗುಣಗಳು ಸಮನಾಗಿದ್ದುದರಿಂದ ಕಾರ್ಯರಹಿತಗಳಾಗಿದ್ದುದರಿಂದ ಆ ಗುಣಗಳನ್ನು ವ್ಯತ್ಯಸ್ತಮಾಡಿ ಮಹತ್ತತ್ವವನ್ನು ಸೃಷ್ಟಿಸಬೇಕೆಂದು ಅಪೇಕ್ಷಿಸಿದನು. ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಗುಣಗಳು ಸಾಮ್ಯವನ್ನು ಹೇಗೆ ಹೊಂದಿರುತ್ತವೆ? ಎಂದರೆ, ತಮೋ ಗುಣ ಒಂದು ಭಾಗ, ಅದರ ಎರಡರಷ್ಟು ರಜೋ ಗುಣ, ರಜೋ ಗುಣದ ಎರಡರಷ್ಟು ಸತ್ವ ಗುಣ, ಹೀಗೆ ಮೂಲ ತಮೋ, ರಜೋ, ಸತ್ವಗಳು ಇರುತ್ತವೆ. ಇದರಲ್ಲಿ ಕೇವಲ ಸತ್ವ ಗುಣವು ರಜೋ ಗುಣ, ತಮೋ ಗುಣಗಳಿಂದ ಮಿಶ್ರಿತವಾಗಿರುವುದಿಲ್ಲ. ರಜೋ ರಾಶಿಯು ಮೂರು ವಿಧವಾಗಿರುತ್ತದೆ. ಇದರಲ್ಲಿ ಕೇವಲ ರಜೋ ಗುಣವು ನೂರರಷ್ಟು ಹೆಚ್ಚಾದ ಸತ್ವ ಗುಣದಿಂದಲೂ, ರಜೋ ಗುಣದ ನೂರನೆಯ ಒಂದು ಭಾಗ ತಮೋ ಗುಣದಿಂದಲೂ ಮಿಶ್ರಿತವಾಗಿರುತ್ತದೆ. ಮೂಲ ತಮೋ ಗುಣದಲ್ಲಿ ತಮೋಗುಣದ ಹತ್ತರಷ್ಟು ಸತ್ವ ಗುಣವೂ, ತಮೋ

ಗುಣದ ಹನ್ನೊಂದನೆಯ ಒಂದು ಭಾಗದಷ್ಟು ರಜೋ ಗುಣದಿಂದಲೂ ಮಿಶ್ರಿತವಾಗಿರುತ್ತದೆ.

ಈ ರೀತಿ ಗುಣಗಳ ನಿಜಸ್ಥಿತಿಯು ಆಗಿರುತ್ತದೆ. ಪ್ರಳಯಕಾಲದಲ್ಲಿ ಪರಮಾತ್ಮನು ಮೂಲ ರಜೋ ಗುಣವನ್ನು ಹನ್ನೊಂದು ಭಾಗ ಮಾಡಿ ಹತ್ತನ್ನು ಸತ್ವರಾಶಿಯಲ್ಲಿ ಮಿಶ್ರಮಾಡುವನು. ಉಳಿದ ಒಂದಂಶವನ್ನು ಮೂಲ ತಮಸ್ಸಿನಲ್ಲಿ ಮಿಶ್ರಮಾಡಿ, ಗುಣಸಾಮ್ಯಾವಸ್ಥೆಯನ್ನುಂಟುಮಾಡುವನ ು. ಮೂಲ ಸತ್ವದಲ್ಲಿ ಮಿಶ್ರಿತವಾದ ಹತ್ತು ರಜೋಗುಣವನ್ನು ತೆಗೆದು?, ಮೂಲ ತಮಸ್ಸು ಒಂದು ರಜೋಗುಣ ಸಹಿತವಾಗಿದ್ದುದರಲ್ಲಿ ಬೆರೆಸಿ ಅದರಿಂದ ಮಹತ್ತತ್ವವನ್ನು ಸೃಷ್ಟಿಸುತ್ತಾನೆ. ಈ ಮಹತ್ತತ್ತ್ವವು, ಮೂಲ ಸತ್ವದಲ್ಲಿ ಪ್ರವೇಶಿಸಿದ್ದ ಮೂಲ ರಜೋ ಗುಣ ದಿಂದಲೂ, ಮೂಲ ತಮಸ್ಸಿನಲ್ಲಿ ಮಿಶ್ರಿತ ವಾಗಿದ್ದ ರಜೋ ಭಾಗ ದಿಂದಲೂ, ಮೂಲರಜೋ ಭಾಗದಿಂದಲೂ, ಈ ರೀತಿ ಮೂರು ವಿಧ ರಜೋಭಾಗಗಳಿಂದಲೂ ಒಂದು ಭಾಗ ತಮೋ ಗುಣದಿಂದಲೂ ಮಿಶ್ರಿತವಾಗಿ ಬ್ರಹ್ಮದೇವರ ಶರೀರ ರೂಪವಾಗುತ್ತದೆ. ಇದು ಕೇವಲ ಸತ್ವಗುಣವೆಂದೆನಿಸುತ್ತದೆ.

ಅಹಂಕಾರ ಸೃಷ್ಟಿಯು ಎರಡನೆಯದು. ಇದು ವೈಕಾರಿಕ, ತೈಜಸ, ತಾಮಸ ಭೇದಗಳಿಂದ ಮೂರು ವಿಧ. ಮಹತ್ತತ್ವಾತ್ಮಕ ಶರೀರದಿಂದ ಹತ್ತು ಸತ್ವಾಂಶ, ಒಂದು ರಜೋ ಭಾಗ ತೆಗೆದುಕೊಂಡು, ಆ ರಜೋ ಭಾಗವನ್ನು ಹನ್ನೊಂದು ಭಾಗ ಮಾಡಿ ಅದಕ್ಕೆ ಒಂದು ಭಾಗ ತಮೋ ಗುಣ ಬೆರಸಿ ಅಹಂಕಾರ ತತ್ವ ವಾಗುತ್ತದೆ. ಈ ಅಹಂಕಾರ ತತ್ವದಲ್ಲೂ ಹತ್ತು ಭಾಗ ಸತ್ವ ಒಂದು ಭಾಗ ರಜಸ್ಸು ಇರುತ್ತದೆ. ಈ ರಜೋ ಭಾಗವನ್ನು ಹನ್ನೊಂದು ಭಾಗ ಮಾಡಿ, ಸತ್ವ ಗುಣದೊಂದಿಗೆ ಬೆರೆಸಿದರೆ, ವೈಕಾರಿಕ ಅಹಂಕಾರವೆಂಬ, ಇಂದ್ರಿಯಾಭಿಮಾನಿ ದೇವತೆಗಳ ಶರೀರಕ್ಕೂ ಮನಸ್ಸಿನ ಸೃಷ್ಟಿಗೂ ಕಾರಣವು ಉತ್ಪನ್ನವಾಗುತ್ತದೆ. ರಜೋ ಅಂಶದಿಂದ ಬೆರೆಸಿದರೆ ತೈಜಸಾಹಂಕಾರವು ಹುಟ್ಟಿ, ಪಂಚ ಜ್ಞಾನೇಂದ್ರಿಯ ಪಂಚ ಕರ್ಮೇಂದ್ರಿಯಗಳ ಸೃಷ್ಟಿಗೆ ಕಾರಣವಾಗುತ್ತದೆ. ತಮೋ ಗುಣಾಂಶದೊಂದಿಗೆ ಬೆರೆಸಿದರೆ ತಾಮಸಾಹಂಕಾರವೆಂಬುದು ಹುಟ್ಟಿ, ಅದರಿಂದ ಪಂಚ ಭೂತಗಳು ಪಂಚ ತನ್ಮಾತ್ರ ಸಹಿತ ಉತ್ಪನ್ನವಾಗುತ್ತದೆ.

ಅಹಂಕಾರ ತತ್ವವು ರುದ್ರದೇವರ ಶರೀರವು. ಅಹಂಕಾರ ತತ್ವವು ದ್ರವ್ಯ, ಜ್ಞಾನ, ಕ್ರಿಯಾ ಶಕ್ತಿಗಳುಳ್ಳದ್ದು. ಇದರಿಂದ ಭೂತ ಸರ್ಗವೆಂಬ ದ್ರವ್ಯ ಶಕ್ತಿಯುಳ್ಳ ಪಂಚ ತನ್ಮಾತ್ರ ಸಹಿತ ಪಂಚ ಭೂತಗಳು ತಾಮಸಾಹಂಕಾರದಿಂದ ಸೃಷ್ಟಿಸಿದ್ದು ಮೂರನೆಯ ಸೃಷ್ಟಿ. ನಾಲ್ಕನೆಯ ಸೃಷ್ಟಿ ತೈಜಸಾಹಂಕಾರದಿಂದ ಜ್ಞಾನ ಕ್ರಿಯಾ ಶಕ್ತ್ಯಾತ್ಮಕಗಳಾದ ಪಂಚ ಜ್ಞಾನೇಂದ್ರಿಯ ಪಂಚ ಕರ್ಮೇಂದ್ರಿಯಗಳ ಸೃಷ್ಟಿಯು. ಶಬ್ದ ಸಹಿತ ಆಕಾಶವೂ, ಸ್ಪರ್ಶ ಸಹಿತ ವಾಯುವೂ, ರೂಪ ಸಹಿತ ಅಗ್ನಿಯೂ, ರಸ ಸಹಿತ ಜಲವೂ, ಗಂಧ ಸಹಿತ ಪೃಥ್ವಿಯೂ ಸೇರಿ ತತ್ತತ್ತನ್ಮಾತ್ರ ಸಹಿತ ಪಂಚ ಭೂತಗಳು. ಚಕ್ಷು, ಶ್ರೋತ್ರ, ಜಿಹ್ವಾ, ನಾಸಿಕ,

ತ್ವಗೀಂದ್ರಿಯಗಳು ಪಂಚ ಜ್ಞಾನೇಂದ್ರಿಯಗಳು. ಪಾಣಿ, ಪಾದ, ಪಾಯು, ಉಪಸ್ಥ, ವಾಗಿಂದ್ರಿಯಗಳು ಪಂಚ ಕರ್ಮೇಂದ್ರಿಯಗಳು.

ಐದನೆಯ ಸೃಷ್ಟಿ ವೈಕಾರಿಕಾಹಂಕಾರದಿಂದ, ಮನಸ್ಸು ಮತ್ತು ಇಂದ್ರಿಯಾಭಿಮಾನಿ ದೇವತೆಗಳ ಸೃಷ್ಟಿ. ಆರನೆಯ ಸೃಷ್ಟಿಯು ತಾಮಸ ಸರ್ಗವೆಂಬ ಅಬುದ್ಧಿಯುಳ್ಳ, ತಮ, ಮೋಹ, ಮಹಾ ಮೋಹ, ತಾಮಿಸ್ರ, ಅಂಧ ತಾಮಿಸ್ರವೆಂಬ ಐದು ಪರ್ವಗಳುಳ್ಳ ಅವಿದ್ಯೆಯ ಸೃಷ್ಟಿಯು. ಈ ರೀತಿ ಪ್ರಾಕೃತ ಸೃಷ್ಟಿಯು ಆರು ವಿಧ.

ಆರನೆಯ ಸೃಷ್ಟಿಯು ಭೂತ ಪ್ರೇತ ಪಿಶಾಚಾದಿಗಳ ಸೃಷ್ಟಿ. ಶುದ್ಧ ಪ್ರಕಾಶ ಜ್ಞಾನರೂಪನಾದ ಪರಮಾತ್ಮನು ಲೀಲೆಯಿಂದ ರಜೋ ಗುಣವನ್ನು ಉಪಾದಾನಕಾರಣವನ್ನಾಗಿ ಮಾಡಿಕೊಂಡು, ಸೃಷ್ಟಿಮಾಡುವುದರಿಂದ ತನಗೇನೂ ಪ್ರಯೋಜನವಿಲ್ಲದಿದ್ದರೂ, ದೇವ, ಮಾನವ, ಋಷಿ, ಪಿತೃ, ಗಂಧರ್ವ, ಯಕ್ಷರೇ ಮೊದಲಾದ ಜೀವರುಗಳಿಗೆ ಮುಕ್ತಿಯನ್ನು ಕೊಡುವುದಕ್ಕಾಗಿ, ಬ್ರಹ್ಮಾಂತರ್ಯಾಮಿಯಾಗಿ ನಿಂತು, ಏಳನೆಯದಾದ ವೈಕೃತ ಸೃಷ್ಟಿಯನ್ನು, ಆರು ವಿಭಾಗಗಳನ್ನಾಗಿ ಮಾಡಿದನು. ಹಲಸಿನ ಗಿಡವೇ ಮೊದಲಾದ ವನಸ್ಪತಿಗಳೂ, ಹೂವು ಬಿಡದೇ ಕಾಯಿ ಆಗುವುದು ವನಸ್ಪತಿಗಳು, ಭತ್ತ, ಗೋಧಿ ಮುಂತಾದ ಓಷಧಿಗಳೂ, ಬಳ್ಳಿಗಳು, ಸಿಪಲ್ಬಯಿಂದ ರಸ ಸ್ವೀಕರಿಸುವ ಗಿಡಗಳೂ, ಪೊದೆಗಳೆಂಬ ಗುಲ್ಮಗಳು, ತಮಃ ಪ್ರಚುರವಾದವು, ಸ್ಪರ್ಶ ಗುಣ ಮಾತ್ರ ವುಳ್ಳವುಗಳು ಇವು ಆರುಏಳನೆಯ ಸೃಷ್ಟಿ..

ತಿರ್ಯಗ್ಪ್ರಾಣಿಗಳ ಸೃಷ್ಟಿಯು ಎಂಟನೆಯ ಸೃಷ್ಟಿ. ಇದು ಇಪ್ಪತ್ತೆಂಟು ವಿಧ. ಇವು ಅಜ್ಞಾನ, ಹೆಚ್ಚಾದ ತಮೋ ಗುಣಗಳುಳ್ಳವು, ಘ್ರಾಣ ಜ್ಞಾನವನ್ನು ಸುಖ ದುಃಖಗಳನ್ನೂ ತಿಳಿಯಬಲ್ಲವು. ಗೋವು, ಮೇಕೆ, ಎಮ್ಮೆ, ಜಿಂಕೆ, ಹಂದಿ, ಕುರಿ, ರುರು ಇವುಗಳು ಎರಡು ಗೊರಸುಳ್ಳ ಪ್ರಾಣಿಗಳು. ನಾಯಿ, ನರಿ, ತೋಳ, ಹುಲಿ, ಬೆಕ್ಕು, ಮೊಲ, ಶಲ್ಯಕ, ಸಿಂಹ, ಕಪಿ, ಆನೆ, ಆಮೆ, ಹಲ್ಲಿ, ಮೊಸಳೆ ಮುಂತಾದವುಗಳೂ, ಗುಳ್ಳೇನರಿ, ಹದ್ದು, ಬಕ, ಶ್ಯೇನ, ಭಾಸ, ಬಲ್ಲೂಕ, ಬರ್ಹಣ, ಹಂಸ, ಸಾರಸ, ಚಕ್ರವಾಕ, ಕಾಗೆ, ಗೂಬೆ ಮುಂತಾದ ಪಕ್ಷಿಗಳು ಸಹ ಇಪ್ಪತ್ತೆಂಟು ವಿಧ.

ಒಂಭತ್ತನೆಯ ಅರ್ವಾಕ್ಸ್ರೋತಸಗಳೆಂಬ, ಮನುಷ್ಯರ ಸೃಷ್ಟಿಯು ಒಂದು ವಿಧವಾದದ್ದು. ಇವರು ರಜೋ ಗುಣ ಪ್ರಚುರರು. ಕರ್ಮಪರರು. ದುಃಖದಲ್ಲಿ ಸುಖವೆಂಬ ಅಭಿಮಾನ ವುಳ್ಳವರು. ಶುಭೇಚ್ಛೆಯಿಂದ ಅಧೋ ಗಮನ ವುಳ್ಳವರಾದ ಕಾರಣ ಮನುಷ್ಯರು ಅರ್ವಾಕ್ಸೋತಸರೆಂದು

ಕರೆಯಲ್ಪಡುತ್ತಾರೆ. ಇದರಿಂದ ಈ ಸೃಷ್ಟಿಯು ವಿಪರೀತ ಜ್ಞಾನವುಳ್ಳ ಮನುಷ್ಯಾಧಮರಿಂದ ಹಿಡಿದು ದೈತ್ಯ, ರಾಕ್ಷಸ, ಪಿಶಾಚಾದಿಗಳೂ ಅರ್ವಾಕ್ಸ್ರೋತಸರೆಂದೂ, ತಿರ್ಯಕ್ಪ್ರಾಣಿಗಳೂ, ಮನುಷ್ಯಾಧಮರೂ, ಅಸುರರಿಂದ ನಿಯಮಿತರಾದವರೆಂದೂ ತಿಳಿಯಬೇಕು. ಓಷಧಿ, ಮರ, ಬಳ್ಳಿ ಮುಂತಾದವೂ, ಯಜ್ಞಗಳಿಗೆ ಉಪಯೋಗ ವಾದವುಗಳಾದುದರಿಂದ ದೇವತೆಗಳಿಂದ ಅಭಿಮಾನಿಸಲ್ಪಟ್ಟವುಗಳಾದವೂ, ಊರ್ಧ್ವಗತಿಯುಳ್ಳವೂ ಆದುದರಿಂದ ಉತ್ಸ್ರೋತಸಗಳೆಂದು ಕರೆಯಲ್ಪಡುವವು. ವೈಕಾರಿಕ ದೇವ ಸರ್ಗವು, ಬ್ರಹ್ಮಾಂಡದ ಹೊರಗಿನ ಮತ್ತು ಒಳಗಿನ ಸೃಷ್ಟಿಯುಳ್ಳವುಗಳಾದುದರಿಂದ, ವೈಕೃತ, ಪ್ರಾಕೃತ ಸೃಷ್ಟಿ ಎಂದು ಕರೆಯಲ್ಪಡುತ್ತದೆ.

ಇವರು ಜ್ಞಾನಿಗಳು. ಈ ಸೃಷ್ಟಿಯು ದೇವತೆಗಳು, ಪಿತೃಗಳು, ಅಸುರರು, ಗಂಧರ್ವರೂ, ಅಪ್ಸರಸರೂ, ಯಕ್ಷರಾಕ್ಷಸರೂ, ಸಿದ್ಧರೂ, ಚಾರಣರೂ, ಭೂತಗಳೂ ಪ್ರೇತಗಳೂ, ಪಿಶಾಚಾದಿಗಳು, ವಿಧ್ಯಾಧರರು, ಕಿನ್ನರರು ಎಂಬ ಹತ್ತು ವಿಧವಾದದ್ದು. ಇವರು ಆಖ್ಯಾತದೇವತೆಗಳೆಂದು ಕರೆಯಲ್ಪಡುತ್ತಾರೆ. ಇವರು ಹತ್ತು ವಿಭಾಗ ವುಳ್ಳವರೂ ಕ್ಲುಪ್ತ ಸಂಖ್ಯೆಯವರಾಗುತ್ತಾರೆ. ಈ ರೀತಿಯಲ್ಲಿ ಪ್ರಪಂಚ ಸೃಷ್ಟಿಯು ಹತ್ತು ವಿಧವಾಗಿ, ಬ್ರಹ್ಮದೇವರ ಅಂತರ್ಯಾಮಿಯಿಂದ ಮಾಡಲ್ಪಟ್ಟಿತು. ಈ ರೀತಿಯಾಗಿಯೇ ರಜೋಗುಣದಿಂದ ಉದ್ರಿಕ್ತರಾಗಿ ಬ್ರಹ್ಮದೇವರೂ ಹತ್ತು ವಿಧ ಸೃಷ್ಟಿ ಮಾಡುವವರಾದರು ಮುಂದೆ ಮನುವಂಶಗಳನ್ನೂ ಮನ್ವಂತರಗಳನ್ನೂ ಹೇಳುತ್ತೇನೆ. ಪರಮಾತ್ಮನ ಇಚ್ಛೆಯೆಂಬ ಮಾಯಾತ್ಮಕ ಪ್ರಕೃತಿಯಿಂದ ಈ ವಿಧವಾದ ಸೃಷ್ಟಿಗಳು ಮಾಡಲ್ಪಡುವುದರಿಂದ ಜ್ಞಾನಿಗಳು ಸೃಷ್ಟಿಯ ಪೂರ್ವಾಪರ್ಯಗಳ ಸುಳಿಯಲ್ಲಿ ಸಿಕ್ಕಿದವರು ಅಲ್ಲೇ ಸುತ್ತುತ್ತಾ, ಭ್ರಾಂತರಾಗುವಂತೆ, ಪರಮೈಶ್ವರ್ಯ ಸಂಪನ್ನನಾದ ಪರಮಾತ್ಮನ ಕಾರ್ಯಗಳು ಅಗಾಧ ಮಹಿಮೆಯುಳ್ಳವುಗಳಾದ ಕಾರಣ ವಿಚಾರಮಾಡುವುದಿಲ್ಲ. ಈಗ ಹೇಳಿದ ದೇವ, ಅಸುರಾದಿಗಳೇ ನಾಮರೂಪಗಳಿಂದ ಬೇರೆಬೇರೆ ಮನ್ವಂತರಗಳಲ್ಲಿ ಹುಟ್ಟುತ್ತಾರೆ, ಎಂದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಹನ್ನೊಂದನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು.**

## अथ द्वादशोऽध्यायः

**मैत्रेय उवाच**

चरमस्तु विशेषाणामनेकासंयुतः सदा।
परमाणुः स विज्ञेयो नृणामैक्यभ्रमो यतः॥ १ ॥

सत एव पदार्थस्य स्वरूपावस्थितस्य यत्।
कैवल्यं परममहानविशेषो निरन्तरः॥ २ ॥

एवं कालोऽप्यनुमितः सौक्ष्म्ये स्थौल्ये च सत्तम।
संस्थानभुक्त्या भगवानव्यक्तोव्यक्तभुग् विभुः॥ ३ ॥

स कालः परमाणुर्वै यो भुङ्क्ते परमाणुताम्।
सतोऽविशेषभुग् यस्तु स कालः परमो महान्॥ ४ ॥

अणुर्द्वौ परमाणू स्यात् त्रसरेणुस्त्रयः स्मृतः।
जालाकररश्म्यवगतः खमेवानुपतन्नगात्॥ ५ ॥

त्रसरेणुत्रिकं भुङ्क्ते यः कालः सा त्रुटिः स्मृता।
तत्त्रिभागस्तु वेधः स्यात् तैस्त्रिभिस्तु लवः स्मृतः॥ ६ ॥

निमेषस्त्रिलवो ज्ञेय आम्नातास्ते त्रयः क्षणः।
क्षणान् पञ्च विदुः काष्ठां लघु ता दश पञ्च च॥ ७ ॥

लघूनि वै समाम्नाता दश पञ्च च नाडिका।
ते द्वे मुहूर्तं प्रहरः ष यामः सप्त वा नृणाम्॥ ८ ॥

द्वादशार्धपलोन्मानं चतुर्भिश्चतुरङ्गुलैः।
स्वर्णमाषैः कृतच्छिद्रं यावत् प्रस्थजलं पिबेत्॥ ९ ॥

यामाश्चत्वारश्चत्वारो मर्त्यानामहनी उभे।
पक्षः पञ्चदशाहानि शुक्लः कृष्णश्च मानद॥ १० ॥

तयोः समुच्चये मासः पितॄणां तदहर्निशम्।
द्वौ तावृतुः षडयनं दक्षिणं चोत्तरं दिवि॥ ११ ॥

अयने अहनी प्राहुर्वत्सरो द्वादश स्मृतः।
संवत्सरशतं नृणां परमायुर्निरूपितम्॥ १२ ॥

ग्रहर्क्षताराचक्रस्थः परमाण्वादिना जगत्।
संवत्सरावसानेन पर्येत्यनिमिषो विभुः॥ १३ ॥

संवत्सरः परिवत्सर इडावत्सर एव च।
अनुवत्सरो वत्सरश्च विदुरैवं प्रभाष्यते॥ १४ ॥

यः सृज्यशक्तिमुरुधोच्छ्वसयन् स्वशक्त्या पुंसोऽभ्रमाय दिवि धावति भूतभेदः।
कालाख्यया गुणमयीं क्रतुभिर्वितन्वंस्तस्मै बलिं हरत वत्सरपञ्चकाय॥ १५ ॥

**विदुर उवाच**

पितृदेवमनुष्याणामायुः परमिदं स्मृतम्।
परेषां गतिमाचक्ष्व ये स्युः कल्पाद् बहिर्विदः॥ १६ ॥

भगवान् वेद कालस्य गतिं भगवतो ननु।
विश्वं विचक्षते धीरा योगराद्धेन चक्षुषा॥ १७ ॥

**मैत्रेय उवाच**

कृतं त्रेता द्वापरं च कलिश्चेति चतुर्युगम्।
दिव्यैर्द्वादशसाहस्रैः सावधानं निरूपितम्॥ १८ ॥

चत्वारि त्रीणि द्वे चैकं कृतादिषु यथाक्रमम्।
संख्यातानि सहस्राणि द्विगुणानि शतानि च॥ १९ ॥

सन्ध्यांशयोरन्तरेण यः कालः शतसंख्ययोः।
तमेवाहुर्युगं तज्ज्ञा यत्र धर्मो विधीयते॥ २० ॥

धर्मश्चतुष्पान्मनुजान् कृते समनुवर्तते।
स एवान्येष्वधर्मेण व्येति पादेन वर्धता॥ २१ ॥

त्रैलोक्याद् युगसाहस्रं बहिराब्रह्मणो दिनम्।
तावत्येव निशा तात यन्निमीलति विश्वसृक्॥ २२ ॥

निशावसान आरब्धो लोककल्पोऽनुवर्तते।
यावद् दिनं भगवतो मनून् भुञ्जंश्चतुर्दश॥ २३ ॥

स्वं स्वं कालं मनुर्भुङ्क्ते साधिका ह्येकसप्ततिः।
मन्वन्तरेषु मनवस्तद्वंश्या ऋषयः सुराः।
भवन्ति चैते युगपत् सुरेशाश्चानु ये च तान्॥ २४ ॥

एष दैनन्दिनः सर्गो ब्राह्मस्त्रैलोक्यवर्तनः ।
तिर्यृपितृदेवानां सम्भवो यत्र कर्मभिः ॥ २५ ॥

मन्वन्तरेषु भगवान् बिभ्रत् सत्त्वं स्वमूर्तिभिः ।
मन्वादिभिरिदं विश्वमवत्युदितपौरुषः ॥ २६ ॥

तमोमात्रामुपादाय प्रतिसंरुद्धविक्रमः ।
कालेनानुगतः शेष आस्ते तूष्णीं दिनात्यये ॥ २७ ॥

तमेवानुविलीयन्ते लोका भूरादयस्त्रयः ।
निशायामनुवृत्तायां निर्मुक्तशशिभास्करे ॥ २८ ॥

त्रिलोक्यां दह्यमानायां शक्त्या सङ्कर्षणाग्निना ।
यान्त्यूष्मणा महर्लोकाज्जनं ऋभ्वादयोऽर्दिताः ॥ २९ ॥

तावत् त्रिभुवनं सद्यः कल्पान्ते विषसिन्धवः ।
प्लावयन्त्युत्कटाटोपचण्डवातेरितोर्मयः ॥ ३० ॥

अन्तः स तस्मिन् सलिल आस्तेऽनन्तासनो हरिः ।
योगनिद्रामीलिताक्षः स्तूयमानो जनालयैः ॥ ३१ ॥

एवंविधैरहोरात्रैः कालगत्योपलक्षितैः ।
अपेक्षितमिवास्यापि परमायुर्वयःशतम् ॥ ३२ ॥

यदर्धमायुषस्तस्य परार्धमभिधीयते ।
पूर्वः परार्धोऽपक्रान्तो ह्यपरार्धोऽद्य वर्तते ॥ ३३ ॥

पूर्वस्यादौ परार्धस्य ब्राह्मो नाम महानभूत् ।
कल्पो यत्राभवद् ब्रह्मा शब्दब्रह्मेति यं विदुः ॥ ३४ ॥

तस्यैव चान्ते कल्पोऽभूद् यं पाद्ममभिचक्षते ।
यद्धरेर्नाभिसरस आसील्लोकसरोरुहम् ॥ ३५ ॥

अयं तु कथितः कल्पो द्वितीयस्यापि भारत ।
वाराह इति विख्यातो यत्रासीत् सूकरो हरिः ॥ ३६ ॥

कालोऽयं द्विपरार्धाख्यो निमेष उपचर्यते ।
अव्याकृतस्यानन्तस्य ह्यनादेर्जगदात्मनः ॥ ३७ ॥

कालोऽयं परमाण्वादिर्द्विपरार्धान्त ईरितः ।
नैवेष्टे स प्रभुर्भूम्न ईश्वरो धाममानिनाम् ॥ ३८ ॥

विकारैः षोडशैर्युक्तो विशेषादिभिरावृतः ।
अण्डकोशो बहिरयं पञ्चाशत्कोटिविस्तृतः ॥ ३९ ॥

दशोत्तराधिकैर्यत्र प्रविष्टः परमाणुवत् ।
लक्ष्यतेऽन्तर्गताश्चान्ये कोटिशो ह्यण्डराशयः ॥ ४० ॥

यमाहुरक्षरं ब्रह्म सर्वकारणकारणम् ।
विष्णोर्धाम परं साक्षात् पुरुषस्य महात्मनः ॥ ४१ ॥

## ॥ इति श्रीमद्भागवते (तृतीयस्कन्धे(*3) द्वादशोऽध्यायः ॥

**॥ ಹನ್ನೆರಡನೆಯ ಅಧ್ಯಾಯ ॥**

## ದ್ರವ್ಯ, ಕಾಲವಿಭಾಗ

ಮೈತ್ರೇಯರು ವಿದುರನನ್ನು ಕುರಿತು, ಎಲೈ! ವಿದುರನೆ, ಲೋಕದಲ್ಲಿ ಸೂರ್ಯರಶ್ಮಿಯಲ್ಲಿ ಹಾರಾಡುತ್ತಿರುವ ಅತ್ಯಂತ ಸೂಕ್ಷ್ಮವಾದ ಕಣವನ್ನು, ಪರಮಾಣುವೆಂದು ಸ್ಥೂಲದೃಷ್ಟಿಗೆ ಗೋಚರವಾಗುವುದಕ್ಕಾಗಿ, ಅಜ್ಞ ಜನರ ಬುದ್ಧಿಗೆ ತಿಳಿಯಲು ಒಂದು ನಿದರ್ಶನರೂಪವಾಗಿ ತಿಳಿಸಲು ಲೋಕಜನರು ಹೇಳುವರೇ ಹೊರತು, ಆ ಕಣವು ಅನೇಕ ಪರಮಾಣುಗಳಿಂದ ಕೂಡಿದ್ದಾಗಿರುತ್ತೆ. ಮನುಷ್ಯರ ದೃಷ್ಟಿಗೆ ಗೊತ್ತಾಗದ ಅತ್ಯಂತ ಸೂಕ್ಷ್ಮಕಣಗಳನ್ನು ದಿವ್ಯದೃಷ್ಟಿಯುಳ್ಳ ದೇವತೆಗಳು ಪ್ರತ್ಯಕ್ಷವಾಗಿ ನೋಡುವರು. ಇಂತಹ ಸೂಕ್ಷ್ಮಕಣವೂ ಪರಮಾಣುಗಳಿಂದ ಕೂಡಿದ್ದಾಗಿರುತ್ತದೆ. ಆದುದರಿಂದ ಪರಮಾಣುವೆಂದರೆ, ಪುನಃ ಭಾಗಮಾಡಲಾಗದಂತಹ ಅತ್ಯಂತ ಸೂಕ್ಷ್ಮಾಂಶವು. ಇದು ದೇವತೆಗಳ ದೃಷ್ಟಿಗೂ ಗೋಚರವಾಗತಕ್ಕದ್ದಲ್ಲ.

ಇಂತಹ ಪರಮಾಣುವೆಂಬ ದ್ರವ್ಯದಲ್ಲಿ ಅತ್ಯಂತ ಪರಮಾಣುರೂಪದಿಂದ ಪರಮಾತ್ಮನು ಒಳಗಿದ್ದು ನಿಯಾಮಕನಾಗಿರುತ್ತಾನೆ. (ಆದ್ದರಿಂದಲೇ ಶ್ರೀಮಜ್ಜಗನ್ನಾಥದಾಸರಾಯರು

ದೇವಸ್ವರೂಪವನ್ನು ಅಣುಮಹದ್ರೂಪಗಳಲ್ಲಿ, "ಅಣುವಿಗಣುತರನಹನು ಘನಕೆ ಘನತರನಹನು ಅಣುಮಹದ್ವಿಲಕ್ಷಣ ""ಕಲ್ಯಾಣಗುಣ ಜ್ಞಾನಘನ ಲಕ್ಷಣಾ "ಎಂದು ಹೇಳಿದ್ದಾರೆ. ) ಆದುದರಿಂದ ಪರಮಾತ್ಮನು ಪರಮಾಣುವಿಗಿಂತಲೂ ಅಣುವಾಗಬಲ್ಲನು. ಇದರಂತೆಯೇ ದೇವರು ಸರ್ವತ್ರವ್ಯಾಪಿಯಾಗಿರುವುದರಿಂದ, ಈ ಬ್ರಹ್ಮಾಂಡದೊಳಗೆ ಮತ್ತು ಹೊರಗೆ ಅವ್ಯಕ್ತತತ್ವದವರಿವಿಗೆ, ಅಂದರೆ ಮಹತ್ತತ್ವಾವರಣದ ಆಚೆಗಿನವರೆಗೆ ಇರುವ ಭಗವದ್ವ್ಯಾಪ್ತಿಯು ಪರಮಾತ್ಮನಿಗೆ ಪ್ರಾದೇಶಮಾತ್ರ, ಎಂದರೆ ಏಕದೇಶ ಮಾತ್ರ ವ್ಯಾಪ್ತಿಯಾಯಿತು.

ಇಂತಹ ಬ್ರಹ್ಮಾಂಡಗಳು ಕೋಟ್ಯಾಂತರಗಳು ದೇವರ ರೋಮಕೂಪಗಳೊಳಗೆ, ಬಿಸಿಲಕಣಗಳಂತೆ ಹಾರಾಡುತ್ತಿವೆ ಎಂದಮೇಲೆ ದೇವರು ಮಹತೋಮಹಾನ್ ಎಂದರೆ, ಅಪರಿಮಿತ ಮಹತ್ವವುಳ್ಳವನೆಂದು ತಿಳಿಯುವುದು, ದೇವರ ನಿಜಸ್ವಭಾವ ಸ್ವರೂಪದ ತಿಳಿವಳಿಕೆ ಎಂದು ಭಾವಿಸಬಹುದು. ಇದಕ್ಕೇ ಕೇವಲ ಅಥವ ಪರಮ ಸ್ವಭಾವವೆಂದು ಹೇಳುತ್ತಾರೆ. ದೇವರು ಸದಾ ಈ ರೀತಿಯಲ್ಲಿರತಕ್ಕವನು. ಏಕದೇಶದಲ್ಲಿ ಒಂದು ಬ್ರಹ್ಮಾಂಡದ ಒಳಗೂ, ಮಹತ್ತತ್ವಾವರಣದಲ್ಲೂ, ಅದರಾಚೆಗೂ ಇರುವ ಭಗವದ್ರೂಪವ್ಯಾಪ್ತಿಯಿಂದ, ದೇವರು ಪ್ರಾದೇಶನಾಮಕನಾಗಿ ಕರೆಸಿಕೊಳ್ಳುವನು. ಸರ್ವತ್ರಗತ ರೂಪವು ಪರಮ ಅಥವ ಕೇವಲ ರೂಪವು. ಈ ಸೂಕ್ಷ್ಮಮಹದ್ರೂಪಗಳಿಂದ ದೇವರು ದೇಶಕಾಲಾನಂತ್ಯರೂಪನೆಂದು ತಿಳಿಯಬೇಕು.

ಈ ರೀತಿ ದೇವರು ಸರ್ವ ಪದಾರ್ಥಗಳೊಳಗೂ ಪ್ರತ್ಯೇಕ ಪ್ರತ್ಯೇಕ ರೂಪನಂತೆ ವ್ಯವಹಾರಾರ್ಥಕ್ಕಾಗಿ ಹೇಳಲ್ಪಡುವನೂ ಕೂಡ, ದೇಶಾನಂತ್ಯ, ಕಾಲಾನಂತ್ಯ, ಗುಣಾನಂತ್ಯಗಳಿಂದ ಪರಿಪೂರ್ಣನು. ಈ ರೂಪ ರೂಪಗಳಿಗೆ ಸ್ವಲ್ಪವಾದರೂ ಭೇದವಿಲ್ಲ. ಪರಮೈಶ್ವರ್ಯ ಮಹಿಮೆಯಿಂದ ಅಪರಿಚ್ಛಿನ್ನನಾದ ಏಕನೇ, ಭಕ್ತರ ಬುದ್ಧಿಗೆ ವಿಷಯನಾಗುವುದಕ್ಕಾಗಿ, ಪರಿಚ್ಛಿನ್ನನಂತೆ ಐಶ್ವರ್ಯಾದಿ ಪೂರ್ಣನಾಗಿ ತೋರುತ್ತಾನೆ.

ದ್ರವ್ಯದಲ್ಲಿ ಪರಮಾಣು ಮಹತ್ವಗಳು ಇದ್ದಂತೆಯೇ, ಕಾಲದಲ್ಲಿಯೂ ಸೂಕ್ಷ್ಮ ಸ್ಥೂಲ ಕಾಲಗಳಿವೆ. ಅವುಗಳಲ್ಲಿಯೂ, ಅಪರಿಚ್ಛಿನ್ನ ಅನಾದ್ಯನಂತ ಕಾಲಾಖ್ಯ ಪರಮಪುರುಷನು, ಕಾಲನಿಯಾಮಕನಾಗಿದ್ದು, ಕಾಲಶಬ್ದ ವಾಚ್ಯನಾಗಿದ್ದು, ಸೃಷ್ಟಿ, ಪಾಲನೆ, ಸಂಹಾರಾದಿಗಳನ್ನೂ, ಬ್ರಹ್ಮಾದಿ ತೃಣಾಂತ ಸರ್ವಜೀವರ ಕ್ಷಣ ಕ್ಷಣ ವ್ಯಾಪಾರಗಳನ್ನೂ ಕ್ಲುಪ್ತ ಕಾಲಗಳಲ್ಲಿ ಮಾಡಿಸುತ್ತಾನೆ. ಹೀಗೆ ಕಾಲದಲ್ಲಿ ವ್ಯಾಪ್ತನಾಗಿ, ಅದೃಶ್ಯನೂ, ಅವ್ಯಕ್ತನೂ, ಪರಮಾಣುವೂ, ಪರಮ ಮಹತ್ತಾದವನೂ ಆಗಿರುತ್ತಾನೆ. ಸರ್ವಕಾಲಗಳಲ್ಲೂ ಸರ್ವಸಾರವನ್ನು ಭೋಗಿಸುವನಾಗುತ್ತಾನೆ.

ಸೃಷ್ಟಿ ಸ್ಥಿತಿ ಲಯಾದಿ ವ್ಯಾಪಾರಗಳು ದೇವರಿಗೆ ಆನಂದತ್ವ ರೂಪವಾದ ಕ್ರೀಡೆಯಾಗಿರುವುದರಿಂದ ಅವುಗಳು ದೇವರಿಗೆ, ಆಯಾಸ ಅಥವ ದುಃಖಪ್ರದಗಳಲ್ಲ. ಭೋಗರೂಪವಾಗಿರುತ್ತವೆ. ಪರಮಾಣುಕಾಲದಲ್ಲಿ ಸೃಷ್ಟವಾಗಿ ಜೀವಿಸುವ ಪರಮಾಣು ಜೀವಿಗಳಲ್ಲಿಯೂ, ಮಹತ್ತತ್ವಾತ್ಮಕ ಶರೀರವುಳ್ಳ ಬ್ರಹ್ಮಾಂತರ್ಯಾಮಿಯಾಗಿಯೂ, ಮಾಡುವ ಸಕಲ ವ್ಯಾಪಾರಗಳನ್ನು ಭೋಗಿಸುವನಾದ ಕಾರಣ ಪರಮಾತ್ಮನು ಅತ್ಯಣುಮಹತ್ಕಾಲ ನಾಮಕನು. ಅಣುಪದಾರ್ಥಗಳಲ್ಲಿದ್ದು ಅಣುಕಾಲದಲ್ಲಿ ಭೋಗಿಸುವ ಪರಮಾಣುಕಾಲ ನಾಮಕನು ಅವ್ಯಕ್ತನೆಂದೆನಿಸುವನು. ತಿರ್ಯಙ್ ಮಾನುಷ ದೇವಾದಿ ರೂಪಗಳಲ್ಲಿದ್ದು, ಕ್ಲುಪ್ತ ಕಾಲಗಳಲ್ಲಿ ಕ್ಲುಪ್ತ ಕರ್ಮಗಳನ್ನು ಮಾಡಿಸಿ ವ್ಯಕ್ತಭುಕ್ ಎಂದು ಸರ್ವಾಂತರ್ಯಾಮಿಯಾದ ವಿಭುನಾಮಕನು ಕರೆಸುವನು. ಬ್ರಹ್ಮಾಂತರ್ಯಾಮಿಯಾಗಿದ್ದು ದ್ವಿಪರಾರ್ಧ ಕಾಲಗಳಲ್ಲಿ ಕರ್ಮಮಾಡಿಸಿ ಸರ್ವಸಾರ ಭೋಗಿಸಿ ಅವಿಶೇಷಭುಕ್ ಎಂದು ಕರೆಸಿಕೊಳ್ಳುವನು. ಕಾಲಭೇದಗಳು ಈ ರೀತಿ ಇವೆ:- ಎರಡು ಪರಮಾಣುಕಾಲವು ಒಂದು ಅಣುಕಾಲ. ಎರಡಣುಕಾಲವು ದ್ವ್ಯಣುಕಾಲ. ಮೂರುದ್ವ್ಯಣುಕಾಲವು ತ್ರ್ಯಣುಕಾಲ. ಬಿಸಲು ಕೋಲಿನಲ್ಲಿ ಹೊಸದಾಗಿ ಪ್ರವೇಶಿಸಿದ ಒಂದು ಕಣವು ಕಣ್ಣಿಗೆ ಮೊದಲು ಯೋಗಿಗಳಿಗೆ ಕಾಣುವಷ್ಟು ಕಾಲವು ತ್ರ್ಯಣುಕಾಲ. ಮೂರು ತ್ರ್ಯಣುಕಾಲಗಳು ತೃಟಿ. ಮೂರು ತೃಟಿಗಳು ಒಂದು ವೇಧಾ. ಮೂರು ವೇಧಾಗಳು ಒಂದು ಲವ ಕಾಲ. ಮೂರು ಲವಕಾಲಗಳು ಒಂದು ನಿಮೇಷ ಕಾಲ. ನಿಮೇಷ ಕಾಲವು ಒಂದು ಚುಟಿಕೆ ಹಾಕುವಷ್ಟು ಕಾಲ. ಮೂರು ನಿಮೇಷಗಳು ಒಂದು ಕ್ಷಣ ಕಾಲ. ಐದು ಕ್ಷಣಗಳು ಒಂದು ಕಾಷ್ಠಾ ಕಾಲ. ಹದಿನೈದು ಕಾಷ್ಠಾಗಳು ಒಂದು ಲಘು ಕಾಲ. ಹದಿನೈದು ಲಘು ಕಾಲಗಳು ಒಂದು ನಾಡಿಕಾ ಕಾಲ. ಎರಡು ನಾಡಿಕಾ ಕಾಲಗಳು ಒಂದು ಮುಹೂರ್ತ. ಮೂರು ಮುಹೂರ್ತಗಳು ಅಥವಾ ಆರು ನಾಡಿಗಳು ಒಂದು ಪ್ರಹರವು. ಏಳು ನಾಡಿಕಗಳಿಗೆ ಒಂದು ಯಾಮವು.

## ಐದುವಿಧ ವತ್ಸರಗಳು

ಆರ್ಪಲ ತೂಕವುಳ್ಳದ್ದೂ, ಉದ್ದಿನಕಾಳಷ್ಟು ದಪ್ಪ ದ್ವಾರವುಳ್ಳ, ನಾಲ್ಕಂಗುಲ ಉದ್ದವಾದ ಕೊಳವಿಗಳುಳ್ಳದ್ದೂ ಆದ ಭಂಗಾರದ ನಾದೀಪಾತ್ರೆಯು, ವಸಂತಋತುವಿನಲ್ಲಿ ಪ್ರಯಾಗದ ಸಮಶೀತೋಷ್ಣ ಉದಕದಲ್ಲಿಟ್ಟರೆ, ಎಷ್ಟು ಕಾಲದಲ್ಲಿ ತುಂಬಿ ಮುಳುಗುವುದೋ ಅಷ್ಟುಕಾಲಕ್ಕೆ ನಾಡಿಕಕಾಲವೆಂದು ಹೆಸರು. ಹದಿನಾರು ಯಾಮಗಳಿಗೆ ಮನುಷ್ಯರ ಹಗಲು ರಾತ್ರೆಗಳೆಂಬ ಒಂದು ದಿನ. ಹದಿನೈದು ದಿನಗಳಿಗೆ ಒಂದು ಪಕ್ಷ, ಎರಡು ಪಕ್ಷ ಒಂದು ತಿಂಗಳೂ, ಎರಡು ತಿಂಗಳು ಒಂದು ಋತು.

ಮೂರು ಋತುಗಳು ಒಂದು ಆಯನ. ದಕ್ಷಿಣಾಯನ ಉತ್ತರಾಯಣಗಳೆಂಬ ಎರಡು ಅಯನಗಳು ಒಂದು ಸಂವತ್ಸರವೆಂಬ ವರುಷ. ಮನುಷ್ಯರ ಒಂದು ತಿಂಗಳು ಪಿತೃಗಳಿಗೆ ಒಂದು ದಿನ. ಮನುಷ್ಯರ ಒಂದು ವರ್ಷವು ದೇವತೆಗಳಿಗೆ ಒಂದು ದಿನ. ಮನುಷ್ಯರ ಪರಮಾಯಸ್ಸು ನೂರು ವರ್ಷ ಅವಧಿ ಯುಳ್ಳದ್ದು.

ಸೂರ್ಯಾದಿ ನವಗ್ರಹಗಳ, ಅಶ್ವಿನ್ಯಾದಿ ನಕ್ಷತ್ರಗಳ, ಧೃವಾದಿ ತಾಗಳಿಂದೊಡಗೂಡಿ, ಚಕ್ರಾಕಾರವಾಗಿ ಸುತ್ತುವ ಕಾಲನಾಮಕ ಪರಮಾತ್ಮನು, ಸದಾ ಗಮನ ವುಳ್ಳವನೂ, ಸದಾ ಸರ್ವ ಪರಮಾಣುಕಾಲ ಆರಂಭಿಸಿ ಮಹತ್ಕಾಲ ಪರ್ಯಂತರ ಸರ್ವ ಜೀವರು ಮಾಡುವ ಕರ್ಮಗಳನ್ನು ಸದಾ ನೋಡುವವನೂ, ಸಾಕ್ಷಿಯಾಗಿದ್ದು, ಪರಮಾಣು ಆದಿ ಕಾಲಭೇದಗಳಿಂದ, ಆಯಾ ಹೆಸರುಗಳಿಂದಲೇ ಕರೆಸಿಕೊಳ್ಳುವನು. ಈ ರೀತಿ ಪುನಃ ಪುನಃ ಚಕ್ರದಂತೆ ಸುತ್ತಿಬರುವ ಸಂವತ್ಸರಗಳಲ್ಲಿದ್ದು ಸರ್ವವನ್ನೂ ನೋಡುವವನಾದ್ದರಿಂದ ನಿಮೇಷನೆಂದು ಕರೆಯಲ್ಪಡುವನು.

ವರ್ಷಗಳು ಸಂವತ್ಸರ, ಪರಿವತ್ಸರ, ಇಡಾವತ್ಸರ, ಅನುವತ್ಸರ, ವತ್ಸರಗಳೆಂಬ ಹೆಸರಿನಿಂದ ಐದು ವಿಧ. ಸೂರ್ಯನಗತಿಯಿಂದ, ಸಂಕ್ರಮಣದಿಂದ ಸಂಕ್ರಮಣಕ್ಕೆ ಒಂದು ತಿಂಗಳಂತೆ ಆಗುವ ಹನ್ನೆರಡು ತಿಂಗಳುಗಳಿಗೆ ಸಂವತ್ಸರವೆಂದು ಹೆಸರು. ಬೃಹಸ್ಪತಿಯು ಹನ್ನೆರಡು ರಾಶಿಗಳಲ್ಲಿ ಸಂಚರಿಸುವಷ್ಟು ಕಾಲವು ಪರಿವತ್ಸರವು. ಇಪ್ಪತ್ತೇಳು ನಕ್ಷತ್ರಗಳು ದ್ವಾದಶರಾಶಿಗಳಲ್ಲಿ ಸಂಚರಿಸುವಷ್ಟುಕಾಲವು ಇಡಾವತ್ಸರವು. ತಿಥಿಗಳು ಹನ್ನೆರಡಾವರ್ತಿ ತಿಂಗಳುಗಳಾಗಿ ಸುತ್ತುವ ಕಾಲವು ಅನುವತ್ಸರವು. ಮುನ್ನೂರರವತ್ತು ದಿನಗಳುಳ್ಳ ವರುಷಕ್ಕೆ ವತ್ಸರವೆಂದು ಹೆಸರು. ಇವುಗಳಲ್ಲಿ ಶ್ರೀಹರಿಯು ವ್ಯಾಪ್ತನಾಗಿದ್ದು ಆಯಾ ಹೆಸರುಗಳುಳ್ಳವನು. ಯಾವ ಕಾಲನಾಮಕ ಪರಮಾತ್ಮನು, ಕಾಲವೆಂಬ ಸೃಷ್ಟಿ, ಪಾಲನಾ, ಲಯ ಕಾಲಭೇದಗಳೆಂಬ ತನ್ನ ಇಚ್ಛೆಯಿಂದ, ಸಕಲ ಜಗಸೃಷ್ಟಿ ಕಾರಣಳಾದ ಮಾಯಾನಾಮಕ ಲಕ್ಷ್ಮೀದೇವಿಯನ್ನು ಗುಣವೈಷಮ್ಯ ಮಾಡುವುದರಿಂದ ಪ್ರೇರಿಸಿ, ಜ್ಞಾನಬಲಕ್ರಿಯಾದಿಗಳಲ್ಲಿ ಸ್ವಗತ ಅತ್ಯಂತ ತಾರತಮ್ಯವುಳ್ಳ ಬ್ರಹ್ಮಾದಿ ತೃಣಾಂತ ಸಾಧನಜೀವರನ್ನು ಸೃಷ್ಟಿಸಿ, ಅವರಲ್ಲಿ ಪ್ರವೇಶಿಸಿ ಜ್ಞಾನೋಪದೇಶಮಾಡಿ, ಸಂವತ್ಸರಾದಿ ಐದು ರೂಪಗಳಿಂದ ಅಂತರಿಕ್ಷದಲ್ಲಿ ಚಕ್ರಾಕಾರವಾಗಿ ಸುತ್ತುತ್ತಾ, ತ್ರಿವಿಧಜೀವರ ಕಾಲಕಾಲ ಸಾಧನೆ, ಪೋಷಣೆಗಳನ್ನು ಸೂರ್ಯಾದಿಗಳಲ್ಲಿದ್ದು ಮಾಡುತ್ತಾನೋ, ಅಂತಹ ಪಂಚ ರೂಪ ಸಂವತ್ಸರಾದಿನಾಮಕ ಕಾಲರೂಪೀ ಪರಮಾತ್ಮನಿಗೆ ನಮ್ಮ ಸಕಲ ಜ್ಞಾನಕ್ರಿಯಾತ್ಮಕ ಸತ್ಕರ್ಮಗಳನ್ನೂ ಯಜ್ಞತ್ವೇನ ಸಮರ್ಪಿಸಿ ನಮಸ್ಕರಿಸುತ್ತೇವೆ! ಸ್ವಾಮಿಯು ಸ್ವೀಕರಿಸಿ ನಮ್ಮನ್ನುದ್ಧರಿಸಲಿ, ಎಂದರು.

## ಯುಗಗಳ ಪರಿಮಾಣ ವರ್ಣನೆ ಹಾಗೂ ಬ್ರಹ್ಮದೇವರ ಆಯುರ್ಮಾನ

ನಂತರ ವಿದುರನು ಪುನಃ ಪ್ರಶ್ನೆ ಮಾಡುತ್ತಾನೆ:- ಎಲೈ ಮೈತ್ರೇಯರೆ! ತಮ್ಮಿಂದ ಪಿತೃ, ದೇವತೆ, ಮನುಷ್ಯರ ಆಯುಃ ಪರಿಮಾಣ ಮಿತಿಯನ್ನು ತಿಳಿದೆನು. ನನಗೆ ಕಲ್ಪಗಳೆನಿಸುವ ಭೋಲೋಕ, ಭುವರ್ಲೋಕ, ಸ್ವರ್ಗಲೋಕಗಳೆಂಬ ಮೂರು ಲೋಕಗಳಿಗಿಂತ ಬೇರೆಯೂ, ಉತ್ತಮವೂ ಆದ ಮಹರ್ಲೋಕಾದಿಗಳಲ್ಲಿ ವಾಸಿಸುವ ಮಹಾತ್ಮರ ವಿಚಾರವನ್ನು ತಿಳಿಸಿರಿ! ಪರಮಾತ್ಮನಿಷ್ಠರಾದ ನೀವು ಕಾಲನಾಮಕ ಪರಮಾತ್ಮನ ವ್ಯಾಪಾರವನ್ನೂ ನಿಮ್ಮ ಉತ್ಕೃಷ್ಟಜ್ಞಾನದಿಂದ ತಿಳಿಸಿರುತ್ತೀರಿ. ಏಕೆಂದರೆ ನಿಮ್ಮಂತಹ ಜ್ಞಾನಿಗಳು ಯೋಗಸಾಮರ್ಥ್ಯದಿಂದ ಅಣಿಮಾದಿ ಅಷ್ಟೈಶ್ವರ್ಯಸಂಪನ್ನರಾಗಿ, ಯೋಗಿಗಳ ಹೃದಯಾಂತರ್ಗತನಾದ, "ಯೋ ದೇವಾನಾಂ ನಾಮಧಾ ಏಕ ಏವ "ಎಂಬ ಶೃತಿಯಂತೆ ಏಕಶಬ್ದ ವಾಚ್ಯನಾದ, ಸರ್ವಸತ್ತಾಪ್ರದ ಸರ್ವಜ್ಞಾನಪ್ರದ ಸ್ವಾಮಿಯನ್ನು ತಿಳಿಯಲು ಶಕ್ತರಾಗಿರುತ್ತೀರಿ! ಆದುದರಿಂದ ನನಗೆ ಉತ್ತರ ಹೇಳಲು ತಾವು ಸಮರ್ಥರಾಗಿರುತ್ತೀರಿ, ಎಂದರು. ಮೈತ್ರೇಯರು ವಿದುರನ ಪ್ರಶ್ನೆಯನ್ನು ಕೇಳಿ, ನಂತರ ಮಹರಾದಿ ಲೋಕಗಳಲ್ಲಿರುವವರ ಆಯುಃಪ್ರಮಾಣವನ್ನೂ, ಚತುರ್ಯುಗಗಳ ಮತ್ತು ಸಂಧಿಕಾಲಗಳ ಪರಿಮಾಣಗಳನ್ನೂ ಹೇಳುತ್ತಾರೆ.

ಎಲೈ ವಿದುರನೇ! ಮಹರಾದಿ ಲೋಕಗಳಲ್ಲಿ ವಾಸಿಸುವವರ ಆಯಸ್ಸನ್ನು ತಿಳಿಯಬೇಕಾದರೆ, ಮೊದಲು ಯುಗಗಳ ಮತ್ತು ಸಂಧಿಕಾಲಗಳ ಪರಿಮಿತಿಯನ್ನು ತಿಳಿಯಬೇಕು. ಯುಗಗಳು, ಕೃತ, ತ್ರೇತಾ, ದ್ವಾಪರ, ಕಲಿಯುಗಗಳೆಂದು ನಾಲ್ಕು ಯುಗಗಳು ಇರುತ್ತವೆ. ಈ ನಾಲ್ಕು ಯುಗಗಳ ಒಟ್ಟು ಕಾಲವು ದಿವ್ಯವರ್ಷಗಳೆಂಬ, ಹನ್ನೆರಡು ಸಹಸ್ರ ದಿವ್ಯವರುಷಗಳ ಕಾಲಪರಿಮಿತಿಯುಳ್ಳವುಗಳಾಗಿರುತ್ತವೆ. ಅಂದರೆ ದೇವತೆಗಳ ವರ್ಷಕ್ಕೆ, ದಿವ್ಯವರ್ಷವೆಂದು ಕರೆಯುತ್ತಾರೆ. ಅದರಲ್ಲಿ ಕೃತಯುಗವು ನಾಲ್ಕುಸಾವಿರ ದಿವ್ಯವರ್ಷಪರಿಮಾಣವುಳ್ಳದು. ಇದಕ್ಕೆ ಪೂರ್ವ ಸಂಧಿಕಾಲ ನಾಲ್ಕುನೂರುವರ್ಷಗಳು. ಉತ್ತರ ಸಂಧಿ ಕಾಲ ನಾಲ್ಕುನೂರುವರ್ಷಗಳು, ಒಟ್ಟು ಕಾಲ ೪೮೦೦ ದಿವ್ಯವರ್ಷಗಳು ಸೇರಿ ತ್ರೇತಾಯುಗಕ್ಕೆ ೩೬೦೦ ದಿವ್ಯವರ್ಷಗಳ ಪರಿಮಾಣಕಾಲವು.

ದ್ವಾಪರಯುಗಕ್ಕೆ ಎರಡು ಸಾವಿರ ದಿವ್ಯವರ್ಷಗಳು, ಎರಡು ಸಂಧಿಕಾಲಗಳು ಇನ್ನೂರು, ಇನ್ನೂರು ದಿವ್ಯವರ್ಷಗಳು. ಒಟ್ಟು ಕಾಲಪರಿಮಾಣ ಎರಡು ಸಾವಿರದ ನಾಲ್ಕುನೂರು ದಿವ್ಯವರ್ಷಗಳು. ಕಲಿಯುಗಕ್ಕೆ ಒಂದು ಸಹಸ್ರ ದಿವ್ಯವರ್ಷಗಳು. ಎರಡೂ ಸಂಧಿಕಾಲ ಇನ್ನೂರು ದಿವ್ಯವರ್ಷಗಳು. ಒಟ್ಟು ಕಾಲ ಸಾವಿರದ ಇನ್ನೂರು ದಿವ್ಯವರುಷಗಳು ಆಗುತ್ತವೆ. ಸಂಧಿಕಾಲಗಳನ್ನು ಬಿಟ್ಟು ಮಧ್ಯಭಾಗದ

ಯುಗ ಕಾಲ ಪರಿಮಾಣಗಳನ್ನೇ ಅಂದರೆ ಕೃತಯುಗಕ್ಕೆ ೪೦೦೦ ದಿವ್ಯವರ್ಷ, ತ್ರೇತಾಯುಗಕ್ಕೆ ೩೦೦೦ ದಿವ್ಯವರ್ಷಗಳು. ದ್ವಾಪರಯುಗಕ್ಕೆ ೨೦೦೦ ವರ್ಷಗಳೂ, ಕಲಿಯುಗಕ್ಕೆ ೧೦೦೦ ವರ್ಷಗಳೂ ಸೇರಿ ೧೦,೦೦೦ ದಿವ್ಯವರ್ಷಗಳು, ಯುಗಧರ್ಮಗಳನ್ನಾಚರಿಸುವ ಕಾಲಗಳನ್ನಾಗಿ ಜ್ಞಾನಿಗಳು ಹೇಳುತ್ತಾರೆ.

ತಪಸ್ಸು, ಶುಚಿತ್ವ, ದಯಾ, ಸತ್ಯಗಳೆಂಬ ನಾಲ್ಕು ಪಾದಗಳುಳ್ಳ ಧರ್ಮವು ಕೃತಯುಗದಲ್ಲಿ ಜನರಿಂದ ಅನುಷ್ಠಿಸಲ್ಪಡುತ್ತದೆ. ತ್ರೇತಾಯುಗದಲ್ಲಿ ಮೂರು ಪಾದ ವುಳ್ಳ ಧರ್ಮವೂ, ಒಂದು ಪಾದ ಅಧರ್ಮವೂ; ದ್ವಾಪರಯುಗದಲ್ಲಿ ಎರಡು ಪಾದ ಧರ್ಮ ಎರಡು ಪಾದ ಅಧರ್ಮವೂ, ಕಲಿಯುಗದಲ್ಲಿ ಒಂದು ಪಾದ ಧರ್ಮವೂ ಮೂರು ಪಾದ ಅಧರ್ಮವೂ ಅನುಷ್ಠಿಸಲ್ಪಡುವವು. ಮೂರು ಲೋಕಗಳ ಹೊರಗಿನ ಮಹರ್ಲೋಕದಿಂದ ಆರಂಭಿಸಿ ಸತ್ಯಲೋಕವೆಂಬ ಬ್ರಹ್ಮದೇವರ ಲೋಕದಲ್ಲಿರುವ ಜನರಿಗೆ, ಬ್ರಹ್ಮದೇವರ ಒಂದು ಹಗಲೆಂಬ ಈ ನಾಲ್ಕು ಯುಗಗಳ ಒಂದು ಸಾವಿರವು, ಅಂದರೆ ಸಾವಿರ ಚತುರ್ಯುಗಗಳು, ಒಂದು ದಿನದಷ್ಟು ಕಾಲವಾಗುತ್ತದೆ. ಅಷ್ಟೇ ರಾತ್ರಿಕಾಲದಲ್ಲಿ, ಬ್ರಹ್ಮದೇವರು ತಮ್ಮ ಒಂದು ಹಗಲಿನಲ್ಲಿ ಹದಿನಾಲ್ಕು ಸಲ ಮನ್ವಂತರಗಳೆಂಬ ಕಾಲಭೇದಗಳಿಂದ ಮೂರು ಲೋಕಗಳನ್ನು ಸೃಷ್ಟಿ, ಸ್ಥಿತಿ, ಲಯಮಾಡಿಸಿ, ರಾತ್ರಿಕಾಲದಲ್ಲಿ ಆ ಹದಿನಾಲ್ಕು ಮನ್ವಂತರ ಕಾಲಗಳಲ್ಲಿ, ಮೂರು ಲೋಕಗಳಲ್ಲಿ ಸೃಷ್ಟರಾದ ಪರಮಾತ್ಮ ಭಕ್ತರು ಮಾಡಿದ ಯಜ್ಞರೂಪ ಅರ್ಚನೆಯನ್ನು, ತಮ್ಮ ಅಂತರ್ಯಾಮಿ ವಿಶ್ವಕರ್ತುವಾದ ಪರಮಾತ್ಮನಿಗೆ ಸಮರ್ಪಿಸಿ, ಯೋಗನಿದ್ರಾಸಕ್ತರಾಗುವರು.

ಆ ರಾತ್ರಿಕಾಲ ಸಾವಿರ ಚತುರ್ಯುಗಗಳಲ್ಲಿ, ಮೂರು ಲೋಕಗಳು ನಾಶವಾಗಿರುತ್ತವೆ. ಪುನಃ ಹಗಲಿನಲ್ಲಿ ಸೃಷ್ಟಿಮಾಡಲ್ಪಡುತ್ತವೆ. ಸಾವಿರ ಚತುರ್ಯುಗಗಳಲ್ಲಿ ಹದಿನಾಲ್ಕು ಮನ್ವಂತರಗಳೂ ಪ್ರಳಯಕಾಲ ಸಹಿತವಾಗಿ ಕಳೆಯುವುದರಿಂದ, ಒಂದು ಮನ್ವಂತರಕ್ಕೆ ೧೦೦೦/೧೪=೭೧ ೩/೭ ಚತುರ್ಯುಗಗಳಾಗುತ್ತವೆ. ಈ ಮನ್ವಂತರಗಳಲ್ಲಿ ಮನುಗಳೂ, ಆ ವಂಶದಲ್ಲಿನ ರಾಜರುಗಳೂ, ಇಂದ್ರಾದಿ ದೇವತೆಗಳು, ಗಂಧರ್ವಾದಿ ಅನುಚರರೂ, ಋಷಿಗಳೂ ಕೂಡ ಪ್ರತಿ ಪ್ರತಿ ಮನ್ವಂತರದಲ್ಲಿ ಬೇರೆ ಬೇರೆಯವರು ಉತ್ಪನ್ನರಾಗುವರು. ಇದೇ ಬ್ರಹ್ಮದೇವರ ದಿನ ದಿನದ ಸೃಷ್ಟಿಯ ಕ್ರಮವು.

ಈ ದಿನಸೃಷ್ಟಿಯಲ್ಲೇ ಮನ್ವಂತರ ಕಾಲಗಳಲ್ಲಿ, ಭೂರ್ಭುವಸ್ಸುವರ್ಲೋಕಗಳ ಸೃಷ್ಟಿಪ್ರಳಯಗಳು ಹದಿನಾಲ್ಕು ಆವರ್ತಿ ಆಗುವವು. ಈ ಕಾಲದಲ್ಲಿಯೇ, ತಿರ್ಯಗಾದಿ ಸಕಲ ಜೀವದ ಸೃಷ್ಟಿಯೂ ಆಗುವುದು. ಈ ಬ್ರಹ್ಮದೇವರ ದಿನಸೃಷ್ಟಿಗಳೆಂಬ ಮೂರು ಲೋಕಗಳ ಸೃಷ್ಟಿ ಪ್ರಳಯ ಕಾಲಗಳಲ್ಲಿ, ಕಾಲನಾಮಕ ಪರಮಾತ್ಮನು ಸತ್ವಗುಣವನ್ನು ಉಪಾದಾನ ಕಾರಣವಾಗಿಟ್ಟುಕೊಂಡು, ಮನ್ವಾದಿಗಳಲ್ಲೂ, ಇಂದ್ರಾದಿಗಳಲ್ಲೂ, ರಾಜರುಗಳಲ್ಲೂ ಅಂಶತ್ವೇನ ಪ್ರವೇಶಿಸಿ, ಸಕಲರನ್ನೂ ಸಂರಕ್ಷಣೆ ಮಾಡುತ್ತಾನೆ.

ರಾತ್ರಿಕಾಲ ಪ್ರಾಪ್ತವಾದಾಗ ಬ್ರಹ್ಮದೇವರು, ಮೂರು ಲೋಕದಲ್ಲಿ ಹುಟ್ಟತಕ್ಕ ಮನು, ಇಂದ್ರ, ದೇವತೆಗಳು ಮುಂತಾದ ಸರ್ವರನ್ನೂ ಲಯಮಾಡಿ ತಮ್ಮ ಉದರದಲ್ಲಿ ಇವರನ್ನು ಸುಪ್ತ್ಯವಸ್ತೆಯಲ್ಲಿಟ್ಟುಕೊಂಡು ಯೋಗನಿದ್ರಾಸಕ್ತರಾಗುವರು.

(ದಾಸರಾಯರು ಹೇಳಿರುವಂತೆ "ನಿದ್ರೆಯ ಮಾಡಯ್ಯ ಹರಿಧ್ಯಾನದಿಂದ "ಎಂಬ ರೀತಿಯಲ್ಲಿ ಪರಮಾತ್ಮನ ಧ್ಯಾನಾಸಕ್ತರಾಗುವುದೇ ಬ್ರಹ್ಮದೇವರಿಗೆ ನಿದ್ರೆ. ಅವರಿಗೆ ನಮ್ಮಂತೆ ತಮೋಗುಣ ಕಾರ್ಯವಾದ, ಆಯಾಸ ಪರಿಹಾರಕವಾದ ನಿದ್ರೆಯು ಇಲ್ಲ.)

ಬ್ರಹ್ಮದೇವರು ಹೀಗೆ ಮಲಗಿಕೊಂಡಾಗ, ಕಾಲನಾಮಕ ಪರಮಾತ್ಮನು ತಮೋಗುಣವನ್ನು ಉಪಾದಾನ ಕಾರಣವನ್ನಾಗಿ ಮಾಡಿಕೊಂಡು, ಒಂದು ರೂಪದಿಂದ ಬ್ರಹ್ಮದೇವರಲ್ಲಿ ಪ್ರವೇಶಿಸಿಯೂ ಇನ್ನೊಂದು ರೂಪದಲ್ಲಿ ದಿನಪ್ರಳಯೋದಕದಲ್ಲಿ ಸಹಸ್ರ ಫಣಾನ್ವಿತ ದಿವ್ಯಭೋಗಯುಕ್ತ ಶೇಷತಲ್ಪದಲ್ಲಿ, ಶ್ರೀ ಭೂ ದುರ್ಗಾ ಸಮೇತನಾಗಿ ಮಲಗುವನು. ಈ ಮೂರು ಲೋಕಗಳ ಲಯಪ್ರಕಾರವು ಹೇಗೆಂದರೆ, ದೇವರು ದಿನಪ್ರಳಯಕ್ಕಾಗಿ ತಮೋಗುಣವನ್ನು ಪ್ರೇರಿಸಿದಾಗ, ಭೂರ್ಭುವಸ್ಸುವರ್ಲೋಕಗಳು ಗಾಡಾಂಧಕಾರದಿಂದ ಆವೃತವಾಗುವವು. ಸೂರ್ಯಚಂದ್ರರು ಇಲ್ಲದಂತಾಗುವರು. ಆವಾಗ ರುದ್ರದೇವರ ಅಂತರ್ಯಾಮಿಯಾಗಿ ಸಂಕರ್ಷಣ ಮುಖದಿಂದ ವಿಷಪೂರಿತವಾದ ವಾಯುವು ಪ್ರಚಂಡ ಆಟೋಪದಿಂದ ತರಂಗತರಂಗವಾಗಿ ಹುಟ್ಟಿ, ಪ್ರಳಯೋದಕವನ್ನು ಪ್ರವೇಶಿಸಿ, ಅದ್ಭುತಾಕಾರವಾದ ಅಲೆಗಳನ್ನೆಬ್ಬಿಸಿ, ಮೂರು ಲೋಕಗಳನ್ನು ಆವರಿಸಿ ಸುಟ್ಟಿದ್ದ ಅಗ್ನಿಯನ್ನು ಆವರಿಸಿ ಶಾಂತಗೊಳಿಸುವುದು. ಇಂತಹ ಪ್ರಳಯೋದಕದಲ್ಲಿಯೇ ದೇವರು ಜನೋಲೋಕದವರಿಂದ ಸ್ತುತ್ಯನಾಗಿ ಅನಂತ ತಲ್ಪದ ಮೇಲೆ ಯೋಗನಿದ್ರೆಯುಳ್ಳವನಂತೆ ಸುಮ್ಮನೇ ಮಲಗಿರುವನು. ಇದೇ ಬ್ರಹ್ಮದೇವರ ಹಗಲಿನ ಮತ್ತು ರಾತ್ರಿಯ ವ್ಯಾಪಾರಗಳು. ಇಂತಹ ದಿನಗಳಿಂದ ಕೂಡಿದ ಮೂವ್ವತ್ತು ಅಹೋರಾತ್ರೆಗಳು ಬ್ರಹ್ಮದೇವರಿಗೆ ಒಂದು ತಿಂಗಳು.

ಹನ್ನೆರಡು ತಿಂಗಳುಗಳು ಒಂದು ವರ್ಷ. ಇಂತಹ ನೂರು ವರ್ಷಗಳೇ ಬ್ರಹ್ಮದೇವರ ಆಯುಃ ಪರಿಮಿತಿ. ಇದರಲ್ಲಿ ಮೊದಲಿನ ಪರಾರ್ಧವೆಂಬ ಐವತ್ತು ವರ್ಷಗಳು ಬ್ರಹ್ಮದೇವರ ಪದ್ಮಸೃಷ್ಟಿಯ ಕಾಲವು. ದ್ವಿಪರಾರ್ಧವೆಂಬ ಈ ವರಾಹ ಕಲ್ಪದಲ್ಲಿಯೇ ಬ್ರಹ್ಮದೇವರು ಸೃಷ್ಟಿ ಮಾಡುವ ಕಾಲವು. ಮೊದಲನೆಯ ಪರಾರ್ಧದ ಆದಿಭಾಗದಲ್ಲಿ ಬ್ರಹ್ಮದೇವರ ಸ್ಥೂಲದೇಹವೆಂಬ ಬ್ರಹ್ಮಾಂಡದ ಸೃಷ್ಟಿಯಾಗಿ, ಆ ಬ್ರಹ್ಮಾಂಡ ಶರೀರವುಳ್ಳ ಬ್ರಹ್ಮದೇವರನ್ನು ಜ್ಞಾನಿಗಳು ಶಬ್ದಬ್ರಹ್ಮನೆಂದೂ, ಆ ಪರಾರ್ಧದ ಕೊನೆಯಲ್ಲಿ, ಬ್ರಹ್ಮಾಂಡದೊಳಗೆ ಗರ್ಭೋದಕದಲ್ಲಿ ಮಲಗಿಕೊಂಡು ಪರಮಾತ್ಮನು ತನ್ನ ನಾಭಿ ಸರೋವರದಿಂದ

ಹದಿನಾಲ್ಕು ದಳಗಳುಳ್ಳ ಕಮಲದಲ್ಲಿ ಚತುರ್ಮುಖ ಬ್ರಹ್ಮದೇವರನ್ನು ಪಾದ್ಮಸೃಷ್ಟಿಯಲ್ಲಿ ಸ್ಥೂಲದೇಹ ಸಹಿತರನ್ನಾಗಿ ನಾಭಿಕಮಲದಲ್ಲಿ ಅಭಿವ್ಯಕ್ತರನ್ನಾಗಿ ಮಾಡಿದನೆಂದೂ ತಿಳಿಯುತ್ತಾರೆ.

ಈ ಬ್ರಹ್ಮದೇವರ ಎರಡು ಪರಾರ್ಧಕಾಲಗಳೂ ಸೇರಿದರೆ, ಯೋಗನಿದ್ರಾಲೋಲನಾದ ಕಾಲನಾಮಕ ಪರಮಾತ್ಮನಿಗೆ ನಿಮೇಷ ಕಾಲ, ಅಂದರೆ ಒಂದು ಸಲ ಕಣ್ಣಿನರೆಪ್ಪ ಮುಚ್ಚಿ ತೆರೆಯುವಷ್ಟು ಕಾಲವೆಂದು ಔಪಚಾರಿಕವಾಗಿ ವೇದಾದಿಗಳು ನಿರೂಪಿಸುತ್ತವೆ. ಆದುದರಿಂದ ಸುಖಶಾಶ್ವತನಾದ ಪರಮಾತ್ಮನಿಗೆ ಸಮಾಧಿಕರು ಬೇರೆ ಎಲ್ಲೂ ಇಲ್ಲ. ದೇವರಿಗೆ ಕಣ್ಣು ಮುಚ್ಚುವುದು ಬಿಡುವುದು ಮೊದಲಾದ ದೋಷಗಳಿಲ್ಲವಾದುದರಿಂದ, ಜನರ ಬುದ್ಧಿಗೆ ಗೋಚರವಾಗುವುದಕ್ಕಾಗಿ, ಈ ಬ್ರಹ್ಮಾಯುಷ್ಯವಾದ ನೂರು ವರ್ಷಗಳು ದೇವರಿಗೆ, ಅತ್ಯಂತ ಅಲ್ಪಕಾಲವಾಗಿರುತ್ತೆಂದು ತಿಳಿಸುವುದಕ್ಕಾಗಿ ಹೇಳಿದ್ದಾಗಿರುತ್ತದೆ.

ಆದಿಮಧ್ಯಾಂತ್ಯಗಳೆಂಬ ಕಾಲವಿಚ್ಛೇದರಹಿತನೂ, ಜಗತ್ಸ್ವಾಮಿಯೂ, ಬ್ರಹ್ಮಾದಿಗಳಿಗೆ ಪ್ರಭುವೂ, ಕಾಲನಾಮಕ ಯಮದೇವರಿಗೆ ಮೃತ್ಯುಪ್ರದರಾದ ರುದ್ರದೇವರಿಗೆ ಮೃತ್ಯುಸ್ವರೂಪನೂ, ಆದ ಶ್ರೀನೃಸಿಂಹನೂ, ಅಪ್ತೇಜೋವಾಯ್ವಾಕಾಶಾಹಂಕಾರ ಮಹತ್ತತ್ವ ಪ್ರಕೃತಿ ಪೃಥಿವ್ಯಾತ್ಮಕ ಅಷ್ಟಪ್ರಕೃತಿಗಳಿಂದ ಸುತ್ತಲ್ಪಟ್ಟವನೂ, ಅಗಿ ಪರಮಾತ್ಮನು ಆ ಸಂಕರ್ಷಣರೂಪದಿಂದ ಈ ಐವತ್ತು ಕೋಟಿ ಯೋಜನದ ವಿಸ್ತಾರವಾದ ಒಂದು ಬ್ರಹ್ಮಾಂಡವನ್ನು ಒಂದು ಸಾಸುವೇ ಕಾಳಿನಂತೆ ಭಾವಿಸುವನೋ, ಅಂತಹ ಮಹಚ್ಛಬ್ದವಾಚ್ಯನಾದ ಪರಮಾತ್ಮನಿಗೆ, ಒಂದು ಬ್ರಹ್ಮಾಂಡವು ಉತ್ಕೃಷ್ಟ ವಾಸ ಸ್ಥಾನವಾಗಿರುವುದರಿಂದ ಪರಂಧಾಮವೆಂದು ಕರೆಯಲ್ಪಡುತ್ತದೆ. ಈ ರೀತಿ ದೇಶ ಕಾಲ ಗುಣ ಪೂರ್ಣನಾದ ಜಗನ್ನಿಯಾಮಕ ಸ್ವಾಮಿಯ ಮಹಾ ಮಹಿಮೆಗಳನ್ನು ತಿಳಿದು, ಅವನ ಪಾದಾರವಿಂದದಲ್ಲಿ, ಮೋಕ್ಷಾಪೇಕ್ಷಿಗಳಾದ ಸರ್ವರೂ, ಭಕ್ತಿ ಮಾಡತಕ್ಕದ್ದೆಂದು ನಿರೂಪಿಸಲ್ಪಡುತ್ತೆ. ಬ್ರಹ್ಮದೇವರು ಶ್ರೀಪರಮಾತ್ಮನ ರೋಮ ಕೂಪಗಳಲ್ಲಿ, ಪ್ರತ್ಯೇಕ ಪ್ರತ್ಯೇಕ ಅನೇಕ ಬ್ರಹ್ಮಾಂಡಗಳನ್ನೂ, ಅನೇಕ ಬ್ರಹ್ಮರನ್ನು ಅನೇಕ ಬ್ರಹ್ಮಾಂಡಾಂತರ್ಯಾಮಿ ಪುರುಷ ನಾಮಕ ಭಗವದ್ರೂಪಗಳನ್ನೂ ಕಂಡಿದ್ದಾರೆಂದು ಶ್ರುತಿಗಳು ಸಾರುತ್ತವೆ.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಹನ್ನೆರಡನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

# अथ त्रयोदशोऽध्यायः

**मैत्रेय उवाच**

इति ते वर्णितः क्षत्तः कालाख्यः परमात्मनः ।
महिमा वेदगर्भोऽथ यदस्राक्षीन्निबोध मे ॥ १ ॥

ससर्जाग्रेऽथ तामिस्रमन्धतामिस्रमादिकृत् ।
महामोहं च मोहं च तमश्चाज्ञानवृत्तयः ॥ २ ॥

दृष्ट्वा पापीयसीं सृष्टिं नात्मानं बह्वमन्यत ।
भगवद्ध्यानपूतेन मनसाऽन्यांस्ततोऽसृजत् ॥ ३ ॥

सनकं च सनन्दं च सनातनमथात्मभूः ।
सनत्कुमारं च मुनिं निष्क्रियानूर्ध्वरेतसः ॥ ४ ॥

तान् बभाषे स्वभूः पुत्रान् प्रजाः सृजत पुत्रकाः ।
तन्नैच्छन् मोक्षधर्माणो वासुदेवपरायणाः ॥ ५ ॥

सोऽवज्ञातः सुतैरेवं प्रत्याख्यातानुशासनैः ।
क्रोधं दुर्विषहं जातं नियन्तुमुपचक्रमे ॥ ६ ॥

धिया निगृह्यमाणोऽपि भ्रुवोर्मध्यात् प्रजापतेः ।
सद्योऽजायत तन्मन्युः कुमारो नीललोहितः ॥ ७ ॥

स वै रुरोद देवानां पूर्वजो भगवान् भवः ।
नामानि कुरु मे धातः स्थानानि च जगद्गुरो ॥ ८ ॥

इति तस्य वचः पाद्मो भगवान् परिपालयन् ।
अभ्यधाद् भद्रया वाचा मा रोदीस्तत् करोमि ते ॥ ९ ॥

यदरोदीः सुरश्रेष्ठ सोद्वेग इव बालकः ।
ततस्त्वामभिधास्यन्ति नाम्ना रुद्र इति प्रजाः ॥ १० ॥

हृदिन्द्रियाण्यसुर्व्योम वायुरग्निर्जलं मही ।
सूर्यश्चन्द्रस्तपश्चैव स्थानान्येकादशैव ते ॥ ११ ॥

मन्युर्मनुर्महानासो महाञ्छिव ऋतध्वजः ।
मरुरेता भवः कालो वामदेवो धृतव्रतः ॥ १२ ॥

धीर्वृत्तिरसहो मा च नियुत् सर्पिरिलाम्बिका ।
इरावती सुधा दीक्षा रुद्राण्यो रुद्र ते स्त्रियः ॥ १३ ॥

गृहाणैतानि नामानि स्थानानि च सयोषणम् ।
आभिः सृज प्रजा बह्वीः प्रजानामसि यत् पतिः ॥ १४ ॥

इत्यादिष्टः स गुरुणा भगवान् नीललोहितः ।
सत्त्वाकृतिः स्वभावेन ससर्जात्मसमाः प्रजाः ॥ १५ ॥

रुद्राणां रुद्रसृष्टानां समन्ताद् ग्रसतां जगत् ।
निशाम्यासंख्यशो यूथान् प्रजापतिरशङ्कत ॥ १६ ॥

अलं प्रजाभिः सृष्टाभिरीदृशीभिः सुरोत्तम ।
मया सह दहन्तीभिर्दिशश्चक्षुर्भिरुल्बणैः ॥ १७ ॥

तप आतिष्ठ भद्रं ते सर्वभूतसुखावहम् ।
तपसैव यथापूर्वं स्रष्टा विश्वमिदं भवान् ॥ १८ ॥

तपसैव परंज्योतिर्भगवन्तमधोक्षजम् ।
सर्वभूतगुहावासमञ्जसा विन्दते पुमान् ॥ १९ ॥

**मैत्रेय उवाच**

एवमात्मभुवाऽदिष्टः परिक्रम्य गिरां पतिम् ।
बाढमित्यमुमामन्त्र्य विवेश तपसे वनम् ॥ २० ॥

अथाभिध्यायतः सर्गं दश पुत्राः प्रजज्ञिरे ।
भगवच्छक्तियुक्तस्य लोकसन्तानहेतवः ॥ २१ ॥

मरीचिरत्र्यङ्गिरसौ पुलस्त्यः पुलहः क्रतुः ।
भृगुर्वसिष्ठो दक्षश्च दशमस्तत्र नारदः ॥ २२ ॥

उत्सङ्गान्नारदो जज्ञे दक्षोऽङ्गुष्ठात् स्वयम्भुवः ।
प्राणाद् वसिष्ठः सञ्जातो भृगुस्त्वचि करात् क्रतुः ॥ २३ ॥

पुलहो नाभितो जज्ञे पुलस्त्यः कर्णयो ऋषिः ।
अङ्गिरा मुखतोऽक्ष्णोऽत्रिर्मरीचिर्मनसोऽभवत् ॥ २४ ॥

धर्मः स्तनाद् दक्षिणतो यत्र नारायणः स्वयम् ।
अधर्मः पृष्टतो यस्मान्मृत्युर्लोकभयङ्करः ॥ २५ ॥

हृदि कामो भ्रुवोः क्रोधो लोभश्चाधरदच्छदात्।
आस्याद् वाक् सिन्धवो मेढ्रान्निर्ऋतिः पायोरघाश्रयः ॥२६॥

छायायाः कर्दमो जज्ञे देवहूत्याः पतिः प्रभुः।
मनसो देहतश्चेदं जज्ञे विश्वकृतो जगत्॥ २७ ॥

वाचं दुहितरं तन्वीं स्वयम्भूर्हरतीं मनः।
अकामां चकमे क्षत्तः सकाम इति नः श्रुतम्॥ २८ ॥

तमधर्मे कृतमतिं विलोक्य पितरं सुताः।
मरीचिमुख्या मुनयो विस्रम्भात् प्रत्यषेधयन्॥ २९ ॥

नैतत् पूर्वैः कृतं त्वद्य न करिष्यन्ति येऽपरे।
यः स्वां दुहितरं गच्छेदनिगृह्याङ्गजं प्रभुः॥ ३० ॥

तेजीयसामपि ह्येतन्न सुश्लोक्यं जगद्गुरो।
यद्वृत्तमनुतिष्ठन् वै लोकः क्षेमाय कल्पते॥ ३१ ॥

तस्मै नमो भगवते य इदं स्वेन रोचिषा।
आत्मस्थं व्यञ्जयामास स धर्मं पातुमर्हति॥ ३२ ॥

स इत्थं गृणतः पुत्रान् पुरो दृष्ट्वा प्रजापतीन्।
प्रजापतिपतिस्तन्वीं तत्याज व्रीडितस्तदा॥ ३३ ॥

तां दिशो जगृहुर्घोरां नीहारं यद् विदुस्तमः।
कदाचिद् ध्यायतः स्रष्टुर्वेदा आसंश्चतुर्मुखात्॥ ३४ ॥

कथं स्रक्ष्याम्यहं लोकान् समवेतान् यथा पुरा।
चातुर्होत्रं कर्मतन्त्रमुपवेदनयैः सह।
धर्मस्य पादाश्चत्वारस्तथैवाश्रमवृत्तयः॥ ३५ ॥

**विदुर उवाच**

स वै विश्वसृजामीशो वेदादीन् मुखतोऽसृजत्।
यद् यद् येनासृजद् देवस्तन्मे ब्रूहि तपोधन॥ ३६ ॥

**मैत्रेय उवाच**

ऋग्यजुःसामाथर्वाख्यान् वेदान् पूर्वादिभिर्मुखैः।
शस्त्रमिज्यां स्तुतिस्तोमं प्रायश्चित्तं व्यधात् क्रमात्॥ ३७ ॥

आयुर्वेदं धनुर्वेदं गान्धर्वं वेदमात्मनः।
स्थापत्यं चासृजद् वेदं क्रमाद् पूर्वादिभिर्मुखैः॥ ३८ ॥

इतिहासपुराणं च पञ्चमं वेदमीश्वरः।
सर्वेभ्य एव वक्त्रेभ्यः ससृजे सर्वदर्शनः॥ ३९ ॥

षोडश्युक्थौ पूर्ववक्त्रात् पुरीष्याग्निष्टुतावथ।
आप्तोर्यामातिरात्रौ च वाजपेयं सगोसवम्॥ ४० ॥

तपः शौचं दया सत्यं धर्मस्येति पदानि च।
आश्रमांश्च यथासंख्यमसृजत् सह वृत्तिभिः॥ ४१ ॥

सावित्रं प्राजापत्यं च ब्राह्मं चाथ बृहत् तथा।
वार्ताऽसञ्चयशालीनं शिलोञ्छ इति वै गृहे॥ ४२ ॥

वैखानसा वालखिल्योदम्बराः फेनपा वने।
न्यासे कुटीचकः पूर्वं बहूदो हंसनिष्क्रियौ॥ ४३ ॥

आन्वीक्षिकी त्रयी वार्ता दण्डनीतिस्तथैव च।
एवं व्याहृतयश्चासन् प्रणवेनास्पदं गताः॥ ४४ ॥

तस्योष्णिगासील्लोमभ्यो गायत्री च त्वचो विभोः।
त्रिष्टुप् मांसात् स्नुतोऽनुष्टुब् जगत्यस्थ्नः प्रजापतेः।
मज्जायाः पक्तिरुत्पन्ना बृहती प्राणतोऽभवत्॥ ४५ ॥

स्पर्शास्तस्याभवन् जीवात् स्वरो देह उदाहृतः।
ऊष्माण इन्द्रियाण्याहुरन्तस्था बलमात्मनः॥ ४६ ॥

स्वराः सप्त विहारेण भवन्ति स्म प्रजापतेः।
शब्दब्रह्मात्मनस्तात व्यक्ताव्यक्तात्मनः प्रभोः॥ ४७ ॥

ब्रह्मानुभाववितता नानाशक्त्युपबृंहितः।

ततोऽपरामुपादाय स सर्गाय मनो दधे ॥ ४८ ॥

ऋषीणां भूरिवीर्याणामपि सर्गमविस्तृतम् ।
ज्ञात्वा तद् हृदये भूयश्चिन्तयामास कौरव ॥ ४९ ॥

अहो अद्भुतमेतन्मे व्यापृतस्यापि नित्यदा ।
न ह्येधन्ते प्रजा नूनं दैवमत्र विघातकम् ॥ ५० ॥

एवं युक्तिमतस्तस्य दैवं चावेक्षतस्तदा ।
कस्य रूपमभूद् द्वेधा यत् कायमभिचक्षते ॥ ५१ ॥

ताभ्यां रूपविभागाभ्यां मिथुनं समपद्यत ।
यस्तु तत्र पुमान् सोऽभून्मनुः स्वायम्भुवः स्वरा ॥ ५२ ॥

स्त्रीर्याऽऽसीच्छतरूपाख्या महिष्यस्य महात्मनः ।
तदा मैथुनधर्मेण प्रजा एधांबभूविरे ॥ ५३ ॥

स चापि शतरूपायां पञ्चापत्यान्यजीजनत् ।
प्रियव्रतोत्तानपादौ तिस्रः कन्याश्च भारत ॥ ५४ ॥

आकूतिर्देवहूतिश्च प्रसूतिरिति सत्तम ।
आकूतिं रुचये प्रादात् कर्दमाय तु मध्यमाम् ।
दक्षायादात् प्रसूतिं च यत आपूरितं जगत् ॥ ५५ ॥

**॥ इति श्रीमद्भागवते (तृतीयस्कन्धे(*3) त्रयोदशोऽध्यायः ॥**

**॥ ಹದಿಮೂರನೆಯ ಅಧ್ಯಾಯ ॥**

## ತತ್ತ್ವಾಭಿಮಾನಿ ದೇವತೆಗಳ ಸೃಷ್ಟಿವಿಚಾರ

ಶ್ರೀಹರಿಯು ರೂಪಾನಂತ್ಯವುಳ್ಳವನೆಂದು ತಿಳಿಯುವುದು ಹೇಗೆ ಮೋಕ್ಷಕ್ಕೆ ಸಾಧನವೋ, ಅದೇ ರೀತಿಯಲ್ಲಿ ಬ್ರಹ್ಮಾದಿ ದೇವತೆಗಳ ತಾರತಮ್ಯವನ್ನು ಸೃಷ್ಟಿಕ್ರಮದಿಂದ ತಿಳಿಯುವುದೇ ಪರಮಾತ್ಮನ ಪ್ರೀತಿಗೂ, ಅನುಗ್ರಹಕ್ಕೂ ಕಾರಣವೆಂದು ಈ ಅಧ್ಯಾಯದಲ್ಲಿ ಪ್ರತಿಪಾದಿತವಾಗುತ್ತದೆ.

ಮೈತ್ರೇಯರು ಹಿಂದಿನ ಅಧ್ಯಾಯದಲ್ಲಿ ಕಾಲಾಖ್ಯ ಪರಮಾತ್ಮನ ಸ್ವರೂಪವನ್ನು ವರ್ಣಿಸಿದವರಾಗಿ, ಈಗ ಬ್ರಹ್ಮದೇವರು ಮೊದಲು ತಾಮಿಸ್ರ, ಅಂಧತಾಮಿಸ್ರ, ಮಹಾಮೋಹ, ಮೋಹ, ತಮಸ್ಸುಗಳೆಂಬ ಅಜ್ಞಾನ ಕಾರ್ಯಗಳಾದ ಅವಿದ್ಯಾ ಪಂಚಕಗಳನ್ನು ಸೃಷ್ಟಿಸಿದರು. ಈ ಅವಿದ್ಯಾ ಪಂಚಕಗಳ ಸ್ವರೂಪಗಳು ಈ ಪ್ರಮಾಣ ವಾಕ್ಯಗಳಲ್ಲಿ ನಿರೂಪಿಸಲ್ಪಡುತ್ತವೆ:- ಅಂದರೆ, ತಮಸ್ಸು ಕತ್ತಲಂತಿರುವ ಅಜ್ಞಾನ, ವಸ್ತುಗಳಲ್ಲಿ ಅನ್ಯಥಾ ಜ್ಞಾನವು ಮೋಹ. ಅನ್ಯಥಾ ಜ್ಞಾನವೇ ಸರಿಯಾದದ್ದೆಂದು ವಾದಿಸುವುದೇ ಮಹಾ ಮೋಹ. ಹಾಗಲ್ಲವೆಂದವರಲ್ಲಿ ಮಾಡುವ ಕ್ರೋಧವೆಂಬ ಕೆಡಕನ್ನು ಹಾರೈಸುವುದೇ ತಾಮಿಸ್ರಾ. ಮರಣವೇ ಅಂಧತಾಮಿಸ್ರವು ಎಂದು ಶಾಸ್ತ್ರ ವಾಕ್ಯಗಳಿಂದ ನಿರೂಪಿತವಾಗಿದೆ. ಇಂತಹ ಪಾಪಮಯಗಳಾದ ಅವಿದ್ಯಾ ಪಂಚಕಗಳ ಸೃಷ್ಟಿಯು ಪ್ರಾರಂಭದಲ್ಲಿಯೇ ಆದದ್ದರಿಂದ ಬ್ರಹ್ಮದೇವರಿಗೆ ತಮ್ಮ ಸೃಷ್ಟಿ ಕಾರ್ಯದಲ್ಲಿ ಅಷ್ಟೇನೂ ಸಮಾಧಾನವಾಗಲಿಲ್ಲ. ಆದುದರಿಂದ ಪುನಃ ಶ್ರೀಪರಮಾತ್ಮನನ್ನು ಧ್ಯಾನಮಾಡಿ ಆದರಿಂದ ಶುದ್ಧವಾದ ಮನಸ್ಸುಳ್ಳವರಾಗಿ ಪುನಃ ಸೃಷ್ಟಿಗೆ ಆರಂಭಿಸಿದರು.

## ಸನಕಾದಿಗಳ ಹಾಗೂ ರುದ್ರರ ಸೃಷ್ಟಿ

ಆಗ ಪರಮಾತ್ಮನಿಂದ ಉತ್ಪನ್ನರಾದ ಆ ಬ್ರಹ್ಮದೇವರ ಪ್ರಸನ್ನ ಮನಸ್ಸಿನಿಂದ ಪರಮಹಂಸರೂ, ಊರ್ಧ್ವರೇತಸ್ಕರೂ ಆದ ಸನಕ, ಸನಂದ, ಸನಾತನ, ಸನತ್ಕುಮಾರರು ಉತ್ಪನ್ನರಾದರು. ಆ ಹುಟ್ಟಿದ ಸನಕ ಸನಂದಾದಿಗಳಿಗೆ ಬ್ರಹ್ಮದೇವರು ಪ್ರಜೆಗಳನ್ನು ಹುಟ್ಟಿಸಿರೆಂದು ಹೇಳಿದರು. ಆದರೆ ಅವರು ವಾಸುದೇವನಲ್ಲಿ ಪರಮ ಭಕ್ತಿಯುಳ್ಳವರಾದ್ದರಿಂದಲೂ, ಮೋಕ್ಷಮಾರ್ಗಾವಲಂಬಿಗಳಾದ್ದರಿಂದಲೂ, ಪ್ರಜಾ ಸೃಷ್ಟಿ ಕಾರ್ಯಕ್ಕೆ ಒಪ್ಪ ಲಿಲ್ಲ. ಹೀಗೆ ವಿರುದ್ಧವಾಗಿ ಹೇಳಿದ ಇವರ ಮಾತಿನಿಂದ ಬ್ರಹ್ಮದೇವರ ಮನಸ್ಸಿನಲ್ಲಿ ಕೋಪ ಭಾವವು ಉಂಟಾಯಿತು. ಆ ಕೋಪವನ್ನು ಅನರ್ಥಗಳಿಗೆ ಕಾರಣವೆಂದು ತಿಳಿದು ಬ್ರಹ್ಮದೇವರು ಅಡಗಿಸಿಲು ಪ್ರಯತ್ನಿಸಿದರು. ಹಾಗೆ ಕೋಪವನ್ನು ತಡೆಯಲು ಬ್ರಹ್ಮದೇವರು ಪ್ರಯತ್ನಿಸಿದರೂ, ಅವರ ಹುಬ್ಬುಗಳ ಮಧ್ಯ ಭಾಗದಿಂದ, ಆ ಕ್ಷಣದಲ್ಲೇ ಹುಟ್ಟಿದ ಕಾರಣ, 'ಸದ್ಯೋಜಾತ'ನೆಂಬ ಕ್ರೋಧರೂಪನಾದ, ಕಪ್ಪಾದ ಕಂಠಗಳುಳ್ಳ ಕಾರಣ 'ನೀಲಲೋಹಿತ'ನೆಂಬ ಕುಮಾರನು ಹುಟ್ಟಿದನು.

ಹುಟ್ಟಿದಾಕ್ಷಣ ಆ ಮಗುವು ಗಟ್ಟಿಯಾಗಿ ಅಳುತ್ತಾ, ಸಮಸ್ತ ದೇವತೆಗಳಿಗಿಂತಲೂ ಮೊದಲೇ ಹುಟ್ಟಿದ್ದರಿಂದ 'ಭವ'ಎಂಬ ಹೆಸರುಳ್ಳವನಾಗಿ, ಎಲೈ ಬ್ರಹ್ಮದೇವರೇ ನನಗೆ ಹೆಸರುಗಳನ್ನಿಟ್ಟು, ಇರುವುದಕ್ಕೆ ವಾಸ ಸ್ಥಾನಗಳನ್ನು ಮಾಡಿ ಕೊಡಿರೆಂದು ಗೋಳಾಡಿದನು. ಈ ಮಾತುಗಳನ್ನು ಜಗದ್ಗುರುಗಳಾದ ಬ್ರಹ್ಮದೇವರು ಕೇಳಿ ಎಲೈ ಶ್ರೇಷ್ಠನೇ, ಬಾಲಕರಂತೆ ಅಳಬೇಡ! ನೀನು ಹೇಳಿದಂತೆ ಮಾಡಿ ಕೊಡುವೆನೆಂದು

ಹೇಳಿದರು. ನೀನು ಹುಟ್ಟಿದಾಕ್ಷಣ ಅತ್ತದ್ದರಿಂದ ನಿನಗೆ ರುದ್ರನೆಂಬ ಹೆಸರು ಆಗಲಿ. ನಿನಗೆ ಮನಸ್ಸು, ಇಂದ್ರಿಯಗಳು, ಪ್ರಾಣ, ಆಕಾಶ, ವಾಯು, ಅಗ್ನಿ, ಜಲ, ಪೃಥ್ವೀ, ಸೂರ್ಯ, ಚಂದ್ರ, ತಪಸ್ಸುಗಳೆಂಬ ಹನ್ನೊಂದು ವಾಸಸ್ಥಳಗಳು ಆಗಲಿ. ನಿನಗೆ ಮನ್ಯು, ಮನು, ಮಹಾನಾಸ, ಮಹಾನ್, ಶಿರ, ಋತಧ್ವಜ, ಮರುತೀತಾ, ಭವ, ಕಾಲ, ವಾಮದೇವ, ಧೃತವ್ರತ ಎಂಬ ಹನ್ನೊಂದು ಹೆಸರುಗಳನ್ನಿಟ್ಟಿರುತ್ತೇನೆ. ನಿನಗೆ ಧೀ, ವೃತ್ತೀ, ಅಶಲ, ಉಮಾ, ನಿಯುತ್ಸರ್ಪಿ, ಇಲಾ, ಅಂಬಿಕಾ, ಇರಾವತೀ, ಸುಧಾ, ದೀಕ್ಷಾ, ರುದ್ರಾಣಿಯರೆಂಬ ಹನ್ನೊಂದು ಹೆಸರುಗಳುಳ್ಳ ಭಾರ್ಯೆಯರನ್ನು ಕೊಟ್ಟಿದ್ದೇನೆ. ಇವರಿಂದ ನೀನು ಪ್ರಜೆಗಳ ಅಧಿಪತಿಯಾಗಿ, ಬಹಳವಾಗಿ ಪ್ರಜೆಗಳನ್ನು ಪಡೆಯುವವನಾಗು ಎಂದು ಬ್ರಹ್ಮದೇವ ಹೇಳ ನೀಲಲೋಹಿತನಾಮಕ ರುದ್ರನು, ಸತ್ವಗುಣರೂಪದಿಂದ ತನಗೆ ಸಮಾನರಾದ ಬಹು ಪ್ರಜೆಗಳನ್ನು ಸೃಷ್ಟಿಸಿದನು.

ನಂತರ ರುದ್ರನಿಂದಲೂ, ರುದ್ರನಿಂದ ಸೃಷ್ಟರಾದವರಿಂದಲೂ ಜಗತ್ತೆಲ್ಲಾ ಅಸಂಖ್ಯಾತಗಳಾದ ಭೂತಗಣಗಳಿಂದ ತುಂಬಲ್ಪಡುತ್ತಿದ್ದುದನ್ನು ಬ್ರಹ್ಮದೇವರು ತಿಳಿದು, ರುದ್ರದೇವರಿಗೆ ಲೋಕಕ್ಕೆ ಭಯಂಕರರೂ, ದೃಷ್ಟಿಯಿಂದಲೇ ಎಲ್ಲರನ್ನೂ ಸುಡುವಂತೆ ತೋರುತ್ತಿರುವ ಈ ನಿನ್ನ ಪ್ರಜಾ ಸೃಷ್ಟಿ ಸಾಕು ಮಾಡೆಂದರು. ನೀನು ತಪಸ್ಸನ್ನು ಮಾಡು. ನಿನಗೆ ಮಂಗಳವಾಗಲಿ. ತಪಸ್ಸಿನಿಂದಲೇ ನೀನು ಕ್ರೂರವಾದ ಸೃಷ್ಟಿಗೆ ಬೇರೆಯಾದ ನೈಜಸೃಷ್ಟಿಯು ಹಿಂದಿನ ಕಲ್ಪದಲ್ಲಿ ಹೇಗೆ ಮಾಡಿದ್ದೆಯೋ ಅದರಂತೆ ಮಾಡಲು ಸಾಧ್ಯವಾಗುತ್ತದೆ. ತಪಸ್ಸಿನಿಂದಲೇ ಪುರುಷನು, ಜ್ಞಾನಮಯನೂ, ಸರ್ವ ಪ್ರಕಾಶಕನೂ, ಸಮಸ್ತ ಪ್ರಾಣಿಗಳ ಹೃದಯ ಗುಹೆಗಳಲ್ಲಿ ವಾಸಿಸತಕ್ಕವನೂ ಆದ ಆ ಭಗವಂತನಾದ ಅಧೋಕ್ಷಜನನ್ನು ತಿಳಿಯುತ್ತಾನೆ ಎಂದು ಹೇಳಿ ಮೈತ್ರೇಯರು, ವಿದುರನಿಗೆ ಮುಂದಿನ ಸೃಷ್ಟಿಕ್ರಮವನ್ನು ಹೇಳುತ್ತಾರೆ:-

## ವೇದವಿದ್ಯಾ ವರ್ಣಾಶ್ರಮಾದಿಗಳ ಸೃಷ್ಟಿ

ಎಲೈ ವಿದುರನೆ, ಬ್ರಹ್ಮದೇವರು ಹೇಳಿದ್ದನ್ನು ರುದ್ರದೇವರು ಕೇಳಿ ಹಾಗೆಯೇ ಆಗಲಿ, ಎಂದು ಬ್ರಹ್ಮದೇವರಿಗೆ ನಮಸ್ಕರಿಸಿ ತಪಸ್ಸಿಗಾಗಿ ವನಕ್ಕೆ ಹೊರಟು ಹೋದರು. ನಂತರ ಬ್ರಹ್ಮದೇವರು ಪುನಃ ಸೃಷ್ಟಿಮಾಡುವ ಉದ್ದೇಶ್ಯದಿಂದ ಧ್ಯಾನ ಮಾಡಲಾಗಿ, ಸಕಲ ಜಗತ್ತಿನ ಪ್ರಾಣಿಗಳ ಸೃಷ್ಟಿಗೆ ಕಾರಣರಾದ ಹತ್ತು ಜನ ಪುತ್ರರು ಹುಟ್ಟಿದರು. ಇವರ ಹೆಸರುಗಳೇನೆಂದರೆ:- ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠ, ದಕ್ಷ ಮತ್ತು ನಾರದರು. ಬ್ರಹ್ಮದೇವರ ತೊಡೆಯಿಂದ ನಾರದರು ಹುಟ್ಟಿದರು. ಹೆಬ್ಬೆಟ್ಟಿನಿಂದ ದಕ್ಷನು ಹುಟ್ಟಿದನು. ಪ್ರಾಣದಿಂದ ವಸಿಷ್ಠರೂ, ಚರ್ಮದಿಂದ ಭೃಗುಗಳು, ಕೈಯಿಂದ ಕ್ರತುವೂ, ಹೊಕ್ಕಳಿಂದ ಪುಲಹನೂ, ಪುಲಸ್ತ್ಯನು ಕಿವಿಗಳಿಂದಲೂ, ಅಂಗಿರಸನು

ಮುಖದಿಂದಲೂ, ಅತ್ರಿಯು ಕಣ್ಣಿಂದಲೂ, ಮನಸ್ಸಿನಿಂದ ಮರೀಚಿಯೂ ಹುಟ್ಟಿದರು. ಯಾವ ಧರ್ಮನ ಮಕ್ಕಳಾಗಿ ಪರಮಾತ್ಮನು ನರ ನಾರಾಯಣ ರೂಪಗಳಿಂದ ಆವಿರ್ಭವಿಸಿದನೋ, ಆ ಧರ್ಮನು ಬ್ರಹ್ಮದೇವರ ಸ್ತನಗಳಿಂದ ಹುಟ್ಟಿದನು. ಅಧರ್ಮನು ಪೃಷ್ಠಭಾಗದಿಂದಲೂ, ಆ ಅಧರ್ಮನಿಂದ ಮೃತ್ಯುವು ಲೋಕಭಯಂಕರ ರೂಪಿನಿಂದಲೂ ಹುಟ್ಟಿದರು. ಹೃದಯದಿಂದ ಕಾಮವೂ, ಹುಬ್ಬಿನಿಂದ ಕ್ರೋಧವೂ, ಕೆಳ ತುಟಿಯಿಂದ ಲೋಭವೂ, ಬಾಯಿಯಿಂದ ಮಾತೂ, ಮೇಢ್ರದಿಂದ ಸಮುದ್ರಗಳೂ, ಪಾಯುವಿನಿಂದ ಪಾಪಾಶ್ರಯನಾದ ನಿರರುತಿಯೂ, ನೆರಳಿನಿಂದ ದೇವಹೂತಿಯ ಪತಿಯಾದ ಕರ್ದಮ ಪ್ರಜೇಶ್ವರನೂ, ಈ ರೀತಿ ಮನಸ್ಸು, ದೇಹದ ಅವಯವಗಳಿಂದ ಬ್ರಹ್ಮದೇವರಿಂದ ಸೃಷ್ಟಿಸಲ್ಪಟ್ಟರು.

ಬ್ರಹ್ಮದೇವರು, ಸಜ್ಜನ ಶಿರೋಮಣಿಗಳಾದಾಗ್ಯೂ, ಅಸುರರ ಮೋಹನಾರ್ಥಕ್ಕಾಗಿ, ತಮ್ಮ ವಾಕ್ಕಿನಿಂದ ಉತ್ಪನ್ನಳಾದ ಸರಸ್ವತಿ ಎಂಬ ತಮ್ಮ ಮಗಳ ಸೌಂದರ್ಯಕ್ಕೆ ತಾವೇ ಮೋಹಿತರಾದಂತೆ ನಟಿಸಿದರು. ಆಗ ಮರೀಚ್ಯಾದಿ ಋಷಿಗಳು ತಮ್ಮ ತಂದೆಗಳಾದ ಬ್ರಹ್ಮದೇವರು ಅಧರ್ಮಕ್ಕೆ ಮೇಲ್ಪಂಕ್ತಿಯನ್ನು ಹಾಕದಿರಲೆಂದು, ಅವರಿಗೆ ಮಗಳನ್ನು ಮೋಹಿಸುವುದು ಉಚಿತವಲ್ಲವೆಂದು, ಲೋಕಗುರುಗಳೂ, ಪುಣ್ಯಚರಿತ್ರರೂ ಆದ ಬ್ರಹ್ಮದೇವರಿಗೆ ವಿಜ್ಞಾಪಿಸಲು, ಮುಂದಿರತಕ್ಕ ಈ ಮಕ್ಕಳನ್ನು ಕಂಡು ಕಷ್ಟದಿಂದ ಬಿಡುವರಂತೆ, ಆಕೆಯನ್ನು ತ್ಯಜಿಸಿದರು. ಬ್ರಹ್ಮದೇವರು ತಮ್ಮ ನಿಜಪತ್ನಿಯಾದ ವಾಗಭಿಮಾನಿಯಾದ ನೀಹರವೆಂಬ ಘೋರವಾದ ಕತ್ತಲು ಸ್ವರೂಪಳಾದವಳನ್ನು ಹೊರಗೆ ಬಿಟ್ಟರು. ಅವಳನ್ನು ದಿಗ್ದೇವತೆಗಳು ಸ್ವೀಕಾರ ಮಾಡಿದರು.

ನಂತರ ಬ್ರಹ್ಮದೇವರು ಧ್ಯಾನಾಸಕ್ತರಾಗಿ ಸೃಷ್ಟಿ ಮಾಡಲು ಪುನಃ ಆಲೋಚಿಸಿದಾಗ ನಾಲ್ಕು ಮುಖಗಳಿಂದ ನಾಲ್ಕು ವೇದಗಳೂ, ಆ ವೇದಾಭಿಮಾನಿ ದೇವತೆಗಳೂ ಹುಟ್ಟಿದರು. ನಂತರ ಲೋಕದಲ್ಲಿ ಯಜ್ಞಾದಿ ಕರ್ಮಗಳಿಂದ ಸಹಿತರಾದ ಪ್ರಜೆಗಳನ್ನು ಹೇಗೆ ಪೂರ್ವಕಲ್ಪದಂತೆ ಸೃಷ್ಟಿಸಲಿ? ಎಂದು ಯೋಚಿಸುತ್ತ, ವಾಕ್ಕಿನಿಂದ ಕರ್ಮಶಾಸ್ತ್ರವನ್ನೂ, ಉಪವೇದಗಳೆಂಬ ಸ್ಮೃತಿಗಳನ್ನೂ, ಯಜ್ಞಗಳನ್ನೂ, ಇತಿಹಾಸ ಪುರಾಣ, ಆಶ್ರಮಗಳನ್ನೂ ಆಶ್ರಮ ಧರ್ಮಗಳನ್ನೂ ಸೃಷ್ಟಿಸಿದರು. ನಂತರ ಚಾತುರ್ವರ್ಣದವರಿಗೆ ಆಶ್ರಮ ವೃತ್ತಿಗಳನ್ನೂ ಕಲ್ಪಿಸಿದರು, ಎಂದರು.

## ಬ್ರಹ್ಮದೇವರ ಮುಖದಿಂದ ಆದ ಸೃಷ್ಟಿಗಳು

ಆಗ ವಿದುರನು, ಎಲೈ ಮೈತ್ರೇಯರೆ ಬ್ರಹ್ಮದೇವರು ಯಾವ ಯಾವ ಮುಖಗಳಿಂದ ಯಾವ ಯಾವ ವೇದ ಮತ್ತು ಉಪವೇದಗಳನ್ನು ಸೃಷ್ಟಿಸಿದರೋ ಅದನ್ನು ಹೇಳಬೇಕೆಂದು ಪ್ರಾರ್ಥಿಸಿದನು. ಆದಕ್ಕೆ

ಮೈತ್ರೇಯರು, ಎಲೈ ವಿದುರನೇ! ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದಗಳನ್ನು ಕ್ರಮವಾಗಿ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ಮುಖಗಳಿಂದ ಅಭಿವ್ಯಕ್ತಿ ಮಾಡಿದರು. ಋಗ್ವೇದದಿಂದ ಪರಮಾತ್ಮನ ಮಹಿಮೆಗಳನ್ನು ಕೊಂಡಾಡುವಂತೆಯೂ, ಯಜುರ್ವೆದದಿಂದ ಯಜ್ಞಕರ್ಮಗಳನ್ನಾಚರಿಸುವಂತೆಯೂ, ಸಾಮವೇದದಿಂದ ಪರಮಾತ್ಮನನ್ನು ಸ್ತುತಿಸುವಂತೆಯೂ, ಅಥರ್ವಣವೇದದಿಂದ ಪ್ರಾಯಶ್ಚಿತ್ತಾದಿ ವಿಧಾನಗಳನ್ನೂ ನಿರೂಪಿಸಿದರು. ಆಯುರ್ವೇದವೆಂಬ ಶಾರೀರಕ ಶಾಸ್ತ್ರವನ್ನೂ, ಧನುರ್ವೇದವೆಂಬ ಆಯುಧ ಶಾಸ್ತ್ರವನ್ನೂ, ಗಂಧರ್ವ ವೇದವೆಂಬ ನಾಟ್ಯ, ಸಂಗೀತ ಶಾಸ್ತ್ರವನ್ನೂ ಸ್ಥಾಪತ್ಯ ವೇದವೆಂಬ ಅಕ್ಷ ಶಾಸ್ತ್ರವನ್ನೂ ಪೂರ್ವಾದಿ ಮುಖ ಗಳಿಂದ ಕ್ರಮವಾಗಿ ರಚಿಸಿದರು. ವೇದವಾಕ್ಯಗಳನ್ನೇ ಪ್ರತಿಪಾದಿಸುವ ಇತಿಹಾಸ ಪುರಾಣಗಳನ್ನೂ, ಐದನೆಯ ವೇದವೆಂಬ ಮಹಾಭಾರತವನ್ನೂ, ಎಲ್ಲಾ ಇತರ ದರ್ಶನ ಗ್ರಂಥಗಳನ್ನೂ ಎಲ್ಲಾ ಮುಖಗಳಿಂದಲೂ ಸೃಷ್ಟಿಸಿದರು.

ಷೋಡಶೀ ಉಕ್ಥಗಳೆಂಬ ಯಜ್ಞಗಳು ಪೂರ್ವ ಮುಖದಿಂದಲೂ, ಪುರೀಷ ಅಗ್ನಿಷ್ಟುತಾ ಎಂಬ ಯಜ್ಞಗಳು ದಕ್ಷಿಣ ಮುಖದಿಂದಲೂ, ಆಪ್ತೋರ್ಯಾಮ ಅತಿ ರಾತ್ರ ಯಜ್ಞಗಳು ಪಶ್ಚಿಮ ಮುಖದಿಂದಲೂ, ವಾಜಪೇಯ ಗೋಸವ ಯಜ್ಞಗಳು ಉತ್ತರ ಮುಖದಿಂದಲೂ ಉತ್ಪನ್ನಗಳಾದವು. ತಪಸ್ಸು, ಶೌಚ, ದಯಾ, ಸತ್ಯಗಳೆಂಬ ನಾಲ್ಕು ಪಾದಗಳುಳ್ಳ ಧರ್ಮವೂ, ನಾಲ್ಕು ಆಶ್ರಮಗಳನ್ನೂ ಆಶ್ರಮ ವೃತ್ತಿಗಳನ್ನೂ, ಬ್ರಹ್ಮಚರ್ಯೆಯಲ್ಲಿ ಗುರುಕುಲ ವಾಸದಲ್ಲಿ ಹನ್ನೆರಡು ವರ್ಷಕಾಲ ವಿದ್ಯಾಭ್ಯಾಸ ಮಾಡತಕ್ಕ ಸಾವಿತ್ರ ಬ್ರಹ್ಮಚರ್ಯೆಯೆಂಬುದನ್ನೂ, ವಿವಾಹವಾದ ನಂತರ ಏಕ ಭಾರ್ಯೆಯಲ್ಲಿ ಋತುಕಾಲದಲ್ಲಿ ಮಾತ್ರ ಗಮನವುಳ್ಳ ಪ್ರಾಜಾಪತ್ಯ ಬ್ರಹ್ಮಚರ್ಯೆ ಎಂಬುದನ್ನೂ, ವಿವಾಹವಾಗುವ ತನಕ ವೇದಾಧ್ಯಯನ ಸಂಪನ್ನನಾಗಿರುವ ಬ್ರಾಹ್ಮವೆಂಬ ಬ್ರಹ್ಮಚರ್ಯೆಯನ್ನೂ, ಯಾವಜ್ಜೀವವೂ ಊರ್ಧ್ವರೇತಸ್ಕನಾಗಿ ಭಗವನ್ನಿಷ್ಠನಾಗಿರತಕ್ಕ ಬೃಹದ್ಬ್ರಹ್ಮಚರ್ಯೆಯನ್ನೂ ಎಂಬ ನಾಲ್ಕುವಿಧ ಬ್ರಹ್ಮಚರ್ಯೆಗಳನ್ನೂ; ಗೃಹಸ್ಥಾಶ್ರಮಿಗಳಿಗೆ ಯಾಯವಾರವೆಂಬ ಭಿಕ್ಷಾಟನ ವೃತ್ತಿಯನ್ನೂ, ಅಸಂಚಯವೆಂಬ ಒಂದು ದಿನಕ್ಕೆ ಮಾತ್ರ ಸಾಕಾಗುವಷ್ಟು ಧಾನ್ಯ ಸಂಗ್ರಹಮಾಡಿ ಜೀವಿಸುವ ವೃತ್ತಿಯನ್ನೂ, ಶಾಲೀನವೆಂಬ ಒಂದು ವರ್ಷ ಪರ್ಯಂತರ ಸಾಕಾಗುವಷ್ಟು ಧಾನ್ಯಾದಿಗಳನ್ನು ಸಂಗ್ರಹಿಸುವ ವೃತ್ತಿಯನ್ನೂ, ಶಿಲೋಂಛನವೆಂಬ ಕಣಗಳಲ್ಲಿ ಉದುರಿದ ಧಾನ್ಯಗಳು ಯಜಮಾನನಿಂದ ತ್ಯಜಿಸಲ್ಪಟ್ಟದ್ದನ್ನು ಸಂಗ್ರಹಿಸಿ ಜೀವಿಸುವ ವೃತ್ತಿಯನ್ನೂ ಸಹ, ನಾಲ್ಕು ವಿಧವಾಗಿ ಸೃಷ್ಟಿಸಿದರು.

ವಾನಪ್ರಸ್ಥಾಶ್ರಮಿಗಳಲ್ಲಿ ಗೆಡ್ಡೆ, ಗೆಣಸು, ಬೇರುಗಳನ್ನು ತಿಂದು ಜೀವಿಸುವ ವೈಖಾನಸರೆಂಬುವರನ್ನೂ, ಫಲಗಳನ್ನು ತಿಂದು ಜೀವಿಸುವ ಉದುಂಬರರೆಂಬುವರನ್ನೂ, ಎಲ್ಲಾ ಪದಾರ್ಥಗಳನ್ನೂ ತಿನ್ನುವ

ವಾಲಖಿಲ್ಯರೆಂಬುವರನ್ನೂ, ಫೇನಪರೆಂಬ ಕರುವು ಹಾಲು ಕುಡಿಯುವಾಗ ಅದರ ಬಾಯಿಂದ ಬಂದ ನೊರೆ ಹಾಲನ್ನು ಕುಡಿದು ಜೀವಿಸುವರನ್ನೂ, ಈ ರೀತಿ ನಾಲ್ಕು ವಿಧದಿಂದ ಕರೆಸಿದರು. ಸನ್ಯಾಸಾಶ್ರಮದಲ್ಲಿ ಕುಟೀಚಕರೆಂಬ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಮನೆಯಲ್ಲಿಯೇ ವಾಸ ವಾಗಿದ್ದು ಪುತ್ರಾದಿಗಳು ಸಂಪಾದಿಸಿ ಕೊಟ್ಟ ಅನ್ನಾದಿಗಳಿಂದ ತೃಪ್ತಿ ಹೊಂದತಕ್ಕವರನ್ನೂ, ಬಹೂದರೆಂಬ ತ್ರಿಕಾಲ ಸ್ನಾನ ನಿಯಮವಿಲ್ಲದೆ, ಪ್ಯಣ್ಯ ಜಲಗಳು ಕಾಣಿಸಿದಾಗ ಆ ಕಾಲಗಳಲ್ಲಿ ಸ್ನಾನಾದಿಗಳನ್ನು ಮಾಡುತ್ತಾ ತ್ರಿದಂಡಿಗಳಾದ ಯತಿಗಳನ್ನೂ, ಹಂಸರೆಂಬ ಏಕ ದಂಡವುಳ್ಳ ಯಜ್ಞೋಪವೀತವನ್ನು ಧರಿಸಿರತಕ್ಕ ಯತಿಗಳನ್ನೂ, ನಿಷ್ಕ್ರಿಯರೆಂಬ ಹಿಂಸಾದಿ ಕ್ರಿಯಾ ರಹಿತರಾದ ಪರಮಹಂಸರೆಂಬ ಯತಿಗಳನ್ನೂ, ಈ ರೀತಿ ನಾಲ್ಕು ವಿಧ ಸನ್ಯಾಸಿಗಳನ್ನು ಸೃಷ್ಟಿಸಿದರು. ಆನ್ವೀಕ್ಷಕೀ ಎಂಬ ವೇದಾನುಸಾರವಾದ ಶ್ರೀವಿಷ್ಣುವಿನಿಂದ ರಚಿತವಾದ ತಂತ್ರ ವಿದ್ಯೆಯಿಂದ ಬ್ರಾಹ್ಮಣರಿಗೆ ಜೀವನ ವೃತ್ತಿಯನ್ನೂ, ವಾರ್ತಾ ಎಂಬ ವಾಣಿಜ್ಯಾದಿ ವ್ಯಾಪಾರಗಳನ್ನು ವೈಶ್ಯರಿಗೆ ಜೀವನ ವೃತ್ತಿಯಾಗಿಯೂ, ದಂಡ ನೀತಿ ಎಂಬ ರಾಜಧರ್ಮವನ್ನನುಸರಿಸಿ ಕ್ಷತ್ರಿಯರಿಗೆ ಜೀವನ ವೃತ್ತಿಯನ್ನೂ, ಈ ರೀತಿ ಮೂರು ವಿಧ ವೃತ್ತಿಗಳನ್ನೂ ಸೃಷ್ಟಿಸಿದರು.

ಪೂರ್ವ ಮುಖದಿಂದ ಓಂಕಾರವೆಂಬ ಪ್ರಣವಾಕ್ಷರವೂ, ಅಕಾರ, ಉಕಾರ, ಮಕಾರ ಪ್ರತಿಪಾದ್ಯಗಳಾದ ಭೂಃ, ಭುವಃ, ಸುವಃ ಎಂಬ ವ್ಯಾಹೃತಿಗಳು ಕ್ರಮವಾಗಿ ಪ್ರದಕ್ಷಿಣಾಕಾರವಾಗಿ ದಕ್ಷಿಣ, ಪಶ್ಚಿಮ, ಉತ್ತರ ಮುಖಗಳಿಂದ ಉಚ್ಚಾರ ಮಾಡಲ್ಪಟ್ಟವು. ರುದ್ರದೇವರಿಂದಲೂ ಆನ್ವೀಕ್ಷಕೀಶಾಸ್ತ್ರವು ವೇದವಿರುದ್ಧವಾಗಿ ರಚಿತವಾಗಿದೆ. ಅದು ಪ್ರಮಾಣ ಗ್ರಂಥವಲ್ಲ. ಬ್ರಹ್ಮದೇವರ ಮೈಮೇಲಿನ ಕೂದಲುಗಳಾದ ರೋಮಗಳಿಂದ ಉಷ್ಣಿಕ್ ಛಂದಸ್ಸು ಉತ್ಪನ್ನವಾಯಿತು. ಚರ್ಮದಿಂದ ಗಾಯತ್ರೀ ಛಂದಸ್ಸೂ, ಮಾಂಸದಿಂದ ತ್ರಿಷ್ಟುಪ್ ಛಂದಸ್ಸು, ಸ್ನಾಯುಗಳಿಂದ ಅನುಷ್ಟುಪ್ ಛಂದಸ್ಸೂ, ಮೂಳೆಗಳಿಂದ ಜಗತೀ ಛಂದಸ್ಸೂ, ಮೇದಸ್ಸಿನಿಂದ ಪಂಕ್ತೀ ಛಂದಸ್ಸೂ, ಪ್ರಾಣದಿಂದ ಬೃಹತೀ ಛಂದಸ್ಸುಗಳೂ ಹುಟ್ಟಿದವು. ನಿತ್ಯಗಳಾದ ಕ,ಕಾರ ಮೊದಲು ಮ,ಕಾರದವರಿಗೆ ಐದು ವರ್ಗಗಳ ಇಪ್ಪತ್ತೈದು ಸ್ಪರ್ಶಾಕ್ಷರಗಳು ಬ್ರಹ್ಮದೇವರ ಜೀವವೆಂಬ ಚೈತನ್ಯದಿಂದ ಅಭಿವ್ಯಕ್ತಗಳಾದವು. ಅ,ಕಾರಾದಿ ಹದಿನಾರು ಸ್ವರಾಕ್ಷರಗಳು ಬ್ರಹ್ಮದೇವರ ದೇಹದಿಂದ ಅಭಿವ್ಯಕ್ತಗಳಾದವು. ಶ ಷ ಸ ಹ ಗಳೆಂಬ ಊಷ್ಮಾಕ್ಷರಗಳು, ಬ್ರಹ್ಮದೇವರ ಶ್ರೋತ್ರಾದಿ ಇಂದ್ರಿಯಗಳಿಂದಲೂ, ಯ ರ ಲ ವ ಎಂಬ ಅಂತರಾಕ್ಷರಗಳು ಬ್ರಹ್ಮದೇವರ ಬಲದಿಂದ ಅಭಿವ್ಯಕ್ತಗಳಾದವು. ಗ್ರಂಥಾಂತರಗಳಲ್ಲಿ ಈ ಪಂಚಾಶದ್ವರ್ಣಗಳು ಬೇರೆ ಬೇರೆ ಸ್ಥಾನಗಳಿಂದ ಉತ್ಪನ್ನರಾಗುವಂತೆ ಹೇಳಿರುವಾಗ, ಇಲ್ಲಿ ಹೇಗೆ ಏನು ಕಾರಣ ಹೇಳಿದರೆಂದರೆ, ಅದಕ್ಕೆ ಪ್ರಮಾಣ ವಾಕ್ಯವನ್ನು ಹೇಳುತ್ತಾರೆ:-

**ಸ್ಪರ್ಶಾಸ್ತಸ್ಯಾಭವನ್ ಜೀವಾತ್ಸ್ವರಾ ದೇಹಾತ್ ಪ್ರಜಜ್ಞಿರೇ॥**
**ಊಷ್ಮಾಣ ಇಂದ್ರಿಯೇಭ್ಯಶ್ಚ ಅಂತಸ್ಥಾಬಲತೋ ವಿಭೋಃ॥ಇತಿ॥**

ಮನುಷ್ಯರ ಕಂಠದಿಂದಲೂ, ವೀಣಾದಿ ತಂತಿಗಳುಳ್ಳ ಸುವಾದ್ಯಗಳಿಂದಲೂ, ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮಗಳೆಂಬ ಏಳು ವಿಧಗಳಾದ ಸ್ವರಗಳು ಯಾವವು ಅಭಿವ್ಯಕ್ತಗಳಾಗುವವೋ ಅವು ಬ್ರಹ್ಮದೇವರ ಶರೀರದಿಂದ ಅವರ ಸ್ವೇಚ್ಛೆಯಿಂದ ವಿಹಾರಕ್ಕಾಗಿ ಚಲಿಸುವಾಗ ಉತ್ಪನ್ನಗಳಾಗಿ ಅಭಿವ್ಯಕ್ತಗಳಾದವು. ಏಕೆಂದರೆ, ನಿತ್ಯಗಳಾದ ಶಬ್ದಮಯಗಳಾದ ವೇದಗಳೇ ಬ್ರಹ್ಮದೇವರ ಮಹದಾತ್ಮಕ ಶರೀರವಾಗಿರುವುದರಿಂದ ಶಬ್ದ ಬ್ರಹ್ಮವೆನಿಸುವುದು. ಆದುದರಿಂದ ಬ್ರಹ್ಮದೇವರ ಶರೀರದಿಂದ ಸಪ್ತ ಸ್ವರಗಳು ನಿರಂತರ ಅಭಿವ್ಯಕ್ತಗಳಾಗುತ್ತವೆ.

ಬ್ರಹ್ಮದೇವರು ನಾರಾಯಣ ಎಂಬ ಶಬ್ದದ ಹೊರತು ಉಳಿದ ಎಲ್ಲಾ ವೇದ ಶಬ್ದಗಳಿಂದಲೂ ಪ್ರತಿಪಾದ್ಯರು. ಬ್ರಹ್ಮಾಂಡದ ಒಳಗೆ ಪದ್ಮದಲ್ಲಿ ಉತ್ಪನ್ನರಾಗಿ ವ್ಯಕ್ತರಾಗಿಯೂ, ಮಹತ್ತತ್ವದಲ್ಲಿ ಅವ್ಯಕ್ತರಾಗಿಯೂ ಇರುವುದರಿಂದಲೂ ಬ್ರಹ್ಮದೇವರು ವ್ಯಕ್ತಾವ್ಯಕ್ತರೆಂದು ಕರೆಯಲ್ಪಡುತ್ತಾರೆ. ಬ್ರಹ್ಮದೇವರು ಬ್ರಹ್ಮಾಂಡ, ಮಹತ್ತತ್ವಗಳಲ್ಲದೇ ಇತರ ಸಕಲಪದಾರ್ಥಗಳಲ್ಲಿಯೂ ವ್ಯಾಪ್ತಿಯುಳ್ಳವರಾದ್ದರಿಂದ ಪ್ರಭುವೆಂದು ಕರೆಯಲ್ಪಡುತ್ತಾರೆ. ಈ ರೀತಿಯಾಗಿ ತಮ್ಮ ದೇಹದ ಸರ್ವಾಯವಗಳಿಂದ ಸೃಷ್ಟಿ ಮಾಡಿದ ನಂತರ, ಬ್ರಹ್ಮದೇವರು ಇತರರಾದ ಸ್ತ್ರೀ ಪುರುಷರನ್ನು, ಋಷ್ಯಾದಿಗಳನ್ನು ಉಪಾದಾನ ಕಾರಣರನ್ನಾಗಿ ಮಾಡಿಕೊಂಡು, ತಮ್ಮಲ್ಲಿ ಸನ್ನಿಹಿತನಾದ ಶ್ರೀಪರಮಾತ್ಮನ ಅಚಿಂತ್ಯಾದ್ಭುತಶಕ್ತಿಯಿಂದ ಪ್ರೇರಿತರಾಗಿ ಬೇರೆ ವಿಧವಾಗಿ ಮಾಡುವ ಸೃಷ್ಟಿಯನ್ನು ಹೇಳುತ್ತಾರೆ.

## ಮೈಥುನ ಸೃಷ್ಟಿಗೆ ನಾಂದಿ

ಬ್ರಹ್ಮದೇವರು ಈವರಿಗೆ ಮಾಡಿದ ಸೃಷ್ಟಿಯಿಂದ ಜಗತ್ತು ತುಂಬದೇ ಇದ್ದದ್ದನ್ನು ನೋಡಿ, ಹೇಗೆ ಸೃಷ್ಟಿಯು ಪೂರ್ಣವಾದೀತೆಂದು ಯೋಚಿಸಿ, ಸ್ತ್ರೀ ಪುರುಷ ರೂಪಗಳನ್ನು ಹೊಂದಿ, ಮಿಥುನೀ ಭಾವದಿಂದ, ಅನೇಕ ರೂಪಗಳಿಂದ ಸೃಷ್ಟಿ ಮಾಡಬೇಕೆಂದು ನಿಶ್ಚೈಸಿದರು. ಆಗ ಬ್ರಹ್ಮದೇವರ ಶರೀರವು ಸ್ತ್ರೀ ಪುರುಷ ರೂಪಗಳಿಂದ ಎರಡಾಯಿತು. ಪುರುಷ ರೂಪದಿಂದ ಪುನಃ ಸ್ವಾಯಂಭುವ ಮನುವೆಂಬ ಚಕ್ರವರ್ತಿಗಳ ಮೂಲ ಪುರುಷನೂ, ಸ್ತ್ರೀ ರೂಪದಿಂದ ಶತರೂಪಾದೇವಿಯೆಂಬ ಸ್ತ್ರೀ ರೂಪವೂ ಹುಟ್ಟಿದವು.

ಈಕೆಯು ಸ್ವಾಯಂಭುವ ಮನುವಿನ ಪತ್ನಿಯು. ಸ್ವಾಯಂಭುವ ಮನುವಿನಿಂದ ಆರಂಭಿಸಿ ಸ್ತ್ರೀ ಪುರುಷ

ಮೈಥುನ ರೂಪವಾದ ಸೃಷ್ಟಿಯು ಉಂಟಾಯಿತು. ಸ್ವಾಯಂಭುವ ಮನುವು ಶತರೂಪಾದೇವಿಯಲ್ಲಿ, ಪ್ರಿಯವ್ರತ ಉತ್ತಾನಪಾದರೆಂಬ ಇಬ್ಬರು ಗಂಡು ಮಕ್ಕಳನ್ನೂ, ಆಕೂತಿದೇವಿ, ದೇವಹೂತಿದೇವಿ ಮತ್ತು ಪ್ರಸೂತಿದೇವಿಯರೆಂಬ ಮೂವರು ಹೆಣ್ಣು ಮಕ್ಕಳನ್ನೂ ಪಡೆದನು. ಆಕೂತಿಯನ್ನು ಋಚಿ ಎಂಬ ಋಷಿಗಳಿಗೂ, ದೇವಹೂತಿಯನ್ನು ಕರ್ದಮ ಪ್ರಜೇಶ್ವರರಿಗೂ, ಪ್ರಸೂತಿಯನ್ನು ದಕ್ಷ ಪ್ರಜಾಪತಿಗೂ ಲಗ್ನಮಾಡಿಕೊಟ್ಟನು. ಇವರಿಂದ ಜಗತ್ತು ಸೃಷ್ಟಿಯಿಂದ ತುಂಬಿತು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಹದಿಮೂರನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ चतुर्दशोऽध्यायः

**शुक उवाच**

निशम्य वाचं वदतो मुनेः पुण्यतमां नृप।
भूयः पप्रच्छ कौरव्यो वासुदेवकथादृतः॥ १ ॥

**विदुर उवाच**

स वै स्वायम्भुवः सम्रा प्रियः पुत्रः स्वयम्भुवः।
प्रतिलभ्य प्रियां पत्नीं किं चकार ततो मुने॥ २ ॥

चरितं तस्य राजर्षेरादिराजस्य सत्तम।
ब्रूहि मे श्रद्दधानाय विष्वक्सेनाश्रयो ह्यसौ॥ ३ ॥

श्रुतस्य पुंसः सुचिरश्रमस्य नन्वञ्जसा सूरिभिरीडितोऽर्थः।
यत् तद् गुणानुश्रवणं मुकुन्दपादारविन्दं हृदयेषु येषाम्॥ ४ ॥

**शुक उवाच**

इति ब्रुवाणं विदुरं विनीतं सहस्रशीर्ष्णश्चरणोपधानम्।
प्रहृष्टरोमा भगवत्कथायां प्रणीयमानो मुनिरभ्यचष्ट॥ ५ ॥

**मैत्रेय उवाच**

यदा स्वभार्यया साकं जातः स्वायम्भुवो मनुः।
प्राञ्जलिः प्रणतश्चेदं वेदगर्भमभाषत॥ ६ ॥

त्वमेकः सर्वभूतानां जन्मकृद् वृत्तिदः पिता।

अथापि नः प्रजानां ते शुश्रूषा केन वा भवेत् ॥ ७ ॥

तद् विधेहि नमस्तुभ्यं कर्मस्विज्यात्मशक्तिषु ।
यत् कृत्वेह यशो विष्वगमुत्र च भवेद् गतिः ॥ ८ ॥

ब्रह्मोवाचप्रीतस्तुभ्यमहं तात स्वस्ति स्याद् वां क्षितीश्वर ।
यन्निर्व्यलीकेन हृदा शाधि मेत्यात्मनाऽर्पितम् ॥ ९ ॥

एतावत्यात्मजैरेवं कार्याऽथापचितिर्गुरौ ।
शक्त्याऽप्रमत्तैर्गृह्येत शासनं गतमत्सरैः ॥ १० ॥

स त्वमस्यामपत्यानि सदृशान्यात्मनो गुणैः ।
उत्पाद्य शाधि धर्मेण गां यज्ञैः पुरुषं यज ॥ ११ ॥

परं शुश्रूषणं मह्यं स्यात् प्रजारक्षया नृप ।
भगवांस्ते प्रजाभर्तुर्हृषीकेशोऽनुतुष्यति ॥ १२ ॥

येषां न तुष्टो भगवान् यज्ञलिङ्गो जनार्दनः ।
तेषां श्रमोऽप्यह्यपार्थाय यदात्मा नादृतः स्वयम् ॥ १३ ॥

मनुरुवाचआदेशेऽहं भगवतो वर्तयाम्यरिसूदन ।
स्थानं त्विहानुजानीहि प्रजानां मम च प्रभो ॥ १४ ॥

यदोकः सर्वसत्त्वानां मही मग्ना महाम्भसि ।
अस्या उद्धरणे यत्नो देव देव्या विधीयताम् ॥ १५ ॥

**मैत्रेय उवाच**

परमेष्ठी त्वपां मध्ये तथा सन्नामवेक्ष्य गाम् ।
कथमेनां समुन्नेष्य इति दध्यौ धिया चिरम् ॥ १६ ॥

पीतं मया जलं सर्वं पृथिवी च निवेशिता ।
तथापि किमिदं साद्य प्लाव्यते पुनरम्बुभिः ॥ १७ ॥१

प्रजा देवासुरपितृमनुष्यपशुपक्षिणः ।
सरीसृपान् नगान् नागान् भूतान्युच्चावचानि च ॥ १८ ॥

सृजतो मे क्षितिर्वार्भिः प्लाव्यमाना लयं गता ।
अथात्र किमनुष्ठेयमस्माभिः सर्गयोजितैः ॥ १९ ॥

यस्याहं हृदयादासं स ईशो विदधातु मे ।
इत्यभिध्यायतो नासाविवरात् सहसाऽनघ ।
वराहतोको निरगादङ्गुष्ठपरिमाणतः ॥ २० ॥

तस्याभिपश्यतः खस्थः क्षणेन किल भारत ।
गजमात्रः प्रववृधे तदद्भुतमभून्महत् ॥ २१ ॥

मरीचिमुख्यैर्विप्रैश्च कुमारैर्मनुना सह ।
दृष्ट्वा तत् सौकरं रूपं तर्कयामास चित्रधा ॥ २२ ॥

किमेतत् सौकरव्याजं सत्त्वं दिव्यमवस्थितम् ।
अहो बताश्चर्यमिदं नासाया मे विनिःसृतम् ॥ २३ ॥

दृष्टोऽङ्गुष्ठशिरोमात्रः क्षणाद् गण्ड(शिलासमः )शिलोपमः ।
अपिस्विद् भगवानेष यज्ञो मे खेदयन्मनः ॥ २४ ॥

इति मीमांसतस्तस्य ब्रह्मणः सह सूनुभिः ।
भगवान् यज्ञपुरुषो जगर्जागेन्द्रसन्निभः ॥ २५ ॥

ब्रह्माणं हर्षयामास हरिस्तांश्च द्विजोत्तमान् ॥
स्वगर्जितेन ककुभः प्रतिस्वनयता विदुः ॥ २६ ॥

निशम्य तद् घर्घरितं स्वखेदक्षयिष्णु मायामयसूकरस्य ।
जनस्तपः सत्यनिवासिनस्ते त्रिभिः पवित्रैर्मुनयोऽगृणन् स्म ॥ २७ ॥

तेषां सतां वेदवितानमूर्तिं ब्रह्मावधार्यात्मगुणानुवादम् ।
ननर्द भूयो विबुधोदयाय गजेन्द्रलीलो जलमाविवेश ॥ २८ ॥

उत्क्षिप्तबालः खचरः कठोरसटा विधुन्वन् खररोमशत्वक् ।
खुराहताभ्रः सितदंष्ट्र ईक्षाज्योतिर्विभासो भगवान् महीध्रः ॥ २९ ॥

घ्राणेन पृथ्व्याः पदवीं विजिघ्रन् क्रोडापदेशः स्वयमध्वराङ्गः ।

करालदंष्ट्रोऽप्यकरालदृग्भ्यामुद्वीक्ष्य विप्रान् गृणतोऽविशत् कम् ॥ ३० ॥

स वज्रकूटाङ्गनिपातवेगविशीर्णकुक्षिः स्तनयन्नुदन्वान् ।
उत्सृष्टदीर्घोर्मिकरैरिवार्तश्चुक्रोश यज्ञेश्वर पाहि मेति ॥ ३१ ॥

खुरैः क्षुरप्रैर्दरयंस्तदाप उत्पारवारं त्रिवरू रसायाम् ।
ददर्श गां तत्र सुषुप्सुरग्रे यां जीवधानीं स्वयमभ्यधत्त ॥ ३२ ॥

स्वदंष्ट्रयोद्धृत्य महीं विलग्नां स उत्थितः संरुरुहे रसायाः ।
तत्रापि दैत्यं गदयाऽऽपतन्तं सुनाभसन्दीपिततीव्रमन्युः ॥ ३३ ॥

जघान रुन्धानमसह्यविक्रमः सलीलयेभं मृगराडिवाम्भसि ।
तद्रक्तपङ्काङ्किततुण्डगण्डो यथा गजेन्द्रो जगतीं विभिन्दन् ॥ ३४ ॥

तमालनीलं सितदन्तकोट्या क्ष्मामुत्क्षिपन्तं गजलीलयाऽङ्ग ।
प्रज्ञाय बद्धाञ्जलयोऽनुवाकैर्विरिञ्चमुख्या उपतस्थुरीशम् ॥ ३५ ॥

देवा ऊचुः

जितं जितं तेऽजित लोकभावन त्रयीतनुं स्वां परिधुन्वते नमः ।
यद्रोमगर्तेषु निलिल्युरब्धयस्तस्मै नमः कारणसूकराय ते ॥ ३६ ॥

रूपं तवैतन्ननु दुष्कृतात्मनां दुर्दर्शनं देव यदध्वरात्मकम् ।
छन्दांसि यस्य त्वचि बर्हिरोमस्वाज्यं दृशि त्वङ्घ्रिषु चातुर्होत्रम् ॥ ३७ ॥

स्रुक् तुण्ड आसीत् स्रुव ईश नासयोरिडोदरे चमसः कर्णरन्ध्रे ।
प्राशित्रमास्ये रसने ग्रहास्तु यच्चर्वणं ते भगवन्नग्निहोत्रम् ॥ ३८ ॥

दीक्षात्मजन्मोपसदः शिरोधरस्त्वं प्रायणीयोदनीयदंष्ट्रः ।
जिह्वा प्रवर्ग्यस्तव शीर्षणं क्रतोः सभ्यावसथ्या चितयोऽसवो हि ते ॥ ३९ ॥

सोमस्तु रेतः सवनान्यवस्थितिः संस्थाविभेदास्तव देहधातवः ।
सत्राणि सर्वाणि शरीरसन्धिस्त्वं सर्वयज्ञक्रतुरिष्टिबन्धनः ॥ ४० ॥

नमो नमस्तेऽखिलमन्त्रदेवता द्रव्याय सर्वक्रतवे क्रियात्मने ।
वैराग्यभक्त्याऽऽत्मजयानुभावितज्ञानाय विद्यागुरवे नमो नमः ॥ ४१ ॥

दंष्ट्राग्रकोट्या भगवंस्त्वया धृता विराजते भूधर भूः सभूधरा।
यथा वनान्निस्सरतो दता धृता मतंगजेन्द्रस्य सपत्रपद्मिनी॥ ४२ ॥

त्रयीमयं रूपमिदं च सौकरं भूमण्डलं नाथ दता धृतेन ते।
चकास्ति शृङ्गोढघनेन भूयसा कुलाचलेन्द्रस्य यथैव विभ्रमः॥ ४३ ॥

संस्थापयैनां जगतां सितस्थुषां लोकाय(हिताय) पत्नीमसि मातरं पिता।
विधेम यस्यै नमसा सह त्वया यस्यां स्वतेजोऽग्निमिवारणावधाः॥ ४४ ॥

कः श्रद्धधीतान्यतमस्तव प्रभो रसां गताया भुव उद्विबर्हणम्।
न विस्मयोऽसौ त्वयि विश्वविस्मये यो माययेदं ससृजेऽतिविस्मयः॥ ४५ ॥

विधुन्वता वेदमयं निजं वपुर्जनस्तपस्सत्यनिवासिनो वयम्।
सटाशिखोद्धूतशिवाम्बुबिन्दुभिर्विमृज्यमाना भृशमीश पाविताः॥ ४६ ॥

स वै बत भ्रष्टमतिस्तवैषते यः कर्मणां पारमपारकर्मणः।
त्वद्योगमायागुणयोगमोहतो विस्रंसतां नो भगवन् विधेहि शम्॥ ४७ ॥

**मैत्रेय उवाच**

प्रत्युपस्थीयमानस्तैर्मुनिभिर्ब्रह्मवादिभिः।
सलिले स्वखुराक्रान्त उपाधत्तावितावनिम्॥ ४८ ॥

स इत्थं भगवानुर्वीं विश्वक्सेनः प्रजापतिः।
रसाया लीलयोन्नीतामप्सु न्यस्य ययौ हरिः॥ ४९ ॥

य एवमेतां हरिमेधसो हरेः कथां सुभद्रां कथनीयमायिनः।
शृण्वीत भक्त्या श्रवयेत वोशतीं जनार्दनोऽस्याशु हृदि प्रसीदति॥ ५० ॥

तस्मिन् प्रसन्ने सकलाशिषां प्रभौ किं दुर्लभं ताभिरलं लवात्मभिः।
अनन्यभक्त्या भजतां गुहाशयः स्वयं विधत्ते स्वगतिं परः पुमान्॥ ५१ ॥

को नाम लोके पृरुषार्थसारवित् पुराकथानां भगवत्कथासुधाम्।
आपीय कर्णाञ्जलिभिर्भवापहामहो विरज्येत विना नरेतरम्॥ ५२ ॥

## ॥ इति श्रीमद्भागवते (तृतीयस्कन्धे( *3) चतुर्दशोऽध्यायः ॥

## ॥ ಹದಿನಾಲ್ಕನೆಯ ಅಧ್ಯಾಯ ॥

# ಸ್ವಾಯಂಭುಮನುಗಳ ವೃತ್ತಾಂತ

ಈ ಅಧ್ಯಾಯದಲ್ಲಿ ಶ್ರೀಪರಮಾತ್ಮನ ಚರಿತ್ರೆಗಳನ್ನು ಕೇಳುವುದರಿಂದ, ಶ್ರೋತೃಗಳಿಗೆ ಸಾಕ್ಷಾತ್ತಾಗಿ ಭಗವತ್ಪ್ರಸಾದದಿಂದಲೇ ಸಕಲ ಪುರುಷಾರ್ಥಗಳೂ ನೆರವೇರುವವೆಂದು ಪ್ರತಿಪಾದಿತವಾಗುತ್ತದೆ.

ಶುಕ ಋಷಿಗಳು ಎಲೈ! ಪರೀಕ್ಷಿದ್ರಾಜನೇ ಈ ರೀತಿ ವಿದುರನು ಮೈತ್ರೇಯರಿಂದ ಮಹಾ ಪುಣ್ಯಪ್ರದಗಳಾದ ಮಾತುಗಳನ್ನು ಕೇಳಿ, ಪುನಃ ಭಗವತ್ಕಥಾ ವಿಷಯದಲ್ಲಿ ಆಸಕ್ತನಾದ ವಿದುರನು ಮೈತ್ರೇಯರನ್ನು ಈ ರೀತಿ ಕೇಳಿದನು:-

ಎಲೈ ಮೈತ್ರೇಯರೇ! ಸ್ವಯಂಭು ನಾಮಕ ಬ್ರಹ್ಮದೇವರ ಪ್ರಿಯಪುತ್ರರಾದ, ಚಕ್ರವರ್ತಿ ಸ್ವಾಯಂಭುವ ಮನುಗಳು, ಅನುಕೂಲಳೂ, ತನ್ನ ಸದಾಚಾರ, ಧರ್ಮಗಳಿಂದ ತನ್ನ ಪತಿಯನ್ನು ಸ್ವರ್ಗಕ್ಕೆ, ಅಂದರೆ ಮೋಕ್ಷಕ್ಕೆ ಕರೆದೊಯ್ಯುವಳಾದ್ದರಿಂದ ಪತ್ನೀ ಶಬ್ದಳಾದ ಶತರೂಪಾದೇವಿಯನ್ನು ಹೊಂದಿದವರಾಗಿ, ನಂತರ ಏನು ಮಾಡಿದರು?

ಈ ಪ್ರಥಮ ಚಕ್ರವರ್ತಿಗಳಾದ ಸ್ವಾಯಂಭುವ ಮನುಗಳು, ಸರ್ವತ್ರ ಪ್ರಕಾಶ ರೂಪವಾದ ಜ್ಞಾನ ವುಳ್ಳವನಾದಕಾರಣ, ವಿಷ್ವಕ್ಸೇನನೆಂದು ಪ್ರಖ್ಯಾತನಾದ ಭಗವಂತನ ಪಾದಾಶ್ರಯವನ್ನು ಪಡೆದ ರಾಜರ್ಷಿಗಳು ಯಾವ ಶ್ರೀಪರಮಾತ್ಮನ ಪಾದಕಮಲಗಳನ್ನು ತಮ್ಮ ಹೃದಯ ಕಮಲದಲ್ಲಿಟ್ಟು ಸದಾ ಧ್ಯಾನಿಸುವ ಭಗವದ್ಭಕ್ತರ ಚರಿತ್ರೆಯನ್ನೂ ಸಹ, ಜ್ಞಾನಿಗಳು ಆದರದಿಂದ ಕೇಳಿ ಕೊಂಡಾಡುತ್ತಾರೆಯೋ, ಅಂತಹ ಕಥಾಮೃತವನ್ನು ಕೇಳಬೇಕೆಂದು ಕುತೂಹಲವುಳ್ಳ ನನಗೆ ಹೇಳಿರಿ, ಎಂದನು. ಈ ರೀತಿಯಾಗಿ ಪ್ರಶ್ನೆಮಾಡಿ ವಿನೀತನಾಗಿಯೂ, ಸಹಸ್ರ ಶಿರಸ್ಸುಗಳುಳ್ಳ ವಿಶ್ವರೂಪ ಪರಮಾತ್ಮನಲ್ಲೇ ನೆಟ್ಟ ಮನಸ್ಸುಳ್ಳ ವಿದುರನನ್ನು ಮೈತ್ರೇಯರು ನೋಡಿ, ಸಂತೋಷದಿಂದ ಎಲೈ ಪರೀಕ್ಷಿದ್ರಾಜನೇ ಈ ರೀತಿ ಹೇಳಿದರೆಂದು, ಶುಕ ಋಷಿಗಳು ಹೇಳಿದರು:-

ಎಲೈ ವಿದುರನೆ! ಸ್ವಾಯಂಭುವ ಮನುಗಳು ಪತ್ನೀ ಸಮೇತರಾಗಿ ಹುಟ್ಟಿದ ನಂತರ ತಮ್ಮ ಕೈಗಳನ್ನು ಮುಗಿದು ಕೊಂಡು ವಿನಯದಿಂದ ಬ್ರಹ್ಮದೇವರಿಗೆ ನಮಸ್ಕರಿಸಿ ಹೀಗೆ ಹೇಳಿದರು:- ಎಲೈ ತಂದೆಗಳಾದ ಬ್ರಹ್ಮದೇವರೇ! ನೀವೊಬ್ಬರೇ ಸಕಲ ಸೃಷ್ಟಿಗಳನ್ನೂ ಮಾಡಿ, ಪ್ರಜೆಗಳಿಗೆ ಜೀವನ ವೃತ್ತಿಯನ್ನೂ ಕಲ್ಪಿ ಸಿ ಕೊಡತಕ್ಕವರಾಗಿರುತ್ತೀರಿ. ಹಾಗಾದರೂ ಕೂಡ ನಿಮ್ಮ ಮಕ್ಕಳಾದ ನಾವು ಯಾವ ರೀತಿಯಲ್ಲಿ ನಿಮ್ಮ

ಸೇವೆಯನ್ನು, ನಮ್ಮ ವಿಹಿತ ಕರ್ಮಗಳಿಂದ ನಿಮಗೆ ಪ್ರೀತಿಯಾಗುವಂತೆ ಮಾಡಲು ಸಾಧ್ಯವಾಗುವುದೋ ಅದನ್ನು ನಮಗಾಗಿ ಉಪದೇಶಮಾಡಿರಿ. ನಾವು ನಮ್ಮ ಕೃತಜ್ಞತೆಯನ್ನು ತೋರಿಸುವುದಕ್ಕಾಗಿ ಅಲ್ಪವಾಗಿಯಾದರೂ ನಿಮ್ಮ ಶುಶ್ರೂಷೆಯನ್ನು ಮಾಡಿದ್ದಾದರೆ, ಆದರಿಂದ ನಮಗೆ ಇಹ ಪರಗಳಲ್ಲಿ ಸದ್ಗತಿಯು ಪ್ರಾಪ್ತವಾಗುತ್ತದೆ. ನಮ್ಮ ಶ್ರೇಯಸ್ಸಿಗೆ ಇದೊಂದೇ ಮಾರ್ಗವನ್ನು ನಾವು ತಿಳಿದಿರುತ್ತೇವೆ ಎಂದರು.

ಬ್ರಹ್ಮದೇವರು ಸ್ವಾಯಂಭುವ ಮನುಗಳ ಮಾತನ್ನು ಕೇಳಿ, ಎಲೈ! ಭೂಪತಿಯೆ! ನಿನ್ನ ಮಾತುಗಳಿಂದ ನಾನು ಪ್ರೀತನಾಗಿರುತ್ತೇನೆ. ನಿಮ್ಮಿಬ್ಬರಿಗೂ ಮಂಗಳವಾಗಲಿ. ನೀನು ಕಪಟವಿಲ್ಲದೇ ಶುದ್ಧ ಮನಸ್ಸಿನಿಂದಲೂ ನಮ್ರತೆಯಿಂದಲೂ ನನ್ನ ಆಜ್ಞೆಯನ್ನೂ, ಬುದ್ಧಿವಾದವನ್ನೂ ಕೇಳಿರುತ್ತೀಯೆ. ಹೀಗೆಯೇ ಮಕ್ಕಳಿಂದಲೂ, ಶಿಷ್ಯರಿಂದಲೂ ಗುರುಗಳಲ್ಲಿ ವಿಧೇಯತೆಯನ್ನೂ, ಶಿಷ್ಯವೃತ್ತಿಯನ್ನೂ ಮಾಡಬೇಕಾದುದು. ಸಭ್ಯನಾದವನು, ನಿರ್ಮಾತ್ಸರ್ಯದಿಂದ, ತಾನು ಮಾಡಬೇಕಾದ ಶ್ರೇಯಸ್ಕಾರ್ಯಗಳಿಗೆ ಪೂರ್ವಭಾವಿಯಾಗಿ ಗುರ್ವಾಜ್ಞೆಯನ್ನು ಪಡೆಯಬೇಕು. ಅದರಂತೆ ನೀನು ನನ್ನ ಅನುಜ್ಞೆಯನ್ನು ಬೇಡಿರುತ್ತೀಯೆ. ನೀನು ನಿನಗನುರೂಪಳಾದ ಈ ನಿನ್ನ ಭಾರ್ಯೆಯಲ್ಲಿ, ನಿನಗೆ ಸದೃಶ ಗುಣಶೀಲರಾದ ಮಕ್ಕಳನ್ನು ಪಡೆದು, ಧರ್ಮದಿಂದ ಪ್ರಜಾ ಪರಿಪಾಲನೆ ಮಾಡುವವನಾಗು. ವೇದಪ್ರತಿಪಾದ್ಯನಾದ ದೇವರನ್ನು ಅನೇಕ ಯಜ್ಞಗಳಿಂದ ಆರಾಧಿಸುವವನಾಗು. ಇವೆರಡರಿಂದ ನೀನು ನನಗೆ ಉತ್ತಮವಾದ ಶುಶ್ರೂಷೆಯನ್ನು ಮಾಡಿದಂತಾಗುತ್ತದೆ.

ಪ್ರಜಾಸಂರಕ್ಷಣೆಯಿಂದ ನೀನು ಪರಮಾತ್ಮನನ್ನು ಸಂತೋಷಪಡಿಸುವವನಾಗುತ್ತೀಯೆ. ಏಕೆಂದರೆ ಪರಮಾತ್ಮನು ಲೋಕಸಂರಕ್ಷಣೆಯನ್ನು ಮುಖ್ಯವಾಗಿ ಮಾಡತಕ್ಕವನು. ಆತನ ಈ ಧರ್ಮದಂತೆ ನೀನೂ ನಡೆಯುವುದರಿಂದ ಭಗವಂತನಿಗೆ ಪ್ರಿಯನಾಗುತ್ತೀಯೆ. ಯಾರಲ್ಲಿ ಶ್ರೀಹರಿಯು ಪ್ರೀತನಾಗುವುದಿಲ್ಲವೋ ಅವರ ಸಕಲ ಯಜ್ಞಾದಿಕರ್ಮಗಳೂ ಕೂಡ, ಕೇವಲ ದೇಹ ಶ್ರಮ ಕೊಟ್ಟು, ಏನೂ ಫಲವನ್ನು ಕೊಡುವುದಿಲ್ಲ. ಏಕೆಂದರೆ ಅವರು ಧಾರಕ ಪೋಷಕನಾದ ಆತ್ಮಶಬ್ದವಾಚ್ಯ ಪರಮಾತ್ಮನನ್ನು ತಿಳಿಯದೇ, ಭಕ್ತಿ ಮಾಡದೆ, ಅನಾದರಣೆ ಮಾಡುತ್ತಾರೆ. ಆದರಿಂದ ಅವರ ಕರ್ಮಗಳು ವ್ಯರ್ಥವಾಗುತ್ತವೆ, ಎಂದರು. ಸ್ವಾಯಂಭುವ ಮನುಗಳು ಬ್ರಹ್ಮದೇವರ ಈ ಆಜ್ಞೆಯನ್ನು ಶಿರಸಾ ವಹಿಸಿ ಅದರಂತೆ ನಡೆಯುತ್ತೇನೆಂದು ಅವರಲ್ಲಿ ವಿಜ್ಞಾಪಿಸಿಕೊಂಡು, ನಂತರ ತಮಗೂ ತಮ್ಮ ಪ್ರಜೆಗಳಿಗೂ ವಾಸಕ್ಕಾಗಿ ಸ್ಥಾನವನ್ನು ಕಲ್ಪಿಸಿ ಕೊಡಬೇಕೆಂದು ಪ್ರಾರ್ಥಿಸಿದರು. ಏಕೆಂದರೆ ಪಿಪೀಲಿಕಾದಿ ಸರ್ವ ಪ್ರಾಣಿಗಳಿಗೆ ನಿವಾಸ ಸ್ಥಾನವಾದ ಭೂಮಿಯು ಪ್ರಳಯ ಜಲದಲ್ಲಿ ಮುಳುಗಿ ಹೋಗಿತ್ತು. ಆದುದರಿಂದ ನಿವಾಸ ಸ್ಥಾನವನ್ನು ಬೇಡಿ,

ಮುಳುಗಿದ್ದ ಭೂಮಿಯು ಪುನಃ ವಾಸಕ್ಕಾಗಿ ಪ್ರಾಪ್ತವಾಗುವಂತೆ ಮಾಡಬೇಕೆಂಬುದನ್ನೂ ಸೂಚಿಸಿದರು.

## ಶ್ವೇತವರಾಹಾವತಾರ ಕಥಾ

ಬ್ರಹ್ಮದೇವರು ಪ್ರಳಯೋದಕದಲ್ಲಿ ಭೂಮಿಯು ಮುಳುಗಿ ಹಾಗೆಯೇ ಇರುವುದನ್ನು ನೋಡಿ, ಇದನ್ನು ಹೇಗೆ ಮೇಲಕ್ಕೆ ತರುವುದು? ಎಂದು ಯೋಚಿಸಿದರು. ಹಿಂದೆ ಈ ಪ್ರಳಯೋದಕವನ್ನು ಪಾನಮಾಡಿ ಭೂಮಿಯನ್ನು ಕಾಣುವಂತೆ ಸ್ಥಳವನ್ನು ಮಾಡಿದ್ದೆನು. ಅದು ಹೇಗೆ ಈಗ ಪುನಃ ನೀರು ಉಕ್ಕಿ ಬಂದು ಮುಳುಗಿಹೋಯಿತು? ನಾನು ದೇವಾಸುರ ನರ ಪಿತೃ, ಪಶು, ಪಕ್ಷಿ, ಜಲಚರ, ಗಜ, ಸರ್ಪ ಮುಂತಾದವುಗಳನ್ನು ಸೃಷ್ಟಿಮಾಡುತ್ತಿದ್ದಾಗಲೇ ಈ ರೀತಿ ನೀರು ಉಕ್ಕಿ ಎಲ್ಲವನ್ನೂ ಮುಳುಗಿಸಿ ನಾಶಮಾಡುತ್ತಿದ್ದರೆ ಸೃಷ್ಟಿಕಾರ್ಯದಲ್ಲಿ ಪ್ರೇರಿಸಲ್ಪಟ್ಟ ನಾವು ಏನು ಮಾಡಬೇಕು?

ಈ ವಿಚಾರಗಳನ್ನು, ಯಾವ ಶ್ರೀ ಪರಮಾತ್ಮನು ಸಕಲವನ್ನೂ ಧರಿಸಿರತಕ್ಕವನೋ, ನನ್ನನ್ನು ಸೃಷ್ಟಿಸಿ, ನನ್ನ ಹೃತ್ಸ್ಥಲದಲ್ಲಿ ಸನ್ನಿಹಿತನಾಗಿರುವನೋ, ಆ ಜಗನ್ನಿಯಾಮಕನೇ ನನಗೆ ಮಾಡಬೇಕಾದ ಕರ್ತವ್ಯವನ್ನು ತಿಳಿಸುವವನಾಗಲಿ. ಹೀಗೆಂದು ಬ್ರಹ್ಮದೇವರು ಧ್ಯಾನಿಸುತ್ತಿರುವಾಗಲೇ ಅವರ ಮೂಗಿನ ದ್ವಾರದಿಂದ, ಒಂದು ಅಂಗುಷ್ಠ ಪರಿಮಿತಿಯುಳ್ಳ ಪುಟ್ಟ ವರಾಹ ಮೂರ್ತಿಯು ಈಚೆಗೆ ಬಂದಿತು. ಅದನ್ನು ಎಲ್ಲರೂ ನೋಡುತ್ತಿದ್ದಾಗಲೇ ತಕ್ಷಣ ಆನೆಯಷ್ಟು ದೊಡ್ಡ ಆಕೃತಿಯನ್ನು ಹೊಂದಿತು. ಆಗ ಮರೀಚ್ಯಾದಿ ಋಷಿಗಳೂ, ಸನಕ ಸನಂದಾದಿಗಳೂ, ಸ್ವಾಯಂಭುವ ಮನುವೂ ಸಹ ಆಹಾ! ಇದೇನಾಶ್ಚರ್ಯವು! ಸತ್ವಸ್ವರೂಪವೂ, ದಿವ್ಯವೂ ಆದ ಈ ವರಾಹಾಕೃತಿಯು ಏನಿರಬಹುದು? ಇದು ಬ್ರಹ್ಮದೇವರ ನಾಸಾ ಮಾರ್ಗದಿಂದ ಚಿಕ್ಕದಾಗಿ ಮೊದಲು ಈಚೆಗೆ ಬಂದು ನಂತರ ಏಕಾಏಕಿ ಅದ್ಭುತವಾದ ಬಂಡೆಯಂತೆ ದೊಡ್ಡದಾಯಿತಲ್ಲಾ! ಏನಾದರೂ ಸರ್ವ ಯಜ್ಞಮಯನಾದ ಶ್ರೀಪರಮಾತ್ಮನ ಅವತಾರವಾದ ಶ್ರೀವರಾಹರೂಪವೇ ಇದಾಗಿರಬಹುದೆ? ಎಂದು ಎಲ್ಲರೂ ನಾನಾ ವಿಧವಾಗಿ ಆಲೋಚಿಸಿದರು. ಈ ರೀತಿಯಾಗಿ ಬ್ರಹ್ಮದೇವರು ಮಕ್ಕಳಿಂದೊಡಗೂಡಿ ಯೋಚಿಸುತ್ತಿದ್ದಾಗ, ಆ ಅದ್ಭುತ ವರಾಹ ಮೂರ್ತಿಯು ಒಂದು ಸಲ ಘರ್ಜಿಸಿ, ದಿಕ್ಕುಗಳೆಲ್ಲಾ ಪ್ರತಿಧ್ವನಿ ಮಾಡುತ್ತಿರಲಾಗಿ, ಆ ಧ್ವನಿಯಿಂದ ಬ್ರಹ್ಮದೇವರಿಗೂ ಸಕಲ ಋಷಿಗಳಿಗೂ ಹರ್ಷವನ್ನುಂಟುಮಾಡಿತು.

ವರಾಹಮೂರ್ತಿಯ ಪುನಃ ಪುನಃ ಘುರ್ಘುರ ಶಬ್ದಗಳನ್ನು ಜನೋಲೋಕ, ತಪೋಲೋಕ, ಸತ್ಯಲೋಕ ನಿವಾಸಿಗಳು ಕೇಳಿ, ಬೇಗನೇ ಎಚ್ಚೆತ್ತು ನಿರ್ದೋಷಗಳಾದ ಋಗ್ಯಜುಸ್ಸಾಮಗಳೆಂಬ ಮೂರು ವೇದಗಳಿಂದ ಯಜ್ಞವರಾಹ ರೂಪನಾದ ಆ ಪರಮಾತ್ಮನನ್ನು ಸ್ತುತಿಸಲು ಬಂದರು. ಎಲ್ಲರಿಂದ

ಸಹಿತರಾಗಿ ಬ್ರಹ್ಮದೇವರು ವೇದವಾಕ್ಯಗಳಿಂದ ಸ್ತುತಿಸಿದ್ದನ್ನು ಆ ಯಜ್ಞವರಾಹಮೂರ್ತಿಯು ಕೇಳಿ, ಪುನಃ ಒಂದು ಸಲ ಘರ್ಜನೆಯನ್ನು ಮಾಡಿ, ಆ ಪ್ರಳಯ ಜಲಧಿಯನ್ನು ಪ್ರವೇಶಿಸಿದನು.

ಪ್ರಳಯೋದಕವನ್ನು ಪ್ರವೇಶಿಸುವಾಗ, ಆ ಪರ್ವತ ಸದೃಶನಾದ ನಾರಾಯಣಾಖ್ಯ ವರಾಹನು, ತನ್ನ ಅವತಾರಕ್ಕೆ ಸದೃಶವಾದ ಚೇಷ್ಟೆಗಳನ್ನು ತೋರಿಸುವವನಾಗಿ, ಆಕಾಶಕ್ಕೆ ಹಾರಿ ಅಲ್ಲಿ ತನ್ನ ಬಾಲವನ್ನೆತ್ತಿ, ಆ ಬಾಲದ ಉದ್ದವಾದ ಕೂದಲುಗಳು ಆಕಾಶದ ಘಾಳಿಯಲ್ಲಿ ಹಾರಾಡುತ್ತಿರಲು, ತನ್ನ ಮೈಮೇಲಿನ ಕಠಿಣವಾದ ಕೂದಲುಗಳು ಅಲ್ಲಾಡುತ್ತಾ ಇರಲು, ತನ್ನ ಕಾಲುಗಳಿಂದ ಮೇಘಮಂಡಲವನ್ನಪ್ಪ ಳಿಸುತ್ತಾ, ಅಗ್ನಿ ಜ್ವಾಲೆಗಳ ಸದೃಶವೂ, ನಕ್ಷತ್ರದಂತೆ ಹೊಳೆಯುವವೂ ಆದ ತನ್ನ ಕಣ್ಣಿನ ದೃಷ್ಟಿಯಿಂದ ಪ್ರಳಯೋದಕವನ್ನು ಭೂದೇವಿಯು ಎಲ್ಲಿರುವಳೋ ಎಂದು ಹುಡುಕುವಂತೆ ನೋಡುತ್ತಾ, ಮೂಗಿನಿಂದ ವಾಸನೆಯನ್ನು ನೋಡುತ್ತಾ, ಭಯಂಕರಗಳಾದ ಕೋರೆಹಲ್ಲುಳ್ಳವನಾದರೂ ಆ ಯಜ್ಞವಾರಾಹನು ಮರೀಚ್ಯಾದಿ ಬ್ರಾಹ್ಮಣರನ್ನು ಪ್ರಸನ್ನದೃಷ್ಟಿಯಿಂದ ನೋಡಿ ನಂತರ ಪ್ರಳಯೋದಕವನ್ನು ಪ್ರವೇಶಿಸಿದನು.

ಆ ವೇಗದಿಂದ ಪ್ರಳಯೋದಕದಲ್ಲಿ ಅಗಾಧವಾದ ಹಳ್ಳ ಉಂಟಾಗಿ, ಸಮುದ್ರರಾಜನ ಹೊಟ್ಟೆಯು ವಜ್ರಾಯುಧದಂತಿರುವ ಶ್ರೀವರಾಹ ದೇಹ ಸ್ಪರ್ಶದಿಂದ ಭೇದಿಸಲ್ಪಟ್ಟಿತೋ ಎಂಬಂತೆಯೂ, ಆಗ ಸಮುದ್ರದಿಂದ ಆಕಾಶದಲ್ಲಿ ಬಹಳ ಮೇಲಕ್ಕೆ ಚದುರಿಸಲ್ಪಟ್ಟ ಅಲೆಗಳೆಂಬ ತನ್ನ ಕೈಗಳನ್ನು ಮೇಲಕ್ಕೆತ್ತಿಕೊಂಡು ಸಮುದ್ರರಾಜನು ಎಲೈ! ಯಜ್ಞಮಯಮೂರ್ತಿಯೇ! ನನ್ನನ್ನು ಘಾತಿಸಬೇಡ, ಕಾಪಾಡು, ಕಾಪಾಡು ಎಂದು ಕೂಗಿಕೊಂಡು ಬೇಡಿಕೊಳ್ಳುತ್ತಿರುವನೋ ಎಂಬಂತೆ ಅಗಾಧವಾದ ಶಬ್ದಗಳು ಉಂಟಾದವು. ನಂತರ ಸಮುದ್ರದಲ್ಲಿ ತನ್ನ ಪಾದ ಗೊರಸುಗಳಿಂದ ಸಮುದ್ರವನ್ನು ಸೀಳಿಹಾಕುತ್ತಾನೋ ಎಂಬಂತೆ ಬಗೆಯುತ್ತಾ, ಅದರಿಂದ ಉಂಟಾದ ಒಳಗಿನ ಅಲೆಗಳು ತೀರಪ್ರದೇಶದ ಮೇಲೆಲ್ಲಾ ಆಕ್ರಮಿಸಿ ನುಗ್ಗುತ್ತಿರಲು, ರಸಾತಳದಲ್ಲಿ, ಪ್ರಳಯಕಾಲದಲ್ಲಿ ತನ್ನುದರದಲ್ಲಿಟ್ಟುಕೊಂಡಿದ್ದ ಸಕಲ ಪ್ರಾಣಿಗಳಿಗೂ ವಾಸಸ್ಥಾನವಾದ ಭೂಮಿಯನ್ನು, ಆ ವೇದಪ್ರತಿಪಾದ್ಯನೂ, ಮೂರು ಯುಗಗಳಲ್ಲಿ ಅವತರಿಸತಕ್ಕವನೂ ಆದ ಆ ಯಜ್ಞವರಾಹನು ಕಂಡನು.

## ಆದಿ ಹಿರಣ್ಯಾಕ್ಷನ ಸಂಹಾರ

ಅಲ್ಲಿ ಅಸುರರಿಂದ ಬಂಧಿತಳೋ ಎಂಬಂತೆ ಇದ್ದಭೂಮಿಯನ್ನು ಲೀಲೆಯಿಂದ ಮೆತ್ತಗೆ ತನ್ನ ಒಂದು ಕೋರೆಯ ಹಲ್ಲಿನ ಮೇಲೆ ಧರಿಸಿ, ವರಾಹಮೂರ್ತಿಯು ರಸಾತಳ ಬಿಟ್ಟು ಸ್ವಲ್ಪ ಮೇಲಕ್ಕೆ ಬಂದಾಗ ಬ್ರಹ್ಮದೇವರಿಂದ ಮೊದಲು ಸೃಷ್ಟಿಸಲ್ಪಟ್ಟಿದ್ದ ಆದಿಹಿರಣ್ಯಾಕ್ಷನೆಂಬುವನು ಗದಾಪಾಣಿಯಾಗಿ

ವರಾಹಮೂರ್ತಿಯನ್ನು ತಡೆದನು. ಆಗ ವರಾಹಮೂರ್ತಿಯು, ಸುದರ್ಶನ ಚಕ್ರದಂತೆ ಪ್ರಜ್ವಲಿಸುತ್ತಾ, ಕೋಪಿಸಿಕೊಂಡು ಆ ದೈತ್ಯನನ್ನು ತನ್ನ ಇನ್ನೊಂದು ಕೋರೇಹಲ್ಲಿನಿಂದ ತಿವಿದು ಅವನ ಶರೀರವನ್ನು ಹಿಟ್ಟು ಹಿಟ್ಟು ಮಾಡಿ, ಆ ದೈತ್ಯನ ರಕ್ತದಿಂದ ಒಂದು ಕೋರೆಯ ಹಲ್ಲೂ, ಸಮುದ್ರದ ಜಲವೂ ಕೆಂಪಾಗಲಾಗಿ, ಅನಾಯಾಸದಿಂದ ಭೂಮಿಯನ್ನು ಜಲದ ಮೇಲ್ಭಾಗಕ್ಕೆ ತಂದನು.

ವಿಶೇಷಾಂಶ - ಶ್ರೀಹರಿಯು ಆದಿವರಾಹರೂಪಿನಿಂದ ಪ್ರಳಯೋದಕದಲ್ಲಿ ಮುಳುಗಿದ್ದ ಭೂಮಿಯನ್ನು, ಹಿರಣ್ಯಾಕ್ಷನೆಂಬ ಮೂಲದೈತ್ಯನನ್ನು ಕೋರೆದಾಡೆಯಿಂದ ಸಂಹರಿಸಿ ತಂದನು. ಪುನಃ ಎರಡನೆಯ ಸಲ ಆ ಹಿರಣ್ಯಾಕ್ಷನೇ ಹರಿಪಾರ್ಷದನಿಂದ ಆವಿಷ್ಟನಾಗಿ ಅದಿತಿದೇವಿಯ ಗರ್ಭದಲ್ಲಿ ಹುಟ್ಟಿ ಪುನಃ ಭೂಮಿಯನ್ನು ಕದ್ದಾಗ, ದೇವರು ಪುನಃ ವರಾಹಾವತಾರ ಮಾಡಿ, ಭೂಮಿಯನ್ನು ಮೇಲಕ್ಕೆ ತರುವಾಗ ಅವನನ್ನು ಕಪಾಳಕ್ಕೆ ಹೊಡೆದು ಸಂಹಾರ ಮಾಡಿದನೆಂದು ತಿಳಿಯತಕ್ಕದ್ದು. ಈ ಶಂಕೆಯು ಮುಂದೆ ವಿದುರನಿಂದ ಮಾಡಲ್ಪಟ್ಟು ವಿಶದವಾಗಿ ವಿವರಿಸಲ್ಪಟ್ಟಿದೆ.

ಈ ರೀತಿಯಲ್ಲಿ ನೀಲ ಕಾಂತಿಯಿಂದ ಶೋಭಿಸುತ್ತಾ ದಂಷ್ಟ್ರಾಗ್ರದಲ್ಲಿ ಭೂಮಿಯನ್ನು ಧರಿಸಿ, ಮದದಾನೆಯು ನೀರಾಟವಾಡುತ್ತಾ ಬರುವಂತೆ, ವಿನೋದದಿಂದ ಮೇಲಕ್ಕೆ ಬರುತ್ತಿರುವ ವರಾಹಮೂರ್ತಿಯನ್ನು ಬ್ರಹ್ಮಾದಿ ದೇವತೆಗಳು ನೀರಿನಲ್ಲಿ ಕಂಡಾಕ್ಷಣ, ಸರ್ವರೂ ಎದ್ದು ನಿಂತು ಪ್ರಣಾಮಮಾಡುತ್ತಾ ಅನುವಾಕಗಳೆಂಬ ವೇದೋಪನಿಷತ್ತುಗಳಿಂದ ಸ್ತೋತ್ರಮಾಡಲು ಉಪಕ್ರಮಿಸಿದರು:-

## ದೇವತೆಗಳಿಂದ ವರಾಹ ಸ್ತುತಿ

ಎಲೈ ಯಜ್ಞಮೂರ್ತಿಯೆ, ಯಜ್ಞಭೋಕ್ತನೆ! ನಿನ್ನಿಂದ ಭೂಮಿಯೂ, ಆದಿಹಿರಣ್ಯಾಕ್ಷನೆಂಬ ದೈತ್ಯನೂ ಸಹ ಜಯಿಸಲ್ಪಟ್ಟರು. ನಿನ್ನ ವೇದಮಯವಾದ ಶರೀರದಿಂದ ನೀರನ್ನು ಭೇದಿಸುತ್ತಾ ಬರುತ್ತಿರುವ ನಿನಗೆ ನಮಸ್ಕಾರಗಳು. ನಿನ್ನ ರೋಮಕೂಪಗಳಲ್ಲಿ ಎಲ್ಲಾ ಸಮುದ್ರಗಳು ಅಡಗಿವೆ. ಅಂತಹ ಆದಿವರಾಹಮೂರ್ತಿಯೇ ನಿನಗೆ ನಮಸ್ಕಾರಗಳು. ನಿನ್ನ ಈ ಪರಮ ಮಂಗಳ ರೂಪವನ್ನು ದುರ್ಜನರು ಕಾಣಲಾರರು. ನಿನ್ನ ಶರೀರವು ಸರ್ವ ಯಜ್ಞ ಪದಾರ್ಥಗಳಿಗೂ ಉತ್ಪತ್ತಿ ಸ್ಥಾನವು. ನಿನ್ನ ಚರ್ಮದಿಂದ ಛಂದೋ ರಾಶಿಗಳು, ಮೈ ಮೇಲಿನ ಕೂದಲುಗಳಿಂದ ದರ್ಭೆಯೂ, ಘೃತವು ನಿನ್ನ ದೃಷ್ಟಿಯಿಂದಲೂ, ನಿನ್ನ ನಾಲ್ಕು ಪಾದಗಳಿಂದ ಚಾತುರ್ಹೋತ್ರಗಳೂ, ಸ್ರಕ್ಸ್ರುಂಡ ಸ್ರವಗಳು ಮೂಗಿನಿಂದಲೂ, ಇಡವು ಹೊಟ್ಟೆಯಿಂದಲೂ ಚಮಸವು ಕಿವಿಯ ರಂಧ್ರಗಳಿಂದಲೂ, ಪ್ರಾಶಿತ್ರವು ಬಾಯಿಯಿಂದಲೂ,

ನಾಲಿಗೆಯಲ್ಲಿ ನವಗ್ರಹಗಳೂ, ನಿನ್ನ ಅಗಿಯುವಿಕೆಯೇ ಅಗ್ನಿಹೋತ್ರವೂ ಆಗಿರುತ್ತವೆ.

ನಿನ್ನ ಈ ವರಾಹರೂಪವು ಆವಿರ್ಭವಿಸಿರುವುದೇ ದೀಕ್ಷೆಯು. ನಿನ್ನ ಶಿರಸ್ಸೇ ಉಪಸದರ ಉತ್ಪತ್ತಿಸ್ಥಾನವು. ಪ್ರಾಯಣೀಯ ಉದಯನೀಯಗಳು ಕೋರೆಹಲ್ಲುಗಳು. ನಾಲಿಗೆಯು ಅಪವರ್ಗವೆಂಬ ಮೋಕ್ಷವು. ನಿನ್ನ ಕಪಾಲಗಳು ಕ್ರತುಗಳು. ಸಭ್ಯರು, ಅವಸಥ್ಯರು, ಇಷ್ಟಿಕಾ ಬಂಧನದಿಂದ ಕೂಡಿದ ಯಜ್ಞಕುಂಡವೆಂಬ ಚಿತಿಯು ಅಥವ ಅಗ್ನಿಯೂ, ನಿನ್ನ ಪ್ರಾಣಗಳು. ಸೋಮಲತೆಯು ನಿನ್ನ ವೀರ್ಯವು. ಪ್ರಾತ ಮಾಧ್ಯಂದಿನ ಸಾಯಂ ಸವನಗಳೆಂಬ ತ್ರಿಕಾಲಗಳೂ, ನಿಶ್ಚಲತೆ ಮುಂತಾದ ಅವಸ್ಥಾ ವಿಶೇಷಗಳೂ, ಸಂಸ್ಥಾ ವಿಭೇದಗಳೆಂಬ ಅಗ್ನಿಷ್ಟೋಮಾದಿ ಸಪ್ತಯಾಗಗಳೂ ನಿನ್ನ ಸಪ್ತಧಾತುಗಳು. ಸಮಸ್ತ ಯಜ್ಞಗಳೂ ನಿನ್ನ ಅಂಗಾಂಗಗಳ ಸಂಧಿ ವಿಶೇಷಗಳು ನೀನೇ ಯಜ್ಞನು, ಯಾಗ ಸ್ವರೂಪನು, ಯಜ್ಞಸ್ಥಳ ರೂಪನು.

ಎಲೈ ಯಜ್ಞೋಪಯುಕ್ತ ಸಕಲ ಮಂತ್ರ ಸ್ವರೂಪನೇ ನಿನಗೆ ನಮಸ್ಕಾರ ನಮಸ್ಕಾರ. ಮಂತ್ರ ದೇವತಾ, ಯಜ್ಞ ದ್ರವ್ಯ, ಯಜ್ಞಗಳು, ಯಜ್ಞ ಕರ್ತ ಮೊದಲಾದ ರೂಪನಾದ ನಿನಗೆ ನಮಸ್ಕಾರ. ಎಲೈ ನಿನ್ನಿಂದ ಉತ್ಪನ್ನನಾದ ಚತುರ್ಮುಖ ಬ್ರಹ್ಮನೆಂಬ ಜ್ಞಾನ ಭಕ್ತಿ ವೈರಾಗ್ಯ ಪೂರ್ವಕವಾಗಿ ಧ್ಯಾನಿಸಲ್ಪಡುವ ಜ್ಞಾನಸ್ವರೂಪನೇ! ನನಗೆ ಸಾಕ್ಷಾತ್ತಾದ ವಿದ್ಯಾಗುರುವೇ ನಿನಗೆ ನಮಸ್ಕಾರಗಳು. ಸ್ವಾಮಿಯಾದ ವರಾಹರೂಪ ಪರಮಾತ್ಮನೇ ನಿನ್ನ ಕೋರೆಯ ಹಲ್ಲಿನ ಮೇಲೆ ಪರ್ವತಾದಿ ಶಿಖರಗಳಿಂದ ಕೂಡಿ ಭೂಮಿಯು ಕಾಂತಿಯುಕ್ತವಾಗಿ ಪ್ರಕಾಶಿಸುತ್ತಿದೆ. ನೀನು ಕೋರೆದಾಡೆಯ ಮೇಲೆ ಭೂದೇವಿಯನ್ನು ತರುತ್ತಿರುವುದನ್ನು ನೋಡಿದರೆ, ಒಂದು ಮತ್ತ ಗಜವು ಕಮಲದ ನಾಳ, ಎಲೆಗಳ ಸಹಿತವಾದ ಒಂದು ಕಮಲ ಪುಷ್ಪ ವನ್ನು ಸೊಂಡಿಲಿನಿಂದ ಎತ್ತಿ ಹಿಡಿದು ತರುವಂತೆ ಕಾಣುತ್ತಿದೆ. ವೇದಮಯವಾದ ನಿನ್ನ ಶರೀರದಲ್ಲಿ ಆಧಾರ ಪಡೆದಿರುವುದರಿಂದ ಈ ಭೂದೇವಿಯು, ಉದಯಾಚಲದಂತೆ ಕಾಣುತ್ತಾ ನಮಗೆ, ತೇಜಸ್ಸಿನಿಂದ ಭ್ರಮೆಯನ್ನುಂಟುಮಾಡುವಂತಿದೆ.

ಎಲೈ ಸ್ವಾಮಿಯೇ! ನಿನ್ನ ಹೊರತು ಬೇರೆ ಯಾರು ರಸಾತಳದಿಂದ ಈ ಭೂಮಿಯನ್ನು ನಮಗಾಗಿ ಇಷ್ಟು ಶ್ರದ್ಧೆಯಿಂದ ತರುವವರು ಇದ್ದಾರು? ನೀನು ಪ್ರಳಯೋದಕದಿಂದ ಮೇಲಕ್ಕೆದ್ದು ನಿನ್ನ ಮುಖವನ್ನು ಕೊಡವಿದಾಗ ಆ ಕೂದಲುಗಳಿಂದ ಹೊರ ಚಿಮ್ಮಿದ ಪವಿತ್ರೋದಕವು ಜನ, ತಪ, ಸತ್ಯಲೋಕದಲ್ಲಿದ್ದವರನ್ನೆಲ್ಲಾ ನೆನೆಸಿ ಪವಿತ್ರರನ್ನಾಗಿ ಮಾಡಿತು. ಆದರೂ ಕೂಡ ಎಲೈ ಸ್ವಾಮಿಯೆ! ನಿನ್ನ ಅಸದೃಶ ಮಾಯಾ ಮೋಹಿತರಾದ ನಾವು, ನಿನ್ನ ಅದ್ಭುತ ಆರ್ಭಟ, ಪರಾಕ್ರಮಗಳನ್ನು ನೋಡಿ ಹೆದರಿದವರಾಗಿ ಚಂಚಲ ಮನಸ್ಸುಳ್ಳವರಾಗಿರುತ್ತೇವೆ. ನಮಗೆ ಧೈರ್ಯವನ್ನೂ ಮಂಗಳವನ್ನೂ ಉಂಟು ಮಾಡುವನಾಗು ಎಂದು ದೇವತೆಗಳೆಲ್ಲರೂ ಸ್ತೋತ್ರಮಾಡುತ್ತಾ ಸಮೀಪಕ್ಕೆ ಬರಲು,

ವರಾಹಮೂರ್ತಿಯು ತನ್ನ ಗೊರಸುಗಳಿಂದ ಭೂಮಿಯನ್ನೆತ್ತಿ, ಜಲದ ಮೇಲ್ಭಾಗದಲ್ಲಿ ಅಲಗದಂತೆ ತನ್ನ ಸ್ವತೇಜಸ್ಸ್ತಂಬ ಯೋಗದಿಂದ ಸ್ಥಾಪಿಸಿ ಅಂತರ್ಧಾನನಾದನು.

ಯಾರು ಭಕ್ತಿ ಶ್ರದ್ಧೆಗಳಿಂದ ಈ ಆದಿ ವರಾಹಾವತಾರ ಚರಿತ್ರೆಯನ್ನು ಓದಿ, ಇತರರಿಗೆ ಹೇಳಿ ಅಥವ ಕೇಳುತ್ತಾರೋ ಅವರ ಹೃದಯದಲ್ಲಿ ದೇವರು ಪ್ರಸನ್ನನಾಗುತ್ತಾನೆ. ಪರಮಾತ್ಮನು ಒಲಿದರೆ ಸಕಲ ಪುರುಷಾರ್ಥಗಳೂ ಕೈಗೂಡುವಾಗ, ಅಲ್ಪ ಪ್ರಾಣಿಗಳಾದ ಮನುಷ್ಯರ ಅಲ್ಪ ಬಯಕೆಗಳನ್ನು ಸಲಿಸುವುದು ಏನು ಆಶ್ಚರ್ಯ? ಅನನ್ಯ ಭಕ್ತಿಯಿಂದ ಓದಿ ಕೇಳುವರಿಗೆ ಪರಮಾತ್ಮನು ತಾನೇ ಒಲಿದು ತನ್ನ ಸ್ಥಾನವಾದ ಮುಕ್ತಿಯನ್ನು ಕೊಡುವನು.

ಲೋಕದಲ್ಲಿ ಪುರುಷಾರ್ಥಗಳ ಸಾರ ರೂಪವಾದದ್ದೆಂದು ಭಾವಿಸಿ ಯಾವನು ಪ್ರಾಚೀನ ಋಷಿಗಳಿಂದ ಹೇಳಲ್ಪಟ್ಟ ಭಗವತ್ಕಥಾಮೃತವನ್ನು ಸವಿದು, ಅದರ ರುಚಿಯನ್ನು ಕಂಡಿರುತ್ತಾನೋ ಅಂತಹವನು, ಇತರ ಜನರ ಗ್ರಾಮ್ಯಕಥೆಗಳನ್ನು ಕೇಳ್ಯಾನೇನು? ಭಗವಂತನಲ್ಲಿ ವಿಮುಖನಾದಾನೇನು? ಸರ್ವಥಾ ವಿಮುಖ ನಾಗುವುದಿಲ್ಲವೆಂದು ಭಾವ.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ पञ्चदशोऽध्यायः

**शुक उवाच**

निशम्य कौशारविणोपवर्णितां हरेः कथां कारणसूकरात्मनः ।
पुनः स पप्रच्छ समुद्यताञ्जलिर्न चातितृप्तो विदुरो धृतव्रतः ॥ १ ॥

**विदुर उवाच**

तेनैव च मुनिश्रेष्ठ हरिणा यज्ञमूर्तिना ।
आदिदैत्यो हिरण्याक्षो हत इत्यनुशुश्रुम ॥ २ ॥

तस्य चोद्धरतः क्षोणीं स्वदंष्ट्राग्रेण लीलया ।
दैत्यराजस्य च ब्रह्मन् कस्माद्धेतोरभून्मृधः ॥ ३ ॥

**मैत्रेय उवाच**

साधु वीर त्वया पृष्टमवतारकथां हरेः ।

यत् त्वं पृच्छसि मर्त्यानां मृत्युपाशविशातनीम् ॥ ४ ॥

ययोत्तानपदः पुत्रो मुनिना गीतयाऽर्भकः ।
मृत्योः कृत्वेह मूर्ध्न्यङ्घ्रिमारुरोह हरेः पदम् ॥ ५ ॥

अथात्रापीतिहासोऽयं श्रुतो मे वर्णितः पुरा ।
ब्रह्मणा देवदेवेन देवानामनुपृच्छताम् ॥ ६ ॥

दितिर्दाक्षायणी क्षत्तर्मारीचं कश्यपं पतिम् ।
अपत्यकामा चकमे सन्ध्यायां हृच्छयार्दिता ॥ ७ ॥

इष्ट्वाऽग्निजिह्वं पयसा पुरुषं यजुषां पतिम् ।
निम्लोचत्यर्क आसीनमग्न्यागारे समाहितम् ॥ ८ ॥

दितिरुवाचएष मां त्वत्कृते विद्वन् काम आत्तशरासनः ।
दुनोति दीनां विक्रम्य रम्भामिव मतङ्गजः ॥ ९ ॥

तद् भवान् दह्यमानायां सपत्नीनां समृद्धिभिः ।
प्रजावतीनां भद्रं ते मय्यायुङ्क्तामनुग्रहम् ॥ १० ॥

भर्तर्याप्तोरुमानानां लोकानाविशते यशः ।
पतिर्भवद्विधो यासां प्रजया ननु जायते ॥ ११ ॥

पुरा पिता नो भगवान् दक्षो दुहितृवत्सलः ।
कं वृणीत वरं वत्सा इत्यपृच्छत नः पृथक् ॥ १२ ॥

स विदित्वाऽऽत्मजानां नो भावं सन्तानभावनः ।
त्रयोदशाददात् तासां यास्ते शीलमनुव्रताः ॥ १३ ॥

अथ मे कुरु कल्याण कामं कञ्जविलोचन ।
आर्त्तोपसर्पणं भूमन्नमोघं हि महीयसि ॥ १४ ॥

**मैत्रेय उवाच**

इति तां वीर मारीचः कृपणां बहुभाषिणीम् ।
प्रत्याहानुनयन् वाचा प्रवृद्धानङ्गकश्मलाम् ॥ १५ ॥

एष तेऽहं विधास्यामि प्रियं भीरु यदिच्छसि ।
तस्याः कामं न कः कुर्यात् सिद्धिस्त्रैवर्गिकी यतः ॥ १६ ॥

सर्वाश्रमानुपादाय स्वाश्रमेण कलत्रवान् ।
व्यसनार्णवमत्येति जलयानैर्यथार्णवम् ॥ १७ ॥

यामाहुरात्मनो ह्यर्धं श्रेयस्कामस्य भामिनि ।
यस्यां स्वधुरमध्यस्य पुमांश्चरति विज्वरः ॥ १८ ॥

यामाश्रित्येन्द्रियारातीन् दुर्जयानितराश्रमैः ।
वयं जयेम हेलाभिर्दस्यून् दुर्गपतिर्यथा ॥ १९ ॥

न वयं प्रभवस्तां त्वामनुकर्तुं गृहेश्वरि ।
अप्यायुषा वा कार्त्स्न्येन ये चान्ये गुणगृध्नवः ॥ २० ॥

अथापि काममेनं ते प्रजायै करवाण्यलम् ।
यथा मां नातिवाचन्ति मूहूर्तं प्रतिपालय ॥ २१ ॥

एषा घोरतमा वेला घोराणां घोरदर्शना ।
चरन्ति यस्यां भूतानि भूतेशानुचराणि ह ॥ २२ ॥

एतस्यां साध्वि सन्ध्यायां भगवान् भूतभावनः ।
परीतो भूतपार्षद्भिर्वृषेणाटति भूतरा ॥ २३ ॥

श्मशानचक्रानिलधूलिधूम्रविकीर्णविद्योतजटाकलापः ।
भस्मावकुण्ठामलरुक्मदेहो देवस्त्रिभिः पश्यति देवरस्ते ॥ २४ ॥

न यस्य लोके स्वजनः परो वा नात्यादृतो नोत कश्चिद्विगर्ह्यः ।
वयं व्रतैर्यच्चरणापविद्धामाशास्महेऽजां बत भुक्तभोगाम् ॥ २५ ॥

यस्यानवद्याचरितं मनीषिणो गृह्णन्त्यविद्यापटलं बिभित्सवः ।
निरस्तसाम्यातिशयो हरेः स्वयं पिशाचचर्यामचरत् सतां गतिः ॥ २६ ॥

हसन्ति यस्याचरितं हि दुर्भगाः स्वात्मन् रतस्याविदुषः समीहितम् ।
यैर्वस्त्रमाल्याभरणानुलेपनैः श्वभोजनं स्वात्मतयोपलालितम् ॥ २७ ॥

ब्रह्मादयो यत्कृतसेतुपाला यत्कारणं विश्वमिदं हि मायया।
आज्ञाकरी तस्य पिशाचचर्या अहो विभूम्नश्चरितं विडम्बनम्॥ २८ ॥

**मैत्रेय उवाच**

एवं संवेदिता भर्त्रा मन्मथोन्मथितेन्द्रिया।
जग्राह वासो ब्रह्मर्षेर्वृषलीव गतत्रपा॥ २९ ॥

संविदित्वाऽथ भार्यायास्तन्निर्बन्धं विकर्मणि।
नत्वा दिष्टाय रहसि तया चोपविवेश ह॥ ३० ॥

अथोपस्पृश्य सलिलं प्राणानायम्य वाग्यतः।
ध्यायन् जजाप विरजं ब्रह्म ज्योतिः सनातनम्॥ ३१ ॥

दितिस्तु व्रीडिता तेन कर्मावद्येन भारत।
उपसङ्गम्य विप्रर्षिमधोमुख्यभ्यभाषत॥ ३२ ॥

न मे गर्भमिमं ब्रह्मन् भूतानामृषभोऽवधीत्।
रुद्रः पतिर्हि भूतानां यस्याकरवमंहसम्॥ ३३ ॥

नमो रुद्राय महते देवायोग्राय मीढुषे।
शिवाय न्यस्तदण्डाय धृतदण्डाय मन्यवे॥ ३४ ॥

स नः प्रसीदताद् भीमो भगवानुर्वनुग्रहः।
व्याधस्याप्यनुकम्प्यानां स्त्रीणां देवः सतीपतिः॥ ३५ ॥

**मैत्रेय उवाच**

स्वगर्भस्याशिषं लोक्यामाशासानां प्रवेपतीम्।
निवृत्तसन्ध्यानियमो भार्यामाह प्रजापतिः॥ ३६ ॥

**कश्यप उवाच**

अप्रायत्यादात्मनस्ते दोषान्मौहूर्तिकादुत।
मन्निर्देशातिचारेण देवानां चैव हेलनात्॥ ३७ ॥

भविष्यतस्तवाभद्रावभद्रे जाठराधमौ।
लोकान् सपालांस्त्रींश्चण्डि मुहुराक्रन्दयिष्यतः॥ ३८ ॥

प्राणिनां हन्यमानानां दीनानामकृतागसाम् ।
स्त्रीणां निगृह्यमाणानां कोपितेषु महात्मसु ॥ ३९ ॥

तदा विश्वेश्वरः क्रुद्धो भगवान् लोकभावनः ।
हनिष्यत्यवतीर्यासौ यथाद्रीञ्छतपर्वधृक् ॥ ४० ॥

दितिरुवाचवधं भगवता साक्षात् सुनाभोदारबाहुना ।
आशासे पुत्रयोर्मह्यं मा क्रुद्धाद् ब्राह्मणात् प्रभो ॥ ४१ ॥

न ब्रह्मदण्डदग्धस्य न भूतभयदस्य च ।
नारक्यश्चानुगृह्णन्ति यां यां योनिमसौ गतः ॥ ४२ ॥

**कश्यप उवाच**

कृतशोकानुतापेन सद्यः प्रत्यवमर्शनात् ।
भगवत्युरुमानाच्च भवे मय्यपि चादरात् ॥ ४३ ॥

पुत्रस्यैव च पुत्राणां भवितैकः सतां मतः ।
गायन्ति यद् यशः शुद्धं भगवद्यशसा समम् ॥ ४४ ॥

योगैर्हेमेव दुर्वर्णं भावयिष्यन्ति साधवः ।
निर्वैरादिभिरात्मानं यच्छीलमनुवर्तितुम् ॥ ४५ ॥

यत्प्रसादादिदं विश्वं प्रसीदति यदात्मकम् ।
शश्वद्दृक् भगवान् यस्य तोष्यतेऽनन्यया दृशा ॥ ४६ ॥

स वै महाभागवतो महात्मा महानुभावो महतां महिष्ठः ।
प्रवृद्धभक्त्या ह्यनुभाविताशये विवेश्य वैकुण्ठमतद् विहास्यति ॥ ४७ ॥

अलम्पटः शीलधरो गुणाकरो हृष्टः परार्थे व्यथितेषु दुःखितः ।
अभूतशत्रुर्जगतः शोकहर्ता नैदाघिकं तापमिवोडुराजः ॥ ४८ ॥

अन्तर्बहिश्चामलमब्जनेत्रं स्वपूरुषेच्छानुगृहीतरूपम् ।
पौत्रस्तव श्रीललनाललामं द्रष्टा स्फुरत्कुण्डलमण्डिताननम् ॥ ४९ ॥

**मैत्रेय उवाच**

श्रुत्वा भागवतं पौत्रममोदत दितिर्भृशम् ।

पुत्रयोश्च वधं कृष्णाद् विदित्वाऽऽसीन्महामनाः ॥ ५० ॥

## ॥ इति श्रीमद्भागवते (तृतीयस्कन्धे(*3) पञ्चदशोऽध्यायः ॥

**॥ ಹದಿನೈದನೆಯ ಅಧ್ಯಾಯ ॥**

## ದಿತಿದೇವಿಯ ಅಕಾಲ ಸಮಾಗಮ ವೃತ್ತಾಂತ

ಈ ಅಧ್ಯಾಯದಲ್ಲಿ ರುದ್ರಾದಿ ದೇವತೆಗಳು ಪರಮಾತ್ಮನ ಆಜ್ಞಾನುಸಾರ ನಡೆಯತಕ್ಕವರೂ, ಪರಮಾತ್ಮನ ಅಧೀನರೂ ಆಗಿರುತ್ತಾರೆಂದೂ, ಪರಮಾತ್ಮನೇ ಸರ್ವ ಸ್ವತಂತ್ರನೆಂದೂ ನಿರೂಪಿಸಲ್ಪಡುತ್ತೆ . ವಿದುರನು ಮೈತ್ರೇಯರಿಂದ ವರಹಾವತಾರ ಚರಿತ್ರೆಯನ್ನು ಕೇಳಿ ಭಗವತ್ಕಥಾಶ್ರವಣ ವಿಚಾರದಲ್ಲಿ ತೃಪ್ತಿ ಇಲ್ಲದವನಾಗಿ, ಪುನಃ ಕೇಳಬೇಕೆಂಬ ಇಚ್ಛೆಯಿಂದ, ಮೈತ್ರೇಯರನ್ನು ಪುನಃ ಪ್ರಶ್ನಿಸುತ್ತಾನೆಂದು ಶುಕರು ಪರೀಕ್ಷಿದ್ರಾಜನಿಗೆ ಹೇಳಿ, ವಿದುರನ ಪ್ರಶ್ನೆಯನ್ನು ತಿಳಿಸುತ್ತಾರೆ:-

ಎಲೈ ಮನನಶೀಲರಾದ ಮುನಿಗಳಲ್ಲಿ ಶ್ರೇಷ್ಠರಾದ ಮೈತ್ರೇಯರೆ! ಆ ಯಜ್ಞವರಾಹ ರೂಪಿಯಾದ ಶ್ರೀಹರಿಯಿಂದ ಆದಿದೈತ್ಯನಾದ ಹಿರಣ್ಯಾಕ್ಷನು ಹತನಾದನೆಂದು ನಿಮ್ಮಿಂದ ಕೇಳಿದೆನು. ಆ ಭೂಮಿಯನ್ನು ತನ್ನ ಕೋರೆದಾಡೆಯ ಮೇಲಿಟ್ಟುಕೊಂಡು ಅನಾಯಾಸದಿಂದ ರಸಾತಳದಿಂದ ಮೇಲಕ್ಕೆ ಬರುತ್ತಿದ್ದ ವರಾಹನಿಗೂ, ಆ ದೈತ್ಯರಾಜನಾದ ಹಿರಣ್ಯಕ್ಷನಿಗೂ ಏನು ಕಾರಣ ಯುದ್ಧವಾಯಿತು? ಎಂದನು.

ಅದಕ್ಕೆ ಮೈತ್ರೇಯರು, ಎಲೈ ವೀರಾಗ್ರಣಿಯಾದ ವಿದುರನೇ ನಿನ್ನ ಪ್ರಶ್ನೆಯು ಶ್ಲಾಘ್ಯವಾಗಿರುತ್ತದೆ. ಏಕೆಂದರೆ ನಿನ್ನ ಪ್ರಶ್ನೆಯಿಂದ ಜನರ ಮೃತ್ಯು ಪಾಶವನ್ನು ಹರಿದು ಬಿಸುಡುವಂತಹ ಭಗವತ್ಕಥಾನುವಾದವು ಪ್ರವೃತ್ತವಾಗುತ್ತದೆ. ಪರಮಾತ್ಮನ ಅವತಾರ ಮಹಾತ್ಮೆಗಳನ್ನು ಕೇಳಿದ ಆ ಉತ್ತಾನಪಾದರಾಯನ ಮಗನಾದ ಧೃವನು ನಾರದ ಮುನಿಗಳ ಉಪದೇಶದಿಂದ ಮೃತ್ಯುವಿನ ಕಲೆಯನ್ನು ಕಾಲಿಂದ ಮೆಟ್ಟಿದವನಾಗಿ, ಮೃತ್ಯು ಪಾಶದಿಂದ ಬಿಡಿಸಿಕೊಂಡು ಪರಮಾತ್ಮನ ಪಾದಾರವಿಂದದ ಆಶ್ರಯವೆನಿಸುವ ಮಹತ್ಪದವಿಯನ್ನು ಪಡೆದನು. ನೀನು ಕೇಳಿದಂತೆಯೇ ಹಿಂದೆ ದೇವತೆಗಳು ಬ್ರಹ್ಮದೇವರನ್ನು ಪ್ರಶ್ನೆಮಾಡಿದಾಗ ಬ್ರಹ್ಮದೇವರು ಅವರಿಗೆ ಈ ಇತಿಹಾಸವನ್ನು ಹೇಳಿದರೆಂದು ನಾನು ಕೇಳಿದ್ದೇನೆ. ಅದನ್ನು ನಿನಗೆ ಹೇಳುವೆನು ಕೇಳು:-

ದಕ್ಷಪುತ್ರಿಯಾದ ದಿತೀದೇವಿಯು ಒಂದು ದಿನ ಸೂರ್ಯಾಸ್ತಮಯ ಕಾಲಕ್ಕೆ ಮುಂಚೆ ಕಾಮ ಪೀಡಿತಳಾಗಿ ಮಕ್ಕಳನ್ನು ಪಡೆಯುವ ಇಚ್ಛೆಯಿಂದ ತನ್ನ ಪತಿಯಾದ ಮರೀಚಿ ಪುತ್ರರಾದ

ಕಾಶ್ಯಪರನ್ನು ಸಮೀಪಿಸಿದಳು. ಆವಾಗ ಕಶ್ಯಪರು ಪಾಯಸ ಚರ್ವಾದಿಗಳಿಂದ ಅಗ್ನಿಯಲ್ಲಿ ಹೋಮ ಮಾಡಿ ಮುಗಿಸಿ ಸಂಧ್ಯಾ ಕಾಲವನ್ನು ನಿರೀಕ್ಷಿಸುತ್ತಾ ಅಗ್ನಿಶಾಲೆಯಲ್ಲಿ ಯೋಗನಿಷ್ಠರಾಗಿ ಕುಳಿತಿದ್ದರು. ದಿತೀದೇವಿಯು ಕಶ್ಯಪರನ್ನು ಸಮೀಪಿಸಿ ಎಲೈ ಪತಿಯೇ! ಈಗ ಮನ್ಮಥನು ನನ್ನನ್ನು ನಿಮ್ಮನ್ನುದ್ದೇಶಿಸಿ ಹೇಗೆ ಮದದಾನೆಯು ಬಾಳೆಯ ತೋಟವನ್ನು ಧ್ವಂಸಮಾಡುತ್ತದೆಯೋ ಅದರಂತೆ ಪೀಡಿಸುತ್ತಿದ್ದಾನೆ. ಮನ್ಮಥನಿಂದ ಆಕ್ರಮಿತಳಾದ ನಾನು ಬಹಳ ದೀನಳಾಗಿರುತ್ತೇನೆ.

ಈ ರೀತಿಯಾಗಿ ಕಾಮಾಗ್ನಿಯಿಂದ ಸಂತಪ್ತಳಾದ ನನ್ನನ್ನು, ಅನೇಕ ಪತ್ನಿಯರ ಸಮೃದ್ಧಿಯುಳ್ಳವರೂ, ಅವರಲ್ಲಿ ಅನೇಕ ಮಕ್ಕಳುಳ್ಳವರೂ ಆದ ತಾವು ಅನುಗ್ರಹಮಾಡಿ ಕಾಮ ಪರಿಹರಿಸುವುದಕ್ಕಾಗಿ ಈಗ ಸೇರತಕ್ಕದ್ದು. ಯಾವಾಕೆಯು ಪತಿಯಿಂದ ಬಹುಮಾನವನ್ನು ಪಡೆಯುವಳೋ ಅವಳೇ ಕೀರ್ತಿಯುತಳಾಗುತ್ತಾಳೆ. ನಿಮ್ಮಂತಹ ಪತಿಯು ಯಾವ ಸ್ತ್ರೀಗೆ ಇರುವರೋ ಆಕೆಯು ಪುತ್ರವತಿಯಾಗುತ್ತಾಳೆ. ಹಿಂದೆ, ಹೆಣ್ಣು ಮಕ್ಕಳಲ್ಲಿ ಪ್ರೀತಿಯುಳ್ಳ ನಮ್ಮ ತಂದೆಯದ ದಕ್ಷಪ್ರಜಾಪತಿಯು ಒಂದು ಸಲ ನಾವು ಹದಿಮೂರು ಜನ ಅಕ್ಕತಂಗಿಯರನ್ನೂ ಕರೆದು ನಿಮಗೆ ಒಬ್ಬಬ್ಬರಿಗೂ ಪ್ರತ್ಯೇಕವಾಗಿ ಏನೇನು ವರಗಳು ಬೇಕೋ ಕೇಳಿರಿ ಎಂದು ಹೇಳಿ ಎಲ್ಲರಿಗೂ ಅವರವರ ಇಂಗಿತದಂತೆ ಅವರವರ ಶೀಲಾನುಸಾರವಾಗಿ ವರಗಳನ್ನು ಕೊಟ್ಟಾಗ, ಸಂತಾನವನ್ನು ಬಯಸುವ ನನಗೂ ವರ ಕೊಟ್ಟಿದ್ದಾನೆ. ಮಹಾತ್ಮರಾದ ತಮ್ಮಂಥವರನ್ನು ಶರಣು ಹೊಕ್ಕರೆ ನಮಗೆ ಸಕಲ ಇಷ್ಟಾರ್ಥಗಳೂ ಸಿದ್ಧಿಸುವಾಗ, ಈಗ ಸಂತಾನಪ್ರಾಪ್ತಿಯಾಗಬೇಕೆಂಬ ನನ್ನಿಷ್ಟವು ಸಲ್ಲದೇ ಹೋದೀತೆ? ಆದುದರಿಂದ ಎಲೈ! ಕಮಲಲೋಚನನಾದ ಪತಿಯೇ ಈಗ ನನ್ನ ಕಾಮವನ್ನು ಪೂರೈಸುವನಾಗು ಎಂದಳು.

ಕಾಶ್ಯಪರು ಅಕಾಲದಲ್ಲಿ ಕಾಮಾರ್ಥಳೂ ಬಹು ಮಾತುಗಳಾಡುವಳೂ, ಕಾಮೋದ್ರೇಕವೆಂಬ ಕಶ್ಮಲದಿಂದ ಕೂಡಿದವಳೂ ಆದ ತಮ್ಮ ಪತ್ನಿಯಾದ ದಿತೀದೇವಿಯನ್ನು ನೋಡಿ, ಅವಳಿಗೆ ಈ ರೀತಿ ಹೇಳಿದರು:- ಎಲೈ ಕಾಮಬಾಣದಿಂದ ಪೀಡಿತಳಾಗಿ ಅಧೈರ್ಯ ಪಟ್ಟವಳಂತಿರುವಳೇ ಹೆದರಬೇಡ! ನಾನು ನಿನ್ನ ಯೋಗ್ಯವಾದ ಇಚ್ಛೆಯನ್ನು ಸಲ್ಲಿಸುತ್ತೇನೆ. ನಿನ್ನಂತಹ ಪತ್ನಿಯು ಪುತ್ರವತಿಯಾಗಬೇಕೆಂದು ಬಯಸಿದಾಗ ನಿನ್ನಭೀಷ್ಟೆಯನ್ನು ಸಲ್ಲಿಸುವುದರಿಂದ ನಮಗೆ ಸ್ವರ್ಗಾದಿ ಪುರುಷಾರ್ಥಗಳ ಪ್ರಾಪ್ತಿಗೆ ಮಾರ್ಗವಾಗುತ್ತದೆ. ಆದ್ದರಿಂದ ಯೋಗ್ಯನಾದ ಗಂಡನಾದವನು ಯಾರು ತಾನೇ ಇಂತಹ ಅಪೇಕ್ಷೆಯನ್ನು ಪೂರೈಸುವುದಿಲ್ಲ? ಆಶ್ರಮ ಧರ್ಮಗಳನ್ನು ಅವಲಂಬಿಸಿದಾತನು, ಸ್ವಧರ್ಮದಿಂದ ಗೃಹಸ್ಥಾಶ್ರಮಿಯಾಗಿ ಪತ್ನಿಯಿಂದ ಕೂಡಿದವನು, ಈ ಕ್ಲೇಶಯುಕ್ತವಾದ, ದುಸ್ತರವಾದ ಸಂಸಾರ ಶರಧಿಯನ್ನು, ನಾವೆಯಿಂದ ಹೇಗೆ ಸಮುದ್ರವನ್ನು ದಾಟಬಹುದೋ ಹಾಗೆ ದಾಟುತ್ತಾನೆ. ಎಲೈ ಮಾನವಂತಳೆ! ಅರ್ಧಾಂಗಿ ಎನಿಸುವ

ನಿನ್ನಂತಹ ಪತ್ನಿಯು ಅನುಕೂಲಳಾಗಿರುವಾಗ ಪತಿಯು ನಿನ್ನಿಂದ ತೃಪ್ತನಾಗಿ ಕಾಮಾದಿ ಜ್ವರಗಳಿಂದ ಬಿಡಲ್ಪಟ್ಟವನಾಗಿ ಸುಖಿಯಾಗುತ್ತಾನಲ್ಲವೆ?

ಇತರ ಆಶ್ರಮಗಳಲ್ಲಿರುವವರು ಇಂದ್ರಿಯ ನಿಗ್ರಹವನ್ನು ಪಡೆಯುವುದಕ್ಕೆ ಬಹು ಶ್ರಮಪಡುತ್ತಾರೆ. ಗೃಹಸ್ಥಾಶ್ರಮಿಗಳಾದ ನಾವಾದರೋ ನಿಮ್ಮ ಸಹಾಯದಿಂದ ಧೀರರಾದ ದುರ್ಗ ಪತಿಗಳಂತೆ, ಪಾಳಯಗಾರರಂತೆ, ಕಾಮಾದಿಗಳೆಂಬ ಕಳ್ಳರನ್ನು ಸುಲಭವಾಗಿ ಜಯಿಸಿಗೆದ್ದು, ಓಡಿಸುತ್ತೇವೆ. ನಾವು ಕಾಮಪೀಡಿತಳಾಗಿರುತ್ತೇನೆಂದು ಕಾತರಳಾಗಿ ಹೇಳಿಕೊಳ್ಳುತ್ತಿರುವ ನಿನಗೆ ಎಂದಿಗೂ ನಿರಾಶೆಮಾಡತಕ್ಕವರಲ್ಲ. ಗುಣಗ್ರಾಹಿಯಾದ ಬೇರೆ ಪತಿಯಾದವನು ತಾನೇ ನಿನ್ನಂತೆ ಬೇಡುವ ತನ್ನ ಪತ್ನಿಯ ಅಪೇಕ್ಷೆಯನ್ನು ಉಲ್ಲಂಘಿಸ್ಯಾನು? ಆದರೂ ಕೂಡ ನಿನ್ನ ಹಿತಕ್ಕಾಗಿ ನಾನು ಒಂದು ಮಾತು ಹೇಳುವೆನು ಕೇಳು. ಇನ್ನೊಂದು ಮುಹೂರ್ತ ಕಾಲ ನಿನ್ನಿಚ್ಛೆಯನ್ನು ಸಲ್ಲಿಸುವುದಕ್ಕೆ ಸರಿಯಾದ ಕಾಲವಲ್ಲ. ಏಕೆಂದರೆ ಈಗ ನಾವು ಇತರರು ನಮ್ಮನ್ನು ಆಡಿಕೊಳ್ಳದಂತೆ ಎಚ್ಚರದಿಂದ ಕಾರ್ಯಮಾಡಬೇಕಾಗಿದೆ. ಆದ್ದರಿಂದ ಒಂದು ಮುಹೂರ್ತಕಾಲ ನೀನು ತಡೆಯುವಳಾಗು. ನಂತರ ನಾನು ಯಥೇಷ್ಟವಾಗಿ ನಿನ್ನ ಮನೋರಥವನ್ನು ಈಡೇರಿಸುವೆನು.

ಅದೂ ಅಲ್ಲದೇ ಈ ಸಂಧ್ಯಾ ಕಾಲದಲ್ಲಿ ಭೂತಪತಿಯಾದ ರುದ್ರ ದೇವರು, ಭೂತ ಗಣಗಳಿಂದ ಕೂಡಿಕೊಂಡು, ಗೂಳಿಯ ಮೇಲೆ ಕುಳಿತು, ಇತರ ದೇವತಾ ಸ್ತ್ರೀಯರಿಂದ ಸಹಿತರಾಗಿ ಎಲ್ಲಾ ಕಡೆಯಲ್ಲೂ ನೋಡುತ್ತಾ ಸಂಚರಿಸುತ್ತಿದ್ದಾರೆ. ಈಗ ರುದ್ರದೇವರು ಸ್ಮಶಾನಾಗ್ನಿಯ ಹೊಗೆಯಿಂದ ಧೂಮ್ರವರ್ಣದಿಂದ ಕೂಡಿದ ಜ್ವಲಿಸುವ ಜಟೆಯಿಂದ ಕೂಡಿದವರೂ, ಭಸ್ಮದಿಂದ ಭೂಷಿತವಾದ ಸ್ವಚ್ಛ ಬಂಗಾರದಂತೆ ಪ್ರಕಾಶಿಸುವ ದೇಹವುಳ್ಳವರೂ, ಆಗಿ ತ್ರಿಮೂರ್ತಿಗಳ ಸಾನಿಧ್ಯ ವುಳ್ಳವರಾಗಿರುತ್ತಾರೆ. ಅವರು ನಿನ್ನ ಈ ಅವಸ್ಥೆಯನ್ನು ನೋಡಬಾರದು. ಆ ರುದ್ರದೇವರಿಗೆ ಸ್ವಜನರಾಗಲೀ ಪರರೆಂದಾಗಲೀ ಇಲ್ಲ. ಸರ್ವರೂ ಸಮರೇ. ಯಾರನ್ನು ಅವರು ಸ್ತುತಿಸುವುದಿಲ್ಲ. ಯಾರನ್ನೂ ನಿಂದಿಸುವುದಿಲ್ಲ. ಇಂತಹ ಶುದ್ಧಾತ್ಮರಾದ ರುದ್ರದೇವರನ್ನು ನಮ್ಮಂಥವರು ಆಶ್ರಯಿಸಿ, ಅವರ ಉಪದೇಶದಂತೆ ವ್ರತ ವುಳ್ಳವರಾಗಿರುತ್ತೇವೆ. ಅದುದರಿಂದ ಎಷ್ಟೋ ವೇಳೆ ಅನುಭವಿಸಿದ ಈ ವಿಷಯ ಸುಖಾಪೇಕ್ಷೆಯನ್ನು ಸದ್ಯಕ್ಕೆ ದೂರ ಮಾಡುವಳಾಗು.

ಯಾವ ರುದ್ರದೇವರ ಇಂದ್ರಾದಿಗಳಿಗೂ ಅಗಮ್ಯವಾದ ಮಹಿಮೆಗಳನ್ನು ಜ್ಞಾನಿಗಳು ಅವಿದ್ಯಾಪಂಚಕಗಳ ಹಾವಳಿಯಿಂದ ಹುಟ್ಟತಕ್ಕ ಕಾಮಾದ್ಯಪೇಕ್ಷೆಗಳನ್ನು ನಿರ್ಮೂಲ ಮಾಡುವುದಕ್ಕಾಗಿ, ಗುರುಗಳಿಂದ ಶ್ರವಣಮಾಡಿ ತಿಳಿಯುತ್ತಾರೆಯೋ, ಅಂತಹ ರುದ್ರ ದೇವರು ಶ್ರೀಹರಿಯನ್ನು ಸಮಾಧಿಕ

ರಹಿತನೆಂದು ಉಪಾಸನೇ ಮಾಡುತ್ತಾ, ಆ ಹರಿ ಆಜ್ಞೆಯಿಂದಲೇ ತಾವು ಭೂತ ಪ್ರೇತ ಪಿಶಾಚಾದಿಗಳಿಂದ ಕೂಡಿದವರಾಗಿ, ಪಿಶಾಚಿಗಳಂತೆಯೇ ಚರ್ಯೆವುಳ್ಳವರಾಗಿ ಸಂಚರಿಸುತ್ತಿರುತ್ತಾರೆ! ಎಂತಹ ಆಶ್ಚರ್ಯವು! ಇಂತಹ ಕಾಲವು ಗರ್ಭೋತ್ಪತ್ತಿಗೆ ಯೋಗ್ಯವಲ್ಲ. ಏಕೆಂದರೆ ಈಗ ಗರ್ಭಿಣಿಯರು ಅವರ ದೃಷ್ಟಿಗೆ ಗೋಚರರಾದರೆ ಅವರ ಗರ್ಭದ ಪತನವಾಗುತ್ತದೆ.

ಹೀಗೆ ರುದ್ರಾದಿಗಳ ಚೇಷ್ಟೆಗಳಿಗೂ ನಿಯಾಮಕನಾದ, ಸರ್ವಾತ್ಮನಾದ ಶ್ರೀಪರಮಾತ್ಮನ ಮಹಿಮೆಯನ್ನೂ ಶಾಸನವನ್ನೂ ತಿಳಿಯದೆ ತಮೋಯೋಗ್ಯರು ರುದ್ರ ದೇವರನ್ನು ನಿಂದಿಸಿ ತಮಃಪ್ರಾಪ್ತಿಯನ್ನು ಹೊಂದುತ್ತಾರೆ. ಅಂತಹ ಅಜ್ಞಾನಿಗಳೇ ಸತ್ತನಂತರ ಯಾವ ಶರೀರವು ನಾಯಿ ನರಿಗಳಿಗೆ ಭೋಜನ ಯೋಗ್ಯಗಳಾಗುವವೋ, ಅಂತಹ ಶರೀರವನ್ನೇ ತಾವೆಂಬ ಭಾವದಿಂದ ಬದುಕಿರುವ ಕಾಲದಲ್ಲಿ, ವೂಲೆಗಳು, ಗಂಧ, ಆಭರಣ, ವಸ್ತ್ರ, ಭೂಷಣಾದಿಗಳಿಂದ ಅಲಂಕರಿಸಿಕೊಂಡು ಪಶು ಪ್ರಾಯರಾಗಿ ವಿಷಯ ಭೋಗಗಳಲ್ಲಿ ಆಸಕ್ತರಾಗಿದ್ದು ನಂತರ ನರಕಕ್ಕೆ ಹೋಗುತ್ತಾರೆ.

ಬ್ರಹ್ಮಾದಿದೇವತೆಗಳು ಯಾವನ ಆಜ್ಞಾ ಪರಿಪಾಲಕರೋ! ಯಾವನ ಇಚ್ಛಾರೂಪ ಪ್ರಕೃತಿಯಿಂದ ಸಕಲವಾದ ವಿಚಿತ್ರವಾದ ಜಗತ್ತು ನಿರ್ಮಿತವಾಯಿತೋ! ಅಂತಹ ಶ್ರೀಪರಮಾತ್ಮನ ಆಜ್ಞೆಯನ್ನು ಅನುಸರಿಸಿ ರುದ್ರ ದೇವರು ಪಿಶಾಚಿಗಳೊಡನೆ, ಅವರಂತೆ ನಟಿಸುತ್ತಾ ವ್ಯಾಪಾರ ಮಾಡುತ್ತಿರುವುದು ಆ ಮಹಾನುಭಾವರ ಯಾವ ರೀತಿಯಾದ ಲೀಲೆಯೋ ತಿಳಿಯದು! ಆಶ್ಚರ್ಯ. ಮಹಾಮಹಿಮರಾದ ಆ ರುದ್ರದೇವರಿಗೆ ಇದು ಕೇವಲ ವಿಡಂಬನೆಯು ಎಂದರು.

## ರುದ್ರದೇವರಲ್ಲಿ ಪ್ರಾರ್ಥನೆ

ಹೀಗೆ ಕಶ್ಯಪರು ಹೇಳಲು ಮನ್ಮಥಾಗ್ನಿಯಿಂದ ಪೀಡಿತಳಾದ ಅದಿತಿದೇವಿಯು ಕೇವಲ ಶೂದ್ರಸ್ತ್ರೀಯಂತೆ ಲಜ್ಜೆಯನ್ನು ಬಿಟ್ಟು, ಕಶ್ಯಪರ ಬಟ್ಟೆಯನ್ನು ಹಿಡಿದು ನಿರ್ಬಂಧಿಸಲಾಗಿ, ಕಾಮೋದ್ರೇಕದಿಂದ ದುಷ್ಕರ್ಮದಲ್ಲಿ ನಿರತಳಾಗಿ ನಿರ್ಬಂಧಿಸುತ್ತಿರುವ ತಮ್ಮ ಪತ್ನಿಯನ್ನು ನೋಡಿ, ಮನಸ್ಸಿನಿಂದ ಸರ್ವ ನಿಯಾಮಕನಾದ ಪರಮಾತ್ಮನನ್ನು ನಮಸ್ಕರಿಸಿ, ಆಕೆಯೊಡನೆ ರಹಸ್ಯಸ್ಥಳಕ್ಕೆ ಹೋಗಿ ಸಂಭೋಗಿಸಿದರು. ನಂತರ ಸ್ನಾನ, ಶುದ್ಧಾಚಮನಾದಿಗಳನ್ನು ಮಾಡಿ, ತಮ್ಮ ಬ್ರಹ್ಮ ತೇಜಸ್ಸಿನ ರಕ್ಷಣೆಗಾಗಿ ಮೌನದಿಂದ ಪ್ರಾಣಾಯಾಮಗಳನ್ನು ಮಾಡಿ, ಸರ್ವ ಪಾಪ ಪರಿಹಾರಕನೂ, ನಿರ್ದೋಷನೂ, ಸನಾತನನೂ, ಬ್ರಹ್ಮಜ್ಞಾನದಾಯಕನೂ ಆದ ಶ್ರೀಪರಮಾತ್ಮನನ್ನು ಧ್ಯಾನಪೂರ್ವಕವಾಗಿ ಮಂತ್ರಜಪಗಳಿಂದ ಆರಾಧಿಸಿದರು. ದಿತೀದೇವಿಯು ತಾನು ಮಾಡಿದ ಕರ್ಮದಿಂದ ಪಶ್ಚಾತ್ತಾಪ

ಪಡುವವಳಾಗಿ, ಪುನಃ ಬ್ರಹ್ಮರ್ಷಿಗಳಾದ ಕಶ್ಯಪರನ್ನು ಸಮೀಪಿಸಿ, ಮುಖವನ್ನು ಲಜ್ಜೆಯಿಂದ ಕೆಳಕ್ಕೆ ತಗ್ಗಿಸಿಕೊಂಡು ಈ ರೀತಿ ಮಾತನಾಡಿದಳು:-

ಬ್ರಹ್ಮಜ್ಞಾನಿಗಳಾದ ರುದ್ರದೇವರು ಕೋಪಿಸಿಕೊಂಡು, ನನ್ನ ಗರ್ಭವನ್ನು ನಾಶಮಾಡದಿರುವಂತೆ ಅನುಗ್ರಹಿಸಿರಿ! ಅನೇಕ ಅಪರಾಧಗಳನ್ನು ಮಾಡತಕ್ಕ ನಮ್ಮಂತಹವರ ಸರ್ವಾಪರಾಧ ಕ್ಷಮಾಪಣೆಯನ್ನು ಆ ಕರುಣಾಳುಗಳಾದ ರುದ್ರದೇವರಿಂದ ಹೊಂದುವುದಕ್ಕೆ ಅವರಿಗೆ ಭಕ್ತಿಯಿಂದ ನಮಸ್ಕರಿಸುವುದೊಂದೇ ಮಾರ್ಗವಾಗಿರುತ್ತದೆ. ಆದುದರಿಂದ ಎಲೈ ರುದ್ರದೇವರೇ ನಿಮಗೆ ನಮಸ್ಕಾರ. ನೀವು ಇಂದ್ರಾದಿ ದೇವತೆಗಳಿಂದಲೂ ಶ್ರೇಷ್ಠರಾದ ದೇವೋತ್ತಮರು. ಪ್ರಳಯಕಾಲದಲ್ಲಿ ಜಗತ್ಸಂಹಾರಕರಾದ್ದರಿಂದ ಉಗ್ರ ನಾಮಕರಾದರೂ, ನಿರಂತರ ಭಗವಧ್ಯಾನ ಲಕ್ಷಣದಿಂದ ತಾವು ಸುಖಿಗಳಾಗಿದ್ದು ಆಶ್ರಿತರಿಗೂ ಸುಖಕೊಡತಕ್ಕವರು, ಆದುದರಿಂದ ಮೀಢುಷರೆಂಬ ಹೆಸರುಳ್ಳವರು. ಪರಮಮಂಗಳರೂಪರೂ, ಲೋಕಕಲ್ಯಾಣರೂ ಆದುದರಿಂದ ಶಿವನಾಮಕರು.

ಸಜ್ಜನರನ್ನು ರಕ್ಷಿಸಿ, ದುರ್ಜನರನ್ನು ಶಿಕ್ಷಿಸತಕ್ಕವರಾದ್ದರಿಂದ, ನ್ಯಸ್ತದಂಡ, ಧೃತದಂಡರೆಂಬುವ ಹೆಸರುಳ್ಳ ನಿಮಗೆ ನಮಸ್ಕಾರಗಳು. ಕ್ರೋಧಮನಸ್ಸಿಗೆ ಅಭಿಮಾನಿಗಳು, ಮನನ ಶಕ್ತಿ ಕೊಡತಕ್ಕವರೂ, ಸದಾ ಭಗವತ್ಪರವಾದ ಮನಸ್ಸುಳ್ಳವರೂ ಆದ್ದರಿಂದ ಮನ್ಯು ನಾಮಕರಾದ ರುದ್ರದೇವರಿಗೆ ನಮಸ್ಕಾರ. ಇಂತಹ ಭೀಮ ಪರಾಕ್ರಮಿಗಳು, ಸುಲಭವಾಗಿ ಯಥೇಷ್ಟವಾಗಿ ಅನುಗ್ರಹಿಸುವ ಭಕ್ತಾನುಕಂಪಿಗಳೂ, ಸತೀದೇವಿಯರ ಪತಿಗಳೂ ಆದ ದೇವೋತ್ತಮ ರುದ್ರದೇವರು, ಕಾಮಾದಿ ಮಹತ್ಛಾಯಿಲೆಗಳಿಂದ ನಡುಗುತ್ತಿರುವ ದೇಹವುಳ್ಳ ನಮ್ಮಂತಹ ಸ್ತ್ರೀಯರ ಮಹದಾದ ಅಪರಾಧಗಳನ್ನು ಮನ್ನಿಸಿ ನಮಗೆ ರಕ್ಷಕರಾಗಲಿ! ಅವರ ಶ್ರೇಷ್ಠಗಳಾದ ಪಾದಗಳಿಗೆ ನಮಸ್ಕರಿಸುತ್ತೇನೆ, ಎಂದಳು. ಎಲೈ ವಿದುರನೆ, ಈ ರೀತಿಯಾಗಿ ತನ್ನ ಗರ್ಭ ಸಂರಕ್ಷಣೆಗಾಗಿ ಆಶೀರ್ವಾದಗಳನ್ನು ಅಪೇಕ್ಷಿಸುತ್ತಾ, ತಾನು ಮಾಡಿದ ಅಪರಾಧದಿಂದ ಭಯಪಟ್ಟವಳಾಗಿ ನಡುಗುತ್ತಾ ನಿಂತಿದ್ದ ದಿತೀದೇವಿಯನ್ನು ನೋಡಿ, ಸಂಧ್ಯಾಕಾಲದ ಕಾರ್ಯಗಳು ಮುಗಿದನಂತರ ಕಶ್ಯಪರು ಹೇಳಿದ್ದನ್ನು ನಾನು ಹೇಳುವೆನು ಕೇಳು, ಎಂದು ಮೈತ್ರೇಯರು ಮುಂದಿನ ಕಥೆಯನ್ನು ಹೇಳುತ್ತಾರೆ:-

ಎಲೈ ದಿತಿಯೆ! ನೀನು ಒಂದು ಮುಹುರ್ತಕಾಲ ನಿನ್ನ ಮನಸ್ಸನ್ನು ತಡೆಯಲಾರದೆ ಮಹದಪರಾಧವನ್ನು ಮಾಡಿದ್ದೀಯೆ. ಆದರಿಂದ ನೀನು ನನ್ನ ಆಜ್ಞೆಯನ್ನು ಉಲ್ಲಂಘಿಸಿದ್ದಲ್ಲದೇ, ದೇವತೆಗಳನ್ನೂ ನಿರ್ಲಕ್ಷ್ಯವಾಗಿ ಕಂಡು ಅವಜ್ಞತೆಯನ್ನು ತೋರಿಸಿರುತ್ತೀಯೆ. ಆದ್ದರಿಂದ ಎಲೈ ಅಮಂಗಳಸ್ವರೂಪಳೇ ನಿನ್ನ ಉದರದಿಂದ ಅಮಂಗಳಸ್ವರೂಪರೂ, ಕ್ರೂರಿಗಳೂ ಆದ ಇಬ್ಬರು ಅಧಮ ದೈತ್ಯರು ಹುಟ್ಟುತ್ತಾರೆ.

ಲೋಕದ ಜನರನ್ನೂ ಮೂರು ಲೋಕಾಧಿಪತಿಗಳನ್ನೂ ಮಹಾಬಲಿಷ್ಠರಾದ ಇವರು ಪೀಡಿಸಿ ದುಃಖಪಡಿಸುವವರಾಗುತ್ತಾರೆ. ಇವರು ನಿಷ್ಕರುಣಿಗಳಾಗಿ, ನಿರಪರಾಧಿಗಳಾದ, ದೀನರಾದ ಪ್ರಾಣಿಗಳನ್ನು ಸಂಹಾರಮಾಡುತ್ತಾರೆ. ಸ್ತ್ರೀಯರನ್ನು ಬಲಾತ್ಕರಿಸಿ ಅಪಹರಿಸುತ್ತಾರೆ. ಆಗ ಮಹಾತ್ಮರು ಇವರ ದುಷ್ಕೃತ್ಯಗಳಿಂದ ಕೋಪಿಸಿಕೊಂಡಾಗ, ಜಗತ್ಪತಿಯಾದ ಪರಮಾತ್ಮನೂ ಇವರಲ್ಲಿ ಕೋಪವುಳ್ಳವನಂತೆ ಅವತರಿಸಿ ಇವರಿಬ್ಬರನ್ನೂ ತಾನೇ ಸಂಹಾರ ಮಾಡುತ್ತಾನೆ. ಆಗ ವಜ್ರಾಯುಧದಿಂದ ಛಿದ್ರ ಛಿದ್ರ ಮಾಡಲ್ಪಟ್ಟ ಗಿರಿ ಶಿಖರಗಳಂತೆ ಮಹಾ ಶರೀರಗಳುಳ್ಳ ಆ ನಿನ್ನ ಎರಡು ಮಕ್ಕಳೂ ಹತರಾಗಿ ಬೀಳುತ್ತಾರೆ, ಎಂದರು.

ಆಗ ದಿತೀದೇವಿಯು, ಎಲೈ ಶಾಪಾನುಗ್ರಹಶಕ್ತನಾದ ಪ್ರಭುವೇ! ನನ್ನ ಮಕ್ಕಳು ಸಾಕ್ಷಾತ್ಪರಮಾತ್ಮನ ಅಪ್ರತಿಹತವಾದ ಬಾಹುಗಳಿಂದ ಸಂಹರಿಸಲ್ಪಡುವರೆಂದು ವಿಧಿಸುವರಾದಿರಿ! ಆದರೆ ಅವರಿಗೆ ಬ್ರಾಹ್ಮಣ ಶಾಪವು ಬಾರದಿರಲಿ! ಬ್ರಾಹ್ಮಣರಿಂದ ಅವರು ಹತರಾಗದಿಲಿ! ಏಕೆಂದರೆ ಬ್ರಾಹ್ಮಣ ಕೋಪಾಗ್ನಿ ಎಂಬ ದಂಡದಿಂದ ಬಡಿಯಲ್ಪಟ್ಟು ಸುಟ್ಟು ಮೃತಿ ಹೊಂದಿದವನೂ, ಭೂತ ದ್ರೋಹಿಯಾಗಿ ನಂತರ ಮರಣವನ್ನು ಹೊಂದುವನೂ ಸಹ, ನಂತರ ಅನೇಕ ಹೀನ ಜನ್ಮಗಳಲ್ಲೂ, ನರಕಗಳಲ್ಲೂ ಹುಟ್ಟುತ್ತಿರುವನೇ ಹೊರತು, ಅವನನ್ನು ನರಕ ಯಾತನೆಯಿಂದ ಉದ್ಧಾರಮಾಡುವರು ಯಾರೂ ಇಲ್ಲದೇ ಹೋಗುವರು. ಆದರಿಂದ ಶಾಶ್ವತ ನರಕ ಉಂಟಾಗುವುದು, ಎಂದಳು.

ದುಃಖಾರ್ತಳೂ, ಪಶ್ಚಾತ್ತಾಪದಿಂದ ಕೂಡಿದವಳೂ ಆದ ತಮ್ಮ ಪತ್ನಿಯನ್ನು ಕಶ್ಯಪರು ನೋಡಿ ಪುನಃ ಆಕೆಗೆ ಹೇಳುತ್ತಾರೆ:- ನೀನು ಮಹಾನುಭಾವರಾದ ಮಹದೇವರನ್ನು ಭಕ್ತಿಯಿಂದ ಸ್ತುತಿಸಿ, ಸದ್ಯದಲ್ಲಿನನ್ನ ಮಾತನ್ನು ಮೀರಿದ್ದಕ್ಕಾಗಿ ದುಃಖಪಡುತ್ತಾ ಪಶ್ಚಾತ್ತಾಪ ಹೊಂದಿರುತ್ತೀಯೆ. ಅನುಗ್ರಹಕ್ಕಾಗಿ ಆದರದಿಂದ ನನ್ನನ್ನೂ ಪ್ರಾರ್ಥಿಸುತ್ತಿದ್ದೀಯೆ. ಅದುದರಿಂದ ನಿನ್ನ ಇಬ್ಬರ ಮಕ್ಕಳ ಪೈಕಿ ಒಬ್ಬನ ಮಗನಿಗೆ ಸಕಲ ಸಜ್ಜನರಿಗೂ ಪ್ರಿಯನಾದ, ನಿನ್ನ ಮೊಮ್ಮಗನು ಹುಟ್ಟುತ್ತಾನೆ. ಅವನ ಯಶಸ್ಸು ಶ್ರೀಪರಮಾತ್ಮನ ಯಶಸ್ಸಿನಂತೆ ಪವಿತ್ರಗಳಾಗಿ, ನಿರ್ದೋಷಗಳಾಗಿ, ಲೋಕದಲ್ಲಿ ಜನರಿಂದ ಸ್ತುತಿಸಲ್ಪಡುತ್ತೆ.

ನಿನ್ನ ಮೊಮ್ಮಗನಾಗಿ ಹುಟ್ಟುವ ಪ್ರಹ್ಲಾದನು, ಕಶ್ಮಲದಿಂದ ಕೂಡಿದ ಭಂಗಾರವನ್ನು ಪುಟಕ್ಕೆ ಹಾಕಿ ಹೇಗೆ ಸ್ವಚ್ಛವನ್ನಾಗಿ ಮಾಡುತ್ತಾರೋ ಹಾಗೆ, ಅಪರಿಶುದ್ಧ ಭಂಗಾರದಂತಿದ್ದ ಜಯಾವಿಷ್ಟನಾದ ಹಿರಣ್ಯಕಶಿಪುವಿನ ದೇಹದಿಂದ, ಉತ್ಪನ್ನನಾಗುವನು. ಅವನ ಜ್ಞಾನಭಕ್ತಿವೈರಾಗ್ಯ ಸೌಶೀಲ್ಯಾದಿ ಮಹಾನೇಕ ಸದ್ಗುಣಗಳನ್ನು ಮೇಲ್ಪಂಕ್ತಿಯಾಗಿ ಅನುಕರಿಸಲು ಮಹಾಯೋಗಿಗಳೂ ಕೂಡ ಅಪೇಕ್ಷೆ ವುಳ್ಳವರಾಗುವರು. ಆ ಪರಮಾತ್ಮನಿಂದ ವ್ಯಾಪ್ತವಾದ ಈ ಸಕಲ ಪ್ರಪಂಚವೂ ಯಾವ ಪರಮಾತ್ಮನು

ಪ್ರೀತನಾದರೆ, ಪರಸ್ಪರ ಪ್ರೀತಿಯುಳ್ಳದ್ದಾಗುತ್ತದೋ, ಪರಮಾತ್ಮನ ಪ್ರೀತಿಪಾತ್ರರನ್ನು ಪ್ರೀತಿಸುತ್ತದೆಯೋ, ಅಂತಹ ಸರ್ವವನ್ನೂ ಸದಾ ನೋಡತಕ್ಕ ವಿಶ್ವದೃಕ್ ಎಂಬ ಪರಮಾತ್ಮನನ್ನು, ಆ ಪ್ರಹ್ಲಾದನು ಸರ್ವತ್ರವ್ಯಾಪ್ತನೆಂದೂ, ಅಂತರ್ಯಾಮಿಯಾಗಿ ಸರ್ವರನ್ನೂ ಸದಾ ಸಂರಕ್ಷಿಸುತ್ತಾನೆಂದೂ, ತನಗೆ ಸ್ವಾಮಿಯೆಂದೂ ನಿಶ್ಚಲವಾದ ಭಕ್ತಿಯಿಂದ ಧ್ಯಾನಿಸುವನಾಗಿ ಆ ಪರಮಾತ್ಮನನ್ನು ಸಂತೋಷಪಡಿಸುತ್ತಾನೆ. ಆ ಪ್ರಹ್ಲಾದನೇ ಭಾಗವತೋತ್ತಮನು, ಎಂದರೆ ಅತ್ಯಂತ ಭಗವದ್ಭಕ್ತನು.

ವಿಷ್ಣುವಿನಿಂದಿತರವಾದ ಸರ್ವವೂ ಅಸಾರವೂ ಅನಿತ್ಯವೂ ಎಂದು ತಿಳಿದು ಪರಮಾತ್ಮನಲ್ಲಿ ಏಕನಿಷ್ಠೆಯುಳ್ಳವನಾದ್ದರಿಂದ ಮಹಾತ್ಮನು. ವಿಷ್ಣುಸರ್ವೋತ್ತಮತ್ವ, ಪ್ರಪಂಚ ಸತ್ಯತ್ವ, ಪಂಚಭೇದ ತಾರತಮ್ಯ ಜ್ಞಾನಗಳಲ್ಲಿ ನಿಶ್ಚಯಬುದ್ಧಿಯುಳ್ಳವನೂ, ವೈಷ್ಣವ ಸಿದ್ಧಾಂತಗಳಲ್ಲಿ ಪ್ರವೀಣನೂ ಆದುದರಿಂದ ಮಹಾನುಭಾವನೂ, ನೃಸಿಂಹಾವತಾರ ಪರಮಾತ್ಮನನ್ನು ಕಂಭದಲ್ಲಿ ಪ್ರತ್ಯಕ್ಷವಾಗಿ ತೋರಿಸಿದ್ದೂ, ಹಿರಣ್ಯಕಶಿಪುವಿನಿಂದ ನಾನಾ ವಿಧ ಚಿತ್ರಹಿಂಸೆಯಿಂದ ಸಂಹರಿಸಲು ಪ್ರಯತ್ನಿಸಿದಾಗ್ಯೂ ಏನೂ ಸಾಧ್ಯವಾಗದ ಮಹಾಮಹಿಮೆಗಳನ್ನು ತೋರಿಸಿದ್ದರಿಂದಲೂ ಮಹಾಪ್ರಭಾವವುಳ್ಳದ್ದರಿಂದಲೂ ಮಹಾನುಭಾವನೂ, ಮಹಾತ್ಮರಲ್ಲಿ ಅಗ್ರಗಣ್ಯನೂ ಆದ ಆ ಪ್ರಹ್ಲಾದನು ಶ್ರೀಮನ್ನಾರಾಯಣನ ಪಾದಾರವಿಂದದಲ್ಲಿ ವೃದ್ಧಿಹೊಂದುತ್ತಿರುವ ಭಕ್ತಿಯುಳ್ಳವನಾಗಿ, ಏಕಾಗ್ರತೆಯಿಂದ ಭಗವನ್ನಿಷ್ಠನಾಗಿ, ಇತರ ವಿಚಾರಗಳಲ್ಲಿ ವಿರಕ್ತನಾಗುತ್ತಾನೆ. ಆ ಪ್ರಹ್ಲಾದನು ಇಂದ್ರಿಯನಿಗ್ರಹವುಳ್ಳವನೂ, ವೈರಾಗ್ಯಶಾಲಿಯೂ, ಸದಾಚಾರಸಂಪನ್ನನೂ, ಅನೇಕ ಸದ್ಗುಣಭರಿತನೂ, ಸದಾ ಸಂತೋಷಿಯೂ, ಇತರರ ಉನ್ನತಿಯನ್ನು ನೋಡಿ ಸಂತೋಷಿಸುವವನೂ, ಆರ್ತರೂ ದುಃಖಿತರಲ್ಲೂ ಕರುಣದಿಂದ ದುಃಖ ನಿವಾರಣೋಪಾಯವನ್ನು ಮಾಡಿ ಅವರನ್ನು ರಕ್ಷಿಸತಕ್ಕವನೂ, ಪ್ರಪಂಚದಲ್ಲಿ ಶತೃವೇ ಇಲ್ಲದವನೂ, ಅಂದರೆ ಸರ್ವ ಜನರಿಗೂ ಪ್ರಿಯನೂ, ಜನರ ಕಷ್ಟಗಳನ್ನು ಪರಿಹರಿಸಿ ಸುಖವನ್ನುಂಟುಮಾಡತಕ್ಕವನೂ, ಆಗಿ ಸಮಸ್ತರಿಗೂ ಚಂದ್ರನಂತೆ ಆಹ್ಲಾದ ದಾಯಕನಾಗುತ್ತಾನೆ.

ಈ ರೀತಿಯಾಗಿ ಒಳಗೂ ಹೊರಗೂ ಪರಿಶುದ್ಧನಾದ ಪ್ರಹ್ಲಾದನು, ಕಂಭದಲ್ಲೂ ಪರಮಾತ್ಮನು ಇದ್ದಾನೆ ಎಂದು ತಂದೆಗೆ ಹೇಳಿದ ಮಾತನ್ನು ಸತ್ಯಮಾಡಲು ಇಚ್ಛಿಸಿದ, ಕಮಲದಳ ನೇತ್ರನೂ, ದೇದೀಪ್ಯಮಾನಗಳಾದ ಕಿರೀಟ, ಕುಂಡಲ, ಹಾರಾದಿಗಳಿಂದ ಭೂಷಿತನೂ ಲಕ್ಷ್ಮೀರಮಣನೂ ಆದ ಶ್ರೀಪರಮಾತ್ಮನ ನೃಸಿಂಹಾವತಾರ ರೂಪವನ್ನು ಜನರಿಗೆ ಪ್ರತ್ಯಕ್ಷವಾಗಿ ತೋರಿಸುವನು, ತಾನೂ ನೋಡುವನು, ಎಂದರು. ಈ ರೀತಿಯಾಗಿ ಕಶ್ಯಪರು ಹೇಳಿದ್ದನ್ನು ಕೇಳಿ ದಿತಿಯು ಮಹಾ ಭಾಗವತೋತ್ತಮ ನಾದ ಮೊಮ್ಮಗನು ಹುಟ್ಟುವನೆಂದು ತಿಳಿದು ಸಂತೋಷವುಳ್ಳವಳೂ, ತನ್ನ

ಮಕ್ಕಳನ್ನು ನೃಸಿಂಹಾವತಾರದಿಂದ ಶ್ರೀಕೃಷ್ಣನು ಸಂಹರಿಸುತ್ತಾನಲ್ಲಾ ಎಂಬ ಚಿಂತೆಯುಳ್ಳವಳೂ ಆದಳು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಹದಿನೈದನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ षोडशोऽध्यायः

### मैत्रेय उवाच

प्राजापत्यं तु तत् तेजः परतेजोहनं दितिः ।
दधार वर्षाणि शतं शङ्कमानाऽसुरार्दनात् ॥ १ ॥

लोके तेन हतालोके लोकपाला हतौजसः ।
न्यवेदयन् विश्वसृजे ध्वान्तव्यतिकरं दिशाम् ॥ २ ॥

देवा ऊचुःतम एतद् विभो वेत्थ संविग्ना यद् वयं भृशम् ।
न ह्यव्यक्तं भगवतः कालेनास्पष्टवर्त्मनः ॥ ३ ॥

देवदेव जगद्धातर्लोकनाथशिखामणे ।
परेषामपरेषां वा त्वं भूतानामसि भाववित् ॥ ४ ॥

नमो विज्ञानवीर्याय माययेदमुपेयुषे ।
गृहीतगुणभेदाय नमस्तेऽव्यक्तयोनये ॥ ५ ॥

ये त्वामनन्यभावेन भावयन्त्यात्मभावनम् ।
आत्मनि प्रोतभुवनं परं सदसदात्मकम् ॥ ६ ॥

तेषां सुव्यक्तयोगानां जितश्वासेन्द्रियात्मनाम् ।
लब्धयुष्मत्प्रसादानां न कुतश्चित् पराभवः ॥ ७ ॥

यस्य वाचा प्रजाः सर्वा गावस्तन्त्येव यन्त्रिताः ।
हरन्ति बलिमायत्तास्तस्मै मुख्यात्मने नमः ॥ ८ ॥

स त्वं विधत्स्व शं भूमन् तमसा लुप्तकर्मणाम् ।
अदभ्रदयया दृष्ट्या प्रपन्नानर्हसीक्षितुम् ॥ ९ ॥

एष देव दितेर्गर्भ ओजः काश्यपमर्पितम् ।

दिशस्तिमिरयन् सर्वा एधतेऽग्निरिवैधसि ॥ १० ॥

**मैत्रेय उवाच**

स प्रहस्य महाबाहो भगवान् शब्दगोचरः ।
प्रत्याचष्टात्मभूर्देवान् प्रीणन् रुचिरया गिरा ॥ ११ ॥

ब्रह्मोवाचमानसा मे सुता युष्मत्पूर्वे वै सनकादयः ।
चेरुर्विहायसा लोकान् लोकेषु विगतस्पृहाः ॥ १२ ॥

त एकदा भगवतो वैकुण्ठस्यामलात्मनः ।
ययुर्विकुण्ठनिलयं सर्वलोकनमस्कृतम् ॥ १३ ॥

वसन्ति यत्र पुरुषाः सर्वे वैकुण्ठमूर्तयः ।
ये नित्यमनिमित्तेन धर्मेणाराधयन् हरिम् ॥ १४ ॥

यत्र चाद्यः पुमानास्ते भगवान् शब्दगोचरः ।
सत्त्वं विष्टभ्य विरजं स्वानां नो मृडयन् वृषः ॥ १५ ॥

यत्र नैःश्रेयसं नाम वनं कामदुघैर्द्रुमैः ।
सर्वर्तुश्रीभिर्विभ्राजत्कैवल्यमिव मूर्तिमत् ॥ १६ ॥

वैमानिकाः सललनाश्चरितानि यत्र गायन्ति लोकशमलक्षपणानि भर्तुः ।
अन्तर्जले तु विलसन्मधुमाधवीनां गन्धेन खण्डितधियोऽप्यनिलं क्षिपन्तः ॥ १७ ॥

पारावतान्यभृतसारसचक्रवाकदात्यूहहंसशुकतित्तिरबर्हिणाद्यैः ।
कोलाहले विरचिते चिरमात्रयोच्चैर्भृङ्गाधिपे हरिकथामनुगायमाने ॥ १८ ॥

मन्दारकुन्दकुरबोत्पलचम्पकोर्णपुन्नागनागबकुलाम्बुजपारिजाताः ।
गन्धेऽर्चिते तुलसिकाभरणेन तस्या यस्मिंस्तपः सुमनसो बहुमानयन्ति ॥ १९ ॥

यत् सङ्कुलं हरिपदानतिमात्रतृप्तैर्वैदूर्यमारकतहेममयैर्विमानैः ।
येषां बृहत्कटितटाः स्मितशोभिमुख्यः कृष्णात्मनां न रज आदधुरुत्स्मयाद्यैः ॥ २० ॥

श्री रूपिणी क्वणयती चरणारविन्दं नीलाम्बुजेन हरिसद्मनि मुक्तदोषा ।
संलक्ष्यते स्फटिककुड्य उपेतहेम्नि सम्मार्जतीव यदनुग्रहणेऽन्ययत्नाः ॥ २१ ॥

वापीषु विद्रुमतटास्वमृतामलाप्सु प्रेष्यान्विता निजवने तुलसीभिरीशम् ।
अभ्यर्चती स्वलकमुन्नसमीक्ष्य वक्रमुच्छेषितं भगवतेत्यमताङ्ग यच्छ्रीः ॥ २२ ॥

यन्न व्रजन्त्यघभिदोऽरचनानुवादाः श‍ृण्वन्ति येऽन्यविषयाः कुकथा मतिघ्नीः ।
यास्तु श्रुता हतभगैर्नृभिरात्तवीर्यास्तास्तान् क्षिपन्त्यशरणेषु तमःसु हन्त ॥ २३ ॥

येऽभ्यर्थितामपि च नो नृगतिं प्रपन्ना ज्ञानं च तत्त्वविषयं सहधर्म यत्र ।
नाराधनं भगवतो वितरन्त्यमुष्य संमोहिता विततया ननु मायया ते ॥ २४ ॥

यत्र प्रयान्त्यनिमिषामृषभानुवृत्त्या दूरेयमा ह्युपरि नः स्पृहणीयशीलाः ।
भर्तुर्मिथः सुयशसः कथनानुरागवैक्लव्यबाष्पकलया पुलकीकृताङ्गाः ॥ २५ ॥

तद्विश्वगुर्वधिकृतं भुवनैकवन्द्यं दिव्यं विचित्रविबुधाग्र्यविमानशोचिः ।
आपुः परां मुदमपूर्वमुपेत्य योगमायाबलेन मुनयस्तदथो विकुण्ठम् ॥ २६ ॥

तस्मिन्नतीत्य मुनयः षडसज्जमानाः कक्ष्याः समानवयसरत्वथ सप्तमायाम् ।
देवावचक्षत गृहीतगदौ परार्ध्यकेयूरकुण्डलकिरीटविटङ्कवेषौ ॥ २७ ॥

मत्तद्विरेफवनमालिकया निवीतौ विन्यस्तयाऽसितचतुष्टयबाहुमध्ये ।
वक्रभ्रुवा कुटिलया स्फुटनिर्गतेन रक्तेक्षणेन च मनाग् रभसं दधानौ ॥ २८ ॥

द्वार्येतयोः प्रविविशुर्मिषतोरपृष्ट्वा पूर्वा यथाऽऽरपुटवज्रकपाटिका याः ।
सर्वत्र ते ह्यविषया मुनयः स्वदृष्ट्या ये सञ्चरन्त्यविहता विगताभिशङ्काः ॥ २९ ॥

तान् वीक्ष्य वातरशनांश्चतुरः कुमारान् वृद्धान् दशार्धवयसो विदितात्मतत्त्वान् ।
वेत्रेण चास्खलयतामतदर्हणांस्तौ तेजो विहस्य भगवत्प्रतिकूलशीलौ ॥ ३० ॥

ताभ्यां मिषत्स्वनिमिषेषु निषिध्यमानाः स्वर्हत्तमा ह्यपि हरेः प्रतिहारपाभ्याम् ।
ऊचुः सुहृत्तमदिदृक्षितभङ्ग ईषत्कामानुजेन सहसा त उपप्लुताक्षाः ॥ ३१ ॥

को वा इहैत्य भगवत्परिचर्ययोच्चैस्तद्धर्मिणामपि सतां विषमस्वभावः ।
तस्मिन् प्रशान्तपुरुषे गतविग्रहे वां को वाऽत्मवत् कुहकयोः परिशङ्कनीयः ॥ ३२ ॥

न ह्यन्तरं भगवतीह समस्तकुक्षावात्मानमात्मनि नभो नभसीव धीराः ।
पश्यन्ति यत्र युवयोः सुरलिङ्गिनोः किं व्युत्पादितं ह्युदरभेदि भयं यतोऽस्य ॥ ३३ ॥

तद् वा अमुष्य परमस्य विकुण्ठभर्तुः कर्तुं न युक्तमिति धीमहि मन्दधीभ्याम् ।
लोकानितो व्रजतमन्तरभावदृष्ट्या पापीयसस्त्रय इमे रिपवोऽस्य यत्र ॥ ३४ ॥

तेषामितीरितमुभाववधार्य घोरं तं ब्रह्मदण्डमनिवारणमस्त्रपूगैः ।
सद्यो हरेरनुचरावुरुबिभ्यतस्तत्पादग्रहावपततामतिकातरेण ॥ ३५ ॥

भूयानघाद्धि भगवद्भिरकारि दण्डो यो नौ हरेत सुरहेलनमप्यशेषम् ।
मा वोऽनुतापकलया भगवत्स्मृतिघ्नो मोहो भवेदिह तु नौ व्रजतोरधोऽधः ॥ ३६ ॥

एवं तदैव भगवानरविन्दनाभः स्वानां विबुध्य सदतिक्रममार्यहृद्यः ।
तस्मिन् ययौ परमहंसमहामुनीनामन्वेषणीयचरणो निलयात् सहश्रीः ॥ ३७ ॥

तं त्वागतं प्रतिहृतौपयिकं स्वपुंभिस्तेऽचक्षताक्षविषयं स्वसमाधिगम्यम् ।
हंसश्रियोर्व्यजनयोः शिववायुलोलशुभ्रातपत्रशशिकेसरशीकराम्बुम् ॥ ३८ ॥

कृत्स्नप्रसादसुमुखं स्पृहणीयधाम स्नेहावलोककलया हृदि संस्पृशन्तम् ।
श्यामे पृथावुरसि शोभितया श्रिया स्वग्रीवामणिं सुभगयन्तमिवात्मधिष्ण्यम् ॥ ३९ ॥

पीतांशुकं पृथुनितम्बमधिस्फुरन्त्या काञ्च्याऽलिभिर्विरुतया वनमालया च ।
वल्गुप्रकोष्ठवलयं विनतासुतांसे विन्यस्तहस्तमितरेण धुनानमब्जम् ॥ ४० ॥

विद्युत्क्षिपन्मकरकुण्डलमण्डनार्हगण्डस्थलोन्नसमुखं मणिमत्किरीटम् ।
दोर्दण्डखण्डविवरे चरता परार्घ्यहारेण कन्धरगतेन च कौस्तुभेन ॥ ४१ ॥

अत्रोपसृष्टमिति चोत्स्मितमिंदिरायाः  स्वानां धिया विरचितं बहुसौष्ठवाढ्यम् ।
मह्यं भवस्य भवतां भजनीयमङ्गं नेमुर्निरीक्ष्य नवितृप्तदृशो मुदा कैः ॥ ४२ ॥

तस्यारविन्दनयनस्य पदारविन्दकिञ्जल्कमिश्रतुलसीमकरन्दवायुः ।
अन्तर्गतः स्वविवरेण चकार तेषां सोंभमक्षरजुषामपि चित्ततन्वोः ॥ ४३ ॥

ते वा अमुष्य वदनासितपद्मकोषमुद्वीक्ष्य सुन्दरतराधरकुन्दहासम् ।
लब्धाशिषः पुनरवेक्ष्य तदीयमङ्घ्रिद्वन्द्वं नखारुणमणिश्रयणं निदध्युः ॥ ४४ ॥

पुंसां गतिं मृगयतामिह योगमार्गैर्ध्यानास्पदं बहुमतं नयनाभिरामम् ।
ते तद्वपुर्दर्शयानमनन्यसिद्धैरौत्पत्तिकैः समगृणन् युतमष्टभोगैः ॥ ४५ ॥

कुमारा ऊचुः योऽन्तर्हितो हृदि गतोऽपि दुरात्मनां त्वमद्यैषि नो नयनमूलमनन्तराद्धः ।
यर्ह्येव कर्णविवरेण गुहां गतो नः पित्रानुवर्णितरहो भवदुद्भवेन ॥ ४६ ॥

तं त्वां विदाम भगवन् परमात्मतत्त्वं सत्त्वेन सम्प्रति रतिं रचयन्तमेषाम् ।
यत् तेऽनुभावविदितैर्दृढभक्तियोगैरुद्ग्रन्थयो हृदि विदुर्मुनयो विरागाः ॥ ४७ ॥

नात्यन्तिकं विगणयन्त्यपि ते प्रसादं किं चान्यदर्पितभयं भ्रुव उन्नयैस्ते ।
येऽङ्ग त्वदङ्घ्रिशरणा भवतः कथायाः कीर्तन्यतीर्थयशसः कुशला रसज्ञाः ॥ ४८ ॥

कामं व्रजेम वृजिनैर्निरयेषु नष्टाश्चेतोऽलिवद् यदि नु ते पदयो रमेत ।
वाचश्च नस्तुलसिवद् यदि तेऽङ्घ्रिशोभाः पूर्येत ते गुणगणैर्यदि कर्णरन्ध्रः ॥ ४९ ॥

प्रादुश्चकर्थ यदिदं पुरुहूत रूपं तेनेश निर्वृतिमवापुरलं दृशो नः ।
तस्मा इदं भगवते नम उद्विधेम योऽनात्मनां दुरुदयो भगवान् प्रतीतः ॥ ५० ॥

## ॥ इति श्रीमद्भागवते (तृतीयस्कन्धे(*3) षोडशोऽध्यायः ॥

**॥ ಹದಿನಾರನೆಯ ಅಧ್ಯಾಯ ॥**

## ಸನಕಾದಿಗಳ ಶಾಪಕ್ಕೆ ಪೀಠಿಕಾ

ಮೈತ್ರೇಯರು ವಿದುರನಿಗೆ ಈ ಅಧ್ಯಾಯದಲ್ಲಿ, ಜಯ ವಿಜಯರಿಗೆ ಶಾಪವನ್ನೂ, ಸನಕಾದಿಗಳು ಕೊಟ್ಟ ಶಾಪಮೋಕ್ಷವನ್ನೂ ಭಗವದ್ಭಕ್ತರ ಮಹಿಮೆಯನ್ನೂ, ಆ ಸನಕಾದಿಗಳು ನಿರಂತರ ಸಮಾಧಿಯೋಗವುಳ್ಳವರಾಗಿ, ಪರಮಾತ್ಮನನ್ನು ಉಪಾಸನೇ ಮಾಡಿದ್ದರಿಂದಲೇ, ಅಂತಹ ಶಾಪಾನುಗ್ರಹಶಕ್ತರಾದರೆಂದೂ, ಇದರಿಂದ ಶ್ರೀಪರಮಾತ್ಮನು ನಿರವಧಿಕ ಮಹಾಮಹಿಮನೆಂಬುದು ವ್ಯಕ್ತವಾಗುತ್ತೆಂದೂ ನಿರೂಪಿಸುತ್ತಾರೆ:-

ಕಶ್ಯಪ ಪ್ರಜಾಪತಿಗಳಿಂದ, ಪರರ ತೇಜಸ್ಸನ್ನು ನಾಶಪಡಿಸುವ ಮಹಾ ತೇಜಸ್ಸುಳ್ಳ ವೀರ್ಯವನ್ನು ದಿತೀದೇವಿಯು ಗರ್ಭದಲ್ಲಿ ಧರಿಸಿದ ನಂತರ, ಎಲ್ಲಿ ಗರ್ಭಗಳಿಗೆ ಮರಣ ಉಂಟಾಗುತ್ತದೋ ಎಂಬ ಭಯದಿಂದ, ಆ ಗರ್ಭವನ್ನು ಒಂದು ನೂರು ವರ್ಷ ಕಾಲ ತನ್ನ ಉದರದಲ್ಲೇ ಧರಿಸಿದಳು. ಆಗ ಆ ಗರ್ಭದಿಂದ ದಿಕ್ಕು ದಿಕ್ಕೆಲ್ಲಾ ಕತ್ತಲಿಂದ ಆವರಿಸಲ್ಪಟ್ಟಿತು. ಇದ್ದಕ್ಕಿದ್ದ ಹಾಗೆಯೇ ಭಯಂಕರವಾದ ಕತ್ತಲು ದಿಕ್ಕುಗಳನ್ನೆಲ್ಲಾ ಆವರಿಸುತ್ತಿರುವುದನ್ನು ದೇವತೆಗಳೂ, ಇಂದ್ರಾದಿ ಲೋಕಪಾಲಕರೂ ನೋಡಿ,

ಭಯಪಟ್ಟರು. ಅದನ್ನು ಮುಂದಿನ ಅನರ್ಥ ಸೂಚಕವೆಂದು ಭಾವಿಸಿ ಎಲ್ಲರೂ ಬ್ರಹ್ಮದೇವರ ಸಮೀಪಕ್ಕೆ ಹೋಗಿ ನಮಸ್ಕರಿಸಿ, ಕೈ ಮುಗಿದುಕೊಂಡು ವಿನಯದಿಂದ ಹೀಗೆ ವಿಜ್ಞಾಪಿಸಿಕೊಂಡರು:-

ಎಲೈ ಸಕಲಜಗತ್ತಿಗೂ ಆಶ್ರಯರಾಗಿ, ಜಗತ್ತನ್ನು ರಕ್ಷಿಸುವವರಲ್ಲಿ ಪ್ರಥಮರೂ, ಗ್ಪ ರುಡ ಶೇಷ ರುದ್ರಾದಿ ದೇವೋತ್ತಮರಿಂದ ವಂದ್ಯರೂ ಆದ ಕಾರಣ ದೇವದೇವರಾದ ಬ್ರಹ್ಮದೇವರೇ! ನೀವು ಸಕಲ ಕಾಲಗಳಲ್ಲೂ ತಿರೋಹಿತವಾಗದ ದಿವ್ಯಜ್ಞಾನಿಗಳಾದ ಕಾರಣ, ಈಗ ಲೋಕವನ್ನೆಲ್ಲಾ ಆವರಿಸಿಕೊಂಡು ಬರುತ್ತಿರುವ ಕತ್ತಲೆಯು ಏನು? ಯಾತಕ್ಕೆ? ಎಂಬ ವಿಚಾರಗಳನ್ನು ತಿಳಿದವರಾಗಿರುತ್ತೀರಿ. ಈ ಭಯಂಕರವಾದ ಕತ್ತಲಿನಿಂದ ನಮ್ಮ ನಿತ್ಯಕರ್ಮಾದಿಗಳು ನಿಲ್ಲುವ ಸಂಭವವೂ, ನಮಗೆ ಮನೋಭ್ರಾಂತಿಯನ್ನುಂಟು ಮಾಡತಕ್ಕದ್ದೂ ಆಗಿದೆ. ನೀವು ನಿಮ್ಮಿಂದ ಸೃಷ್ಟರಾದ, ಇತರರಿಂದ ಸೃಷ್ಟರಾದ ಸಕಲಪ್ರಾಣಿಗಳ ಮನೋಭಾವನೆಯನ್ನು ತಿಳಿದಿರುತ್ತೀರಿ. ಇಂತಹ ವಿಜ್ಞಾನವೆಂಬ ದಿವ್ಯಶಕ್ತಿಯುಳ್ಳ ನಿಮಗೆ ನಮಸ್ಕಾರಗಳು. ಈಗ ಉಂಟಾಗಿರುವ ವಿಪತ್ಸೂಚಕವಾದ ಭಗವದಿಚ್ಛಾರೂಪವಾದ ತಮಸ್ಸಿನ ಸ್ವರೂಪವನ್ನು ನೀವು ತಿಳಿದಿದ್ದೀರಿ. ಏಕೆಂದರೆ ನೀವು ಪರಮಾತ್ಮನಿಂದ ಉತ್ಪನ್ನರಾಗಿ ಆತನ ಕೃಪಾಪಾತ್ರರಾಗಿರುತ್ತೀರಿ. ಆದುದರಿಂದ ಸತ್ವರಜಸ್ತಮೋಗುಣಗಳ ಉದ್ರೇಕಗಳಿಂದ ನಾವು ಹೇಗೆ ಬಂಧಿತರಾಗುವೆವೋ ಆದರಂತೆ ನೀವು ಬಾಧಿತರಾಗುವುದಿಲ್ಲ. ಆ ಗುಣಗಳು ಸೃಷ್ಟಿಕಾರ್ಯಕ್ಕಾಗಿ ನಿಮ್ಮ ಅಂತರ್ಯಾಮಿ ಪರಮಾತ್ಮನ ಸಂಕಲ್ಪದಂತೆ ನಿಮ್ಮ ಅಧೀನಗಳಾಗಿವೆ. ಇಂತಹ ಮಹಿಮರಾದ ನಿಮಗೆ ನಮಸ್ಕಾರ.

ನೀವು ಅನನ್ಯಭಾವದಿಂದ ಸದಸದಾತ್ಮಪ್ರಪಂಚವನ್ನು ತನ್ನಲ್ಲಿ ಧರಿಸಿ ಸರ್ವೋತ್ಕೃಷ್ಟನೂ, ಜ್ಞಾನಮಯನೂ ಆದ ಪರಮಾತ್ಮನನ್ನು ಮನಸ್ಸಿನಿಂದ ಯಾವಾಗಲೂ ಧ್ಯಾನಿಸಿ ಧರಿಸಿರುತ್ತೀರಿ. ಇಂತಹ ಸ್ಪಷ್ಟವಾದ ಯೋಗವುಳ್ಳವರೂ, ಶ್ವಾಸನಿರೋಧಿಸಿ, ಇಂದ್ರಿಯಜಯವುಳ್ಳವರೂ, ಪರಿಶುದ್ಧರಾದವರೂ ಆದ ನಿಮ್ಮನ್ನು ಯಾರು ಆಶ್ರಯಿಸಿ ನಿಮ್ಮನುಗ್ರಹವನ್ನು ಪಡೆಯುವರೋ ಅವರ ಎಲ್ಲಾ ಭಯಗಳೂ ಪರಿಹಾರಗಳಾಗುವವು. ಯಾವ ನಿಮ್ಮಾಜ್ಞೆಯೆಂಬ ಶಾಸನಕ್ಕೆ ಒಳಪಟ್ಟು, ದೇವಾದಿ ಸಕಲ ಪ್ರಜೆಗಳು ಮೂಗು ದಾರದಿಂದ ವಶವನ್ನು ಹೊಂದುವ ಪಶುವಿನಂತೆ, ನಿಮ್ಮಧೀನರಾಗಿ ವ್ಯಾಪಾರಗಳನ್ನು ಮಾಡುತ್ತಾರೋ, ಅಂತಹ ಸರ್ವರಲ್ಲೂ ಮುಖ್ಯ ಪ್ರೇರಕರಾಗಿ ಆತ್ಮಸ್ವರೂಪರಾದ ನಿಮಗೆ ನಮಸ್ಕಾರ. ನಿಮಗೆ ಸರ್ವರೂ ಪೂಜೆಯನ್ನು ಸಲ್ಲಿಸುತ್ತಾರೆ. ಈಗ ನೀವು ಸತ್ವಗುಣವನ್ನು ಉದ್ರೇಕಿಸಿ, ತಮಸ್ಸಿನಿಂದ ಕರ್ಮಲೋಪವುಳ್ಳ ದಿಗ್ಭ್ರಾಂತರಾದ ನಮ್ಮನ್ನು ನಿಮ್ಮ ಜ್ಞಾನಪ್ರಕಾಶಗಳಾದ ದಿವ್ಯಕಣ್ಣುಗಳಿಂದ ಕೃಪಾದೃಷ್ಟಿಯಿಂದ ನೋಡಿ ಉದ್ಧರಿಸುವವರಾಗಿರಿ ಮತ್ತು ಸೂರ್ಯಾದಿ ತೇಜಸ್ಸುಗಳನ್ನು ಮುಚ್ಚಿ

ಲೋಕವನ್ನು ಕತ್ತಲು ಮಾಡುತ್ತಿರುವುದನ್ನು ತಪ್ಪಿಸಿ, ಲೋಕಕ್ಕೆ ಪ್ರಕಾಶವನ್ನುಂಟುಮಾಡಿರಿ! ಎಂದು ಪ್ರಾರ್ಥಿಸಿದರು. ದೇವತೆಗಳ ಈ ಮಾತುಗಳನ್ನು ಬ್ರಹ್ಮದೇವರು ಕೇಳಿ ನಗುತ್ತಾ ಪ್ರೀತಿಪೂರ್ವಕವಾಗಿ ಹೀಗೆ ಹೇಳಿದರು:-

## ವೈಕುಂಠ ಲೋಕದ ವರ್ಣನೆ

ಎಲೈ ದೇವತೆಗಳಿರಾ! ನನ್ನಮಾನಸ ಪುತ್ರರಾದ ಸನಕಾದಿ ಋಷಿಗಳು, ನಿಮ್ಮ ಪೂರ್ವಜರು, ಸರ್ವಸಂಗ ಪರಿತ್ಯಾಗ ಮಾಡಿ ಸ್ವೇಚ್ಛೆಯಿಂದ ಅಂತರಿಕ್ಷಾದಿ ಊರ್ಧ್ವಲೋಕಗಳಲ್ಲಿ ಸಂಚರಿಸುತ್ತಾ, ಸಕಲ ಲೋಕಗಳ ಜನರಿಂದಲೂ ನಮಸ್ಕರಿಸಲ್ಪಡುವ, ನಿರ್ಮಲಾತ್ಮನ ನಿವಾಸ ಸ್ಥಾನವಾದ ವೈಕುಂಠ ಲೋಕಕ್ಕೆ ಭಗವದ್ದರ್ಶನಾರ್ಥಿಗಳಾಗಿ ಹೋದರು. ಈ ವೈಕುಂಠದಲ್ಲಿ, ಪರಮಾತ್ಮನನ್ನು ನಿರ್ವ್ಯಾಜ ಭಕ್ತಿಯಿಂದ, ಕೇವಲ ಪರಮಾತ್ಮನ ಆಜ್ಞಾ ರೂಪವೆಂದೂ, ಪರಮಾತ್ಮನೇ ಸಂತುಷ್ಟನಾಗಲೆಂದೂ, ನಿರಂತರ ಸ್ವ ವಿಹಿತ ವೇದೋಕ್ತ ಕರ್ಮಗಳಿಂದ ಆರಾಧಿಸಿ ಭಗವತ್ಪ್ರಸಾದವನ್ನು ಪಡೆದು, ಯಾರು ಸಾರೂಪ್ಯ ಮುಕ್ತಿ ಯೋಗ್ಯರಾಗುತ್ತಾರೆಯೋ ಅಂತಹವರು ಈ ವೈಕುಂಠ ಪುರದಲ್ಲಿ ವಾಸಮಾಡತಕ್ಕ ಜನರಾಗುತ್ತಾರೆ.

ಇಲ್ಲಿ, ಆದಿ ಪುರುಷರಾದ, ಮುಕ್ತರಾಗತಕ್ಕ ಬ್ರಹ್ಮದೇವರು, ನಿಖಿಲ ವೇದಗಳಿಂದ ಪರಮಾತ್ಮನನ್ನು ಸ್ತುತಿಸುತ್ತಾ, ಪರಮಾತ್ಮಾ ನಂತರ ತಾವೂ ವೇದಪ್ರತಿಪಾದ್ಯಮಹಿಮೆಯುಳ್ಳವರಾಗಿ ವಾಸಿಸುತ್ತಾರೆ. ವೇದಪ್ರತಿಪಾದ್ಯನೂ, ಸರ್ವರಿಗೂ ಉಪಜೀವ್ಯನೂ, ಅನಂತಾನಂತ ರೂಪನಾದ ನಾರಾಯಣನು, ಇಲ್ಲಿ ಸರ್ವರನ್ನೂ ರಕ್ಷಿಸುತ್ತಾ ಇರುವನು. ಇಲ್ಲಿ ಜ್ಞಾನ ಪುಣ್ಯಗಳಿಂದ ಪ್ರಾಪ್ಯವಾದ ನಿಶ್ರೇಯಸವೆಂಬ ಉದ್ಯಾನವು, ಕಲ್ಪವೃಕ್ಷಗಳಂತೆ ಸರ್ವ ಮನೋರಥಗಳನ್ನೂ ಪೂರೈಸುವ, ಸಕಲ ಋತುಗಳಲ್ಲೂ ಫಲಿಸುವ ಎಲ್ಲಾ ಫಲಪುಷ್ಪಾ ದಿಗಳಿಂದ ಸಮೃದ್ಧಿಯಾಗಿರುವ ವೃಕ್ಷಗಳಿಂದ ಕೂಡಿ ಮನೋಹರ ವಾಗಿರುತ್ತದೆ. ಆ ವೃಕ್ಷಗಳು ಮೂರ್ತಿಮತ್ತಾದ ಪುರುಷಾರ್ಥಗಳೋ ಎಂಬಂತಿವೆ. ಇಲ್ಲಿ ಪುಣ್ಯ ಪುರುಷರು ಸ್ತ್ರೀಯರಿಂದ ಕೂಡಿ ದಿವ್ಯ ವಿಮಾನಗಳಲ್ಲಿ ಸಂಚರಿಸುತ್ತಾ ಶ್ರೀಪರಮಾತ್ಮನ ಅನಂತ ನಿರ್ಮಲವಾದ ಗುಣ, ಕರ್ಮಗಳ ಯಶಸ್ಸನ್ನು ದಿವ್ಯವಾಗಿ ಗಾನಮಾಡುತ್ತಿರುತ್ತಾರೆ. ಇವರಿಂದ ಲೋಕದ ಜನರ ಪಾಪಗಳು ನಾಶವಾಗುತ್ತವೆ. ಅಲ್ಲಿನ ಸರೋವರಗಳಲ್ಲಿರುವ ಮಧು ಮತ್ತು ಮಾಧವೀ ಪುಷ್ಪ ಗಳು ವಿಕಸಿತವಾಗಿ ಅರಳಲು, ಅದರ ಸುಗಂಧವನ್ನು ಸುಖಸ್ಪರ್ಶವುಳ್ಳ ವಾಯುವು ತೆಗೆದುಕೊಂಡು ಬಂದು ವೈಕುಂಠ ಬಹಿರ್ಭಾಗದಲ್ಲಿರುವ ಅಮುಕ್ತರನ್ನು ಆ ಸುಗಂಧಾತಿಶಯದಿಂದ ಭ್ರಾಂತರನ್ನಾಗಿ ಮಾಡುತ್ತದೆ.

ಮುಕ್ತರನ್ನು ಆನಂದಪಡಿಸುತ್ತದೆ. ವೈಕುಂಠದಲ್ಲಿ ಮುಕ್ತರೂ, ಅಮುಕ್ತರೂ ಬೇರೆ ಬೇರೆ ಪ್ರದೇಶಗಳಲ್ಲಿ

ವಾಸಿಸುತ್ತಾರೆ. ಅಮುಕ್ತರಲ್ಲಿ ದೇವಗಾಯಕರು, ಸಪ್ತಸ್ವರಗಳಿಂದ ಶ್ರೀಪರಮಾತ್ಮನ ಮಹಿಮೆಗಳನ್ನು ಗಾನಮಾಡುತ್ತಿರಲಾಗಿ, ಆ ಗಾನದ ಇಂಪಿನಿಂದ ಆಕರ್ಷಿಸಲ್ಪಟ್ಟ, ಪಾರಾವತ, ಸಾರಸ, ಚಕ್ರವಾಕ, ಹಂಸ, ಶುಕ, ತಿತ್ತಿರಿ ಮುಂತಾದ ಪಕ್ಷಿಗಳು ಆ ಸ್ಥಳಕ್ಕೆ ಬಂದು, ಮೂರು ಮೂರು ಅಕ್ಷರಗಳಿಂದ, ತಾವೂ ಆ ಗಾನವನ್ನು ಅನುಕರಿಸುತ್ತವೆಯೋ ಎಂಬಂತೆ ಕೋಲಾಹಲವನ್ನು ಮಾಡುತ್ತವೆ.

ಆಗ ಭಕ್ತರು ತುಲಸೀ, ಮಂದಾರ, ಮಲ್ಲಿಗೆ, ಕಮಲ ಮುಂತಾದ ಪುಷ್ಪ ಗಳಿಂದ ಶ್ರೀಹರಿಯ ಪಾದಾರವಿಂದಗಳನ್ನು ಪೂಜಿಸುತ್ತಾರೆ. ತುಳಸೀಮಾಲೆ, ವನಮಾಲೆಗಳನ್ನು ಧರಿಸಿರತಕ್ಕ ಶ್ರೀಹರಿಗೆ ಈ ಪುಷ್ಪ ಪೂಜೆಯಿಂದ ಏನೂ ಪ್ರಯೋಜನವಿಲ್ಲದ್ದರಿಂದ ಭಕ್ತರಲ್ಲಿ ಅನುಗ್ರಹಮಾಡುವುದಕ್ಕಾಗಿ ಶ್ರೀಪರಮಾತ್ಮನು ತನ್ನ ಪಾದಗಳಲ್ಲಿ ಸಮರ್ಪಿಸಿದ ತುಳಸೀಮಾಲೆಯನ್ನೂ, ದಳಗಳನ್ನೂ ಕೈಯಿಂದೆತ್ತಿ ಆಘ್ರಾಣಿಸುವನು. ಅದನ್ನು ನೋಡಿ ಎಲ್ಲಾ ದೇವತೆಗಳೂ ಶ್ರೀತುಳಸಿಯನ್ನು ಗಂಧದಲ್ಲಿ ಎಷ್ಟು ಶ್ರೇಷ್ಠಳೆಂದು ಕೊಂಡಾಡುವರು ಮತ್ತು ಶ್ರೀಹರಿಪಾದಾರ್ಪಿತ ತುಲಸೀ ಪುಷ್ಪಗಳ ಸುವಾಸನೆಯು ಘಮಘಮಿಸುತ್ತಿರುವುದನ್ನು ತಾವೂ ಆಘ್ರಾಣಿಸಿ ಸುಖಪಡುವರು. ಶ್ರೀಹರಿಯು ಅವರಿಂದ ಈ ರೀತಿಯಾಗಿ ನಿತ್ಯವೂ ಅರ್ಚಿಸಲ್ಪಡುವನು. ಭಕ್ತರು ಹರಿಪಾದದಲ್ಲಿನ ಸಮರ್ಪಿಸಿದ ಕುಂದ, ಮಂದಾರ, ಕುರಬ, ಉತ್ಪಲ, ಚಂಪಕ, ಊರ್ಣ, ಪುನ್ನಾಗ, ನಾಗ, ಬಕುಲ, ಪದ್ಮ, ಪಾರಿಜಾತಾದಿ ಸುಗಂಧ ಪುಷ್ಪ ಗಳಿಂದ ಅರ್ಚಿಸಿರಲಾಗಿ, ಶ್ರೀ ಹರಿಯು ಶ್ರೀತುಲಸೀದಳವನ್ನು ಮಾತ್ರ ತೆಗೆದುಕೊಂಡು ಆ ಗಂಧವನ್ನು ಆಘ್ರಾಣಿಸುವುದರಿಂದ, ಆ ತುಳಸಿಯು ಏನು ಧನ್ಯಳೊ! ಎಂದು ಋಷಿಗಳು ಕೊಂಡಾಡುತ್ತಾರೆ.

ಸಂಪೂರ್ಣ ಯೌವ್ವನವತಿಯರೂ, ಸರ್ವ ಸುಲಕ್ಷಣ ಶೃಂಗಾರಗಳಿಂದ ಶೋಭಿಸುತ್ತಿರುವ ಅನೇಕ ಪುಣ್ಯ ಸ್ತ್ರೀಯರು, ವಜ್ರ ವೈಢೂರ್ಯಾ ಇಂದ್ರನೀಲ, ಮರಕತ ಸುವರ್ಣಾದಿಗಳಿಂದ ರಚಿತ ದಿವ್ಯವಿಮಾನಗಳಲ್ಲಿ ಕುಳಿತು, ಆ ಪರಮಾತ್ಮನಲ್ಲೇ ಸರ್ವಭಾವಗಳಿಂದಲೂ ಮನಸ್ಸುಳ್ಳವರಾಗಿ, ರಜೋಯುಕ್ತವಾದ ಕಾಮಾದಿ ರಹಿತರಾಗಿ, ಯಾವಾಗಲೂ ಶ್ರೀಪರಮಾತ್ಮನನ್ನು ತಮ್ಮ ಕಣ್ಣಿನಿಂದ ನೋಡಿ ಮಾತ್ರ ಸುಖಪಡುವುದಕ್ಕಾಗಿ ಸಮೂಹ ಸಮೂಹವಾಗಿ ಸಂಚರಿಸುತ್ತಿರುವರು. ಅವರ ಸುಂದರವಾದ ಮುಖಗಳು ನಿರ್ಮಲವಾದ ಮಂದಹಾಸದಿಂದ ಕೂಡಿ, ಅವರ ಸರ್ವಾವಯವ ಸುಲಕ್ಷಣದಿಂದ ವೈಕುಂಠದಲ್ಲಿ ಶೃಂಗಾರವೆಂಬ ರಸವು ಉತ್ಕೃಷ್ಟವಾಗಿ ಪ್ರಕಟಿತವಾಗಿರುವುದು. ಈ ಸ್ತ್ರೀಯರು ನಿರಂತರ ಪರಮಾತ್ಮನನ್ನು ನೋಡುತ್ತಾ, ದೂರದಿಂದ ಪರಮಾತ್ಮನಿಗೆ ನಮಸ್ಕಾರ ಮಾಡುತ್ತಿರುವುದರಿಂದಲೇ ತೃಪ್ತರಾಗಿರುತ್ತಾರೆ.

## ವೈಕುಂಠದಲ್ಲಿ ಲಕ್ಷ್ಮೀದೇವಿ

ವೈಕುಂಠದಲ್ಲಿ ಶ್ರೀಪರಮಾತ್ಮನ ಮಹಿಮೆಯನ್ನೂ ವೈಭವವನ್ನೂ ಹೇಗೆ ವರ್ಣಿಸಲು ಸಾಧ್ಯವು? ಏಕೆಂದರೆ ಮಧ್ಯಮ ಭಗವದುಪಾಸಕರಾದ ನಾವು, ಶ್ರೀಪರಮಾತ್ಮನ ಅನುಗ್ರಹವನ್ನು ಬಯಸಿ ಪರಮಾತ್ಮನ ಉಪಾಸನೆಯನ್ನು ಮಾಡುತ್ತೇವೆ. ಆದರೆ, ಜನನಾದಿ ಸರ್ವದೋಷಶೂನ್ಯಳೂ ನಿತ್ಯಮುಕ್ತಳೂ, ಸರ್ವಸಾರ ಸೌಂದರ್ಯಮೂರ್ತಿಯೂ ಆದ, ಆ ರಮಾದೇವಿಯು ಕೇವಲ ತನ್ನ ಸಂತೋಷ ಉತ್ಸಾಹದಿಂದಲೇ, ನಿರಪೇಕ್ಷೆಯಿಂದ ಆ ದಿವ್ಯಸ್ಫಟಿಕ ಭಂಗಾರಗಳಿಂದ ರಚಿತವಾದ ಗೋಡೆಯುಳ್ಳ, ಶ್ರೀಹರಿಯ ಅಂತಃಪುರದಲ್ಲಿ ತನ್ನ ಕಾಲಿನ ಗೆಜ್ಜೆ, ನೂಪುರಗಳನ್ನು ಸಂಚಾರದಿಂದ ಕ್ವಣಿತ ಕಿಂಕಿಣೀ ಶಬ್ದಮಾಡಿಸುತ್ತಾ, ತನ್ನ ಕರಕಮಲದಲ್ಲಿ ಹಿಡಿದಿರುವ ದಿವ್ಯಕಮಲದಿಂದ, ನೆಲವನ್ನು ಗೋಡೆಗಳನ್ನೂ ಗುಡಿಸುತ್ತಿರುವಳೋ ಎಂಬಂತೆ ತೋರುತ್ತಿರುವಳು. ಅಪ್ರತಿಮ ಸೌಂದರ್ಯವತಿಯಾದ ಲಕ್ಷ್ಮೀದೇವಿಯು, ತನ್ನ ಪ್ರಿಯ ಸಖಿಯರಿಂದ ಕೂಡಿಕೊಂಡು ಉದ್ಯಾನವನಕ್ಕೆ ಹೋಗಿ, ಅಲ್ಲಿ ನವರತ್ನಖಚಿತಗಳಾದ ಸ್ವಚ್ಛ ಸ್ಫಟಿಕ ಸೋಪಾನಗಳಿಂದಲೂ, ದಿವ್ಯವೃಕ್ಷಗಳಿಂದ ಸುತ್ತಲೂ ಅಲಂಕೃತಗಳಾದ ಕೊಳಗಳ ಸಮೀಪದಲ್ಲಿ ಕುಳಿತು, ಶ್ರೀ ಪರಮಾತ್ಮನನ್ನು ತುಳಸೀ ಮಂಜರಿಗಳಿಂದ ಪೂಜಿಸಿ, ಆ ಕೊಳದ ನಿರ್ಮಲ ಅಮೃತ ಸದೃಶವಾದ ಜಲದಲ್ಲಿ ಪ್ರತಿಬಿಂಬಿಸುವ, ಹಾರಾಡುತ್ತಿರುವ ತನ್ನ ಮುಂಗುರುಳುಗಳನ್ನೂ, ಸುಂದರವಾದ ಮುಖವನ್ನೂ, ಸ್ವಲ್ಪ ಉಬ್ಬಿದಂತೆ ಕಾಣುವ ಕೆಂಪಾದ ತುಟಿಗಳುಳ್ಳ ಬಾಯಿಯನ್ನೂ ನೋಡಿ, ಇವುಗಳು ಪರಮಾತ್ಮನಿಂದ ಚುಂಬಿಸಲ್ಪಟ್ಟವುಗಳು, ಎಂಬ ಭಾವ ವುಳ್ಳವಳಾಗುವಳು.

ಈ ವೈಕುಂಠ ಲೋಕವನ್ನು ಪಾಪಗಳಿಂದ ಹತರಾದವರೂ, ವೇದವಿದ್ಯೆಯನ್ನು ಗುರೂಪದೇಶದಿಂದ ಕಲಿತು ಭಗವದ್ಗುಣಾನುವಾದವನ್ನು ಮಾಡದೇ ಇದ್ದವರು, ವಿಷಯೋದ್ರೇಕವನ್ನೂ ಬುದ್ಧಿನಾಶವನ್ನೂ ಮಾಡತಕ್ಕ ಕೆಟ್ಟ ವಿಚಾರಗಳನ್ನೇ ಕೇಳತಕ್ಕವರೂ, ಎಂದಿಗೂ ಹೊಂದಲಾರರು. ಭಗವದ್ಭಕ್ತ್ಯಾದಿಗಳನ್ನು ಕಳೆದುಕೊಂಡು, ಸ್ತ್ರೀಸಂಗ ಮೊದಲಾದ ದುರ್ವಿಷಯಗಳನ್ನು ವರ್ಣಿಸತಕ್ಕ ಕಥೆಗಳನ್ನು ಕೇಳುವವರು, ಅದರಲ್ಲಿ ಎಷ್ಟೆಷ್ಟು ಆಸಕ್ತರಾಗುತ್ತಾರೋ, ಅದಕ್ಕನುಗುಣವಾಗಿ ತಾರತಮ್ಯದಿಂದ ತಮಸ್ಸಿನಿಂದ ಹಿಡಿದು ಅಂಧಂತಮಸ್ಸಿನವರಿಗೂ, ಘೋರವಾದ ನರಕಗಳನ್ನು ಹೊಂದುತ್ತಾರೆ.

ಪರಮಾತ್ಮನಿಂದ ವಿಮುಖರಾದವರ ಈ ಮಾರ್ಗವು ಹಾ! ಕಷ್ಟವು. ಕೆಲವರು ಜ್ಞಾನಸಾಧನಕ್ಕೆ ಯೋಗ್ಯವಾದ ಮನುಷ್ಯ ಜನ್ಮವನ್ನು ಹೊಂದಿದ್ದರೂ ಜ್ಞಾನಕ್ಕಾಗಿ ಪ್ರಯತ್ನಿಸುವುದಿಲ್ಲ. ಮಾನವರ ಉನ್ನತಿಗೆ ಬೇಕಾದ ಶಾಸ್ತ್ರಜನ್ಯ ಜ್ಞಾನವನ್ನೂ, ವಿಹಿತ ಧರ್ಮ ಕರ್ಮ ಪದ್ಧತಿಗಳನ್ನೂ, ಸದಾಚಾರಾದಿಗಳನ್ನೂ

ಗುರುಗಳನ್ನಾಶ್ರಯಿಸಿ ಶಿಷ್ಯವೃತ್ತಿಯಿಂದ ಪಡೆಯುವುದಿಲ್ಲ. ಪರಮಾತ್ಮನ ಆರಾಧನೆಯನ್ನು ಮಾಡಿ ಸಂಸಾರ ಬಂಧನವನ್ನು ಕಳೆದುಕೊಳ್ಳುವುದಿಲ್ಲ. ಏಕೆಂದರೆ ಅವರು ಅವಿದ್ಯೆಯನ್ನು ಆಶ್ರಯಿಸಿ ಅದರಿಂದ ಮೋಹಿತರಾಗಿರುತ್ತಾರೆ. ಇವರು ಅಸುರೀ ಸ್ವಭಾವವುಳ್ಳವರು.

ದೈವೀ ಸ್ವಭಾವವುಳ್ಳ ಸಜ್ಜನರು ದೇವತೆಗಳಿಗೆ ಸ್ವಾಮಿಯಾದ ಶ್ರೀಹರಿಯನ್ನು, ಅವನ ಆಜ್ಞಾರೂಪಗಳಾದ ವೇದವಾಕ್ಯಗಳಿಂದ ಉಂಟಾದ ಸುಜ್ಞಾನಭಕ್ತಿಗಳಿಂದ ಅರ್ಚಿಸಿ, ವೇದೋಕ್ತ ಕರ್ಮಗಳನ್ನು ಭಗವತ್ಪೂಜಾ ರೂಪದಿಂದ ಆಚರಿಸಿ, ತಮ್ಮ ಸದ್ಗುಣಗಳಿಂದ ಎಲ್ಲರ ಪ್ರೀತಿಗೂ ಪಾತ್ರರಾಗುತ್ತಾರೆ. ಅವರು ಯಮಪಟ್ಟಣವನ್ನು ಎಂದಿಗೂ ನೋಡಲಾರರು. ಅವರು ಪರಮಾತ್ಮನನ್ನು ವೇದಾದಿಗಳಿಂದ ಸ್ತುತಿಸುತ್ತಾ, ಭಗವದ್ಗುಣಾನುವಾದಗಳಿಂದ ಉಂಟಾದ ಆನಂದದಿಂದ ಪುಳಕಿತರಾಗಿ, ಕಣ್ಣುಗಳಿಂದ ಆನಂದಬಾಷ್ಪ ಗಳನ್ನು ಸುರಿಸುತ್ತಾ, ಪರಮಾತ್ಮನಲ್ಲೇ ಲೀನವಾದ ಮನಸ್ಸುಳ್ಳವರಾಗುವರು.

ಹೀಗೆ ಜಗತ್ತಿಗೆ ಗುರುವಾದ ಶ್ರೀಹರಿಯಲ್ಲಿ, ನಿರಂತರ ಮನಸ್ಸನ್ನಿಡುವ ಅಭ್ಯಾಸ ಬಲದಿಂದ, ಅವರು ಸಮಾಧಿಯೋಗವನ್ನು ಪಡೆಯುವರು. ಆ ಯೋಗಮಹಾತ್ಮೆಯಿಂದ ಅವರು, ರುದ್ರಾದಿಗಳ ಲೋಕಗಳಿಂದಲೂ ಅತ್ಯಂತ ಶ್ರೇಷ್ಠವಾದ, ಅನೇಕ ತೋಜೋಮಯ ರತ್ನಮಯ, ಸರ್ವಾಲಂಕಾರ ಸರ್ವಸುಖಪ್ರದಗಳಾದ ಅನೇಕ ವಿಮಾನಗಳಿಂದ ಕೂಡಿದ ಆ ಜಗದೇಕ ವಂದ್ಯನಾದ ಶ್ರೀಮನ್ನಾರಾಯಣನ ನಿವಾಸಸ್ಥಾನವೆನಿಸುವ ವೈಕುಂಠಲೋಕವನ್ನು ಪಡೆಯುವರು. ಅಲ್ಲಿ ಅವರು ತಮಗೆ ಯೋಗ್ಯವಾದ ಸರ್ವಸುಖಗಳ ಪ್ರಾಪ್ತಿರೂಪ ಆನಂದವನ್ನೂ, ಮೋದವನ್ನೂ ಹೊಂದುವರು.

## ವೈಕುಂಠಕ್ಕೆ ಸನಕಾದಿಗಳ ಆಗಮನ

ಈ ರೀತಿ ವೈಭವವುಳ್ಳ ವೈಕುಂಠಕ್ಕೆ ಸಮವಯಸ್ಕರೂ, ರೂಪ, ಶೀಲಾದಿಗುಣಗಳುಳ್ಳ ಸನಕ, ಸನಂದ, ಸನಾತನ, ಸನತ್ಕುಮಾರರೆಂಬ ನಾಲ್ಕುಜನ ನನ್ನ ಮಾನಸಪುತ್ರರಾದ ಮಹರ್ಷಿಗಳು ಹೋಗಿ, ಅಲ್ಲಿ ಅನೇಕ ಗೋಪುರಗಳಿಂದ ಕೂಡಿದ ಆರುಬಾಗಿಲುಗಳನ್ನು ಅಡ್ಡಿಇಲ್ಲದೇ ದಾಟಿ, ಏಳನೆಯ ಬಾಗಿಲಿನಲ್ಲಿ, ನೀಲಮೇಘ 'ಶ್ಯಾಮವರ್ಣರೂ, ನಾಲ್ಕು ಕೈಗಳುಳ್ಳವರೂ, ಕಿರೀಟಕುಂಡಲಾದಿ ಆಭರಣಗಳೆಂಬ ವೇಷದಿಂದ ಅಲಂಕೃತರೂ, ಗದಾಪಾಣಿಗಳೂ ಸ್ವಲ್ಪ ಮದದಿಂದ ಕೂಡಿದವರಂತೆ ಕಾಣುತ್ತಿರುವ ಇಬ್ಬರು ದ್ವಾರಪಾಲಕರನ್ನು ನೋಡಿದರು. ಅವರ ದೂರದೂರವಿರುವ ನಾಲ್ಕು ಕೈಗಳ ಮಧ್ಯಭಾಗದಲ್ಲಿ ಎದೆಯ ಮೇಲೆ ಮತ್ತವಾದ ದುಂಬಿಗಳಿಂದ ಕೂಡಿದ ವನಮಾಲೆಯು ಧರಿಸಲ್ಪಟ್ಟಿತ್ತು. ಅವರು ವಕ್ರವಾದ ನೋಟದಿಂದ ಕೂಡಿದ, ಕೆಂಪಾದ ಕಣ್ಣುಳ್ಳವರೂ ಸ್ವಲ್ಪ ಕೋಪಿಷ್ಠರಾಗಿರುವಂತೆ ತೋರುವವರೂ

ಆಗಿದ್ದರು. ಇವರು ಆ ಬಾಗಿಲಿನಲ್ಲಿ ಒಳಕ್ಕೆ ಹೋಗುವವರನ್ನೂ, ಹೊರಕ್ಕೆ ಬರುವವರನ್ನೂ ನೋಡುತ್ತಾ ನಿಂತಿದ್ದರು.

ಸರ್ವಸ್ವತಂತ್ರನಾದ ಪರಮಾತ್ಮನು, ಸರ್ವಗತನೆಂದು ಚಿಂತಿಸುತ್ತಾ, ನಿರಪೇಕ್ಷರಾಗಿ ಭಗವದುಪಾಸನೆಯನ್ನು ಮಾಡುತ್ತಾ, ಸ್ವೇಚ್ಛೆಯಾಗಿ ಶಂಕೆ ಇಲ್ಲದೆ ಸರ್ವತ್ರ ಸಂಚರಿಸುತ್ತ, ತಮ್ಮ ಸಂಚಾರಕ್ಕೆ ಎಲ್ಲೂ ತಡೆಇಲ್ಲದ ಮಹಾಯೋಗಿಶ್ವರರಾದ, ವಾಯುವೇ ಆಹಾರವಾಗಿವುಳ್ಳ ಐದುವರುಷದ ಬಾಲಕರಂತೆ ಕಾಣುವ, ಬ್ರಹ್ಮಜ್ಞಾನಿಗಳಾದ, ಈ ಸನಕಸನಂದನಾದಿ ಋಷಿಗಳು ಸ್ವಲ್ಪ ವಿಲಕ್ಷಣವಾಗಿ ಕಾಣುತ್ತಿರುವ ಈ ದ್ವಾರಪಾಲಕರನ್ನು ನೋಡಿ, ತಾವು ಹೇಗೆ ಅಡ್ಡಿಇಲ್ಲದೇ ಆರುಬಾಗಿಲುಗಳಲ್ಲಿ ಪ್ರವೇಶಿಸಿದ್ದರೊ, ಅದರಂತೆಯೇ ಈ ಬಾಗಿಲೊಳಕ್ಕೆ ಹೋಗಲು ಪ್ರಯತ್ನಿಸಿದಾಗ, ಆ ದ್ವಾರಪಾಲಕರು, ತಮ್ಮ ಕೈಗಳಲ್ಲಿದ್ದ ನವರತ್ನಖಚಿತ ಭಂಗಾರದ ಕೋಲುಗಳನ್ನು ದಾರಿಗೆ ಅಡ್ಡಹಿಡಿದು ಒಳಕ್ಕೆ ಬಿಡಲಿಲ್ಲ.

ಆ ದಿಗ್ವಸ್ತ್ರಗಳನ್ನು ಧರಿಸಿದ್ದ, ಅಂದರೆ ಯಾವವಸ್ತ್ರಾದಿಗಳನ್ನೂ ಧರಿಸದೇಇದ್ದ, ಅಪ್ರತಿಹತ ತೇಜಸ್ವಿಗಳಾದ ಆ ನಾಲ್ಕು ಕುಮಾರರು, ತಡೆಯಲರ್ಹರಲ್ಲವೆಂದು ತೋರಿದರೂ, ಲಕ್ಷ್ಯಮಾಡದೆ, ದ್ವಾರಪಾಲಕರು ಅವರನ್ನು ತಡೆದು ಪರಮಾತ್ಮನಿಗೆ ವಿರೋಧವಾದ ಕಾರ್ಯವನ್ನು ಮಾಡಿದರು. ಅಂದರೆ ಜಯವಿಜಯರು ವೈಕುಂಠದ ಅಮುಕ್ತಸ್ಥಾನದಲ್ಲಿದ್ದರೂ ಬ್ರಹ್ಮರ ಶಾಪದಿಂದ ಕೃಷ್ಣಾವತಾರದ ಪರಿಯಂತರವಾಗಿ ಪರಮಾತ್ಮನಿಗೆ ವಿರೋಧವಾದ ಕರ್ಮಗಳನ್ನು ಮಾಡಿದರೆಂದೂ, ಅದು ಅವರಿಗೆ ಶಾಪಕ್ಕೆ ಕಾರಣವಾಯಿತೆಂದೂ ಅಭಿಪ್ರಾಯ. ಸರ್ವತ್ರ ಪೂಜ್ಯರಾದ ಸನಕಾದಿಗಳು, ಪರಮಾತ್ಮನ ದರ್ಶನಾಪೇಕ್ಷೆಯಿಂದ ಆ ವಜ್ರದ ಸ್ತಂಭ, ದ್ವಾರಗಳಿಂದಲೂ, ವಜ್ರದ ಹಲಗೆಗಳು ಭಂಗಾರದ ಕಟ್ಟಿನಿಂದ ವಿರಚಿತವಾದ ಆ ಏಳನೆಯ ಬಾಗಿಲೊಳಗೆ ಪ್ರವೇಶಿಸಲು ತಡೆಯಲ್ಪಟ್ಟವರಾಗಿ, ಸ್ವಲ್ಪವಾದ ಕೋಪದಿಂದ ಆ ದ್ವಾರಪಾಲಕರನ್ನು ನೋಡುತ್ತಾ ಈ ರೀತಿ ಹೇಳಿದರು:-

## ಜಯ ವಿಜಯರಿಗೆ ಶಾಪ ಪ್ರದಾನ

ಪರಮಾತ್ಮನನ್ನು ಅನೇಕವಿಧದಿಂದ ಉತ್ತಮವಾಗಿ ಪೂಜಿಸಿ ಈ ವೈಕುಂಠದಲ್ಲಿ ತಮಗೆ ಯೋಗ್ಯವಾದ, ಪರಮಾತ್ಮನ ಉನ್ನತ ಸೇವಾರೂಪವಾದ ಈ ದ್ವಾರಪಾಲಕರ ಪದವಿಯನ್ನು ಪಡೆದ, ಸಜ್ಜನರ ಮಾರ್ಗವನ್ನು ಅನುಸರಿಸುವರು ಯಾರು ತಾನೇ, ತಮ್ಮಂತೆ ಭಗವತ್ಸೇವಾ ನಿರತರಾದ ಸಜ್ಜನರನ್ನು ಸಂಶಯದಿಂದ ಶತ್ರುಗಳೆಂದು ಭಾವಿಸಿ, ಈ ವೈಕುಂಠ ದ್ವಾರದಲ್ಲಿ ತಡೆದಾರು? ಹಾಗೆ ತಡೆಯುವವರು, ತಾವು ಪರಮಾತ್ಮನಿಗೆ ಅಹಿತವನ್ನು ಮಾಡುವಂತವರಾದರೇ ತಮ್ಮಂತೆ

ಇತರರೂ ಮಾಡುತ್ತಾರೆಂಬ ಶಂಕೆಯುಳ್ಳವರಾಗುತ್ತಾರೆ. ಪ್ರಕೃಷ್ಟಾನಂದ ಸ್ವರೂಪನೂ, ಅಪ್ರತಿಹತ ಐಶ್ವರ್ಯವುಳ್ಳವನೂ, ಸರ್ವಪ್ರಾಣಿಗಳ ಹೃದ್ಗುಹಾವಾಸಿಯೂ, ಅಪ್ರಾಕೃತಶರೀರನೂ, ನಿರ್ವೈರನೂ, ಪರಮಶಾಂತಸ್ವರೂಪನೂ ಆದ ಪರಮಾತ್ಮನಿಗೆ ನಮ್ಮಿಂದ ಏನಾದರೂ ಭಯ ಉಂಟಾದೀತೆಂದು ತಿಳಿದು ನಮ್ಮನ್ನು ತಡೆದರೇನು! ಈ ದುರ್ಬುದ್ಧಿವುಳ್ಳ ಈ ಇಬ್ಬರು ದ್ವಾರಪಾಲಕರು?

ಲೋಕದಲ್ಲಿ ಜ್ಞಾನಿಗಳು, ಪರಮಾತ್ಮನು ಮುಕ್ತಾಮುಕ್ತ ಸರ್ವಪ್ರಾಣಿಗಳ ಒಳಗೂ ಹೊರಗೂ ಒಬ್ಬನೇ, ಆಕಾಶದಂತೆ ಅಚ್ಛಿದ್ರವ್ಯಾಪ್ತಿಯುಳ್ಳವನೆಂದು ತಿಳಿದು ತಮ್ಮಲ್ಲೂ, ಇತರರಲ್ಲೂ ಅಂತರ್ಯಾಮಿಯಾದ ಪರಮಾತ್ಮನೂ, ವೈಕುಂಠದಲ್ಲಿರುವ ಪರಮಾತ್ಮನೂ ಒಬ್ಬನೇ ಎಂದು ತಿಳಿದಿರುತ್ತಾರೆ.

ವೈಕುಂಠಲೋಕಕ್ಕೆ ಬಂದು ದೇವತೆಗಳ ವೇಷಧಾರಿಗಳಾದ ಈ ಇಬ್ಬರು ಬುದ್ಧಿಇಲ್ಲದ ಮೂರ್ಖರು, ತಮ್ಮಲ್ಲಿರುವ ಪರಮಾತ್ಮನೂ, ನಮ್ಮಲ್ಲಿರುವ ಪರಮಾತ್ಮನೂ, ಒಳಗಿರುವ ಪರಮಾತ್ಮನೂ ಬೇರೆಬೇರೆಯವನೆಂಬ ಬುದ್ಧಿಯುಳ್ಳವರೆಂದೂ, ಅದಕ್ಕಾಗಿಯೆ ನಮ್ಮನ್ನು ತಡೆದಿರುತ್ತಾರೆಂದೂ, ಪರಮಾತ್ಮನ ಅಂತರ್ಯಾಮಿ ಬಹಿರ್‍ರೂಪಗಳಿಗೆ ಭೇದವನ್ನು ತಿಳಿದಿದ್ದರಿಂದ ಅಧಃಪತನಕ್ಕೂ, ತಮಃಪ್ರಾಪ್ತಿಗೂ ಯೋಗ್ಯರೆಂದು ನಾವು ಭಾವಿಸುತ್ತೇವೆ. ಭಗವದಿಚ್ಛೆಗೆ ವಿರುದ್ಧವಾಗಿ ಇವರು ಬಾಗಿಲಲ್ಲಿ ನಮ್ಮನ್ನು ತಡೆದಿರುವುದರಿಂದ, ಇವರು ದೇವರಿಗೂ ಅಪರಾಧಮಾಡಿಂತಾಯಿತು. ಆದುದರಿಂದ ಇವರು ಶಿಕ್ಷಾರ್ಹರಾಗಿರುತ್ತಾರೆ. ಎಲೈ ಮಂದಮತಿಗಳಾದ ದ್ವಾರಪಾಲಕರೆ! ನೀವು ಭಗವಂತನ ಅವತಾರರೂಪಗಳಿಗೂ ಮೂಲರೂಪಕ್ಕೂ ಭೇದವೆಣಿಸಿ ಪಾಪಿಗಳಾಗಿರುವುದರಿಂದ, ಶೀಘ್ರದಲ್ಲಿಯೇ ನೀವು ಈ ವೈಕುಂಠವನ್ನು ಬಿಟ್ಟು, ಬೇರೆ ಲೋಕದಲ್ಲಿ ಮೂರು ಅಸುರ ಜನ್ಮಗಳನ್ನು ಪಡೆದು, ಪಾಪಕರ್ಮ ನಿರತರಾಗಿ, ಹರಿದ್ವೇಷಿಗಳಾಗಿರೆಂದು ಶಾಪಕೊಟ್ಟರು.

ಬ್ರಹ್ಮಾಸ್ತ್ರದಂತೆ ಘೋರವಾದ, ಪರಿಹಾರ್ಯವಲ್ಲದ, ಬ್ರಾಹ್ಮಣ ಶಾಪವನ್ನು ಜಯ ವಿಜಯರೆಂಬ ಈ ದ್ವಾರಪಾಲಕರು ಕೇಳಿ, ಭಯಪಟ್ಟವರಾಗಿ, ತಕ್ಷಣ ದೀನರಂತೆ ಆ ಸನಕಾದಿಗಳ ಕಾಲುಗಳನ್ನು ಮುಟ್ಟಿ ಸಾಷ್ಟಾಂಗ ನಮಸ್ಕಾರ ಮಾಡಿದರು. ನಂತರ ಜಯವಿಜಯರು ಸನಕಾದಿಗಳನ್ನು ಕುರಿತು, ಎಲೈ! ಪರಮಹಂಸರೇ! ನೀವು ನಿಮ್ಮ ಶಾಪದಿಂದ ನಾವು ಮಾಡಿದ ನಿಮ್ಮ ಅವಜ್ಞತಾರೂಪ ಅಪರಾಧಕ್ಕಿಂತ ಹೆಚ್ಚು ಶಿಕ್ಷೆಯನ್ನು ಕೊಟ್ಟು, ಅದರಿಂದ ಹಿಂದೆ ನಾವು ಮಾಡಿದ ಶ್ರೀ, ಬ್ರಹ್ಮದೇವತಾ ಅವಜ್ಞತೆಯ ಪಾಪಗಳೂ ನಾಶವಾಗುವಂತೆ ಅನುಗ್ರಹಿಸಿರುತ್ತೀರಿ. ಆದರೆ ನಮಗೆ ನಿಮ್ಮ ಶಾಪದಿಂದ ಘೋರವಾದ ಆಸುರೀ ಜನ್ಮವು ಬಂದು ಅದರಿಂದ ನಮಗೆ ಕಾಲಾಂತರದಲ್ಲಿ ತಮಃಪ್ರಾಪ್ತಿ ಆಗದಂತೆಯೂ, ಘೋರರಾದ ಬೇರೆ ಅಸುರರು ಹುಟ್ಟುವಾಗ ಅವರಲ್ಲಿ ಆವಿಷ್ಟರಾಗಿ ನಾವು ಅಸುರ ಜನ್ಮದಲ್ಲಿ

ಹುಟ್ಟುವಂತೆಯೂ ಅನುಗ್ರಹಿಸಿರಿ. ನಾವು ಈಗ ಸ್ವಲ್ಪ ಪಶ್ಚಾತ್ತಾಪವನ್ನು ಪಟ್ಟಿರುವುದರಿಂದ ಆ ಮೂರು ಅಸುರ ಜನ್ಮಗಳಲ್ಲೂ, ಪರಮಾತ್ಮನ ನಿರ್ದೋಷ ಗುಣಪೂರ್ಣತ್ವ, ಸರ್ವೋತ್ತಮತ್ವಾದಿ ಗುಣಗಳ ಜ್ಞಾನವು ನಾಶವಾಗದೇ ಪ್ರಕಾಶವಾಗಿರಲಿ! ಎಂದು ಬೇಡಿಕೊಂಡರು.

## ಸನಕಾದಿಗಳಿಗೆ ಭಗವಂತನ ದರ್ಶನ

ಮುಕ್ತಸ್ಥಾನದಲ್ಲಿದ್ದ ಪರಮಾತ್ಮನು, ಅಮುಕ್ತಸ್ಥಾನದ ಏಳನೆಯ ಬಾಗಿಲಿನಲ್ಲಿ, ತನ್ನ ದ್ವಾರಪಾಲಕರಾದ ಜಯವಿಜಯರಿಂದ ಸನಕಾದಿಗಳು ತಡೆಯಲ್ಪಟ್ಟು, ಅವರಿಗೆ ಪರಸ್ಪರ ಆದ ಸಂಭಾಷಣೆಯನ್ನೂ ತಿಳಿದವನಾಗಿ, ಯಾವ ಪರಮಾತ್ಮನ ಪಾದಕಮಲಗಳನ್ನು ಕಾಣಲು ಪರಮಹಂಸರೂ, ಮುನಿಗಳೂ, ಬಯಸುತ್ತಾರೋ, ಅಂತಹ ಶ್ರೀಹರಿಯು ತಾನೇ ಸನಕಾದಿಗಳು ಇದ್ದ ಸ್ಥಳಕ್ಕೆ ಲಕ್ಷ್ಮೀ ಸಹಿತನಾಗಿ ಬಂದನು. ತನ್ನ ದ್ವಾರಪಾಲಕರು ಮಾಡಿದ ಅಪರಾಧವು ತಾನೇ ಮಾಡಿದಂತಾಯಿತೆಂಬ ಭಾವದಿಂದ ಬಂದಿರುವನೋ ಎಂಬಂತೆ, ಅರ್ಘ್ಯಪಾದ್ಯಾಚಮನಾದಿ ಸಕಲ ಸತ್ಕಾರ ಸಂಭಾರ ಸಹಿತನಾಗಿ ಪರಮಾತ್ಮನು ಪ್ರತ್ಯಕ್ಷನಾಗಲು, ಆಗ ಸನಕಾದಿಗಳು ತಮಗೆ ಸಮಾಧಿ ಯೋಗದಲ್ಲಿ ದರ್ಶನ ಕೊಡುತ್ತಿದ್ದ ಸ್ವಾಮಿಯು ಈತನೇ ಎಂದು ತಿಳಿದು ಆ ಪರಮಾತ್ಮನನ್ನು ನೋಡುತ್ತಿದ್ದರು.

ಪ್ರತ್ಯಕ್ಷನಾದ ಪರಮಾತ್ಮನಿಗೆ ಪರಿವಾರದವರು ಹಂಸಪಕ್ಷಿಯ ರೆಕ್ಕೆಗಳಂತೆ ಶುಭ್ರವರ್ಣಗಳುಳ್ಳ ಚಾಮರ, ಬೀಸಣಿಗೆಗಳನ್ನು ಸುಖಸ್ಪರ್ಶವಾಗುವಂತೆ ಬೀಸುತ್ತಿದ್ದರು. ಮೇಲ್ಭಾಗದಲ್ಲಿ ಚಂದ್ರ ಕಿರಣಗಳನ್ನು ಸ್ರವಿಸುತ್ತಿರುವಂತೆ ಇದ್ದ ಶ್ವೇತಛತ್ರಿಯನ್ನು ಹಿಡಿದಿದ್ದರು. ಅದರಿಂದ ಸುಖಸ್ಪರ್ಶವುಳ್ಳ ವಾಯುವಿನಲ್ಲಿ ಮಿಶ್ರಿತವಾದ ತುಂತುರು ನೀರು ಸುರಿಸಲ್ಪಡುತ್ತಿತ್ತು. ದೇವರು ಶೀಘ್ರದಲ್ಲಿಯೇ ಅನುಗ್ರಹಮಾಡುವವನಂತೆ ಪ್ರಸನ್ನ ಮುಖವುಳ್ಳವನೂ, ಭಕ್ತರು ಆಶ್ರಯ ಪಡೆಯಲು ಬಯಸತಕ್ಕ ಉತ್ತಮ ನಿವಾಸಸ್ಥಾನ ಸದೃಶನೂ, ತನ್ನ ಸ್ನೇಹಪೂರ್ವಕದೃಷ್ಟಿಯಿಂದ ಭಕ್ತರ ಮನಸ್ಸನ್ನು ಆಕರ್ಷಿಸತಕ್ಕವನೂ, ಪದ್ಮನಾಭನೂ, ಇಂದ್ರನೀಲಮಣಿಯ ಕಾಂತಿಯಂತೆ ಹೊಳೆಯುವ ತನ್ನ ವಕ್ಷಸ್ಥಳದಲ್ಲಿ ವಾಸರಾದ ಲಕ್ಷ್ಮೀದೇವಿಯರಿಂದ ಕೂಡಿದವನೂ, ಕಂಠದಲ್ಲಿ ಬ್ರಹ್ಮಾಭಿಮನ್ಯವಾದ ಕೌಸ್ತುಭಕ್ಕೂ, ವಾಯುದೇವರಿಂದ ಅಭಿಮನ್ಯವಾದ ಚೂಡಾಮಣಿ ಎಂಬ ರತ್ನಕ್ಕೂ ಕಾಂತಿಪ್ರದನಾಗಿಯೂ, ಹಿರಣ್ಮಯವಾದ ಪೀತಾಂಬರಧಾರಿಯೂ ಝೇಂಕರಿಸುವ ದುಂಬಿಗಳಿಂದ ಆವೃತವಾದ ದಿವ್ಯ ಪರಿಮಳಯುಕ್ತ ವನಮಾಲೆ, ಕಾಂಚೀದಾಮ, ಕಂಕಣ, ಹಾರಾದಿಗಳನ್ನು ಧರಿಸಿ, ಬಲಗೈಯಿಂದ ಕಮಲ ಪುಷ್ಪ ವನ್ನು ಲೀಲೆಯಿಂದ ತಿರುಗಿಸುತ್ತಿದ್ದನು. ಮಿಂಚಿನಂತೆ ಹೊಳೆಯುವ ಚಂಚಲವಾದ ಮಕರಾಕಾರ ಕುಂಡಲಗಳನ್ನೂ, ಮುತ್ತಿನ ಕಿರೀಟ, ನಾನಾ ವಿಧ ರತ್ನದ ಹಾರಗಳನ್ನೂ ಧರಿಸಿ, ನಗುಮುಖವುಳ್ಳವನಾಗಿದ್ದನು.

ಇಂತಹ ಪರಮಾತ್ಮನನ್ನು ಸನಕಾದಿಗಳು ನೋಡಿ, ಆಹಾ! ನಮ್ಮಲ್ಲಿ ಅಂತರ್ಗತನಾದ ಆ ಶ್ರೀಪರಮಾತ್ಮನೇ ಮುಂದೆ ಪ್ರತ್ಯಕ್ಷನಾದನಲ್ಲಾ! ಎಂಬ ಸಂತೋಷದಿಂದ ನಲಿದಾಡಿದರು. ಅವರಿಗೆ ಎಷ್ಟು ನೋಡಿದರೂ ತೃಪ್ತಿ ಇಲ್ಲದಂತಾಯಿತು. ಭಕ್ತ್ಯುದ್ರೇಕದಿಂದ ತಮ್ಮ ಶಿರಸ್ಸಿನ ಮೇಲೆ ಕೈಗಳನ್ನು ಜೋಡಿಸಿಕೊಂಡು, ಏನೂ ಆಧಾರವಿಲ್ಲದೇ ಅಂತರಾಳದಲ್ಲಿ ತಮ್ಮ ಯೋಗಶಕ್ತಿಯಿಂದ ದಂಡದಂತೆ ನಮಸ್ಕರಿಸಿದರು.

ಇದರಿಂದ ಅವರು ಪರಮಾತ್ಮನ ಶಿರಸ್ಸೂ, ಪಾದಾದಿ ಅಂಗಾಂಗಗಳು ಎಲ್ಲಾ ಪೂರ್ಣವಾದವುಗಳೆಂದೂ, ಪರಸ್ಪರ ಭೇದವಿಲ್ಲವೆಂದೂ, ತಾವು ಮಾಡತಕ್ಕ ಉಪಾಸನೆಯನ್ನು ಲೋಕಕ್ಕೂ ಪ್ರತ್ಯಕ್ಷವಾಗಿ ತೋರಿಸಿಕೊಟ್ಟರು. ಬ್ರಹ್ಮಾದಿಗಳಿಂದ ವಂದ್ಯಳಾದ ಅಪರಿಮಿತ ಮಹಿಮಳಾದ ಲಕ್ಷ್ಮೀದೇವಿಯೂ ಕೂಡ, ಆ ಪರಮಾತ್ಮನ ದೇಹದಲ್ಲಿ ಏಕದೇಶವಾದ ವಕ್ಷಸ್ಥಳ ಮಾತ್ರವೇ ತನಗೆ ವಾಸಸ್ಥಾನವಾಯಿತೆಂದೂ, ಇದರಿಂದ ಪರಮಾತ್ಮನನ್ನು ಏಕದೇಶದಿಂದ ಮಾತ್ರ ತಾನು ತನ್ನ ವಿಶಿಷ್ಟ ಜ್ಞಾನದಿಂದ ತಿಳಿಯಬಲ್ಲೆನೆಂದೂ, ಪರಮಾತ್ಮನ ಏಕದೇಶವಾದ ವಕ್ಷಸ್ಥಳವು, ಆದ್ಯಂತ ಇತರ ಶರೀರ ಭಾಗಗಳಿಂದ ಭಿನ್ನವಲ್ಲದ್ದರಿಂದ ಪರಮಾತ್ಮನ ಆದ್ಯಂತ ವ್ಯಾಪ್ತಿಯಲ್ಲೂ ತಾನು ಸಮ ಧರ್ಮವುಳ್ಳವಳಂತೆ ಆದೆನೆಂದೂ ಜ್ಞಾನಿಗಳಿಗೆ ತೋರಿಸಿಕೊಡುವಂತಿತ್ತು. ಇಂತಹ ಅನಂತ ಸೌಂದರ್ಯಾದಿ ಗುಣೋಪೇತನಾದ ಶ್ರೀಹರಿಯನ್ನು ಸನಕಾದಿಗಳೂ ನಮಸ್ಕರಿಸಿದರು.

ಆ ಕಾಲದಲ್ಲಿ ಕಮಲ ನೇತ್ರನಾದ ಶ್ರೀಪರಮಾತ್ಮನ ಪಾದಾರವಿಂದಗಳಿಂದ ಕಿರಣಗಳಂತೆ ಹೊರಡುತ್ತಿದ್ದ ಪಾದ ರಜಸ್ಸಿನೊಡನೆ, ಪದದಲ್ಲಿ ಸಮರ್ಪಿಸಲ್ಪಟ್ಟ ಶ್ರೀ ತುಳಸಿಯ ಸುಗಂಧವು ಮಿಶ್ರಿತವಾಗಿ, ಬೀಸುತ್ತಿರುವ ಸುಖಸ್ಪರ್ಶವಾದ ವಾಯುವು ಆ ಭಗವದರ್ಪಿತ ತುಳಸಿಯ ಮಕರಂದದ ಸುವಾಸನೆಯನ್ನು, ಈ ಸನಕಾದಿಗಳ ಮೂಗಿನ ದ್ವಾರದೊಳಕ್ಕೆ ಪ್ರವೇಶಮಾಡಿಸಿತು. ಆದರಿಂದ ಪರಮಹಂಸರಾದ ಸನಕಾದಿಗಳಿಗೂ ಮನೋ ವಿಕಾಸ ಉಂಟಾಗಿ, ಆ ಪರಿಮಳದಿಂದ ಅನುಭವಕ್ಕೆ ಬಂದ ವಿಲಕ್ಷಣ ಆನಂದದಿಂದ ಅವರ ಕಣ್ಣುಗಳಲ್ಲಿ ಧಾರಾಕಾರವಾಗಿ ಆನಂದಬಾಷ್ಪಗಳುದುರಿದವು.

ಮನೋವಿಕಾಸ ಉಂಟಾದರೆ ಅದರಿಂದ ಅಂಗ ಚಲನಾದಿಗಳೂ ಸಹಜವಾಗಿ ಆಗುತ್ತವೆ ಎಂಬ ಭಾವವನ್ನು ತೋರಿಸುತ್ತಾ, ಆ ಸನಕಾದಿಗಳು ಎದ್ದು ನಿಂತು ತಾವು ಕುಳ್ಳಾಗಿಯೂ, ಶ್ರೀಹರಿಯು ಎತ್ತರವಾಗಿಯೂ ಇದ್ದುದರಿಂದ ತಮ್ಮ ಮುಖಗಳನ್ನು ಮೇಲಕ್ಕೆತ್ತಿ ಶ್ರೀಹರಿಯ ಅರಳುತ್ತಿರುವ ಕಮಲದಂತೆ, ಅತ್ಯಂತ ಸುಂದರವೂ ಕೆಂಪೂ ಆದ ಬಾಯಿಯನ್ನು ನೋಡಿ, ಆ ಬಾಯಿಂದ ಆಶೀರ್ವಾದಗಳನ್ನು ಪಡೆದರು. ನಂತರ ಪರಮ ಸುಂದರವಾದ ಮುಖವನ್ನು ಎಲ್ಲ ಕಡೆಯೂ ನೋಡಿದರು. ಆಮೇಲೆ

ತಮ್ಮ ತಲೆಯನ್ನು ತಗ್ಗಿಸಿ ಪರಮಾತ್ಮನ ಪಾದಾರವಿಂದಗಳ ಅದ್ಭುತ ಸೌಂದರ್ಯವನ್ನೂ ಸಮನಾದ ಬೆರಳುಗಳಲ್ಲಿ ಸಾಲಾಗಿ ವಜ್ರದಂತೆ ಹೊಳೆಯುವ ಸುಂದರ ಉಗುರುಗಳನ್ನೂ ನೋಡಿದರು.

ಆಮೇಲೆ ಪಾದದಿಂದ ಶಿರಸ್ಸಿನವರಿಗೂ, ಶಿರಸ್ಸಿನಿಂದ ಪಾದದವರಿಗೂ ಸರ್ವಾವಯವಗಳನ್ನೂ ನೋಡಿ ಅಲ್ಲಿನ ಸೌಂದರ್ಯಾತಿಶಯಗಳನ್ನು ಮನಸ್ಸಿನಲ್ಲಿ ಧರಿಸಿದವರಾಗಿ, ತಮ್ಮ ಹೃತ್ಸ್ಥಲದಲ್ಲಿರುವ ಮೂರ್ತಿಯಲ್ಲಿಯೂ ಅವುಗಳನ್ನೇ ಕಂಡರು. ಮೋಕ್ಷಾದಿ ಪುರುಷಾರ್ಥಗಳನ್ನಪೇಕ್ಷಿಸಿ ಯೋಗಮಾರ್ಗವನ್ನು ಅನುಸರಿಸಿ, ಯೋಗಸಿದ್ಧಿ ಎಂಬ ಅಷ್ಟೈಶ್ವರ್ಯಗಳನ್ನು ಪಡೆದ ಭಗವದ್ಭಕ್ತರಿಗೆ ಆ ಪರಮಾತ್ಮನ ರೂಪವು ಧ್ಯಾನಕ್ಕೆ ಯೋಗ್ಯವಾಗಿತ್ತು. ಪ್ರತ್ಯಕ್ಷವಾಗಿ ನೋಡತಕ್ಕವರ ಕಣ್ಣುಗಳಿಗೆ ಅತ್ಯಂತ ಮನೋಹರವಾಗಿತ್ತು. ಇಂತಹ ಅದ್ಭುತ ರೂಪವು ಇತರ ಯೋಗಿಗಳಿಂದ ಕಾಣಲ್ಪಡಲಿಲ್ಲ. ಆದುದರಿಂದ ಪರಮಾತ್ಮನ ಆ ದಿವ್ಯದರ್ಶನ ಸುಖದಿಂದ ವಿಕಸಿತವಾದ ಮನಸ್ಸುಳ್ಳವರಾಗಿ ಪರಮಾತ್ಮನನ್ನು ಸನಕಾದಿಗಳು ಈ ರೀತಿ ಸ್ತುತಿಸಿದರು:-

## ಸನಕಾದಿಗಳಿಂದ ಭಗವಂತನ ಸ್ತುತಿ

ಎಲೈ ಸ್ವಾಮಿಯೆ! ನೀನು ದುಷ್ಟ ಜನರ ಹೃದಯದಲ್ಲೂ ಇದ್ದ ಕಾಲಕ್ಕೂ ಅವರಿಗೆ ಗೋಚರನಾಗುವುದಿಲ್ಲ. ನಿನ್ನ ಮಹಿಮೆಗಳು ಅನಂತಗಳಾದ್ದರಿಂದ, ಮಹಾತ್ಮ್ಯಜ್ಞಾನ ಪೂರ್ವಕವಾಗಿ ನಾವು ನಿನ್ನನ್ನು ಸ್ತುತಿಸುವೆವೆಂದು ಪ್ರಯತ್ನಿಸಿದರೂ, ಅವು ಅಲ್ಪಗಳಾದ ಸ್ತೋತ್ರಗಳೇ ಸರಿ. ಆದರೂ ಕೂಡ, ನಿನ್ನ ಪ್ರಿಯಪುತ್ರರಾದ ಬ್ರಹ್ಮದೇವರು, ನಮಗೆ ಯಾವ ಲಕ್ಷಣಗಳಿಂದ ನೀನು ತಿಳಿಯಲ್ಪಡುವಿಯೆಂದು, ನಮ್ಮ ಕಿವಿಗಳಲ್ಲಿ ರಹಸ್ಯವಾಗಿ ಉಪದೇಶಿಸಿದ್ದರೋ, ಯಾವ ಆ ಲಕ್ಷಣಗಳುಳ್ಳ ನಿನ್ನ ಮೂರ್ತಿಯನ್ನು ಧ್ಯಾನದಿಂದ ಹೃತ್ಸ್ಥಲದಲ್ಲೂ ನಾವು ನೋಡುತ್ತಿದ್ದೆವೋ, ಆ ರೂಪದಿಂದಲೇ ಈಗ ನೀನು ನಮಗೆ ಗೋಚರನಾಗಿರುತ್ತೀಯೆ! ಆಶ್ಚರ್ಯವು!

ನಿನ್ನ ಈ ರೂಪವನ್ನು ಮಾಯಾ ರಚಿತ ವಾದದ್ದಲ್ಲವೆಂದೂ, ಜಗಜ್ಜನ್ಮಾದಿಕಾರಣವಾದ ಸಾಕ್ಷಾದ್ರೂಪವೆಂದೂ, ಸತ್ವಗುಣವನ್ನು ಕಾರಣವನ್ನಾಗಿ ಮಾಡಿಕೊಂಡು ಈ ರೂಪವು ಸಕಲ ಜಗತ್ತಿಗೂ ಸುಖಕೊಡತಕ್ಕದ್ದೆಂದೂ, ನಾವು ತಿಳಿಯುತ್ತೇವೆ. ಇಂತಹ ಸೃಷ್ಟಿ, ಸ್ಥಿತಿ ಲಯಾದಿ ಸಕಲ ಕರ್ತೃವೂ, ಪರಮ ಸ್ವತಂತ್ರನೂ ನೀನೆಂದು ದೃಢವಾಗಿ ತಿಳಿದಿರುವ ಋಷಿಗಳು, ನಿನ್ನ ಪ್ರಸಾದದಿಂದ ಸಕಲ ವಿಷಯವಾಸನೆಗಳನ್ನು ತ್ಯಜಿಸಿದವರಾಗಿ, ಪುತ್ರ ಮಿತ್ರ ಕಳತ್ರ ಗೃಹ ಧನಾದಿಗಳಲ್ಲಿ ಮಮತೆ ಇಲ್ಲದೆ ನಿಸ್ಪೃಹರಾಗಿ, ಪರಿಶುದ್ಧವಾದ ಅಂತಃಕರಣದಿಂದ ನಿನ್ನನ್ನು ಯೋಗಮಾರ್ಗದಿಂದ ಧ್ಯಾನಿಸಿ ಈ ನಿನ್ನ

ರೂಪವನ್ನು ತಮ್ಮ ಹೃತ್ಸ್ಥಲದಲ್ಲಿ ಕಾಣುತ್ತಾರೆ. ಉತ್ತಮ ಭಕ್ತರು ನಿನ್ನ ಮಹಾ ಪ್ರಸಾದದಿಂದ ಲಭ್ಯವಾದ ಮೋಕ್ಷ ಸುಖವನ್ನೂ ಅಪೇಕ್ಷಿಸುವುದಿಲ್ಲ. ಏಕೆಂದರೆ ಸ್ಥಿತಿ ಕಾಲದಲ್ಲಿ ನಿನ್ನ ದಿವ್ಯ ಕಥಾಮೃತ ಪಾನದಿಂದ ಉಂಟಾಗುವ ಜ್ಞಾನಪಾಟವದಿಂದ ಲಭಿಸುವ ಆನಂದವು, ಮೋಕ್ಷದಲ್ಲಿ ಪೂರ್ಣವಾಗಿ ಸ್ವಯೋಗ್ಯತೆ ಇದ್ದಷ್ಟೂ ಆನಂದವು ಪ್ರಾಪ್ತವಾಗದೇ ಕುಕರ್ಮಗಳಿಂದ ಹ್ರಾಸವಾಗುವ ಸಂಭವದಿಂದ, ಅವರು ನಿನ್ನ ಕಥಾಮೃತದ ರಸಜ್ಞರಾದುದರಿಂದ, ಮೋಕ್ಷದಲ್ಲೂ ಆನಂದಾನುಭವವನ್ನು ಬಯಸದೆ, ನಿನ್ನ ಸತ್ಕಥಾಮೃತ ಪಾನವನ್ನೇ ಅಪೇಕ್ಷಿಸುತ್ತಾರೆ. ಏಕೆಂದರೆ ಇದರಿಂದ ಅವರಿಗೆ ಆನಂದೋದ್ರೇಕ ಉಂಟಾಗುತ್ತದೆ. ಸ್ವಾಮಿ! ನಾವೂ ನಿನ್ನ ಪಾದವನ್ನು ಶರಣುಹೊಕ್ಕಿರುವುದರಿಂದ, ನಿನ್ನನ್ನು ಈ ರೀತಿ ಬೇಡುತ್ತೇವೆ.

ನಿನ್ನ ಭಕ್ತರಾದ ನಮಗೆ ಪಾಪಗಳು ಸಂಭವಿಸಿದಾಗ ಆ ಪಾಪ ಪರಿಹಾರಕ್ಕಾಗಿ, ಪಶು ಮೃಗಾದಿ ನೀಚ ಯೋನಿಗಳೂ, ನರಕಾದಿ ದುಃಖಗಳೂ ನಮಗೆ ಉಂಟಾಗಲಿ. ಆಗ ಆ ದುಃಖಾನುಭವದಿಂದಲಾದರೂ ನಿನ್ನ ಭಕ್ತರಾದ್ದರಿಂದ ನಿನ್ನ ಪಾದಾರವಿಂದಗಳಲ್ಲಿ ಮನೋವೃತ್ತಿಯುಳ್ಳವರಾಗಿ ಪಾಪಕರ್ಮಗಳು ಹೇಯವೆಂದು ತಿಳಿದು ಉದ್ಧಾರವಾಗುತ್ತೇವೆ. ಆದುದರಿಂದ ಕರ್ಮಾನುಸಾರ ಪ್ರಾಪ್ತವಾಗತಕ್ಕ ಸಕಲ ಜನ್ಮಗಳಲ್ಲೂ, ನಮ್ಮ ಮನೋವೃತ್ತಿಯು ನಿನ್ನ ದಿವ್ಯ ಸ್ತೋತ್ರರೂಪವಾಗಲಿ.

ನಮ್ಮ ಘ್ರಾಣೇಂದ್ರಿಯವು ನಿನ್ನ ಪಾದಗಳಲ್ಲಿ ಸಮರ್ಪಿಸಿದ ಶ್ರೀತುಳಸಿಯ ಪರಿಮಳವನ್ನು ಸೇವಿಸಲಿ. ನಿನ್ನ ಗುಣ, ಯಶಸ್ಸುಗಳು ನಿರಂತರ ಕೀರ್ತಿಸಲ್ಪಟ್ಟು ಆಗಾಗ ಶ್ರವಣವು ನಮಗುಂಟಾಗಲಿ. ಭಕ್ತರು ನರಕಾದಿ ದುಃಖಗಳನ್ನು ಏಕೆ ಅಪೇಕ್ಷಿಸುವರೆಂದರೆ ಎಲೈ ವಿಶ್ವಮೂರ್ತಿಯೆ! ನೀನು ಸಕಲರ ಒಳ ಹೊರಗೆ ಸರ್ವರನ್ನೂ ನೋಡಿ ತಿಳಿದ ಕಾರಣ, ನಾವು ನಿನ್ನ ಭಕ್ತರಾದ ದ್ವಾರಪಾಲಕರಿಗೆ ಶಾಪವನ್ನು ಕೊಟ್ಟದ್ದರಿಂದ ನಿನಗೆ ಕೋಪವಿಲ್ಲ, ಅಂದರೆ ಸಮ್ಮತವಾದದ್ದೆಂದು, ಈಗ ನಮಗೆ ನೀನು ಪ್ರತ್ಯಕ್ಷನಾದ್ದರಿಂದ ಭಾವಿಸುತ್ತೇವೆ. ಏಕೆಂದರೆ ದುಷ್ಟ ಕಾರ್ಯ ಮಾಡಿದ್ದರೆ, ನೀನು ದುಷ್ಟರಿಗೆ ಪ್ರತ್ಯಕ್ಷನಾಗುವನಲ್ಲದ್ದರಿಂದ, ನಮಗೂ ಪ್ರತ್ಯಕ್ಷನಾಗದೇ ಇರಬೇಕಾಗಿತ್ತು. ಇಂತಹ ಭಕ್ತಾನುಕಂಪಿಯೂ ಅಗಮ್ಯಮಹಿಮನಾದ ನಿನಗೆ ನಾವು ನಮಸ್ಕಾರವೆಂಬ ವಚನ ಮಾತ್ರದಿಂದ ಪೂಜಿಸುತ್ತೇವೆ, ಎಂದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಹದಿನಾರನೆಯ ಅಧ್ಯಾಯವು ಮುಗಿಯಿತು.**

# अथ सप्तदशोऽध्यायः

**ब्रह्मोवाच**

इति तद् गृणतां तेषां मुनीनां योगधर्मिणाम् ।
प्रतिनन्द्य जगादेदं विकुण्ठनिलयो विभुः ॥ १ ॥

**श्री भगवानुवाच**

एतौ वै पार्षदौ मह्यं जयो विजय एव च ।
कदर्थीकृत्य मां यद् वो बह्वधत्तामतिक्रमम् ॥ २ ॥

यस्त्वेतयोर्धृतो दण्डो भवद्भिर्मामनुव्रतैः ।
स एवानुमतोऽस्माभिर्मुनयो देवहेलनात् ॥ ३ ॥

तद् वः प्रसादयाम्यद्य ब्रह्म दैवं परं हि मे ।
तध्द्येवात्मकृतं मन्ये यत् स्वपुंभिरसत्कृताः ॥ ४ ॥

यन्नामानि च गृह्णाति लोको भृत्ये कृतागसि ।
सोऽसाधुवादस्तत्कीर्तिं हन्ति त्वचमिवामयः ॥ ५ ॥

यस्यामृतामलयशः श्रवणावगाहः सद्यः पुनाति जगदाश्वपचं विकुण्ठः ।
सोऽहं भवद्भ्य उपलब्धसुतीर्थकीर्तिश्छिन्द्यां स्वबाहुमपि वः प्रतिकूलवृत्तिम् ॥ ६ ॥

यत्सेवया चरणपद्मपवित्ररेणोः सद्यः क्षताखिलमलं प्रतिलब्धशीलम् ।
न श्रीर्विरक्तमपि मां विजहाति यस्याः प्रेक्षालवार्थमितरे नियमोऽर्हते मत् ॥ ७ ॥

नाहं तथाऽद्मि यजमानहविर्विताने श्चोतद्घृलद्घृतमदन् हुतभुङ्मुखेन ।
यद् ब्राह्मणस्य मुखतश्चरतोऽनुघासं तुष्टस्य मय्यवहितैर्निजकर्मपाकैः ॥ ८ ॥

येषां बिभर्म्यहमखण्डविकुण्ठयोगमायाविभूतिरमलाङ्घ्रिरजः किरीटैः ।
विप्रांस्तु को न विषहेत यदर्हणांभः सद्यः पुनाति सहचन्द्रललामलोकान् ॥ ९ ॥
ये मे तनूर्द्विजवरान् दुदुहुर्मदीयान् भूतान्यलब्धशरणानि च भेदबुध्द्या ।
द्रक्ष्यन्त्यघक्षतदृशो ह्यभिमन्यवस्तान् गृध्रा रुषा मम कृषन्त्यधिदण्डनेतुः ॥ १० ॥
ये ब्राह्मणान् मयि धिया क्षिपतोऽर्चयन्ति तुष्यद्धृदः स्मितसुधोक्षितपद्मवक्त्राः ।

वाण्याऽनुरागकलयाऽऽत्मजवद् गृणन्तः संबोधयन्त्यहमिवाहमुपा(सित)कृतस्तैः ॥ ११ ॥
तन्मे स्वभर्तुरवसायमलक्षमाणौ युष्मद्व्यतिक्रमगतिं प्रतिपद्य सद्यः।
भूयो ममान्तिकमितां तदनुग्रहो मे यत् कालतोऽप्यविरमो हृतयोर्विवासः ॥ १२ ॥

ब्रह्मोवाचअथ तस्योशतीं देवीमृषिकुल्यां सरस्वतीम्।
आस्वाद्य मन्युदष्टानां तेषामात्माऽप्यतृप्यत ॥ १३ ॥

सतीं व्यादाय शृण्वन्तो लघ्वीं गुर्वर्थगह्वराम्।
विगाह्यागाधगम्भीरं न विदुस्तच्चिकीर्षितम् ॥ १४ ॥

ते योगमाययाऽऽरब्धपारमेष्ठ्यमहोदयम्।
प्रोचुः प्राञ्जलयो विप्राः प्रहृष्टाः कम्पितत्वचः ॥ १५ ॥

ऋषय ऊचुःन वयं भगवन् विद्मस्तव देव चिकीर्षितम्।
कृतो मेऽनुग्रहश्चेति यदध्यक्षः प्रभाषसे ॥ १६ ॥

ब्रह्मण्यस्य परं दैवं ब्राह्मणाः किल ते प्रभो।
विप्राणां देवदेवानां भगवानात्मदैवतम् ॥ १७ ॥

त्वत्तः सनातनो धर्मो रक्ष्यते तनुभिस्तव।
धर्मस्य परमो गुह्यो निर्विकारो भवान् मतः ॥ १८ ॥

तरन्ति ह्यञ्जसा मृत्युं निवृत्ता(निर्वृता) यदनुग्रहात्।
योगिनः स भवान् किंस्विदनुगृह्येत यत् परैः ॥ १९ ॥

यं वै विभूतिरुपयात्यनुवेलमन्यैरर्थार्थिभिः स्वशिरसा धृतपादरेणुः।
धन्यार्पिताङ्घ्रितुलसीनवदामधाम्नो लोकं मधुव्रतपतेरिव कामयाना ॥ २० ॥

यस्तां विविक्तचरितैरनुवर्तमानां नात्याद्रिय(यः )त् परमभागवतप्रसङ्गः।
स त्वं द्विजानुपथपुण्यरजःपुनीतिः श्रीवत्सलक्ष्म किमगा भगभाजनत्वम् ॥ २१ ॥

धर्मस्य ते भगवतस्त्रियुग त्रिभिः स्वैः पद्भिश्चराचरमिदं द्विजदेवतार्थम्।
नूनं भृतं तदभिघातिरजस्तमश्च सत्त्वेन नो वरदया तनुवा निरस्य ॥ २२ ॥

न त्वं द्विजोत्तमकुलं यदिहात्मगोपं गोप्ता वृष स्वर्हणेन सु(स)सूनृतेन।

तर्ह्येव नक्ष्यति शिवस्तव देव पन्था लोकोऽग्रहीष्यदृषभस्य हि यत् प्रमाणम् ॥ २३ ॥

तत्तेऽनभीष्टमिव सत्त्वनिधेर्विधित्सोः क्षेमं जनाय निजशक्तिभिरुद्धतारेः ।
नैतावता त्र्यधिपतेर्बत विश्वभर्तुस्तेजःक्षतिस्त्ववनतस्य स ते विनोदः ॥ २४ ॥

यं वाऽनयोर्दममधीश भवान् विचष्टे वृत्तिं च वा तदनु मन्महि निर्व्यलीकम् ।
अस्मासु वा य उचितो ध्रियतां स दण्डो येऽनागसौ वयमयुङ्क्ष्महि किल्बिषेण ॥ २५ ॥

**भगवानुवाच**

एतौ सुरेतरगतिं प्रतिपद्य सद्यः संरम्भसम्भृतसमाध्यनुबद्धयोगौ ।
भूयः सकाशमुपयास्यत आशु यो वः शापो मयैव विहितस्तदवैत विप्राः ॥ २६ ॥

ब्रह्मोवाचअथ ते मुनयो दृष्ट्वा नयनानन्दभाजनम् ।
वैकुण्ठं तदधिष्ठानं विकुण्ठं च स्वयम्भुवम् ॥ २७ ॥

भगवन्तं परिक्रम्य प्रणिपत्यानुमान्य च ।
प्रतिजग्मुः प्रमुदिताः शंसन्तो वैष्णवीं श्रियम् ॥ २८ ॥

भगवाननुगावाह यातं मा भैष्टमस्तु शम् ।
ब्रह्मतेजः समर्थोऽपि हन्तुं नेच्छे मतं तु मे ॥ २९ ॥

एतत् पुरैव निर्दिष्टं रमया क्रुद्धया यदा ।
तदाऽपवारिता द्वारि विशन्ती मय्युपारते ॥ ३० ॥

मयि संरम्भयोगेन निस्तीर्य ब्रह्महेलनम् ।
प्रत्येष्यतं निकाशं मे कालेनाल्पीयसा पुनः ॥ ३१ ॥

द्वाःस्थावादिश्य भगवान् विमानश्रेणिभूषणम् ।
सर्वातिशयया लक्ष्म्या जुष्टं स्वं धिष्ण्यमाविशत् ॥ ३२ ॥

तौ तु गीर्वाणऋषभौ दुस्तराद्धरिलोकतः ।
हतश्रियौ ब्रह्मशापादभूतां विगतस्मयौ ॥ ३३ ॥

तदा विकुण्ठधिषणात् तयोर्निपतमानयोः ।
हाहाकारो महानासीद् विमानाग्र्येषु पुत्रकाः ॥ ३४ ॥

तावेव ह्यधुना प्राप्तौ पार्षदावृषभौ हरेः ।
दितेर्जठरमाविष्टं काश्यपं तेज उल्बणम् ॥ ३५ ॥

तयोरसुरयोरद्य तेजसा यमयोर्हि वः ।
आक्षिप्तं तेज एतर्हि भगवांस्तद् विधित्सति ॥ ३६ ॥

विश्वस्य यः स्थितिलयोद्भवहेतुराद्यो योगेश्वरैरपि दुरत्यययोगमार्गः ।
क्षेमं विधास्यति स नो भगवांस्त्र्यधीशस्तत्रातास्मदीयविमृशेन कियानिहार्थः ॥ ३७ ॥

## ॥ इति श्रीमद्भागवते (तृतीयस्कन्धे( *3) सप्तदशोऽध्यायः ॥

**॥ ಹದಿನೇಳನೆಯ ಅಧ್ಯಾಯ ॥**

## ಭಗವಂತನಿಂದ ಬ್ರಾಹ್ಮಣರ ಪ್ರಶಂಸೆ

ದುಸ್ತರವಾದ ಆಪತ್ತು ಪ್ರಾಪ್ತವಾದರೆ ಅದರ ಪರಿಹಾರಕ್ಕಾಗಿ ಭಕ್ತರು ಶ್ರೀಪರಮಾತ್ಮನನ್ನೇ ಉತ್ತಮ ಭಕ್ತಿಯಿಂದ ಪರಿಹಾರ ಮಾಡಿ ರಕ್ಷಿಸೆಂದು ಪ್ರಾರ್ಥಿಸಬೇಕೆಂದು ಈ ಅಧ್ಯಾಯದಲ್ಲಿ ನಿರೂಪಿತವಾಗುತ್ತದೆ.

ಬ್ರಹ್ಮದೇವರು ದೇವತೆಗಳಿಗೆ ಹಿಂದಿನ ಅಧ್ಯಾಯದಲ್ಲಿ ಜಯ ವಿಜಯರಿಗೆ ಸನಕಾದಿಗಳು ಶಾಪ ಕೊಟ್ಟ ನಂತರ ಪರಮಾತ್ಮನು ಪ್ರತ್ಯಕ್ಷನಾಗಲಾಗಿ, ಸನಕಾದಿಗಳು ದೇವರನ್ನು ಸ್ತೋತ್ರಮಾಡಿದ ರೀತಿಯನ್ನು ವರ್ಣಿಸಿದರು. ಈಗ ಭಕ್ತ ಪರಾಧೀನನು ತಾನೆಂದು ತೋರಿಸುತ್ತಿರುವ ಶ್ರೀಹರಿಯು ಅವರ ಸ್ತೋತ್ರದಿಂದ ಪ್ರೀತನಾಗಿ, ಅವರೊಡನೆ ಸ್ನೇಹಪೂರ್ವಕವಾಗಿ ಆಡಿದ ಮಾತುಗಳನ್ನು ನಿರೂಪಿಸುತ್ತಾರೆ:-

ಭಕ್ತಿಯೋಗಿಗಳಾದ ಸನಕಾದಿಗಳ ಸ್ತೋತ್ರವನ್ನು ವೈಕುಂಠವೇ ಮನೆಯಾಗಿವುಳ್ಳ ಶ್ರೀಪರಮಾತ್ಮನು ಕೇಳಿ ಸಂತೋಷದಿಂದ ಅವರನ್ನು ಮನ್ನಿಸಿ ಅವರಿಗೆ ಈ ರೀತಿಯಾಗಿ ಹೇಳಿದನು:- ಇವರಿಬ್ಬರೂ ನನ್ನ ಪಾರ್ಷದರಾದ ಜಯ ವಿಜಯರೆಂಬುವರು, ಹಿಂದೆ ಲಕ್ಷ್ಮೀದೇವಿಯನ್ನು ಲಕ್ಷ್ಯಮಾಡದೇ ಒಳಕ್ಕೆ ಬಿಡದೇ ಅಪರಾಧ ಮಾಡಿದ್ದು, ಈಗ ನಿಮ್ಮನ್ನು ಅಲಕ್ಷ್ಯಮಾಡಿ ಪೂರ್ಣವಾಗಿ ಅಪರಾಧಿಗಳಾದರು. ಆದುದರಿಂದ ನೀವುಗಳು ಏನು ಶಾಪವನ್ನು ಇವರಿಗೆ ಕೊಟ್ಟಿರುವಿರೋ ಅದು ನನಗೆ ಸಮ್ಮತವಾಗಿರುತ್ತೆ. ಏಕೆಂದರೆ ದೇವದೇವೋತ್ತಮರ ಮತ್ತು ಮುನಿಗಳ ಅವಹೇಳನವು ನನ್ನಿಂದ ಸಹಿಸಲ್ಪಡುವುದಿಲ್ಲ. ನನ್ನ ದ್ವಾರಪಾಲಕರಾದ ಇವರು ನಿಮಗೆ ಮಾಡಿದ ಅಪರಾಧವು ನನ್ನಿಂದಲೇ ಮಾಡಲ್ಪಟ್ಟಿತೆಂದು ಭಾವಿಸಿ ನಿಮ್ಮ ಮನಃಪ್ರಸಾದವನ್ನು ಪಡೆಯುವುದಕ್ಕಾಗಿ ಈಗ ಇಲ್ಲಿಗೆ ನಾನು ಬಂದಿರುತ್ತೇನೆ. ನನಗೆ

ಬ್ರಾಹ್ಮಣರೇ ದೇವತೆಗಳಷ್ಟೆ! ಲೋಕದಲ್ಲಿ ಸಜ್ಜನರು ಭೃತ್ಯರು ಮಾಡಿದ ಅಪಮಾನವನ್ನು ಹೇಳುವಾಗ, ಇಂತಹ ಯಜಮಾನನ ಭೃತ್ಯರು ಅಪಮಾನ ಮಾಡಿದರೆಂದು ಸಹಜವಾಗಿ ಹೇಳುವ ಕಾರಣ, ಭೃತ್ಯರ ಅಪರಾಧದಿಂದ ಯಜಮಾನನ ಯಶಸ್ಸು ನಾಶವಾಗಿ, ಅದು ಯಜಮಾನನನ್ನು ಹೇಗೆ ಘೋರವಾದ ಕುಷ್ಠ ಮೊದಲಾದ ಖಾಯಿಲೆಯು ಶರೀರವನ್ನು ಪೀಡಿಸುತ್ತದೆಯೋ, ಅದರಂತೆ ಬಾಧೆಪಡಿಸುತ್ತದೆ. ಯಾವ ವೈಕುಂಠ ನಾಮಕನಾದ ನನ್ನ ಪಾವನ ಯಶಸ್ಸು ಅಮೃತದಂತೆ ಸುಖಪ್ರದವೋ, ಅಂತಹ ನನ್ನ ಪವಿತ್ರ ಕೀರ್ತಿಯನ್ನು ಕೊಂಡಾಡಿ ಲೋಕದಲ್ಲಿ ಇತರರಿಗೆ ಶ್ರವಣ ಮಾಡಿಸುವಂತಹ ನಿಮಗೆ ಪ್ರತಿಕೂಲವಾಗಿ ತೋಳುಗಳು ಎಂದರೆ ಈ ನನ್ನ ತೋಳುಗಳಿಂದ ಹುಟ್ಟಿದ ಕ್ಷತ್ರಿಯ ರಾಜರುಗಳು ಪ್ರವರ್ತಿಸಿದರೂ ಅವರನ್ನು ನಾನು ಕತ್ತರಿಸಿ ಹಾಕುತ್ತೇನೆ. ಇನ್ನು ಬೇರೆಯವರು ಪ್ರತಿಕೂಲರಾದರೆ ಸರ್ವಥಾ ಶಿಕ್ಷೆ ಬಿಡುವುದಿಲ್ಲ.

ಯಾವ ಬ್ರಹ್ಮಾದಿ ಸಕಲದೇವತೆಗಳೂ ರಮಾದೇವಿಯ ಕೃಪಾ ಕಟಾಕ್ಷ ಸ್ವಲ್ಪ ವನ್ನಪೇಕ್ಷಿಸಿ ಬಹು ತಪಸ್ಸು ನಿಯಮ, ಪೂಜೆಗಳಿಂದ ಆ ರಮಾದೇವಿಯನ್ನು ಆಶ್ರಯಿಸುತ್ತಾರೋ ಅಂತಹ ರಮಾದೇವಿಯು, ನಾನು ಸ್ವರತನಾದ್ದರಿಂದ ವಿರಕ್ತನಾಗಿದ್ದರೂ, ನಾನು ಬ್ರಾಹ್ಮಣರ ಪಾದ ಕಮಲಗಳನ್ನು ಸೇವಿಸಿ ಅವರ ಪಾದ ರಜಸ್ಸುಗಳಿಂದ ಆ ಕ್ಷಣದಲ್ಲೇ ಸಮಸ್ತ ದೋಷ ರಹಿತನಾಗಿ ಪವಿತ್ರನಾಗುವಂತಹ ಶೀಲವುಳ್ಳದ್ದರಿಂದ, ನಾನು ಅಪೇಕ್ಷಿಸದಿದ್ದರೂ ನನ್ನನ್ನು ಆ ರಮಾದೇವಿಯು ಬಿಟ್ಟಗಲದೆ ಆಶ್ರಯಿಸುತ್ತಾಳೆ.

ಬ್ರಾಹ್ಮಣರು ತಮ್ಮ ಪಾದರಜಸ್ಸಿನ ಮಹಾತ್ಮೆಯಿಂದ ಲಕ್ಷ್ಮಿಯೂ ಕೂಡ ನನಗೆ ಅನಪಾಯಿಯಾಗುವಂತೆ ಮಾಡಿರುತ್ತಾರಾಗಿ, ನನ್ನಿಂದ ಪೂಜ್ಯರಾದ ಬ್ರಾಹ್ಮಣರಿಗೆ ನನ್ನ ಬಾಹುಗಳು ಎಂಬ ರಾಜರುಗಳು ಪ್ರತಿಕೂಲರಾದರೂ ಅವರನ್ನು ಕತ್ತರಿಸಿ ಹಾಕುತ್ತೇನೆ. ಅಗ್ನಿಮುಖದಿಂದ ಸಮರ್ಪಿಸಲ್ಪಡುವ ಹೋಮ ಪದಾರ್ಥಗಳಾದ ಘೃತ ಚರುಗಳನ್ನು, ನಾನು ಅಷ್ಟು ಆದರ ಪೂರ್ವಕ ಸ್ವೀಕರಿಸುವುದಿಲ್ಲ. ಆದರೆ ಬ್ರಹ್ಮಜ್ಞಾನಿಗಳೂ, ಭಗವದ್ಭಕ್ತರೂ ಆದ ಬ್ರಾಹ್ಮಣರಿಗೆ ಭೋಜನಮಾಡಿಸಿ, ಬ್ರಾಹ್ಮಣ ಮುಖಾಗ್ನಿಯಲ್ಲಿ ಹುತವಾದ ಪದಾರ್ಥಗಳನ್ನು ನಾನು ಆದರದಿಂದ ಸ್ವೀಕರಿಸಿ ಭಕ್ಷಿಸುತ್ತೇನೆ.

ಯಾವ ನನ್ನ ಪಾದ ಪ್ರಕ್ಷಾಳನವನ್ನು ಬ್ರಹ್ಮದೇವರು ಮಾಡಿದಾಗ, ಆ ಪವಿತ್ರೋದಕವನ್ನು ಚಂದ್ರಮೌಳಿಯಾದ ರುದ್ರದೇವರು ತಮ್ಮ ಶಿರಸ್ಸಿನಲ್ಲಿ ಧರಿಸಿ ಪವಿತ್ರರಾದರೋ ಅದೇ ಉದಕವೇ ಲೋಕವನ್ನೂ ಪವಿತ್ರ ಮಾಡುತ್ತದೆಯೋ, ಅಂತಹ ನಾನು, ಮಾಡಿದ ಎಲ್ಲಾ ಅವತಾರಗಳಲ್ಲೂ ಸಹ, ಬ್ರಾಹ್ಮಣರಿಗೆ ಪಾದ ಪ್ರಕ್ಷಾಲನಾದಿಗಳಿಂದ ಪೂಜಿಸಿ, ಅವರ ಪಾದ ರಜಸ್ಸುಗಳನ್ನು ನನ್ನ ಕಿರೀಟಗಳಲ್ಲಿ ಧರಿಸಿರುತ್ತೇನೆ. ಈ ರೀತಿ ಲೋಕಕ್ಕೆ ಮೇಲ್ಪಂಕ್ತಿಗಾಗಿ ನಾನೇ ಬ್ರಾಹ್ಮಣರು ಪೂಜಾರ್ಹರು ಎಂದು

ತೋರಿಸಿರುವಾಗ ಯಾರು ತಾನೇ ಅಂತಹ ಬ್ರಾಹ್ಮಣರನ್ನು ಪೂಜಿಸದೇ ಅವಮಾನ ಮಾಡಿಯಾರು?

ಯಾರು, ನನಗೆ ಶರೀರಪ್ರಾಯರಾದ ಸರ್ವಭೂತ ದಯಾಪರರಾದ ಬ್ರಾಹ್ಮಣರನ್ನು ಪೀಡಿಸಿ ದುರಹಂಕಾರದಿಂದ ಕ್ರೂರವಾದ, ಅಥವ ನಿಕೃಷ್ಟವಾದ ದೃಷ್ಟಿಯಿಂದ ನೋಡುತ್ತಾರೋ ಅಂತಹ ನರಾಧಮರ ಕಣ್ಣುಗಳನ್ನು ನನ್ನ ಆಜ್ಞೆಯಂತೆ ಯಮಲೋಕದಲ್ಲಿ ರೋಷದಿಂದ ಹದ್ದುಗಳು ಕುಕ್ಕಿ, ಕಿತ್ತು ತಿನ್ನುವವು. ಯಾವ ಸಜ್ಜನರು, ಬ್ರಾಹ್ಮಣರು ನನ್ನ ಸನ್ನಿಧಾನದಿಂದ ಕೂಡಿದವರೆಂದು ತಿಳಿದು ಸಂತೋಷದಿಂದ ಅವರನ್ನು ಕರೆದುಕೊಂಡು ಬಂದು, ಒಳ್ಳೆಯ ಮಾತುಗಳನ್ನು ಪ್ರೀತಿಪೂರ್ವಕವಾಗಿ ಆಡಿ, ಆದರಿಸಿ, ಪೀಠ, ಅರ್ಘ್ಯ, ಪಾದ್ಯಾ, ಅತಿಥಿ ಸತ್ಕಾರಗಳಿಂದ ಪೂಜಿಸಿ ಆದರಿಸಿ ಸಂತೋಷಪಡಿಸುತ್ತಾರೋ, ಅಂತಹ ಸಜ್ಜನರಿಗೆ ನಾನು ಚಿರಋಣಿಯಾಗಿರುತ್ತೇನೆ. ಅವರ ಉಪಕಾರಕ್ಕೆ ಸದೃಶವಾದ ಪ್ರತಿ ಉಪಕಾರವನ್ನು ನಾನು ಅವರಿಗೆ ಮಾಡಲಾರೆನೆಂದು ಭಾವಿಸುತ್ತೇನೆ. ಅವರ ಉಪಕಾರವು ನನ್ನ ಮೇಲೆ ಇರುತ್ತೆ. ಆದುದರಿಂದ ಈ ಜಯ ವಿಜಯರು, ನನಗೆ ಅಪ್ರಿಯವಾದ ನಿಮ್ಮ ಅವಜ್ಞತೆಯಿಂದ ಅವರಿಗೆ ಉಂಟಾದ ನಿಮ್ಮ ಶಾಪದಂತೆ, ಶೀಘ್ರದಲ್ಲಿಯೇ ಅಸುರಯೋನಿಗಳನ್ನು ಹೊಂದುವರಾಗಲಿ! ಆದರೆ ನಿಮ್ಮ ಬ್ರಾಹ್ಮಣ ಶಾಪವು ಬಲವತ್ತರವಾದುದರಿಂದ ಇವರಿಗೆ ಅಸುರಜನ್ಮಗಳೇ ಬರುತ್ತಾ ತಮಃ ಪ್ರಾಪ್ತಿಯಾಗದಂತೆ ನಾನು ಅನುಗ್ರಹಿಸಿ, ಮೂರು ಅಸುರ ಜನ್ಮಗಳ ನಂತರ ಪುನಃ ಕ್ಷಿಪ್ರದಲ್ಲಿಯೇ ಇವರು ನನ್ನ ಈ ಸನ್ನಿಧಾನಕ್ಕೆ ಬರುವಂತೆ ಶಾಪಮೋಕ್ಷವನ್ನು ಕೊಟ್ಟಿರುತ್ತೇನೆ.

ನನ್ನ ಭಕ್ತರಾದ ಎಲೈ ಸನಕಾದಿಮಹರ್ಷಿಗಳೇ, ನೀವು ಮೂರು ಜನ್ಮದಲ್ಲಿ ಅಸುರರಾಗಿ ಹುಟ್ಟಿ ಎಂದು ಹೇಳಿರುವುದರಿಂದ ನನ್ನಂತೆ ನೀವು ಶಾಪಕ್ಕೆ ತಾತ್ಕಾಲಿಕಾನುಭವಾನಂತರ ಮೋಕ್ಷವನ್ನು ಇಚ್ಛಿಸಿರುವಿರೆಂದು ತಿಳಿದಿರುತ್ತೇನೆ, ಎಂದನು. ಈ ರೀತಿಯಾಗಿ ಪರಮಾತ್ಮನ ಮಾತುಗಳೆಂಬ ಋಷಿಕುಲಕ್ಕೆ ಆನಂದವನ್ನುಂಟುಮಾಡುವ ಸರಸ್ವತೀ ನದಿಯ ಜಲದಲ್ಲಿ ಸ್ನಾನ ಮಾಡಿದ ಸನಕಾದಿಗಳು, ಆ ಅಮೃತಸದೃಶ ವಾಣಿಗಳಿಂದ ತಮ್ಮ ತಾತ್ಕಲಿಕ ಕೋಪವೆಂಬ ಅಂತಃಶಾಪವನ್ನೂ ದೇಹಶ್ರಮವನ್ನೂ ಸಂಪೂರ್ಣವಾಗಿ ಕಳೆದುಕೊಂಡು ಅತ್ಯಂತ ತೃಪ್ತರಾಗಿ ಪ್ರಸನ್ನವಾದ ಮನಸ್ಸುಳ್ಳವರಾದರು. ಹಾಗೆಯೇ ಆ ಪರಮಾತ್ಮನು ಅಸುರ ಮೋಹನಾರ್ಥಕ್ಕಾಗಿಯೂ, ಲೋಕ ಶಿಕ್ಷೆಗಾಗಿಯೂ ಆಡಿದ ಸುಲಭವಾಗಿ ತೋರತಕ್ಕ, ಸಮುದ್ರದಂತೆ ಗಂಭೀರವಾಗಿಯೂ, ಅಗಾಧವಾಗಿಯೂ ಇರತಕ್ಕ ಮಾತುಗಳ ಭಾವವನ್ನು ಎಷ್ಟು ಯೋಚಿಸಿದರೂ ಮನಗಾಣದವರಾದರು. ಆದುದರಿಂದ ಆ ಸನಕಾದಿಗಳು ಅತ್ಯಂತ ಹರ್ಷವುಳ್ಳವರಾಗಿ, ಭಯಭರಿತ ಭಕ್ತಿಯಿಂದ ರೋಮಾಂಚಿತರಾಗಿ ಕೈಗಳನ್ನು ಮುಗಿದುಕೊಂಡು, ಬ್ರಹ್ಮದೇವರ ಸೃಷ್ಟಿಗೆ ಮೂಲಕಾರಣನಾದ, ತನ್ನ ಸ್ವೇಚ್ಛೆ ಎನಿಸುವ

ಯೋಗಮಾಯೆಯೆಂಬ ಪ್ರಭಾವದಿಂದ ತಮಗೆ ಪ್ರತ್ಯಕ್ಷನಾಗಿ ಮುಂದೆ ನಿಂತಿರುವ ಶ್ರೀಪರಮಾತ್ಮನಿಗೆ ಈ ರೀತಿ ವಿಜ್ಞಾಪನೆಯನ್ನು ಮಾಡಿದರು-

## ಸನಕಾದಿಗಳಿಂದ ಸ್ತೋತ್ರ ಮುಂದುವರೆದುದು

ಎಲೈ ಲೋಕಸ್ವಾಮಿಯೆ! ನೀನು ನಮ್ಮಿಂದ ಅನುಗ್ರಹೀತನಾದೆನು, ಇತ್ಯಾದಿ ಮಾತುಗಳನ್ನು ಏನು ಆಡಿರುವೆಯೋ ಅದರ ಅಭಿಃಪ್ರಾಯವನ್ನು ನಾವು ತಿಳಿಯಲಿಲ್ಲ ಸ್ವಾಮಿ! ಎಲೈ ಪ್ರಭುವೇ! ಸರ್ವನಿಯಾಮಕನೆ! ನೀನು ಬ್ರಹ್ಮಣ್ಯ ದೇವನಾದ್ದರಿಂದ ನಿನಗೆ ಬ್ರಾಹ್ಮಣರು ಕುಲದೇವತೆಗಳಾಗಲೇ ಬೇಕಲ್ಲವೆ! ಇಂತಹ ಬ್ರಾಹ್ಮಣರೇ ದೈವವಾಗಿವುಳ್ಳ ನೀನು, ಬ್ರಾಹ್ಮಣರಿಗೂ, ದೇವತೆಗಳಿಗೂ, ಬ್ರಹ್ಮಾದಿಗಳಿಗೂ ಧಾರಕ ಪೋಷಕನಾಗಿ ಆತ್ಮನಾಗಿರುತ್ತೀಯೆ. ಅಂದರೆ, ಬ್ರಾಹ್ಮಣರಾದ ನಮ್ಮನ್ನು ಗೌರವಿಸುತ್ತಿರುವಂತೆ ತೋರಿಸುತ್ತಿರುವುದರ ಮೂಲಕ, ಸ್ವಗತ ಭೇದ ವಿವರ್ಜಿತನಾದ ನೀನು, ನಮ್ಮ ಅಂತರ್ಯಾಮಿಯೂ ಆತ್ಮನೂ ಆದ ನಿನ್ನನ್ನೇ ನೀನು ಗೌರವಿಸುತ್ತಿದ್ದೀಯೆ. ಆದುದರಿಂದ ನಿನ್ನಿಂದ ಅಭಿನ್ನವಾದ ನಮ್ಮಲ್ಲಿರುವ ಆತ್ಮಸ್ವರೂಪನಾದ ನೀನೇ ನಿನಗೆ ದೇವತೆಯೆಂದು ಭಾವಿಸುತ್ತೇವೆ. ನೀನು ಉತ್ಕೃಷ್ಟಗಳಾದ ಶುದ್ಧಧರ್ಮ ಸ್ವರೂಪನು, ಸರ್ವತ್ರ ವಿಕಾರವಿಲ್ಲದವನು.

ನಿನ್ನಿಂದ ಅನೇಕ ಸಜ್ಜನರ, ದೇವತೆಗಳ ಶರೀರಗಳು ಪ್ರವಿಷ್ಟವಾಗಿ ಸನಾತನ ಧರ್ಮವು ಎಲ್ಲಾ ಕಾಲಗಳಲ್ಲಿಯೂ ರಕ್ಷಿಸಲ್ಪಡುತ್ತಿದೆ. ನಿನ್ನ ಸಾಕ್ಷಾದವತಾರಗಳಿಂದಲೂ ನೀನು ಧರ್ಮಸಂರಕ್ಷಣೆಯನ್ನು ಮಾಡುತ್ತೀಯೆ. ನಿನ್ನ ಅಮೋಘವಾದ ವ್ಯಾಪಾರಗಳು ಬಹಳ ರಹಸ್ಯಗಳಾಗಿರುವುದರಿಂದ ತಿಳಿಯಲ್ಪಡುವುದಿಲ್ಲ ಎಲೈ ಸ್ವಾಮಿಯೇ! ಯಾವ ನಿನ್ನನುಗ್ರಹವನ್ನು ಸಂಪಾದಿಸಿದ ಸರ್ವರೂ ಮೃತ್ಯುಭಯವನ್ನೂ, ಪಾಪಭಯವನ್ನೂ ದಾಟಿ ಯೋಗಿಗಳಾಗುತ್ತಾರೋ ಅಂತಹ ನಿನಗೆ, ಅನುಗ್ರಹಮಾಡತಕ್ಕ ನಿನ್ನಿಂದ ಬೇರೆಯಾದವರು ಯಾರಿರುತ್ತಾರೆ? ಅವರು ಇದ್ದರೆ ನಿನಗೆ ಮಾಡಬೇಕಾದ ಅನುಗ್ರಹವು ಯಾವದು? ಮುಕ್ತಾಮುಕ್ತ ನಿಯಾಮಕನಾದ ನೀನು ಬ್ರಾಹ್ಮಣರಿಂದ ಅನುಗ್ರಹೀತನಾದೆನೆಂದು ಹೇಳುವುದು ಬ್ರಾಹ್ಮಣ ಸ್ತುತಿ ಮಾತ್ರವಲ್ಲದೆ, ಬೇರೆ ಪ್ರಯೋಜನವು ನಿನಗಿಲ್ಲ.

ಬ್ರಹ್ಮಾದಿ ದೇವತೆಗಳಿಗಿಂತಲೂ, ಜ್ಞಾನ ಭಕ್ತಿ ಬಲ ಆನಂದಾದಿ ಸದ್ಗುಣಗಳಿಂದ ಅತ್ಯಧಿಕವಾಗಿ ಪೂರ್ಣಳಾದ ಲಕ್ಷ್ಮೀದೇವಿಯು ನಿತ್ಯಮುಕ್ತಳಾದ್ದರಿಂದ ಪೂರ್ಣಕಾಮಳಾದರೂ, ಶಮದಮಾದಿ ನಿಷ್ಠರೂ, ಭಕ್ತಿ ಜ್ಞಾನ ವೈರಾಗ್ಯಾದಿ ಸಂಪನ್ನರೂ ಆದ ಇಂದ್ರಾದಿ ನಿನ್ನ ಭಕ್ತರು ಸ್ವರ್ಗೈಶ್ವರ್ಯವೆಂಬ ವಿಭೂತಿಯನ್ನು ಬಯಸುವರಾಗಿ ನಿನ್ನ ಪಾದಗಳಲ್ಲಿ ತುಳಸೀ ಮಂಜರಿಯಿಂದ ಕೂಡಿದ ಮಾಲೆಗಳನ್ನು

ಅರ್ಪಿಸಲಾಗಿ, ಆಹಾ! ಈ ತುಳಸಿಯು ನನ್ನ ಸ್ವಾಮಿಯ ಪಾದಗಳ ಮೇಲೆ ಕುಳಿತು ಅನುಭವಿಸುತ್ತಿರುವ ಸುಖವೇನು? ಅದನ್ನು ನಾನೂ ಅನುಭವಿಸುತ್ತೇನೆಂಬ ಭಾವದಿಂದ, ನೀನು ನಿನ್ನ ಎದೆಯ ಮೇಲೆ ಉನ್ನತಸ್ಥಾನವನ್ನು ಲಕ್ಷ್ಮಿಗೆ ವಾಸಕ್ಕಾಗಿ ಕೊಟ್ಟಿದ್ದರೂ ಅದನ್ನು ಬಿಟ್ಟು, ನಿನ್ನ ಪಾದದ ಸಮೀಪಕ್ಕೆ ಬಂದು, ನಿನ್ನ ಪಾದಕಮಲಗಳನ್ನು ತನ್ನ ತೊಡೆಗಳ ಮೇಲಿಟ್ಟುಕೊಂಡು ತನ್ನ ಕರಕಮಲಗಳಿಂದ ಪೂಜಿಸುತ್ತಾ ಆ ಸೇವೆಯಿಂದಲೇ ಆನಂದವನ್ನು ಹೊಂದುವಂತೆ ಕಾಣುತ್ತಾಳೆ ಸ್ವಾಮಿ!

ಇಂತಹ ಮಹದೈಶ್ವರ್ಯಗಳಿಗೆ ಅಧಿದೇವತೆಯಾದ ಲಕ್ಷ್ಮೀದೇವಿಗೆ ನೀನು ಪತಿಯಾಗಿರುತ್ತೀಯೆ. ಇಂತಹ ನಿನಗೆ, ಇತರರಿಂದ ಅನುಗ್ರಹವು ಬೇಕಾಗುವಂತಹ ಕುಂದು ಕೊರತೆಗಳು ಯಾವುದೂ ಇಲ್ಲವೆಂದು ಏನು ಹೇಳತಕ್ಕದ್ದು? ಇಂತಹ ಶ್ರೀದೇವಿಯು ಬೇರೆ ಯಾರಿಂದಲೂ ಮಾಡಲು ಸಾಧ್ಯವಲ್ಲದ ರೀತಿಯಲ್ಲಿ, ಆದರದಿಂದ ನಾನಾ ವಿಧವಾಗಿ ನಿರಂತರ ನಿನ್ನ ಸೇವೆ ಮಾಡುತ್ತಾ, ನಿನ್ನನ್ನು ತನಗಿಂತಲೂ ಅನಂತವಾಗಿ ಗುಣಾಧಿಕನೆಂದು ಭಾವಿಸುತ್ತಾಳೆ. ಇಂತಹ ನಿನಗೆ ಆ ಭೃಗು ಋಷಿಯ ಪಾದಸ್ಪರ್ಶದಿಂದ ನಿನ್ನ ವಕ್ಷಸ್ಥಳಕ್ಕೆ ಪಾದರಜಸ್ಸು ಸ್ಪರ್ಶವಾಗಿ ಆದರಿಂದ ಶ್ರೀವತ್ಸಚಿಹ್ನೆ ಎಂಬ ನಿನಗಿಲ್ಲದ ಬೇರೆ ಒಂದು ವೈಭವವು ನಿನಗೆ ಉಂಟಾಯಿತೆ?

ಸ್ವಾಮಿ! ಸಕಲ ಸೌಭಾಗ್ಯ ನಿಧಿಯಾದ ಶ್ರೀದೇವಿಗೆ ಈ ಶ್ರೀವತ್ಸಚಿಹ್ನೆಯಲ್ಲಿ ವಾಸಿಸುವುದು ಸೌಭಾಗ್ಯ ವಿಶೇಷವನ್ನುಂಟು ಮಾಡಲು ಸಾಧ್ಯವೇ? ಇವೆಲ್ಲಾ ಕೇವಲ ಲೋಕವಿಡಂಬನೆಗಳಾದ ಮಾತುಗಳಿಂದ ನೀನು ನಮ್ಮನ್ನು ಹೊಗಳಿ, ಎಷ್ಟು ಬ್ರಾಹ್ಮಣ ಪ್ರಿಯನೂ, ಉದಾರಿಯೂ, ಎಂಬುವುದನ್ನು ನಮಗೆ ತೋರಿಸಿಕೊಟ್ಟಿರುತ್ತೀಯೆ

ಸ್ವಾಮಿ! ಬ್ರಾಹ್ಮಣ ಕುಲವನ್ನು ರಕ್ಷಿಸಬೇಕೆಂಬ ಅಪೇಕ್ಷೆಯಿಂದ ನೀನು ಬ್ರಾಹ್ಮಣರಿಗೆ ನಮಸ್ಕಾರಾದಿಗಳನ್ನು ಮಾಡಿರುತ್ತೀಯೆ. ಇಂತಹ ಲೋಕದ ಜನರಿಗೆ ವಿಹಿತವಾದ ಧರ್ಮಗಳನ್ನು ನೀನು ಅನುಷ್ಠಿಸಿ ತೋರಿಸುವುದು ಇತರರ ಪ್ರಯೋಜನಕ್ಕಾಗಿಯೇ ಆಗಿರುತ್ತದೆ. ನೀನು ನಿನ್ನ ಶ್ವೇತದ್ವೀಪ, ವೈಕುಂಠ ಅನಂತಾಸನಗಳೆಂಬ ಮೂರು ಮೋಕ್ಷ ಸ್ಥಾನಗಳಲ್ಲಿರುವ ಮೂಲ ರೂಪಗಳಿಂದ ಅನಂತಾನಂತ ಅವತಾರ, ಪ್ರವಿಷ್ಠ ರೂಪಗಳನ್ನು ಸ್ವೀಕರಿಸಿ ಈ ಪ್ರಪಂಚದಲ್ಲಿ ಸಕಲ ಇತರ ವಸ್ತುಗಳ ಸೃಷ್ಟಿ, ಪುಷ್ಟಿ, ಪಾಲನೆಗಳನ್ನು ಬ್ರಾಹ್ಮಣರನ್ನು ಉದ್ದೇಶಿಸಿಕೊಂಡೇ, ಅಂದರೆ ಆ ಪದಾರ್ಥಗಳನ್ನು ಬ್ರಾಹ್ಮಣರು ಯಜ್ಞಾದಿ ಕ್ರಿಯೆಗಳಿಗೆ ಉಪಯೋಗಿಸಿ ನಿನ್ನನ್ನು ಅರ್ಚಿಸಲೆಂದೇ ಮಾಡುತ್ತಿರುತ್ತೀಯೆ.

ಅದೂ ಅಲ್ಲದೆ ಕೃತ, ತ್ರೇತಾ, ದ್ವಾಪರಗಳೆಂಬ ಮೂರು ಯುಗಗಳಲ್ಲಿ ನೀನು ಅವತಾರಗಳನ್ನು

ಮಾಡಿ ಧರ್ಮ ವಿರೋಧಿಗಳಾದ ದುಷ್ಟರ ಸಂಹಾರ ಮಾಡಿಯೂ, ಬ್ರಾಹ್ಮಣ, ದೇವತೆಗಳಿಗೆ ಕ್ಷೇಮವನ್ನುಂಟುಮಾಡಿರುತ್ತೀಯೆ. ದೈತ್ಯರ ಪ್ರಾಬಲ್ಯದಿಂದ ರಜಸ್ತಮೋಗುಣಗಳು ಜನರನ್ನು ಆಕ್ರಮಿಸಿ, ಅವರ ಸತ್ವಗುಣವು ಕಮ್ಮಿಯಾಗಿ ಜಗತ್ತಿನಲ್ಲಿ ವೇದೋಕ್ತ ಕರ್ಮಾನುಷ್ಠಾನಗಳೂ, ಯಜ್ಞ ಯಾಗಾದಿಗಳೂ ನಿರೋಧಿಸಲ್ಪಟ್ಟಾಗ, ನೀನು ಪೂರ್ಣಸತ್ವಾತ್ಮಕವಾದ ವೈಕುಂಠ, ಅನಂತಾಸನ, ಕ್ಷೀರಸಮುದ್ರಶಾಯಿ ರೂಪಗಳಿಂದ ಕಪಿಲಾವತಾರವನ್ನೂ ಮಾಡಿ, ಜನರಿಗೆ ಸಾಂಖ್ಯಯೋಗವೆಂಬ ಭಗವತ್ತತ್ವಗಳನ್ನು ಬೋಧಿಸಿ ಸತ್ವಗುಣಾಭಿವೃದ್ಧಿಯನ್ನುಂಟುಮಾಡಿಯೂ ಜಗತ್ತನ್ನು ರಕ್ಷಿಸಿರುತ್ತೀಯೆ.

ಎಲೈ ಪರಮೈಶ್ವರ್ಯ ಪೂರ್ಣನಾದ ಇಂದ್ರಶಬ್ದ ಮುಖ್ಯವಾಚ್ಯನೇ! ನೀನು ಕ್ರೀಡಾದಿ ಗುಣವಿಶಿಷ್ಟನಾಗಿ, ಪರಮಾತ್ಮೈಕ ನಿಷ್ಠರಾದ ಬ್ರಾಹ್ಮಣ ಕುಲದವರನ್ನು ಮಧುರವಾದ ಮಾತುಗಳಿಂದಲೂ, ಆದರದಿಂದಲೂ, ಸತ್ಕಾರಗಳನ್ನು ಮಾಡಿ ಗೌರವಿಸಿ ಲೋಕದಲ್ಲಿ ಮೇಲ್ಪಂಕ್ತಿ ಹಾಕದೇ ಬಿಟ್ಟಿದ್ದರೆ, ಆಗ ಲೋಕದ ಜನರು ಸರ್ವ ಧರ್ಮ ಪ್ರವೃತ್ತಿಗೂ ಮೂಲ ಕಾರಣನಾದ ನಿನ್ನನ್ನೇ ಅನುಸರಿಸಿ, ಬ್ರಾಹ್ಮಣರನ್ನು ಉಪೇಕ್ಷಿಸಿ, ಶಾಶ್ವತಗಳಾದ ಸಕಲ ವೇದೋಕ್ತ ಕರ್ಮ ಧರ್ಮಗಳನ್ನೂ ನಾಶಮಾಡಿ, ಅದರಿಂದ ತಾವೂ ನಾಶವಾಗುತ್ತಿದ್ದರು. ಆದುದರಿಂದಲೂ, ನೀನು ಬ್ರಾಹ್ಮಣ ಸತ್ಕಾರ ಸ್ತೋತ್ರಗಳನ್ನು ಮಾಡಿರುವುದೂ ಯುಕ್ತವಾಗಿಯೇ ಇವೆ.

ಅಸುರರು ಲೋಕದ ಜನರಿಗೆ ನಿರಂತರ ದುಃಖವನ್ನುಂಟು ಮಾಡುವವರಾದ ಕಾರಣ, ಅಪ್ರಿಯರು. ಜನರಿಗೆ ದುಃಖಉಂಟುಮಾಡುವುದು ನಿನಗೆ ಇಷ್ಟವಾದದ್ದಲ್ಲ. ಆದುದರಿಂದ ಅಸುರರು ನಿನಗೆ ವಿರುದ್ಧವಾದ ಕರ್ಮಗಳನ್ನು ಆಚರಿಸುವುದರಿಂದ ನಿನಗೆ ದ್ವೇಷಿಗಳೆಂದೆನಿಸುತ್ತಾರೆ.

ನೀನು ಸ್ವಭಾವದಿಂದ ನಿತ್ಯಾನಂದ ಸ್ವರೂಪನು. ಆದುದರಿಂದಲೇ ಸಕಲ ಜಗತ್ತಿಗೂ ಸುಖಪ್ರದನು. ಆದುದರಿಂದಲೇ ಸುಖ ವಿರೋಧಿಗಳಾದ ದೈತ್ಯರೆಂಬ ನಿನ್ನ ಶತ್ರುಗಳನ್ನು ಸಂಹರಿಸಿ, ನಿನ್ನ ಅಪರಿಮಿತ ಶಕ್ತಿಯಿಂದ ಲೋಕಕ್ಕೆ ಸದಾ ಕ್ಷೇಮವನ್ನುಂಟುಮಾಡುತ್ತಾ, ಲೋಕ ಸಂರಕ್ಷಕನಾಗಿರುತ್ತೀಯೆ. ಇಂತಹ ನಿನಗೆ ಬ್ರಾಹ್ಮಣರಿಗೆ ನಮಸ್ಕಾರಾದಿಗಳನ್ನು ಮಾಡುವುದರಿಂದ, ನಿನ್ನ ಅಪ್ರತಿಹತ ತೇಜಸ್ಸಿಗೆ ಕುಂದಾಗಲೀ, ಅವಮಾನಕರವಾದದ್ದೆಂಬ ಭಾವವಾಗಲೀ ಇಲ್ಲ. ಆದರೆ ಸರ್ವ ನಮಸ್ಕೃತ ಪಾದನಾದ ನಿನ್ನ ಈ ವಿಡಂಬನೆಗಳನ್ನು ನೋಡಿದರೆ ನಮಗೆ ನಿನ್ನಿಂದ ಸತ್ಕೃತರಾಗುವುದಕ್ಕೆ ಯೋಗ್ಯತೆ ಇಲ್ಲದ ಕಾರಣ ಅವಮಾನವೂ, ಭಯವೂ, ಆಗುತ್ತದೆಯಾದ ಕಾರಣ, ಹೇ ಸ್ವಾಮಿ, ನಿನ್ನ ಮಾಯೆಯಿಂದ ನಮ್ಮನ್ನು ಮೋಹಿಸಬೇಡ, ಇಂತಹ ವ್ಯಾಪಾರಗಳನ್ನು ನಮ್ಮ ವಿಷಯಗಳಲ್ಲಿ ಸಾಕುಮಾಡು.

ಎಲೈ ನಿರುಪಮಚರಿತನಾದ ಅಖಂಡೇಶನೆ! ನಿನ್ನ ಚರ್ಯೆಗಳಿಂದ ನಮಗೆ ದಮವೆಂಬ ಧರ್ಮವನ್ನೂ, ಬ್ರಾಹ್ಮಣರಲ್ಲಿ ಹೇಗೆ ನಡೆದುಕೊಳ್ಳತಕ್ಕದ್ದೆಂಬ ವಿಧಿಯನ್ನೂ ಶಿಕ್ಷಿಸಿರುತ್ತೀಯೆ. ಇದಕ್ಕೆ ನಾವು ಕೃತಜ್ಞರಾಗಿರುತ್ತೇವೆ. ಆದರೆ ಸ್ವಾಮಿ! ನಾವು ನಿನ್ನ ಈ ವೈಕುಂಠ ಲೋಕಕ್ಕೆ ಬಂದು ನಿರ್ದೋಷಿಗಳೂ, ನಿನ್ನ ಭಕ್ತರೂ ಆದ, ಈ ದ್ವಾರಪಾಲಕರಿಗೆ, ಸಜ್ಜನರಿಗೆ ಉಚಿತವಲ್ಲದ ದುಷ್ಟವಾದ ಕೋಪವೆಂಬ ಕಶ್ಮಲದಿಂದ, ನಾವು ಆವೃತರಾಗಿ ಶಾಪವನ್ನು ಕೊಟ್ಟು, ಅತ್ಯಂತ ಅಪರಾಧವನ್ನು ಮಾಡಿರುತ್ತೇವೆ! ಆದ್ದರಿಂದ ಅನುಗುಣವಾದ ಶಿಕ್ಷೆಯನ್ನು ನಮಗೆ ಅನುಗ್ರಹಿಸೆಂದು ಬೇಡಿಕೊಳ್ಳುತ್ತೇವೆ! ಎಂದರು.

## ಭಗವಂತನಿಂದ ಶಾಪಾನುಮೋದನೆ

ಪರಮಾತ್ಮನು ಇವರ ಮಾತುಗಳನ್ನು ಕೇಳಿ, ಎಲೈ! ಬ್ರಾಹ್ಮಣೋತ್ತಮರೆ! ನೀವು ನನ್ನ ಇಚ್ಛಾನುಸಾರವಾಗಿಯೇ ಈ ಜಯವಿಜಯರಿಗೆ ಶಾಪವನ್ನು ಕೊಟ್ಟಿರುತ್ತೀರಿ. ನಾನು ಅದನ್ನು ಅನುಮೋದಿಸಿದ್ದೇನೆ. ಆದಕಾರಣ ಇವರಿಬ್ಬರೂ ಮೂರುಜನ್ಮಗಳಲ್ಲಿ ಅಸುರಾವಿಷ್ಟರಾಗಿ ಹುಟ್ಟಿ, ಆ ಮೂರು ಜನ್ಮಗಳಲ್ಲೂ ಗೂಢವಾದ ಸಮಾಧಿಯೋಗದಿಂದ ನನ್ನ ವಿಷಯಕ ಸ್ವಚ್ಛಜ್ಞಾನವುಳ್ಳವರಾಗಿಯೇ ಇದ್ದು, ಮೂರುಜನ್ಮಗಳ ನಂತರ ನನ್ನ ಈ ಸ್ಥಾನಕ್ಕೇ ಬರುವವರಾಗಲಿ ಎಂದನು.

ಸನಕಾದಿಗಳು ಆನಂದದಿಂದ ಸರ್ವಸೌಂದರ್ಯನಿಧಿಯೂ, ನಯನಾನಂದಕರನೂ ಆದ ವಿಕುಂಠನಾಮಕನಾದ ಪರಮಾತ್ಮನನ್ನು ನೋಡಿ ಅವನ ಮಾತುಗಳಿಂದ ಹರ್ಷಿತರಾಗಿ, ಪರಮಾತ್ಮನಿಗೂ, ವೈಕುಂಠಕ್ಕೂ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ, ಅತ್ಯಂತ ಸಂತುಷ್ಟರಾಗಿ ಪರಮಾತ್ಮನ ವಿಷ್ಣುಸಂಬಂಧವಾದ ಐಶ್ವರ್ಯವನ್ನೂ, ಅದ್ಭುತ ಮಹಿಮೆಯನ್ನೂ ಹೊಗಳುತ್ತಾ, ತಮ್ಮ ವಾಸಸ್ಥಾನಗಳಿಗಾಗಿ ಹೊರಟುಹೋದರು.

ನಂತರ ಪರಮಾತ್ಮನು ದ್ವಾರಪಾಲಕರನ್ನು ಕುರಿತು, ಎಲೈ ದ್ವಾರಪಾಲಕರೇ! ಹೋಗಿರಿ! ಭಯಪಡಬೇಡಿ. ನಿಮಗೆ ಸುಖವೂ ಮಂಗಳವೂ ಆಗಲಿ! ಬ್ರಹ್ಮತೇಜಸ್ಸಿನಿಂದ ನಿಮಗೆ ಉಂಟಾದ ಈ ಶಾಪವನ್ನು ಈ ಕೂಡಲೇ ಪರಿಹರಿಸುವುದಕ್ಕೆ ನಾನು ಶಕ್ತನಾದಾಗ್ಯೂ, ನಾನು ಬ್ರಾಹ್ಮಣರ ಮಾತನ್ನು ಸತ್ಯಮಾಡಬೇಕೆಂಬ ಸಂಕಲ್ಪವುಳ್ಳವನಾದ್ದರಿಂದ, ಈಗ ನಿಮಗೆ ಶಾಪಮೋಕ್ಷವನ್ನು ಕೊಡುವುದಿಲ್ಲ.

ಈ ಶಾಪವು ಹಿಂದೆ ದ್ವಾರಪಾಲಕರಾದ ನಿಮ್ಮಿಂದ ಒಳಗೆ ಹೋಗಕೂಡದೆಂದು ಒಂದು ಸಲ ತಡೆಯಲ್ಪಟ್ಟ ನನ್ನ ಪತ್ನಿಯಾದ ರಮಾದೇವಿಯ ತಾತ್ಕಾಲಿಕ ಕೋಪದಿಂದ ನಿಶ್ಚಯಿಸಲ್ಪಟ್ಟು ಆಗ ಕೊಡಲ್ಪಡಲಿಲ್ಲ. ಈ ರೀತಿ ನೀವು ನಿರುಪಮ ದೇವಿಯಾದ ರಮಾದೇವಿಗೂ, ಯೋಗಿಶ್ರೇಷ್ಠರಾದ

ಸನಕಾದಿಗಳಿಗೂ ಕೂಡ ಮಾಡಿದ ಮಹತ್ತಾದ ಅಪರಾಧಗಳಿಂದ ನೀವು ಸಂಪಾದಿಸಿದ ಘೋರವಾದ ಪಾಪವನ್ನು, ಆ ಅಸುರ ಜನ್ಮಾನುಭವದಿಂದಲೂ, ನನ್ನಲ್ಲಿ ನಿರಂತರ ಮನೋಯೋಗದಿಂದಲೂ ಕಳೆದುಕೊಂಡು ಪುನಃ ಶೀಘ್ರದಲ್ಲಿ ಇಲ್ಲಿಗೇ ಬರುವವರಾಗುವಿರಿ ಎಂದು ಹೇಳಿ, ನಂತರ ಪರಮಾತ್ಮನು ಸರ್ವಸಂಪದ್ಭರಿತವೂ, ದಿವ್ಯವಿಮಾನಗಳಿಂದ ಅಲಂಕೃತವೂ ಆದ ವೈಕುಂಠ ಮುಕ್ತಸ್ಥಾನವನ್ನೂ ಲಕ್ಷ್ಮೀ ಸಮೇತವಾಗಿ ಪ್ರವೇಶಿಸಿದನು.

ಆಗ ದೇವತೆಗಳಲ್ಲೂ, ದ್ವಾರಪಾಲಕರಲ್ಲೂ ಶ್ರೇಷ್ಠರಾದ ಜಯ ವಿಜಯರು ಉತ್ಕೃಷ್ಟವಾದ ವೈಕುಂಠವೆಂಬ ಸಂಪತ್ತನ್ನು ಕಳೆದುಕೊಂಡು ಕಾಂತಿವಿಹೀನರಾದರು. ತಕ್ಷಣ ಅವರು ಆ ವೈಕುಂಠದಿಂದ ಇಬ್ಬರೂ ಕೆಳಗೆ ಬೀಳುವವರಾದರು. ಆ ಕಾಲದಲ್ಲಿ ವೈಕುಂಠದಲ್ಲಿ ವಿಮಾನಾರೂಢರಾಗಿ ನೋಡುತ್ತಿದ್ದ ಮುಕ್ತಾಮುಕ್ತಜನರು ಹಾಹಾಕಾರ ಮಾಡಿದರು. ಹಾಗೆ ಕೆಳಗೆ ಬಿದ್ದ ಜಯ ವಿಜಯರೆಂಬ ಪಾರ್ಷದರೇ ಅದಿತಿ ದೇವಿಯ ಉದರದಲ್ಲಿದ್ದ ಗರ್ಭವನ್ನು ಪ್ರವೇಶಿಸಿದರು.

ಎಲೈ! ದೇವತೆಗಳಿರಾ! ದಿತೀದೇವಿಯ ಉದರದಲ್ಲಿ ಇಡಲ್ಪಟ್ಟ ಆ ಕಶ್ಯಪರ ವೀರ್ಯವೆಂಬ ದುಸ್ಸಹವಾದ ತೇಜಸ್ಸಿನಿಂದಲೇ ಈಗ ಲೋಕವು ಕತ್ತಲಿಂದ ಆವರಿಸಲ್ಪಟ್ಟು ನಿಮಗೆ ಭಯವನ್ನು ಹುಟ್ಟಿಸುತ್ತಿದೆ. ಈ ಗರ್ಭಗತ ಇಬ್ಬರು ದೈತ್ಯರ ಲೋಕಭಯಂಕರ ತೇಜಸ್ಸನ್ನು ಸರ್ವಜ್ಞನಾದ ಪರಮಾತ್ಮನು ಸಕಾಲದಲ್ಲಿ ನಿವಾರಣೆಮಾಡುತ್ತಾನೆ. ಯಾವನು ಈ ಪ್ರಪಂಚದ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಮೂಲ ಕಾರಣನೋ, ಯಾವನ ಯೋಗಮಾರ್ಗವು ಯೋಗೀಶ್ವರರಿಂದಲೂ ತಿಳಿಯಲ್ಪಡುವುದಿಲ್ಲವೋ, ಯಾರು ಮೂರು ಯುಗಗಳಲ್ಲಿ ದುಷ್ಟನಿಗ್ರಹಕ್ಕಾಗಿಯೇ ಅವತರಿಸುತ್ತಾನೋ, ಆತನೇ ಈ ತಮಸ್ಸೆಂಬುದನ್ನು ತಿಳಿದು, ನಮ್ಮ ಸರ್ವಭಯ ಪರಿಹಾರಕನೂ ಆಗುತ್ತಾನೆ! ಅದುದರಿಂದ ಈಗ ನಾವು ಸುಮ್ಮನೇ ಈ ತಮಸ್ಸೇನು? ಇದರಿಂದ ನಮಗೆ ಪರಿಣಾಮವೇನಾಗುತ್ತೆ? ಎಂಬ ಯೋಚನೆಗಳನ್ನು ನಿರರ್ಥಕವಾಗಿ ಮಾಡಬಾರದು. ಅಂದರೆ ಭಕ್ತಿಯಿಂದ ನಿಮಗೆ ಪ್ರಾಪ್ತವಾಗಿರುವ ಭಯ ನಿವಾರಣೆಗಾಗಿ ಪರಮಾತ್ಮನನ್ನೇ ಅಂತರಂಗದಲ್ಲಿ ಪ್ರಾರ್ಥಿಸುತ್ತಾ ಇರುವುದು, ಎಂದರು.

**ಇತಿ ಶ್ರೀಮದ್ಭಾಗವತದ ತೃತೀಯಸ್ಕಂಧದ ಹದಿನೇಳನೆಯ ಅಧ್ಯಾಯವು ಮುಗಿಯಿತು.**

**ಶ್ರೀಕೃಷ್ಣಾರ್ಪಣಮಸ್ತು**

# अथ अष्टादशोऽध्यायः

**मैत्रेय उवाच**

निशम्यात्मभुवा गीतं कारणं शङ्कयोज्झिताः ।
ततः सर्वे न्यवर्तन्त त्रिदिवाय दिवौकसः ॥ १ ॥

दितिस्तु भर्तुरादेशादपत्यपरिशङ्किनी ।
पूर्णे वर्षशते साध्वी पुत्रौ प्रसुषुवे यमौ ॥ २ ॥

उत्पाता बहवस्तत्र निपेतुर्जायमानयोः ।
दिवि भुव्यन्तरिक्षे च लोकस्य च भयावहाः ॥ ३ ॥

सहाचला भुवश्चेलुर्दिशः सर्वाः प्रजज्वलुः ।
सोल्काश्चाशनयः पेतुः केतवश्चार्तिहेतवः ॥ ४ ॥

ववौ वायुः सुदुस्पर्शः फारारावावान् मुहुः ।
उन्मूलयन् नगपतीन् वात्यानीको रजोध्वजः ॥ ५ ॥

उद्लसत्तडिदम्भोदघटया नष्टभागणे ।
व्योम्नि प्रविष्टतमसा न स्म व्यादृश्यते पदम् ॥ ६ ॥

चुक्रोश विमना वार्धिरुदूर्मिक्षुभितोदरः ।
सोदपानाश्च सरितश्चुक्षुभुः शुष्कपङ्कजाः ॥ ७ ॥

मुहुः परिधयोऽभूवन् सराह्वोः शशिसूर्ययोः ।
निर्घातरवनिर्ह्रादा विवरेभ्यः प्रजज्ञिरे ॥ ८ ॥

अन्तर्ग्रामेषु मुखतो वमन्त्यो वह्निमुल्बणम् ।
सृगाला अपि टङ्कारैः प्रणेदुरशिवाः शिवाः ॥ ९ ॥

संगीतवद् रोदनवदुन्नमय्य शिरोधरान् ।
व्यमुञ्चन् विविधा वाचो ग्रामसिंहास्ततस्ततः ॥ १० ॥

खरोष्ट्राः ककशैः क्षत्तः खुरैघर्नन्तो धरातलम् ।
खात्काररभसा मत्ताः पर्यधावन् वरूथशः ॥ ११ ॥

रुद(व)न्तो रासभत्रस्ता नीडादुदपतन् खगाः ।
घोषेऽरण्ये च पशवः शकृन्मूत्रमकुर्वत ॥ १२ ॥

गावोऽत्रसन्नसृग्दोहास्तोयदाः पूयवर्षिणः ।
व्यरुदन् देवलिङ्गानि द्रुमाः पेतुर्विनाऽनिलम् ॥ १३ ॥

ग्रहान् पुण्यतमानन्ये भगणाश्चापि दीपिताः ।
अतिचेरुर्वक्रगत्या युयुधुश्च परस्परम् ॥ १४ ॥

दृष्ट्वाऽन्यांश्च महोत्पातान् नतत्तत्त्वविदः प्रजाः ।
ब्रह्मपुत्रानृते भीताः मेनिरे विश्वसम्प्लवम् ॥ १५ ॥

तावादिदैत्यौ सहसा व्यज्यमानात्मपौरुषौ ।
ववृधातेऽश्मसारेण कायेनाद्रिपती इव ॥ १६ ॥

दिविस्पृशौ हेमकिरीटकोटिभिर्निरुद्धकाष्ठौ स्फुरदङ्गदैर्भुजैः ।
गां कम्पयन्तौ चरणैः पदे पदे कट्या सुकाञ्च्याकमतीत्य तस्थतुः ॥ १७ ॥

प्रजापतिर्नाम तयोरकार्षीद् यः प्राक् स्वदेहाद् यमयोरजायत ।
तं वै हिरण्यकशिपुं विदुः प्रजाः यं तं हिरण्याक्षमसूत सा ततः ॥ १८ ॥

चक्रे हिरण्यकशिपुर्दोर्भ्यां ब्रह्मवरेण च ।
वशे सपालान् लोकांस्त्रीनकुतोमृत्युरुद्धतः ॥ १९ ॥

हिरण्याक्षोऽनुजस्तस्य प्रियः प्रीतिकृदन्वहम् ।
गदापाणिर्दिवं यातो युयुत्सुर्मृगयन् रणम् ॥ २० ॥

तं वीक्ष्य दुःसहजवं रणत्काञ्चननूपुरम् ।
वैजयन्त्या स्रजा जुष्टमंसन्यस्तमहागदम् ॥ २१ ॥

मनोवीर्यमहोत्सिक्तमधृष्यमकुतोभयम् ।
भीता निलिल्यिरे देवास्तार्क्ष्यत्रस्ता इवाहयः ॥ २२ ॥

स वै तिरोहितान् दृष्ट्वा सहसा स्वेन दैत्यरा ।
सेन्द्रान् देवगणान् क्लीबानपश्यद् व्यनदद् भृशम् ॥ २३

ततो निवृत्तः क्रीडिष्यन् गम्भीरं भीमनिस्वनः ।
विजगाहे महासत्त्वो वार्धिं मत्त इव द्विपः ॥ २४ ॥

तस्मिन् प्रविष्टे वरुणस्य सैनिकाः यादोगणाः सन्नधियः ससाध्वसाः ।
अहन्यमाना अपि तस्य वर्चसा प्रधर्षिता दूरतरं प्रदुद्रुवुः ॥ २५ ॥

स वर्षपूगानुदधौ महाबलश्चरन् महोर्मीः श्वसनेरिता मुहुः ।
गुर्व्याऽभिजघ्ने गदया विभावरीमासेदिवांस्तात पुरं प्रचेतसः ॥ २६ ॥

तत्रोपलभ्यासुरलोकपालको यादोगणानामृषभं प्रचेतसम् ।
स्मयन् प्रलब्धुं प्रणिपत्य नीचवज्जगाद मे देह्यधिराज सङ्गरम् ॥ २७ ॥

त्वं लोकपालाधिपतिर्बृहच्छ्रवा वीर्यावहो दुर्मदवीरमानिनाम् ।
विजित्य लोकेऽखिल दैत्यदानवान् यद् राजसूयेन पुराऽयजत् प्रभो ॥ २८ ॥

स एवमुत्सिक्तमदेन विद्विषा दृढं प्रलब्धो भगवानपां पतिः ।
रोषं समुत्थं शमयन् स्वया धिया व्यवोचदङ्गोपशमं गता वयम् ॥ २९ ॥

पश्यामि नान्यं पुरुषात् पुरातनाद् यः संयुगे त्वां रणरङ्गकोविदम् ।
आवारयिष्यत्यसुरर्षभाहितं मनस्विनो यं वृणुते भवादृशाः ॥ ३० ॥

तं वीरमारादभिपद्य विस्मयः शयिष्यसे वीरशये श्वभिर्वृतः ।
यस्त्वद्विधानामसतां प्रशान्तये रूपाणि धत्ते सदनुग्रहेच्छया ॥ ३१ ॥

## ॥ इति श्रीमद्भागवते (तृतीयस्कन्धे(*3) अष्टादशोऽध्यायः ॥

॥ ಹದಿನೆಂಟನೆಯ ಅಧ್ಯಾಯ ॥

## ಕಶ್ಯಪ ಪುತ್ರರ ಜನನ ಕಾಲದ ಉತ್ಪಾತಗಳು

ಈ ಅಧ್ಯಾಯದಲ್ಲಿ ಅವಧ್ಯರಾದ ಹಿರಣ್ಯಕಶಿಪು, ಹಿರಣ್ಯಾಕ್ಷರ ಉತ್ಪತ್ತಿ ಕ್ರಮವನ್ನೂ, ಹಿರಣ್ಯಾಕ್ಷನ ವಧೆಗಾಗಿ ಪರಮಾತ್ಮನು ಮಾಡಿದ ವರಾಹವತಾರ ಮಹಿಮೆಯನ್ನೂ ಪರಮಾತ್ಮನಲ್ಲಿ ಭಕ್ತ್ಯಭಿವೃದ್ಧಿಗಾಗಿ ನಿರೂಪಿಸುತ್ತಾರೆ:-

ಮೈತ್ರೇಯರು, ಎಲೈ ವಿದುರನೆ! ಬ್ರಹ್ಮದೇವರು ಹೇಳಿದ ಆ ಭಯಂಕರ ತಮಸ್ಸಿನ ಕಾರಣವನ್ನು

ದೇವತೆಗಳು ಕೇಳಿ, ತಮ್ಮ ಸಂಶಯವನ್ನು ಪರಿಹಾರ ಮಾಡಿಕೊಳ್ಳುವವರಾಗಿ, ಎಲ್ಲರೂ ಸ್ವರ್ಗಲೋಕಕ್ಕೆ ಹಿಂತಿರುಗಿದರು. ದಿತೀದೇವಿಯು ತನ್ನ ಮಕ್ಕಳಿಗೆ ಪರಮಾತ್ಮನಿಂದ ಮರಣ ಉಂಟಾಗುವುದೆಂದು ತನ್ನ ಪತಿಯು ಹೇಳಿದ್ದನ್ನೇ ಚಿಂತಿಸುತ್ತಾ ನೂರು ವರ್ಷಗಳು ಕಳೆದ ನಂತರ ಇಬ್ಬರು ಗಂಡು ಮಕ್ಕಳನ್ನು ಪ್ರಸವಿಸಿದಳು. ಆ ಇಬ್ಬರು ಮಕ್ಕಳು ಹುಟ್ಟಿದಾಗ ಭೂಮಿ, ಆಕಾಶ, ಸ್ವರ್ಗಗಳಲ್ಲಿ ಮಹೋತ್ಪಾತಗಳುಂಟಾದವು. ಅವುಗಳಿಂದ ಸರ್ವರಿಗೂ ಭಯವುಂಟಾಯಿತು. ಭೂಮಿಯು ಪರ್ವತಗಳ ಸಹಿತವಾಗಿ ನಡುಗಿತು. ದಿಕ್ಕುಗಳಲ್ಲೆಲ್ಲಾ ಬೆಂಕಿಗಳೆದ್ದವು. ಉಲ್ಕಾಪಾತಗಳೂ, ಶಿಲಾಪಾತಗಳೂ ಉಂಟಾಗಿ, ಲೋಕಕ್ಕೆ ಭಯವನ್ನು ಸೂಚಿಸುವ ಧೂಮಕೇತುಗಳು ಕಾಣಿಸಿದವು. ಪ್ರಚಂಡ ಘಾಳಿಯು ಬೀಸಿ ಎಲ್ಲೆಲ್ಲೂ ಫಟ್ ಫಟ್ ಎಂಬ ಧ್ವನಿಗಳುಂಟಾದವು. ಸುಳಿಘಾಳಿಗಳು ಗುಂಪು ಗುಂಪಾಗಿ ಎದ್ದು ಪರ್ವತ ಪ್ರದೇಶಗಳನ್ನೆಲ್ಲಾ ವ್ಯಾಪಿಸಿತ್ತು. ಮಾಲಾಕಾರಗಳಾಗಿ ಮೇಘಗಳು ಹುಟ್ಟಿ ನಕ್ಷತ್ರಗಳನ್ನೆಲ್ಲಾ ಮುಚ್ಚಿ ಮಿಂಚುಗಳನ್ನು ಕಾರುತ್ತಿದ್ದವು. ಎಲ್ಲಾ ಕಡೆಯಲ್ಲೂ ಕತ್ತಲು ಮುಚ್ಚಿ ಜನರಿಗೆ ದಿಕ್ಕೇ ತೋರದಂತಾಯಿತು.

ಸಮುದ್ರದಲ್ಲಿ ಭಯಂಕರ ಅಲೆಗಳೆದ್ದು ಅವುಗಳ ಬಡಿತದಿಂದ ಸಮುದ್ರರಾಜನು ಹೊಟ್ಟೆನೋವುಳ್ಳವನಾಗಿ ಅಳುವನೋ ಎಂಬಂತೆ ರೋದನ ಧ್ವನಿಯು ಉಂಟಾಗಿತ್ತು. ನದಿಗಳು, ಸರೋವರಗಳು ನೀರಿಲ್ಲದವುಗಳಾದವು. ಕಮಲ ಪುಷ್ಪ ಗಳೆಲ್ಲಾ ಒಣಗಿಹೋದವು. ತಂಡ ತಂಡವಾಗಿ ಚಂದ್ರ ಸೂರ್ಯ ಗ್ರಹಗಳು ರಾಹುವಿನ ಮಂಡಲದಿಂದ ಪೀಡಿತಗಳಾಗಿ ಗ್ರಹಣಗಳುಂಟಾದವು. ಆಕಾಶದಲ್ಲಿ ಮೇಘವಿಲ್ಲದೇ ಗುಡುಗು, ಶಿಡಿಲುಂಟಾಗಿ, ಅವುಗಳ ಧ್ವನಿಯಿಂದ ಪರ್ವತದ ಗುಹೆಗಳಲ್ಲಿ ಪ್ರತಿಧ್ವನಿಯುಂಟಾದವು. ಗ್ರಾಮಗಳಲ್ಲಿ ಬಾಯಿಂದ ಅಗ್ನಿಯನ್ನು ಕಾರುತ್ತಾ ಹೆಣ್ಣು ಗಂಡು ನರಿಗಳು ನಾದವನ್ನೂ ಅನುಕಾರ ಸ್ವರಗಳನ್ನೂ ಮಾಡಿ ಅಮಂಗಳಗಳನ್ನು ಸೂಚಿಸಿದವು.

ಅಲ್ಲಲ್ಲಿ ನಾಯಿಗಳು ಗುಂಪಾಗಿ ನಿಂತು ರೋದಿಸಿದಂತೆಯೂ, ಸಂಗೀತದಂತೆಯೂ ಕೂಗಾಡುತ್ತಿದ್ದವು. ಕ್ರೂರವಾದ ಒಂಟೆಗಳು ತಮ್ಮ ಪಾದಗಳ ಗೊರಸುಗಳಿಂದ ಭೂಮಿಯನ್ನು ಬಡಿಯುತ್ತಾ ಖಾತಾರವೆಂಬ ರಭಸದಿಂದ ಕಿರುಚುತ್ತಲೂ, ಅನುಕಾರ ಶಬ್ದವೆಂಬ ಮೆತ್ತಗೆ ನರಳುವ ಶಬ್ದಗಳನ್ನು ಮಾಡುತ್ತಲೂ ಬೀದಿ ಬೀದಿಗಳಲ್ಲಿ ತಿರುಗುತ್ತಿದ್ದವು. ಕತ್ತೆಗಳು ರೋದನ ಧ್ವನಿಯಿಂದ ಕಿರುಚುವುದನ್ನು ಕೇಳಿ ಭಯಪಟ್ಟು ಪಕ್ಷಿಗಳು ಮರದ ಕೊಂಬೆಗಳಿಂದ ಕೆಳಕ್ಕುದುರುತ್ತಿದ್ದವು. ಪರ್ವತ, ಕಾಡುಗಳಲ್ಲಿ ಸಾಧುಪ್ರಾಣಿಗಳು ಮೂತ್ರ ಪುರೀಷಗಳನ್ನು ವಿಸರ್ಜಿಸಿದವು. ಹಸುಗಳು ಹೆದರಿ ನಡುಗುತ್ತಾ ಮೊಲೆಗಳಿಂದ ರಕ್ತವನ್ನು ಸುರಿದವು.

ಈಶ್ವರನ ಲಿಂಗಗಳು ರೋದನ ಶಬ್ದ ಮಾಡಿದವು. ಗಾಳಿಯಿಲ್ಲದೇ, ರುದ್ರದೇವರಿಂದ ಪ್ರಳಯ ಮಾಡಲ್ಪಡುತ್ತೋ ಎಂದು ಭಯವುಳ್ಳವರಾದರು. ಈ ರೀತಿಯಾಗಿ ಬಹು ವಿಧ ಉತ್ಪಾತ ತರಂಗಗಳ ಮಧ್ಯದಲ್ಲಿ ಹುಟ್ಟಿದ ಆ ಇಬ್ಬರು ಆದಿ ದೈತ್ಯರೂ, ಬಹು ಪರಾಕ್ರಮಿಗಳಂತೆಯೂ, ದೇವತೆಗಳನ್ನು ಜಯಿಸಿ ಅವರ ಕಿರೀಟಗಳಿಂದ ಮುಟ್ಟಲ್ಪಟ್ಟ ಪಾದಪೀಠಗಳುಳ್ಳವರಂತೆಯೂ, ಪರ್ವತದಂತೆ ಕಪ್ಪಾಗಿಯೂ ದೃಢವಾಗಿಯೂ ಇರುವ ಬಲಿಷ್ಠಗಳಾದ ಶರೀರಗಳಿಂದ ಪ್ರವೃದ್ಧರಾದರು. ಕಾಶ್ಯಪರು ಆ ಮಕ್ಕಳಲ್ಲಿ ತಮ್ಮಿಂದ ಮೊದಲು ಹುಟ್ಟಿದವನಿಗೆ ಹಿರಣ್ಯಕಶಿಪುವೆಂದೂ, ಆಮೇಲೆ ಹುಟ್ಟಿದವನಿಗೆ ಹಿರಣ್ಯಾಕ್ಷನೆಂದೂ ನಾಮಕರಣ ಮಾಡಿದರು.

ಜ್ಯೇಷ್ಠನಾದ ಹಿರಣ್ಯಕಶಿಪುವು ಬ್ರಹ್ಮದೇವರ ವರವನ್ನು ಪಡೆದು ಒಣಗಿದ್ದ ಹಸಿಯಾದ, ಬದುಕಿದ್ದ ಬದುಕಿಲ್ಲದ, ದೇವ ಮನುಷ್ಯ ರಾಕ್ಷಸ, ತಿರ್ಯಗಾದಿ ಸರ್ವ ಪ್ರಾಣಿಗಳಿಂದಲೂ ಮರಣವಿಲ್ಲದಂತೆ, ಒಳಗೂ, ಹೊರಗೂ ಮರಣ ಉಂಟಾಗದಂತೆ ವರ ಪಡೆದು ತಾನು ಅವಧ್ಯನೆಂಬ ಅಹಂಕಾರದಿಂದ, ಇಂದ್ರಾದಿ ದಿಕ್ಪಾಲಕರನ್ನೂ ಎಲ್ಲರನ್ನೂ ಗೆದ್ದು ಮೂರು ಲೋಕಗಳನ್ನೂ ಆಕ್ರಮಿಸಿದನು. ನಂತರ ಅಣ್ಣನಿಗೆ ಸಂತೋಷವನ್ನು ಉಂಟುಮಾಡುವುದಕ್ಕಾಗಿಯೂ, ಯುದ್ಧಾಪೇಕ್ಷೆಯಿಂದ ದಿಗ್ವಿಜಯವನ್ನು ಹೊಂದುವುದಕ್ಕಾಗಿಯೂ, ತಮ್ಮನಾದ ಹಿರಣ್ಯಾಕ್ಷನು ಗದಾಪಾಣಿಯಾಗಿ ಸ್ವರ್ಗಲೋಕಕ್ಕೆ ಹೋದನು. ಬಲಿಷ್ಠನಾದ ಇವನ ಭಯದಿಂದ ಎಲ್ಲಾ ದೇವತೆಗಳೂ, ಇಂದ್ರನ ಸಹಿತರಾಗಿ ಕಣ್ಣಿಗೆ ಕಾಣಿಸದಂತೆ ಅವಿತುಕೊಂಡರು. ಇವನು ಸ್ವರ್ಗಕ್ಕೆ ಬಂದು ಅಲ್ಲಿ ಯುದ್ಧಮಾಡಲು ಯಾರನ್ನೂ ಕಾಣದೇ, ದೇವತೆಗಳು ಹೇಡಿಗಳೆಂದು ನಕ್ಕು, ಒಂದು ಸಲ ಆರ್ಭಟಿಸಿ, ನಂತರ ಆ ಕೂಗಾಟದಿಂದ ದೇವತೆಗಳನ್ನು ಪದೇ ಪದೇ ಹೆದರಿಸುತ್ತಾ ಆಟವಾಡುತ್ತಾನೆಯೋ ಎಂಬಂತೆ ಸ್ವಲ್ಪ ಕಾಲ ಇದ್ದು ನಂತರ ಮಹಾಸಮುದ್ರವನ್ನು ಕುರಿತುಹೊರಟನು.

## ವರುಣಲೋಕಕ್ಕೆ ಬಂದ ಹಿರಣ್ಯಾಕ್ಷ

ಆಗ ಅವನು ಮದಿಸಿದ ಆನೆಯಂತೆ ಸಮುದ್ರದೊಳಗೆ ನುಗ್ಗಿದನು. ಅಲ್ಲಿದ್ದ ಯಾದೋಗಣ ಸೈನಿಕರು, ಶಸ್ತ್ರಾಸ್ತ್ರ ಸನ್ನದ್ಧರೂ, ಅಜೇಯರೂ, ಯುದ್ಧ ಕುಶಲರೂ ಆಗಿದ್ದರೂ, ಇವನನ್ನು ನೋಡಿದ ಮಾತ್ರದಿಂದ ಇವನು ಅಸಾಧ್ಯ ಪರಾಕ್ರಮಿ ಎಂದು ಭಾವಿಸಿ ದಿಕ್ಕು ದಿಕ್ಕುಗಳಿಗೆ ಓಡಿಹೋದರು. ಸಮುದ್ರದೊಳಗೆ ಭೇದಿಸಿಕೊಂದು ಹೋಗತಕ್ಕ ಹಿರಣ್ಯಾಕ್ಷನ ಶ್ವಾಸ ಉಚ್ಛ್ವಾಸಗಳಿಂದ ದೊಡ್ಡ ದೊಡ್ಡ ಅಲೆಗಳೆದ್ದವು. ಹಿರಣ್ಯಾಕ್ಷನು ದೊಡ್ಡ ಗದೆಯನ್ನು ಭುಜದ ಮೇಲಿಟ್ಟುಕೊಂಡು, ವರುಣ ದೇವರ ಪಟ್ಟಣವನ್ನೂ ಅರಮನೆಯನ್ನೂ ಪ್ರವೇಶಿಸಿ, ಅಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದ ಯಾದೋಗಣಕ್ಕೆ

ಅಧ್ಯಕ್ಷರಾದ ವರುಣದೇವರನ್ನು ನೋಡಿ, ಮ್ಲೇಂಛನಂತೆ ಒಂದು ಕೈಯಿಂದ ಬಗ್ಗಿ ಸಲಾಮು ಹೊಡೆದು, ನಗುತ್ತಾ ಎಲೈ ರಾಜಾಧಿರಾಜನೇ ನನಗೆ ಯುದ್ಧವನ್ನು ಕೊಡು, ಎಂದು ಹೇಳಿದನು. ಎಲೈ ವರುಣನೇ! ನೀನು ಲೋಕಪಾಲಕರಲ್ಲಿ ಶ್ರೇಷ್ಠನಾಗಿರುತ್ತೀಯೆ. ಬಹಳ ಕೀರ್ತಿವಂತನೂ ಆಗಿರುತ್ತೀಯೆ. ತಾವೇ ಬಲಿಷ್ಠರೆಂದು ಮೆರೆಯುತ್ತಿರುವ ಎಲ್ಲಾ ರಾಜರನ್ನೂ ನೀನು ಯುದ್ಧದಲ್ಲಿ ಗೆದ್ದು ರಾಜಸೂಯಯಾಗವನ್ನು ಮಾಡಿರುತ್ತೀಯೆಂದು ನಾನು ಕೇಳಿರುತ್ತೇನೆ. ಆದುದರಿಂದ ಮಹಾಪರಾಕ್ರಮಿಯಾದ ನಿನ್ನ ಸಂಗಡ ಯುದ್ಧಮಾಡಬೇಕೆಂಬ ಆಶೆಯು ನನಗಿರುತ್ತದೆ. ಯುದ್ಧಮಾಡುವನಾಗು, ಎಂದನು.

ಆ ಮಾತನ್ನು ಕೇಳಿ ಉಕ್ಕಿ ಬರುತ್ತಿದ್ದ ಕೋಪವನ್ನು ವರುಣ ದೇವರು ತಡೆದುಕೊಂಡು, ವ್ಯಕ್ತವಾದ ಮದವುಳ್ಳವನೂ, ದೃಢವಾದ ಒಳಗಿನ ದ್ವೇಷದಿಂದ ಕೂಡಿದ ಹಿರಣ್ಯಾಕ್ಷನನ್ನು ಕುರಿತು, ಅಯ್ಯಾ ಈಗ ನಾವು ವಯಸ್ಸಿನಿಂದ ಕೈಕಾಲುಗಳಲ್ಲಿದ್ದ ಬಲವನ್ನು ಕಳೆದುಕೊಂಡಿರುತ್ತೇವೆ. ಕೇವಲ ಮಹಾಬಲಿಷ್ಠರಲ್ಲೇ ಯುದ್ಧಮಾಡಬೇಕೆಂಬ ಸಂಕಲ್ಪವುಳ್ಳ ನಿನ್ನಂತಹ ಪರಾಕ್ರಮ ಅಭಿಮಾನಶಾಲಿಯೊಡನೆ ಯುದ್ಧಮಾಡಲು ಸಮರ್ಥನಾದವನನ್ನು ಆ ಪುರಾತನ ಪುರುಷನಾದ ಶ್ರೀಪರಮಾತ್ಮನ ಹೊರತು ಬೇರೆ ಯಾರನ್ನೂ ನಾನು ಕಾಣೆನು. ಅವನಾದರೆ ನಿನ್ನ ಸಂಗಡ ನಿನಗೆ ಸಮಾಧಾನವಾಗುವಂತೆ ಯುದ್ಧಮಾಡಿ ನಿನ್ನನ್ನು ಆಕ್ರಮಿಸುತ್ತಾನೆ. ನೀನೇನಾದರೂ ಅವನ ಸಂಗಡ ಯುದ್ಧಮಾಡಿದ್ದೇ ಆದರೆ ನೀನು ಬೇಗನೇ ನಾಯಿ ನರಿಗಳ ಗುಂಪಿನೊಡನೆ ಕೂಡಿದವನಾಗಿ ಯುದ್ಧದಲ್ಲಿ ಸತ್ತು ಬೀಳುವ ಶರೀರ ವುಳ್ಳವನಾಗುತ್ತೀಯೆ. ಆತನು ದೃಷ್ಟಿಗೋಚರನಾಗದಿದ್ದರೂ ನಿನ್ನಂತಹ ದುಷ್ಟರಿಗೆ ಉತ್ಕೃಷ್ಟವಾದ ಶಾಂತಿಯನ್ನುಂಟುಮಾಡುವುದಕ್ಕಾಗಿಯೂ, ಸಜ್ಜನರಲ್ಲಿ ಅನುಗ್ರಹಿಸುವುದಕ್ಕಾಗಿಯೂ, ಅವತಾರ ರೂಪಗಳನ್ನು ಧರಿಸುತ್ತಾನೆ, ಎಂದನು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಹದಿನೆಂಟನೆಯ ಅಧ್ಯಾಯವು ಮುಗಿಯಿತು.**

## अथ एकोनविंशोऽध्यायः

**मैत्रेय उवाच**

तदेवमाकर्ण्य जलेशभाषितं महामनस्तद् विगणय्य दुर्मदः ।
हरेर्विदित्वा गतिमङ्ग नारदाद् रसातलं संविविशे त्वरान्वितः ॥ १ ॥

ददर्श तत्राविजितं धराधरं प्रोन्नीयमानावनिमग्रदंष्ट्रया ।
मुष्णन्तमक्ष्णाम्बुरुहारुणश्रियं जहास चाहो वनगोचरो मृगः ॥ २ ॥

आहैनमेह्यज्ञ महीं विमुञ्च नो रसौकसां विश्वसृजेयमर्पिता ।

न स्वस्ति यास्यस्यमुया ममेक्षितः सुराधमासादितसूकराकृते ॥ ३ ॥
त्वं नः सपत्नैरभयाय किं भृतो यो मायया हंस्यसुरान् परोक्षजित् ।
त्वां योगमायाबलमल्पपौरुषं संस्थाप्य मूढं प्रमृजे सुहृच्छुचः ॥ ४ ॥
त्वयि स्थिते गदया शीर्णशीर्षण्यस्मद्भुजच्युतया ये च तुभ्यम् ।
बलिं हरन्त्यृषयो ये च देवाः स्वयं सर्वे न भविष्यन्त्यमूलाः ॥ ५ ॥
स तुद्यमानोऽरिदुरुक्ततोमरैर्दंष्ट्राग्रगां गामुपलभ्य भीताम् ।
तोदं मृषन् निरगादम्बुमध्याद् ग्राहाहतः सकरेणुर्यथेभः ॥ ६ ॥
तं निःसरन्तं सलिलादनुद्रुतो हिरण्यकेशो द्विरदं यथा झषः ।
करालदंष्ट्रोऽशनिनिःस्वनोऽब्रवीद् गतह्रियां किं न्वसतां विगर्हितम् ॥ ७ ॥
स गामुदस्तात् सलिलस्य गोचरे विन्यस्य तस्यामदधात् स्वसत्त्वम् ।
अभिष्टुतो विश्वसृजां प्रसूनैरापूर्यमाणो विबुधैः पश्यतोऽरेः ॥ ८ ॥
परानुषक्तं तपनीयोपकल्पमहागदं काञ्चनचित्रिताङ्गम् ।
मर्माण्यभीक्ष्णं प्रतुदन्तं दुरुक्तैः प्रचण्डमन्युः प्रहसंस्तं बभाषे ॥ ९ ॥

**भगवानुवाच**

सत्यं वयं भो वनगोचरा मृगा युष्मद्विधान् मृगये ग्रामसिंहान् ।
न मृत्युपाशैः प्रतियुक्तस्य वीराः विकत्थनं तव गृह्णन्त्यभद्र ॥ १० ॥
एते वयं न्यासहरा रसौकसां गतह्रियो गदया द्रावितास्ते ।
तिष्ठामहेऽथापि कथञ्चिदाजौ स्थेयं क्व यामो बलिनोत्पाद्य वैरम् ॥ ११ ॥
त्वं यद् रथानां किल यूथपाधिपो घटस्व नोऽस्वस्तय आश्वदुद्रुहः ।
संस्थाप्य चास्मान् प्रमृजाश्रु स्वकानां यः स्वां प्रतिज्ञां नातिपिपर्त्यसभ्यः ॥ १२ ॥
सोऽधिक्षिप्तो भगवता प्रलब्धश्च रुषा भृशम् ।
आजहारोल्बणं क्रोधं क्रीड्यमानोऽहिराडिव ॥ १३ ॥
विसृजन्नहिवच्छ्वासं मन्युप्रचलितेन्द्रियः ।

आसाद्य तरसा दैत्यो गदयाऽभ्यहनद्धरिम् ॥ १४ ॥

भगवांस्तु गदावेगं विसृष्टं रिपुणोरसि ।
अवञ्चयत् तिरश्चीनो योगारूढ इवान्तकम् ॥ १५ ॥

पुनर्गदां स्वामादाय भ्रामयन्तमभीक्ष्णशः ।
अभ्यधावद्धरिः क्रुद्धः संरम्भाद् दष्टदच्छदः ॥ १६ ॥

ततः स्वगदयाऽरातिं दक्षिणांसभुवि प्रभुः ।
आजघ्ने स तु तां सौम्य गदया कोविदोऽहनत् ॥ १७ ॥

एवं गदाभ्यां गुर्वीभ्यां हर्यक्षो हरिरेव च ।
जिगीषया सुसंरब्धावन्योन्यमभिजघ्नतुः ॥ १८ ॥

तयोः स्पृधोः स्निग्धगदाहताङ्गयोः क्षतस्रवाघ्राणविवृद्धयुद्धयोः ।
विचित्रमार्गांश्चरतोर्जिगीषया व्यभादिलायामिव शुष्मिणोर्मृधः ॥ १९ ॥

दैत्यस्य यज्ञावयवस्य मायया गृहीतवाराहतनोर्महात्मनः ।
कौरव्य मह्यां द्विषतोर्विमर्दनं दिदृक्षुरागाद् ऋषिभिर्वृतः स्वरा ॥ २० ॥

आसन्नशौण्डीरमपेतसाध्वसं कृतप्रतीकारमहार्यविक्रमम् ।
विलक्ष्य दैत्यं भगवान् सहस्रणीर्जगाद नारायणमादिसूकरम् ॥ २१ ॥

ब्रह्मोवाचएष ते देव देवानामङ्घ्रिमूलमुपेयुषाम् ।
विप्राणां सौरभेयीणां भूतानामप्यनागसाम् ॥ २२ ॥

आगस्कृद् भयकृद् दुष्कृदस्मल्लब्धवरोऽसुरः ।
अन्वेषयन्नप्रतिरथो लोकानटति कण्टकः ॥ २३ ॥

मैनं मायाविनं दृप्तं निरङ्कुशमसत्तमम् ।
आक्रीड बालवद् देव यदाशीविषमुत्थितम् ॥ २४ ॥

न यावदेष वर्धेत स्वां वेलां प्राप्य दारुणः ।
स्वां देवमायामास्थाय तावज्जह्येनमच्युत ॥ २५ ॥

एषा घोरतमा सन्ध्या लोकशम्बरी प्रभो ।

उपसर्पति सर्वात्मन् सुराणां जयमावह ॥ २६ ॥

अधुनैवाभिजिन्नाम योगो मौहूर्तिकोऽभ्यगात् ।
शिवाय नस्त्वं सुहृदामाशु निस्तर दुस्तरम् ॥ २७ ॥

दिष्ट्या त्वा विहितं मृत्युमयमासादितः स्वयम् ।
विक्रम्यैनं मृधे हत्वा लोकानाधेहि शर्मणि ॥ २८ ॥

## ॥ इति श्रीमद्भागवते (तृतीयस्कन्धे( *3) एकोनविंशोऽध्यायः ॥

**॥ ಹತ್ತೊಂಭತ್ತನೆಯ ಅಧ್ಯಾಯ ॥**

## ವರಾಹ- ಹಿರಣ್ಯಾಕ್ಷರ ಯುದ್ಧ

ಮೈತ್ರೇಯರು ವಿದುರನಿಗೆ, ಹಿಂದಿನ ಅಧ್ಯಾಯದಲ್ಲಿ ವರುಣದೇವರು ಹೇಳಿದ ಬಹು ಅರ್ಥಗರ್ಭಿತಗಳಾದ ಮಾತುಗಳನ್ನು ಹಿರಣ್ಯಾಕ್ಷನು ಕೇಳಿದ ನಂತರ ಏನು ಮಾಡಿದ ಎಂಬುವುದನ್ನು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ:-

ಎಲೈ ವಿದುರನೆ! ವರುಣದೇವರು ಹಿರಣ್ಯಾಕ್ಷನಿಗೆ, ನಿನ್ನಂತಹ ಪರಾಕ್ರಮಿಗಳಿಗೆ ಸಮಾಧಾನವಾಗುವಂತೆ ಯುದ್ಧಮಾಡಲೂ, ಸಜ್ಜನರನ್ನು ಸಂರಕ್ಷಿಸಲೂ, ಸಮರ್ಥನೊಬ್ಬನೇ ಆದ ಆ ಪರಮಪುರುಷನು ಕಣ್ಣಿಗೆ ಕಾಣಿಸದಿದ್ದರೂ, ನಿನ್ನಂಥವರ ಸಂಹಾರಕ್ಕಾಗಿ ಅವತರಿಸುತ್ತಾನೆಂದು ಹೇಳಿ, ಸಮುದ್ರದ ಕಡೆಗೆ ನೋಡುತ್ತಾ ಅವನು ಈ ಜಲದಲ್ಲೇ ರಸಾತಳದಲ್ಲಿರುತ್ತಾನೆಂಬುದನ್ನು ಸೂಚಿಸುವಂತೆ ಕಣ್ಣು ಮಿಟಿಕಿಸಿದನು. ಹಿರಣ್ಯಾಕ್ಷನು ವರುಣದೇವರ ಮಾತನ್ನು ಕೇಳಿ ಅವರನ್ನು ದುರ್ಬಲರೆಂದು ಉದಾಶಿಸಿ, ಶ್ರೀಹರಿಯು ರಸಾತಳದಲ್ಲಿರುತ್ತಾನೆಂಬುದನ್ನು ಅವರ ಕಣ್ಣಿನ ಸೂಚನೆಯಿಂದ ತಿಳಿದವನಾಗಿ ಆತುರದಿಂದ ರಸಾತಳಕ್ಕಾಗಿ ನುಗ್ಗಿದನು.

ರಸಾತಳದಲ್ಲಿ ತನ್ನ ಕೋರೆದಾಡೆಯ ಮೇಲೆ ಹಿರಣ್ಯಾಕ್ಷನು ಹಿಂದೆಯೇ ನೀರಿನಲ್ಲಿ ಹುದುಗಿಸಿಟ್ಟಿದ್ದ ಭೂಮಿಯನ್ನು ಹೊತ್ತುಕೊಂಡು ಮೇಲಕ್ಕೆ ಬರುತ್ತಿರುವ, ಕಮಲದಳದಂತೆ ಕೆಂಪಾದ ವೈಭವವುಳ್ಳ ಕಣ್ಣುಳ್ಳವನೂ, ಯಾರಿಂದಲೂ ಜಯಿಸಲು ಅಸಾಧ್ಯನೂ ಆದ ವರಾಹರೂಪಿ ಪರಮಾತ್ಮನನ್ನು ಹಿರಣ್ಯಾಕ್ಷನು ಕಂಡು ಓಹೋ! ಭೂಮಿ, ಆಕಾಶ, ನೀರುಗಳಲ್ಲಿ ಸಂಚಾರಮಾಡುವ ಎಲೈ ಮೃಗವೇ ನನಗೆ ನೀನು ಇಲ್ಲಿ ದೃಷ್ಟಿಗೆ ಗೋಚರನಾದೆಯಾ? ಎಂದು ಹಾಸ್ಯಮಾಡಿ ನಕ್ಕನು.

ಈ ಮಾತುಗಳಿಗೆ ಅಂತರ್ಭಾವವೆಂಬ ಆವಿಷ್ಟ ಸುರಾವೇಶದಿಂದ ಪರಮಾತ್ಮನನ್ನು ಭೂಮ್ಯಂತರಿಕ್ಷಜಲಾದಿ ಸರ್ವತ್ರ ವ್ಯಾಪ್ತನೂ, ಯೋಗಿಗಳ ದೃಷ್ಟಿಗೆ ಹುಡುಕಿದರೂ ಕಾಣದ ಎಲೈ ಸ್ವಾಮಿಯೆ! ನೀನು ನನಗೆ ಈ ಮೃಗರೂಪವಾದ ವರಾಹರೂಪದಿಂದ ಇಲ್ಲಿ ಗೋಚರನಾದೆಯಾ? ಎಂದೂ, ಬಹಿರ್ಭಾವವೆಂಬ ದ್ವೇಷಭಾವದಿಂದ, ಅಯ್ಯೋ! ಪರಮಾತ್ಮನೆಂದರೆ ನಾನು ಏನೋ ಮಹಾಪರಾಕ್ರಮಿ ಎಂದೆಣಿಸಿದ್ದರೆ, ನಮಗೆ ಕಾಡಿನಲ್ಲಿ ಕಾಣಿಸುವ ಕಾಡುಹಂದಿಯಂತಿರುವ ಮೃಗನೇ ಈ ಪರಮಾತ್ಮನೆಂಬುವನು? ಎಂಬ ವಿಪರೀತಜ್ಞಾನವೂ ಹಾಸ್ಯವೂ ತೋರಿಸಲ್ಪಟ್ಟಿತೆಂದು ತಿಳಿಯ ಬೇಕು. ಇದರಂತೆಯೇ ಮುಂದಿನ ಮಾತುಗಳಿಗೂ ಭಕ್ತಿ, ದ್ವೇಷ ಪರಗಳಾಗಿ ಅರ್ಥಗಳನ್ನು ಭಾವಿಸಬೇಕು.

ನಂತರ ಹಿರಣ್ಯಾಕ್ಷನು ಅಂತರ್ಭಕ್ತಿಯಿಂದ ಸುರಾಧಮ, ಎಂದರೆ ಬ್ರಹ್ಮಾದಿ ದೇವತೆಗಳನ್ನೇ ಅಧಮರನ್ನಾಗಿವುಳ್ಳ ಸರ್ವೋತ್ತಮನೇ, ಎಂಬ ಭಾವದಿಂದಲೂ, ಅಸುರಾವೇಶದಿಂದ ಸುರಾಧಮ, ಎಂದರೆ ದೇವತೆಗಳ ಜ್ಞಾನಕ್ಕೆ ವಿಪರೀತ ಜ್ಞಾನವುಳ್ಳವನಾದ ಕಾರಣ ದೇವತೆಗಳಲ್ಲೆಲ್ಲಾ ಅಧಮನಾದ ಸೂಕರ ರೂಪವನ್ನು ಧರಿಸಿರತಕ್ಕವನೆ! ಎಂದೂ, ಆ ವರಹರೂಪಿ ಪರಮಾತ್ಮನನ್ನು ಸಂಬೋಧಿಸಿ, ಎಲೈ ದೇವಾಧಮನಾದ ಸೂಕರನೆ! ಇಲ್ಲಿ ಬಾ. ಈ ಭೂಮಿಯು ದೈತ್ಯರಾದ ನಮಗೆ ಸೃಷ್ಟಿಕರ್ತನಾದ ಬ್ರಹ್ಮದೇವರಿಂದ ರಸಾತಳದಲ್ಲಿ ಇಟ್ಟುಕೊಳ್ಳುವುದಕ್ಕಾಗಿ ಕೊಡಲ್ಪಟ್ಟಿದೆ. ನೀನು ತಿಳುವಳಿಕೆ ಇಲ್ಲದವನಾದ್ದರಿಂದ ಮೂಢನಂತೆ ತೆಗೆದುಕೊಂಡು ಹೋಗುತ್ತಿದ್ದೀಯೆ. ಮೊದಲು ಭೂಮಿಯನ್ನು ಇಲ್ಲಿ ಬಿಡು. ನನ್ನಿಂದ ಕಾಣಲ್ಪಟ್ಟ ನಿನಗೆ ಭೂಮಿಯನ್ನು ಬಿಟ್ಟುಹೋಗದಿದ್ದರೆ ಕ್ಷೇಮ ಉಂಟಾಗುವುದಿಲ್ಲ.

ನೀನು ನಮ್ಮ ಬಲತಾಯಿಯ ಪುತ್ರರಾದ ದೇವತೆಗಳಿಂದ ಸಂರಕ್ಷಣೆಗೆಳಿಗಾಗಿ ಪ್ರಾರ್ಥಿಸಲ್ಪಟ್ಟವನಾಗಿ ಅನೇಕ ವೇಳೆ ಅವರಿಂದ ಕೂಡಿಕೊಂಡು, ಒಂದೊಂದು ಸಲ ಒಂದೊಂದು ರೂಪಿನಿಂದ , ನೀನು ಎಂಬುವದು ನಮಗೆ ಗೊತ್ತಾಗದಂತೆ, ಕಪಟ ರೂಪಗಳಿಂದ, ನಮ್ಮ ಬಂಧುಗಳಾದ ಅನೇಕ ದೈತ್ಯರನ್ನು ಮೋಸದಿಂದ ಸಂಹರಿಸಿದ್ದೀಯೆ! ಹೀಗೆ ಯೋಗಮಾಯಾ ಬಲವೆಂಬ ಮಾಯೆಯಿಂದ ಕೂಡಿದ, ಅಲ್ಪ ಬಲವುಳ್ಳ ಮೂಢನಾದ ನಿನ್ನನ್ನು ನಾನು ಈಗ ತೀರಿಸಿಬಿಟ್ಟು ಆಮೇಲೆ ನಮ್ಮವರ ಕಣ್ಣೀರುಗಳನ್ನು ಒರೆಸುವನಾಗಿ ಅವರಿಗೆ ಸಮಾಧಾನಮಾಡುತ್ತೇನೆ. ಯಾವ ನಿನ್ನ ಗದೆಯಿಂದ ದೈತ್ಯರ ಶಿರಸ್ಸುಗಳನ್ನು ಚೂರ್ಣಮಾಡಿ ಬಲಿಯಾಗಿ ಸಮರ್ಪಿಸುತ್ತೇನೆ. ನಂತರ ಯಾವ ಋಷಿಗಳೂ ದೇವತೆಗಳೂ ನಿನಗೆ ಪೂಜೆ ಮಾಡುತ್ತಾರೆಯೋ ಅವರಿಗೆ ಮೂಲಾಶ್ರಯನಾದ ನೀನೇ ಇಲ್ಲದೇ ಹೋಗುತ್ತೆ, ಎಂದನು.

ಈ ರೀತಿಯಾಗಿ ದುಷ್ಟವಾದ ಮಾತುಗಳನ್ನು ಹಿರಣ್ಯಾಕ್ಷನು ಆಡುತ್ತಿದ್ದರೂ ಯಜ್ಞವರಾಹಮೂರ್ತಿಯು, ಅವನನ್ನೂ ಅವನ ಮಾತುಗಳನ್ನೂ ಲಕ್ಷಿಸದೆ, ಸ್ವದಂಷ್ಟ್ರಾಗ್ರದಲ್ಲಿ

ಭಯದಿಂದ ಕೂಡಿದ ಭೂಮಿಯನ್ನು ಧರಿಸಿದವನಾಗಿ, ಜಲದ ಮೇಲ್ಭಾಗದಲ್ಲಿ ಭೂಮಿಯನ್ನು ಸ್ಥಾಪಿಸುವುದಕ್ಕಾಗಿ ನೀರನ್ನು ಭೇದಿಸಿಕೊಂಡು ಮೇಲಕ್ಕೆ ಹೊರಟನು. ಅದನ್ನು ಕಂಡು ಹಿರಣ್ಯಾಕ್ಷನು ವರಾಹಮೂರ್ತಿಯನ್ನು ಅಟ್ಟಿಸಿಕೊಂಡು ಹಿಂದಿನಿಂದ ಬರುತ್ತಿದ್ದರೂ ವರಾಹನು ಅಲಕ್ಷ್ಯದಿಂದ ಹಿಂತಿರುಗಿ ನೋಡದೆ, ಹೆಣ್ಣಾನೆಯಿಂದ ಹಿಂಬಾಲಿಸಲ್ಪಟ್ಟ ಗಂಡಾನೆಯಂತೆ ನೀರಿನ ಮೇಲ್ಭಾಗಕ್ಕೆ ಬಂದು, ಸಮೀಪದ ಒಂದು ಸ್ಥಳದಲ್ಲಿ ಭೂದೇವಿಯಲ್ಲಿ ತನ್ನ ಒಂದು ಭಾಗದ ಅಪಾರ ಶಕ್ತಿಯನ್ನು ಸ್ಥಾಪಿಸಿ, ಅಲ್ಲಾಡದಂತೆ ಇಟ್ಟನು. ಹಿಂದಿನಿಂದ ಹಿರಣ್ಯಾಕ್ಷನೂ ಏದುಬ್ಬಸಪಡುತ್ತಾ ಮೇಲಕ್ಕೆ ಬಂದು ಇನ್ನೇನು! ಬಲಹೀನರಾದವರು ಕಳ್ಳತನದಿಂದ ಈ ರೀತಿಯಾಗಿ ತಾನೇ ದುಷ್ಟರಂತೆ ಓಡಿಹೋಗುವುದು? ಎಂದನು.

ಪರಮಾತ್ಮನು ಭೂದೇವಿಯನ್ನು ಸ್ಥಾಪಿಸಿದನಂತರ ಬ್ರಹ್ಮದೇವರು ಸ್ತೋತ್ರಮಾಡಿದರು. ಆ ದೈತ್ಯನು ನೋಡುತ್ತಿದ್ದ ಹಾಗೆಯೇ ಆ ಭೂಮಿಯಲ್ಲಿ ದೇವತೆಗಳೆಲ್ಲಾ ಬಂದು ನೆಲೆಸಿದರು. ತನ್ನ ದ್ವೇಷಿಗಳಾದ ದೇವತೆಗಳು ಭೂಮಿಯನ್ನಾಕ್ರಮಿಸಿದ್ದನ್ನು ನೋಡಿ ಸೈರಿಸದೇ ಭಂಗಾರದ ಆಭರಣಗಳಿಂದಲಂಕೃತನೂ, ಮಹಾಗದೆಯನ್ನು ಧರಿಸಿರತಕ್ಕವನೂ ಆದ ಹಿರಣ್ಯಾಕ್ಷನು, ಕೆಟ್ಟ ಮಾತುಗಳನ್ನಾಡುತ್ತಾ ಸಿಡಗುಟ್ಟುವದನ್ನು ಶ್ರೀವರಾಹಮೂರ್ತಿಯು ನೋಡಿ ನಗುತ್ತಾ ಅವನಿಗೆ ಹೀಗೆ ಹೇಳಿದನು:-

ಎಲೈ ದೈತ್ಯರೂಪದಲ್ಲಿರುವ ಹಳ್ಳಿಯ ನಾಯಿಯೆ! ನಾವು ನಿಮ್ಮಂತಹ ನಾಯಿಗಳನ್ನು ಬೇಟೆಯಾಡುವ ಕಾಡು ಮೃಗಗಳೆಂಬುವುದು ಸತ್ಯವೇ ಸರಿ! ಪಾಪ ಮೃತ್ಯುಬಾಯಿಯಲ್ಲಿ ಸಿಕ್ಕಿ, ಸಿಕ್ಕಿದ ಹಾಗೆ ಬೊಗಳುವಂತಹ ನಿನ್ನ ಮಾತುಗಳನ್ನು ಕೇಳಿ ಯಾವ ವೀರನು ತಾನೇ ಲಕ್ಷ್ಯ ಮಾಡ್ಯಾನು! ಈ ರಸಗ್ರಾಹಿಗಳಾದ ದೇವತೆಗಳು ಮಾಡುವ ಪೂಜಾದಿಗಳನ್ನು ಸ್ವೀಕರಿಸುವ, ಬಲಹೀನರಾದ ನಾವು, ನಿನ್ನ ಗದೆಗೆ ಹೆದರಿ, ಭೂಮಿಯನ್ನು ತೆಗೆದುಕೊಂಡೇ ಇಲ್ಲಿಗೆ ಓಡಿಬಂದೆವು. ಧೈರ್ಯಸ್ಥನೂ, ಮಹಾಬಲಶಾಲಿಯೂ ಆದ ನಿನ್ನಲ್ಲಿ, ನಾವು ವೈರವನ್ನು ಮಾಡಿ ಎಲ್ಲಿಗೆ ತಾನೇ ಓಡಿಹೋಗಲು ಸಾಧ್ಯ? ಆದ್ದರಿಂದ ಹೇಗೋ ಧೈರ್ಯದಿಂದ ಇಲ್ಲಿಯೇ ಇರುವವರಾಗುತ್ತೇವೆ. ನೀನು ಭ್ರಷ್ಟಸಂಕಲ್ಪನಾಗದೆ, ಬೇಗನೆ ನಮ್ಮನ್ನು ಸಂಹಾರಮಾಡಿ ತೀರಿಸಿಬಿಟ್ಟು, ನಿಮ್ಮವರ ಅಶ್ರುಗಳನ್ನು ಒರೆಸಿ ಸಂತೈಸಿ, ನಿನ್ನ ಸಂಕಲ್ಪವನ್ನು ಸಭ್ಯನಂತೆ ಪೂರೈಸಿಕೊಳ್ಳುವನಾಗು, ಎಂದನು.

ಪರಮಾತ್ಮನು ಈ ರೀತಿ ಹಿರಣ್ಯಾಕ್ಷನು ಆಡಿದ ಮಾತುಗಳಿಂದಲೇ ಅವನನ್ನು ಹಾಸ್ಯಮಾಡಲು, ಅದನ್ನು ಆ ದೈತ್ಯನು ಕೇಳಿ ಬಹಳ ಕೋಪವುಳ್ಳವನಾಗಿ, ಸರ್ಪದಂತೆಯೇ ರೋಷದಿಂದ ಬುಸುಗುಟ್ಟುತ್ತಾ, ಉದ್ವೇಗವುಳ್ಳ ಇಂದ್ರಿಯಗಳುಳ್ಳವನಾಗಿ, ರೋಷಾವೇಷದಿಂದ, ತನ್ನ ಗದೆಯನ್ನು ಪರಮಾತ್ಮನ ಶಿರಸ್ಸಿನ ಮೇಲೆ ಬೀಳುವಂತೆ ಎಸೆದನು. ಪರಮಾತ್ಮನು ಸ್ವಲ್ಪವಾರೆಯಾಗಿ, ಯೋಗಾರೂಢನಾದವನು

ಮೃತ್ಯುವನ್ನು ಹೇಗೆ ಗೆಲ್ಲುತ್ತಾನೋ ಹಾಗೆ, ಗದೆಯಿಂದ ತಪ್ಪಿಸಿಕೊಂಡು ತಿರುಗಿಸುತ್ತಾ ಪುನಃ ಹೊಡೆಯುವುದರೊಳಗಾಗಿಯೇ, ಪರಮಾತ್ಮನು ಕೆಳತುಟಿಯನ್ನು ಕಚ್ಚಿಕೊಂಡು, ತಾನೂ ರೋಷವುಳ್ಳವನಂತೆ ತೋರಿಸುತ್ತಾ, ದೈತ್ಯನ ಕಡೆಗೆ ವೇಗದಿಂದ ಹೋಗಿ ತನ್ನ ಗದೆಯಿಂದ ಆ ದೈತ್ಯನು ತಿರಿಗಿಸುತ್ತಿದ್ದ ಗದೆಯನ್ನು ಹೊಡೆಯುತ್ತಾ ಇಬ್ಬರೂ ಗದಾಯುದ್ಧವನ್ನು ಮಾಡಿದರು.

ಹೀಗೆ ಸ್ಪರ್ಧೆಯಿಂದ ಕಾದಾಡುತ್ತಾ, ಗದೆಯ ಏಟುಗಳಿಂದ ಸುರಿಯುವ ರಕ್ತದ ವಾಸನೆಯಿಂದ ಅತ್ಯಂತ ಕ್ರೋಧವುಳ್ಳವರಾಗಿ, ಒಬ್ಬರನ್ನೊಬ್ಬರು ಜಯಿಸುವ ಅಭಿಲಾಷೆಯಿಂದ ಮದದಿಂದ ಕೂಡಿದ ಗೂಳಿಗಳು ಕಾದಾಡುವಂತೆ, ವಿಚಿತ್ರ ವೇಗದಿಂದ ಯುದ್ಧಮಾಡುತ್ತಿದ್ದರು. ಈ ರೀತಿಯಲ್ಲಿ ಹಿರಣ್ಯಾಕ್ಷನೆಂಬ ದೈತ್ಯನಿಗೂ, ಯಜ್ಞಪುರುಷನಾದ ವರಾಹ ರೂಪನಿಗೂ, ಆಗುವ ಯುದ್ಧವನ್ನು ನೋಡುವುದಕ್ಕಾಗಿ ಸಮಸ್ತ ಋಷಿಗಳೂ, ದೇವತೆಗಳಿಂದ ಕೂಡಿಕೊಂಡು ಬ್ರಹ್ಮದೇವರು ಬಂದು, ಅಂತರಿಕ್ಷದಲ್ಲಿ ನೋಡುತ್ತಿದ್ದರು.

ಲೋಕಕಂಟಕರ ಸಂಹಾರವನ್ನು ಪರಮಾತ್ಮನು ಮಾಡುವುದನ್ನು ನೋಡಲಪೇಕ್ಷೆಯುಳ್ಳ, ತಮ್ಮ ಅಂತರ್ಯಾಮಿಯಾದ ಮುಕ್ತಿದಾಯಕನಾದ ಪರಮಾತ್ಮನ ಮಹಿಮಾಜ್ಞಾನವನ್ನು ಇತರರಿಗೆ ಉಪದೇಶಿಸಿ ಉದ್ಧಾರಮಾಡತಕ್ಕ, ನಿರಂತರ ಭಗವದೇಕ ನಿಷ್ಠರಾದ್ದರಿಂದ ಸ್ವರಾಟ್ ಶಬ್ದವಾಚ್ಯರಾದ ಬ್ರಹ್ಮದೇವರು, ಶ್ರೀಪರಮಾತ್ಮನು ಮಹಾಬಲಿಷ್ಠನೂ, ಕೋಪದಿಂದ ಪ್ರವೃದ್ಧವಾಗುತ್ತಿರುವ ಪರಾಕ್ರಮವುಳ್ಳವನೂ, ಪ್ರಚಂಡ ಗದಾಯುದ್ಧ ಪ್ರವೀಣನೂ ಆದ ದೈತ್ಯನೊಡನೆ ಕ್ರೀಡಿಸುತ್ತಾ ಸಮಾನವಾಗಿ ಯುದ್ಧಮಾಡುತ್ತಿರುವನೋ ಎಂಬಂತೆ ತೋರಿಸುತ್ತಿರುವುದನ್ನು ನೋಡಿ, ದೇವತೆಗಳ ದ್ವೇಷಿಯೂ ಪ್ರಾಣಿ ಹಿಂಸಕನೂ ಆದ ಆ ಹಿರಣ್ಯಾಕ್ಷನನ್ನು ದೇವರು ಬೇಗ ಸಂಹಾರಮಾಡಲಿ ಎಂಬ ಅಪೇಕ್ಷೆಯಿಂದ, ವರಾಹರೂಪಿಯಾದ ಶ್ರೀಮನ್ನಾರಾಯಣನನ್ನು ಈ ರೀತಿ ಸ್ತೋತ್ರಮಾಡಿ ವಿಜ್ಞಾಪಿಸಿಕೊಂಡರು:-

ಎಲೈ ಸ್ವಾಮಿಯೆ! ಈ ಹಿರಣ್ಯಾಕ್ಷನು ನಾನು ಕೊಟ್ಟ ವರ ಬಲದಿಂದ, ಸಕಲ ದೇವತೆಗಳನ್ನೂ, ದೇವೋತ್ತಮರನ್ನೂ ತನ್ನ ಪಾದಸೇವಕರನ್ನಾಗಿ ಮಾಡಿಕೊಂಡಿರುತ್ತಾನೆ. ಬ್ರಾಹ್ಮಣ, ಗೋವುಗಳು, ಸಾಧುವಾದ ಇತರ ಪ್ರಾಣಿಗಳನ್ನು ಹಿಂಸಿಸಿ, ಅವುಗಳಿಗೆ ನಿರಂತರ ಭಯ ಉಂಟುಮಾಡಿ, ಪ್ರಾಣಿಗಳಿಗೆ ಮಾಡಬಾರದ ಚಿತ್ರಹಿಂಸೆಗಳನ್ನು ಇವನು ಮಾಡುತ್ತಿರುತ್ತಾನೆ. ಇವನು ಮುಕ್ತನಾಗಿ, ಮುಳ್ಳಿನ ಸದೃಶನಾಗಿ, ತನ್ನ ಸಂಗಡ ಯುದ್ಧಮಾಡಲು ಪ್ರತಿವೀರರನ್ನು ಕಾಣದೆ ಮೂರು ಲೋಕಗಳಲ್ಲಿಯೂ ಎಲ್ಲರನ್ನೂ ಹಿಂಸಿಸುತ್ತಾ ಸಂಚರಿಸುತ್ತಿರುತ್ತಾನೆ. ಸ್ವಾಮಿ, ಇವನು ನನ್ನ ವರವೆಂಬ ಆಶೀರ್ವಾದದಿಂದ

ಉತ್ಪನ್ನನಾದ ಘೋರವಿಷಸ್ವರೂಪನಾದ್ದರಿಂದ ಇವನ ಕೂಡ ಕ್ರೀಡಾ ಯುದ್ಧವನ್ನು ಸಾಕು ಮಾಡು. ಇವನು ತನ್ನ ಕಾಲವನ್ನು ನಿರೀಕ್ಷಿಸುತ್ತಾ ಇನ್ನು ಮುಂದೆಯೂ ಪ್ರವೃದ್ಧನಾಗದಂತೆ ನಿನ್ನ ಅಪರಿಮಿತ ಶಕ್ತಿಯ ಸ್ವಲ್ಪ ಭಾಗವನ್ನಾದರೂ ಪ್ರಯೋಗಿಸಿ ಇವನನ್ನು ಇಲ್ಲದಂತೆ ಮಾಡು.

ಎಲೈ ನಾಶರಹಿತನಾದ ಅಚ್ಯುತನೇ! ಇವನೇ ಲೋಕ ಹಿತವನ್ನು ನಾಶಮಾಡತಕ್ಕ ಘೋರವಾದ ತಮ ಸ್ವರೂಪನು. ಇವನನ್ನು ಬಿಟ್ಟರೆ ಲೋಕವನ್ನೇ ಆಕ್ರಮಿಸಿ ನಾಶಮಾಡುತ್ತಾನೆ. ಆದುದರಿಂದ ಈಗ ಅಭಿಜಿನ್ಮುಹೂರ್ತವು ಪ್ರಾಪ್ತವಾಗಿರುತ್ತಾಗಿ ಇವನನ್ನು ಈ ತಕ್ಷಣವೇ ಸಂಹಾರ ಮಾಡುವನಾಗು. ಎಲೈ ಸರ್ವ ಪ್ರಾಣಿಗಳಲ್ಲೂ ವಾಸಿಸಿ ಆತ್ಮ ಶಬ್ದವಾಚ್ಯನೂ, ಸರ್ವಭೂತ ದಯಾಪರನೂ ಆದ ಸರ್ವಾತ್ಮನೇ, ದೇವತೆಗಳಿಗೆ ಜಯವೂ ಅಭ್ಯುದಯ ಕಾಲವೂ ಉಂಟಾಗುವಂತೆ ಮಾಡು. ಈ ದೈತ್ಯನು ಈಗ ತಾನಾಗಿಯೇ ಮೃತ್ಯುಸ್ವರೂಪನಾದ ನಿನ್ನನ್ನು ಹುಡುಕಿಕೊಂಡು ಬಂದು ಸಮೀಪಗತನಾಗಿರುತ್ತಾನೆ. ಸಮಸ್ತರಿಂದಲೂ ಸಂಹರಿಸಲು ಸಾಧ್ಯನಲ್ಲದ ಇವನನ್ನು ನೀನು ಸಂಹರಿಸಿ, ಸಜ್ಜನರಾದ ದೇವತೆಗಳಿಗೆ ಮಂಗಳವನ್ನೂ ಕ್ಷೇಮವನ್ನೂ ಉಂಟುಮಾಡು, ಎಂದು ಪ್ರಾರ್ಥಿಸಿದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.**

**ಶ್ರೀಕೃಷ್ಣಾರ್ಪಣಮಸ್ತು**

## अथ विंशोऽध्यायः

### मैत्रेय उवाच

अवधार्य विरिञ्चस्य निर्व्यलीकमृतं वचः ।
प्रहस्य प्रेमगर्भेण तदपाङ्गेन सोऽग्रहीत् ॥ १ ॥

ततः सपत्नं मुखतश्चरन्तमकुतोभयम् ।
जघानोत्पत्य गदया हनावसुरमक्षतः ॥ २ ॥

सा हता तेन गदया विहिता भगवत्करात् ।
विघूर्णिता भृशं रेजे तदद्भुतमिवाभवत् ॥ ३ ॥

स तदा लब्धवीर्योऽपि न बबाधे निरायुधम् ।
मानयन् स मृधे धर्मं विश्वक्सेनं प्रकोपयन् ॥ ४ ॥

गदायामपविद्धायां हाहाकारे च निर्गते ।

मानयामास तं धर्मं सुनाभं चास्मरद् विभुः ॥ ५ ॥

तं व्यग्रचक्रं दितिपुत्राधमेन स्वपार्षदमुख्येन विषज्जमानम् ।
चित्रा वाचस्तद्विदां खेचराणां तत्र स्मासन् स्वस्ति तेऽमुं जहीति ॥ ६ ॥

स तन्निशम्यात्तरथाङ्गमग्रतो व्यवस्थितं पद्मपलाशलोचनम् ।
विलोक्य चामर्षपरिप्लुतेन्द्रियो रुषा स्वदन्तच्छदमादशच्छ्वसन् ॥ ७ ॥

करालदंष्ट्रश्चक्षुर्भ्यां संचक्षाणो दहन्निव ।
अभिद्रुत्य स्वगदया हतोऽसीत्यहनद्धरिम् ॥ ८ ॥

पदा सव्येन तां साधो भगवान् यज्ञसूकरः ।
लीलया मिषतः शत्रोः प्राहरद् वातरंहसा ॥ ९ ॥

आह चायुधमादत्स्व घटस्व त्वं जिगीषसि ।
इत्युक्तः स तया भूयस्ताडयन् व्यनदद् भृशम् ॥ १० ॥

तां स आपततीं वीक्ष्य भगवान् समवस्थितः ।
जग्राह लीलया प्राप्तां गरुत्मानिव पन्नगीम् ॥ ११ ॥

स्वपौरुषे प्रतिहते हतमानो महासुरः ।
नैच्छद् गदां दीयमानां हरिणा विगतप्रभः ॥ १२ ॥

जग्राह त्रिशिखं शूलं ज्वलितं ज्वलनापमम् ।
यज्ञाय धृतरूपाय विप्रायाभिचरन् यथा ॥ १३ ॥

तदोजसा दैत्यमहाभटार्पितं चकासदन्तः ख उदीर्णदीधिति ।
चक्रेण चिच्छेद निशातनेमिना हरिर्यथा ताक्ष्र्यपतत्रमुज्झितम् ॥ १४ ॥

वृक्णे च शूले बहुधारिणा हरेः प्रत्येत्य विस्तीर्णमुरो विभूतिमत् ।
प्रवृद्धरोषः सकठोरमुष्टिना नदन् प्रहृत्यान्तरधीयतासुरः ॥ १५ ॥

तेनेत्थमाहते क्षत्तर्भगवानादिसूकरः ।
नाकम्पत मनाग् वापि स्रजाहत इव द्विपः ॥ १६ ॥

अथोरुधाऽसृजन्मायां योगमायेश्वरे हरौ ।

यां विलोक्य प्रजास्त्रस्ता मेनिरेऽस्योपसंयमम् ॥ १७ ॥

प्रववुर्वायवश्चण्डास्तमः पांसवमीरयन् ।
दिग्भ्यो निपेतुर्ग्रावाणः क्षेपणैः प्रहिता इव ॥ १८ ॥

द्यौर्नष्टभगणाऽभ्रौघैः सविद्युत्स्तनयित्नुभिः ।
वर्षद्भिः पूयकेशासृग्विण्मूत्रास्थीनि चासकृत् ॥ १९ ॥

गिरयः प्रत्यदृश्यन्त नानायुधमुचोऽनघ ।
दिग्वाससो यातुधान्यः शूलिन्यो मुक्तमूर्धजाः ॥ २० ॥

बहुभिर्यक्षरक्षोभिः पत्त्यश्वरथकुञ्जरैः ।
आततायिभिरुत्सृष्टा हिंस्रा वाचोऽतिवैशसाः ॥ २१ ॥

प्रादुष्कृतानां मायानामासुरीणां विनाशनम् ।
सुदर्शनास्त्रं भगवान् प्रायुङ्क्त च ततस्त्रिपात् ॥ २२ ॥

तदा दितेः समभवत् सहसा हृदि वेपथुः ।
स्मरन्त्या भर्तुरादेशं स्तनाच्चासृक् प्रसुस्रुवे ॥ २३ ॥

व्युदस्तासु स्वमायासु भूयश्चाव्रज्य केशवम् ।
उपोपगूहमानोऽमुं ददृशेऽवस्थितं बहिः ॥ २४ ॥

तं मुष्टिभिर्विनिघ्नन्तं वज्रसारैरधोक्षजः ।
करेण कर्णमूलेऽहन् यथा त्वाष्ट्रं मरुत्पतिः ॥ २५ ॥

समाहतो विश्वसृजा ह्यवज्ञया परिभ्रमद्गात्र उदस्तलोचनः ।
विकीर्णबाह्वङ्घ्रिशिरोधरोऽपतद् यथा नगेन्द्रो लुलितो नभस्वता ॥ २६ ॥

क्षितौ शयानं तमकुण्ठवर्चसं करालदंष्ट्रं परिदष्टदच्छदम् ।
अजादयो वीक्ष्य शशंसुरागता अहो इमां को नु लभेत संस्थितिम् ॥ २७ ॥

यं योगिनो योगसमाधिना हरेर्ध्यायन्ति लिङ्गादसतो मुमुक्षवः ।
तस्यैष दैत्यऋषभः पदा हतो मुखं प्रपश्यंस्तनुमुत्ससर्ज ह ॥ २८ ॥

एतौ हि पार्षदावस्य शापाद् यातावसद्गतिम् ।

पुनः कतिपयैः स्थानं प्रपत्स्येते ह जन्मनि ॥ २९ ॥

**देवा ऊचुः**

नमो नमस्तेऽखिलयज्ञतन्तवे स्थितौ गृहीतामलसत्त्वमूर्तये ।

दिष्ट्या हतोऽयं जगतामरुन्तुदस्त्वत्पादभक्त्या वयमीश निर्वृताः ॥ ३० ॥

**मैत्रेय उवाच**

एवं हिरण्याक्षमसह्यविक्रमं संसादयित्वा हरिरादिसूकरः ।
जगाम लोकं स्वमखण्डितोत्सवं समीडितः पुष्करविष्टरादिभिः ॥ ३१ ॥

मया यथाऽनूक्तमथादितो हरेः कृतावतारस्य सुमित्र चेष्टितम् ।
यथा हिरण्याक्ष उदारविक्रमो महामृधे क्रीडनवन्निराकृतः ॥ ३२ ॥

**शुक उवाच**

इति कौशारवाख्यातामाश्रुत्य भगवत्कथाम् ।
क्षत्ताऽऽनन्दं परं लेभे महाभागवतो नृप ॥ ३३ ॥

अन्येषां पुण्यश्लोकानामुद्दामयशसां सताम् ।
उपश्रुत्य भवेन्मोदः श्रीवत्साङ्कस्य किं पुनः ॥ ३४ ॥

यो गजेन्द्रं झषग्रस्तं ध्यायन्तं चरणाम्बुजम् ।
क्रोशन्तीनां करेणूनां कृच्छ्रतोऽमोचयद् द्रुतम् ॥ ३५ ॥

तं सुखाराध्यमृजुभिरनन्यशरणैर्नृभिः ।
कृतज्ञः को न सेवेत दुराराध्यमसाधुभिः ॥ ३६ ॥

यो वै हिरण्याक्षवधं महाद्भुतं विक्रीडितं कारणसूकरात्मनः ।
शृणोति गायत्यनुमोदतेऽञ्जसा विमुच्यते ब्रह्मवधादपि द्विजः ॥ ३७ ॥

एतन्महापुण्यफलं पवित्रं धन्यं यशस्यं पदमायुराशिषाम् ।
प्राणेन्द्रियाणां युधि शौर्यवर्धनं नारायणोऽन्ते गतिरङ्ग शृण्वताम् ॥ ३८ ॥

## ॥ इति श्रीमद्भागवते (तृतीयस्कन्धे( *3)  विंशोऽध्यायः ॥

**॥ ಇಪ್ಪತ್ತನೆಯ ಅಧ್ಯಾಯ ॥**

## ಹಿರಣ್ಯಾಕ್ಷನ ಸಂಹಾರ

ಮೈತ್ರೇಯರು ಎಲೈ ವಿದುರನೆ! ಬ್ರಹ್ಮದೇವರ ನಿರ್ದುಷ್ಟಗಳು ಅಮೃತ ಸದೃಶಗಳೂ ಆದ ಮಾತನ್ನು ಯಜ್ಞವರಾಹಮೂರ್ತಿಯು ಕೇಳಿ ಸಂತೋಷದಿಂದ ಬ್ರಹ್ಮದೇವರನ್ನು ತನ್ನ ಕೃಪಾ ಕಟಾಕ್ಷದಿಂದ ನೋಡಿ ಸಂಭಾವಿಸಿದನು. ನಂತರ ತನ್ನ ಸುತ್ತಲೂ ಗದೆಯನ್ನು ತಿರಿಗಿಸುತ್ತಾ ಸಂಚರಿಸುವ ದೇವತೆಗಳ ತಾಯಿಯ ಸಪತ್ನಿಯಾದ ದಿತೀಪುತ್ರನಾದ ಹಿರಣ್ಯಾಕ್ಷನನ್ನು ನೋಡಿ ಹಾರಿ ಬಂದು ಅವನ ದವಡೆಯ ಮೇಲೆ ತನ್ನ ಗದೆಯಿಂದ ವರಾಹನು ಹೊಡೆದನು. ಆ ಏಟಿನಿಂದ ಹಿರಣ್ಯಾಕ್ಷನು ನೊಂದು ಘುರ್ಘುರು ಶಬ್ದಮಾಡುತ್ತಾ ಧೊಪಲ್ಲಂದು ಬಿದ್ದನು. ವರಾಹಮೂರ್ತಿಯು ನಿರಾಯುಧನಾಗಿ ನೆಲಕ್ಕೆ ಬಿದ್ದ ದೈತ್ಯನನ್ನು ನೋಡಿ, ಯುದ್ಧಧರ್ಮವನ್ನು ತೋರಿಸುವುದಕ್ಕಾಗಿ ತಾನು ಶಕ್ತನಾದರೂ ಅವನನ್ನು ಘಾತಿಸಲಿಲ್ಲ. ದುಷ್ಟದೈತ್ಯರಲ್ಲೂ ಕೂಡ ಅಧರ್ಮವನ್ನು ಮಾಡಬಾರದೆಂಬ ತನ್ನ ಧರ್ಮದಲ್ಲಿನ ಪ್ರಿಯತೆಯನ್ನು ದೇವರು ಈ ರೀತಿಯಾಗಿ ವ್ಯಕ್ತಪಡಿಸಿದನು.

ವರಾಹಮೂರ್ತಿಯು ಹಿರಣ್ಯಾಕ್ಷನ ದವಡೆಗೆ ತನ್ನ ಗದೆಯಿಂದ ಹೊಡೆದ ನಂತರ, ದೇವರ ಕೈಯಿಂದ ಗದೆಯು ಜಾರಿ ಕೆಳಗೆ ಬಿತ್ತು. ಹಾಗೆ ಬಿದ್ದ ಆಯುಧವನ್ನು ತಿರುಗಿ ಸ್ವೀಕರಿಸುವದು ಅವಮಾನವೆಂದು ವರಾಹಮೂರ್ತಿಯು, ತನ್ನ ಚಕ್ರವೆಂಬ ಸುದರ್ಶನಾಯುಧವನ್ನು ಸ್ಮರಿಸಿದನು. ತಕ್ಷಣ ಸುದರ್ಶನವು ಕರಗತವಾಯಿತು. ದೇವತೆಗಳು ಗದೆಯು ಪರಮಾತ್ಮನ ಹಸ್ತದಿಂದ ಜಾರಿ ಬಿದ್ದದ್ದನ್ನು ಕಂಡು, ಹಾಹಾಕಾರ ಮಾಡಿದರು. ಪರಮಾತ್ಮನು ತನ್ನ ಪಾರ್ಷದಶ್ರೇಷ್ಠನಿಂದ ಕೂಡಿದ ದಿತೀಪುತ್ರನಾದ ದೈತ್ಯಾಧಮನನ್ನು ಇನ್ನು ಶೀಘ್ರದಲ್ಲೇ ಸಂಹರಿಸಬೇಕೆಂಬ ಭಾವದಿಂದ ತನ್ನ ಚಕ್ರವನ್ನು ತಿರುಗಿಸುತ್ತಿರುವುದನ್ನು ಅಂತರಿಕ್ಷದಲ್ಲಿ ಸಂಚರಿಸುವ ದೇವತೆಗಳು ನೋಡಿ ಸ್ವಾಮಿ! ಇವನನ್ನು ಬೇಗ ಸಂಹರಿಸು ಎಂದು ಪ್ರಾರ್ಥಿಸಿದರು.

ಆ ದೇವತೆಗಳು ಹೇಳಿದ ಮಾತನ್ನು ಹಿರಣ್ಯಾಕ್ಷನು ಕೇಳಿ ಸಮೀಪದಲ್ಲಿ ಚಕ್ರವನ್ನು ಧರಿಸಿ ನಿಂತಿರುವ ಪದ್ಮಸದೃಶನೇತ್ರನಾದ ವರಾಹಮೂರ್ತಿಯನ್ನು ನೋಡಿದನು. ಅವನಿಗೆ ರೋಷವು ಉಕ್ಕಿ ಬಂದು ಇಂದ್ರಿಯಗಳು ತಮ್ಮ ಸ್ಥಾನಗಳನ್ನು ಬಿಡುವವೋ ಎಂಬಂತೆ ದುರುಗುಟ್ಟಿಕೊಂಡು ಕೆಂಪಾದ ಕಣ್ಣುಗಳಿಂದ ನೋಡುತ್ತಾ, ಹಲ್ಲುಗಳನ್ನು ಕಡಿಯುತ್ತಾ, ನಿಟ್ಟುಸುರುಬಿಟ್ಟನು. ನಂತರ ಹಿರಣ್ಯಾಕ್ಷನು ಭಯಂಕರವಾದ ಕೋರೆದಾಡಿಗಳನ್ನು ತೋರಿಸುತ್ತಾ, ಕಣ್ಣಿನ ಬಿರುಸಾದ ನೋಟದಿಂದ ಸುಟ್ಟುಬಿಡುವನಂತೆ ನೋಡುತ್ತಾ,

ಥಟಕ್ಕನೆ ಮೇಲಕ್ಕೆದ್ದು ತನ್ನ ಗದೆಯಿಂದ ವರಾಹಮೂರ್ತಿಯನ್ನು ಅಪ್ಪಳಿಸಲು, ಎಲೈ ವರಾಹನೇ ನೀನು ಸತ್ತೀ, ಎಂದು ಹೇಳುತ್ತಾ ಸಮೀಪಿಸಿದಾಗ ವರಾಹಮೂರ್ತಿಯು ವಾಯುವೇಗದಿಂದ ತನ್ನ ಎಡಗಾಲಿನಿಂದ ಒದ್ದು ಲೀಲೆಯಿಂದ ಅವನನ್ನೂ ಗದೆಯನ್ನೂ ದೂರವಾಗಿ ಕೆಡಹಿದನು. ನಂತರ ವರಾಹನು ಎಲೈ ದೈತ್ಯನೇ ಏಳುವನಾಗು. ಗದೆಯನ್ನು ತೆಗೆದುಕೋ ಜಯವನ್ನು ಘಳಿಸುವಿಯಂತೆ! ಎಂದನು. ಅದನ್ನು ಕೇಳಿ ದೈತ್ಯನು ಪುನಃ ಗದೆಯಿಂದ ಹೊಡೆದಾಗ ಅವನ ಕೈಯಿಂದ ಗದೆಯನ್ನು ಲೀಲೆಯಿಂದ ಕಿತ್ತಿಕೊಂಡು ಗರುಡನು ಹೆಣ್ಣುಸರ್ಪವನ್ನು ಹಿಡಿಯುವಂತೆ ಹಿಡಿದು, ಹಿರಣ್ಯಾಕ್ಷನನ್ನು ಕೆಡಹಿದನು.

ಪುನಃ ವರಾಹನು ತೆಗೆದುಕೋ ಎಂದು ಗದೆಯನ್ನು ಹಿರಣ್ಯಾಕ್ಷನಿಗೆ ಕೊಟ್ಟಾಗ ಹಿರಣ್ಯಾಕ್ಷನು ಅದನ್ನು ಸ್ವೀಕರಿಸದೆ, ಒಂದು ಅಗ್ನಿಯನ್ನು ಕಾರುತ್ತಿರುವ ತ್ರಿಶೂಲಾಯುಧವನ್ನು ವರಾಹನ ಮೇಲೆ ಎಸೆದಾಗ ಅದನ್ನು ಮಧ್ಯದಲ್ಲಿಯೇ ವರಾಹನು ಸುದರ್ಶನದಿಂದ ತುಂಡುತುಂಡು ಮಾಡಿದನು. ದಧೀಚಿಮುನಿಗಳ ಅಸ್ಥಿಯಿಂದ ನಿರ್ಮಿತವಾದ ವಜ್ರಾಯುಧದಿಂದ ಇಂದ್ರನು ಗರುಡನನ್ನು ಹೊಡೆದಾಗ, ಗರುಡನು ದಧಿ ೀಚಿಮುನಿಗಳನ್ನು ಗೌರವಿಸುವುದಕ್ಕಾಗಿ, ಅಚ್ಛೇದ್ಯ ಅಭೇದ್ಯವಾದ ತನ್ನ ರೆಕ್ಕೆಯಿಂದ ಒಂದು ಗರಿಯನ್ನು ತಾನೇ ಕಿತ್ತು ಬಿಸುಟಾಗ ವಜ್ರಾಯುಧವು ಆ ಗರಿಯನ್ನು ಹೇಗೆ ಕತ್ತರಿಸಿ ಹಾಕಿತೊ, ಅಷ್ಟು ಸುಲಭವಾಗಿ ಚಕ್ರವು, ತೃಣಪ್ರಾಯದಂತೆ ಅಮೋಘವಾದ ಆ ಶಕ್ತ್ಯಾಯುಧವನ್ನು ಕತ್ತರಿಸಿ ಕೆಡವಿತು. ಆಗ ಆಕಾಶದಲ್ಲಿ ಮಹಾ ಪ್ರಕಾಶ ಉಂಟಾಯಿತು. ಈ ರೀತಿಯಾಗಿ ಶ್ರೀಹರಿಯು ಶೂಲಾಯುಧವನ್ನು ಚಕ್ರದಿಂದ ತುಂಡುಮಾಡಿದ ಮೇಲೆ ಹಿರಣ್ಯಾಕ್ಷನು ರೋಷದಿಂದ ಬಂದು, ವರಾಹನ ವಿಶಾಲವಾದ ಎದೆಯ ಮೆಲೆ ತನ್ನ ಮುಷ್ಟಿಯಿಂದ ಜೋರಾಗಿ ಹೊಡೆದು ತಕ್ಷಣ ಅಂತರ್ಧಾನನಾಗಿ ಕಣ್ಣಿಗೆ ಕಾಣಿಸದಂತಾದನು. ಆ ಹಿರಣ್ಯಾಕ್ಷನ ಬಲವಾದ ಏಟಿನಿಂದ ಶ್ರೀ ವರಾಹರೂಪ ಪರಮಾತ್ಮನಿಗೆ, ಆನೆಗೆ ಆಕಾಶದಲ್ಲಿ ವಾಯುವಿನಿಂದ ಹಾರಾಡುತ್ತಿರುವ ಒಂದು ಧೂಳಿನ ಕಣವು ಮೈಮೇಲೆ ಬಂದು ಕೂತಂತೆ ತೋರಿತು.

ಹಿರಣ್ಯಾಕ್ಷನು ಕಣ್ಣಿಗೆ ಕಾಣಿಸದೇ ಪ್ರಜೆಗಳಿಗೆ ಭಯವನ್ನುಂಟುಮಾಡುವ ಮಾಯಾ ಯುದ್ಧವನ್ನು ಆರಂಭಿಸಿದನು. ಅದನ್ನು ದೇವತೆಗಳು ನೋಡಿ ಯೋಗಮಾಯಾಮಯನಾದ ಶ್ರೀವರಾಹಮೂರ್ತಿಯನ್ನು ಆ ದೈತ್ಯಮಾಯೆಗೆ ಪ್ರತೀಕಾರಮಾಡೆಂದು ಕೇಳಿಕೊಂಡರು. ಆಗ ಪ್ರಚಂಡಘಾಳಿಯು ಎದ್ದು, ಧೂಳಿನಿಂದ ದಿಕ್ಕುಗಳೆಲ್ಲಾ ಆವರಿಸಿ ಕತ್ತಲಿಟ್ಟಿತು. ಆಕಾಶದಲ್ಲಿ ನಕ್ಷತ್ರಗಳು ಕಾಣದಂತೆ ಕತ್ತಲಿಟ್ಟು, ಮೋಡ, ಮಿಂಚುಗಳಿಂದಲೂ, ಸಿಡಿಲುಗಳಿಂದಲೂ ಕೂಡಿ, ಅಮೇಧ್ಯ, ಕೂದಲು, ರಕ್ತ, ಮೂತ್ರ, ಮಲ, ಮೂಳೆಗಳ ಮಳೆಯು ಸುರಿಯಿತು. ಬೆಟ್ಟಗಳು ಕಿತ್ತೆಸೆಯಲ್ಪಟ್ಟು ಬಂದು

ಬೀಳುತ್ತಿದ್ದವು. ಯಾತುಧಾನರೆಂಬ ದೈತ್ಯರು ಬೆತ್ತಲೇ, ತಲೆಗಳನ್ನು ಕೆದರಿಕೊಂಡು ಶೂಲಪಾಣಿಗಳಾಗಿ, ಬಹಳ ಯಕ್ಷರಾಕ್ಷಸರಿಂದ ಸಹಿತರಾಗಿ, ಕಾಲಾಳು, ಕುದುರೆ, ರಥಗಳು, ಆನೆಗಳೊಂದಿಗೆ ಕಾಣಿಸಿಕೊಂಡು, ಅಸಹ್ಯಗಳಾದ ದುರ್ಭಾಷೆಗಳನ್ನಾಡುವವರಾದರು. ವರಾಹಮೂರ್ತಿಯು ಈ ಅಸುರೀಮಾಯೆಯನ್ನು ನೋಡಿ ಸುದರ್ಶನಾಸ್ತ್ರ ಪ್ರಯೋಗಮಾಡಿ ಎಲ್ಲವನ್ನೂ ನಾಶಮಾಡಿದನು.

ಆಗ ದಿತೀದೇವಿಯ ಹೃದಯದಲ್ಲಿ ನಡುಕ ಉಂಟಾಗಿ ಸ್ತನಗಳಿಂದ ರಕ್ತ ಸುರಿಯಿತು. ಆಗ ದಿತೀದೇವಿಯು ತನ್ನ ಪತಿಯು ಹೇಳಿದ್ದಂತೆ ಸುದರ್ಶನದಿಂದ ಶ್ರೀಹರಿಯು ತನ್ನ ಮಕ್ಕಳನ್ನು ನಾಶಮಾಡುವ ಕಾಲವು ಪ್ರಾಪ್ತವಾಯಿತೆಂದು ಭಾವಿಸಿದಳು. ಮಾಯೆಗಳನ್ನು ಶ್ರೀಹರಿಯು ನಾಶಮಾಡಿದ ನಂತರ ಹಿರಣ್ಯಾಕ್ಷನು ಪುನಃ ವರಾಹನೆದುರಿಗೆ ಬಂದು ತನ್ನ ವಜ್ರಮುಷ್ಟಿಯಿಂದ ವರಾಹನನ್ನು ಹೊಡೆದನು. ಆಗ ವರಾಹನು ವಿನೋದದಿಂದ ತನ್ನ ಕೈಯಿಂದ ಹಿರಣ್ಯಾಕ್ಷನ ಕಪಾಳಕ್ಕೆ ಏಟುಕೊಟ್ಟನು. ಆ ಏಟಿನಿಂದ ಹಿರಣ್ಯಾಕ್ಷನು ಕಣ್ಗತ್ತಲೆಯುಳ್ಳವನಾಗಿ ದಿಗ್ಭ್ರಮೆಯಿಂದ ತಿರುಗುತ್ತಾ ಕೈಕಾಲುಗಳನ್ನು ಮುದುರಿಕೊಂಡು, ಒಂದು ಮದದಾನೆಯು ಆಕಾಶದಿಂದ ಬೀಳುವಂತೆ ಧೊಪ್ಪನೆ ನೆಲಕ್ಕೆ ಬಿದ್ದನು. ನಂತರ ಹತ ತೇಜಸ್ಸುಳ್ಳವನಾಗಿ ಭೂಮಿಯ ಮೇಲೆ ನಿಶ್ಚೇಷ್ಟನಾಗಿ ಮರಣಹೊಂದಿ ಮಲಗಿದನು. ಭಯಂಕರವಾದ ಕೋರೆಹಲ್ಲುಗಳುಳ್ಳವನೂ, ಕೆಳತುಟಿಯನ್ನು ಕಚ್ಚಿಕೊಂಡು ಬಿದ್ದಿರುವ ಹಿರಣ್ಯಾಕ್ಷನನ್ನು ನೋಡಿ ಬ್ರಹ್ಮಾದಿದೇವತೆಗಳು ಆ ಸ್ಥಳಕ್ಕೆ ಬಂದರು. ನಂತರ ಅವರು ಆಶ್ಚರ್ಯವು! ದೈತ್ಯಭಯ ಪರಿಹಾರಕನಾದ ಈ ವರಾಹವತಾರನಾದ ಸ್ವಾಮಿಯೊಬ್ಬನಲ್ಲದೆ, ಈ ದೈತ್ಯನಿಗೆ ಇಂತಹ ಅವಸ್ಥೆಯನ್ನು ಯಾರು ತಾನೇ ಉಂಟುಮಾಡಲು ಸಾಧ್ಯವಾಗುತ್ತಿತ್ತು? ಎಂದು ಹೇಳಿ ವರಾಹಮೂರ್ತಿಯನ್ನು ಸ್ತೋತ್ರಮಾಡಿದರು:-

## ವರಾಹಸ್ತುತಿ

ಸಕಲ ದೇಹಗಳ ಪ್ರಾಪ್ತಿಗೂ, ಸಂಸಾರಕ್ಕೂ ಕಾರಣವಾದ ಲಿಂಗದೇಹ ಭಂಗವನ್ನಪೇಕ್ಷಿಸಿ, ಮೋಕ್ಷವನ್ನು ಪಡೆಯಬೇಕೆಂದಪೇಕ್ಷಿಸುವ ಜ್ಞಾನಿಗಳು, ಸಮಾಧಿಯೋಗದಿಂದ ಯಾರನ್ನು ಧ್ಯಾನಿಸುವರೋ ಅಂತಹ ಈ ಯಜ್ಞಮಯ ಪುರುಷನಾದ ವರಾಹಮೂರ್ತಿಯ ತಾಡನೆಯಿಂದ, ಈ ದೈತ್ಯಾಗ್ರೇಸರನಾದ ಹಿರಣ್ಯಾಕ್ಷನು ಹತನಾಗಿ, ವರಾಹನ ಮುಖವನ್ನು ರೋಷದಿಂದ ನೋಡುತ್ತಾ ಪ್ರಾಣವನ್ನು ಬಿಟ್ಟನು. ಮರಣಕಾಲದಲ್ಲಿ ಪರಮಾತ್ಮನ ಮುಖದರ್ಶನ ವಾದ್ದರಿಂದ ಇವನಲ್ಲಿ ಆವಿಷ್ಟನಾಗಿರುವ ಶ್ರೀಹರಿಪಾರ್ಷದ ಶ್ರೇಷ್ಠನಿಗೆ, ಇನ್ನುಳಿದಿರುವ ಎರಡು ಜನ್ಮಗಳಾದ ನಂತರ, ಪುನಃ ವೈಕುಂಠವು ಪ್ರಾಪ್ತವಾಗುತ್ತದೆ. ಸಮಸ್ತ ಯಜ್ಞಗಳಿಗೂ ಕಾರಣನಾದ, ಯಜ್ಞರೂಪನಾದ, ಭಕ್ತಸಂರಕ್ಷಣೆಗಾಗಿ ಅಪ್ರಾಕೃತ ಸತ್ವಸ್ವರೂಪ ಅವತಾರವನ್ನು ಧರಿಸಿರುವ ವರಾಹಮೂರ್ತಿಯೇ ನಿನಗೆ ನಮಸ್ಕಾರಗಳು, ನಮಸ್ಕಾರಗಳು. ನಿನ್ನ ದಿವ್ಯ ಇಚ್ಛೆಯಿಂದ

ಮೂರು ಲೋಕಕ್ಕೂ ಸಂಕಟವನ್ನುಂಟುಮಾಡುತ್ತಿದ್ದ ಈ ಪಾಪಿ ದೈತ್ಯನು ಹತನಾದನು. ನಾವು ನಿನ್ನ ಪಾದಾರವಿಂದಗಳಲ್ಲಿ ಭಕ್ತಿಯನ್ನು ಮಾಡಿ ಸಕಲ ದೈತ್ಯಸಂಬಂಧ ದುಃಖಗಳಿಂದಲೂ ಬಿಡಿಸಲ್ಪಟ್ಟೆವು, ಎಂದರು.

ಮೈತ್ರೇಯರು ಈ ರೀತಿ ವರಾಹವತಾರ ಕಥೆಯನ್ನು ಹೇಳಿ, ಎಲೈ ವಿದುರನೆ! ಹಿರಣ್ಯಾಕ್ಷನನ್ನು ಸಂಹರಿಸಿ, ವರಾಹಮೂರ್ತಿಯು ಬ್ರಹ್ಮಾದಿ ದೇವತೆಗಳಿಂದ ಸ್ತುತಿಸಲ್ಪಟ್ಟು, ತನ್ನ ಅಖಂಡೈಶ್ವರ್ಯ ಸಂಪತ್ತುಳ್ಳ ಲೋಕಕ್ಕೆ ಹೊರಟುಹೋದನು. ನಾನು ಹಿಂದೆ ಯಾವ ರೀತಿಯಲ್ಲಿ ಪರಮಾತ್ಮನು ಲೀಲೆಯಿಂದ ಹಿರಣ್ಯಾಕ್ಷನನ್ನು ಕೊಂದ ಚರಿತ್ರೆಯನ್ನು ಕೇಳಿದ್ದೆನೋ ಅದರಂತೆ ಈಗ ಹೇಳಿರುತ್ತೇನೆ ಎಂದರು.

ಶುಕರು, ಎಲೈ ಪರೀಕ್ಷಿದ್ರಾಜನೇ ಮೈತ್ರೇಯರಿಂದ ವರಹಾವತಾರ ದಿವ್ಯಕಥೆಯನ್ನು ಕೇಳಿ ಭಕ್ತಾಗ್ರೇಸರನಾದ ವಿದುರನು ಆನಂದ ಪರವಶನಾದನು. ಭಗವದ್ಭಕ್ತರಾದ ಇತರರ ಚರಿತ್ರೆಯನ್ನು ಕೇಳಿದರೆ ಎಷ್ಟೋ ವಿಲಕ್ಷಣ ಸಂತೋಷ ಉಂಟಾಗುವಾಗ, ಸಾಕ್ಷಾತ್ ಶ್ರೀವತ್ಸಾಂಕಿತನಾದ ಶ್ರೀಪರಮಾತ್ಮನ ಮಂಗಳಚರಿತ್ರೆಯು ಭಾಗವತೋತ್ತಮರಿಗೆ ಆನಂದವನ್ನುಂಟುಮಾಡುವುದೇನು ಹೆಚ್ಚು? ಯಾವ ಪರಮಾತ್ಮನು ಗಜೇಂದ್ರನು ಮಡುವಿನಲ್ಲಿ ಮೊಸಳೆಯಿಂದ ಹಿಡಿಯಲ್ಪಟ್ಟು, ಸುತ್ತಲೂ ಹೆಣ್ಣಾನೆಗಳು ಗೋಳಾಡುತ್ತಿರುವಾಗ, ಆ ಗಜೇಂದ್ರನಿಂದ ಸ್ತುತಿಸಲ್ಪಟ್ಟು ಅಲ್ಲಿಗೆ ಬಂದು ಮೊಸಳೆಯನ್ನು ಕತ್ತರಿಸಿ ಭಯ ಪರಿಹಾರ ಮಾಡಿದನೋ! ಅಂತಹ ಪರಮಾತ್ಮನನ್ನು ವಕ್ರಮಾರ್ಗರಲ್ಲದ ಸಜ್ಜನರು ಅನನ್ಯಭಾವದಿಂದ ಮೊರೆಹೊಕ್ಕು ಆರಾಧಿಸಿ, ಕೃತಜ್ಞತೆಯಿಂದ ಕೊಂಡಾಡದೇ ಬಿಡುವರೇನು?

ಸರ್ವಥಾ ಇಲ್ಲ. ದುಷ್ಟರಿಗೆ ಪರಮಾತ್ಮನ ಸೇವೆಯು ಪ್ರಾಪ್ತವಾಗತಕ್ಕದ್ದಲ್ಲ. ಯಾವ ಈ ವರಹರೂಪಿ ಪರಮಾತ್ಮನಿಂದ ಕ್ರೀಡಾರೂಪವಾಗಿ ಮಾಡಲ್ಪಟ್ಟ ಹಿರಣ್ಯಾಕ್ಷವಧೆಯೆಂಬ, ಅದ್ಭುತ ಮಹಿಮೆಯಿಂದ ಕೂಡಿದ ಕಥೆಯನ್ನು ಓದಿ, ಕೇಳಿ, ಅನುಮೋದಿಸುತ್ತಾರೋ ಅವರ ಬ್ರಹ್ಮಹತ್ಯೆ ಮುಂತಾದ ಪಾಪಗಳೂ ಕೂಡಲೇ ನಾಶವಾಗುವವು. ಇಂತಹ ಮಹಾ ಪುಣ್ಯಫಲಪ್ರದವೂ, ಪಾವನವೂ, ಐಶ್ವರ್ಯ ಯಶಃ ಪ್ರದವೂ, ಆಯುರ್ವೃದ್ಧಿ, ಇಂದ್ರಿಯ ಪ್ರಾಣಗಳ ಶಕ್ತಿಯನ್ನು ಉಂಟುಮಾಡತಕ್ಕದ್ದೂ, ಯುದ್ಧದಲ್ಲಿ ಜಯವನ್ನು ಕೊಡತಕ್ಕದ್ದೂ, ಕೊನೆಗೆ ಮರಣಕಾಲದಲ್ಲಿ ನಾರಾಯಣನ ಸ್ಮರಣೆಯನ್ನು ಕೊಡತಕ್ಕದ್ದೂ ಆಗಿರುವ ಈ ಪಾವನಚರಿತ್ರೆಯನ್ನು, ಎಲೈ ಪರೀಕ್ಷಿದ್ರಾಜನೇ ಯಾವಾಗಲೂ ಕೇಳತಕ್ಕದ್ದು, ಎಂದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

# अथ एकविंशोऽध्यायः

**राजोवाच**

महीं प्रतिष्ठामध्यास्य योऽसौ स्वायम्भुवो मनुः।
कान्यध्यतिष्ठद् द्वाराणि मार्गायावरजन्मनाम्॥ १ ॥

क्षत्ता महाभागवतः कृष्णस्यैकान्तिकः सुहृत्।
यस्तत्याजाग्रजं कृष्णो सापत्यमघवानिति॥ २ ॥

द्वैपायनादनवरो महित्वे तस्य देहजः।
सर्वात्मना श्रितः कृष्णं तत्परान् वाऽप्यनुव्रतः॥ ३ ॥

किमन्वपृच्छन्मैत्रेयं विरजास्तीर्थसेवया।
उपगम्य कुशावर्त आसीनं तत्त्ववित्तमम्॥ ४ ॥

तयोः संवदतोः सूत प्रवृत्ता ह्यमलाः कथाः।
आपो गाङ्ग्य इवाघघ्यो हरेः पादाम्बुजाश्रयाः॥ ५ ॥

ता नः कीर्तय भद्रं ते कीर्तन्योदारकर्मणः।
रसज्ञः को नु तृप्येत हरिलीलामृतं पिबन्॥ ६ ॥

**सूत उवाच**

एवं परीक्षिता पृष्टो भगवान् बादरायणिः।
भगवत्यर्पिताध्यात्मस्तमाह श्रूयतामिति॥ ७ ॥

**शुक उवाच**

हरेर्धृतक्रोडतनोः स्वमायया निशम्य गोरुद्धरणं रसातलात्।
लीलां हिरण्याक्षमवज्ञया हतं सञ्जातहर्षो मुनिमाह भारत॥ ८ ॥

**विदुर उवाच**

प्रजापतिपतिः सृष्ट्वा प्रजासर्गे प्रजापतीन्।
किमारभत मे ब्रह्मन् प्रब्रूह्यव्यक्तमार्गवित्॥ ९ ॥

ये मरीच्यादयो विप्राः यस्तु स्वायम्भुवो मनुः।
ते वै ब्रह्मण आदेशात् कथमेतदभावयन्॥ १० ॥

स्वद्वितीयाः किमसृजन् स्वतन्त्रा उत कर्मभिः ।
आहोस्वित् संहताः सर्व इदं स्म समकल्पयन् ॥ ११ ॥

**मैत्रेय उवाच**

दैवेन दुर्वितर्क्येण परेणानिमिषेण च ।
जातक्षोभाद् भगवतो महानासीद् गुणत्रयात् ॥ १२ ॥

रजःप्रधानान्महतस्त्रिलिङ्गो दैवचोदितात् ।
जातःससर्ज भूतादिर्वियदादीनि पञ्च च (सः ) ॥ १३ ॥

तानि चैकैकशः स्रष्टुमसमर्थानि भौतिकम् ।
संहत्य दैवयोगेन हैममण्डमवासृजन् ॥ १४ ॥

सोऽशयिष्टाधिसलिल आण्डकोशो निरात्मकः ।
साग्रं वै वर्षसाहस्रमन्ववात्सीत् तमीश्वरः ॥ १५ ॥

तस्य नाभेरभूत् पद्मं सहस्रार्कोरुदीधिति ।
सर्वजीवनिकायौको यत्र (यतः ) स्वयमभूत् स्वरा ॥ १६ ॥

सोऽनुविष्टो भगवता यः शेते सलिलाशये ।
लोकसंस्थां यथापूर्वं निर्ममे संस्थया स्वया ॥ १७ ॥

ससर्ज च्छाययाऽविद्यां पञ्चपर्वाणमग्रतः ।
तामिस्रमन्धतामिस्रं तमो मोहो महातमः (महत्तमः ) ॥१८ ॥

विससर्जात्मनः कायं नाभ्यनन्दत् तमोमयम् ।
जगृहुर्यक्षरक्षांसि रात्रिं क्षुत्तृसुद्भवाम् ॥ १९ ॥

क्षुत्तृभ्यामुपसृष्टास्ते तं जग्धुमभिदुद्रुवुः ।
मा रक्षतैनं जक्षध्वमित्युचैः क्षुत्तृडर्दिताः ॥ २० ॥

देवस्तानाह संविग्नो मा मा जक्षत रक्षत ।
अहो मे यक्षरक्षांसि प्रजा यूयं भविष्यथ ॥ २१ ॥

देवताः प्रभया या या दिव्याः प्रमुखतोऽसृजत् ।
तेऽहार्षुर्देवयन्तोऽपि विसृष्टां तां प्रभामहः ॥ २२ ॥

देवोऽदेवान् जघनतः सृजति स्माति(स्म वि)लोलुपान्।
त एनं लोलुपतया मैथुनायाभिपेदिरे॥ २३ ॥

ततो हसन् स भगवानसुरैर्निरपत्रपैः।
अन्वीयमानस्तरसा क्रुद्धो भीतः परापतत्॥ २४ ॥

स उपव्रज्य वरदं प्रपन्नार्तिहरं हरिम्।
अनुग्रहाय भक्तानामनुरूपात्मदर्शनम्॥ २५ ॥

पाहि मां परमात्मंस्ते प्रेषणेनासृजं प्रजाः।
ता इमा यभितुं पापा उपक्रामन्ति मां प्रभो॥ २६ ॥

त्वमेकः किल लोकानां क्लिष्टानां क्लेशनाशनः।
त्वमेकः क्लेशदस्तेषामनासन्नपदां तव॥ २७ ॥

सोऽवधार्यास्य कार्पण्यं विविक्ताध्यात्मदर्शनः।
विमुञ्चात्मतनुं घोरामित्युक्तो विमुमोच ह॥ २८ ॥

तां क्वणच्चरणाम्भोजां मदविह्वललोचनाम्।
काञ्चीकलापविलसद्दुकूलच्छन्नरोधसम्॥ २९ ॥

अन्योन्याश्लेषयोत्तुङ्गनिरन्तरपयोधराम्।
सुनासां सुद्विजां स्निग्धहासलीलावलोकनाम्॥ ३० ॥

गूहन्तीं व्रीडयाऽऽत्मानं नीलालकवरूथिनीम्।
उपलभ्यासुराः सन्ध्यां सर्वे तां मुमुहुः स्त्रियम्॥ ३१ ॥

अहो रूपमहो धैर्यमहो अस्या नवं वयः।
मध्ये कामयमानानामकामेव विसर्पति॥ ३२ ॥

वितकयन्तो बहुधा तां सन्ध्यां प्रमदायतीम्।
अभिसम्भाव्य विस्रम्भात् पर्यपृच्छन् कुमेधसः॥ ३३ ॥

काऽसि कस्यासि रम्भोरु को वाऽर्थस्तेऽत्र भामिनि।
रूपद्रविणपण्येन दुर्भगान् नो विबाधसे॥ ३४ ॥

या वा काऽसि त्वमबले दिष्ट्या सन्दर्शनं तव ।
उद्धुनोषीक्षमाणानां कन्दुकक्रीडया मनः ॥ ३५ ॥

नैकत्र ते जयति शालिनि पादपद्मं घ्नन्त्या मुहुः करतलेन पतत्पतङ्गम् ।
मध्यं विषीदति बृहत्स्तनभारभीतं श्रान्ता च दृष्टिरमलः सुजटावरूथः ॥ ३६ ॥

इति सायन्तनीं सन्ध्यामसुराः प्रमदायतीम् ।
प्रलोभयन्तीं जगृहुर्मत्वा मूढधियः स्त्रियम् ॥ ३७ ॥

प्रहस्य भावगम्भीरं जिघ्रन्त्यात्मानमात्मना ।
कान्त्या ससर्ज भगवान् गन्धर्वाप्सरसां गणान् ॥ ३८ ॥

विससर्ज तनुं तां वै ज्योत्स्नां कान्तिमतीं प्रियाम् ।
तामेव चा ददुः प्रीत्या विश्वावसुपुरोगमाः ॥ ३९ ॥

सृष्ट्वा भूतपिशाचांश्च भगवानात्मतन्द्रिणा ।
दिग्वाससो मुक्तकेशान् वीक्ष्य चामीलयद् दृशौ ॥ ४० ॥

जगृहुस्तद्विसृष्टां तां जृम्भणाख्यां तनुं प्रभोः ।
निद्रादीन्द्रियविक्लेदो यया भूतेषु दृश्यते ।
तयोच्छिष्टान् धर्षयन्ति तमुन्मादं प्रचक्षते ॥ ४१ ॥

ऊर्जस्वन्तं मन्यमान आत्मानं भगवानजः ।
साध्यान् गणान् पितृगणान् परोक्षेणासृजत् प्रभुः ॥ ४२ ॥

त आत्मसर्गं तं कायं पितरः प्रतिपेदिरे ।
साध्येभ्यश्च पितृभ्यश्च कवयो यद् वितन्वते ॥ ४३ ॥

सिद्धान् विद्याधरांश्चैव तिरोधानेन सोऽसृजत् ।
तेभ्यो ददौ तमात्मानमन्तर्धानाख्यमद्भुतम् ॥ ४४ ॥

स किन्नरान् किंपुरुषानात्मना चासृजत् प्रभुः ।
मानयन्नात्मनाऽऽत्मानमात्माभासं विलोकयन् ॥ ४५ ॥

ते तु तज्जगृहू रूपं त्यक्तं यत् परमेष्ठिना ।

मिथुनीभूय गायन्तस्तमेवोषसि कर्मभिः ॥ ४६ ॥

देहेन वै भोगवता शयानो बहुचिन्तया ।
सर्गेऽनुपचिते क्रोधादुत्ससर्ज हि तद् वपुः ॥ ४७ ॥

येऽहीयन्तामुतः केशा अहयस्तेङ्ग जज्ञिरे ।
सर्पा विसर्पतः क्रूरा नागा भोगोरुकन्धराः ॥ ४८ ॥

स आत्मानं मन्यमानः कृतकृत्यमिवात्मभूः ।
तदा मनून् ससर्जान्ते मनसा लोकभावनान् ॥ ४९ ॥

तेभ्यः स व्यसृजद् देहं परः पुरुष आत्मनः ।
तां दृष्ट्वा ये पुरा सृष्टाः प्रशशंसुः प्रजापतिम् ॥ ५० ॥

अहो एतज्जगत्स्रष्टः सुकृतं बत ते कृतम् ।
प्रतिष्ठिताः क्रिया यस्मिन् साकमन्नमदामहे ॥ ५१ ॥

तपसा विद्यया युक्तो योगेन सुसमाधिना ।
आदावृषीन् हृषीकेशः ससर्जाभिमताः प्रजाः ॥ ५२ ॥

तेभ्यश्चैकैकशस्तस्य देहस्यांशमदादजः ।
यत् तत् समाधियोगर्धितपोविद्याविरक्तिमत् ॥ ५३ ॥

## ॥ इति श्रीमद्भागवते (तृतीयस्कन्धे(*3) एकविंशोऽध्यायः ॥

### ॥ ಇಪ್ಪತ್ತೊಂದನೆಯ ಅಧ್ಯಾಯ ॥

ಈ ಅಧ್ಯಾಯದಲ್ಲಿ ಸೃಷ್ಟಿ, ಲಯ ಕ್ರಮಗಳಿಂದ ದೇವತಾ ತಾರತಮ್ಯ ಜ್ಞಾನವನ್ನು ಪಡೆಯುವುದು ಪರಮಾತ್ಮನಿಗೆ ಪ್ರಿಯವಾದದ್ದೆಂದು, ಹಿಂದೆ ಹೇಳಿದ ಸೃಷ್ಟಿಯೆ ಸ್ವಲ್ಪ ವಿಶದವಾಗಿ ಈಗ ವಿವರಿಸಲ್ಪಡುತ್ತದೆ:-

ಪರೀಕ್ಷಿದ್ರಾಜನು ಶುಕರನ್ನು ಕುರಿತು, ಎಲೈ ಶುಕಮಹರ್ಷಿಗಳೆ! ಪ್ರತಿಷ್ಠಿತವಾದ ಭೂಮಿಯಲ್ಲಿ ನೆಲೆಸಿದ ಸ್ವಾಯಂಭುವ ಮನುವು, ಏನು ಮಾರ್ಗವನ್ನವಲಂಬಿಸಿ ತನಗಿಂತ ಶ್ರೇಷ್ಠರಲ್ಲದ ಪ್ರಜೆಗಳನ್ನು ಸೃಷ್ಟಿಸಿದನು? ಭಾಗವತೋತ್ತಮನಾದವನೂ, ಕೃಷ್ಣನಲ್ಲಿ ಏಕಾಂತ ಭಕ್ತಿಯುಳ್ಳವನೂ ಆದ ವಿದುರನು, ಕೃಷ್ಣಪ್ರಿಯರಾದ ಪಾಂಡವರನ್ನು ತನ್ನ ಅಣ್ಣನಾದ ಧೃತರಾಷ್ಟ್ರನು ದ್ವೇಷಿಸುತ್ತಾನೆಂದು ತಿಳಿದು, ಅವನನ್ನು

ತ್ಯಜಿಸುವುದಕ್ಕಾಗಿ ತೀರ್ಥಾಟನೆಯ ನೆಪವನ್ನು ಮಾಡಿಕೊಂಡು ಕುಶಾವತೀ ತೀರದಲ್ಲಿ ಸುಖಾಸೀನರಾದ ತತ್ವಜ್ಞರಾದ ಮೈತ್ರೇಯರಿಂದ ಹಿಂದಿನ ಕಥೆಯನ್ನು ಕೇಳಿದ ನಂತರ ಪುನಃ ಏನು ಪ್ರಶ್ನೆಗಳನ್ನು ಮಾಡಿದನು? ಸಾಕ್ಷಾತ್ ಬಾದರಾಯಣ ದೇವರ ಪುತ್ರನೂ, ಅವರ ಸದೃಶಮಹಿಮೆಯುಳ್ಳವನೂ, ಶ್ರೀಕೃಷ್ಣನಲ್ಲೂ, ಆತನ ಭಕ್ತರಲ್ಲೂ ಪ್ರೀತಿಯುಳ್ಳವನೂ ಆದ ವಿದುರನು, ಸೂತರು ಶೌನಕಾದಿಗಳಿಗೆ ಹೇಳಿದ, ಸಮುದ್ರವನ್ನು ಸೇರುವ ಪಾವನವಾದ ಗಂಗಾನದಿಯಂತೆ, ಪರಮಾತ್ಮನ ಯಶಸ್ಸುಗಳೆಂಬ ಸಮುದ್ರವನ್ನು ಸೇರುವ ಸೂತಶೌನಕರ ಸಂವಾದವೆಂಬ ಗಂಗಾ ಪ್ರವಾಹವನ್ನೇ ಏನೆಂಬುದನ್ನು ಮೈತ್ರೇಯರಿಂದ ಕೇಳಿ ಪವಿತ್ರನಾಗಿರುತ್ತಾನೆ. ಹರಿಲೀಲಾಮೃತ ಪಾನವನ್ನು ಮಾಡಿ ಅದರ ರಸವನ್ನು ತಿಳಿದವನು, ಪುನಃ ನಿರಂತರ ಶ್ರೀಹರಿಕಥಾ ಶ್ರವಣಾಮೃತ ಪಾನವನ್ನು ಬಯಸದೇ ಹೇಗೆ ಸುಮ್ಮನಿದ್ದಾನು? ಆದುದರಿಂದ ಪೂಜ್ಯರಾದ ಶುಕರು ಮಹರ್ಷಿಗಳೇ, ಭಗವನ್ಮಹಿಮೆಗಳಿಂದ ಕೂಡಿದ ಮುಂದಿನ ಕಥಾವಿಸ್ತಾರವನ್ನು ನನಗೆ ಹೇಳಿರಿ, ಎಂದನು. ಈ ರೀತಿಯಾಗಿ ಪರೀಕ್ಷಿದ್ರಾಜನು ಪ್ರಶ್ನೆಮಾಡಲು ಶುಕರು ಕೇಳಿ, ಪರಮಾತ್ಮನಲ್ಲಿ ಮನಸ್ಸಿಟ್ಟವರಾಗಿ ಈ ರೀತಿ ಹೇಳಿದರು:-

ಎಲೈ ಪರೀಕ್ಷಿದ್ರಾಜನೆ! ವಿದುರನು ಮೈತ್ರೇಯರಿಂದ ಶ್ರೀಹರಿಯು ಲೀಲಾವತಾರವಾದ ವರಾಹರೂಪಿನಿಂದ ಭೂಮಿಯನ್ನು ರಸಾತಳದಿಂದ ಮೇಲಕ್ಕೆ ತಂದು ಪ್ರತಿಷ್ಠಿಸಿ, ಹಿರಣ್ಯಾಕ್ಷನನ್ನು ಕ್ರೀಡೆಯಿಂದ ಸಂಹರಿಸಿದ ವೃತ್ತಾಂತವನ್ನು ಕೇಳಿದವನಾಗಿ, ಮೈತ್ರೇಯರನ್ನು ಪುನಃ ಈ ರೀತಿ ಪ್ರಶ್ನಿಸಿದನು:-

ಎಲೈ ಮೈತ್ರೇಯರೆ! ಬ್ರಹ್ಮದೇವರು ಪ್ರಜಾಧಿಪತಿಗಳನ್ನು ಸೃಷ್ಟಿಸಿದನಂತರ ಅವರಿಗೆ ಪ್ರಜಾಸೃಷ್ಟಿಯನ್ನು ಮಾಡಿರೆಂದು ಹೇಳಿದಮೇಲೆ, ಪರಮಾತ್ಮನ ಅವ್ಯಕ್ತ ಮಹಿಮೆಯನ್ನು ಬಲ್ಲ ಬ್ರಹ್ಮದೇವರ ಆಜ್ಞೆಯಂತೆ ಆ ಮರೀಚ್ಯಾದಿ ಋಷಿಗಳೂ, ಸ್ವಾಯಂಭುವ ಮನುವೂ ಹೇಗೆ ಸೃಷ್ಟಿಕಾರ್ಯಗಳನ್ನು ಮಾಡಿದರು? ತಮ್ಮತಮ್ಮ ಭಾರ್ಯೆಯರಿಂದ ಕೂಡಿದವರಾಗಿ ಅವರು ಪಡೆದ ಸಂತಾನ ಕ್ರಮವನ್ನು ಹೇಳಿರಿ! ಇವರನ್ನು ಸೃಷ್ಟಿಸಿದ ನಂತರ ಬ್ರಹ್ಮದೇವರು ತಾವು ಮುಂಚೆ ಮಾಡಿದ್ದ ಸೃಷ್ಟಿಯು ಉಕ್ಕಿ ಬಂದ ಅಂಡೋದಕದಿಂದ ಪ್ರಾಯಶಃ ಎಲ್ಲವನ್ನೂ ನಾಶಮಾಡಲ್ಪಟ್ಟಿತೆಂದು ಹೇಳಿದರಲ್ಲಾ, ಅದನ್ನು ಬ್ರಹ್ಮದೇವರು ತಿಳಿದನಂತರ ಏನು ಮಾಡಿದರು? ಎಂದರು.

## ಮೈತ್ರೇಯರಿಂದ ವಿದುರನಿಗೆ ಸೃಷ್ಟಿ ವಿವರಣೆ

ಅದನ್ನು ಕೇಳಿ ಮೈತ್ರೇಯರು ಪುನಃ ಪ್ರಾರಂಭದಿಂದ ಹಿಂದಿನ ಸೃಷ್ಟಿಕ್ರಮವನ್ನೂ ವರ್ಣಿಸುವುದರಿಂದ, ಸೃಷ್ಟಿವಿಚಾರವು ಚೆನ್ನಾಗಿ ತಿಳಿಯಲೆಂಬ ಉದ್ದೇಶ್ಯದಿಂದ ವಿದುರನಿಗೆ ಈ ರೀತಿ ಹೇಳಿದರು:-

ಎಲೈ ವಿದುರನೆ! ಸೃಷ್ಟಿಸಲ್ಪಡತಕ್ಕ ಜಗತ್ತಿನಲ್ಲಿ ಜಡ, ಚೇತನರು ಅಸಂಖ್ಯಾತರಾದುದರಿಂದಲೂ, ಅವರವರ ಸ್ವಭಾವ ಪ್ರೇರಕನಾಗಿ ಅನಂತಾನಂತ ರೂಪಗಳಿಂದ ಮಹತ್ತತ್ವಾದಿ ಸಕಲ ಜಗತ್ಪ್ರವಿಷ್ಟನಾಗಿರುವುದರಿಂದಲೂ ಪರಮಾತ್ಮನು ಯಾರಿಂದಲೂ ತಿಳಿಯಲಸಾಧ್ಯರಾದ ತನ್ನ ಅಪಾರ ಮಹಿಮೆಯಿಂದ ತನ್ನಧೀನಳಾದ ಪ್ರಕೃತಿಯ ಗುಣಗಳಾದ ಸತ್ವರಜಸ್ತಮೋಗುಣಗಳನ್ನು ಪ್ರೇರಿಸಿ, ರಜೋಗುಣದ ಉದ್ರೇಕದಿಂದ ಮಹತ್ತತ್ವಾಖ್ಯ ಬ್ರಹ್ಮದೇವರ ಶರೀರವನ್ನೂ, ಬ್ರಹ್ಮದೇವರನ್ನೂ ಸೃಷ್ಟಿಮಾಡಿದನು. ಆ ಪರಮಾತ್ಮನಿಂದಲೇ ಪ್ರೇರಿತಳಾಗಿ ಜಡಚೇತ ಪ್ರಕೃತಿಗಳಿಗೆ ಅಭಿಮಾನಿಯಾದ ಕ್ಷರನಾಮಕಳಾದ ರಮಾದೇವಿಯು, ಆ ಮಹತ್ತತ್ವಕ್ಕೇ ಅಭಿಮಾನಿಗಳಾದ ಮುಖ್ಯವಾಯು ದೇವರನ್ನೂ, ಸರಸ್ವತೀ ಭಾರತಿಯರನ್ನೂ ಪಡೆದಳು.

ಮಹತ್ತತ್ವದ ತಮೋಭಾಗದಿಂದ ವೈಕಾರಿಕ, ತೈಜಸ, ತಾಮಸಗಳೆಂಬ ಮೂರು ವಿಧವಾದ ಅಹಂಕಾರತತ್ವವೂ, ವೈಕಾರಿಕಾಹಂಕಾರದಿಂದ ಗರುಡ, ಶೇಷ, ರುದ್ರರೂ, ಸೌಪರ್ಣೀ, ವಾರುಣೀ, ಗಿರಿಜಾ ಎಂಬ ಇವರ ಪತ್ನಿಯರೂ, ಪತ್ನೀ ಸಮೇತರಾದ ಇಂದ್ರಕಾಮರೂ ಚಂದ್ರನೂ ಮನಸ್ತತ್ವವೂ ಸೃಷ್ಟಿಸಲ್ಪಟ್ಟಿತು. ತೈಜಸಾಹಂಕಾರದಿಂದ ಪಂಚಜ್ಞಾನ ಪಂಚಕರ್ಮೇಂದ್ರಿಯಗಳೂ, ದಿಗ್ದೇವತೆಗಳೂ ಉತ್ಪನ್ನರಾದರು. ತಾಮಸಾಹಂಕಾರದಿಂದ ಪಂಚಭೂತ ಪಂಚತನ್ಮಾತ್ರಗಳು ಹುಟ್ಟಿದವು. ಇವುಗಳೆಲ್ಲಾ ಪ್ರತ್ಯೇಕಗಳಾಗಿದ್ದು ಸೃಷ್ಟಿಕಾರ್ಯವನ್ನು ಮಾಡಲಸಮರ್ಥಗಳಾಗಿದ್ದ ಕಾರಣ, ಪರಮಾತ್ಮನು ಇವುಗಳಲ್ಲಿ ಪ್ರವೇಶಿಸಿ, ಈ ಇಪ್ಪತ್ತೈದು ತತ್ವಗಳಿಂದ ಸುವರ್ಣಾತ್ಮಕ ಬ್ರಹ್ಮಾಂಡವನ್ನು ಸೃಷ್ಟಿಮಾಡಿದನು.

ನಂತರ ಹೊರಗೆ ಸೃಷ್ಟರಾದ ತತ್ವದೇವತೆಗಳನ್ನು ತನ್ನ ಗರ್ಭದಲ್ಲಿ ಧರಿಸಿ ಪರಮಾತ್ಮನು ಬ್ರಹ್ಮಾಂಡವನ್ನು ಭೇಧಿಸಿಕೊಂಡು ಒಳಗೆ ಪ್ರವೇಶಿಸಿ, ಆ ಗರ್ಭೋದಕದ ಮೇಲೆ ಶೇಷಶಾಯಿಯಾಗಿ, ಒಬ್ಬನೇ ಒಂದು ಸಹಸ್ರವರ್ಷಗಳ ಕಾಲ ಮಲಗಿದ್ದನು. ಸಹಸ್ರವರ್ಷಗಳನಂತರ ಆ ಪರಮಾತ್ಮನ ಹೊಕ್ಕಳಿಂದ ಸುವರ್ಣಾತ್ಮಕವಾದ ಹದಿನಾಲ್ಕು ದಳಗಳುಳ್ಳ, ಸಮಸ್ತ ಜಗತ್ತು ಚರಾಚರ ಪ್ರಾಣಿಗಳಿಂದ ಸಹಿತವಾದ ಕಮಲವು ಉತ್ಪನ್ನವಾಯಿತು. ಆ ಕಮಲದ ಮೇಲೆ ಜಲಶಾಯಿಯಾದ ಪರಮಾತ್ಮನು ಬ್ರಹ್ಮದೇವರಿಗೆ ಪೂರ್ವಕಲ್ಪದಂತೆ ಸೃಷ್ಟಿಮಾಡೆಂದು ಆಜ್ಞಾಪಿಸಿದನು. ಪರಮಾತ್ಮನಿಂದ ಆಜ್ಞಪ್ತರಾದ ಬ್ರಹ್ಮದೇವರು, ಪರಮಾತ್ಮನ ಅನುಗ್ರಹದಿಂದ ಹಿಂದಿನ ಕಲ್ಪದಲ್ಲಿ ಜಗತ್ತು ಹೇಗಿತ್ತೆಂಬುವುದನ್ನು ತಿಳಿದವರಾಗಿ, ಅದರಂತೆ ಪುನಃ ಸೃಷ್ಟಿಸಲು ಯೋಚಿಸಿದರು. ಆಗ ಮೊದಲು ತಮ್ಮ ನೆರಳಿನಿಂದ ಅವಿದ್ಯಾಪಂಚಕಗಳೆಂಬ ತಾಮಿಸ್ರ, ಅಂಧತಾಮಿಸ್ರ, ತಮಸ್ಸು, ಮೋಹ, ಮಹಾಮೋಹಗಳನ್ನು ಸೃಷ್ಟಿಸಿದರು.

## ವಿವಿಧ ಸ್ತ್ರೀದೇಹಗಳಿಂದ ಸೃಷ್ಟಿ

ಬ್ರಹ್ಮದೇವರ ಛಾಯಾರೂಪಳಾದ ರಾತ್ರ್ಯಭಿಮಾನಿಯೂ ಹುಟ್ಟಿದಳು. ಅವಳನ್ನು ಯಕ್ಷರೂ ರಾಕ್ಷಸರೂ ಆಶ್ರಯಿಸಿದರು. ರಾತ್ರಿಯು, ಕ್ಷುತ್ ಎಂಬ ಹಶುವು, ತೃಟ್ ಎಂಬ ಬಾಯಾರಿಕೆಗಳನ್ನೂ, ಅದಕ್ಕೆ ಅಭಿಮಾನಿಗಳನ್ನೂ ಪಡೆದಳು. ಆಗ ಯಕ್ಷರಾಕ್ಷಸರು ಹಶಿವು ಬಾಯಾರಿಕೆಗಳಿಂದ ಬಾಧಿತರಾಗಿ, ತಮ್ಮನ್ನು ಸೃಷ್ಟಿಸಿದ ಬ್ರಹ್ಮದೇವರನ್ನೇ ತಿನ್ನಲುಹೋದರು. ಆಗ ಬ್ರಹ್ಮದೇವರೂ, ಅವರಿಗೆ ತಿನ್ನಬೇಡಿರಿ, ನಿಮ್ಮ ತಂದೆಯಾದ ನನ್ನನ್ನು ನನ್ನ ಮಕ್ಕಳಾದ ನೀವು ಸಂರಕ್ಷಿಸಿರಿ, ಎಂದು ಹೇಳಿದರು. ಆಗ ಅವರಲ್ಲಿ ಕೆಲವರು ತಿನ್ನುವುದಿಲ್ಲ ರಕ್ಷಿಸುತ್ತೇವೆ! ಎಂದರು. ಅವರನ್ನು ಬ್ರಹ್ಮದೇವರು ರಾಕ್ಷಸರೆಂದು ಕರೆಯುವರಾಗುವಿರಿ, ಎಂದರು. ರಕ್ಷಿಸುವುದಿಲ್ಲ ನಿಮ್ಮನ್ನು ಭಕ್ಷಿಸುತ್ತೇವೆಂದು ಹೇಳಿದವರಿಗೆ ಯಕ್ಷರೆಂಬ ಹೆಸರನ್ನೂ ಬ್ರಹ್ಮದೇವರು ಇಟ್ಟರು.

ಹೀಗೆ ಅವಿದ್ಯೆಯನ್ನೂ ಅವಿದ್ಯೆಗಳಿಗೆ ಅಭಿಮಾನಿಗಳೂ ಅಧಿಕಾರಿಗಳೂ ಆದ ಪ್ರಕೃತ್ಯಭಿಮಾನಿ ಮತ್ತು ಯಕ್ಷರಾಕ್ಷಸರನ್ನು ಸೃಷ್ಟಿಸಿದನಂತರ, ಬ್ರಹ್ಮದೇವರು ವಿದ್ಯೆಗೆ ಅಭಿಮಾನಿಯಾದ ಪ್ರಭಾ ಎಂಬ ಬೆಳಕಿಗೆ, ಅಹಸ್ಸಿಗೆ ಅಭಿಮಾನಿಯನ್ನೂ, ಅವಳ ದ್ವಾರಾ ಕ್ರೀಡಾದಿಗುಣವಿಶಿಷ್ಟರೂ, ಸಕಲ ಸುಜ್ಞಾನರೂಪರುಗಳಾದ ದೇವತೆಗಳನ್ನು ಸೃಷ್ಟಿಸಿದರು. ಆ ದೇವತೆಗಳು ಆ ಪ್ರಭೆಯೆಂಬುದನ್ನೇ ದೇಹವನ್ನಾಗಿ ಅಂಗೀಕರಿಸಿ ಹಗಲಿಗೆ ಅಭಿಮಾನಿದೇವತೆಗಳಾದರು.

ಬ್ರಹ್ಮದೇವರು ಪ್ರಾಭಾಖ್ಯಶರೀರದ ಕಟಿಪ್ರದೇಶದಿಂದ ಅಂದರೆ ಹಗಲೂ ರಾತ್ರಿಯ ಸಂಧಿಕಾಲ ವಿಶೇಷದಲ್ಲಿ, ಇಂದ್ರಿಯ ಲೋಲುಪರಾದ ಅಸುರರನ್ನು ಹುಟ್ಟಿಸಿದರು. ಆ ಅಸುರರು ಬ್ರಹ್ಮದೇವರನ್ನು ಸಂಭೋಗಕ್ಕಾಗಿ ಸಮೀಪಿಸಿದರು. ಆ ವಿಪರೀತವನ್ನು ಬ್ರಹ್ಮದೇವರು ನೋಡಿ ನಕ್ಕು, ಕೋಪ ಭಯಗಳಿಂದ ಕೂಡಿದವರಂತೆ ಕಾಣುತ್ತಾ ಅಲ್ಲಿಂದ ಎದ್ದು ಅವರಿಗೆ ಸಿಕ್ಕದೆ ಓಡಿಹೋದರು. ಹಾಗೆ ಓಡಿಹೋಗುವವರಂತೆ ಅವರಿಗೆ ತೋರಿಸಿ, ಉಪಾಸಕರ ಯೋಗ್ಯತಾನುಸಾರ ದರ್ಶನ ಕೊಡತಕ್ಕ ರೂಪಗಳುಳ್ಳ, ಮೂಲಕಾರಣನಾದ ಆ ಪದ್ಮನಾಭದೇವರ ಸಮೀಪಕ್ಕೆ ಬಂದು, ಎಲೈ ಸ್ವಾಮಿಯೆ! ಸಮಸ್ತ ಆಪತ್ತುಗಳಲ್ಲೂ ಭಕ್ತರಾದ ನಾವು ನಿನ್ನನ್ನೇ ಮೊರೆಹೋಗುತ್ತೇವೆ. ನೀನು ಸರ್ವದಾ ನಮ್ಮ ವಿಪತ್ತುಗಳನ್ನು ಪರಿಹರಿಸಿ ನಮ್ಮ ಭಯ ಪರಿಹಾರಕನಾಗಿರುತ್ತೀಯೆ. ನಿನ್ನ ಆಜ್ಞಾನುಸಾರ ಅನೇಕ ವಿಧ ಜಗತ್ಸೃಷ್ಟಿಯನ್ನು ನಾನು ಮಾಡಿದೆನು. ಈಗ ಸೃಷ್ಟರಾದ ಅಸುರರು ಕಾಮೋಪಭೋಗಕ್ಕಾಗಿ ನನ್ನನ್ನೇ ಅಟ್ಟಿಸಿಕೊಂಡು ಬರುತ್ತಿದ್ದಾರೆ! ನನ್ನನ್ನು ಕಾಪಾಡು, ನೀನೊಬ್ಬನೇ ಲೋಕದಲ್ಲಿ

ಜನರ ಕಷ್ಟ ಪರಿಹರಿಸತಕ್ಕವನು. ನೀನೇ ಕಷ್ಟಗಳನ್ನು ಕೊಡತಕ್ಕವನೂ, ಪರಿಹರಿಸತಕ್ಕವನೂ ಆಗಿರುತ್ತೀಯೆ! ಎಂದರು. ಈ ರೀತಿ ಬ್ರಹ್ಮದೇವರು ಆ ಅಸುರಜನರನ್ನು ಮೋಹಿಸುವುದಕ್ಕಾಗಿ ಭಯಪಟ್ಟವರಂತೆಯೂ, ಓಡಿಹೋಗುವರಂತೆಯೂ ತೋರಿಸುವವರಾಗಿ, ಸಜ್ಜನರಿಗೆ ಆಪತ್ತುಗಲೂ, ಕಷ್ಟಗಳೂ ಪ್ರಾಪ್ತಿಯಾದರೆ ಅವರು ನಿವಾರಣೆಗಾಗಿ ಪರಮಾತ್ಮನನ್ನೇ ಮೊರೆಹೋಗತಕ್ಕದ್ದೆಂದೂ, ಇದರಿಂದ ತೋರಿಸಿಕೊಟ್ಟರು.

ಅಸುರರನ್ನು ನಿಗ್ರಹಿಸಲೂ, ಅವರಿಂದ ತಮಗೆ ಏನೂ ತೊಂದರೆಯಾಗದಂತೆ ಮಾಡಲೂ, ಬ್ರಹ್ಮದೇವರು ಶಕ್ತರಾದರೂ, ಜನರಿಗೆ ಕಷ್ಟಗಳು ಪ್ರಾಪ್ತವಾದರೆ ಹಿರಿಯರಿಂದ ನಿವಾರಣೋಪಾಯವನ್ನು ಕೇಳಿ, ಅದರಂತೆ ನಡೆಯಬೇಕೆಂಬ ನಿಯಮವನ್ನೂ ಇದರಿಂದ ಮೇಲ್ಪಂಕ್ತಿ ಹಾಕಿ ತೋರಿಸಿಕೊಟ್ಟರು.

ಅಶೇಷ ವಿಶೇಷ ಜ್ಞಾನಪೂರ್ಣನೂ, ಚೇತನಾಚೇತನ ಜಗತ್ತಿನಿಂದ ಭಿನ್ನನೂ, ವಿಲಕ್ಷಣನೂ, ಸಮಸ್ತಜೀವರಿಗೂ ಅಪರೋಕ್ಷಜ್ಞಾನವನ್ನು ಕೊಡುವವನೂ, ಆದ್ದರಿಂದ ವಿವಿಕ್ತ ಆಧ್ಯಾತ್ಮದರ್ಶನ ನಾಮಕನಾದ ಶ್ರೀಹರಿಯು ಬ್ರಹ್ಮದೇವರು ಅಸಹಾಯಕರಂತೆಯೂ, ಭಯವುಳ್ಳವರಂತೆಯೂ ಬಂದು, ತನ್ನಲ್ಲಿ ಅವರಿಗೆ ಪ್ರಾಪ್ತವಾದ ಕಾರ್ಪಣ್ಯವನ್ನು ಹೇಳಿಕೊಳ್ಳಲು, ಅದನ್ನು ಕೇಳಿ, ಎಲೈ ಬ್ರಹ್ಮನೆ! ನೀನು ನನ್ನ ಪೂರ್ಣಾನುಗ್ರಹವನ್ನು ಸಂಪಾದಿಸಲು ಬೇಕಾದ ಸಕಲಸಾಧನಗಳಿಂದ ತುಂಬಿದ ಶರೀರವುಳ್ಳವನಾಗಿರುತ್ತೀಯೆ. ನಿನ್ನ ಶರೀರದಿಂದ ಸಂಧ್ಯಾಕಾಲಾಭಿಮಾನಿಯಾದ ಸಂಧ್ಯಾ ಅಥವ ಘೋರನಾಮಕಳಾದ ಸ್ತ್ರೀರೂಪವನ್ನು ಈಚೆಗೆ ಬಿಡು, ಎನ್ನಲು, ಬ್ರಹ್ಮದೇವರು ತಮ್ಮ ಶರೀರದಿಂದ, ಘೋರಾ ಎಂಬ ಸ್ತ್ರೀರೂಪವನ್ನು ಸೃಷ್ಟಿಸಿ ಈಚೆಗೆ ಬಿಟ್ಟರು. ಆ ಸ್ತ್ರೀಯು ಕ್ವಣಚ್ಛಬ್ದಗಳನ್ನು ಮಾಡುವ ಪಾದಾಭರಣಗಳಿಂದ ಅಲಂಕೃತವಾದ ಬಿಗಿದು ಕಟ್ಟಿದ ಕುಪ್ಪಸದಿಂದ ಮುಚ್ಚಲ್ಪಟ್ಟ ಸ್ತನ ಪ್ರದೇಶವುಳ್ಳವಳೂ, ತುಂಬಿದ ಒಂದಕ್ಕೊಂದು ತಗಲಿಕೊಂಡು ಮಧ್ಯೆ ಸಂದಿ ಇಲ್ಲದೆ ಉನ್ನತವಾಗಿರುವ ಸ್ತನಗಳಿಂದ ಶೋಭಿಸುತ್ತಾ, ಮನೋಹರವಾದ ಮೂಗು, ಹಲ್ಲುಗಳೂ, ವಕ್ರವಾದ ನಿರ್ಮಲವಾದ ನಗುವಿನಿಂದ ಕೂಡಿದವಳೂ ಆಗಿ ಆ ಅಸುರರ ಮನಸ್ಸನ್ನೆಲ್ಲಾ ತನ್ನ ವಶ ಮಾಡಿಕೊಂಡಳು.

ಆಕೆಯು, ಮದದಿಂದ ತನ್ನ ತಲೆಯನ್ನೂ ಕಾಲನ್ನೂ ಕಾಣದಂತೆ ಹಿಂದಕ್ಕೆ ವಾಲಿಸಿಕೊಂಡು, ಶರೀರ ಮಧ್ಯ ಭಾಗವನ್ನು ಮುಂದಕ್ಕೆ ಪ್ರದರ್ಶಿಸುತ್ತಾ, ಇದ್ದದ್ದರಿಂದ ಆಕೆಗೆ ಸಂಧ್ಯಾ ಎಂದು ಹೆಸರಾಯಿತು. ಅಸುರರೆಲ್ಲರೂ ಅವಳ ಸಮೀಪಕ್ಕೆ ಬಂದು ಮೋಹಿಸುತ್ತಾ ಅವಳನ್ನು ತಾವು ಹೊಂದಬೇಕೆಂಬ ಲೋಭದಿಂದ, ಎಲೈ! ಬಾಳೆಯ ಗಿಡವನ್ನು ಹೋಲತಕ್ಕ ತೊಡೆಯುಳ್ಳವಳೆ, ನೀನು ಯಾರು? ಯಾರ ಸಂಬಂಧಿ? ಸೌಂದರ್ಯ ರಸವನ್ನು ಸುರಿಸುತ್ತಾ ನಮ್ಮ ಮನಸ್ಸನ್ನು ಬಹಳ ಕಳವಳ

ಪಡಿಸುತ್ತಿರುತ್ತೀಯೆ. ನೀನು ನಮ್ಮ ಕಣ್ಣಿಗೆ ಗೋಚರಳಾದಾಗಿನಿಂದಲೂ, ನಮ್ಮ ಮನಸ್ಸನ್ನು ಚಂಡಿನಂತೆ ನೀನು ಆಡಿಸುತ್ತಿರುತ್ತೀಯೆ. ನಿನ್ನ ರೂಪವೆಂಬುವುದೇ ನಿನಗೆ ಕ್ರಯಕ್ಕೆ ಕೊಡಲರ್ಹವಾದ ದ್ರವ್ಯವು. ನಿನ್ನ ಅಂಗಸಂಗವನ್ನು ಬಯಸುತ್ತಾ ಹೊಂದದೇ ಇರುವುದರಿಂದ ಮಂದ ಭಾಗ್ಯರಾದ ನಮಗೆ ಆ ದ್ರವ್ಯವು ಹೇಗೆ ಲಭಿಸೀತು? ನಿನ್ನ ದರ್ಶನವೇ ನಮಗೆ ಸುರತಕ್ರಿಯೆಯಾಗಿರುತ್ತೆ. ಆದರೂ ನಮ್ಮ ಮನಸ್ಸು ನಿನ್ನಿಂದ ರಹಿತವಾಗಿ ಖೇದವನ್ನು ಹೊಂದುತ್ತದೆ. ನಮ್ಮ ಮನಸ್ಸೆಂಬ ಚೆಂಡು ಇತರ ಚಂಡುಗಳಂತೆ ಪುಟ ಹಾರಿ ದೂರ ಹೋಗದೆ, ನಿನ್ನ ಪಾದ ಪದ್ಮಗಳ ಸಮೀಪವನ್ನೇ ಸೇರಲಪೇಕ್ಷಿಸುತ್ತವೆ.

ಎಲೈ ನಮ್ಮ ಹೆಂಡತಿಯೆ! ನಿನ್ನ ಕೈಗಳ ಬಡಿತದಿಂದ ನಮ್ಮ ಮನಸ್ಸೆಂಬ ಚೆಂಡು ಹತಪ್ರಾಯವಾಗಿ, ನಿರಾಸೆಯುಳ್ಳದ್ದಾಗಿದೆ. ನಿನ್ನ ಭಾರವಾದ ಸರ್ಪದಂತಿಹ ಜಡೆಯಿಂದಲೂ, ಉನ್ನತವಾದ ಸ್ಥನಗಳಿಂದಲೂ, ಮಧ್ಯಭಾಗದಿಂದಲೂ ನಮ್ಮ ಮನಸ್ಸು ಘಟ್ಟಿಯಾಗಿ ಕಟ್ಟಿಹಾಕಲ್ಪಟ್ಟಿದೆ, ಎಂದು ಹೇಳುತ್ತಾ, ಮದೋದ್ರೇಕವನ್ನುಂಟುಮಾಡುತ್ತಾ ತಮಗೆ ವಶವಾಗುವಂತಿರುವಳೋ ಅನ್ನುವ ಹಾಗೆ ತೋರಿಸುತ್ತಾ, ಬೆಡಗಿನಿಂದ ಕೂಡಿದ ಆ ಘೋರಾ ನಾಮಕಳಾದ ಸಂಧ್ಯೆಯನ್ನು ಸ್ತ್ರೀಯೆಂಬ ಮೂಢ ಭಾವದಿಂದ ಅಸುರರು ಹಿಡಿದುಕೊಂಡರು. ಈ ಶೃಂಗಾರ ರಸವರ್ಣನೆಯಿಂದ ಸಾಧಕನಿಗೆ ಸ್ತ್ರೀಯು ಪ್ರತಿಬಂಧಕಳಾಗಿ, ಅವನನ್ನು ಸಂಸಾರದಲ್ಲಿ ಬಂಧಿಸುತ್ತಾಳೆಂಬುದನ್ನೂ, ಸ್ತ್ರೀ ವ್ಯಾಮೋಹವುಳ್ಳವರು ಅಸುರರಂತೆ ವಿವೇಕಶೂನ್ಯರೆಂದೂ ತೋರಿಸುತ್ತಾರೆ. ಅದಲ್ಲದೆ ಕಾಮುಕರು ಸ್ತ್ರೀಯರನ್ನು ಹೀಗೆ ವರ್ಣಿಸುತ್ತಾರೆಂದೂ, ತಿಳಿಯುತ್ತಾರೆಂದೂ ತೋರಿಸುತ್ತಾರೆ. ಅಷ್ಟಲ್ಲದೆ ಬೇರೆ ತಾತ್ಪರ್ಯವು ಈ ವರ್ಣನೆಯಿಂದ ಇಲ್ಲಿ ಪ್ರತಿಪಾದಿತವಾಗಿಲ್ಲ.

ಈ ರೀತಿಯಾಗಿ ಸಂಧ್ಯೆಯು, ಅಸುರರು ತನ್ನನ್ನು ಹಿಡಿದದ್ದನ್ನು ಕಂಡು, ಭಾವ ಗಂಭೀರವಾದ ನಗುವಿನಿಂದ ಅವರ ಕೈಗೆ ಸಿಕ್ಕದೆ, ತನ್ನ ಕಾಂತಿಯಿಂದ ಗಂಧರ್ವರನ್ನೂ, ಅಪ್ಸರಸರನ್ನೂ ಸಮೂಹವಾಗಿ ಸೃಷ್ಟಿಮಾಡಿದಳು. ಅಂದರೆ ಆ ಸಂಧ್ಯಾ ರೂಪದಿಂದ ಬ್ರಹ್ಮದೇವರು ಗಂಧರ್ವ ಅಪ್ಸರಸರನ್ನು ಸೃಷ್ಟಿಸಿದರು. ನಂತರ ಕಾಂತಿ ಸ್ವರೂಪಳನ್ನು ವಿಶ್ವಾವಸು ಮುಂತಾದ ಗಂಧರ್ವರು ಪತ್ನಿಯಾಗಿ ಸ್ವೀಕರಿಸಿದರು. ರೂಪವತಿಯಾದ ಪತ್ನಿಯು ತನ್ನ ಸೌಂದರ್ಯದಿಂದ ತನ್ನ ಪತಿಯನ್ನು ತನಗೆ ಅಭಿಮುಖವಾಗುವಂತೆ ಮಾಡಿಕೊಳ್ಳುತ್ತಾಳಾದ್ದರಿಂದ ತಂದ್ರಿ ಎಂದು ಕರೆಯಲ್ಪಡುತ್ತಾಳೆ. ನಿದ್ರೆಯು ಸರ್ವರನ್ನೂ ತನಗೆ ಅಭಿಮುಖವನ್ನಾಗಿ ಮಾಡಿಕೊಳ್ಳುತ್ತಾದ ಕಾರಣ ತಂದ್ರಿ ಎನಿಸುತ್ತದೆ. ಈ ನಿದ್ರೆಗೆ ಅಭಿಮಾನಿಯಾದ ತಂದ್ರಿಯ ದೆಸೆಯಿಂದ ಭೂತ, ಪ್ರೇತ ಪಿಶಾಚಾದಿಗಳನ್ನೂ, ನಿದ್ರಾ, ಆಲಸ್ಯ, ಉನ್ಮಾದಗಳನ್ನೂ ಬ್ರಹ್ಮದೇವರು ನೋಡಿ ಅಸಹ್ಯದಿಂದ ಕಣ್ಣುಮುಚ್ಚಿಕೊಂಡರು. ನಂತರ ಜೃಂಭಣಾ ಎಂಬ ಸ್ತ್ರೀರೂಪವನ್ನು

ಸೃಷ್ಟಿಮಾಡಿದರು. ಭೂತ ಪ್ರೇತ ಪಿಶಾಚಿಗಳೂ ಆ ಜೃಂಭಣಾ ಎಂಬ ಸ್ತ್ರೀಯನ್ನು ಹೊಂದಿದರು. ಈ ಜೃಂಭಣಾಖ್ಯ ಸ್ತ್ರೀಯಿಂದ ಸಮಸ್ತ ಪ್ರಾಣಿಗಳಲ್ಲಿಯೂ, ನಿದ್ರೆ, ಆಲಸ್ಯ, ಇಂದ್ರಿಯ ಚಾಪಲ್ಯಾದಿಗಳು ಹುಟ್ಟುತ್ತವೆ. ಈ ಇಂದ್ರಿಯ ಚಾಪಲ್ಯಾದಿಗಳಿಂದ ಜನರು ಪರಸ್ಪರ ದೇಹ ಘರ್ಷಣಾದಿಗಳನ್ನು ಮಾಡಿ ಕೊಂಡಾಗ, ಉನ್ಮಾದವೆಂಬ ಅವಸ್ಥೆಯು ಹುಟ್ಟುತ್ತದೆ.

ಈ ರೀತಿಯಾಗಿ ಬ್ರಹ್ಮದೇವರು ತಮ್ಮ ದೇಹದಿಂದ, ಘೋರಾ, ಪ್ರಭಾ, ಕಾಂತೀ, ತಂದ್ರೀ ಮುಂತಾದ ಸ್ತ್ರೀ ರೂಪ ಬಾಹ್ಯದೇಹಗಳನ್ನು ಸೃಷ್ಟಿಸಿ, ಅವುಗಳನ್ನು ಯಕ್ಷರಾಕ್ಷಸ, ದೇವಗಣ, ಗಂಧರ್ವ ಅಪ್ಸರಸ, ಭೂತಪ್ರೇತಾದಿಗಳಿಗೆ ಕ್ರಮವಾಗಿ ದಾನಮಾಡಿ ಅದರಿಂದ ತೃಪ್ತರಾದರು. ನಂತರ ಈ ಭೂತ ಪ್ರೇತಾದಿಗಳು ಇತರರಿಗೆ ಭಯ, ಉಪದ್ರವಗಳನ್ನು ಮಾಡಿದರೆ ಅದನ್ನು ನಿವಾರಿಸಲು ಶಕ್ತರಾದ ಸಾಧ್ಯರೆಂಬುವರನ್ನೂ, ಪಿತೃಗಣಗಳನ್ನೂ, ಸಾರವಾದ ಅನ್ನದ ಭೋಜನವುಳ್ಳವರನ್ನಾಗಿ, ಪರೋಕ್ಷದಿಂದ ಹೊರಗಡೆ ತಮ್ಮ ಇಚ್ಛೆಯಿಂದ ಸೃಷ್ಟಿಸಿದರು. ಪಿತೃದೇವತೆಗಳು ಅನ್ನಸಾರ ಭೋಕ್ತರಾದ್ದರಿಂದಲೇ, ಈಗಲೂ ಜನರು ಶ್ರಾದ್ಧಾದಿಗಳಲ್ಲಿ ಪಿತೃಗಳ ತೃಪ್ತಿಗಾಗಿ ಪಿಂಡಪ್ರದಾನಮಾಡುವ ಪದ್ಧತಿಯು ರೂಢಿಯಲ್ಲಿದೆ. ಜ್ಞಾನಿಗಳು ಪಿಂಡಪ್ರದಾನ ಬಲಿಹರಣ ಮುಂತಾದ್ದನ್ನು ಮಾಡಿಕೊಡತಕ್ಕ ಸಾರಾನ್ನದಿಂದ ಉತ್ಪನ್ನವಾದ ದೇಹವನ್ನೇ, ಪಿತೃಗಳು ದೇಹಗಳನ್ನಾಗಿ ಸ್ವೀಕರಿಸಿದರು. ಸಾಧ್ಯರಿಗೂ ಅಷ್ಟೇ. ನಂತರ ಬ್ರಹ್ಮದೇವರು ಅಂತರ್ಧಾನವೆಂಬ ಕಣ್ಣಿಗೆ ಕಾಣಿಸದಂತಹ ಶಕ್ತಿಯುಳ್ಳ ಶರೀರವನ್ನು ಸ್ವಾಭಾವಿಕವಾಗಿ ಹೊಂದುವಂತೆ ಸಿದ್ಧರನ್ನೂ, ಗಂಧರ್ವರನ್ನು ಬ್ರಹ್ಮದೇವರು ಸೃಷ್ಟಿಸಿದರು.

ತನ್ನ ಶರೀರದಿಂದಲೇ ಬ್ರಹ್ಮದೇವರು ಕಿನ್ನರರನ್ನೂ ಕಿಂಪುರುಷರನ್ನೂ ಸೃಷ್ಟಿಸಿ, ಆತ್ಮ ಸದೃಶರಾದ ಅವರನ್ನು ನೋಡಿ ತೃಪ್ತರಾಗಿ ಅವರನ್ನು ತಮ್ಮ ಆತ್ಮಾಭಾಸರೆಂದು ಭಾವಿಸಿದರು. ನಂತರ ಅವರನ್ನು ಸೃಷ್ಟಿಸಿದ ಬಾಹ್ಯದೇಹವನ್ನು ಮಲವನ್ನು ತ್ಯಜಿಸುವಂತೆ ಸುಖರೂಪದಿಂದ ತ್ಯಜಿಸಿದರು. ಬ್ರಹ್ಮದೇವರು ತ್ಯಜಿಸಿದ ಆ ದೇಹವನ್ನು ಕಿನ್ನರರೂ ಕಿಂಪುರುಷರೂ ಹೊಂದಿದರು. ಬ್ರಹ್ಮದೇವರು ಈ ಕಿನ್ನರರು ಕಿಂಪುರುಷರ ಸೃಷ್ಟಿಗೆ ಪೂರ್ವದಲ್ಲಿ, ತಮ್ಮ ದೇಹವನ್ನು ಗಂಧಮಾಲ್ಯಾದಿಗಳಿಂದ ಅಲಂಕರಿಸಿಕೊಂಡು, ತಮ್ಮ ಸೌಂದರ್ಯವನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಾ, ಉಲ್ಲಾಸವಾದ ಮನಸ್ಸಿನಿಂದ ಗಾನಮಾಡುತ್ತಾ, ಈ ಭಾವಗಳಿಂದ ಅವರನ್ನು ಸೃಷ್ಟಿಸಿದ್ದರು. ಆದ್ದರಿಂದ, ಈ ಕಿನ್ನರರೂ, ಕಿಂಪುರುಷರೂ ತತ್ಸದೃಶ ದೇಹಗಳಿಂದ ಗಾನ ನರ್ತನಾದಿಗಳನ್ನು ಮಾಡುತ್ತಾ, ಬ್ರಹ್ಮದೇವರು ವಿಸರ್ಜಿಸಿದ ದೇಹದೊಡನೆ ಮೈಥುನಾದಿ ಕ್ರಿಯೆಗಳುಳ್ಳವರಾಗಿ ಭೋಗಪರರಾದರು.

ಅದನ್ನು ಬ್ರಹ್ಮದೇವರು ನೋಡಿ ಕ್ರೋಧದಿಂದ, ತಾವು ತ್ಯಜಿಸಿದ ದೇಹದ ಕೂದಲುಗಳಿಂದ

ಘಟಸರ್ಪಗಳನ್ನೂ, ನಾನಾ ವಿಧಗಳಾದ ಹೆಬ್ಬಾವು ಮುಂತಾದವುಗಳನ್ನೂ, ಹೆಣ್ಣು ಹಾವುಗಳನ್ನೂ ಸೃಷ್ಟಿಸಿ ಈಚೆಗೆ ಬಿಟ್ಟರು. ಇವುಗಳು ಕ್ರೂರ ಸ್ವಭಾವವುಳ್ಳವುಗಳೂ, ಭೋಗಾಸಕ್ತವಾದವುಗಳೂ, ಎತ್ತಿದ ಹೆಡೆಯಿಂದ ನಾಟ್ಯಮಾಡುವಂತೆ ಸಂಚರಿಸುವುಗಳೂ ಆದವು. ಇದರಿಂದ ಕಿನ್ನರರೂ ಕಿಂಪುರುಷರೂ ದೂರವಾದರು. ಕಿನ್ನರರು ಮನುಷ್ಯ ಮುಖವುಳ್ಳವರೂ ಪಡ್ಡ ಶರೀರವುಳ್ಳವರು. ಇವರಿಂದ ಪಕ್ಷಿಗಳೂ ಮನುಷ್ಯರೂ ಉತ್ಪನ್ನರಾದರು.

ಇದಾದನಂತರ ಸೃಷ್ಟಿಕಾರ್ಯದಲ್ಲಿ ತಾವು ಕೃತಕೃತ್ಯರಾದಂತೆ ಭಾವಿಸಿ ಬ್ರಹ್ಮದೇವರು ತಮ್ಮ ಮನಸ್ಸಿನಿಂದ ಲೋಕವೃದ್ಧಿಯನ್ನುಂಟುಮಾಡತಕ್ಕ ಮನುಗಳನ್ನು ಸೃಷ್ಟಿಸಿದರು. ಆ ಮನುಗಳಿಗೆ ತಮ್ಮ ಪ್ರಸನ್ನ ಮನೋಭಾವನೆಯೆಂಬ ದೇಹವನ್ನೇ ದೇಹಗಳನ್ನಾಗಿ ಕೊಟ್ಟರು. ಆ ಮನುಗಳ ಸೃಷ್ಟಿಯನ್ನು ನೋಡಿ, ಪೂರ್ವದಲ್ಲಿ ಸೃಷ್ಟರಾದ ದೇವತೆಗಳೂ, ಪ್ರಜಾಪತಿಗಳೂ, ಆಶ್ಚರ್ಯಪಟ್ಟವರಾಗಿ, ಬ್ರಹ್ಮದೇವರನ್ನು ಬಹು ಸಾರ್ಥಕವಾದ ಸೃಷ್ಟಿಮಾಡಿರುವಿರಿ! ನಿಮ್ಮ ಸೃಷ್ಟಿಕಾರ್ಯವು ಪೂರ್ಣವಾಯಿತು ಈ ಮನುಗಳ ಸೃಷ್ಟಿಯಿಂದ, ಎಚಿದು ಸ್ತೋತ್ರಮಾಡಿದರು. ಎಲೈ! ಬ್ರಹ್ಮದೇವರೇ ನಾವು ನಿಮ್ಮಿಂದ ಸಹಿತರಾಗಿ ಈ ಮನುಗಳು ಮಾಡುವ ಯಜ್ಞ ಯಾಗಾದಿ ಕ್ರಿಯೆಗಳಲ್ಲಿ ಸಮರ್ಪಿಸುವ ಹವಿಸ್ಸು ರೂಪಗಳಾದ ಅನ್ನವನ್ನು ನಾವು ಭೋಜನಮಾಡುವೆವು. ಆದರಿಂದ, ಇವರಿಂದ ಲೋಕದಲ್ಲಿ ಪೂರ್ಣವಾಗಿ ಪ್ರಜಾಭಿವೃದ್ಧಿಯಾಗುವುದು. ನಿಮ್ಮ ಸೃಷ್ಟಿಯು ಇನ್ನು ಸಾಕುಮಾಡಲ್ಪಡಲಿ! ಎಂದರು. ತಪಸ್ಸು, ವಿದ್ಯೆ, ಸಮಾಧಿಯೋಗಗಳಲ್ಲಿ ನಿಷ್ಠರಾದ ಋಷಿಗಳನ್ನು ಹೃಷಿಕೇಶನಾದ ಬ್ರಹ್ಮಾಂತರ್ಯಾಮಿ ಸ್ವಾಮಿಯು, ದೇವತೆಗಳ ಸೃಷ್ಟಿಗಿಂತಲೂ ಮುಂಚೆಯೇ ಸೃಷ್ಟಿಸಿದನು. ಆ ಋಷಿಗಳನ್ನೇ ಬ್ರಹ್ಮದೇವರು ತಮ್ಮ ದೇಹದಲ್ಲಿರುವ ಸಮಾಧಿಯೋಗ, ವಿದ್ಯಾ, ತಪಸ್ಸು, ವಿರಕ್ತಿಗಳ ಅಂಶಗಳಿಂದ ಸೃಷ್ಟಿಸಲ್ಪಟ್ಟ ದೇಹಗಳಿಂದ ಸಹಿತರನ್ನಾಗಿ ಬ್ರಹ್ಮದೇವರು ತಮ್ಮ ದೇಹದಿಂದ ಸೃಷ್ಟಿಸಿ ಹೊರಗೆ ಬಿಟ್ಟರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ द्वाविंशोऽध्यायः

**विदुर उवाच**

स्वायम्भुवस्य च मनोर्वंशः परमसम्मतः ।
कथ्यतां भगवन् यत्र मैथुनेनैधिरे प्रजाः ॥ १ ॥

प्रियव्रतोत्तानपादौ सुतौ स्वायम्भुवस्य वै।
यथाधर्मं जुगुपतुः सप्तद्वीपवतीं महीम्॥ २ ॥

तस्य वै दुहिता ब्रह्मन् देवहूतीति विश्रुता।
पत्नी प्रजापतेरुक्ता कर्दमस्य त्वयाऽनघ॥ ३ ॥

तस्यां स वै महायोगी युक्तायां योगलक्षणैः।
ससर्ज कतिधा वीर्यं तन्मे शुश्रूषवे वद॥ ४ ॥

रुचिर्यो भगवान् ब्रह्मन् दक्षो वा ब्रह्मणः सुतः।
यथा ससर्ज भूतानि लब्ध्वा भार्यां च मानवीम्॥ ५ ॥

**मैत्रेय उवाच**

प्रजाः सृजेति भगवान् कर्दमो ब्रह्मणोदितः।
सरस्वत्यां तपस्तेपे सहस्राणां समा दश॥ ६ ॥

ततः समाधियुक्तेन क्रियायोगेन कर्दमः।
संप्रपेदे हरिं भक्त्या प्रपन्नवरदाशुषम्॥ ७ ॥

तावत् प्रसन्नो भगवान् पुष्कराक्षः कृते युगे।
दर्शयामास तं क्षत्तः शाब्दं ब्रह्म दधद् वपुः॥ ८ ॥

सतं विरजमर्काभं सितपद्मोज्ज्वलत्स्रजम्।
स्निग्धनीलालकव्रातवक्त्राब्जविरजाम्बरम्॥ ९ ॥

किरीटिनं कुण्डलिनं शङ्खचक्रगदाधरम्।
श्वेतोत्पलक्रीडनकं मनःस्पर्शस्मितेक्षणम्॥ १० ॥

विन्यस्तचरणाम्भोजमंसदेशे गरुत्मतः।
दृष्ट्वा खेऽवस्थितं वक्षःश्रियं कौस्तुभकन्धरम्॥ ११ ॥

जातहर्षोऽपतन्मूध्र्ना क्षितौ लब्धमनोरथः।
गीर्भिस्त्वभ्यगृणात् प्रीतः स्वभावात्मा कृताञ्जलिः॥ १२ ॥

**कर्दम उवाच**

जुष्टं बताद्याखिलसत्त्वराशेः संसिद्धमक्ष्णोस्तव दर्शनान्नः।

यद् दर्शनं जन्मभिरीड्य सद्भिराशासते योगिनो रूढयोगाः ॥ १३ ॥

ये मायया ते हतचेतसस्त्वत्पादारविन्दं भवसिन्धुपोतम् ।
उपासते कामलवाय तेषां रासीश कामान् निरयेऽपि ये स्युः ॥ १४ ॥

तथा स चाहं परिवोढुकामः समानशीलां गृहमेधिधेनुम् ।
उपेयिवान् मूलमशेषमूलं दुराशयः कामदुघाङ्घ्रिपस्य ॥ १५ ॥
प्रजापतेस्ते वचसाऽधीश तन्त्या लोकः किलायं कामहेतोर्निबद्धः ।
अहं च लोकानुगतो वहामि बलिं च शुक्लानिमिषाय तुभ्यम् ॥ १६ ॥
लोकांश्च लोकानुगतानसूंश्च हित्वा श्रितास्ते चरणातपत्रम् ।
परस्परं त्वद्गुणवादसीधुपीयूषनिर्यापितदेहधर्माः ॥ १७ ॥
न तेऽजराक्षभ्रमिरायुरेषां त्रयोदशारं त्रिशतं षष्ठिपर्व ।
षण्णेम्यनन्तच्छिदि यत् त्रिनाभि करालस्रोतो जगदाच्छिद्य धावत् ॥ १८ ॥
एकः स्वयं सन् जगतः सिसृक्षया द्वितीययाऽऽत्मन्नधियोगमायया ।
सृजस्यदः पासि पुनर्ग्रहीष्यसे यथोर्णनाभिर्भगवन् स्वशक्तिभिः ॥ १९ ॥
नैतद् बताधीश पदं तवेप्सितम् यन्मायया जगृहे भूतसूक्ष्मम् ।
अनुग्रहाय त्वयि यर्हि मालया लसत्तुलस्या भगवान् विलक्षितः ॥ २० ॥

तं त्वाऽनुभूत्योपरतक्रियार्थं स्वमायया वर्तितलोकतन्त्रम् ।
नमाम्यभीक्ष्णं नमनीयपादसरोजमल्पीयसि कामवर्षम् ॥ २१ ॥

ऋषिरुवाचइत्यव्यलीकं प्रणतोऽब्जनाभस्तमाबभाषे वचसाऽमृतेन ।
सुपर्णपक्षोपरि रोचमानः प्रेमस्मितोद्वीक्षणविभ्रमद्भ्रुः ॥ २२ ॥

**भगवानुवाच**

विदित्वा तव चैत्त्यं मे पुरैव समयोजितम् ।
यदर्थमात्मनियमैस्त्वयैवाहं समर्चितः ॥ २३ ॥

न वै जातु मृषेदं स्यात् प्रजाध्यक्ष मदर्हणम् ।
भवद्विधेष्वतितरां मयि संगृहितात्मनाम् ॥ २४ ॥

प्रजापतिपतिः सम्राा मनुर्विख्यातमङ्गलः ।
ब्रह्मावर्तं योऽधिवसंञ्छास्ति सप्तार्णवां महीम् ॥ २५ ॥

स चेह विप्र राजर्षिर्महिष्या शतरूपया ।
आयास्यति दिदृक्षुस्त्वां परश्वो धर्मकोविदम् ॥ २६ ॥

आत्मजामसितापाङ्गीं वयःशीलगुणान्विताम् ।
मृगयन्तीं पतिं दास्यत्यनुरूपाय ते प्रभुः ॥ २७ ॥

समाहितं ते हृदयं यत्रेमान् परिवत्सरान् ।
सा त्वां ब्रह्मन् नृपवधूः काममाशु भजिष्यति ॥ २८ ॥

या त आत्मधृतं वीर्यं नवधा प्रसविष्यति ।
वीर्ये त्वदीय ऋषय आधास्यंस्तेज आत्मनः ॥ २९ ॥

त्वं च सम्यगनुष्ठाय निर्देशं म उशत्तर ।
मयि तीर्थीकृताशेषक्रियार्थो मां प्रपत्स्यसे ॥ ३० ॥

कृत्वा दयां च जीवेषु दत्वा चाभयमात्मवान् ।
मय्यात्मानं सहजगद् द्रक्षस्यात्मनि चापि माम् ॥ ३१ ॥

संभूय स्वांशकलया त्वद्वीर्येण महामते ।
तव क्षेत्रे देवहूत्यां प्रणेष्ये तत्त्वसंहिताम् ॥ ३२ ॥

एवं तमनुभाष्याथ भगवान् प्रत्यगक्षगः ।
जगाम बिन्दुसरसः सरस्वत्या परिश्रितात् ॥ ३३ ॥

निरीक्षतस्तस्य ययावशेषसिद्धेश्वराभिष्टुतसिद्धमार्गः ।
आकर्णयन् पत्ररथेन्द्रपत्रैरुच्चारितं स्तोममुदीर्णसाम ॥ ३४ ॥

एवं संप्रस्थिते शुक्ले कर्दमो भगवान् ऋषिः ।
आस्ते स्म बिन्दुसरसि तं कालं प्रतिपालयन् ॥ ३५ ॥

मनुः स्यन्दनमास्थाय शातकौम्भपरिच्छदम् ।
आरोप्य स्वां दुहितरं सभार्यः पर्यटन् महीम् ॥ ३६ ॥

तस्मिन् सुधन्वन्नहनि भगवान् यत् समादिशत् ।
उपायादाश्रमपदं मनुः शान्तव्रतस्य तत् ॥ ३७ ॥

यस्मिन् भगवतो नेत्रादपतन् हर्षबिन्दवः ।
कृपया संपरीतस्य प्रपन्नेऽर्पितया भृशम् ॥ ३८ ॥

तद् वै बिन्दुसरो नाम सरस्वत्या परिप्लुतम् ।
पुण्यं शिवामृतजलं महर्षिगणसेवितम् ॥ ३९ ॥

पुण्यद्रुमलताजालैः कूजत्पुण्यमृगद्विजैः ।
सर्वर्तुफलपुष्पाढ्यं वनराजिश्रियान्वितम् ॥ ४० ॥

मत्तद्विजगणोद्घुष्टं मत्तभ्रमरविभ्रमम् ।
मत्तबर्हिनटाटोपमाह्वयन्मत्तकोकिलम् ॥ ४१ ॥

कदम्बचम्पकाशोककरञ्जबकुलासनैः ।
कुन्दमन्दारकुटजैश्चूतपोतैरलंकृतम् ॥ ४२ ॥

कारण्डवैर्बकैर्हंसैः कुररैर्जलकुक्कुटैः ।
सारसैश्चक्रवाकैश्च चकोरैर्वल्गुकूजितम् ॥ ४३ ॥

शशकैर्हरिणैः क्रोडैः श्वविवयकुञ्जरैः ।
गोपुच्छैर्हरिभिर्मर्कैर्नकुलैर्नाभिभिर्वृतम् ॥ ४४ ॥

प्रविश्य तत् तीर्थवरमादिराजः सहानुगः ।
ददर्श मुनिमासीनं तस्मिन् हुतहुताशनम् ॥ ४५ ॥

विद्योतमानं वपुषा तपस्युग्रयुजा चिरम् ।
नातिक्षामं भगवतः स्निग्धापाङ्गविलोकनात् ॥ ४६ ॥

तद्व्याहृतामृतकलापीयूषश्रवणेन च ।
प्रांशुं पद्मपलाशाक्षं जटिलं चीरवाससम् ।
उपसंसृत्य मलिनं यथार्हणमसंस्कृतम् ॥ ४७ ॥

अथोटजमुपायान्तं नृदेवं प्रणतं पुरः ।

सपर्यया प्रत्यगृह्णात् प्रतिनन्द्यानुरूपया ॥ ४८ ॥

गृहीतार्हणमासीनं संयतं प्रीणयन् मुनिः ।
स्मरन् भगवदादेशमित्याह श्लक्ष्णया गिरा ॥ ४९ ॥

नूनं चङ्क्रमणं देव सतां संरक्षणाय ते ।
वधाय चासतां यस्त्वं हरेः शक्तिर्हि पालिनी ॥ ५० ॥

योऽर्केन्द्वग्नीन्द्रवायूनां यमधर्मप्रचेतसाम् ।
रूपाणि स्थान आधत्से तस्मै शुक्लात्मने नमः ॥ ५१ ॥

न यदा रथमास्थाय जैत्रं मणिगणार्पितम् ।
विस्फुरच्चण्डकोदण्डो रथेन त्रासयन्नघान् ॥ ५२ ॥

स्वसैन्यचरणक्षुण्णं वेपयन् मण्डलं भुवः ।
विकर्षन् बृंहतीं सेनां पर्यटस्यंशुमानिव ॥ ५३ ॥

तदैव सेतवः सर्वे वर्णाश्रमनिबन्धनाः ।
भगवद्रचिता राजन् भिद्येरन् बत दस्युभिः ॥ ५४ ॥

अधर्मश्च समेधेत लोलुपैर्व्यङ्कुशैर्नृभिः ।
शयाने त्वयि लोकोऽयं दस्युग्रस्तो विनङ्क्ष्यति ॥ ५५ ॥

अथापि पृच्छे त्वां वीर यदर्थं त्वमिहागतः ।
तद् वयं निर्व्यलीकेन प्रतिपद्यामहे हृदा ॥ ५६ ॥

## ॥ इति श्रीमद्भागवते (तृतीयस्कन्धे( *3) द्वाविंशोऽध्यायः ॥

**॥ ಇಪ್ಪತ್ತೆರಡನೆಯ ಅಧ್ಯಾಯ ॥**

## ಕರ್ದಮ ಪ್ರಜೇಶ್ವರರ ಚರಿತ್ರೆ

ಬ್ರಹ್ಮದೇವರ ಶರೀರದಿಂದ ಆದ ಸೃಷ್ಟಿಯನ್ನು ಮೈತ್ರೇಯರಿಂದ ವಿದುರನು ಕೇಳಿ, ಪುನಃ ಮೈತ್ರೇಯರನ್ನು ಈ ರೀತಿಯಾಗಿ ಕೇಳಿದನು:- ಎಲೈ ಮೈತ್ರೇಯರೆ! ಸ್ವಾಯಂಭುವಮನುಗಳ ವಂಶವು ಪರಮ ಉತ್ತಮವಾದದ್ದೂ, ಶ್ಲಾಘ್ಯವಾಗಿರುವುದೂ ಆಗಿರುತ್ತದಷ್ಟೆ? ಆ ವಂಶದವರು ಪತಿಪತ್ನೀ

ಭಾವದಿಂದ ಹೇಗೆ ಅಭಿವೃದ್ಧರಾದರೋ ಆ ಕ್ರಮವನ್ನು ನನಗೆ ಹೇಳಿರಿ. ನೀವು ಸ್ವಾಯಂಭುವ ಮನುಗಳ ಮಕ್ಕಳಾದ ಪ್ರಿಯವ್ರತ ಮತ್ತು ಉತ್ತಾನಪಾದರಾಜರು ಧರ್ಮದಿಂದ ರಾಜ್ಯಪರಿಪಾಲನೆ ಮಾಡಿದರೆಂದೂ, ಅವರ ತಂಗಿಯಾದ ದೇವಹೂತೀದೇವಿಯನ್ನು ಸ್ವಾಯಂಭುವ ಮನುಗಳು ಕರ್ದಮ ಪ್ರಜೇಶ್ವರರಿಗೆ ವಿವಾಹ ಮಾಡಿಕೊಟ್ಟರೆಂದೂ ಹೇಳಿದ್ದಿರಿ. ಆ ಯೋಗೀಶ್ವರರಾದ ಕರ್ದಮ ಪ್ರಜೇಶ್ವರರು ದೇವಹೂತಿಯಲ್ಲಿ ಏನು ಸಂತಾನವನ್ನು ಪಡೆದರೋ ಅದನ್ನು ನಿಮ್ಮ ಶಿಷ್ಯನಾದ ನನಗೆ ಹೇಳಿರಿ ಮತ್ತು ಋಚಿ, ದಕ್ಷ ಎಂಬ ಬ್ರಹ್ಮಪುತ್ರರ ವಂಶಕ್ರಮವನ್ನೂ ನನಗೆ ತಿಳಿಸಿರಿ, ಎಂದನು. ಮೈತ್ರೇಯರು ವಿದುರನ ಅಭಿಃಪ್ರಾಯದಂತೆ ಮೊದಲು ಕರ್ದಮ ಪ್ರಜೇಶ್ವರರ ಸಂತಾನ ಕ್ರಮವನ್ನು ಹೇಳುವವರಾದರು:-

ಎಲೈ ವಿದುರನೆ! ಬ್ರಹ್ಮದೇವರಿಂದ ಪ್ರಜಾಸೃಷ್ಟಿ ಮಾಡೆಂದು ಆಜ್ಞಪ್ತರಾದ ಕರ್ದಮ ಪ್ರಜೇಶ್ವರರು ಸರಸ್ವತೀ ನದೀ ತೀರಕ್ಕೆ ಹೋಗಿ ಅಲ್ಲಿ ಹತ್ತು ಸಹಸ್ರ ವರ್ಷಗಳ ಕಾಲ ಶ್ರೀಪರಮಾತ್ಮನನ್ನು ಧ್ಯಾನಿಸುತ್ತಾ ತಪಸ್ಸು ಮಾಡಿದರು. ನಂತರ ವೈದಿಕ ತಾಂತ್ರಿಕ ಲಕ್ಷಣೋಪಾಯವೆನಿಸುವ ಕ್ರಿಯಾಯೋಗದಿಂದ ಕೂಡಿದ ಸಮಾಧಿಯೋಗದಿಂದ, ಪರಮಾತ್ಮನಲ್ಲಿ ಉತ್ಕೃಷ್ಟವಾದ ಭಕ್ತಿಯನ್ನು ಪರಮಾತ್ಮನ ಸಂದರ್ಶನಾರ್ಥವಾಗಿ ಮಾಡಿದರು. ಇವರ ಭಕ್ತಿಗೆ ಸಕಲ ವೇದೈಕ ವೇದ್ಯನೂ, ಸರ್ವಗುಣ ಸಂಪೂರ್ಣನೂ ಆದ ಪರಮಾತ್ಮನು ಮೆಚ್ಚಿ ಪ್ರತ್ಯಕ್ಷನಾದನು.

ನಿರ್ಮಲವೂ ದೋಷ ರಹಿತವೂ ಆದ ಸೂರ್ಯನಂತೆ ಪ್ರಕಾಶಮಾನನೂ, ಬೆಳದಿಂಗಳಂತೆಯೂ, ಪದ್ಮಪುಷ್ಪ ದಂತೆಯೂ ಆಹ್ಲಾದಕರ ರೂಪನೂ, ಉಜ್ವಲ ಪ್ರಕಾಶದಿಂದ ಕೂಡಿ ಸಹಸ್ರಾರು ಕಪ್ಪಾ ದ ಮುಂಗುರುಳುಗಳಿಂದಲೂ, ಪದ್ಮವರ್ಣವುಳ್ಳ ಕಣ್ಣುಗಳು ಬಾಯಿ, ಇವುಗಳಿಂದ ಮನೋಹರನಾಗಿ, ಪೀತಾಂಬರಧಾರಿಯೂ, ಕಿರೀಟ, ಕುಂಡಲ, ಶಂಖ, ಚಕ್ರ, ಗದಾ ಶೋಭಿತನೂ, ಕೈಯಲ್ಲಿ ಬಿಳೀ ಕಮಲಪುಷ್ಪ ವನ್ನು ಕ್ರೀಡೆಯಿಂದ ತಿರುಗಿಸುತ್ತಿರುವನೂ, ನೋಡುವರ ಮನಸ್ಸನ್ನು ಸಂತೋಷಿಸುವ ಮಂದಹಾಸ ನೋಟವುಳ್ಳವನೂ ಆಗಿದ್ದನು. ಗರುಡನ ಭುಜದ ಮೇಲೆ ಕುಳಿತಿದ್ದನು. ಶ್ರೀವತ್ಸ, ಕೌಸ್ತುಭ ವನಮಾಲೆಗಳಿಂದ ಅತ್ಯಂತ ರಮಣೀಯನಾಗಿ ತನ್ನ ಕಣ್ಣೆದುರಿಗೆ ಕಾಣಿಸುವ ಶ್ರೀಪರಮಾತ್ಮನನ್ನು ಕರ್ದಮ ಪ್ರಜೇಶ್ವರರು ನೋಡಿ, ಭೂಮಿಯ ಮೇಲೆ ಮಲಗಿ ಸಾಷ್ಟಾಂಗ ನಮಸ್ಕಾರಗಳನ್ನು ದೇವರ ಪಾದಕಮಲಗಳಿಗೆ ಮಾಡಿ, ಅತ್ಯಂತ ಉತ್ಸಾಹ ಸಂತೋಷದಿಂದಲೂ, ವಿನಯದಿಂದಲೂ ಎದ್ದು ನಿಂತು ಕೈ ಮುಗಿದುಕೊಂಡು ಈ ರೀತಿಯಾಗಿ, ಗಂಭೀರವಾದ ವಾಕ್ಯಗಳಿಂದ ಪರಮಾತ್ಮನ ಸ್ತೋತ್ರವನ್ನು ಮಾಡಿದರು:-

## ಕರ್ದಮರು ಮಾಡಿದ ಭಗವತ್‍ಸ್ತುತಿ

ಸತ್ಯವಾದ ವೇದಗಳಿಂದ ಹೊಗಳಲ್ಪಟ್ಟ ಪೂರ್ಣ ಜ್ಞಾನಬಲ ಸಮುದ್ರನಾದ ಎಲೈ ಸ್ವಾಮಿಯೆ! ನಿನ್ನ ದರ್ಶನವು ಯಾವ ಯೋಗಿಗಳಿಗೂ ಬಹುಕಾಲ ಅಪೇಕ್ಷಿಸಿದರೂ ದುರ್ಲಭವೋ, ಅಂತಹ ದರ್ಶನವು ನನಗೆ ನಿನ್ನ ಕಾರುಣ್ಯ ಬಲದಿಂದ ಅಲ್ಪ ಕಾಲದಲ್ಲಿಯೇ ಲಭಿಸಿ, ನನ್ನ ತೀರ್ಥಯಾತ್ರಾದಿ ಪಾದಗಳಿಂದಾಚರಿಸಿದ ಕರ್ಮಕ್ಕೂ, ನಿನ್ನ ಮೂರ್ತಿಧ್ಯಾನಾದಿಗಳನ್ನು ಮಾಡಿದ ಕಣ್ಣಿನ ಕರ್ಮಕ್ಕೂ, ವೇದಾದಿ ಶ್ರವಣ ರೂಪ ಕಿವಿಯ ಕರ್ಮಕ್ಕೂ ಈಗ ಪೂರ್ಣಫಲವು ಪ್ರಾಪ್ತವಾಯಿತು. ಅಲ್ಪ ಜ್ಞಾನ ಬಲ ವುಳ್ಳ ನಮ್ಮಿಂದ ಬಹು ಪ್ರಯತ್ನ ಮಾಡಿದರೂ ನಿನ್ನ ದರ್ಶನ ಮಾಡಲು ಸಾಧ್ಯವಲ್ಲ. ಭಕ್ತರಲ್ಲಿ ನಿನ್ನ ಕೃಪೆಯು ಅಹೋ! ಆಶ್ಚರ್ಯವಾದದ್ದು. ಎಲೈ ಪೂರ್ಣೈಶ್ವರ್ಯಾತ್ಮನೆ! ನಿನ್ನ ಮಾಯಾಪಾಶದಿಂದ ನಷ್ಟವಾದ ಜ್ಞಾನವುಳ್ಳವರು, ಸಂಸಾರ ಸಾಗರವನ್ನು ದಾಟುವುದಕ್ಕೆ ನಾವೆಯಂತಿರುವ ನಿನ್ನ ಪಾದ ಕಮಲಗಳನ್ನು ಆಶ್ರಯಿಸಿ, ಅರ್ಚಿಸಿ, ಮೆಚ್ಚಿಸಿ, ಕೇವಲ ನರಕಗಳಲ್ಲೂ ಪ್ರಯತ್ನವಿಲ್ಲದೇ ತಾನಾಗಿಯೇ ಲಭಿಸುವ ಕಾಮಾಭಿಲಾಷೆಯನ್ನೂ, ರಾಜ್ಯಾದ್ಯೈಶ್ವರ್ಯಗಳನ್ನೂ ಅಪೇಕ್ಷಿಸುತ್ತಾರೆ. ಇಂತಹ ಕಾಮೋಪಾಸಕರಲ್ಲೊಬ್ಬನಾದ ನಾನೂ, ಸಮಸ್ತ ಕಾಮಿತಾರ್ಥಗಳನ್ನೂ ಸಲ್ಲಿಸಿಕೊಡುವ ನಿನ್ನ ಪಾದಕಮಲಗಳೆಂಬ ಕಲ್ಪವೃಕ್ಷದ ಸಮೀಪಕ್ಕೆ ಬಂದು, ಇತರ ಮೋಕ್ಷ, ಜ್ಞಾನ, ಭಕ್ತಿ, ವಿರಕ್ತ್ಯಾದಿ ಮಹಾ ಪುರುಷಾರ್ಥಗಳನ್ನು ಉಪೇಕ್ಷಿಸಿ, ಕಾಮೋಪಭೋಗ ರೂಪವಾದ ವರವನ್ನೇ ಅಪೇಕ್ಷಿಸಿರುತ್ತೇನೆ. ಏಕೆಂದರೆ ಉತ್ಕೃಷ್ಟವಾದ ಕಾಮೋಪಭೋಗಕ್ಕೆ ಸಾಧನಗಳಾದ ಭಾರ್ಯೆಗಾಗಿ ನಿನ್ನನ್ನು ಕುರಿತು ತಪಸ್ಸು ಮಾಡಿರುತ್ತೇನೆ.

ಎಲೈ ಅಘಟಿತಘಟನಾ ಸಮರ್ಥನಾದ ಪರಮಾತ್ಮನೆ! ನೀನು ಕಾಮೋಪಭೋಗರೂಪ ಸಂಸಾರಾಪೇಕ್ಷೆಯು ಅಲ್ಪವಾದದ್ದೆಂದೂ, ಅಪೇಕ್ಷಣೀಯವಲ್ಲವೆಂದೂ ತಿಳಿದಿದ್ದರೂ, ನಮ್ಮಂತಹವರನ್ನು ನಿನ್ನ ಇಚ್ಛಾರೂಪಗಳಾದ ಬ್ರಹ್ಮದೇವರ ವಾಕ್ಯಗಳಿಂದ ಪ್ರಜಾಸೃಷ್ಟಿಮಾಡೆಂದು ಆಜ್ಞಾಪಿಸಿ, ಆ ಆಜ್ಞಾಪಾಶದಿಂದ ಕಟ್ಟಿಹಾಕಿರುತ್ತೀಯೆ. ಆದುದರಿಂದ ನಿನ್ನನುಗ್ರಹದಿಂದ ಅನುರೂಪಳಾದ ಭಾರ್ಯೆಯಿಂದ ಸಹಿತರಾಗಿ, ಪ್ರಜಾಸೃಷ್ಟಿಯನ್ನು ನಿನ್ನ ಪೂಜಾರೂಪವಾಗಿ ಮಾಡುವೆನು. ಲೋಕದಲ್ಲಿ ಜಡರೂಪವಾದ ಈ ದೇಹಪ್ರಾಪ್ತಿಯನ್ನು ಹೊಂದಿದ ಕೆಲವುರು ಇಂದ್ರಿಯ ನಿಗ್ರಹಗಳನ್ನು ಮಾಡಿ, ನಿನ್ನ ಪಾದಾರವಿಂದಗಳ ಸೇವೆ, ನಿನ್ನ ಸತ್ಕಥಾಮೃತವನ್ನು ಶ್ರವಣರೂಪದಿಂದ ಪಾನಮಾಡಿದವರಾಗಿ ಜನನ ಮರಣಾಖ್ಯ ಕ್ಲೇಶವನ್ನು ತಪ್ಪಿಸಿಕೊಂಡು ಮುಕ್ತರಾಗುತ್ತಾರೆ. ಎಲೈ ಸ್ವಾಮಿಯೇ ಜರಾದಿ ದೋಷಗಳಿಲ್ಲದ ಶಾಶ್ವತವಾದ ನಿನ್ನ ಕಾಲಚಕ್ರದ ತಿರುಗುವಿಕೆಯಿಂದ ನಮ್ಮ ಆಯಸ್ಸು ಅಪಹೃತವಾಗುತ್ತದೆ.

ನಿನ್ನ ಸುದರ್ಶನಚಕ್ರಕ್ಕೆ ಸದೃಶರಾದ ಈ ಕಾಲಚಕ್ರಕ್ಕೆ, ಅಧಿಕಮಾಸವೂ ಸೇರಿ ಹದಿಮೂರು ಮಾಸಗಳೇ ದಳಗಳು. ಮುನ್ನೂರರವತ್ತು ದಿನಗಳ ಹಗಲುರಾತ್ರೆಗಳೆ ಪರ್ವಗಳು. ಷಡೃತುಗಳೇ ನೇಮಿಗಳು. ಈ ನೇಮಿಗಳು ಅಣು, ದ್ವ್ಯಣು ಮುಂತಾದ ಅನಂತಛಿದ್ರಗಳಿಂದ ಕೂಡಿದ್ದು, ಚಾತುರ್ಮಾಸತ್ರಯಗಳೇ ನಾಭಿಯು. ಇಂತಹ ನಿನ್ನ ಕಾಲಚಕ್ರವು ನಿರಂತರ ಕ್ರಮವಾಗಿ ಸುತ್ತುತ್ತಾ, ಈ ಬ್ರಹ್ಮಾಂಡವನ್ನೇ ಸೃಷ್ಟಿಸಿ, ಪಾಲಿಸಿ, ನಾಶಮಾಡುತ್ತಾ, ಪುನಃ ಉತ್ಪತ್ತಿಮಾಡುತ್ತದೆ. ಈ ರೀತಿಯಾಗಿ ಕಾಲರೂಪನಾದ ನೀನು ಜೇಡರಹುಳದಂತೆ, ನಿನ್ನಧೀನವಾದ ಪ್ರಕೃತಿಯಿಂದ ಜಗತ್ಸೃಷ್ಟ್ಯಾದಿಗಳನ್ನು ಮಾಡಿ ಪುನಃ ಲಯ ಮಾಡುತ್ತಿರುತ್ತೀಯೆ. ಇದರಿಂದ ನಮ್ಮಂತಹವರ ಸಂಸಾರ ಚಕ್ರವೂ ತಿರುಗುತ್ತದೆ. ಇಂತಹ ಸಂಸಾರಚಕ್ರದಲ್ಲಿ ಪ್ರವೇಶಿಸುವ ನಾನು, ಸಂಸಾರವನ್ನು ನಿನ್ನ ಪೂಜಾರೂಪದಿಂದ ಅನುಭವಿಸಿ, ಕಾಲಾಂತರದಲ್ಲಿ ನಿಷ್ಕಾಮಾಚರಣೆಯಿಂದ ನಿನ್ನ ಪಾದಾರವಿಂದಗಳ ಪ್ರಾಪ್ತಿಯನ್ನೂ ಹೊಂದುತ್ತೇನೆ.

ನಿನ್ನಿಂದ ಸೃಷ್ಟವಾದ ಈ ಬ್ರಹ್ಮಾಂಡವೂ, ಭೂತಸೂಕ್ಷ್ಮರಾದ ಜೀವರೂ, ಜಡಗಳೂ ನಿನ್ನಿಂದ ಅತ್ಯಂತ ಬೇರೆಯಾದವುಗಳು. ನೀನು ನಿತ್ಯಜ್ಞಾನಾನಂದಮಯದೇಹನು. ಇಂತಹ ಜ್ಞಾನವುಳ್ಳವರು ನಿನ್ನಲ್ಲಿ ಭಕ್ತಿಮಾಡಿ ನಿನ್ನನುಗ್ರಹ ಪಡೆದು ಮುಕ್ತರಾಗುವರು. ನೀನೇ ಬ್ರಹ್ಮಾಂಡವಾಗಿ ಪರಿಣಾಮವಾಗಿರುತ್ತೀ ಎಂದು ಭಾವಿಸುವವರು ಮಿಥ್ಯಾಜ್ಞಾನಿಗಳು ದುಃಖಸ್ವರೂಪರು. ನೀನು ಈ ತುಲಸೀ ವನಮಾಲಾದಿಗಳಿಂದ ಅಲಂಕೃತವಾದ ನಿನ್ನ ಈ ದಿವ್ಯರೂಪವನ್ನು ನನಗೆ ಅನುಗ್ರಹ ಮಾಡುವುದಕ್ಕಾಗಿ ಸ್ವೀಕರಿಸಿರುತ್ತೀಯೆ. ಇಂತಹ ಆದರದಿಂದ ಅನುಗ್ರಹೋನ್ಮುಖನಾದ ನಿನಗೆ ನಾನು ಏನೂ ಪ್ರತ್ಯುಪಕಾರಮಾಡಲು ಶಕ್ತನಲ್ಲ. ಸತ್ಯಜ್ಞಾನಾನಂದ ರೂಪನಾದ ನೀನು ಮಾಡುವ ಮಹತ್ತತ್ವ, ಬ್ರಹ್ಮಾಂಡಾದಿ ಸೃಷ್ಟಿಗಳು ಅದ್ಭುತಾಶ್ಚರ್ಯಕರಗಳಾದವು. ಅವು ಅಲ್ಲದೆ ನೀನು ದೇವ, ದೈತ್ಯ, ಮಾನುಷ ಮೃಗಾದಿ ದೇಹಗಳನ್ನೂ ಅಧಿಷ್ಠೀಕರಿಸಿಕೊಂಡು ಅವಾಚಿತರ ಸೃಷ್ಟಿಗಳನ್ನು ಮಾಡಿಸುತ್ತೀಯೆ. ಇದರಿಂದ ನಿನ್ನ ಸೃಷ್ಟಿಕ್ರಮವು ಅಚ್ಛಿದ್ರವಾಗಿ ನೆರವೇರಲೆಂಬುವುದೇ ನಿನಗೆ ಇಷ್ಟವಾದದ್ದು. ಆದುದರಿಂದ ನಾನು ನಿನ್ನ ಸೃಷ್ಟಿಯೆಂಬ ಸೂತ್ರವನ್ನು ಅವಲಂಬಿಸಿ, ಅದನ್ನೇ ಸಂಸಾರರೂಪದಿಂದ ಮುಂದುವರಿಸುತ್ತೇನೆಯಾದ ಕಾರಣ, ಅದು ನಿನಗೆ ಪ್ರೀತ್ಯಾಸ್ಪದವೇ ಆಗುತ್ತದೆ. ಇದೇ ನಿನಗೆ ನನ್ನ ಸೇವೆಯು, ಎಂದು ಹೇಳಿ ಕರ್ದಮ ಪ್ರಜೇಶ್ವರರು ಪರಮಾತ್ಮನಿಗೆ ಪುನಃ ನಮಸ್ಕರಿಸಿದರು.

## ಕರ್ದಮರಿಗೆ ಭಗವಂತನ ಆದೇಶ

ಗರುಡಾರೂಢನಾದ ಸ್ವಾಮಿಯು ನಗುತ್ತಾ ಕರ್ದಮರು ಹೇಳಿದ ಈ ಮಾತುಗಳನ್ನು ಕೇಳಿ, ಪ್ರೀತಿಯಿಂದ ಕೂಡಿದ ಕಟಾಕ್ಷದಿಂದ ಕರ್ದಮರನ್ನು ನೋಡುತ್ತಾ ಈ ರೀತಿ ಹೇಳಿದನು:- ಎಲೈ

ಕರ್ದಮಋಷಿಯೆ! ನೀನು ಈಗ ನಿವೇದಿಸಿದ ನಿನ್ನ ಚಿತ್ತವೃತ್ತಿಯಿಂದಲೂ, ಅದಕ್ಕೆ ಪೂರ್ವದಲ್ಲೇ ನೀನು ಯಾವ ಉದ್ದೇಶ್ಯದಿಂದ ಈ ತಪಸ್ಸು ಮೊದಲಾದ ನಿಯಮಗಳನ್ನು ಕೈಕೊಂಡೆ ಎಂಬುವುದನ್ನೂ ನಾನು ತಿಳಿದಿದ್ದೇನೆ. ಪ್ರಜಾಧ್ಯಕ್ಷನಾದ ಬ್ರಹ್ಮನು ನನ್ನ ಪೂಜಾರೂಪವಾಗಿ ಸೃಷ್ಟಿಮಾಡುತ್ತಾ, ನಿನಗೆ ಏನು ಪ್ರಜಾಸೃಷ್ಟಿಮಾಡೆಂದು ಹೇಳಿರುತ್ತಾನೋ ಅದು ಎಂದಿಗೂ ಸುಳ್ಳಾಗಲಾರದು. ನಿನ್ನಂತಹ ಮಕ್ಕಳು ತಂದೆಯ ವಾಕ್ಯವನ್ನು ಮೀರತಕ್ಕವರಲ್ಲ ಮತ್ತು ನನ್ನ ಭಕ್ತರಾಗಿಯೂ ಇರುತ್ತೀರಿ. ಆದುದರಿಂದ ನಿಮ್ಮ ಇಷ್ಟಾರ್ಥವು ಈಗಲೇ ನೆರವೇರುತ್ತದೆ.

ಈ ಸಪ್ತ ಸಮುದ್ರ ಪರಿಯಂತರವಾದ ಸಮಸ್ತ ಭೂಮಂಡಲವನ್ನೂ ಧರ್ಮದಿಂದ ಆಳುತ್ತಿರುವ, ಮಂಗಳರೂಪನಾದ ಸ್ವಾಯಂಭುವ ಮನುವು, ಪತ್ನೀಸಮೇತನಾಗಿ ತನ್ನ ಮಗಳಾದ, ಸದ್ಗುಣ, ರೂಪ, ಯೌವ್ವನ ಸಂಪನ್ನಳಾದ ದೇವಹೂತಿದೇವಿಯನ್ನು ಕರೆದುಕೊಂಡು ಶೀಘ್ರದಲ್ಲಿಯೇ ಇಲ್ಲಿಗೆ ಬಂದು, ದೇವಹೂತಿಯನ್ನು ನಿನಗೆ ವಿವಾಹಮಾಡಿಕೊಡುತ್ತಾನೆ. ನೀನು ಆಕೆಯನ್ನು ವಿವಾಹಮಾಡಿಕೊಂಡು ಸಕಲ ಕಾಮೋಪಭೋಗಗಳನ್ನೂ, ನಿನ್ನ ಯೋಗಶಕ್ತಿಗನುಸಾರವಾಗಿ ಅನೇಕ ಪರಿವತ್ಸರಗಳ ಕಾಲಾವಧಿ ಅನುಭವಿಸುವನಾಗುತ್ತೀಯೆ. ನಿನ್ನ ಪತ್ನಿಯು ನಿನಗೆ ಅನುಕೂಲಳಾಗಿದ್ದು ಸಂತೋಷಪಡಿಸುವಳಾಗಿ, ನಿನ್ನಿಂದ ಕೊನೆಗೆ ಒಂಭತ್ತು ಗರ್ಭಗಳನ್ನು ಹೊಂದಿ, ಒಂಭತ್ತು ಜನ ಕನ್ಯೆಯರನ್ನು ಪಡೆಯುವಳು. ಆ ನಿನ್ನ ಪುತ್ರಿಯರನ್ನು ಮರೀಚ್ಯಾದಿ ಋಷಿಗಳು ಲಗ್ನವಾಗುವರು. ನಿನ್ನ ವಂಶವು ಚೆನ್ನಾಗಿ ಬೆಳೆಯುವುದು. ನೀನು ನನ್ನಲ್ಲೇ ಮನಸ್ಸುಳ್ಳವನಾಗಿ ನಿನಗೆ ಚೆನ್ನಾಗಿ ಭಕ್ತ್ಯಾದಿಗಳು ಅಭಿವೃದ್ಧಿಯಾಗುವುದು. ಆಗ ನಾನೇ ನನ್ನ ಅಂಶದಿಂದ ನಿನ್ನ ಭಾರ್ಯೆಯಾದ ದೇವಹೂತಿದೇವಿಯ ಗರ್ಭದಲ್ಲಿ ಅವತರಿಸಿ ತತ್ವಸಂಹಿತೆಯನ್ನು ನಿರ್ಮಾಣಮಾಡಿ ದೇವಹೂತಿದೇವಿಗೆ ಬೋಧಿಸುವೆನು ಎಂದು ಹೇಳಿ ಯೋಗಮಾಯಾ ಶಕ್ತಿಯಲ್ಲಿ ಅಗಮ್ಯನಾದ ಪರಮಾತ್ಮನು, ಗರುಡನ ರೆಕ್ಕೆಗಳ ಬಡಿತವೆಂಬ ವೇಗದಿಂದುಂಟಾದ ಸಾಮಗಾನವನ್ನು ಕೇಳುತ್ತಾ ತನ್ನ ಧಾಮವನ್ನು ಕುರಿತು ಹೊರಟುಹೋದನು.

ಕರ್ದಮರು ಸರಸ್ವತೀ ತೀರದಲ್ಲಿ ಬಿಂದು ಸರೋವರದ ಸಮೀಪದಲ್ಲಿ ಆಶ್ರಮ ಮಾಡಿಕೊಂಡು, ಪರಮಾತ್ಮನು ಹೇಳಿದ ಕಾಲವನ್ನು ನಿರೀಕ್ಷಿಸುತ್ತಾ ಇದ್ದರು. ಯಾವ ದಿನ ಪರಮಾತ್ಮನು ಪ್ರತ್ಯಕ್ಷನಾಗಿ ಕರ್ದಮರಿಗೆ ಹೇಳಿದ್ದನೋ ಆ ದಿನವೇ ಸ್ವಾಯಂಭುವ ಮನುವು ಶತರೂಪಾದೇವಿ ಎಂಬ ಪತ್ನಿಯಿಂದಲೂ, ದೇವಹೂತಿದೇವಿ ಎಂಬ ಮಗಳಿಂದಲೂ ಕೂಡಿದವನಾಗಿ ಭಂಗಾರ ಮಯವಾದ ಮೇನೆ, ಪಲ್ಲಕ್ಕಿಗಳಲ್ಲಿ ಕುಳಿತು ಭೂಸಂಚಾರ ಮಾಡುತ್ತಾ ಕರ್ದಮಾಶ್ರಮವನ್ನು ಪ್ರವೇಶಿಸಿದನು.

## ಕರ್ದಮರ ಆಶ್ರಮಕ್ಕೆ ಸ್ವಾಯಂಭುವ ಮನುಗಳ ಆಗಮನ

ಕರ್ದಮ ಋಷಿಗಳು ಸರಸ್ವತೀ ನದೀ ತೀರದಲ್ಲಿನ ಒಂದು ಸರೋವರದ ಸಮೀಪದಲ್ಲಿ ತಪಸ್ಸು ಮಾಡುತ್ತಿದ್ದಾಗ, ಅವರ ಧ್ಯಾನಯುಕ್ತವಾದ ಭಾವನೆಯನ್ನು ತಿಳಿದ ಶ್ರೀಪರಮಾತ್ಮನ ಸಂತೋಷಾಶ್ರುಬಿಂದುವು ಒಂದು ಆ ಜಲದಲ್ಲಿ ಬಿದ್ದಿದ್ದರಿಂದ, ಆ ಸರೋವರಕ್ಕೆ ಬಿಂದು ಸರೋವರವೆಂಬ ಹೆಸರಾಯಿತು. ಈ ಬಿಂದು ಸರೋವರವನ್ನು ಸರಸ್ವತೀನದಿಯು ಪ್ರವೇಶಿಸಿ ತನ್ನ ಅಮೃತಸದೃಶವಾದ ವಿಮಲೋದಕದಿಂದ ತುಂಬಿ ತುಳುಕಾಡಿಸುತ್ತಿತ್ತು. ಆ ಪುಣ್ಯಜಲವನ್ನು ತೀರ್ಥಸ್ನಾನಕ್ಕಾಗಿ ಮಹರ್ಷಿಗಳು ಸೇವಿಸುತ್ತಿದ್ದರು. ಪುಣ್ಯವೃಕ್ಷಗಳಾದ ಅಶ್ವತ್ಥಾದಿ ಮಹಾವೃಕ್ಷಗಳಿಂದ ಕೂಡಿ, ದಿವ್ಯ ಮೃಗಪಕ್ಷಿಗಳ ಮನೋಹರವಾದ ಕೂಗುಗಳಿಂದ ಆ ಆಶ್ರಮವು ತುಂಬಿತ್ತು. ಆರು ಋತುಗಳ ಫಲಪುಷ್ಪ ಗಳಿಂದ ಭರಿತವಾಗಿ ವೃಕ್ಷಗಳು ಶೋಭಿಸುತ್ತಿದ್ದವು. ಮತ್ತವಾದ ಪಕ್ಷಿ, ಭ್ರಮರಗಳು ನಾದಮಾಡುತ್ತಿದ್ದವು. ಸಂತೋಷದಿಂದ ನವಿಲುಗಳು ನರ್ತನಮಾಡುತ್ತಿದ್ದವು. ಕದಂಬ, ಚಂಪಕ, ಅಶೋಕ, ಕರಂಜ, ಬಕುಲ, ಕುಂದ, ಮಂದಾರ ಮುಂತಾದ ಪುಷ್ಪ ವಾಟಿಕೆಗಳಿಂದ ಆಶ್ರಮವು ಅಲಂಕೃತವಾಗಿತ್ತು. ಸಾರಸ, ಚಕ್ರವಾಕ, ಚಕೋರ ಪಕ್ಷಿಗಳು ಇಂಪಾಗಿ ಕೂಗುತ್ತಿದ್ದವು. ಜಿಂಕೆ, ಸಾರಂಗ, ವರಾಹ, ಕಾಡು ನಾಯಿ, ಕಾಡು ದನಗಳು, ಆನೆಗಳು, ಗೋವಿನಂತೆ ಬಾಲವುಳ್ಳ ಕಪಿಗಳೂ, ಸಿಂಗಲೀಕ, ಮರ್ಕಟಾದಿಗಳೂ, ಮುಂಗುಸಿಗಳೂ, ಗುಂಪು ಗುಂಪಾಗಿ ಸಂಚರಿಸುತ್ತಿದ್ದವು. ಇಂತಹ ಆಶ್ರಮದಲ್ಲಿ ಬಿಂದು ಸರೋವರದ ಸಮೀಪದಲ್ಲಿ ಅಗ್ನಿಹೋತ್ರಾದಿಗಳನ್ನು ಮುಗಿಸಿಕೊಂಡು, ಪ್ರಸನ್ನವದನರಾಗಿ ಕುಳಿತಿರುವ ಕರ್ದಮರನ್ನು, ಆದಿರಾಜನಾದ ಸ್ವಾಯಂಭುವ ಮನುವು ಕಂಡನು.

ಕರ್ದಮರು ಬಹುಕಾಲ ತಪಸ್ಸಿನ ಪ್ರಭಾವದಿಂದ ಮಿಂಚಿನಂತೆ ಪ್ರಕಾಶಮಾನರಾಗಿಯೂ, ಪರಮಾತ್ಮನ ಕೃಪಾದೃಷ್ಟಿಯಿಂದ ಆಗತಾನೇ ನೋಡಲ್ಪಟ್ಟು ಕೋಮಲವಾದ ಶರೀರವುಳ್ಳವರಾಗಿಯೂ, ಪರಮಾತ್ಮನು ಆಡಿದ ಅಮೃತವಾಕ್ಯಗಳನ್ನು ಕೇಳಿ ತೃಪ್ತರಾಗಿ ಪದ್ಮದಳದಂತೆ ಕಣ್ಣುಗಳುಳ್ಳವರಾಗಿಯೂ, ಜಟಾ, ಚೀರವಸ್ತ್ರಗಳನ್ನು ಚರಿಸಿದವರಾಗಿಯೂ ಇದ್ದರು. ಬರುತ್ತಿರುವ ಸ್ವಾಯಂಭುವ ಮನುಗಳನ್ನು ಕರ್ದಮರು ಕಂಡು ಬೇಗನೇ ಆಶ್ರಮವನ್ನು ಗುಡಿಸಿ ಶುಭ್ರವಾಗಿ ಮಾಡಿ, ಆಸನಗಳನ್ನು ಹಾಕಿ, ಅಲ್ಲಿಗೆ ಬಂದು ನಮಸ್ಕರಿಸುತ್ತಿರುವ ಸ್ವಾಯಂಭುವ ಮನುಗಳಿಗೆ ಪ್ರತಿ ನಮಸ್ಕಾರ, ಆದರಗಳನ್ನು ಮಾಡಿ ಪೂಜಿಸಿ, ಅವರು ಆಸನದಲ್ಲಿ ಕುಳಿತ ನಂತರ, ಪರಮಾತ್ಮನು ಹೇಳಿದ್ದ ಮಾತುಗಳನ್ನು ನೆನೆದುಕೊಂಡು, ಮೃದುವಾಕ್ಯಗಳಿಂದ ಈ ರೀತಿ ಹೇಳಿದರು:- ಎಲೈ ಪರಮಾತ್ಮನ ಸಾನ್ನಿಧ್ಯ ವಿಶೇಷದಿಂದ ಕೂಡಿ ದೇವತೆಗಳಂತಿರುವ ಕಾರಣ ದಿವ್ಯಶರೀರೋಪೇತರಾದ ಸ್ವಾಯಂಭುವ ಮನುಗಳೇ! ನೀವು

ಪರಮಾತ್ಮನ ಶಕ್ತಿಯನ್ನು ಧರಿಸಿ ನಮ್ಮಂತಹ ಸಾತ್ವಿಕರನ್ನು ಸಂರಕ್ಷಿಸುವುದಕ್ಕಾಗಿಯೂ, ದುಷ್ಟರನ್ನು ಸಂಹರಿಸುವುದಕ್ಕಾಗಿಯೂ ಭೂಸಂಚಾರಮಾಡುವುದು ನಿಶ್ಚಯವಾಗಿರುತ್ತದೆ. ನಿಮ್ಮಲ್ಲಿ ಸೂರ್ಯಚಂದ್ರಾಗ್ನಿ ಇಂದ್ರವಾಯುಗಳೂ, ಯಮಧರ್ಮ ಮತ್ತು ಪ್ರಚೇತಸರ ರೂಪಾವೇಶಗಳು ಇರುತ್ತವೆಯಾಗಿ, ಇವರ ತೇಜಸ್ಸುಗಳಿಂದ ಪ್ರಕಾಶಮಾನರಾದ ನಿಮಗೆ ನಮಸ್ಕಾರಗಳು. ನೀವು ದಿವ್ಯರಥಾರೂಢರಾಗಿ ಧನುಷ್ಟಂಕಾರಮಾಡುತ್ತಾ, ಸೈನ್ಯಸಹಿತರಾಗಿ ಭೂಮಿಯನ್ನು ನಡುಗಿಸುವಂತಹ ಪರಾಕ್ರಮಶಾಲಿಗಳಾಗಿ ಸಂಚರಿಸದೇ ಹೋದರೆ, ಕಳ್ಳರು ಪ್ರಬಲರಾಗಿ ವರ್ಣಾಶ್ರಮ ಧರ್ಮಗಳು ನಾಶವಾಗುತ್ತವೆ. ಭಗವಂತನಿಂದ ರಚಿತವಾದ ಸುಖ ಶಾಂತಿಗಳೂ, ಸಂಪತ್ತೂ ಕಳ್ಳರಿಂದ ಅಪಹರಿಸಲ್ಪಟ್ಟು, ನೀವು ಸಂಚರಿಸದೇ ಅವರನ್ನು ನಿಗ್ರಹಿಸದೇ ಇದ್ದಲ್ಲಿ, ಎಲ್ಲವೂ ನಾಶವನ್ನೂ ಹೊಂದುತ್ತವೆ. ಆದುದರಿಂದ ನಿಮ್ಮಂತಹ ರಾಜರು ಲೋಕಕ್ಷೇಮಕ್ಕಾಗಿಯೇ ಸಂಚರಿಸುತ್ತೀರೆಂದು ತಿಳಿದಿದ್ದರೂ, ನಾನು ನಿಮ್ಮನ್ನು ಏನು ಕಾರ್ಯಕ್ಕಾಗಿ ಇಲ್ಲಿಗೆ ಬಂದಿರುವಿರಿ, ಎಂಬುದನ್ನು ಸ್ನೇಹ, ಉದಾರ ಭಾವಗಳಿಂದ ಮರೆಮಾಚದೇ ನನಗೆ ಹೇಳಬೇಕೆಂದು ಪ್ರಾರ್ಥಿಸುತ್ತೇನೆ, ಎಂದರು.

**ಇತಿ ಶ್ರೀಮದ್ಭಾಗವತ ತೃತಿಯಸ್ಕಂಧದ ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು.**

**ಶ್ರೀಕೃಷ್ಣಾರ್ಪಣಮಸ್ತು**

## अथ त्रयोविंशोऽध्यायः

**मैत्रेय उवाच**

एवमाविष्कृताशेषगुणकर्मोदयं मुनिम् ।
सव्रीड इव तं सम्रा उपारतमुवाच ह ॥ १ ॥

मनुरुवाचब्रह्मासृजत् स्वमुखतो युष्मानस्मत्परीप्सया ।
छन्दोमयांस्तपोविद्यायोगयुक्तानलम्पटान् ॥ २ ॥

तत्त्राणायासृजच्चास्मान् दोःसहस्रात् सहस्रपात् ।
हृदयं तस्य हि ब्रह्म क्षत्रमङ्गं प्रचक्षते ॥ ३ ॥

अतो ह्यन्योन्यमात्मानं ब्रह्म क्षत्रं च रक्षतः ।
रक्षत्यस्मान् ह्ययं देवः सदा सदसदात्मकः ॥ ४ ॥

तव सन्दर्शनादेव च्छिन्ना मे संशया हृदः ।

यत् स्वयं भगवान् प्रीत्या धर्ममाह रिरक्षिषोः ॥ ५ ॥

दिष्ट्या मे भगवान् दृष्टो दुर्दर्शो योऽकृतात्मनाम् ।
दिष्ट्या पादरजः स्पृष्टं शीर्ष्णा ये भवतः शिवम् ॥ ६ ॥

दिष्ट्या त्वयानुशिष्टोऽहं कृतश्चानुग्रहो महान् ।
अपावृत्तैः कर्णरन्ध्रैर्जुष्टा दिष्ट्योशतीर्गिरः ॥ ७ ॥

स भवान् दुहितुः स्नेहपरिक्लिष्टात्मनो मम ।
श्रोतुमर्हसि दीनस्य श्रावितं कृपया मुने ॥ ८ ॥

प्रियव्रतोत्तानपदोः स्वसेयं दुहिता मम ।
अन्विच्छन्ती पतिं युक्तं वयःशीलगुणादिभिः ॥ ९ ॥

यदा तु भवतः शीलश्रुतरूपवयोगुणान् ।
अशृणोन्नारदात् सैषा त्वय्यासीत् कृतनिश्चया ॥ १० ॥

तत् प्रतीच्छ द्विजाग्र्येमां श्रद्धयोपहृतां मया ।
सर्वात्मनाऽनुरूपां ते गृहमेधेषु कर्मसु ॥ ११ ॥

उद्यतस्य हि कामस्य प्रतिवादो न शस्यते ।
अपि निर्मुक्तसङ्गस्य कामरक्तस्य किं पुनः ॥ १२ ॥

य उद्यतमनादृत्य कीनाशमभियाचते ।
क्षीयते तद् यशः स्फीतं मानश्चावज्ञया हतः ॥ १३ ॥

अहं त्वाशृणवं विद्वन्नुद्वाहार्थं समुद्यतम् ।
अतस्त्वमुपकुर्वाणः प्रत्ता प्रतिगृहाण मे ॥ १४ ॥

ऋषिरुवाचबाढमुद्वोढुकामोऽहमप्रमत्ता तवात्मजा ।
आवयोरनुरूपोऽसावाद्यो वैवाहिको विधिः ॥ १५ ॥

कामः स भूयान्नरदेव तेऽस्याः पुत्र्याः समाम्नायविधौ प्रतीतः ।
क एव ते तनयां नाद्रियेत स्वयैव कान्त्या क्षिपतीमिव श्रियम् ॥ १६ ॥

यां हर्म्यपृष्ठे क्वणदङ्घ्रिशोभां विक्रीडतीं कन्दुकविह्वलाक्षीम् ।

विश्वावसुर्न्यपतत् स्वाद् विमानाद्  विलोक्य संमोहविमूढचेताः ॥ १७ ॥

तां प्रार्थयन्तीं ललनाललामामसेवितश्रीचरणैरदृष्टाम् ।
सुतां मनोरुच्चपदः स्वसारं को नानुमन्येत बुधोऽभिजातः ॥ १८ ॥

अतो भजिष्ये समयेन साध्वीं यावत् तेजो बिभृयादात्मनो मे ।
अतो धर्मान् पारमहंस्यमुख्यान् शुक्लोपदिष्टान् बहुमन्येऽविहिंस्रान् ॥ १९ ॥

यतोऽभवद् विश्वमिदं विचित्रं संस्थाप्यते यत्र च वावतिष्ठते ।
प्रजापतीनां पतिरेष मह्यं परं प्रमाणं भगवाननन्तः ॥ २० ॥

**मैत्रेय उवाच**

स उग्रधन्वन्नियदेवाबभाष आसीच्च तूष्णीमरविन्दनाभम् ।
धियोपगृह्णन् स्मितशोभितेन मुखेन चेतो लुलुभे देवहूत्याः ॥ २१ ॥

सोऽनुज्ञात्वा व्यवसितं महिष्या दुहितुः स्फुटम् ।
तस्मै गुणगणाढ्याय ददौ तुल्यां प्रहर्षितः ॥ २२ ॥

शतरूपा महाराज्ञी पारिबर्हान् महाधनान् ।
दम्पत्योः पर्यदात् प्रीत्या गृहवासःपरिच्छदान् ॥ २३ ॥

प्रत्वा दुहितरं सम्रा सदृक्षाय गतव्यथः ।
उपगुह्य च बाहुभ्यामौत्कण्ठ्योन्मथिताशयः ॥ २४ ॥

अशक्नुवंस्तद्विरहं मुञ्चन् बाष्पकलां मुहुः ।
आसिञ्चन्नम्ब वत्सेति नेत्रोदैर्दुहितुः शिखाः ॥ २५ ॥

आमन्त्र्य तं मुनिवरमनुज्ञातः सहानुगः ।
प्रतस्थे रथमास्थाय सभार्यः स्वपुरं नृपः ॥ २६ ॥

उभयोरृषिकुल्यायाः सरस्वत्याः सरोधसोः ।
ऋषीणामुपशान्तानां पश्यन्नाश्रमसम्पदः ॥ २७ ॥

तमायान्तमभिप्रेत्य ब्रह्मावर्तं प्रजाः पतिम् ।
गीतसंस्तुतिवादित्रैः प्रत्युदीयुः प्रहर्षिताः ॥ २८ ॥

बर्हिष्मती नाम पुरी सर्वसम्पत्समन्विता ।
न्यपतन् यत्र रोमाणि यज्ञस्याङ्गं विधुन्वतः ॥ २९ ॥

कुशकाशास्त एवासञ्छश्वद्धरितवर्चसः ।
ऋषयो यैः पराभाव्य यज्ञघ्नान् यज्ञमीजिरे ॥ ३० ॥

कुशकाशमयं बर्हिरास्तीर्य भगवान् मनुः ।
अयजद् यज्ञपुरुषं लब्धं स्थानं यतो दृढम् ॥ ३१ ॥

बर्हिष्मतीं नाम पुरीं निर्विश्य सुखमावसत् ।

तस्यां प्रविष्टो भवनं तापत्रयविनाशनम् ।
सभार्यः सप्रजः कामान् बुभुजेऽन्याविरोधतः ॥ ३२ ॥

संगीयमानसत्कीर्तिः सस्त्रीभिः सुरगायकैः ।
प्रत्यूषेष्वनुबद्धेन हृदा शृण्वन् हरेः कथाः ॥ ३३ ॥

निष्णातं योगमायासु मुनिं स्वायुम्भुवं मनुम् ।
यदा स्रंसयितुं भोगा न शेकुर्भगवत्परम् ॥ ३४ ॥

अयातयामास्तस्यासन् यामाः स्वान्तरयापनाः ।
शृण्वतो ध्यायतो विष्णोः कुर्वतो ब्रुवतः कथाः ॥ ३५ ॥

स एवं स्वान्तरं निन्ये युगानामेकसप्ततिम् ।
वासुदेवप्रसङ्गेन परिभूतगतित्रयः ॥ ३६ ॥

शारीरा मानसा दिव्याः पर्यासे ये च मानुषाः ।
भौतिकाश्च कथं क्लेशा बाधन्ते हरिसंश्रयम् ॥ ३७ ॥

यः पृष्टो मुनिभिः प्राह धर्मान् नानाविधान् शुभान् ।
नृणां वर्णाश्रमाणां च सर्वभूतहितः सदा ॥ ३८ ॥

एतत् त आदिराजस्य मनोश्चरितमद्भुतम् ।
वर्णितं वर्णनीयस्य तदपत्योदयं श्रुणु ॥ ३९ ॥

**॥ इति श्रीमद्भागवते तृतयस्कन्धे त्रयोविंशोऽध्यायः ॥**

**॥ ಇಪ್ಪತ್ಮೂರನೆಯ ಅಧ್ಯಾಯ ॥**

ಮೈತ್ರೇಯರು ವಿದುರನಿಗೆ ಸ್ವಾಯಂಭುವ ಮನುಗಳು ಕರ್ದಮ ಪ್ರಜೇಶ್ವರರ ಮಾತುಗಳನ್ನು ಕೇಳಿದ ನಂತರ ಮುಂದೇನು ಮಾಡಿದರೆಂಬುವುದನ್ನು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ:-

## ದೇವಹೂತೀದೇವಿಯರ ವಿವಾಹಕ್ಕೆ ಪ್ರಸ್ತಾಪ

ಎಲೈ ವಿದುರನೆ! ಕರ್ದಮ ಪ್ರಜೇಶ್ವರರು ಸ್ವಾಯಂಭುವ ಮನುಗಳನ್ನು ಯಾವ ಕಾರ್ಯನಿಮಿತ್ತವಾಗಿ ತಮ್ಮ ಆಶ್ರಮಕ್ಕೆ ಬಂದಿರುವಿರೋ ಅದನ್ನು ನನಗೆ ವಿಶ್ವಾಸದಿಂದ ಹೇಳಬೇಕೆಂದು ವಿನಯದಿಂದ ಪ್ರಾರ್ಥಿಸಿ, ವಿನಯದಿಂದ ಉತ್ತರವನ್ನು ನಿರೀಕ್ಷಿಸುವವರಾಗಿ ಸುಮ್ಮನಾದರು. ಹಾಗೆಯೇ ತಮ್ಮ ಸ್ವಭಾವಾನುಸಾರವಾಗಿ ಪರಮಾತ್ಮನಲ್ಲಿ ಮಾನಸಿಕ ಧ್ಯಾನಾಸಕ್ತರು ಆದರು. ಸ್ವಾಯಂಭುವ ಮನುಗಳು ಸದ್ಗುಣ ಸತ್ಕರ್ಮಗಳಿಂದ ಪೂರ್ಣರಾದ ಕರ್ದಮ ಪ್ರಜೇಶ್ವರರ ಮಾತನ್ನು ಕೇಳಿ ನಂತರ ಈ ರೀತಿ ಹೇಳಿದರು:-

ಎಲೈ ಬ್ರಹ್ಮಜ್ಞಾನಿಗಳಾದ ಕರ್ದಮ ಪ್ರಜೇಶ್ವರರೇ, ನಿಮ್ಮಂತಹ ಸದ್ಬ್ರಾಹ್ಮಣರನ್ನು ಬ್ರಹ್ಮದೇವರು ತಮ್ಮ ಮುಖದಿಂದ ನಮ್ಮಂತಹ ಕ್ಷತ್ರಿಯರ ಸಂರಕ್ಷಣಾರ್ಥವಾಗಿ ಸೃಷ್ಟಿಸಿದರು. ನೀವು ಇಂದ್ರಿಯಗಳನ್ನು ನಿಗ್ರಹಿಸಿ ಅಲಂಪಟರಾಗಿ, ವೇದಾಧ್ಯಯನದಿಂದ ವಿದ್ಯೆಯನ್ನು ಸಂಪಾದಿಸಿ, ಆ ವಿದ್ಯಾಬಲದಿಂದ ಮೊದಲು ನಿಮ್ಮ ಆತ್ಮವನ್ನು ರಕ್ಷಿಸಿಕೊಳ್ಳುವರಾಗಿ, ನಂತರ ಅತ್ಯಂತ ದೇಹಶ್ರಮ ಸಾಧ್ಯವಾದ ತಪಸ್ಸು ಮತ್ತು ಪರಮಾತ್ಮನಲ್ಲಿ ಜ್ಞಾನಪೂರ್ವಕ ಮನೋಯೋಗಗಳಿಂದ ದಿವ್ಯಜ್ಞಾನವನ್ನೂ ಆತ್ಮಶಕ್ತಿಯನ್ನೂ ಪಡೆದವರಾಗಿ, ಆದರ ಪ್ರಭಾವದಿಂದ ಕ್ಷತ್ರಿಯರಾದ ನಮಗೆ ಸನ್ಮಾರ್ಗದರ್ಶಿಗಳಾಗಿಯೂ, ಆಪತ್ಕಾಲದಲ್ಲಿ ನಿಮ್ಮ ತಪಃಪ್ರಭಾವದ ಆಶೀರ್ವಾದಗಳಿಂದಲೂ ನಮ್ಮನ್ನು ರಕ್ಷಿಸುವರಾಗಿರುತ್ತೀರಿ. ಬ್ರಹ್ಮದೇವರು ಕ್ಷತ್ರಿಯರಾದ ನಮ್ಮನ್ನು ತಮ್ಮ ಬಾಹುಗಳಿಂದ ಸೃಷ್ಟಿಮಾಡಿ, ಹೇಗೆ ಕೈಗಳು ದೇಹದ ಒಂದು ಅಂಗವಾಗಿ, ದೇಹಾದ್ಯಂತದ ಕ್ಲೇಶಪರಿಹಾರಕ್ಕಾಗಿ ತಾನಾಗಿಯೇ ಸ್ವಾಭಾವಿಕವಾಗಿ ಪ್ರಾಪ್ತವಾಗುತ್ತದೆಯೋ ಅದರಂತೆ, ನಿಮ್ಮನ್ನು ಇತರರ ಬಾಧೆಯಿಂದ ಸಂರಕ್ಷಿಸಿ, ನಿಮ್ಮ ಪೋಷಣೆಯನ್ನು ಮಾಡುವುದಕ್ಕಾಗಿ ನಮ್ಮನ್ನು ಸೃಷ್ಟಿಸಿದನು. ಈ ರೀತಿ ಬ್ರಹ್ಮದೇವರ ಸೃಷ್ಟಿಕ್ರಮದಿಂದಲೇ ನಮಗೂ ನಿಮಗೂ ಭಾಂಧವ್ಯವೂ, ಪರಸ್ಪರ ಪ್ರಿಯತ್ವವೂ ಇರುತ್ತದೆ.

ನೀವು ಪರಮಾತ್ಮನಿಗೆ ಹೃದಯದಂತೆ ಪ್ರಿಯರು. ನಾವು ಬಾಹುಗಳಂತೆ ಪ್ರಿಯರು. ನಮ್ಮಿಬ್ಬರನ್ನೂ

ಈ ರೀತಿಯಾಗಿ ಅನಿಮಿತ್ತ ಬಾಂಧವನಾದ, ಸದಸದಾತ್ಮಕ ಪ್ರಪಂಚದಲ್ಲಿ ಸರ್ವತ್ರವ್ಯಾಪ್ತನಾದ ಶ್ರೀಪರಮಾತ್ಮನು ಸದಾ ಸಂರಕ್ಷಿಸುತ್ತಾನೆ. ಯಾವ ಪರಮಾತ್ಮನು ನಮ್ಮಿಬ್ಬರಿಗೂ ನಮ್ಮ ನಮ್ಮ ಸ್ವಧರ್ಮಗಳನ್ನು ತಾನೇ ಬೋಧಿಸಿದನೋ, ಅಂತಹ ಶ್ರೀಪರಮಾತ್ಮನಿಂದ ಸಾಕ್ಷಾತ್ತಾಗಿ ನಿಮಗೆ ಮಾಡಬೇಕಾದ ನಿಮ್ಮ ಮುಂದಿನ ಕಾರ್ಯವು ಹೇಳಲ್ಪಟ್ಟಿರುವುದರಿಂದ, ನಿಮ್ಮ ದರ್ಶನದಿಂದಲೇ ನನ್ನ ಮನಃಸಂಶಯಗಳೆಲ್ಲವೂ ಪರಿಹಾರವಾಗಿ, ಭರವಸೆಯುಂಟಾಯಿತು. ಪುಣ್ಯಶಾಲಿಗಳಲ್ಲದವರಿಗೆ ಯಾವ ನಿಮ್ಮ ದರ್ಶನವು ಅಸಾಧ್ಯವೋ, ಅಂತಹ ನಿಮ್ಮ ದರ್ಶನವು ನನಗೆ ಪ್ರಾಪ್ತವಾಯಿತು.

ನಿಮ್ಮ ಪಾವನವಾದ ಮಂಗಳಪ್ರದವಾದ ಪಾದಧೂಳಿಯ ಸ್ಪರ್ಶವು ನನ್ನ ಕಿರೀಟಕ್ಕೆ ನನ್ನ ಮಹಾಪುಣ್ಯೋದಯದಿಂದ ಪ್ರಾಪ್ತವಾಯಿತು. ನನ್ನ ಪೂರ್ವಪುಣ್ಯದಿಂದ ನೀವು, ನನ್ನನ್ನು ನನ್ನ ಮನಸ್ಸಿನಲ್ಲಿರುವುದನ್ನು ಸಂಕೋಚವಿಲ್ಲದೆ ಪ್ರೀತಿಯಿಂದ ಹೇಳಿರೆಂದು ಕೇಳಿ, ಪರಮಾನುಗ್ರಹವನ್ನು ಸೂಚಿಸಿರುತ್ತೀರಿ. ಕೇಳಬೇಕೆಂಬ ಕುತೂಹಲವುಳ್ಳ ನಿಮಗೆ ಸರ್ವವನ್ನೂ ಆಮೂಲಾಗ್ರವಾಗಿ ಹೇಳಬೇಕೆಂದು ನನ್ನ ಮನಸ್ಸು ಕಾತರಿಸುತ್ತಿದೆ. ಪರಮಪ್ರೀತಿ ಎಂಬ ಮಗಳಲ್ಲಿನ ಸ್ನೇಹದಿಂದ, ಕಾರಣಾಂತರದಿಂದ ವ್ಯಥೆಪಡುತ್ತಿರುವ ನನ್ನ ಮಾತನ್ನು ಕೇಳಲು, ತಾವು ಅರ್ಹರಾಗಿರುವಿರಿ. ದೀನನಾದ ನನ್ನ ಮಾತನ್ನು ಕೃಪೆಯಿಂದ ತಾವು ಕೇಳಬೇಕು.

ಈಕೆಯು ಪ್ರಿಯವ್ರತ, ಉತ್ತಾನಪಾದರ ತಂಗಿಯೂ, ನನ್ನ ಮಗಳೂ ಆಗಿರುವಳು. ಇವಳು ತನಗೆ ಗುಣ, ರೂಪ, ವಯಸ್ಸುಗಳಿಂದ ಅನುರೂಪನಾದ ಪತಿಯನ್ನು ಅಪೇಕ್ಷಿಸುತ್ತಾಳೆ. ನಾರದರಿಂದ ಇವಳು ನಿಮ್ಮ ಗುಣ, ರೂಪ, ಮಹಿಮೆಗಳನ್ನು ಕೇಳಿ ಆಗಿನಿಂದಲೂ ನಿಮ್ಮಲ್ಲಿ ಅನುರಕ್ತಳಾಗಿರುತ್ತಾಳೆ. ಆದ್ದರಿಂದ ಈಕೆಯನ್ನು ಸ್ವೀಕರಿಸುವ ವಿಷಯದಲ್ಲಿ ಬ್ರಾಹ್ಮಣಶ್ರೇಷ್ಠರಾದ ನಿಮ್ಮ ಅಂಗೀಕಾರಯುಕ್ತ ಅಪೇಕ್ಷೆಯ ನಿರೀಕ್ಷಣೆಯಿಂದ ನಾನು ಇವಳನ್ನು ಬಹುಶ್ರದ್ಧೆಯಿಂದ ಇಲ್ಲಿಗೆ ಕರೆತಂದಿರುತ್ತೇನೆ. ಈಕೆಯು ರೂಪ, ಸೌಂದರ್ಯ, ಶೀಲಾದಿಗಳಿಂದ ನಿಮಗೆ ಅನುರೂಪಳು. ನಿಮ್ಮ ಗೃಹಕಾರ್ಯಗಳಿಗೂ, ಯಜ್ಞಾದಿಕಾರ್ಯಗಳಿಗೂ ನಿಮಗೆ ಬಹು ಸಮ್ಮತವಾಗಿ ಅನುಕೂಲಳಾಗಿರತಕ್ಕವಳೂ ಆಗಿರುತ್ತಾಳೆ.

ಯೋಗ್ಯಳಾದ ಸ್ತ್ರೀಯು ಪ್ರಾಪ್ತಳಾಗಿರುವಾಗ ಸ್ವತಃ ಗೃಹಸ್ಥಾಶ್ರಮಾಪೇಕ್ಷಿಗಳಾದವರು ತಿರಸ್ಕಾರ ಮಾಡಲಾರರು. ಕಾಮವನ್ನು ಜೈಸಲು ಮುಕ್ತಸಂಗರಾದ ಯತಿಗಳಿಗೂ ಅಸಾಧ್ಯ. ಹೀಗಿರಲು ಕಾಮಾಪೇಕ್ಷೆಯಿಂದ ಗೃಹಸ್ಥಾಶ್ರಮಾಪೇಕ್ಷಿಗಳಿಗೆ ಕಾಮವನ್ನು ಜಯಿಸಲು ಹೇಗೆ ಸಾಧ್ಯ? ಮೊದಲು ವಿರಕ್ತನಾಗಿ ಸನ್ಯಾಸವನ್ನು ಸ್ವೀಕರಿಸಿ ನಂತರ ಕಾಮಾಪೇಕ್ಷೆಯಿಂದ ಮೈಥುನಾದಿಗಳನ್ನು ಮಾಡಿದರೆ ಅವನು ಅರವತ್ತು ಸಹಸ್ರ ವರ್ಷಗಳ ಕಾಲ ಅಮೇಧ್ಯದಲ್ಲಿ ಕ್ರಿಮಿಯಾಗಿ ಹುಟ್ಟುತ್ತಾನೆ. ಆದುದರಿಂದ

ಕಾಮೋಪಭೋಗ ಮನಸ್ಸುಳ್ಳವರು ಯತ್ಯಾಶ್ರಮವನ್ನು ಕೈಕೊಳ್ಳಬಾರದು. ಆದುದರಿಂದ ಗೃಹಸ್ಥಾಶ್ರಮದಲ್ಲಿ ಉದ್ಯುಕ್ತರಾದ ನಿಮಗೆ ಯೋಗ್ಯ ಸ್ತ್ರೀಯು ಪ್ರಾಪ್ತವಾದಾಗ ಉಪೇಕ್ಷೆಮಾಡುವುದು ಧರ್ಮ ವಿರುದ್ಧವಾಗಿರುತ್ತದೆ. ನಿಮ್ಮಲ್ಲೇ ಅನುರಕ್ತಳಾಗಿ, ನಿಮ್ಮನ್ನು ಪತಿಯನ್ನಾಗಿ ಭಾವಿಸಿರುವ ಇವಳು ಅನ್ಯಪುರುಷರನ್ನು ಸ್ವೀಕರಿಸಲು ಸಾಧ್ಯವಿಲ್ಲ ಮತ್ತು ನಿಷೇಧ. ನಾನು ನಿಮ್ಮನ್ನು ಗೃಹಸ್ಥಾಶ್ರಮಿಗಳಾಗಲು ಪ್ರಯತ್ನಿಸುತ್ತಿರುವಿರೆಂದು ಕೇಳಿರುವೆನು. ಆದುದರಿಂದ ನೀವು ಅನುರಕ್ತಳಾದ ನನ್ನ ಮಗಳನ್ನು ಪತ್ನಿತ್ವೇನ ಅನುಗ್ರಹಮಾಡಿ ಸ್ವೀಕರಿಸಬೇಕು, ಎಂದರು.

## ವಿವಾಹಕ್ಕೆ ಕರ್ದಮರ ಸಮ್ಮತಿ

ಅದಕ್ಕೆ ಕರ್ದಮರು, ಸ್ವಾಯಂಭುವ ಮನುಗಳಿಗೆ, ತಾವು ಹೇಳಿದಂತೆಯೇ ಆಗಲಿ! ನಾನು ವಿವಾಹದಲ್ಲಿ ಆಸಕ್ತನಾಗಿರುತ್ತೇನೆ. ನಿಮ್ಮ ಮಗಳು ಸಾಧ್ವೀಶಿರೋಮಣಿಯೂ, ಅನುರೂಪಳೂ ಆಗಿರುತ್ತಾಳೆ. ತನ್ನ ಕಾಂತಿಯಿಂದ ಸಾಕ್ಷಾತ್ ಲಕ್ಷ್ಮೀದೇವಿಯಂತೆ ಸರ್ವಸಾರ ಸುಂದರರೂಪಳಾದ ನಿಮ್ಮ ಮಗಳು, ಹಿಂದೆ ಒಂದು ಸಲ ಮಂಗಳಸ್ನಾನಾನಂತರ ಅರಮನೆಯ ಮೇಲ್ಭಾಗದ ಉಪ್ಪರಿಗೆಯ ಮೇಲೆ, ಚೆಂಡಾಟವಾಡುತ್ತಿದ್ದಾಗ ಅಕಸ್ಮಾತ್ ತನ್ನ ವಿಮಾನದಲ್ಲಿ ಕುಳಿತು ಆಕಾಶದಲ್ಲಿ ಸಂಚರಿಸುತ್ತಿದ್ದ ವಿಶ್ವಾವಸು ಎಂಬ ಗಂಧರ್ವನು ಕನ್ಯಾವಸ್ಥೆಯಲ್ಲಿದ್ದ ಇವಳನ್ನು ನೋಡಿ ರೂಪದಿಂದ ಮುಗ್ಧನಾಗಿ ಮೋಹಿಸಿದ ಮಾತ್ರಕ್ಕೇ, ಗಂಧರ್ವ ಪದವಿಯಿಂದ ಭ್ರಷ್ಟನಾಗಿ ವಿಮಾನದಿಂದ ಕೆಳಗೆ ಬಿದ್ದನೋ, ಅಂತಹ ಪ್ರಭಾವಶಾಲಿಯಾದ ಇವಳನ್ನು ಯಾವನು ತಾನೇ ತಾನಾಗಿಯೇ ಅಪೇಕ್ಷಿಸಲಾರನು? ಆದುದರಿಂದ ವಿವಾಹ ಕಾರ್ಯವು ನೆರವೇರಲು ನಾನು ಸಮ್ಮತಿಸಿರುತ್ತೇನೆ. ಸದ್ಗುಣಸಂಪನ್ನೆಯಾದ ಈಕೆಯ ಇಷ್ಟವು ನೆರವೇರಲಿ.

ಇವಳು ಸಾಕ್ಷಾತ್ ಲಕ್ಷ್ಮೀದೇವಿಯರ ಶ್ರೀಚರಣಗಳನ್ನಾರಾಧಿಸಿ ಲಕ್ಷ್ಮೀಕಟಾಕ್ಷವನ್ನು ಪಡೆಯದಿದ್ದವರಿಂದ ನೋಡಲೂ ಕೂಡ ಅಸಾಧ್ಯಳು. ಅಂತಹವಳು ತಾನಾಗಿಯೇ ಬಂದು ವಿನಯದಿಂದ ಪ್ರಾರ್ಥಿಸಿಕೊಳ್ಳುವಾಗ, ಜ್ಞಾನಿಗಳ ಕುಲದಲ್ಲಿ ಹುಟ್ಟಿದವನು ನಾನೆಂದು ಹೇಳಿಕೊಳ್ಳುವ ಯಾವನು ತಾನೇ, ಅತ್ಯುನ್ನತ ಮನುಗಳ ವಂಶದಲ್ಲಿ ಹುಟ್ಟಿ ಪಾವನ ಚರಿತ್ರರಾದ ಪ್ರಿಯವ್ರತ, ಉತ್ತಾನಪಾದರಾಯರುಗಳ ತಂಗಿಯಾದ ಇವಳನ್ನು ಸ್ವೀಕರಿಸಿ,

ಎಲ್ಲಿಯವರಿಗೆ ನನಗೆ ಇಂದ್ರಿಯಪಾಟವಾದಿಗಳು ಚೆನ್ನಾಗಿರುವವೋ, ಇವಳು ಉತ್ತಮ ಸಂತಾನ ಸಂಪತ್ತಿಗಳನ್ನು ಪಡೆಯುವಳೋ ಅಲ್ಲಿಯವರಿಗೆ ಇವಳನ್ನು ಚೆನ್ನಾಗಿ ರಕ್ಷಿಸಿ, ನಂತರ ಸುಶಿಕ್ಷಿತರಾದ

ಪ್ರಾಪ್ತವಯಸ್ಕರಾದ ಮಕ್ಕಳಿಗೆ ವಿಹಿತಮಾರ್ಗಗಳಲ್ಲಿ ಪ್ರತಿಷ್ಠಿತರನ್ನಾಗಿಮಾಡಿ, ನಂತರ ನಾನು ಮೋಕ್ಷಕ್ಕಾಗಿ ಸನ್ಯಾಸಾಶ್ರಮವನ್ನು ಸ್ವೀಕಾರಮಾಡುತ್ತೇನೆ. ಇದಕ್ಕೆ ಯಾವ ಶ್ರೀಪರಮಾತ್ಮನು ನಮ್ಮನ್ನು ಸೃಷ್ಟಿಮಾಡಿ, ಸಂರಕ್ಷಿಸಿ ಪ್ರಳಯಕಾಲದಲ್ಲಿಯೂ ನಮ್ಮನ್ನು ತನ್ನ ಕುಕ್ಷಿಯಲ್ಲಿಟ್ಟು ರಕ್ಷಿಸುವನೋ ಅಂತಹ ವಿಶ್ವಕರ್ತನಾದ ಅನಂತನೇ ಸಾಕ್ಷಿ, ಎಂದರು. ನಂತರ ಎಲೈ ಸ್ವಾಯಂಭುವ ಮನುಗಳೇ ಇದು ತಮಗೆ ಸಮ್ಮತವಾಗಿದ್ದರೆ, ಸರ್ವಪ್ರೇರಕನಾದ ಶ್ರೀಪರಮಾತ್ಮನ ಇಚ್ಛೆಯೂ, ಅನುಗ್ರಹವೂ ಇದಕ್ಕೆ ಪ್ರತಿಕೂಲವಾಗಿಲ್ಲದಿದ್ದರೆ, ಮುಂದಿನ ಉದ್ವಾಹಕರ್ಮಗಳು ನೆರವೇರಲ್ಪಡಬಹುದೆಂದು ವಿನಯದಿಂದ ಹೇಳುತ್ತಾ ಇದ್ದಾಗ, ಅದಕ್ಕೆ ಅಭಿಮತದಿಂದ ಸಂತೋಷದಿಂದ ಅರಳಿದ ಮುಖ ಕಮಲವುಳ್ಳ ದೇವಹೂತಿದೇವಿಯನ್ನು ಕರ್ದಮರು ನೋಡಿ ಮನಸೋತರು. ದೇವಹೂತಿದೇವಿಯ ಮನಸ್ಸು ಕರ್ದಮರನ್ನು ಪತಿಯನ್ನಾಗಿ ಹೊಂದಬೇಕೆಂಬ ಆಶೆಯಿಂದ ಕೂಡಿದ್ದಾಯಿತು.

## ಕರ್ದಮ ದೇವಹೂತೀ ವಿವಾಹ

ಈ ಮಾತನ್ನು ಸ್ವಾಯಂಭುವ ಮನುಗಳು ಕೇಳಿ, ನಂತರ ಶತರೂಪಾದೇವಿಯನ್ನೂ, ಮಗಳನ್ನೂ, ಪ್ರತ್ಯೇಕವಾಗಿ ಕೇಳಿ ಅವರ ಅನುಮತಿಯನ್ನು ಸ್ವೀಕರಿಸಿ, ತಮ್ಮ ಮಗಳಾದ ದೇವಹೂತಿದೇವಿಯನ್ನು ಕರ್ದಮ ಋಷಿಗಳಿಗೆ ಕೊಟ್ಟು ವಿಜೃಂಭಣೆಯಿಂದ ವಿವಾಹ ಮಾಡಿದರು. ಮಹಾರಾಣಿಯಾದ ಶತರೂಪಾದೇವಿಯು ವಧೂವರರಿಗೆ, ಗೃಹ, ಧನ, ಆಭರಣ, ವಸ್ತ್ರಾದಿ ಅನರ್ಘ್ಯ ಪದಾರ್ಥಗಳನ್ನು ಬಹುವಾಗಿ ಪ್ರೀತಿಯಿಂದ ಕೊಟ್ಟು, ಇವರ ಸೇವೆಗಾಗಿ ಸೇವಕ ಜನರನ್ನೂ ಕೊಟ್ಟಳು. ಸ್ವಾಯಂಭುವ ಮನುಗಳು ಲಗ್ನಾನಂತರ ಕರ್ದಮ ಪ್ರಜೇಶ್ವರರಿಗೆ ಕನ್ಯಾದಾನ ಮಾಡಿದ್ದರಿಂದ ಸಮಾನಿಕರಲ್ಲಿ ಕನ್ಯಾದಾನ ಮಾಡಿದಂತಾಯಿತೆಂದು ತೃಪ್ತರಾದರು. ನಂತರ ಪತ್ನೀ ಸಮೇತರಾಗಿ ಪಟ್ಟಣಕ್ಕೆ ಹಿಂತಿರುಗಲಪೇಕ್ಷಿಸಿ, ಪುತ್ರಿಯನ್ನು ಬಿಟ್ಟಗಲಲಾರದೇ ಪ್ರೇಮ ವಾತ್ಸಲ್ಯದಿಂದ ಆಲಂಗಿಸಿ ತಮ್ಮ ಪ್ರೇಮಾಶ್ರುಗಳನ್ನು ದೇವಹೂತೀದೇವಿಯ ಶಿರಸ್ಸಿನ ಮೇಲೆ ಸುರಿಸಿದರು.

ನಂತರ ಕರ್ದಮ ಋಷಿಗಳ ಸಮ್ಮತಿಯನ್ನು ಪಡೆದು ಪತ್ನೀಪರಿವಾರ ಸಮೇತರಾಗಿ, ದಿವ್ಯ ರಥಾರೂಢರಾಗಿ ತಮ್ಮ ಪಟ್ಟಣಾಭಿಮುಖವಾಗಿ ಪ್ರಯಾಣಮಾಡಿದರು. ದಾರಿಯುದ್ದಕ್ಕೂ ಪ್ರಜೆಗಳು ಬ್ರಹ್ಮಾವರ್ತದ ಸಮಸ್ತ ಪ್ರದೇಶಗಳಲ್ಲೂ, ದಿವ್ಯ ಮಂಗಳವಾದ್ಯ, ಪೂಜಾದ್ರವ್ಯ, ಅಲಂಕಾರಾದಿಗಳಿಂದ ಸ್ವಾಯಂಭುವ ಮನುಗಳನ್ನು ತಮ್ಮ ರಾಜರೆಂದು ಸನ್ಮಾನಿಸಿದರು.

ಈ ರೀತಿಯಾಗಿ ಅವರು ತಮ್ಮ ಬರ್ಹಿಷ್ಮತೀ ಎಂಬ ಸರ್ವ ಸಂಪತ್ಸಮೃದ್ಧಿಯುಳ್ಳ ಪಟ್ಟಣವನ್ನು

ಸೇರಿದರು. ಸ್ವಾಯಂಭುವ ಮನುಗಳು ಹಿಂತಿರುಗುವಾಗ ಸರಸ್ವತೀ ನದೀತೀರದಲ್ಲಿರುವ ಅನೇಕ ಋಷ್ಯಾಶ್ರಮಗಳ ವೈಭವವನ್ನು ನೋಡಿ, ತಮ್ಮ ಮಗಳು ಒಬ್ಬ ಋಷಿಯನ್ನು ಮದುವೆಯಾದಳಲ್ಲಾ ಎಂಬ ಯೋಚನೆ ಇಲ್ಲದವರಾದರು.

ಯಜ್ಞವರಾಹದೇವರು ಅವತರಿಸಿದಾಗ, ಪ್ರಳಯೋದಕದಿಂದ ಮೇಲಕ್ಕೆದ್ದು ತಮ್ಮ ಶಿರಸ್ಸನ್ನು ಕೊಡವಿದಾಗ, ತಮ್ಮ ಶಿರೋಭಾಗದಿಂದ ಸಹಸ್ರಾರು ಕೂದಲುಗಳೂ, ಹನಿಗಳೂ ಬರ್ಹಿಷ್ಮತೀ ನಗರದ ಮೇಲೆ ಮತ್ತು ಸುತ್ತಲಿನ ಪ್ರದೇಶಗಳ ಮೇಲೆ ಬೀಳುವಂತೆ ಮಾಡಿದ್ದರು. ಆ ಪವಿತ್ರಜಲದ ಸಂಪ್ರೋಕ್ಷಣೆಯಿಂದ ಆ ದೇಶವೆಲ್ಲಾ ಪೂರ್ಣವಾಗಿ ಪವಿತ್ರವಾಗಿತ್ತು. ಆ ಕೂದಲುಗಳು ಒಂದೊಂದೂ ಅನಂತಗಳಾಗಿ ಯಜ್ಞಸಾಧಕಗಳಾದ ದರ್ಭೆಗಳೆಂಬ ಕುಶ ಮತ್ತು ಕಾಶಾದಿಗಳು ಆದವು. ಕಾಶಾ ಎಂಬುವು ಒಂದು ವಿಧ ದೂರ್ವಾಂಕುರಗಳು. ಅಂದರೆ ಗರಿಕೇಹುಲ್ಲಿನ ವಿಶೇಷ. ಸ್ವಾಯಂಭುವ ಮನುಗಳು ಕುಶಕಾದಿಗಳಿಂದ ಪೂರ್ಣವಾದ ಬಹಿರ್ಷ್ಮತೀ ನಗರದಲ್ಲಿ, ಕುಶಕಾದಿ ಆಸನಗಳನ್ನು ಮಾಡಿಕೊಂಡು, ಯಜ್ಞಪುರುಷನನ್ನು ಬಹುವಿಧವಾಗಿ ಆರಾಧಿಸಿ ಪರಮಾತ್ಮನ ಪಾದ ಸನ್ನಿಧಿಯನ್ನು ಸೇರಲು ಸಾಧನ ಮಾಡಿಕೊಂಡು, ಇನ್ನೊಬ್ಬರಿಗೆ ಅನ್ಯಾಯ ಮಾಡದೆ, ವಿಧಿಪೂರ್ವಕವಾಗಿ ಪತ್ನೀ, ಪುತ್ರ, ಪರಿವಾರದೊಡನೆ ಸಕಲ ಸಂಪತ್ತು, ವೈಭವಗಳಿಂದ, ಎಪ್ಪತ್ತೊಂದು ಚತುರ್ಯುಗಗಳ ಕಾಲವಾದ ಒಂದು ಮನ್ವಂತರಕಾಲ ಸುಖವಾಗಿ ಬಾಳಿದರು. ಇವರ ಕೀರ್ತಿಯನ್ನು ಪುರಜನರೂ, ದೇವಗಾಯಕರೂ, ಎಲ್ಲಾ ಕಡೆಯಲ್ಲಿಯೂ ಹೊಗಳುತ್ತಿದ್ದರು. ಎಲ್ಲೆಲ್ಲೂ ಭಗವತ್ಕಥಾ ಸಲ್ಲಾಪಗಳೂ, ಭಗವದ್ಗುಣಗಾನಗಳೂ, ನಿರಂತರ ನಡೆಯುತ್ತಿದ್ದವು. ಸ್ವಾಯಂಭುವ ಮನುಗಳೂ ಇವುಗಳನ್ನು ಕೇಳುತ್ತಾ, ಯಾವಾಗಲೂ ಪರಮಾತ್ಮನಲ್ಲೇ ಇರುವ ಮನೋಯೋಗವನ್ನು ಹೊಂದಿದವರಾಗಿ, ದುಃಖ, ಕ್ಲೇಶಾದಿಗಳಿಂದ ಮುಟ್ಟಲ್ಪಡದೆ, ನಿತ್ಯವೂ ಆನಂದಭರಿತರಾಗಿದ್ದರು. ಪರಮಾತ್ಮನ ಭಕ್ತರನ್ನು ಕ್ಲೇಶಗಳು ಮುಟ್ಟಬಲ್ಲವೆ? ಈ ರೀತಿಯಾಗಿ ತ್ರಿಕಾಲಗಳಲ್ಲೂ ಪರಮಾತ್ಮನ ಧ್ಯಾನರೂಪವಾದ ಯೋಗದಿಂದ ದಿವ್ಯಮಾನಸಿಕಶರೀರ ವುಳ್ಳವರಾದರು. ನಂತರ ಋಷಿಗಳಿಂದ ಪ್ರಾರ್ಥಿತರಾಗಿ, ವರ್ಣಾಶ್ರಮಧರ್ಮಗಳನ್ನೂ, ಸರ್ವಭೂತಗಳಿಗೂ ಹಿತ ಉಂಟಾಗತಕ್ಕ ಧರ್ಮಗಳನ್ನೂ ಅವರಿಗೆ ಸ್ವಾಯಂಭುವ ಮನುಗಳು ಉಪದೇಶಿಸಿದರು. ಇಂತಹ ಅದ್ಭುತವಾದ ಆದಿರಾಜರಾದ ಮನುಗಳ ಚರಿತ್ರೆಯು ಹೇಳಲು ಪರಮಶ್ರೇಷ್ಠರಾದ್ದರಿಂದ, ಎಲೈ ವಿದುರನೆ! ನಿನಗಾಗಿ ಹೇಳಿರುತ್ತೇನೆ. ಇನ್ನು ಅವರ ಸಂತತಿಯ ವಿಚಾರವನ್ನು ಕೇಳುವನಾಗು, ಎಂದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಇಪ್ಪತ್ತೂರನೆಯ ಅಧ್ಯಾಯವು ಮುಗಿಯಿತು.**

# अथ चतुर्विंशोऽध्यायः

**मैत्रेय उवाच**

पितृभ्यां प्रस्थिते साध्वी पतिमिङ्गितकोविदा।
नित्यं पर्यचरत् प्रीत्या भवानीव भवं प्रभुम्॥ १ ॥

विस्रम्भेणात्मशौचेन गौरवेण दमेन च।
शुश्रूषया सौहृदेन वाचा मधुरया प्रभो॥ २ ॥

विसृज्य कामं दम्भं च द्वेषं लोभमघं मदम्।
अप्रमत्तोद्यता नित्यं तेजीयांसमतोषयत्॥ ३ ॥

स वै देवर्षिवर्यस्तां मानवीं समनुव्रताम्।
दैवाद् गरीयसः पत्युराशासानां महाशिषः॥ ४ ॥

कालेन भूयसा क्षामां कर्शितां व्रतचर्यया।
प्रेमगद्गदया वाचा पीडितः कृपयाऽब्रवीत्॥ ५ ॥

तुष्टोऽहमद्य तव मानिनि मानदायाः शुश्रूषया परमया परया च भक्त्या।
यो देहिनामयमतीव सुहृत् स्वदेहो

नापेक्षितः समुचितं क्षयितुं यदर्थे॥ ६ ॥

या मे स्वधर्मनिरतस्य तपःसमाधिविद्यात्मयोगविजिता भगवत्प्रसादात्।
तामेव ते मदनुभावनयाऽवरुद्धां दृष्टिं प्रपश्य वितराम्यभयामशोकाम्॥ ७ ॥

अन्ये पुनर्भगवतो भ्रुव उद्विजृम्भविभ्रंशितार्थरचनाः किमुरुक्रमस्य।
सिद्धासि भुङ्क्ष्व विभवान् निजधर्मदेहान् दिव्यान् नरैर्दुरधिगान् नृपविक्रियाभिः॥ ८ ॥

**मैत्रेय उवाच**

एवं ब्रुवाणमबलाऽखिलयोगमायाविद्याविचक्षणमवेत्य गताधिरासीत्।
सप्रश्रयप्रणयविह्वलया गिरैषा व्रीडावलोकविलसद्धसितानानाऽऽह॥ ९ ॥

देवहूतिरुवाचराद्धं तव द्विजवृषैतदमोघयोगमायाधिपे त्वयि विभो तदवैमि भर्तः।
यस्तेऽभ्यधायि समयः सकृदङ्गसङ्गो भूयाद् वरीयसि गुणप्रसवः सतीनाम्॥ १० ॥

तत्रेतिकृत्यमुपशिक्ष यथोपदेशं येनैष मे कर्शितोऽतिरिरंसयात्मा।
सिध्येत ते कृतमनोभवधर्षितायाः कामस्तदीश भवनं सदृशं विचक्ष्व॥ ११ ॥

**मैत्रेय उवाच**

प्रियायाः प्रियमन्विच्छन् कर्दमो योगमास्थितः।
विमानं कामगं क्षत्तस्तर्ह्येवाविरचीकरत्॥ १२ ॥

सर्वकामदुघं दिव्यं सर्वरत्नसमन्वितम्।
सर्वर्द्ध्युपचयोदर्कं मणिस्तम्भैरुपस्कृतम्॥ १३ ॥

दिव्योपस्करणोपेतं सर्वकालसुखावहम्।
पट्टिकाभिर्विचित्राभिः पताकाभिरलंकृतम्॥ १४ ॥

स्रग्भिर्विचित्रमालाभिर्मञ्जुसिञ्जत् षडङ्घ्रिभिः।
दुकूलक्षौमकौशेयैर्नानावस्त्रैर्विराजितम्॥ १५ ॥

उपर्युपरि विन्यस्तनिलयेषु पृथक् पृथक्।
क्लृप्तैः कशिपुभिः कान्तं पर्यङ्कव्यजनासनैः॥ १६ ॥

तत्र तत्र विनिक्षिप्तनानाशिल्पोपशोभितम्।
महामरकतस्थल्या जुष्टं विद्रुमवेदिभिः॥ १७ ॥

द्वास्सु विद्रुमदेहल्या भातं वज्रकपाटिमत्।
शिखरेष्विन्द्रनीलेषु हेमकुम्भैरधिष्ठितम्॥ १८ ॥

चक्षुष्मत्पद्मरागाग्र्यैर्वज्रभित्तिषु निर्मितैः।
जुष्टं विचित्रवैतानैर्महार्हैर्हेमतोरणैः॥ १९ ॥

हंसपारावतव्रातैस्तत्र तत्र निकूजितम्।
कृत्रिमान् मन्यमानैः स्वानधिरुह्याधिरुह्य च॥ २० ॥

विहारस्थानशयनसंवेशप्राङ्गणाजिरैः।
यथोपजोषं रचितैर्विस्मापनमिवात्मनः॥ २१ ॥

ईदृग् गृहं तत् पश्यन्तीं नातिप्रीतेन चेतसा।
सर्वभूताशयाभिज्ञः प्रावोचत् कर्दमः स्वयम्॥ २२ ॥

निमज्जास्मिन् ह्रदे भीरु विमानमिदमारुह ।
इदं शुक्लकृतं तीर्थमाशिषामाप्तये नृणाम् ॥ २३ ॥

सा तद् भर्तुः समादाय वचः कुवलयेक्षणा ।
सरजं बिभ्रती वासो वेणीभूतांश्च मूर्धजान् ॥ २४ ॥

अङ्गं च मलपङ्केन संच्छन्नं शबलस्तनम् ।
आविवेश सरस्वत्याः सरः शिवजलाशयम् ॥ २५ ॥

साऽन्तः सरसि वेश्मस्थाः शतानि दश कन्यकाः ।
सर्वाः कैशोरवयसो ददर्शोत्पलगन्धयः ॥ २६ ॥

तां दृष्ट्वा सहसोत्थाय प्रोचुः प्राञ्जलयः स्त्रियः ।
वयं कर्मकरीस्तुभ्यं शाधि नः करवाम किम् ॥ २७ ॥

स्नानेन तां महार्हेण स्नापयित्वा मनस्विनीम् ।
दुकूले निर्मले नूत्ने ददुरस्यै च मानद ॥ २८ ॥

भूषणानि परार्ध्यानि वरीयांसि द्युमन्ति च ।
अन्नं सर्वगुणोपेतं पानं चैवामृतासवम् ॥ २९ ॥

अथादर्शे स्वमात्मानं स्रग्विणं विरजाम्बरम् ।
विरजं कृतस्वस्त्ययनं कन्याभिर्बहुमानितम् ॥ ३० ॥

स्नातं कृतशिरःस्नानं सर्वाभरणभूषितम् ।
निष्कग्रीवं वलयिनं कूजत्काञ्चननूपुरम् ॥ ३१ ॥

श्रोण्योरध्यस्तया काञ्च्या काञ्चन्या बहुरत्नया ।
हारेण च महार्हेण रुचकेन च भूषितम् ॥ ३२ ॥

सुभ्रुवा सुदता श्लक्ष्णस्निग्धापाङ्गेन चक्षुषा ।
पद्मकोशस्पृधा नीलैरलकैश्च लसन्मुखम् ॥ ३३ ॥

यदा सस्मार ऋषभमृषीणां दयितं पतिम् ।
तत्र चास्ते सह स्त्रीभिर्यत्रास्ते स प्रजापतिः ॥ ३४ ॥

भर्तुः पुरस्तादात्मानं स्त्रीसहस्रवृतं तदा ।
निशाम्य तद्योगगतिं संशयं प्रत्यपद्यत ॥ ३५ ॥

स तां कृतमलस्नानां विभ्राजन्तीमपूर्ववत् ।
आत्मनो बिभ्रतीं रूपं संवीतरुचिरस्तनम् ॥ ३६ ॥

विद्याधरीसहस्रेण सेव्यमानां सुवाससम् ।
जातभावो विमानं तदारोहयदमित्रहन् ॥ ३७ ॥

तस्मिंन्नलुप्तमहिमा प्रिययाऽनुषक्तो विद्याधरीभिरुपचीर्णवपुर्विमाने ।
बभ्राज उत्कचक उद्गुणपानवीच्यस्ताराभिरावृत इवोडुपतिर्नभस्स्थः ॥ ३८ ॥

तेनाष्टलोकपविहारकुलाचलेन्द्रद्रोणीष्वनङ्गसखमारुतसौभगासु ।
सिद्धैर्नुतो द्युधुनिपातशिवस्वनासु रेमे चिरं धनदवल्ललनावरूथी ॥ ३९ ॥

वैस्रम्भके सुरवने नन्दने पुष्पभद्रके ।
मानसे चैत्ररथ्ये च स रेमे रामया सह ॥ ४० ॥

भ्राजिष्णुना विमानेन कामगेन महीयसा ।
वैमानिकानत्यशेत चरन् लोकान् यथानिलः ॥ ४१ ॥

किं दुरापादनं तेषां पुंसामुद्दामचेतसाम् ।
यैराश्रितस्तीर्थपदश्चरणो व्यसनात्ययः ॥ ४२ ॥

प्रेक्षयित्वा भुवो गोलं पत्न्यै यावान् स्वसंस्थया ।
बह्वाश्चर्यं महायोगी स्वाश्रमाय न्यवर्तत ॥ ४३ ॥

विभज्य नवधाऽऽत्मानं मानवीं सुरतोत्सुकाम् ।
रामां निरमयन् रेमे वर्षपूगान् मुहूर्तवत् ॥ ४४ ॥

तस्मिन् विमान उत्कृष्टां शय्यां रतिकरीं श्रिता ।
न चाबुद्ध्यत तं कालं पत्याऽऽपीच्येन सङ्गता ॥ ४५ ॥

एवं योगानुभावेन दम्पत्यो रममाणयोः ।
शतं व्यतीयुः शरदः कामलालसयोर्मनाक् ॥ ४६ ॥

तस्यामाधत्त रेतस्तां भावयन्नात्मनाऽऽत्मवित्।
नवधा विधाय रूपं स्वं सत्यसंकल्पविद् विभुः॥ ४७ ॥

ततस्ताः सुषुवे सद्यो देवहूतिः स्त्रियः प्रजाः।
सर्वास्ताश्चारुसर्वाङ्ग्यो लोहितोत्पलगन्धयः॥ ४८ ॥

पतिं सा प्रव्रजिष्यन्तं तदाऽऽलक्ष्योशती सती।
स्मयमाना विक्लवेन हृदयेन विदूयता॥ ४९ ॥

लिखन्त्यधोमुखी भूमिं पदा नखमणिश्रिया।
उवाच ललितां वाचं निरुध्याश्रुकलां शनैः॥ ५० ॥

सर्वं तद् भगवान् मह्यमुपोवाह प्रतिश्रुतम्।
अथापि मे प्रपन्नाया अभयं दातुमर्हसि॥ ५१ ॥

ब्रह्मन् दुहितृभिस्तुभ्यं विमृश्याः पतयः समाः।
कश्चित् स्यान्मे विशोकाय त्वयि प्रव्रजिते वनम्॥ ५२ ॥

एतावताऽलं कालेन व्यतिक्रान्तेन मे प्रभो।
इन्द्रियार्थप्रसङ्गेन परित्यक्तपरात्मनः॥ ५३ ॥

इन्द्रियार्थेषु सज्जन्त्या प्रसङ्गस्त्वयि मे कृतः।
अजानन्त्या परं भावं तथाप्यस्त्वभवाय मे॥ ५४ ॥

संयोगः संसृतेर्हेतुरसत्सु विहितो धिया।
स एव साधुषु कृतो निःसङ्गत्वाय कल्पते॥ ५५ ॥

नेह यत् कर्म धर्माय न विरागाय कल्पते।
न तीर्थपदसेवायै जीवन्नपि मृतो हि सः॥ ५६ ॥

साहं भगवतो नूनं वञ्चिता मायया दृढम्।
या त्वां विमुक्तिदं प्राप्य न मुमुक्षे ह बन्धनात्॥ ५७ ॥

**॥ इति श्रीमद्भागवते (तृतीयस्कन्धे( *3) चतुर्विंशोऽध्यायः ॥**

### ॥ ಇಪ್ಪತ್ತಾಲ್ಕನೆಯ ಅಧ್ಯಾಯ ॥

## ದೇವಹೂತೀ ದೇವಿಯ ಪತಿ ಸೇವಾ

ಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಕರ್ದಮ ಪ್ರಜೇಶ್ವರರೂ ದೇವಹೂತೀದೇವಿಯರೂ, ವಿವಾಹಾನಂತರ ಏನು ಮಾಡಿದರೆಂಬುವುದನ್ನು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ.

ದೇವಹೂತಿದೇವಿಯ ತಂದೆತಾಯಿಗಳಾದ ಸ್ವಾಯಂಭುವ ಮನುಗಳೂ, ಶತರೂಪಾದೇವಿಯರೂ, ಮಗಳನ್ನು ಕರ್ದಮರಿಗೆ ಲಗ್ನಮಾಡಿಕೊಟ್ಟು ತಮ್ಮ ಪಟ್ಟಣಕ್ಕೆ ಹೊರಟುಹೋದನಂತರ, ದೇವಹೂತೀದೇವಿಯು ತನ್ನ ಪತಿಯಾದ ಕರ್ದಮರ ಮನೋಇಂಗಿತವನ್ನು ತಿಳಿಯುವುದರಲ್ಲಿ ನಿಪುಣೆಯಾಗಿ, ಅವರ ಮನಸ್ಸು ಮೆಚ್ಚುವಂತೆ ಸೇವೆಯನ್ನು ಮಾಡುವವಳಾದಳು. ಹೇಗೆ ಭವಾನಿದೇವಿ ಎಂಬ ಪಾರ್ವತಾದೇವಿಯರು ಭವನೆಂಬ ರುದ್ರದೇವರನ್ನು ಪ್ರೀತಿಯಿಂದ ಸೇವಿಸುತ್ತಿದ್ದರೋ ಅದರಂತೆ, ದೇವಹೂತಿದೇವಿಯರೂ ತಮ್ಮ ಪತಿಯಾದ ಕರ್ದಮರು ಪ್ರೀತರಾದರೆ ಸಾಕೆಂಬ ವಿಸ್ರಂಭವೆಂಬ ಭಾವದಿಂದಲೂ, ಆತ್ಮಶೌಚವೆಂಬ ಮನಃಶುದ್ಧಿಯಿಂದಲೂ, ಮಹಾತ್ಮ್ಯಜ್ಞಾನಪೂರ್ವಕವಾದ ಗೌರವದಿಂದಲೂ, ಇಂದ್ರಿಯನಿಗ್ರಹರೂಪವಾದ ದಮದಿಂದಲೂ, ಪತಿಯಿಂದ ಹಿತವಾಕ್ಯಗಳನ್ನು ಕೇಳಬೇಕೆಂಬ ಅಪೇಕ್ಷೆಯಿಂದ ಮಾಡುವ ಶ್ರದ್ಧಾಪ್ರೀತಿ ಪೂರ್ವಕ ಪರಿಚರ್ಯೆ ಎಂಬ ಶುಶ್ರೂಷೆಯಿಂದಲೂ, ಅನಿಮಿತ್ತಸ್ನೇಹವೆಂಬ ಸೌಹಾರ್ದದಿಂದಲೂ, ಮಧುರವಾದ ಮಾತುಗಳಿಂದಲೂ ಪತಿಸೇವೆಯನ್ನು ಮಾಡಿದರು.

ವಿಷಯಾಪೇಕ್ಷೆಯನ್ನೂ ತ್ಯಜಿಸಿ, ತನ್ನಲ್ಲಿಲ್ಲದ ಮಹಾತ್ಮೆಯನ್ನು ಪ್ರಕಟಿಸಬೇಕೆಂಬ ಭಾವ ವಾದ ಜಂಭವಿಲ್ಲದವರಾಗಿ, ದ್ವೇಷ, ಲೋಭ ಭಾವಗಳಿಲ್ಲದೇ, ಪಾಪ ವಿಷಯಗಳಲ್ಲಿ ಚಿಂತನೆ ಇಲ್ಲದವರಾಗಿ, ಮದವಿಲ್ಲದೇ ನಿರಂತರ ಪರಮಾಸಕ್ತಿಯಿಂದ, ಅತೀಂದ್ರಿಯ ವಿಷಯಗಳನ್ನೂ ತಿಳಿಸಲು ಶಕ್ತರಾದ ಕಾರಣ ತೇಜಿಯಸರಾದ ಕರ್ದಮ ಪ್ರಜೇಶ್ವರರ ಮನಸ್ಸನ್ನು ಬಹಳವಾಗಿ ಸಂತೋಷ ಪಡಿಸಿದರು. ಈ ರೀತಿಯಾಗಿ ಪರಮಾತ್ಮನ ಪ್ರಸಾದದಿಂದ ತನಗೆ ಸತ್ಸಂತತಿಯಾಗಲೆಂಬ ಅಪೇಕ್ಷೆಯಿಂದ, ಮಾನ್ಯಳಾದ ದೇವಹೂತೀದೇವಿಯು ಮನಮೆಚ್ಚುವಂತೆ ಬಹುಕಾಲ ತಮ್ಮ ಸೇವೆಯನ್ನು ಮಾಡಿ, ಆ ಶುಶ್ರೂಷಾ ವ್ರತಾಚರಣೆಯಿಂದ ಬಹಳ ಕೃಶಳಾಗಿರುವುದನ್ನು ದೇವರ್ಷಿಶ್ರೇಷ್ಠರಾದ ಕರ್ದಮರು ನೋಡಿ, ಮನಕರಗಿ, ಉಕ್ಕಿಬರುವ ಪ್ರೇಮಪ್ರವಾಹವನ್ನು ತಡೆಯುವರಾಗಿ, ಗದ್ಗದಕಂಠದಿಂದ ಒಂದುದಿನ ದೇವಹೂತಿದೇವಿಯರಿಗೆ ಈ ರೀತಿಯಾಗಿ ಹೇಳಿದರು:-

ಎಲೈ ನನ್ನ ಆತ್ಮಗೌರವವನ್ನು ಹೆಚ್ಚಿಸುವವಳಾದ, ಮಾನಾರ್ಹಳಾದ ದೇವಿಯೆ! ನಿನ್ನ ಉತ್ಕೃಷ್ಟಭಕ್ತಿಯಿಂದ ಕೂಡಿದ ಉತ್ತಮಸೇವೆಯಿಂದ ನಾನು ಸಂತುಷ್ಟನಾಗಿರುತ್ತೇನೆ. ಇನ್ನು ನಿನ್ನ ಭಕ್ತಿಭಾವವನ್ನು ನಾನು ಪರೀಕ್ಷಿಸುವುದು ಸಾಕು. ನೀನು ನನಗೋಸ್ಕರ ಯಾರಿಂದಲೂ ಬಿಡಲಸಾಧ್ಯವಾದ ಸ್ವದೇಹಾಭಿಮಾನ ವೆಂಬುದನ್ನೂ ಬಿಟ್ಟು, ನಿನ್ನ ಕೋಮಲವಾದ ಶರೀರವನ್ನು ಇಷ್ಟು ಕೃಶವನ್ನಾಗಿ ಮಾಡಲೂ ಹಿಂಜರಿಯದೆ, ಸಂತೋಷದಿಂದ ನನ್ನನ್ನು ಸೇವಿಸಿರುತ್ತೀಯೆ. ನಾನು ನನ್ನ ಸ್ವಧರ್ಮದಲ್ಲಿ ನಿರತನಾಗಿ ತಪಸ್ಸು, ವಿದ್ಯೆ, ಯೋಗಗಳಿಂದ ಪರಮಾತ್ಮನನ್ನು ಯಾವ ನಿನಗೋಸ್ಕರವಾಗಿ ಮೆಚ್ಚಿಸಿ ಪರಮಾತ್ಮನ ಅನುಗ್ರಹದಿಂದ ನಿನ್ನನ್ನು ಪಡೆದಿರುವೆನೋ, ಅಂತಹ ನನ್ನ ಈ ಕೃಪಾದೃಷ್ಟಿಯು ನಿನ್ನ ದೇಹಶೋಷಣಾದಿ ಚಿತ್ತನಿರೋಧರೂಪವಾದ ನನಗನುಗುಣವಾದ ನಿನ್ನ ಆತ್ಮಯೋಗವೆಂಬ ಯೋಗ್ಯತೆಯಿಂದ, ನಿನಗೆ ಸರ್ವಸುಖವನ್ನೂ ಅಭಯವನ್ನೂ ಕೊಡತಕ್ಕದ್ದಾಗುವದು. ನೀನಲ್ಲದೇ ಇತರರಾಗಿದ್ದರೆ ಪರಮಾತ್ಮನ ಹುಬ್ಬಿನಾಟಗಳೆಂಬ ಅವಿದ್ಯೆಗಳಿಂದ ಮೋಹಿತರಾಗಿ ವಿಷಯಾಪೇಕ್ಷೆಗಳೆಂಬ ಅನ್ಯಮನಸ್ಸುಳ್ಳವರಾಗಿ ನನ್ನನ್ನು ಸೇವಿಸುತ್ತಿರಲಿಲ್ಲ. ನಿನ್ನ ನಿಸ್ಪೃಹವಾದ ಭಕ್ತಿ, ಪ್ರೀತಿ, ಸೇವೆಗಳಿಂದ ನೀನು ಸಕಲ ಸೌಭಾಗ್ಯಗಳನ್ನೂ ಅನುಭವಿಸಲು ಯೋಗ್ಯಳಾದ ಸಿದ್ಧಪುರುಷಳಾಗಿರುತ್ತೀಯೆ! ನಿನ್ನ ಸ್ವಧರ್ಮನಿರತೆಯೆಂಬ ಕಾಮಧೇನುವಿನಿಂದ ಕರೆಯಲ್ಪಡುವ ಮಹಾವೈಭವಗಳೆಂಬ ಕ್ಷೀರವನ್ನು ನೀನು ಕುಡಿಯುವಳಾಗು! ನೀನು ಅನುಭವಿಸಲಿರುವ ಸುಖಸಂಪತ್ತಿಗಳು ದೇವೋಪಭೋಗ್ಯ ಸದೃಶಗಳಾಗಿ ಅಶ್ವಮೇಧಾದಿ ಯಾಗಗಳಿಂದಲೂ ಇತರರಿಗೆ ಅಲಭ್ಯಗಳಾಗಿರುವವು, ಎಂದರು.

## ಕರ್ದಮರ ವೈವಾಹಿಕ ಜೀವನ- ವಿಮಾನ ನಿರ್ಮಾಣ

ಕರ್ದಮರ ಮಾತನ್ನು ದೇವಹೂತೀದೇವಿಯು ಕೇಳಿ ಸಂತೋಷದಿಂದ ಸಕಲ ಯೋಗೇಶ್ವರರಾದ ಕರ್ದಮಪ್ರಜೇಶ್ವರರ ಬಳಿಗೆ ಬಂದು, ಸದ್ಭಕ್ತಿ ವಿನಯಭಾವಗಳಿಂದಲೂ, ಅತ್ಯಂತ ಪ್ರೀತಿಭಾವದಿಂದಲೂ, ನಗುತ್ತಾ ಪ್ರಣಯಪೂರ್ವಕ ಓರೆನೋಟದಿಂದ ಪತಿಗೆ ಈ ರೀತಿ ವಿಜ್ಞಾಪನೆಯನ್ನು ಮಾಡಿಕೊಂಡಳು:-

ದ್ವಿಜಶ್ರೇಷ್ಠರೂ, ಯೋಗಸಿದ್ಧರೂ ಆದ ತಾವು ಹೇಳಿದ್ದೂ, ಅಪೇಕ್ಷಿಸಿದ್ದೂ ಸಹ ತಕ್ಷಣವೇ ಆಗುತ್ತದೆ. ಅದಕ್ಕೆ ಏನೂ ಸಂಶಯವಿಲ್ಲ. ನಾನು ನಿಮ್ಮ ಯೋಗಪ್ರಭಾವವನ್ನು ನೋಡಲಪೇಕ್ಷಿಸುವೆನಲ್ಲದೆ, ನಿಮ್ಮನ್ನು ಪತಿಪತ್ನೀಭಾವದಿಂದಹೊಂದಲೂಕಾತುರಳಾಗಿದ್ದೇನೆ. ಏಕೆಂದರೆಪತಿವ್ರತೆಯಾದಸ್ತ್ರೀಗೆಪತಿಯಅಂಗಸಂಗ ಪ್ರಾಪ್ತಿಯಿಂದ ಉತ್ತಮರಾದ ಮಕ್ಕಳು ಹುಟ್ಟಿ, ಅವರಿಂದ ಯಶಸ್ಸು ಪ್ರಾಪ್ತವಾಗುತ್ತದೆ. ಸ್ತ್ರೀಯಾದ ನನಗೆ ಅದಕ್ಕಿಂತ ಹೆಚ್ಚು ಏನಪೇಕ್ಷೆ ಇರುತ್ತದೆ! ಆದುದರಿಂದ ಪ್ರಸನ್ನರಾದ ನಿಮಗೆ ಈ ರೀತಿ ವಿಜ್ಞಾಪಿಸಿಕೊಳ್ಳುತ್ತೇನೆ. ಕಾಮೋಪಭೋಗವು ಗ್ರಾಮ್ಯಸುಖವಾಗಿರುತ್ತಾದರೂ, ಪತ್ನಿಯು ಸಹಜವಾಗಿ ತನ್ನ ಪತಿಯಿಂದ

ಕಾಮೋಪಭೋಗವನ್ನು ಅಪೇಕ್ಷಿಸುವುದು ಧರ್ಮವಾಗಿರುತ್ತದೆ. ಸಕಲವಿದ್ಯಾ ಪಾರಂಗತರಾದ ನೀವು ನನಗೆ ಈ ಕಾಮೋಪಭೋಗವೆಂಬ ವಿದ್ಯೆಯನ್ನು ಧರ್ಮಕ್ಕೆ ಲೋಪಬರದಂತೆ ಚೆನ್ನಾಗಿ ಶಿಕ್ಷಿಸಿ ಕಲಿಸುವರಾಗಿ ಅನುಗ್ರಹಮಾಡಬೇಕು.

ಈ ವಿದ್ಯೆಯನ್ನು ನನಗೆ ಕಲಿಸಬೇಕಾದರೆ ಅದಕ್ಕೆ ಮುಂಚೆ ನೀವು ಮಾಡಬೇಕಾದ ಒಂದು ಕಾರ್ಯವೂ ಇರುತ್ತದೆ. ಏನೆಂದರೆ ಸಕಲ ಭೂಮಂಡಲಕ್ಕೆ ಸಾರ್ವಭೌಮನ ಮಗಳಾದ ನನಗೆ ವಾಸಕ್ಕೆ ಯೋಗ್ಯವಾದ ಒಂದು ಗೃಹನಿರ್ಮಾಣವನ್ನು ನಿಮ್ಮ ಯೋಗಶಕ್ತಿಯಿಂದ ತಾವು ಮಾಡಿ, ಅದರಲ್ಲಿ ನಮಗೆ ಬೇಕಾದ ಅನುಗುಣವಾದ ಭೋಗ ಸಾಮಗ್ರಿಗಳಿರುವಂತೆ ಮಾಡಬೇಕು. ಈಗ ನಾವಿಬ್ಬರೂ ಕೃಶಾಂಗರಾಗಿರುತ್ತೇವೆ. ಯಾವ ನಿಮ್ಮ ರೂಪವನ್ನು ನಾನು ನೋಡಿ, ಕೇಳಿ, ಪೂರ್ವದಲ್ಲಿ ನಿಮ್ಮಲ್ಲನುರಕ್ತಳಾದೆನೋ ಅಂತಹ ರೂಪ ಲಾವಣ್ಯಾತಿಶಯಗಳಿಂದ ಕೂಡಿದವರಾಗಿ, ನನ್ನನ್ನು ಅನುರೂಪಳನ್ನಾಗಿ ಮಾಡಿ, ನನಗೆ ಅತ್ಯಂತಾಪೇಕ್ಷೆಯುಳ್ಳ ನಿಮ್ಮಿಂದ ಕಾಮೋಪಭೋಗವೆಂಬ ವಿದ್ಯೆಯಲ್ಲಿ ಚೆನ್ನಾಗಿ ಶಿಕ್ಷಿತಳಾಗಲು ನಾನು ಬಯಸುತ್ತೇನೆ. ಮನ್ಮಥನ ಬಾಣಗಳಿಂದ ಘಾಯಗೊಂಡು ಬಳಲುತ್ತಿರುವ ನನಗೆ, ವಿಶ್ರಮಿಸಿಕೊಳ್ಳಲು ಅರ್ಹವಾದ ಒಂದು ವಾಸಸ್ಥಾನವನ್ನು ನೀವು ನಿಮ್ಮ ಯೋಗಬಲದಿಂದ ಕಲ್ಪಿಸಿಕೊಡಿ, ಎಂದಳು. ಎಲೈ ಪರೀಕ್ಷಿದ್ರಾಜನೆ, ಮೈತ್ರೇಯರು ವಿದುರನಿಗೆ, ನಂತರ ಕರ್ದಮರು ಏನು ಮಾಡಿದರೆಂಬುದನ್ನು ಹೇಳಿದ್ದನ್ನು ಕೇಳು:-

## ಕರ್ದಮಪ್ರಜಾಪತಿಗಳ ಯೋಗಶಕ್ತಿ

ದೇವಹೂತೀದೇವಿಯ ಮಾತನ್ನು ಕರ್ದಮರು ಕೇಳಿ, ತಮ್ಮ ಪ್ರಿಯಭಾರ್ಯೆಯ ಮನೋರಥವನ್ನು ಈಡೇರಿಸುವುದಕ್ಕಾಗಿ, ತಮ್ಮ ಯೋಗಶಕ್ತಿಯಿಂದ ಒಂದು ಮಹದಾಶ್ಚರ್ಯಕರವಾದ ವಿಮಾನವನ್ನು ಆ ಕೂಡಲೇ ಸೃಷ್ಟಿಸಿದರು. ಆ ವಿಮಾನವು, ಯೋಗಬಲದಿಂದ ಅಪೇಕ್ಷಿಸಿದ ಸ್ಥಳಕ್ಕೆ ಕೂಡಲೇ ಹೋಗಬಲ್ಲುದೂ, ಅಪೇಕ್ಷಿಸಿದ ಸಮಸ್ತಾಭೀಷ್ಟಗಳನ್ನೂ ಕಲ್ಪವೃಕ್ಷದಂತೆ ಕೊಡತಕ್ಕದ್ದೂ ಆಗಿತ್ತು. ದಿವ್ಯರತ್ನಗಳಿಂದ ಮಾಡಲ್ಪಟ್ಟು, ಮಣಿಸ್ತಂಭಗಳಿಂದ ಅಲಂಕೃತವಾಗಿತ್ತು. ಎಲ್ಲಾ ಕಾಲಗಳಲ್ಲಿಯೂ ಸುಖವನ್ನುಂಟುಮಾಡತಕ್ಕ ದಿವ್ಯಾಸನಾದಿಗಳಿಂದ ಶೋಭಿಸುತ್ತಿತ್ತು. ವಿಚಿತ್ರರತ್ನಖಚಿತ ಪೀಠಗಳಿಂದಲೂ, ದಿವ್ಯಬಾವುಟಗಳಿಂದಲೂ, ಪುಷ್ಪ ಮಾಲೆಗಳಿಂದಲೂ ಅಲಂಕೃತವಾಗಿ, ದುಂಬಿಗಳು ಝೇಂಕರಿಸುತ್ತಿದ್ದವು. ಪುಷ್ಪ ಸೌರಭವು ಘಮಘಮಿಸುತ್ತಿತ್ತು. ದಿವ್ಯಪೀತಾಂಬರಗಳು, ಕುಪ್ಪಸಗಳು, ಉಡುವಸ್ತ್ರ ಪೋಷಾಕುಗಳು, ಇವುಗಳು ಸಮೃದ್ಧಿಯಾಗಿ ತುಂಬಿದ್ದವು. ಆ ವಿಮಾನಗಳಲ್ಲಿ ಅನೇಕ ಅಂತಸ್ತುಗಳಿದ್ದವು. ಪ್ರತಿ ಅಂತಸ್ತಿನ ಪ್ರತಿಕೊಠಡಿಗಳಲ್ಲೂ ಸರ್ವಭೋಗಸಾಧನಗಳೂ

ಇಡಲ್ಪಟ್ಟಿದ್ದವು. ಭಂಗಾರದಿಂದ ರಚಿತವಾದ, ಅತ್ಯಂತ ಸುಖಸ್ಪರ್ಶವುಳ್ಳ ಒರಗುದಿಂಬುಗಳಿಂದಲೂ, ಸುಪ್ಪತ್ತಿಗೆ, ಹೊದ್ದಿಕೆಗಳಿಂದ ಕೂಡಿದ ಹಂಸತೂಲಿಕಾತಲ್ಪಗಳು ಅನೇಕವಿಧವಾಗಿ ಇದ್ದವು. ಅಲ್ಲಲ್ಲಿ ಶಿಲ್ಪಶಾಸ್ತ್ರಪ್ರವೀಣರಿಂದ ಮಾಡಲ್ಪಟ್ಟ ದಿವ್ಯಸ್ತ್ರೀವಿಗ್ರಹಗಳು ಪ್ರತಿಷ್ಠಿತವಾಗಿದ್ದವು.

ಬಾಗಿಲುಗಳು ವಜ್ರದ ಹಲಗೆಗಳನ್ನು ಭಂಗಾರದ ಮೈಗಟ್ಟಿನಲ್ಲಿ ಸೇರಿಸಿ ಮಾಡಲ್ಪಟ್ಟಿದ್ದವು. ಪದ್ಮರಾಗ, ಗೋಮೇಧಿಕ, ನೀಲ, ಪಚ್ಚೆಮುಂತಾದ ರತ್ನಗಳಿಂದ ರಚಿತಗಳಾದ ಜಗುಲಿಗಳು ಬಾಗಿಲುಗಳ ಎರಡು ಕಡೆಗಳಲ್ಲೂ ಇದ್ದವು. ಆ ಜಗುಲಿಗಳ ಮೇಲೆ ಮರಕತದಿಂದ ರಚಿಸಲ್ಪಟ್ಟ ಪುಷ್ಪ ವಾಟಿಕೆಗಳಲ್ಲಿ, ಮನೋಹರಗಳಾದ ಗಿಡಗಳು ಶೋಭಿಸುತ್ತಿದ್ದವು. ವಿಮಾನಕ್ಕೆ ಇಂದ್ರನೀಲದಿಂದ ರಚಿತಗಳಾದ ಶಿಖರಗಳೆಂಬ ಕಲಶಗಳು ಭಂಗಾರದ ಗೋಪುರಗಳಲ್ಲಿದ್ದವು. ಆ ವಿಮಾನದ ಗೋಡೆಗಳು ವಜ್ರದಿಂದ ಮಾಡಲ್ಪಟ್ಟು, ಪದ್ಮರಾಗಮಣಿಗಳಿಂದ ವಿಚಿತ್ರವಿಚಿತ್ರವಾಗಿ ಚಿತ್ರಿತವಾಗಿದ್ದವು. ಒಂದೊಂದೂ ನೋಡಲು ಬಹಳ ರಮಣೀಯವಾಗಿ ಕಣ್ಣುಗಳನ್ನು ಆಕರ್ಷಿಸುವಂತಿದ್ದವು. ಅದರಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ವಿಮಾನಗಳು ತೂಗುಹಾಕಲ್ಪಟ್ಟಿದ್ದವು.

ಅನರ್ಘ್ಯರತ್ನಗಳಿಂದಲೂ, ಭಂಗಾರದಿಂದಲೂ ನಿರ್ಮಿಸಿದ ದಿವ್ಯತೋರಣಗಳು ಸುತ್ತಲೂ ಕಟ್ಟಲ್ಪಟ್ಟಿದ್ದವು. ಹಂಸಪಕ್ಷಿಗಳೂ, ಪಾರಿವಾಳಗಳೂ ಅಲ್ಲಲ್ಲಿ ಹಾರಾಡುತ್ತಾ ಮಧುರವಾಗಿ ಕೂಗುತ್ತಿದ್ದವು. ಅವು ತಮ್ಮಂತೆ ಆಕಾರವುಳ್ಳ ಕೃತ್ರಿಮಪಕ್ಷಿಗಳಿಂದ ಅಲಂಕೃತವಾದ ವಿಮಾನದ ಪಕ್ಷಿಗಳನ್ನು ನೋಡಿ ತಮ್ಮಂತೆಯೇ ಸಹಜವಾದ ಪಕ್ಷಿಗಳೆಂದು ಭಾವಿಸಿ ಅವುಗಳ ಸಮೀಪಕ್ಕೆ ಹಾರಿಹೋಗಿ ನೋಡಿ, ಕೂಗಿ ಶಬ್ದಗಳನ್ನು ಮಾಡುತ್ತಿದ್ದವು. ಆ ವಿಮಾನದಲ್ಲಿ ವಿಹಾರಸ್ಥಾನಗಳೂ, ಅಲ್ಲಲ್ಲಿ ಶಯನಗಳೂ, ವಿಭಾಗಿಸಿದ ಅನೇಕ ಪ್ರಾಂಗಣಗಳೂ ರಚಿಸಲ್ಪಟ್ಟು, ಸರ್ವಸುಖ ಸೌಕರ್ಯಗಳನ್ನೂ ಉಂಟುಮಾಡುವಂತೆ ಆಶ್ಚರ್ಯಕರವಾಗಿತ್ತು.

## ಮುಪ್ಪನ್ನು ತ್ಯಜಿಸಿ ಯೌವ್ವನ ಸ್ವೀಕಾರ

ಈ ರೀತಿಯಲ್ಲಿ ನಿರ್ಮಿತವಾದ ವಿಮಾನವನ್ನು ದೇವಹೂತೀದೇವಿಯು ಅಷ್ಟೇನೂ ತೃಪ್ತಳಾಗದವಳಂತೆಯೂ ನೋಡುತ್ತಿದ್ದಳು. ಸರ್ವಪ್ರಾಣಿಗಳ ಮನೋಭಾವನೆಯನ್ನರಿತ ಕರ್ದಮರು ದೇವಹೂತಿಯ ಅತೃಪ್ತಿಗೆ ಕಾರಣವನ್ನು ತಿಳಿದು, ಎಲೈ ಸೌಮ್ಯಳೆ! ನೀನು ಈ ಸರಸ್ವತೀನದಿಯಲ್ಲಿ ಪರಮಾತ್ಮನ ಕರುಣಾಪೂರ್ಣವಾದ ನೇತ್ರಬಿಂದುವಿನಿಂದ ಪವಿತ್ರಿಸಲ್ಪಟ್ಟು, ಇದರಲ್ಲಿ ಸ್ನಾನಮಾಡುವವರ ಸಕಲಮನೋಭೀಷ್ಟಗಳನ್ನು ಸಲ್ಲಿಸುವಂತಹ ಈ ಬಿಂದುಸರೋವರದ ಪವಿತ್ರವಾದ ಜಲದಲ್ಲಿ

ಸ್ನಾನಮಾಡಿ, ಈ ವಿಮಾನವನ್ನು ಹತ್ತುವಳಾಗು, ಎಂದು ತಾವಾಗಿಯೇ ದೇವಹೂತಿದೇವಿಗೆ ಹೇಳಿದರು. ಪತಿಯ ಮಾತನ್ನು ಕೇಳಿ ದೇವಹೂತಿದೇವಿಯು ತನ್ನ ಕಮಲದಳನೇತ್ರಗಳಿಂದ ಕರ್ದಮರನ್ನು ನೋಡಿ, ಅವರ ಆಜ್ಞೆಯನ್ನು ಸ್ವೀಕರಿಸಿ, ಜಟೆಕಟ್ಟಿದ ತನ್ನ ಕೂದಲನ್ನು ತುರುಬಿನಂತೆ ಸುತ್ತಿ ಮೇಲಕ್ಕೆ ಕಟ್ಟಿ ನೆರಿಗೆಗಳನ್ನು ಕಟ್ಟಿಕೊಂಡು, ತನ್ನ ಬಾಡಿದ ಸ್ತನಗಳನ್ನು ಆಚ್ಛಾದಿಸಿ, ಕೃಷವಾದ ಅಂಗಗಳನ್ನು ನೋಡಿಕೊಳ್ಳುತ್ತಾ, ಸ್ನಾನಮಾಡುವುದಕ್ಕಾಗಿ ಬಿಂದುಸರೋವರದ ಜಲವನ್ನು ಪ್ರವೇಶಿಸಿದಳು.

ಜಲವನ್ನು ಪವೇಶಿಸುತ್ತಿರುವ ದೇವಹೂತಿಗೆ ತಕ್ಷಣ ಸುತ್ತಲೂ ಸಮಾನವಯಸ್ಸುಳ್ಳ, ರೂಪ, ಯೌವ್ವನ ಸಂಪನ್ನೆಯರಾದ ಒಂದು ಸಹಸ್ರಜನ ಕನ್ನಿಕೆಯರು ಸರ್ವಾಲಂಕಾರಭೂಷಿತರಾಗಿ ಕಾಣಿಸಿಕೊಂಡು, ಎಲೈ ದೇವಿಯೆ ನಾವು ನಿನ್ನ ದಾಸೀಜನರು. ನಮಗೆ ನೀನು ಏನೇನು ಆಜ್ಞಾಪಿಸುವಿಯೋ ಎಲ್ಲವನ್ನೂ ನಾವು ಮಾಡುವೆವು ಎಂದು ಕೈಗಳನ್ನು ಮುಗಿದುಕೊಂಡು ಪ್ರಾರ್ಥಿಸಿದರು. ನಂತರ ಪ್ರತ್ಯುತ್ತರವನ್ನಪೇಕ್ಷಿಸದೆ ಸರ್ವರೂ ಸೇರಿ ಮಂಗಳಸ್ನಾನವನ್ನು ದೇವಹೂತಿದೇವಿಗೆ ಮಾಡಿಸಿ, ದಿವ್ಯವಾದ ಪೀತಾಂಬರ, ಕುಪ್ಪ ಸ ಮತ್ತು ಸರ್ವಾಲಂಕಾರಗಳಿಂದ ಆಕೆಗೆ ಅಲಂಕರಿಸಿದರು. ಆ ಆಭರಣಗಳು ಅನರ್ಘ್ಯರತ್ನಗಳಿಂದ ಮಾಡಲ್ಪಟ್ಟು ಸೂರ್ಯನಂತೆ ಹೊಳೆಯುತ್ತಿದ್ದವು. ಅಲಂಕೃತಳಾದ ನಂತರ ದೇವಹೂತಿದೇವಿಯ ಮುಂದೆ ನಿಲುವುಗನ್ನಡಿಯನ್ನು ನೋಡಿಕೊಳ್ಳುವುದಕ್ಕಾಗಿ ತಂದು ಹಿಡಿದರು.

ಸ್ತ್ರೀಯರಿಗೆ ಮಂಗಳಕಾಲ ಉತ್ಸವಕಾಲಗಳಲ್ಲಿ ಅಭ್ಯಂಗನ ಶಿರಸ್ನಾನವೂ, ಬಾಕಿಯಕಾಲದಲ್ಲಿ ಕಂಠಮಾತ್ರವೂ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಈ ರೀತಿಯಾಗಿ, ಪರಿವಾರ, ದಾಸೀವಿದ್ಯಾಧರ ಕನ್ನಿಕೆಯರಿಂದ ಮಂಗಳಸ್ನಾನ, ಅಲಂಕಾರಗಳು ಮಾಡಲ್ಪಟ್ಟ ತನ್ನರೂಪವನ್ನು ದೇವಹೂತೀದೇವಿಯು ಕನ್ನಡಿಯಲ್ಲಿ ನೋಡಿಕೊಂಡು, ಅದರಲ್ಲಿ ತನ್ನ ದೇಹವು ಸ್ವಚ್ಛವೂ, ಅತ್ಯಂತ ಪ್ರಕಾಶಮಾನವೂ, ಪುಷ್ಟಗಳಾದ ಎದೆ, ಗುಂಡಾದ ಸ್ತನಗಳು ಮತ್ತು ಸರ್ವಾಯವಗಳೂ ಮೊದಲಿನಂತೆ ಸರ್ವಾಂಗಸುಂದರವೂ, ಸರ್ವಾಭರಣಗಳಿಂದಲೂ, ಅನರ್ಘ್ಯರತ್ನಹಾರಗಳಿಂದಲೂ, ನವರತ್ನಖಚಿತವಡ್ಯಾಣ, ಕಾಂಚೀದಾಮಾದಿ ದಿವ್ಯ ಆಭರಣಗಳಿಂದ ಅಲಂಕೃತವಾಗಿಯೂ, ಕಿಂಕಿಣೀ ಶಬ್ದಮಾಡುವ ಪಾದಾಭರಣಗಳಿಂದ ಶೋಭಿತವಾಗಿಯೂ, ನಿರ್ಮಲವಾದ ಸ್ವಚ್ಛಧವಳವಾದ ಶಂಖದಂತೆ ರಮ್ಯವಾದ ಕುತ್ತಿಗೆ, ಪದ್ಮದಂತೆ ಶೋಭಾಯಮಾನವಾದ ಮುಖಕಮಲವನ್ನೂ, ಸಹಸ್ರಾರು ನೀಲಾಲಕಗಳೆಂಬ ಕೋಮಲ ಮುಂಗುರುಳುಗಳಿಂದ ಅಲಂಕೃತವಾದ ಮುಖಮಂಡಲವನ್ನೂ, ದಿವ್ಯಕೇಶವು ಸರ್ಪದಂತೆ ಹೆರಳುಹಾಕಲ್ಪಟ್ಟು, ಶಿರೋ ಆಭರಣಗಳಿಂದ ಭೂಷಿತವಾಗಿರುವುದನ್ನೂ ಕಂಡಳು. ಸುಂದರವಾದ ಮನೋಹರವಾದ ಹುಬ್ಬುಗಳಿಂದಲೂ, ಪೋಣಿಸಿದ ಮುತ್ತುಗಳಂತೆ ಹೊಳೆಯುವ ದಿವ್ಯದಂತಪಂಜ

ಸ್ತುಗಳಿಂದಲೂ, ನಿರ್ಮಲವಾದ ಹರ್ಷಯುಕ್ತವಾದ ತನ್ನ ಕಣ್ಣಿನ ದೃಷ್ಟಿಯನ್ನೂ ನೋಡಿಕೊಂಡವಳಾಗಿ, ಆಹಾ! ಇಂತಹ ದಿವ್ಯರೂಪವು ಅನುರೂಪನಾದ ಪತಿಯಿಂದ ಕೂಡಿದವಳಾಗಿದ್ದರೇ ತಾನೇ ಪ್ರಯೋಜನವೆಂದು ಭಾವಿಸುವುದರೊಳಗಾಗಿಯೇ, ತಾನು ಹದಿನಾರುವರ್ಷಪ್ರಾಯದವರಂತೆ ದೇವತಾಸಮಾನಸುರೂಪಿಗಳೂ, ಸರ್ವಾಲಂಕಾರಭರಿತರೂ ಆದ ತನ್ನ ಪತಿಯಾದ ಕರ್ದಮಪ್ರಜೇಶ್ವರರ ಬಳಿಯಲ್ಲೇ, ಆ ಸಹಸ್ರಜನ ವಿದ್ಯಾಧರಸ್ತ್ರೀಯರಿಂದ ಸೇವಿತಳಾಗಿ, ಅವರ ಸ್ವಸ್ತಿವಾಕ್ಯಗಳನ್ನು ಕೇಳುತ್ತಾ ಇರುವುದನ್ನು ಕಂಡಳು. ಕರ್ದಮಪ್ರಜೇಶ್ವರರ ಅಪಾರಯೋಗಮಹಿಮೆಯನ್ನು ಬಲ್ಲವಳಾದರೂ, ದೇವಹೂತಿದೇವಿಯು ಅವರ ತಪಃಪ್ರಭಾವದಿಂದ ತಮ್ಮಿಬ್ಬರಿಗೂ ಪ್ರಾಪ್ತವಾದ, ದಿವ್ಯರೂಪ ಅಲಂಕಾರಾದಿ ವೈಭವಗಳಿಂದ ಮುಗ್ಧಳಾಗಿ ಆಶ್ಚರ್ಯಪರವಶಳಾದಳು.

## ದೇವಲೋಕದಲ್ಲಿ ದಂಪತಿಗಳ ವಿಹಾರ ಹಾಗೂ ನವ ಪುತ್ರಿಯರ ಜನನ

ಕರ್ದಮರು ಮಂಗಳಸ್ನಾನಮಾಡಿ, ಸರ್ವಾಲಂಕಾರ, ದಿವ್ಯಪೀತಾಂಬರ ದುಕೂಲಾದಿಗಳಿಂದ ಶೋಭಿತಳಾಗಿ, ಅಪೂರ್ವವಾದ ಸೌಂದರ್ಯಾತಿಶಯದಿಂದ ಪ್ರಕಾಶಿಸುತ್ತಿರುವ ತಮ್ಮ ಪತ್ನಿಯನ್ನು ನೋಡಿ, ಅನುರೂಪವನ್ನು ಹೊಂದಿದ ತಾವು, ತಮ್ಮ ಪತ್ನಿಯಲ್ಲಿ ಪರಮ ಅನುರಾಗವನ್ನು ಹೊಂದಿದವರಾಗಿ, ಪತ್ನೀ ಮತ್ತು ಪರಿವಾರ ಸ್ತ್ರಿಜನರೊಡನೆ ಆ ದಿವ್ಯವಿಮಾನವನ್ನೇರಿದರು. ಆ ವಿಮಾನವಾದರೋ ಸ್ವಭಾವದಿಂದ ತಾನೇ ಕರ್ದಮರಿಗೆ ವಿರೋಧಮಾತ್ರ ಚಿಂತಿಸಿದವರನ್ನೂ ನಾಶಮಾಡುವ ಶಕ್ತಿಯುಳ್ಳದ್ದಾಗಿತ್ತು. ಆದುದರಿಂದ ತಮ್ಮ ಪತ್ನಿಯೊಡನೆ ಆಲಿಂಗನ, ಚುಂಬನ, ಸುರತಕ್ರೀಡಾದಿಗಳಿಂದ ದೇವಹೂತೀದೇವಿಗೆ ಕಾಮೋಪಭೋಗವಿದ್ಯೆಯಲ್ಲಿ ಶಿಕ್ಷಿಸುವುದಕ್ಕೆ ಆ ವಿಮಾನದಲ್ಲಿ ಸರ್ವವೂ ಸರ್ವದಾ ಅನುಕೂಲಸಂಪತ್ತಿದ್ದಿತ್ತೇ ಹೊರತು, ಪ್ರತಿಕೂಲವೇನೂ ಇರಲಿಲ್ಲ. ಪರಿವಾರದವರೆಲ್ಲರೂ ದೇವತಾಸ್ತ್ರೀಜನರೇ ಆಗಿದ್ದುದರಿಂದ ದೇವಹೂತೀದೇವಿಗೆ ಸಕಲವಿಧಸತ್ಕಾರಗಳಿಗೆ ಏನೂ ಕೊರತೆ ಇರಲಿಲ್ಲ. ಇವರ ಮಧ್ಯದಲ್ಲಿ ಅಸಮಾನರೂಪರೂ ತರುಣರೂ ಆದ ಕರ್ದಮರು, ನಕ್ಷತ್ರಗಣಗಳಿಂದ ಕೂಡಿದ ಪೂರ್ಣಚಂದ್ರನಂತೆ ಆ ವಿಮಾನದಲ್ಲಿ ಶೋಭಿಸುತ್ತಿದ್ದರು.

ಪ್ರೇಮಾಲಿಂಗನವೆಂಬ ತಮ್ಮ ದೇಹಘರ್ಷಣದಿಂದ ದೇವಹೂತೀದೇವಿಯ ದೇಹವನ್ನು ಚೆನ್ನಾಗಿ ಪೀಡಿಸಿದವರಾಗಿ, ಅಧರಪಾನವೆಂಬ ಸುಧಾಪಾನದಿಂದ ಅವರ ಅಂತಃಸ್ತಾಪಗಳಿಗೆ ಪರಿಹಾರೋಪಾಯವನ್ನು ಮಾಡುತ್ತಾ, ಸುರತಕ್ರೀಡೆಯೆಂಬ ಕಾಮೋಪಭೋಗವಿದ್ಯೆಯನ್ನು ವಿಧವಿಧವಾಗಿ ಶಿಕ್ಷಿಸುವುದಕ್ಕಾಗಿ, ಆ ವಿದ್ಯೆಗೆ ಅಂಗಗಳೂ, ಸ್ಥಾನಭೂತಗಳೂ ಆದ ಅಷ್ಟದಿಕ್ಪಾಲಕರ ಮತ್ತು ಸ್ವರ್ಗಲೋಕದ ಕ್ರೀಡಾವಿಹಾರಸ್ಥಾನಗಳಲ್ಲಿಯೂ, ನಂದನವನದಲ್ಲಿಯೂ, ಸಪ್ತಕುಲಾಚಲಗಳೆಂಬ

ಪರ್ವತಗಳಲ್ಲಿಯೂ, ದೇವತಾಕ್ರೀಡಾಸ್ಥಾನಗಳಾದ ದಿವ್ಯಪರ್ವತಗುಹೆಗಳೂ, ಪುಷ್ಪಕವನ, ಮಾನಸಸರೋವರಾದಿ ಸಕಲದೇವಲೋಕಗಳಿಗೂ, ತಮ್ಮ ವಿಮಾನದಲ್ಲಿ ಕುಳಿತು ಸಂಚರಿಸಿ, ಎಲ್ಲಾ ಸ್ಥಳಗಳನ್ನೂ ತಮ್ಮ ಪತ್ನಿಗೆ ತೋರಿಸುತ್ತಾ ಅತ್ಯಂತವೈಭವದಿಂದ ಕರ್ದಮರು ಬಹುಕಾಲ ಪತ್ನಿಯೊಡನೆ ವಿಹಾರಮಾಡಿದರು.

ಉದಯಿಸಿದ ಸೂರ್ಯನಂತೆ ದೇದೀಪ್ಯಮಾನವಾದ ಇವರ ವಿಮಾನವು ಅಷ್ಟದಿಕ್ಪಾಲಕರ ಲೋಕಗಳಲ್ಲಿ ಸಂಚರಿಸುತ್ತಿದ್ದಾಗ, ಆ ವಿಮಾನದ ವೈಭವವನ್ನು ದೂರದಿಂದ ದೇವತೆಗಳೂ, ಸಿದ್ಧ, ಸಾಧ್ಯ, ಕಿಂಪುರುಷರೂ ನೋಡಿ ಮುಕ್ತಕಂಠದಿಂದ ಹೊಗಳುತ್ತಿದ್ದರು. ಈ ರೀತಿಯಾಗಿ ಕರ್ದಮರು ತಮ್ಮ ಪತ್ನೀಸಮೇತರಾಗಿ, ಹೇಗೆ ಕುಬೇರನು ತನ್ನ ಪುಷ್ಪಕವಿಮಾನದಲ್ಲಿ ಕುಳಿತು ಸ್ವೇಚ್ಛೆಯಾಗಿ ಸಂಚರಿಸುತ್ತಾನೋ, ಅದರಂತೆ ಭೂಮಂಡಲವನ್ನೆಲ್ಲಾ ಸಂಚರಿಸಿ, ನೋಡಬೇಕಾದ ಸಕಲವಿಹಾರಸ್ಥಾನಗಳಲ್ಲೂ ಪತ್ನಿಯೊಡನೆ ವಿಹಾರಮಾಡಿ, ಪುನಃ ತಮ್ಮ ಆಶ್ರಮಕ್ಕೆ ಹಿಂತಿರುಗಿದರು.

ಪರಮಾತ್ಮನ ಅತ್ಯಂತ ಭಕ್ತರಾಗಿ ಪರಮಾನುಗ್ರಹವನ್ನು ಪಡೆದ ಧನ್ಯರಿಗೆ ಯಾವ ವೈಭವವು ತಾನೇ ಉಂಟಾಗಲಾರದು? ಆಶ್ರಮಕ್ಕೆ ಬಂದನಂತರ ವಿಮಾನವನ್ನು ತ್ಯಜಿಸಿ ತಮ್ಮ ಯೋಗಶಕ್ತಿಯಿಂದ ದಿವ್ಯಉದ್ಯಾನಗಳಿಂದ ಕೂಡಿದ ವಜ್ರವೈಢೂರ್ಯಾದಿ ನಿರ್ಮಿತ, ಸಕಲ ಭೋಗೋಪಯುಕ್ತ ರಮ್ಯಭವನವನ್ನು ನಿರ್ಮಾಣಮಾಡಿ, ಪತ್ನಿಯೊಡನೆ ಪ್ರವೇಶಿಸಿದರು. ಆಗ ಸುರತಕ್ರೀಡೆಯಲ್ಲಿ ಆಸಕ್ತಳಾಗಿ ಹಂಸತೂಲಿಕಾತಲ್ಪದಲ್ಲಿ ಅನುವಾಗುತ್ತಿದ್ದ ದೇವಹೂತೀದೇವಿಯನ್ನು ನೋಡಿ, ತಾವು ಒಂಭತ್ತು ಬೇರೆಬೇರೆ ಶರೀರಗಳನ್ನು ಧರಿಸಿ, ದೇವಹೂತಿಯ ಶರೀರವನ್ನೂ ಬೇರೆಬೇರೆ ಒಂಭತ್ತುರೂಪಗಳನ್ನು ಮಾಡಿಕೊಂಡು, ದಿವ್ಯಪರ್ಯಂಕವನ್ನು ಆಶ್ರಯಿಸಿ ಪತ್ನಿಯೊಡನೆ ಸುರತಕ್ರೀಡೆಯಲ್ಲಿ ಆಸಕ್ತರಾದರು.

ಹೀಗೆ ಸಂಭೋಗಾಸಕ್ತರಾದ ದಂಪತಿಗಳಿಗೆ ಒಂದೊಂದು ವರ್ಷವು, ಒಂದೊಂದು ಮುಹೂರ್ತದಂತೆ, ನೂರುವರ್ಷಗಳಕಾಲ ಇವರಿಗೆ ತಿಳಿಯದೇ ಕಳೆದುಹೋದವು. ಆಗ ಒಂಭತ್ತುರೂಪಗಳಿಂದಲೂ ದೇವಹೂತಿದೇವಿಯರು ಕರ್ದಮರ ಅಮೋಘವೀರ್ಯವನ್ನು ಗರ್ಭದಲ್ಲಿ ಧರಿಸಿದರು. ಯೋಗಸಾಮರ್ಥ್ಯದಿಂದ ರಚಿಸಲ್ಪಟ್ಟ ಸರ್ವಸುಖಮಯವಾದ ಆ ಹಂಸತೂಲಿಕಾತಲ್ಪದಲ್ಲಿ ಭೋಗವನ್ನು ಪತಿಯಿಂದ ಹೊಂದುತ್ತಿದ್ದ ದೇವಹೂತೀದೇವಿಗೆ ಆ ನೂರುವರ್ಷಗಳು ಒಂದು ಮುಹೂರ್ತದಂತೆ ಆಯಾಸರಹಿತವಾಗಿ ತೋರಿತು. ಈ ರೀತಿಯಾಗಿ ತಮ್ಮ ಮನೋರಥವನ್ನು ಹೊಂದಿದ ದೇವಹೂತೀದೇವಿಯರು ಒಂಭತ್ತುಗರ್ಭಗಳನ್ನು ತಕ್ಷಣವೇ ಪ್ರಸವಿಸಿದರು. ಆಗ ದಿವ್ಯರೂಪ ಯೌವ್ವನಸಂಪನ್ನರೂ, ಸಮಸ್ತಸದ್ಗುಣಶೀಲವತಿಯರೂ ಆದ ಒಂಭತ್ತುಜನ ಹೆಣ್ಣುಮಕ್ಕಳು ಹುಟ್ಟಿದರು.

ಆ ಮಕ್ಕಳದೇಹದಿಂದ ದಿವ್ಯವಾದ ಕಮಲಗಳ ಸುಗಂಧವು ಸರ್ವತ್ರವ್ಯಾಪಿಸಿತು. ಅವರೆಲ್ಲರೂ ಪ್ರಕಾಶಮಾನರಾಗಿ ರೂಪಗುಣಶೀಲಾದಿಗಳಲ್ಲಿ, ದೇವಹೂತೀದೇವಿಯನ್ನೇ ಹೋಲುವಂತಿದ್ದರು.

## ಯೋಗ್ಯ ಪುತ್ರನಿಗಾಗಿ ಪ್ರಾರ್ಥನೆ

ಕರ್ದಮಪ್ರಜೇಶ್ವರರು ಪುತ್ರಿಯರು ಹುಟ್ಟಿದ್ದನ್ನು ನೋಡಿ ನಂತರ ವಿಷಯಾದಿಗಳಲ್ಲಿ ಸನ್ನಿಹಿತವಾಗಿದ್ದ ತಮ್ಮ ಮನಸ್ಸನ್ನು ಹಿಂತಿರುಗಿಸಿಕೊಂಡು, ಪರಮಹಂಸಾಶ್ರಮವೆಂಬ ಯತ್ಯಾಶ್ರಮವನ್ನು ಕೈಕೊಳ್ಳಲು ನಿಶ್ಚಯಿಸುತ್ತಿರುವುದನ್ನು ಪತಿಯಮುಖಭಾವದಿಂದ ದೇವಹೂತೀದೇವಿಯರು ತಿಳಿದರು. ನಂತರ ದೇವಹೂತೀದೇವಿಯರು ತಮಗೆ ಪುತ್ರನೊಬ್ಬನು ಉಂಟಾಗಲೆಂಬ ಅಪೇಕ್ಷೆಯಿಂದ, ಪತಿಯ ಅಂಗಸಂಗವು ಪುನಃ ತಮಗೆ ಪ್ರಾಪ್ತವಾಗಲೆಂಬ ಇಚ್ಛೆಯಿಂದ, ಲಜ್ಜಿತರಾಗಿ ಭೂಮಿಯನ್ನು ನೋಡುತ್ತಾ, ರತ್ನದಮಣಿಗಳಂತೆ ಶೋಭಿಸುತ್ತಿದ್ದ ತಮ್ಮ ಕಾಲ್ಬೆರಳುಗಳ ಉಗುರುಗಳಿಂದ ಭೂಮಿಯ ಮೇಲೆ ರೇಖೆಗಳನ್ನು ಚಿತ್ರಿಸುತ್ತಾ, ವಿನಯದಿಂದ ತಮ್ಮಕಣ್ಣೀರುಗಳನ್ನು ತಡೆದುಕೊಂಡು ಸ್ವಲ್ಪ ನಗುಮುಖದಿಂದ ಕಾಮಾಪೇಕ್ಷೆಯನ್ನು ಸೂಚಿಸುತ್ತಾ, ತಮ್ಮ ಪತಿಯನ್ನು ಕುರಿತು ಈ ರೀತಿಯಾಗಿ ಪ್ರಾರ್ಥಿಸಿ ವಿಜ್ಞಾಪಿಸಿಕೊಂಡರು:-

ಯೋಗೈಶ್ವರ್ಯಸಂಪನ್ನರಾದ ನಿಮ್ಮಿಂದ ನಮ್ಮ ವಿವಾಹಕಾಲದಲ್ಲಿಯೇ ನೀವು ಪ್ರಜಾಸೃಷ್ಟಿಯನಂತರ ಸನ್ಯಾಸಾಶ್ರಮವನ್ನು ವಹಿಸುವಿರೆಂದು ಹೇಳಲ್ಪಟ್ಟಿತ್ತು. ಹಾಗಾದರೂ ಕೂಡ ಸನ್ಯಾಸಾಶ್ರಮವನ್ನು ವಹಿಸತಕ್ಕವರು ಸಮಸ್ತಪ್ರಾಣಿಗಳಿಗೂ ಅಭಯವನ್ನುಕೊಟ್ಟು ಆಶ್ರಮ ಸ್ವೀಕರಿಸುತ್ತಾರಾಗಿ, ನಾನು ಈಗ ತಮ್ಮ ಅಭಯವನ್ನು ಬೇಡುತ್ತೇನೆ.

ಎಲೈ ಬ್ರಾಹ್ಮಣಶ್ರೇಷ್ಠರಾದ ಬ್ರಹ್ಮಜ್ಞಾನಿಗಳೇ, ಯೌವ್ವನವತಿಯರೂ, ರೂಪಗುಣಶೀಲಸಂಪನ್ನರೂ ಆದ ಈ ನಿಮ್ಮ ಹೆಣ್ಣುಮಕ್ಕಳಿಗೆ ಅನುರೂಪರಾದ ಪತಿಯರನ್ನು ದೊರಕಿಸಿಕೊಂಡು, ಇವರನ್ನು ವಿವಾಹಿತರನ್ನಾಗಿ ಮಾಡಿ ಸ್ವಧರ್ಮದಲ್ಲಿ ಪ್ರತಿಷ್ಠಿತರನ್ನಾಗಿ ಮಾಡುವ ಒಂದು ಕಾರ್ಯವನ್ನು ತಾವು ಮಾಡಿಸಬೇಕಾಗಿದೆ. ತಾವು ವನಕ್ಕೆ ಪ್ರವಾಸಮಾಡಿದನಂತರ ನಾನು ಶೋಕದಿಂದ ಕೂಡಿದ ಹಾಗೆ ಇರದಂತೆ, ನನಗೆ ಒಬ್ಬ ಸತ್ಪು ತ್ರದಾನವನ್ನು ಕೊಡಬೇಕು ಎಂದು ನಾನು ಬಯಸುತ್ತೇನೆ. ಇದರಿಂದ ನಾನು ಪುನಃ ಕಾಮಾಪೇಕ್ಷೆಯನ್ನು ನಿಮ್ಮಿಂದ ಬಯಸಿದಂತೆ ತೋರುತ್ತೆ. ಅಸಜ್ಜನರಲ್ಲಿ ಕಾಮಾಪೇಕ್ಷೆಯು ನಿಂದ್ಯವಾದದ್ದು ಮತ್ತು ಸಂಸಾರಬಂಧಕವಾದದ್ದೂ ಆಗಿರುತ್ತದೆ. ಆದರೆ ಸಜ್ಜನರ ಸಹವಾಸವೆನಿಸುವ ಭಗವದ್ಭಕ್ತಪತಿಯ ಅಂಗಸಂಗವು ಸದ್ಯಕ್ಕೆ ನಮ್ಮ ಕುಲಕ್ಕೆ ಶ್ರೇಯಸ್ಸನ್ನು ತರತಕ್ಕ ಸದ್ಗುಣಿಯಾದ

ಪುತ್ರನನ್ನು ಪಡೆಯುವುದಕ್ಕೂ, ತಾವು ಮಹಾಜ್ಞಾನಿಗಳೂ, ಯೋಗೇಶ್ವರರೂ ಆದುದರಿಂದ ನಾನು ಇದುವರಿಗೆ ನಿಮ್ಮಿಂದ ಜ್ಞಾನವನ್ನೂ, ಮೋಕ್ಷಮಾರ್ಗವನ್ನೂ, ಅಪೇಕ್ಷಿಸಿ ಪಡೆಯದಿದ್ದರೂ, ನೀವು ಕರುಣಾಳುಗಳಾದ್ದರಿಂದ ಕಾಲಾಂತರದಲ್ಲಿ ನಿಮ್ಮನುಗ್ರಹದಿಂದ ಮೋಕ್ಷೋಪಯುಕ್ತಜ್ಞಾನವೂ, ಮೋಕ್ಷವೂ ಸಹ ನನಗೆ ಉಂಟಾಗಲು ಸಂಶಯವಿಲ್ಲ.

ಈ ರೀತಿಯಾಗಿ ವಿಷಯಾಭಿಲಾಶೆಯಿಂದ, ಪರಮಾತ್ಮನ ಸೇವೆಯು ನನ್ನಿಂದ ಮಾಡಲ್ಪಡಲಿಲ್ಲ. ನಿಮ್ಮ ಭಗವತ್ಪರವಾದ ಯೋಗಯುಕ್ತ ಅಂತರಂಗವನ್ನು ನಾನು ತಿಳಿಯದೆ, ನಿಮ್ಮಲ್ಲಿ ಇನ್ನೂ ವಿಷಯಸುಖಕ್ಕಾಗಿಯೇ ಪ್ರಸಂಗವನ್ನು ಮಾಡುತ್ತಿರುತ್ತೇನೆ. ಸಾಧುಗಳಾದ ನಿಮ್ಮಲ್ಲಿ ಇಂದ್ರಿಯಾರ್ಥವಾಗಿಯಾದರೂ ಸಂಯೋಗ ಉಂಟಾದರೆ ಅದೂ ಮುಂದೆ ವೈರಾಗ್ಯಕ್ಕೇ ಕಾರಣವಾಗುತ್ತದೆ. ಯಾರು ಸತ್ಕರ್ಮಾನುಷ್ಠಾನಗಳನ್ನು, ಧರ್ಮಗಳನ್ನೂ ವೈರಾಗ್ಯವನ್ನು ಪಡೆಯುವುದಕ್ಕಾಗಿ ಆಚರಿಸುವುದಿಲ್ಲವೋ, ತೀರ್ಥಪಾದರಾದ ತಮ್ಮಂತಹ ಮಹಾತ್ಮರನ್ನು ಯಾರು ಸೇವಿಸುವುದಿಲ್ಲವೋ ಅವರು ಬದುಕಿದ್ದರೂ ಸತ್ತವರಂತೆಯೇ ಸರಿ. ಮೋಕ್ಷವನ್ನೂ ಕೊಡಲು ಸಾಮರ್ಥ್ಯವುಳ್ಳ ನಿಮ್ಮನ್ನು ಪತಿಯಾಗಿ ಹೊಂದಿ, ನಿಮ್ಮನ್ನು ಕಾಮಾಪೇಕ್ಷೆಯನ್ನು ಸಲ್ಲಿಸುವಂತೆ ಬೇಡಿ ವಂಚಿತಳಾಗಿ, ಈ ದೇಹಬಂಧನದಿಂದಲೂ, ಇಹಲೋಕಸುಖವೆಂಬ ಸಂಸಾರಬಂಧನದಿಂದಲೂ ನಾನು ಬಿಡುಗಡೆ ಹೊಂದಲಿಲ್ಲ, ಎಂದಳು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಇಪ್ಪತ್ನಾಲ್ಕನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

# अथ पञ्चविंशोऽध्यायः

**मैत्रेय उवाच**

निर्वेदवादिनीमेवं मनोर्दुहितरं मुनिः।
दयालुः शालिनीमाह शुक्लाभिव्याहृतं स्मरन्॥ १ ॥

ऋषिरुवाचमा खिदो राजपुत्रीत्थमात्मानं प्रत्यनिन्दिते।
भगवांस्तेऽक्षरो गर्भमदूरात् संप्रपत्स्यते॥ २ ॥

धृतव्रता सुभद्रं ते दमेन नियमेन च।
तपोद्रविणदानैश्च श्रद्धया चेश्वरं भज॥ ३ ॥

स त्वयाऽऽराधितः शुक्लो वितन्वन् मामकं यशः।

छेत्ता ते हृदयग्रन्थिमौदर्यो ब्रह्मभावनः ॥ ४ ॥

**मैत्रेय उवाच**

देवहूत्यपि संदेशं गौरवेण प्रजापतेः ।
सम्यक् श्रद्धाय पुरुषं कूटस्थमभजद् गुरुम् ॥ ५ ॥

तस्यां बहुतिथे काले भगवान् मधुसूदनः ।
कार्दमं वीर्यमापन्नो जज्ञेऽग्निरिव दारुणि ॥ ६ ॥

अवादयंस्तदा व्योम्नि वादित्राणि घनाघनाः ।
गायन्ति तं स्म गन्धर्वा नृत्यन्त्यप्सरसो मुदा ॥ ७ ॥

पेतुः सुमनसो दिव्याः खेचरैरपवर्जिताः ।
प्रसेदुश्च दिशः सर्वा अम्भांसि च मनांसि च ॥ ८ ॥

तत् कर्दमाश्रमपदं सरस्वत्या परिश्रितम् ।
स्वयम्भूः सार्धमृषिभिर्मरीच्यादिभिरभ्यगात् ॥ ९ ॥

भगवन्तं परं ब्रह्म सत्त्वेनांशेन शत्रुहन् ।
तत्त्वसंख्यानविज्ञप्त्यै जातं विद्वानजः स्वरा ॥ १० ॥

सभाजयन् विशुद्धेन चेतसा तच्चिकीर्षितम् ।
प्रहृष्यमाणैरसुभिः कर्दमं चेदमभ्यधात् ॥ ११ ॥

ब्रह्मोवाचत्वया मेऽपचितिस्तात कल्पिता निर्व्यलीकतः ।
यन्मे सञ्जगृहे वाक्यं भवान् मानद मानयन् ॥ १२ ॥

एतावत्येव शुश्रूषा कार्या पितरि पुत्रकैः ।
बाढमित्यनुमन्येत गौरवेण गुरोर्वचः ॥ १३ ॥

इमा दुहितरः सत्यस्तव वत्स सुमध्यमाः ।
सर्गमेताः प्रभावैः स्वैर्बृंहयिष्यन्ति नैकधा ॥ १४ ॥

अतस्त्वमृषिमुख्येभ्यो यथाशीलं यथारुचि ।
आत्मजाः परिदेह्यङ्ग विस्तृणीहि यशो भुवि ॥ १५ ॥

वेदाहमाद्यं पुरुषमवतीर्णं स्वमायया ।
भूतानां शेवधिं देहं बिभ्राणं कपिलं मुनिम् ॥ १६ ॥

ज्ञानविज्ञानयोगेन कर्मणामुद्धरंश्च यः ।
हिरण्यकेशः पद्माक्षः पद्ममुद्रापदाम्बुजः ॥ १७ ॥

एष मानवि ते गर्भं प्रविष्टः कैटभार्दनः ।
अविद्यासंशयग्रन्थिं च्छित्त्वा गां विचरिष्यति ॥ १८ ॥

अयं सिद्धगणाधीशः साङ्ख्याचार्यैः सुसम्मतः ।
लोके कपिल इत्याख्यां गन्ता ते कीर्तिवर्धनः ॥ १९ ॥

**मैत्रेय उवाच**

तावाश्वास्य जगत्स्रष्टा कुमारैः सहनारदः ।
हंसो हंसेन यानेन स्वधाम प्रत्यपद्यत ॥ २० ॥

गते शतधृतौ क्षत्तः कर्दमस्तेन चोदितः ।
यथोदितं स्वदुहितॄः प्रादाद् विश्वसृजां ततः ॥ २१ ॥

मरीचये कलां प्रादादनसूयामथात्रये ।
श्रद्धामङ्गिरसेऽयच्छत् पुलस्त्याय हविर्भुवम् ॥ २२ ॥

पुलहाय गतिं युक्तां क्रतवे च क्रियां सतीम् ।
ख्यातिं च भृगवेऽयच्छद् वसिष्ठायाप्यरुन्धतीम् ॥ २३ ॥

अथर्वणेऽददाच्छान्तिं यया यज्ञो वितन्यते ।
विप्रर्षभान् कृतोद्वाहान् सदारान् समलालयत् ॥ २४ ॥

ततस्त ऋषयः क्षत्तः कृतदारा निमन्त्र्य तम् ।
प्रातिष्ठन् नन्दमापन्नाः स्वं स्वमाश्रमण्डलम् ॥ २५ ॥

स चावतीर्णं त्रियुगमाज्ञाय विबुधर्षभम् ।
विविक्त उपसङ्गम्य प्रणम्य समभाषत ॥ २६ ॥

अहो पापच्यमानानां निरये स्वैरमङ्गलैः ।
कालेन भूयसा नूनं प्रसीदन्तीह देवताः ॥ २७ ॥

बहुजन्मविपक्वेन सम्यग् योगसमाधिना ।
द्रष्टुं यतन्ते यतयः शून्यागारेषु यत्पदम् ॥ २८ ॥

स एव भगवानद्य हेलनं नगणय्य नः ।
गृहेषु जातो ग्राम्याणां यः स्वानां पक्षपोषणः ॥ २९ ॥

स्वीयं वाक्यमृतं कर्तुमवतीर्णोऽसि मे गृहे ।
चिकीर्षुर्भगवञ्छर्म भक्तानामभिवर्धनः ॥ ३० ॥

तान्येव तेऽभिरूपाणि रूपाणि भगवंस्तव ।
यानि यानीह रोचन्ते स्वजनानामरूपिणः ॥ ३१ ॥

त्वां सूरिभिस्तत्त्वबुभुत्सयाऽद्धा

सदाभिवादार्हणपादपीठम् ।
ऐश्वर्यवैराग्ययशोऽवबोधवीर्यश्रिया पूर्णमहं प्रपद्ये ॥ ३२ ॥

परं प्रधानं पुरुषं महान्तं कालं कविं त्रिवृतं लोकपालम् ।
आत्मानुभूत्याऽनुगतप्रपञ्चं x

स्वच्छन्दशक्तिं कपिलं प्रपद्ये ॥ ३३ ॥

तं त्वाऽभिपृच्छेऽद्य पतिं प्रजानां त्वयाऽवतीर्णेन उताप्तकामः ।
परिव्राजां पदवीमास्थितोऽहं चरिष्ये त्वां हृदि युञ्जन् विशोकः ॥ ३४ ॥

**भगवानुवाच**

मया प्रोक्तं हि लोकस्य प्रमाणं सत्यलौकिके ।
अथाजनि मया तुभ्यं यदवोचमृतं मुने ॥ ३५ ॥

एतन्मे जन्म लोकेऽस्मिन् मुमुक्षूणां दुराशयात् ।
प्रसंख्यानाय तत्त्वानां समत्वायात्मदर्शिनाम् ॥ ३६ ॥

एष आत्मपथोऽव्यक्तो नष्टः कालेन भूयसा ।
तं प्रवर्तयितुं देहमिमं विद्धि मया भृतम् ॥ ३७ ॥

गच्छ कामं मयाऽऽपृष्टो मयि संन्यस्तकर्मणा ।

जित्वा सुदुर्जयं मृत्युममृतत्वाय मां भज ॥ ३८ ॥

मामात्मानं स्वयंज्योतिः सर्वभूतगुहाशयम् ।
आत्मन्येवात्मना वीक्ष्य विशोकोऽभयमृच्छसि ॥ ३९ ॥

विश्वमेतद्धि शास्त्रेण विज्ञायात्मानमीश्वरम् ।
मुनिः शान्तमनोवाक्यस्तदा नख्यात्युपप्लवः ॥ ४० ॥

मात्र आध्यात्मिकीं विद्यां शमनीं सर्वकर्मणाम् ।
वितरिष्ये यया चासौ भयं चातितरिष्यति ॥ ४१ ॥

**मैत्रेय उवाच**

एवं समुदितस्तेन कपिलेन प्रजापतिः ।
दक्षिणीकृत्य तं प्रीतो वनमेव जगाम ह ॥ ४२ ॥

व्रतं स आस्थितो मौनमात्मैकशरणो मुनिः ।
निःसङ्गो व्यचरत् क्षोणीमनग्निरनिकेतनः ॥ ४३ ॥

मनो ब्रह्मणि युञ्जानो यत् तत् सदसतः परम् ।
गुणावभासे विगुण एकभक्त्याऽनुभाविते ॥ ४४ ॥

निरहङ्कृतिर्निर्ममश्च निर्द्वन्द्वः समदृक् स्वदृक् ।
प्रत्यग्रः शान्तधीर्धीरः प्रशान्तोर्मिरिवोदधिः ॥ ४५ ॥

आत्मानं सर्वभूतेषु भगवन्तमवस्थितम् ।
अपश्यत् सर्वभूतानि भगवत्यपि चात्मनि ॥ ४६ ॥

वासुदेवे भगवति सर्वज्ञे प्रत्यगात्मनि ।
परेण भक्तिभावेन लब्धात्मा मुक्तबन्धनः ॥ ४७ ॥

इच्छाद्वेषविहीनेन सर्वत्र समचेतसा ।
भगवद्भक्तियोगेन प्राप्तो भागवतीं गतिम् ॥ ४८ ॥

## ॥ इति श्रीमद्भागवते (तृतीयस्कन्धे( *3) पञ्चविंशोऽध्यायः ॥

**॥ ಇಪ್ಪತ್ತೈದನೆಯ ಅಧ್ಯಾಯ ॥**

## ಕಪಿಲನಾಮಕ ಪರಮಾತ್ಮನ ಪ್ರಾದುರ್ಭಾವ

ಶ್ರೀಪರಮಾತ್ಮನು ಶುಕ್ಲಶೋಣಿತಸಂಬಂಧ ಶರೀರವುಳ್ಳ ದೇವಹೂತೀದೇವಿಯರ ಗರ್ಭದಿಂದ ಶ್ರೀಕಪಿಲಾಖ್ಯ ಅವತಾರವನ್ನು ಮಾಡಿ, ತನ್ನ ಸಚ್ಚಿದಾನಂದ ಸ್ವರೂಪವಾದ ದೇಹದಿಂದಲೂ ಆವಿರ್ಭೂತನಾದನೆಂದು ಈ ಅಧ್ಯಾಯದಲ್ಲಿ ನಿರೂಪಿಸುವುದಕ್ಕಾಗಿ ಪ್ರಥಮದಲ್ಲಿ ದೇವಹೂತೀದೇವಿಯರ ಮಾತಿಗೆ ಪ್ರಜೇಶ್ವರರು ಏನುತ್ತರವನ್ನು ಕೊಟ್ಟರೋ ಅದನ್ನು ಮೈತ್ರೇಯರು ವಿದುರನಿಗೆ ತಿಳಿಸುತ್ತಾರೆ:-

ಸ್ವಾಯಂಭುವಮನುಪುತ್ರಿಯಾದ ದೇವಹೂತೀದೇವಿಯು, ಹಿಂದಿನ ಅಧ್ಯಾಯದಲ್ಲಿ ವೈರಾಗ್ಯಸೂಚಕವಾದ ಮಾತುಗಳಿಂದ ಕರ್ದಮರಿಗೆ ವಿಜ್ಞಾಪಿಸಿಕೊಂಡಿದ್ದನ್ನು ಕರ್ದಮರು ಕೇಳಿ, ದಯೆಯುಳ್ಳವರಾಗಿ, ಶೋಕರಹಿತನೂ, ಲೋಕಶೋಕನಾಶಕನೂ ಆದುದರಿಂದ ಶುಕ್ಲನಾಮಕನಾದ ಭಗವಂತನು ಹಿಂದೆ ತಮಗೆ ಹೇಳಿದ್ದ ವಾಕ್ಯಗಳನ್ನು ಸ್ಮರಿಸಿಕೊಂಡವರಾಗಿ, ತಮ್ಮ ಪತ್ನಿಗೆ ಈ ರೀತಿ ಹೇಳಿದರು:-

ಎಲೈ ಪರಿಶುದ್ಧಳಾದ ರಾಜಪುತ್ರಿಯೆ! ನೀನು ಈ ರೀತಿಯಾಗಿ ದುಃಖಿಸಬೇಡ. ಶೀಘ್ರದಲ್ಲಿಯೇ ನಿನ್ನ ಗರ್ಭದಲ್ಲಿ ಪುರುಷೋತ್ತಮನಾದ ಪರಮಾತ್ಮನು ತಾನೇ ಅಂಶದಿಂದ ಪುತ್ರನಾಗಿ ಜನಿಸುತ್ತಾನೆ. ನೀನು ಪತಿಶುಶ್ರೂಷೆಯಿಂದ ಸಮಸ್ತವ್ರತಾಚರಣೆಯನ್ನೂ ಮಾಡಿದವಳಾಗಿರುತ್ತೀಯೆ! ನಿನಗೆ ಮಂಗಳವಾಗಲಿ! ನೀನು ಇಂದ್ರಿಯನಿಗ್ರಹ ರೂಪವಾದ ದಮದಿಂದಲೂ, ಭಗವನ್ನಿಷ್ಠೆಎಂಬ ಶಮದಿಂದಲೂ, ಭಗದ್ರೂಪಗುಣಕ್ರಿಯಾಧ್ಯಾನರೂಪ ತಪಸ್ಸಿನಿಂದಲೂ, ದ್ರವ್ಯದಾನಾದಿಗಳಿಂದಲೂ, ಶ್ರದ್ಧೆಎಂಬ ಆಸ್ತಿಕ್ಯಬುದ್ಧಿಯಿಂದಲೂ ಪರಮಾತ್ಮನನ್ನು ಆರಾಧಿಸುವಳಾಗು. ಪರಮಾತ್ಮನು ನಿನ್ನಿಂದ ಆರಾಧಿತನಾಗಿ ನಿನಗೆ ಯೋಗ್ಯ ಉಪಾಸನಾಶಕ್ತಿಯನ್ನು ಕೊಟ್ಟು, ನಮ್ಮ ಪುತ್ರನಾಗಿ ಅವತರಿಸಿ, ನಿನ್ನ ಮನೋಗತ ಅಹಂಕಾರನಿಮಿತ್ತದಿಂದುಂಟಾಗಿರುವ ಶೋಕವನ್ನು ನಿರ್ಮಲವಾದ ತತ್ವಜ್ಞಾನೋಪದೇಶದಿಂದ ನಾಶಮಾಡಿ ನಿನಗೆ ಐಹಿಕಪಾರತ್ರಿಕಸುಖಪ್ರಾಪ್ತಿಯುಂಟು ಮಾಡುತ್ತಾನೆ, ಎಂದರು. ದೇವಹೂತೀದೇವಿಯು ಪತಿಯ ಆಜ್ಞೆಯಂತೆ ಪರಮಶ್ರದ್ಧಾ ಭಕ್ತಿಯಿಂದ ಲೋಕಗುರುವಾದ ಪರಮಾತ್ಮನನ್ನು ಆರಾಧಿಸಿದಳು.

ಈ ರೀತಿ ಬಹುಕಾಲ ಕಳೆದನಂತರ ಅರಣೀಕಾಷ್ಠಗಳನ್ನು ಅಗ್ನಿಯು ತನ್ನ ಅಭಿವ್ಯಕ್ತಿಗೆ ಕಾರಣವನ್ನಾಗಿ ಮಾಡಿಕೊಳ್ಳುವಂತೆ, ಶ್ರೀಪರಮಾತ್ಮನು ಕರ್ದಮರನ್ನೂ ದೇವಹೂತಿಯನ್ನೂ ಅರಣಿಗಳನ್ನಾಗಿ ಮಾಡಿಕೊಂಡು ಕರ್ದಮರವೀರ್ಯವೆಂಬ ವ್ಯಾಜದಿಂದ ದೇವಹೂತೀದೇವಿಯ ಗರ್ಭದಲ್ಲಿ ಅಗ್ನಿಯಂತೆ ಸನ್ನಿಹಿತನಾದನು. ಆ ಕಾಲದಲ್ಲಿ ದೇವತೆಗಳು ದಿವ್ಯವಾದ್ಯಗಳನ್ನು ಆಕಾಶದಲ್ಲಿ ಬಾರಿಸಿದರು. ಗಂಧರ್ವರು ದಿವ್ಯಗಾನಗಳನ್ನು ಮಾಡಿದರು. ಅಪ್ಸರಸರು ದಿವ್ಯನಾಟ್ಯಗಳನ್ನು ಮಾಡಿದರು. ದಿವ್ಯವಾದ ಪರಿಮಳಪುಷ್ಪ ವೃಷ್ಟಿಯನ್ನು ದೇವಹೂತೀದೇವಿಯರ ಮೇಲೆ ದೇವತೆಗಳು ಸುರಿಸಿದರು. ದಿಕ್ಕುಗಳೂ, ಗಗನವೂ, ಜನರಮನಸ್ಸೂ ಉಲ್ಲಾಸದಿಂದ ಶೋಭಿಸುತ್ತಿದ್ದವು. ಆಗ ಬ್ರಹ್ಮದೇವರು ಮರೀಚ್ಯಾದಿಋಷಿಗಳ ಸಮೇತರಾಗಿ, ಆ ಸರಸ್ವತೀನದಿಯತೀರದಲ್ಲಿರುವ ಕರ್ದಮಾಶ್ರಮಕ್ಕೆ ಆಗಮಿಸಿದರು. ಬ್ರಹ್ಮದೇವರು ಸಾಕ್ಷಾತ್ಪರಮಾತ್ಮನು, ಅಜ್ಞಾನಾಖ್ಯಶತ್ರುವನ್ನು ಸಂಹರಿಸುವುದಕ್ಕಾಗಿ ತತ್ವಗಳ ಸಂಖ್ಯೆಗಳನ್ನೂ, ಸ್ವರೂಪವನ್ನೂ ಜ್ಞಾನಿಗಳಿಗೆ ಉಪದೇಶಿಸುವುದಕ್ಕಾಗಿ ದೇವಹೂತೀದೇವಿಯ ಗರ್ಭದಲ್ಲಿ ಸನ್ನಿಹಿತನಾಗಿರುವನೆಂಬುದನ್ನು ತಿಳಿದರು. ಆದರಿಂದ ಬಹಳ ಸಂತೋಷಚಿತ್ತರಾಗಿ ಕರ್ದಮಪ್ರಜೇಶ್ವರರನ್ನು ಕುರಿತು ಈ ರೀತಿ ಹೇಳಿದರು:-

ಎಲೈ ಕರ್ದಮಪ್ರಜೇಶ್ವರನೇ ನೀನು ನನ್ನ ಶುಶ್ರೂಷೆಯನ್ನು ಉತ್ತಮವಾಗಿ ಮಾಡಿರುತ್ತೀಯೆ. ಎಕೆಂದರೆ ಪ್ರಜಾಸೃಷ್ಟಿಯನ್ನು ಮಾಡು, ಎಂಬ ನನ್ನ ವಾಕ್ಯವನ್ನು ನೀನು ನಿರ್ಮಲಮನಸ್ಸಿನಿಂದಲೂ, ಶ್ರದ್ಧೆಯಿಂದಲೂ ಕೇಳಿ, ಆದರಂತೆ ವಿಧೇಯನಾಗಿ ನಡೆದಿರುತ್ತೀಯೆ. ನಿನ್ನಂತಹ ಸತ್ಪುತ್ರನಿಂದ ನನಗೆ ಮರ್ಯಾದೆಯುಂಟಾಯಿತು. ಮಕ್ಕಳು ನಿನ್ನಂತೆ ತಂದೆಯ ಮಾತನ್ನು ಕೇಳಿ, ತಂದೆಯ ಸೇವೆಯನ್ನು ಸಲ್ಲಿಸತಕ್ಕದ್ದು. ಈ ನಿನ್ನ ಪುತ್ರಿಯರಾದ ಮಂಗಳದರ್ಶನರಾದ ಕನ್ನಿಕೆಯರೂ ಮಹಾಪ್ರಭಾವವುಳ್ಳವರಾಗಿ, ಮುಂದೆ ಬಹಳವಾಗಿ ಪ್ರಜಾಭಿವೃದ್ಧಿಯನ್ನು ಮಾಡುವವರಾಗುತ್ತಾರೆ. ಇವರನ್ನು ನೀನು ಅನುರೂಪರಾದ ಈ ಮರೀಚ್ಯಾದಿಋಷಿಗಳಿಗೆ, ಅವರವರ ಶೀಲ ಮತ್ತು ಇಷ್ಟದಂತೆ ವಿವಾಹಮಾಡಿ ಕೊಡುವವನಾಗು. ಆದರಿಂದ ನಿನ್ನ ಯಶಸ್ಸು ಲೋಕದಲ್ಲಿ ಪ್ರಖ್ಯಾತವಾಗಿ ವಿಸ್ತರಿಸುತ್ತದೆ.

ನಿಮ್ಮ ಪುತ್ರತ್ವೇನ ಆದಿಪುರುಷನಾದ ಶ್ರೀಮನ್ನಾರಾಯಣನು, ಕಪಿಲಋಷಿಎಂಬ ಅವತಾರದಿಂದ, ನಿನ್ನ ಪತ್ನಿಯ ಗರ್ಭದಲ್ಲಿ ಸನ್ನಿಹಿತನಾಗಿರುವುದನ್ನು ನಾನು ತಿಳಿದಿರುತ್ತೇನೆ. ಈತನು ತನ್ನ ತತ್ವೋಪದೇಶದಿಂದ ಭಕ್ತರ ಲಿಂಗದೇಹದ ಭಂಗವಾಗುವಂತೆಮಾಡಿ, ಕಪಿಲಮುನಿ ಎಂದು ವಿಖ್ಯಾತನಾಗುವನು. ಜ್ಞಾನ, ವಿಜ್ಞಾನ, ಯೋಗ, ಕರ್ಮಗಳ ಸ್ವರೂಪವನ್ನು ಪ್ರಕಾಶಮಾಡಿ, ಆಸ್ಮರೀಯವಾದ ಸಾಂಖ್ಯಶಾಸ್ತ್ರದ ಪ್ರಭಾವದಿಂದ ಲೋಕದಲ್ಲಿ ಉಂಟಾದ ಅಜ್ಞಾನವನ್ನು ನಾಶಮಾಡಿ, ಸಜ್ಜನರನ್ನು ಉದ್ಧರಿಸುತ್ತಾನೆ.

ಎಲೈ ಮಾನಾರ್ಹಳಾದ ದೇವಹೂತಿಯೆ! ಹಿರಣ್ಯಕೇಶನೆಂಬ ಪೂರ್ಣಜ್ಞಾನ ಆನಂದಮಯಶರೀರನೂ, ಪದ್ಮದಳನೇತ್ರನೂ, ಪಾದಪದ್ಮಗಳಲ್ಲಿ ಧ್ವಜವಜ್ರಾಂಕುಶಗದಾಪದ್ಮಾದಿರೇಖೆಗಳಿಂದ ಶೋಭಿತನೂ, ಆದ ಆ ಕೈಟಭಾಂತಕನಾದ ಶ್ರೀಕೃಷ್ಣನೇ ನಿನ್ನ ಗರ್ಭವನ್ನು ಪ್ರವೇಶಿಸಿರುವನು. ಇವನು ಯೋಗಸಿದ್ಧರ ಸಮೂಹಕ್ಕೆ ಅಧಿಪತಿಯು, ಸಾಂಖ್ಯಾಚಾರ್ಯನೆಂದು ಪ್ರಖ್ಯಾತನು. ಈತನು ಕಪಿಲನೆಂಬ ಹೆಸರಿನಿಂದ ಉದ್ಭವಿಸಿ ನಿನಗೆ ಉತ್ಕೃಷ್ಟ ಯಶಸ್ಸನ್ನುಂಟು ಮಾಡುತ್ತಾನೆ, ಎಂದು ಬ್ರಹ್ಮದೇವರು ಹೇಳಿ, ಎಲೈ! ವಿದುರನೇ! ಬ್ರಹ್ಮದೇವರು ಹಂಸವಾಹನರಾಗಿ ಪರಿವಾರ ಸಮೇತರಾಗಿ ತಮ್ಮ ವಾಸಸ್ಥಾನಕ್ಕೆ ಹೊರಟುಹೋದರೆಂದು ಮೈತ್ರೇಯರು ಹೇಳಿ, ನಂತರ ಕರ್ದಮರು ಮುಂದೆ ಏನು ಮಾಡಿದರೆಂಬುವುದನ್ನು ನಿರೂಪಿಸುತ್ತಾರೆ:-

## ನವ ಪುತ್ರಿಯರ ವಿವಾಹ ಹಾಗೂ ಕರ್ದಮ ಕೃತ ಕಪಿಲಸ್ತುತಿ :-

ಕರ್ದಮರು ಶತಾನಂದರೆಂಬ ಚತುರ್ಮುಖ ಬ್ರಹ್ಮದೇವರ ಆಜ್ಞೆಯಂತೆ, ಆ ಕೂಡಲೇ ತಮ್ಮ ಪುತ್ರಿಯರಲ್ಲಿ ಕಲಾ ಎಂಬುವಳನ್ನು ಮರೀಚಿಋಷಿಗಳಿಗೂ, ಅನಸೂಯಾ ಎಂಬುವಳನ್ನು ಅತ್ರಿಋಷಿಗಳಿಗೂ, ಶ್ರದ್ಧಾದೇವಿಯನ್ನು ಅಂಗೀರಸರಿಗೂ, ಹವಿರ್ಭುವ ಎಂಬ ಪುತ್ರಿಯನ್ನು ಪುಲಸ್ತ್ಯರಿಗೂ, ಗತಿ ಎಂಬುವಳನ್ನು ಪುಲಹರಿಗೂ, ಕ್ರಿಯಾ ಎಂಬುವಳನ್ನು ಕ್ರತು ಎಂಬ ಋಷಿಗಳಿಗೂ, ಖ್ಯಾತಿ ಎಂಬುವಳನ್ನು ಭೃಗುಋಷಿಗಳಿಗೂ, ಅರುಂಧತೀದೇವಿಯನ್ನು ವಸಿಷ್ಠರಿಗೂ ಕೊಟ್ಟು ವಿವಾಹೋತ್ಸವಗಳನ್ನು ನೆರವೇರಿಸಿದರು. ಶಾಂತಿ ಎಂಬುವಳನ್ನು ಅಥರ್ವಣಋಷಿಗಳಿಗೆ ಕೊಟ್ಟು ಲಗ್ನಮಾಡಿದರು. ಈ ಶಾಂತಿದೇವಿಯು ಯಜ್ಞಕ್ಕೆ ಅಭಿಮಾನಿಯು, ಯಜ್ಞವನ್ನು ಧರಿಸತಕ್ಕವಳು ಅಥವ ಸಾಂಗವಾಗಿ ನೆರವೇರುವಂತೆ ಮಾಡತಕ್ಕವಳು. ಈ ರೀತಿಯಾಗಿ ವೈಭವದಿಂದ ಎಲ್ಲಾ ಪುತ್ರಿಯರಿಗೂ ಲಗ್ನಮಾಡಿ, ಅಳಿಯಂದರುಗಳನ್ನು ಪ್ರೀತಿಯಿಂದ ಸ್ವಲ್ಪಕಾಲ ತಮ್ಮ ಆಶ್ರಮದಲ್ಲಿಯೇ ಇಟ್ಟುಕೊಂಡು ಉಪಚಾರಾದಿಗಳಿಂದ ಸಂತೋಷಪಡಿಸಿ, ಅವರಿಗೆ ಸಮೃದ್ಧಿಯಾಗಿ, ದ್ರವ್ಯ, ಗೃಹಾದಿಗಳ ದಾನಮಾಡಿದರು. ಕರ್ದಮರ ಆದರೋಪಚಾರಗಳಿಂದ ಸಂತುಷ್ಟರಾದ ಮರೀಚ್ಯಾದಿಋಷಿಗಳು ತಮ್ಮ ಪತ್ನಿಯರನ್ನು ಕರೆದುಕೊಂಡು ಸುಖದಿಂದ ತಮ್ಮತಮ್ಮ ಆಶ್ರಮಗಳಿಗೆ ಹೊರಟುಹೋದರು.

ಕರ್ದಮರು ನಂತರ ಕೃತ, ತ್ರೇತಾ, ದ್ವಾಪರಗಳೆಂಬ ಮೂರುಯುಗಗಳಲ್ಲಿ ಅವತಾರಮಾಡುವ ನಿಯಮವುಳ್ಳವ ನಾದುದರಿಂದ ತ್ರಿಯುಗನೆಂದು ಕರೆಯಲ್ಪಡುವ ಪರಮಾತ್ಮನು, ಬ್ರಹ್ಮದೇವರು ಹೇಳಿದ್ದಂತೆ, ಕಪಿಲಾವತಾರವನ್ನು ದೇವಹೂತೀದೇವಿಯ ಗರ್ಭದಿಂದ ಆವಿರ್ಭವಿಸಿ ಮಾಡಿದನೆಂಬ ವರ್ತಮಾನವನ್ನು ಕೇಳಿ, ಏಕಾಂತವಾಗಿ ಒಳಗೆಹೋಗಿ ತಮ್ಮ ಕುಮಾರತ್ವೇನ ಅವತರಿಸಿದ

ಸಾಕ್ಷಾತ್ಪರಮಾತ್ಮನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಈ ರೀತಿಯಾಗಿ ವಿಜ್ಞಾಪಿಸಿಕೊಂಡರು:-

ಎಲೈ ಸ್ವಾಮಿಯೇ! ನಿನ್ನ ವ್ಯಾಪಾರವೂ, ಅನುಗ್ರಹವೂ ಆಶ್ಚರ್ಯಕರಗಳಾದವುಗಳು. ನಾವು ಅಮಂಗಳಸ್ವರೂಪವಾದ ಸಂಸಾರವೆಂಬ ನರಕದಲ್ಲಿ, ನಮ್ಮ ಸ್ವಕರ್ಮಗಳೆಂಬ ಪ್ರಯತ್ನಪೂರ್ವಕವಾಗಿ ಚೆನ್ನಾಗಿಬಿದ್ದು, ದುಃಖಾಗ್ನಿಯಿಂದ ಬೇಯುತ್ತಿರುವಾಗ, ನಿನ್ನ ಭಕ್ತರಾದ ತತ್ತ್ವಾಭಿಮಾನಿದೇವತೆಗಳು ನಮ್ಮಿಂದ ಪ್ರಾರ್ಥಿತರಾಗಿ ಬಹುಕಾಲಾನಂತರ ನಮ್ಮಲ್ಲಿ ಪ್ರಸನ್ನರಾಗಿ, ನಿನ್ನಾರಾಧನೆಯನ್ನು ನಾವು ಮಾಡುವಂತೆ ಬುದ್ಧಿಯನ್ನು ಅನುಗ್ರಹಿಸುತ್ತಾರೆ. ನಿನ್ನ ಭಕ್ತರಾದ ತತ್ವದೇವತೆಗಳ ಅನುಗ್ರಹದಿಂದ ಅನೇಕಜನ್ಮಗಳಲ್ಲಿ ನಿನ್ನ ಪಾದಾರವಿಂದಗಳ ಮಹಿಮೆಯ ಸುಜ್ಞಾನವನ್ನು ಪಡೆದು, ಆ ಜ್ಞಾನಯುಕ್ತಭಕ್ತಿಯಿಂದ ನಿನ್ನನ್ನು ಆರಾಧಿಸಿ, ನಂತರ ನಮಗೆ ನಿನ್ನ ಅನುಗ್ರಹದಿಂದ ನಿನ್ನ ಪಾದಾರವಿಂದದಲ್ಲಿ ನಿಶ್ಚಲವಾದ ಭಕ್ತಿರೂಪಯೋಗ ಸಮಾಧಿಯು ಉಂಟಾಗಿ, ಆಗ ನೀನು ನಮ್ಮ ದೃಷ್ಟಿಗೆ, ಕೆಲವರು ಮಹಾಯೋಗೇಶ್ವರರಿಗೆ ಮಾತ್ರ, ಕಾಣಿಸುತ್ತೀಯೆ. ಅಂತಹ ಅಗಮ್ಯಮಹಿಮನಾದ ನೀನು, ನಿನ್ನ ಕೇವಲ ಇಚ್ಛಾಮಾತ್ರದಿಂದ ಸಂಸಾರಸುಖಾಭಿಲಾಷೆಯಿಂದ ನಿನ್ನನ್ನು ಆರಾಧಿಸದೇಬಿಟ್ಟು ನಿನ್ನ ಅವಜ್ಞೆಯನ್ನು ನಾವು ಮಾಡಿದ್ದರೂ, ನಮ್ಮ ಮಹದಪರಾಧಗಳನ್ನೆಣಿಸದೆ, ಗ್ರಾಮ್ಯಪ್ರಾಣಿಗಳಾದಂತಹ ನಮ್ಮ ಗೃಹದಲ್ಲಿ, ನೀನು ನಿನ್ನ ದಿವ್ಯ ಕಪಿಲರೂಪದಿಂದ ಅವತರಿಸಿ ನಮ್ಮ ಕಣ್ಣಿಗೆ ಕಾಣಿಸುತ್ತಿರುವುದು ನಿನ್ನ ಎಂತಹ ಅಸದೃಶ ಕರುಣವೋ, ಸ್ವಾಮಿ! ನಮಗೆ ತಿಳಿಯದು! ಅತ್ಯಾಶ್ಚರ್ಯವು!

ನೀನು ಯಾರನ್ನು ನಿನ್ನವರೆಂದು ಭಾವಿಸುತ್ತೀಯೋ ಅವರನ್ನು ಈ ರೀತಿಯಾಗಿ ನೀನೇ ಅನುಗ್ರಹಿಸಿ, ಅವರ ಜ್ಞಾನಭಕ್ತ್ಯಾದಿಗುಣಗಳನ್ನು ಹೆಚ್ಚುಮಾಡಿ ಪೋಷಿಸುತ್ತೀಯೆ! ವರರೂಪವಾಗಿ ನೀನು ಹೇಳಿದ್ದ ನಿನ್ನ ಮಾತನ್ನು ಸತ್ಯವನ್ನಾಗಿ ಮಾಡಿ ನನ್ನ ಮನೆಯಲ್ಲಿ ಸ್ವಾಮಿ! ನೀನು ಅವತರಿಸಿರುತ್ತೀಯೆ! ನೀನು ನಮಗೆ ಅಭಯ, ಸೌಖ್ಯಗಳನ್ನು ವೃದ್ಧಿಮಾಡುತ್ತೀಯೆ. ಭಕ್ತರಶ್ರೇಯೋವರ್ಧಕನು ನೀನಾಗಿರುತ್ತೀಯೆ. ನಿನ್ನವರಾದ ವಸುದೇವ ದೇವಕಿಯರ ದೇಹಗಳೆಂಬ ರೂಪಗಳನ್ನು ಅಧಿಷ್ಠಾನಗಳನ್ನಾಗಿ ಮಾಡಿಕೊಂಡು, ಅನಂತಾವತಾರರೂಪುಗಳು ನಿನಗಿರುವಕಾರಣ, ನಿರ್ದುಷ್ಟವಾದ ಒಂದೇರೂಪ ನಿನಗಿಲ್ಲದಕಾರಣ ಅರೂಪನೆನಿಸುವ ನೀನು, ಹೇಗೆ ಕೃಷ್ಣಾದ್ಯವತಾರಗಳನ್ನು ಕೇವಲ ನಿನ್ನ ಸಚ್ಚಿದಾನಂದರೂಪದಿಂದಲೇ ಮಾಡುತ್ತೀಯೋ ಅದರಂತೆ, ನಮ್ಮರೂಪಗಳನ್ನೂ ಅಧಿಷ್ಠೀಕರಿಸಿಕೊಂಡು ನೀನು ನಿನ್ನ ಈ ಕಪಿಲಾಖ್ಯ ದಿವ್ಯರೂಪದಿಂದವತರಿಸಿರುತ್ತೀಯೆ!

ನಿನಗೆ ಪ್ರಾಕೃತದೇಹಾದಿಗಳ ಸಂಬಂಧವಿಲ್ಲ. ಜ್ಞಾನಿಗಳು ನಿಶ್ಚಯತತ್ವಜ್ಞಾನವುಳ್ಳವರಾಗಿ ಯಾವ ನಿನ್ನ ಪೀಠಕ್ಕೆ ನಿರಂತರ ನಮಸ್ಕಾರಮಾಡುತ್ತಿರುವರೋ, ಅಂತಹ ಸಂಪತ್ತು,

ವೈರಾಗ್ಯ, ಜ್ಞಾನ, ಯಶಸ್ಸು, ವೀರ್ಯ, ಐಶ್ವರ್ಯಾದ್ಯನಂತ ಕಲ್ಯಾಣಗುಣೈಕಪೂರ್ಣನಾದ ನಿನ್ನನ್ನು ನಾನು ನಮಸ್ಕರಿಸುತ್ತೇನೆ. ಪ್ರಕೃತಿಪುರುಷರಲ್ಲಿ ಉತ್ತಮನೂ, ಲೋಕಕ್ಕೆ ಜನ, ಐಶ್ವರ್ಯ ಸಮೃದ್ಧಿಯುಂಟುಮಾಡುವನೂ ಆದುದರಿಂದ ಪರನಾಮಕನೂ; ಜಗತ್ತನ್ನು ಚೆನ್ನಾಗಿ ಧರಿಸಿರುವುದರಿಂದ ಪ್ರಧಾನನಾಮಕನೂ, ಗಮನಶೀಲನಾದಕಾರಣ, ಅಂದರೆ ಪ್ರಕೃತ್ಯಾದಿ ಸಕಲ ಚೇಷ್ಟಕನಾದುದರಿಂದ ಪುರುಷಶಬ್ದವಾಚ್ಯನು; ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಗಿಂತ ಉತ್ತಮನಾದ ಕಾರಣ ಮಹಾಂತನೆಂಬುವನೂ, ದೇಶಾನಂತ್ಯ, ಕಾಲಾನಂತ್ಯ, ಗುಣಾನಂತ್ಯಗಳೆಂಬ ಮೂರುವಿಧ ಅನಂತ್ಯಗಳುಳ್ಳವನಾದಕಾರಣ ತ್ರಿನಂತ್ಯನೆಂದು ಕರೆಯಲ್ಪಡುವವನೂ, ಪೃಥುವೀ, ಅಪ್ಪು , ತೇಜಸ್ಸುಗಳಲ್ಲಿ ಸರ್ವತ್ರವ್ಯಾಪ್ತನಾದ್ದರಿಂದ ತ್ರಿವೃತುನಾಮಕನೂ, ಬ್ರಹ್ಮಾದಿಸಕಲ ಜಗತೋಷಕನು, ಸಕಲಪ್ರಪಂಚದ ಸಾರ್ವಕಾಲಿಕ ಅಶೇಷ, ವಿಶೇಷಜ್ಞಾನವುಳ್ಳವನೂ ಅಥವ ತನ್ನ ವಿಭೂತಿರೂಪರಾದ ಬ್ರಹ್ಮ, ಶೇಷ, ಗರುಡ, ರುದ್ರಾದಿ, ಸಕಲ ಪ್ರತಿಬಿಂಬರೂಪಜಗತ್ತುಳ್ಳವನಾದ ಕಾರಣ ಆತ್ಮಾನುಭೂತ್ಯಾನುಗತ ಪ್ರಪಂಚನೆಂದು ಕರೆಸುವನೂ, ಸ್ವೇಚ್ಛಾನುಸಾರ ಜಗತ್ಸೃಷ್ಟ್ಯಾದಿಶಕ್ತಿಯುಳ್ಳವನೂ, ಕಂ ಬ್ರಹ್ಮಾಣಂ, ಪಿಂ ಪಿನಾಕಿನಂ ರುದ್ರಂ, ಲಾಲಯತೀತಿ ಕಪಿಲಂ, ಎಂದರೆ ಬ್ರಹ್ಮರುದ್ರರನ್ನು ರಕ್ಷಿಸುವನಾದಕಾರಣ ಕಪಿಲನೆಂದು ಕರೆಯಲ್ಪಡುವವನೂ ಆದ ನಿನ್ನನ್ನು ನಾನು ಶರಣುಹೊಕ್ಕಿರುತ್ತೇನೆ.

ಎಲೈ ಸ್ವಾಮಿಯೆ! ನಿನ್ನಿಂದ ಉತ್ಪನ್ನರಾದ ಬ್ರಹ್ಮದೇವರ ಆಜ್ಞೆಯಂತೆ ಪ್ರಜಾಸೃಷ್ಟಿಯನ್ನು ನಾನುಮಾಡಿ ಬ್ರಹ್ಮದೇವರ ಕೃಪೆಗೆ ಪಾತ್ರನಾಗಿರುತ್ತೇನೆ. ಆದುದರಿಂದ ನಿನ್ನ ದಿವ್ಯರೂಪವನ್ನು ಹೃತ್ಕಮಲದಲ್ಲಿ ಧರಿಸಿ ನಿರಂತರ ಧಾರಣಾಯೋಗದಿಂದ, ಭೂಮಂಡಲವನ್ನು ಸಂಚರಿಸುವುದಕ್ಕಾಗಿ, ಪರಮಹಂಸರೆಂಬ ಯತ್ಯಾಶ್ರಮವನ್ನು ನಾನು ವಹಿಸಲು, ಆ ಮೂಲಕ ನಿನ್ನ ಪ್ರಸಾದದಿಂದ ಸರ್ವದುಃಖ ನಿವೃತ್ತಿರೂಪವಾದ ಮೋಕ್ಷವನ್ನು ಹೊಂದಲೂ, ಲೋಕಸ್ವಾಮಿಯಾದ ನಿನ್ನ ಆಜ್ಞೆಯನ್ನು ಬೇಡುತ್ತೇನೆ, ಎಂದರು.

## ಕಪಿಲ ಪರಮಾತ್ಮನ ಆದೇಶ :-

ಅದಕ್ಕೆ ಕಪಿಲನಾಮಕ ಪರಮಾತ್ಮನು, ಎಲೈ ಕರ್ದಮಮುನಿಯೆ! ನಾನು ಅಜ್ಞಾನವಿಪ್ರಾಲಂಬಾದಿ ದೋಷರಹಿತನಾದುದರಿಂದ ಜಗತ್ತಿಗೆ ಪರಮಾಪ್ತ ನೆನಿಸುತ್ತೇನೆ. ನನ್ನ ವಾಕ್ಯಗಳು ಸತ್ಯವಾದವೂ, ಜಗತ್ತಿಗೆ ಯಥಾರ್ಥವಾದ ಪ್ರಮಾಣರೂಪಗಳೂ ಆಗಿವೆ. ಆದುದರಿಂದಲೇ ನಾನು ಈಗ ನಿನ್ನ ಪುತ್ರನಾಗಿ ಅವತಾರಮಾಡಿ, ನಾನು ನಿನಗೆ ವರರೂಪವಾಗಿ ಹೇಳಿದ ಮಾತುಗಳು ಸತ್ಯವಾದವುಗಳೆಂದು ಪ್ರತ್ಯಕ್ಷ ಮಾಡಿ ತೋರಿಸಿರುತ್ತೇನೆ. ಬಹುಕಾಲದಿಂದ ಅಜ್ಞಾನವೆಂಬ ಅವಿದ್ಯೆಯು ಲೋಕದಲ್ಲಿ ಪ್ರಚುರವಾಗಿ, ಸಂಸಾರದುಃಖಗಳಲ್ಲಿ ನರಳಿ ಆ ದುಃಖನಿವೃತ್ತಿಯನ್ನು ಹೊಂದಬೇಕೆಂದಿಚ್ಛಿಸುವ ಸುಜೀವರಿಗೆ,

ಪರಮಾತ್ಮಾದಿತತ್ವಗಳ ನಿಜಸ್ಥಿತಿಯನ್ನೂ ತಿಳಿಸಿ, ಮೋಕ್ಷೋಪಯುಕ್ತ ಜ್ಞಾನಪ್ರಚಾರಕ್ಕಾಗಿಯೂ, ತತ್ವಗಳನ್ನು ಮಲಿನವಿಲ್ಲದೇ ಯಥಾಸ್ಥಿತಿಯಾಗಿ ತಿಳಿದಿರತಕ್ಕ ಪರಮಜ್ಞಾನಿಗಳಿಗೂ, ಜ್ಞಾನವು ದೃಢವಾಗುವುದಕ್ಕಾಗಿಯೂ, ಜನ್ಮಾದಿದೋಷರಹಿತನಾದ ನಾನು ಈ ರೂಪದಿಂದ ವ್ಯಕ್ತನಾಗಿರುವೆನೆಂದು ತಿಳಿ.

ನೀನು ಅಪೇಕ್ಷಿಸಿದಂತೆ ಸ್ವೇಚ್ಛೆಯಿಂದ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಬೇಕಾದಲ್ಲಿಗೆ ಹೋಗುವವನಾಗು. ಸರ್ವಕರ್ಮಗಳನ್ನೂ ನನ್ನ ಪೂಜಾರೂಪವಾಗಿ ಮಾಡಿ ನನಗೇ ಸಮರ್ಪಿಸುವನಾಗು. ಜಯಿಸಲಸಾಧ್ಯವಾದ ಸಂಸಾರಬಂಧನವೆಂಬ ಮೃತ್ಯುಪಾಶದಿಂದ ಬಿಡುಗಡೆಹೊಂದಿ, ಶಾಶ್ವತಸುಖರೂಪವಾದ ಮೋಕ್ಷೇಚ್ಛೆಯಿಂದ ನನ್ನನ್ನು ಆರಾಧಿಸು. ಸರ್ವಜಗತ್ಪೋಷಕನೂ, ಧಾರಕನೂ ಆದ ಆತ್ಮಶಬ್ದ ವಾಚ್ಯನಾದ ನಾನು ಸರ್ವಪ್ರಾಣಿಗಳ ಹೃದಯಾಕಾಶದಲ್ಲಿ, ಜ್ಯೋತಿರೂಪನಾಗಿ ಪ್ರಕಾಶಿಸುತ್ತಿರುತ್ತೇನೆ. ಇಂತಹ ನನ್ನನ್ನೇ ನಿನ್ನ ಹೃದ್ಗುಹೆಯಲ್ಲಿ ನೋಡಿದವನಾಗಿ ಸಮಸ್ತಭಯಗಳಿಂದಲೂ ಮುಕ್ತನಾಗುತ್ತೀಯೆ! ನೀನು ಈ ಪ್ರಪಂಚವನ್ನು ಅನಿತ್ಯವಾದದ್ದೆಂದೂ, ಅಸಾರವಾದದ್ದೆಂದೂ ತಿಳಿದಿರುತ್ತೀಯೆ. ಜ್ಞಾನೋಪದೇಶಕ ಆಚಾರ್ಯಶ್ರೇಷ್ಠರಾದ ಬ್ರಹ್ಮದೇವರ ಉಪದೇಶದಿಂದ ಆತ್ಮನಾದ ನನ್ನನ್ನು, ನಿನ್ನ ಅಂತರ್ಯಾಮಿ ಎಂದೂ, ಅಖಂಡೈಶ್ವರ್ಯಪೂರ್ಣನೆಂದೂ, ಗುಣಪೂರ್ಣನೆಂದೂ, ಜ್ಞಾನಾನಂದಮಯರೂಪನೆಂದೂ, ನೀನು ತಿಳಿದಿರುವಂತೆ ಉಪಾಸನೆಯನ್ನು ಮಾಡಿ, ಲಿಂಗಶರೀರನಿವೃತ್ತಿರೂಪವಾದ, ಮನಾದಿ ಇಂದ್ರಿಯಗಳ ವ್ಯಾಪಾರದಿಂದುಂಟಾಗುವ ದುಃಖ, ಅಜ್ಞಾನ, ಭಯ, ಶೋಕಾದಿಲಕ್ಷಣ ಉಪದ್ರವಗಳ ನಾಶವನ್ನು ಹೊಂದಿ, ಶಾಂತಿ ಎಂಬ ನಿರ್ದುಃಖಸುಖಲಕ್ಷಣವಾದ ಮೋಕ್ಷವನ್ನು ಹೊಂದಲು ಅರ್ಹನಾಗುತ್ತೀಯೆ. ನಾನು ನನ್ನ ತಾಯಿಯಾದ ದೇವಹೂತೀದೇವಿಗೆ ಸಕಲ ಅಧ್ಯಾತ್ಮವಿದ್ಯೆಗಳನ್ನೂ ಉಪದೇಶಿಸುತ್ತೇನೆ. ಆದರಿಂದ ಆಕೆಯು ಸಮಸ್ತಭಯ ಗಳಿಂದಲೂ ಮುಕ್ತಳಾಗುತ್ತಾಳೆ. ಸಂಸಾರವೆಂಬ ಸಾಗರವನ್ನು ವಿದ್ಯೆಯೆಂಬ ನಾವೆಯಿಂದ ದಾಟಿ ನನ್ನಿಂದ ಅಭಯರೂಪವಾದ ಮೋಕ್ಷವನ್ನು ಪಡೆಯುತ್ತಾಳೆ. ಆದಕಾರಣ ನನ್ನ ಮಾತೆಯ ವಿಚಾರದಲ್ಲಿ ನೀನು ಏನೂ ಭಯಪಡತಕ್ಕದ್ದಿಲ್ಲ. ನಿರ್ಭಯನಾಗಿ, ನಿರಾಲೋಚನೆಯಿಂದ ನೀನು ನಿನ್ನ ಸಾಧನೆಮಾಡಿಕೊಳ್ಳಲು ಅರ್ಹನಾಗಿರುತ್ತೀಯೆ, ಎಂದನು.

ಮೈತ್ರೇಯರು ಈ ರೀತಿಯಾಗಿ ಹೇಳಿ, ಎಲೈ ವಿದುರನೆ! ನಂತರ ಕರ್ದಮಪ್ರಜೇಶ್ವರರು, ಕಪಿಲಋಷಿಗಳಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ, ತಪಸ್ಸಿಗಾಗಿ ಅರಣ್ಯಪ್ರವೇಶಮಾಡಿದರು. ಮೌನವ್ರತವನ್ನು ತಾಳಿ, ಸದಾ ಭಗವಂತನನ್ನೇ ಹೃತ್ಕಮಲದಲ್ಲಿ ಧ್ಯಾನಿಸುತ್ತಾ, ಸರ್ವಸಂಗಪರಿತ್ಯಾಗಮಾಡಿ,

ಆಹಾರಾದಿ ವ್ಯಸನಗಳಿಲ್ಲದೆ, ಒಂದು ಸ್ಥಳದಲ್ಲೂ ನಿಲ್ಲದೆ, ಭೂಮಂಡಲವನ್ನು ಸುತ್ತುವರಾದರು. ಸದಸದಾತ್ಮಕ ಪ್ರಪಂಚದಿಂದ ಅತ್ಯಂತಭಿನ್ನನೂ, ವಿಲಕ್ಷಣನೂ, ಬೃಹಚ್ಛರೀರನೂ, ಅಂದರೆ ಸರ್ವತ್ರವ್ಯಾಪ್ತನೂ, ಗುಣಪೂರ್ಣನೂ ಆದ ಪರಮಾತ್ಮನಲ್ಲಿ ಮನೋಯೋಗವುಳ್ಳವರಾಗಿ, ಸತ್ವರಜಸ್ತಮೋಗುಣಗಳಿಂದ ಕೂಡಿದ ಸಕಲಜೀವರವ್ಯಾಪಾರಗಳನ್ನೂ ತಾನು ಆ ಗುಣಗಳ ಸಂಬಂಧವಿಲ್ಲದೇ ಮಾಡಿಸುತ್ತಾನೆಂದೂ, ನಿರಂತರ ಪ್ರೇಮಪ್ರವಾಹ ರೂಪವಾದ ಭಕ್ತಿಯೊಂದರಿಂದಲೇ ನೋಡಲು ಸಾಧ್ಯನೆಂದೂ, ಭಾವಿಸುತ್ತಾ ದೇಹಾಭಿಮಾನವನ್ನು ಬಿಟ್ಟು ನಿರಹಂಕಾರರಾಗಿಯೂ, ಅಭಿಲಾಷೆಯಿಂದರಹಿತರಾಗಿ ನಿರ್ಮಮರಾಗಿಯೂ, ಸರ್ವಪ್ರಾಣಿಗಳನ್ನೂ ತಮ್ಮಂತೆಯೇ ಭಾವಿಸಿ ಭೇದರಹಿತರಾಗಿ ನಿರ್ದ್ವಂದರೆನಿಸಿಯೂ, ಸುಖದುಃಖಗಳು ತಮಗೂ ಇತರರಿಗೂ ಸಮವಾದದ್ದೆಂದು ಭಾವಿಸಿ, ಸರ್ವಪ್ರಾಣಿಗಳೂ ಪರಮಾತ್ಮಾಧೀನರೆಂದು ಭಾವಿಸಿ, ಆತ್ಮನಲ್ಲೆ ರತಿಯುಳ್ಳವರಾಗಿ, ನಿರ್ಮಲಚಿತ್ತರಾಗಿ, ಅಲೆಇಲ್ಲದ ಸಮುದ್ರದಂತೆ ಗಾಂಭೀರ್ಯವುಳ್ಳವರಾಗಿ, ತಮ್ಮಲ್ಲೂ ಸರ್ವಪ್ರಾಣಿಗಳಲ್ಲೂ ಇರುವ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಂಡರು. ಇಚ್ಛಾದ್ವೇಷಾದಿಗಳಿಲ್ಲದವರಾಗಿ, ಸರ್ವತ್ರ ಪರಮಾತ್ಮನನ್ನು ಕಾಣುತ್ತಾ, ತಮ್ಮ ಹೃತ್ಸ್ಥಲವಾಸಿಯಾದ ಶ್ರೀವಾಸುದೇವನ ಪಾದಾರವಿಂದದಲ್ಲಿ ಅತ್ಯಂತ ಸುದೃಢಭಕ್ತಿಯೋಗದಿಂದ, ದೇಹಬಂಧನವನ್ನು ಕಳೆದುಕೊಳ್ಳುವವರಾಗಿ, ಪರಮಭಾಗವತೋತ್ತಮರು ಹೊಂದತಕ್ಕ ಪರಮಾತ್ಮನ ಸಾಮೀಪ್ಯ, ಸಾರೂಪ್ಯಾದಿ ಮೋಕ್ಷರೂಪವಾದ ಗತಿಯನ್ನೂ ಪಡೆಯುವವರಾದರು, ಎಂದು ಹೇಳಿದರೆಂದು ಶುಕರು ಪರೀಕ್ಷಿದ್ರಾಜರಿಗೆ ಹೇಳಿದರು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ षड्विंशोऽध्यायः

**राजोवाज**

कपिलस्तत्त्वसंख्याता भगवानात्ममायया ।
जातः स्वयमजः साक्षादात्मप्रज्ञप्तये नृणाम् ॥ १ ॥

अर्हस्य धर्मिणां पुंसां गरिम्णः सर्वयोगिनाम् ।
विश्रुतौ श्रुतदेवस्य भूरि तृप्यन्ति मेऽसवः ॥ २ ॥

यद् यद् विधत्ते भगवान् स्वच्छन्दात्माऽऽत्ममायया ।

तानि मे श्रद्धधानस्य कीर्तन्यान्यनुकीर्तय ॥ ३ ॥

**शुक उवाच**

द्वैपायनसखश्चैवं मैत्रेयो भगवांस्तथा ।
प्राहैनं विदुरं प्रीत आन्वीक्षिक्यां प्रचोदितः ॥ ४ ॥

पितरि प्रस्थितेऽरण्यं मातुः प्रियचिकीर्षया ।
तस्मिन् बिन्दुसरेऽवात्सीद् भगवान् कपिलः किल ॥ ५ ॥

तमासीनमकर्माणं तत्त्वमार्गाग्रदर्शनम् ।
स्वसुतं देवहूत्याह धातुः संस्मरती वचः ॥ ६ ॥

देवहूतिरुवाचनिर्विण्णाऽतितरां भूमन्नसदिन्द्रियतर्पणात् ।
येन संभाव्यमानेन प्रपन्नाऽन्धतमः प्रभो ॥ ७ ॥

तस्य त्वं तमसोऽन्धस्य दुष्पारस्याद्य पारगः ।
सच्चक्षुर्जन्मनामन्ते लब्धं मे त्वदनुग्रहात् ॥ ८ ॥

य आद्यो भगवान् पुंसामीश्वरो वै भवान् किल ।
लोकस्य तमसाऽन्धस्य चक्षुः सूर्य इवोदितः ॥ ९ ॥

अथ मे देव संमोहमपाक्रष्टुं त्वमर्हसि ।
योऽवग्रहोऽहं ममेतीत्येतस्मिन् योजितस्त्वया ॥ १० ॥

तं त्वा गताऽहं शरणं शरण्यं स्वभृत्यसंसारतरोः कुठारम् ।
जिज्ञासया प्रकृतेः पूरुषस्य नमामि सद्धर्मविदां वरिष्ठम् ॥ ११ ॥

**मैत्रेय उवाच**

इति स्वमातुर्निरवद्यमीप्सितं निशम्य पुंसामपवर्गचोदनम् ।
धियाऽभिनन्द्यात्मवतां सतां गतिर्बभाष ईषत् स्मितशोभिताननः ॥ १२ ॥

**भगवानुवाच**

योग आध्यात्मिकः पुंसां मतो निःश्रेयसाय मे ।
अत्यन्तोपरतिर्यत्र दुःखस्य च सुखस्य वै ॥ १३ ॥

तमिमं ते प्रवक्ष्यामि यमवोचं पुराऽनघे ।

ऋषीणां श्रोतुकामानां योगमुर्वङ्गनैपुणम् ॥ १४ ॥

चेतः खल्वस्य बन्धाय मुक्तये चात्मनो मतम् ।
गुणेषु सक्तं बन्धाय रतं वा पुंसि मुक्तये ॥ १५ ॥

अहंममाभिमानोत्थैः कामलोभादिभिर्मलैः ।
वीतं यदाऽऽत्मनः शुद्धमदुःखमसुखं समम् ॥ १६ ॥

तदा पुरुष आत्मानं केवलं प्रकृतेः परम् ।
निरन्तरं स्वयंज्योतिरणिमानमखण्डितम् ॥ १७ ॥

ज्ञानवैराग्ययुक्तेन भक्तियोगेन चात्मना ।
परिपश्यत्युदासीनां प्रकृतिं च हतौजसम् ॥ १८ ॥

न युज्यमानया भक्त्या भगवत्यखिलात्मनि ।
सदृशोऽस्ति शिवः पन्था योगिनां ब्रह्मसिद्धये ॥ १९ ॥

प्रसङ्गमजरं पाशमात्मनः कवयो विदुः ।
स एव साधुषु कृतो मोक्षद्वारमपावृतम् ॥ २० ॥

तितिक्षवः कारुणिका सुहृदः सर्वदेहिनाम् ।
अजातशत्रवः शान्ताः साधवः साधुभूषणाः ॥ २१ ॥

मय्यनन्येन भावेन भक्तिं कुर्वन्ति ये दृढाम् ।
मत्कृते त्यक्तकर्माणस्त्यक्तस्वजनबान्धवाः ॥ २२ ॥

मदाश्रयाः कथा मृष्टाः शृण्वन्ति कथयन्ति च ।
तपन्ति विविधांस्तापानैकात्म्यगतचेतसः ॥ २३ ॥

त एते साधवः साध्वि सर्वसङ्गविवर्जिताः ।
सङ्गस्तेष्वथ ते प्रार्थ्यः सङ्गदोषहरा हि ते ॥ २४ ॥

सतां प्रसङ्गान्मम वीर्यसम्पदो भवन्ति हृत्कर्णरसायनाः कथाः ।
तज्जोषणादाश्वपवर्गवर्त्मनि श्रद्धावती भक्तिरनुक्रमिष्यति ॥ २५ ॥
भक्त्या पुमान् जातविराग ऐन्द्रियाद् दृष्टश्रुतात्मद्रविणानुचिन्तया ।

चित्तस्य यत्तो ग्रहणे योगयुक्तो यतिष्यते ऋजुभिर्योगमार्गैः ॥ २६ ॥

असेवयाऽयं प्रकृतेर्गुणानां ज्ञानेन वैराग्यविजृम्भितेन ।

योगेन मय्यर्पितया च भक्त्या मां प्रत्यगात्मानमिहावरुन्धे ॥ २७ ॥

देवहूतिरुवाचका चित् त्वय्यर्पिता भक्तिः कीदृशी मम गोचरा ।
यया पदं ते निर्वाणमञ्जसा प्राप्नुयामहम् ॥ २८ ॥

यो योगो भगवत्प्राप्तौ निर्वाणात्मंस्त्वयोदितः ।
कीदृशः कति चाङ्गानि यतस्तत्त्वावबोधनम् ॥ २९ ॥

तदेतन्मे विजानीहि यथाऽहं मन्दधीर्हरे ।
सुखं बुद्ध्येय दुर्बोधं योषा भवदनुग्रहात् ॥ ३० ॥

**मैत्रेय उवाच**

विदित्वाऽर्थं कपिलो मातुरित्थं जातस्नेहो यत्र तन्वाऽभिजातः ।

तत्त्वाम्नायं यत् प्रवदन्ति साङ्ख्यं प्रावोचद् वै भक्तिवितानयोगम् ॥ ३१ ॥

**भगवानुवाच**

देवानां गुणलिङ्गानामानुश्राविककर्मणाम् ।
सत्त्व एवैकमनसो वृत्तिः स्वाभाविकी तु या ॥ ३२ ॥

अनिमित्ता भगवति भक्तिः सिद्धेर्गरीयसी ।
जरयत्याशु या कोशं निगीर्णमनलो यथा ॥ ३३ ॥

नैकात्म्यतां मे स्पृहयन्ति केचिन्मत्पादसेवाभिरता मदीहाः ।
येऽन्योन्यतो भागवताः प्रसज्य सम्भाजयन्ते मम पौरुषाणि ॥ ३४ ॥

पश्यन्ति मे ते रुचिराण्येव सन्तः प्रसन्नवक्त्रारुणलोचनानि ।

रूपाणि दैत्यासुविनाशनानि साकं वाचं स्पृहणीयां वदन्ति ॥ ३५ ॥

तैर्दर्शनीयावयवैरुदारविलासहासेक्षितवामसूक्तैः ।
हृतात्मनो हृतप्राणस्य भक्तिमन्विच्छतो गतिमण्वीं प्रयुङ्क्ते ॥ ३६ ॥

अथो विभूतिं मम मायया चिता मैश्वर्यमष्टाङ्गमनुप्रवृत्तम् ।
श्रियं न देवीं स्पृहयन्ति भद्रां परस्य मे तेऽश्नुवते हि लोके ॥ ३७ ॥

न कर्हिचिन्मत्पराः शान्तरूपा नङ्क्ष्यन्ति मे नोऽनिमिषो लेढि हेतिः ।
येषामहं प्रिय आत्मा सुतश्च सखा गुरुः सुहृदो दैवमिष्टम् ॥ ३८ ॥

इमं लोकं तथैवामुमात्मानमुभयायिनम् ।
आत्मानमनु ये चेमे ये रायः पशवो गृहाः ॥ ३९ ॥

विसृज्य सर्वानन्यांश्च मामेवं विश्वतोमुखम् ।
भजन्त्यनन्यया भक्त्या तान् मृत्योरतिपारये ॥ ४० ॥

नान्यत्र मद् भगवतः प्रधानपुरुषेश्वरात् ।
आत्मनः सर्वभूतानां भयं तीव्रं निवर्तते ॥ ४१ ॥

मद्भयाद् वाति वातोऽयं सूर्यस्तपति मद्भयात् ।
वर्षतीन्द्रो दहत्यग्निर्मृत्युश्चरति मद्भयात् ॥ ४२ ॥

ज्ञानवैराग्ययुक्तेन भक्तियोगेन योगिनः ।
क्षेमाय पादमूलं मे प्रविशन्त्यकुतोभयम् ॥ ४३ ॥

एतावानेव लोकेऽस्मिन् पुंसां निःश्रेयसोदयः ।
तीव्रेण भक्तियोगेन मनो मय्यर्पितं स्थिरम् ॥ ४४ ॥

**इति श्रीमद्भागवते (तृतीयस्कन्धे(*3) षड्विंशोऽध्यायः ॥**

**॥ ಇಪ್ಪತ್ತಾರನೆಯ ಅಧ್ಯಾಯ ॥**

## ದೇವಹೂತಿದೇವಿಯರಿಂದ ಜ್ಞಾನೋಪದೇಶಕ್ಕಾಗಿ ಪ್ರಾರ್ಥನೆ

ಶ್ರೀಪರಮಾತ್ಮನಲ್ಲಿ ಆತ್ಯಂತಿಕ ಭಕ್ತಿಯೋಗರೂಪ ಮನೋಯೋಗವನ್ನು ಹೊಂದಲು ಯೋಗ್ಯರಾದವರು ಮಾಡತಕ್ಕ ಸಾಧನೆಯನ್ನು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ. ಇದಕ್ಕೆ ಅಂಗವಾಗಿ ಪರೀಕ್ಷಿದ್ರಾಜನು ಶುಕಮಹರ್ಷಿಗಳೇ, ಕಪಿಲನಾಮಕ ಶ್ರೀಪರಮಾತ್ಮನು ತತ್ವಸಂಖ್ಯಾನಿರೂಪಣವನ್ನು ಮಾಡುವುದಕ್ಕಾಗಿ ತನ್ನ ಇಚ್ಛೆಯಿಂದ ತಾನೇ ಅವತಾರಮಾಡಿದನಷ್ಟೆ? ಆ ನಿವೃತ್ತಿಲಕ್ಷಣಧರ್ಮವುಳ್ಳ ಯೋಗೇಶ್ವರರಾದ ಸನಕಾದಿಗಳಿಂದ ಪೂಜ್ಯನೂ, ಸರ್ವೋತ್ತಮನೂ, ಕ್ರೀಡಾದಿಗುಣವಿಶಿಷ್ಟನಾದ ಸಕಲಶಾಸ್ತ್ರಪ್ರತಿಪಾದ್ಯನೂ, ಶ್ರೀದೇವೀಸಮೇತನೂ ಆದ ಕಪಿಲನಾಮಕ ಪರಮಾತ್ಮನ ದಿವ್ಯಚರಿತ್ರೆಯನ್ನು

ಕೇಳಲು, ನಿರಾಹಾರಗಳಿಂದ ಈ ನನ್ನ ದೇಹವು ಕೃಶವಾಗಿದ್ದರೂ, ನನ್ನ ಮನಸ್ಸು ಯಾವ ಆಯಾಸಲೇಶವನ್ನೂ ಹೊಂದದೆ, ಪರಮ ಉತ್ಸಾಹದಿಂದ ನನಗೆ ಸಂತೋಷ, ಸುಖಾತಿಶಯಗಳನ್ನೇ ಉಂಟುಮಾಡುತ್ತಿದೆ. ಆದುದರಿಂದ ಭಗವತ್ಕಥಾಶ್ರವಣವಿಚಾರದಲ್ಲಿ ನನಗೆ ಮನಸ್ಸು ತೃಪ್ತಿಇಲ್ಲದೇ, ವಿಶೇಷವಾಗಿ ಕೇಳಲು ಕಾತುರಪಡುತ್ತಿದೆ. ಆ ಸ್ವತಂತ್ರನಾದ ಕಪಿಲನಾಮಕ ಪರಮಾತ್ಮನು ಏನು ಮಾಡಿದನೋ ಅದನ್ನು ಕೇಳಬೇಕೆಂಬ ಶ್ರದ್ಧೆಯುಳ್ಳ ನನಗೆ, ಆ ಪರಮಾತ್ಮನ ಮಹಿಮೆಗಳನ್ನು ತಾವು ಅನುಗ್ರಹಮಾಡಿ ಹೇಳಿರಿ, ಎಂದನು. ಶುಕರು ಎಲೈ ಪರೀಕ್ಷಿದ್ರಾಜನೆ! ದ್ವೈಪಾಯನರೆಂಬ ಶ್ರೀವೇದವ್ಯಾಸರ ಮಿತ್ರರಾದ ಮೈತ್ರೇಯರು ವಿದುರನಿಂದ ಈ ರೀತಿಯಾಗಿಯೇ ಪ್ರಶ್ನೆ ಮಾಡಲ್ಪಟ್ಟವರಾಗಿ ಪ್ರೀತಿಯಿಂದ ವಿದುರನಿಗೆ ಆನ್ವೀಕ್ಷಕೀ ಎಂಬ ತತ್ವವಿಚಾರವನ್ನು ಶ್ರೀಕಪಿಲಾಖ್ಯಾನರೂಪವಾಗಿ ಈ ರೀತಿ ನಿರೂಪಿಸಿದರು:-

ತಂದೆಯಾದ ಕರ್ದಮರು ಪರಮಹಂಸರಾಗಿ ವನಪ್ರವೇಶವನ್ನು ಮಾಡಿದ ನಂತರ, ತಾಯಿಯಾದ ದೇವಹೂತೀದೇವಿಗೆ ಮನಸ್ಸಮಾಧಾನ ಮಾಡುವುದಕ್ಕಾಗಿ ಕಪಿಲರು, ಆ ಸರಸ್ವತೀತೀರದ ಬಿಂದುಸರೋವರದ ಕರ್ದಮಾಶ್ರಮದಲ್ಲೆ ವಾಸಮಾಡುವವರಾದರು. ಒಂದುದಿನ ಕಪಿಲರು ಏನೂ ವ್ಯಾಪಾರವಿಲ್ಲದವರಾಗಿ, ಸುಖಾಸೀನರಾಗಿ ಕುಳಿತಿರುವಾಗ, ಬ್ರಹ್ಮದೇವರ ಮಾತನ್ನು ಸ್ಮರಿಸಿಕೊಂಡು ದೇವಹೂತೀದೇವಿಯು ಕಪಿಲರನ್ನು ಪ್ರಶ್ನೆಮಾಡುವುದಕ್ಕೆ ಅದು ಸರಿಯಾದ ಸಮಯವೆಂದು ಭಾವಿಸಿ, ಸಕಲ ಯೋಗಮಾರ್ಗಗಳ ದರ್ಶಕರಾದ ಕಪಿಲರನ್ನು ಈ ರೀತಿ ಮಾತನಾಡಿಸಿದಳು:-

ಎಲೈ ಗುಣಜ್ಞಾನಾದಿಪೂರ್ಣನೇ! ಆದಕಾರಣ ಭೂಮನ್ ಶಬ್ದವಾಚ್ಯನೆ! ನಾನು ಯಾವಾಗಲೂ ದುಷ್ಟವಾದ ಇಂದ್ರಿಯತೃಪ್ತಿ ಎಂಬ ಕಾಮಾಪೇಕ್ಷೆಯಲ್ಲಿ ಆಸಕ್ತಳಾಗಿ, ಅದನ್ನೇ ಶ್ರೇಯಸ್ಸೆಂದು ಭಾವಿಸಿದ್ದಕಾರಣ ಅಂಧಂತಮಸ್ಸಿನ ಪ್ರಾಪ್ತಿಗೆ ಅರ್ಹಳಾಗಿರುತ್ತೇನೆ. ನೀನು ಕಪಿಲಾವತಾರಮಾಡಿ ನಮಗೆ ಕಾಣಿಸಿದನಂತರ ನಾನು ನಿನ್ನನುಗ್ರಹದಿಂದ, ನೀನು ಆ ದಾಟಲಸಾಧ್ಯವಾದ ಅಂಧಂತಮಸ್ಸನ್ನು ದಾಟಿಸುವ ಜ್ಞಾನಚಕ್ಷುವನ್ನು ಕೊಡತಕ್ಕವನೆಂದು ತಿಳಿದೆನು. ಎಲೈ ಸ್ವಾಮಿಯೆ! ನೀನು ಸರ್ವಜಗದುತ್ಪತ್ತಿ ಸ್ಥಿತಿಲಯಗಳಿಗೆ ಮೂಲಕಾರಣನಾದ ನಾರಾಯಣನೇ ಆಗಿದ್ದು, ಈಗ ಅಜ್ಞಾನಾಂಧಕಾರವೆಂಬ ಅಂಧಂತಮಸ್ಸಿನಲ್ಲಿ ಬಿದ್ದಿರುವ ಜನರಿಗೆ, ಸೂರ್ಯೋದಯವು ಅಂಧಕಾರನಾಶಕ್ಕೆ ಹೇಗೆ ಕಾರಣವೋ ಆದರಂತೆ, ಜ್ಞಾನವೆಂಬ ದಿವ್ಯಬೆಳಕನ್ನು ಪ್ರಕಾಶಮಾಡುವುದಕ್ಕೆ, ಈ ಕಪಿಲರೂಪದಿಂದ ಸೂರ್ಯನಂತೆ ಉದಿಸಿರುತ್ತೀಯೆ. ಆದುದರಿಂದ ಎಲೈ ದೇವನೆ! ನೀನು ವಿಷಯವಾಸನೆಯಿಂದ ಇನ್ನೂ ನನ್ನ ಮನಸ್ಸು ಸಂಬಂಧಹೊಂದಿ, ಸಂಮೋಹವೆಂಬ ಬಂಧಕದಿಂದ ಆ ಯಾವ ನೀನು ನಿನ್ನ ಮಾಯಾಶಕ್ತಿಯಿಂದ ನಮ್ಮನ್ನು ಅಹಂಮಮತಾದಿ ಸಂಸಾರಬಂಧನದಲ್ಲಿ ಇಟ್ಟಿರುವೆಯೋ, ಆ ನೀನೇ ಆ ಸಂಸಾರವೃಕ್ಷವನ್ನೂ

ಅಹಮ್ಮಮ ಎಂಬ ದುರ್ಭಾವನೆಗಳನ್ನೂ ನಿರ್ಮೂಲಮಾಡುವವನೂ ಆದಕಾರಣ, ನಾನು ನಿನ್ನ ಪಾದಕಮಲಗಳಲ್ಲಿ ಶರಣುಹೊಕ್ಕಿರುತ್ತೇನೆ. ಈ ಸಂಸಾರನಾಶವನ್ನು ನೀನು ಪ್ರಕೃತಿಪುರುಷ ವಿವೇಕಜ್ಞಾನವನ್ನು ಉಪದೇಶಿಸಿ ಉಂಟುಮಾಡುವಿಯಾದ ಕಾರಣ, ನಾನು ಆ ಜ್ಞಾನವನ್ನು ನಿನ್ನಿಂದ ಪಡೆಯಲು ನಿನಗೆ ನಮಸ್ಕರಿಸುತ್ತೇನೆ, ಎಂದಳು, ಎಂದು ಮೈತ್ರೇಯರು ವಿದುರನಿಗೆ ಹೇಳಿ, ಎಲೈ ವಿದುರನೆ! ತಾಯಿಯ ಮಾತನ್ನು ಕಪಿಲರೂಪ ಪರಮಾತ್ಮನು ಕೇಳಿ, ಮನಸ್ಸಿನಲ್ಲಿ ಭಗವದ್ಭಕ್ತರಾದ ಸಜ್ಜನರ ಸನ್ಮಾರ್ಗವನ್ನು ಸ್ವಭಾವದಿಂದ ಅನುಸರಿಸುತ್ತಿರುವ ತಮ್ಮ ತಾಯಿಯ ಅಭಿಲಾಷೆಯನ್ನು ಅಭಿನಂಧಿಸಿ, ಸ್ವಲ್ಪ ನಗುಮುಖದಿಂದ ದೇವಹೂತೀದೇವಿಗೆ ಈ ರೀತಿಯಾಗಿ ಹೇಳಿದನು:-

## ಕಪಿಲನ ಉಪದೇಶ-ಸಂಸಾರ ಬಂಧನ ನಿವೃತ್ತಿಗೆ ಉಪಾಯ

ಎಲೈ ಅನಘಳೆ! ಅಂದರೆ, ಪಾಪದಿಂದ ಮುಟ್ಟಲ್ಪಡದೇ ಇರುವ ಸಾಧ್ವಿಯೆ! ಪಂಚಭೂತಾತ್ಮಕವಾದ ಕಾರಣ ಅಧಿಭೂತವೆಂಬ ಈ ಮಾನುಷಶರೀರದಲ್ಲಿ, ಗೋಚರಿಸದೆ ಅವ್ಯಕ್ತವಾಗಿರತಕ್ಕ ಅಧ್ಯಾತ್ಮಗಳೆನಿಸುವ ಪರಮಾತ್ಮಾದಿತತ್ವಗಳ ಜ್ಞಾನವೇ, ಪ್ರಾಣಿಗಳ ಬಂಧನನಿವೃತ್ತಿಗೂ, ದುಃಖನಾಶಕ್ಕೂ, ಮೋಕ್ಷವೆಂಬ ಸ್ವರೂಪಾನಂದಅಭಿವ್ಯಕ್ತಿಗೂ ಕಾರಣವೆಂದು ನನ್ನ ಅಭಿಃಪ್ರಾಯ. ಆದುದರಿಂದ ನಾನು ಹಿಂದೆ ಮೋಕ್ಷಾಪೇಕ್ಷೆಯಿಂದ ತತ್ವಜ್ಞಾನವನ್ನು ಬಯಸಿದ ಋಷಿಗಳಿಗೆ ಉಪದೇಶಿಸಿದ್ದನ್ನೇ ಈಗ ನಿನಗೆ ಹೇಳುತ್ತೇನೆ, ಕೇಳು.

ಬ್ರಹ್ಮಾದಿಮಹಾಯೋಗಿಗಳು ಕೂಡ ಈ ತತ್ವಜ್ಞಾನವನ್ನು, ಯಮನಿಯಮಾದಿ ಅಂಗಗಳಿಂದ ಪಡೆದವರಾಗಿ, ಅದರಿಂದ ಈ ದೇಹಸಂಬಂಧದಿಂದುಂಟಾಗುವ ಸುಖದುಃಖಾದಿ ದ್ವಂದ್ವಗಳಿಂದ ಅತ್ಯಂತವಿಲಕ್ಷಣವಾದ, ಸ್ವರೂಪಾನಂದಸುಖವನ್ನು ಕೊಡತಕ್ಕ ಲಿಂಗಭಂಗವನ್ನು ಹೊಂದುವರು. ಈ ತತ್ವಜ್ಞಾನವನ್ನು ಪಡೆಯಲಪೇಕ್ಷಿಸುವವರು ಮೊದಲು ಮನಸ್ಸನ್ನು ತಮ್ಮ ವಶವನ್ನಾಗಿ ಮಾಡಿಕೊಳ್ಳಬೇಕು. ಏಕೆಂದರೆ ಸಕಲಜೀವರ ಸಂಸಾರಬಂಧನಕ್ಕೂ ಮೋಕ್ಷಕ್ಕೂ ಮನಸ್ಸೇ ಕಾರಣವಾಗಿರುತ್ತದೆ. ಮನಸ್ಸು ಸತ್ವರಜಸ್ತಮೋಗುಣಗಳಿಗೆ ಅಧೀನವಾಗಿ ನಾನು, ನನ್ನದು ಎಂಬ ಭಾವನೆಗಳನ್ನು ಹುಟ್ಟಿಸಿ, ಅದರಿಂದ ಅನರ್ಥದಾಯಕಗಳಾದ, ಕಾಮ, ಲೋಭಾದಿ ದೋಷಗಳನ್ನು, ಮಲಗಳನ್ನು ಅಂದರೆ ಕಶ್ಮಲಗಳನ್ನು ಹುಟ್ಟಿಸಿ, ಅದರಿಂದ ಸುಖದುಃಖರೂಪವಾದ ಶರೀರಾನುಭವವೆಂಬ ಸಂಸಾರದಲ್ಲಿ ಜೀವರನ್ನು ಕಟ್ಟಿಹಾಕುತ್ತದೆ. ಇದೇ ಸಕಲದುಃಖಗಳಿಗೂ ಮೂಲಕಾರಣ. ಅದೇ ಮನಸ್ಸು ವಿಷಯಾನುಭವಗಳು ಹೇಯವೆಂದು ತಿಳಿದು, ಪರಮಾತ್ಮವಿಷಯಕ ಜ್ಞಾನಲಾಭಕ್ಕಾಗಿ ಪ್ರವರ್ತಿಸಿದರೆ, ಅದು ಮೋಕ್ಷಕ್ಕೂ ಕಾರಣವಾಗುವುದು. ಹೇಗೆಂದರೆ ವಿಷಯಾಪೇಕ್ಷೆಇಲ್ಲದ ಮನಸ್ಸು ಶುದ್ಧವಾಗುವುದು.

ಶುದ್ಧವಾದ ಮನಸ್ಸಿಗೆ ಪರಮಾತ್ಮ ವಿಷಯಕವಾದ ಜ್ಞಾನಾಪೇಕ್ಷೆಯುಂಟಾಗಿ, ಗುರುಮುಖದಿಂದ ಶಾಸ್ತ್ರಜ್ಞಾನವು ಪ್ರಾಪ್ತವಾಗುವುದು. ಆ ಜ್ಞಾನದಿಂದ ಪರಮಾತ್ಮನ ಉಪಾಸನೆಯನ್ನು ಮಾಡಿ, ಪರಮಾತ್ಮಾನುಭವರೂಪವಾದ ಆನಂದವು ಪ್ರಾಪ್ತವಾಗುವದು.

ಆ ಆನಂದೋದ್ರೇಕದಿಂದ ದೇವರಲ್ಲಿ ನಿಶ್ಚಲವಾದ ಭಕ್ತಿಯುಕ್ತ ಮನೋಯೋಗವೆಂಬ, ಸಮಾಧಿಯೋಗವು ಉಂಟಾಗಿ, ಅದರಿಂದ ಲಿಂಗಶರೀರನಾಶವೂ, ಮುಕ್ತಿಯೂ ಲಭಿಸುವುದು. ಅದು ಹೇಗೆಂದರೆ ನಿರಂತರ ಸಮಾಧಿಯೋಗದಿಂದ ತತ್ವದೇವತೆಗಳೆಂಬ ದೇವತೆಗಳ ಸಹಿತವಾಗಿ, ಬಿಂಬರೂಪಿಯಾದ ಪರಮಾತ್ಮನ ದರ್ಶನವು ಹೃದಯಕಮಲದಲ್ಲಿ ಯೋಗಿಗೆ ಉಂಟಾಗುವದು. ಆ ಕಾಲದಲ್ಲಿ ಯೋಗಿಗೆ ಬಾಹ್ಯಸುಖಾಪೇಕ್ಷೆಯು ಇರುವುದಿಲ್ಲವಾದ್ದರಿಂದ ಅಸುಖಿ ಎನಿಸುವನು. ಇವನಿಗೆ ದುಃಖಸ್ಪರ್ಶವಿಲ್ಲದಿರುವುದರಿಂದ ನಿರ್ದುಃಖನೆಂದೆನಿಸುವನು. ಈ ನಿರ್ದುಃಖ ಅಥವಾ ಅದುಃಖವೆಂಬುದು ಹರಿಭಕ್ತಿರೂಪವಾದದ್ದೂ ಮತ್ತು ನಿತ್ಯಾನಂದಪ್ರದವಾದದ್ದೂ ಆಗಿರುತ್ತದೆ. ತನ್ನ ಅವತಾರರೂಪಗಳಿಗೂ ಮೂಲರೂಪಕ್ಕೂ ಭೇದವಿಲ್ಲದವನು, ಅಂದರೆ ಐಕ್ಯಜ್ಞಾನವುಳ್ಳವನು, ಆದ್ದರಿಂದ ನಿರಂತರನೆಂದು ಹೆಸರುಳ್ಳವನು. ಅವನ ಗುಣ, ದೇಹ, ಇಂದ್ರಿಯಾದಿಗಳೂ ಪರಮಾತ್ಮನಿಂದ ಭಿನ್ನವಲ್ಲವಾದುದರಿಂದ ಕೇವಲನಾಮಕನು. ಸಮಾನರಹಿತನೂ, ಹೇಯತ್ವಾದಿದೋಷರಹಿತನೂ ಆದಕಾರಣ ಅಹಂ ಶಬ್ದವಾಚ್ಯನು. ಅಖಂಡವಾಗಿ ಪೂರ್ಣಶಕ್ತನಾದಕಾರಣ ಏಕನೆಂದೆನಿಸುತ್ತಾನೆ. ಪರಮಾತ್ಮನು ಜ್ಞಾನರೂಪನೂ, ಸ್ವಯಂಪ್ರಕಾಶನೂ, ಅಣುವಾದ ಜೀವನಲ್ಲಿ ಅಂತರ್ಯಾಮಿಯಾಗಿ ಅತ್ಯಣುವಾಗಿರುತ್ತಾನಾಗಿ ಅಣಿಮಾನ್ ಎಂದು ಕರೆಯಲ್ಪಡುವವನೂ, ಅಚ್ಛಿದ್ರನಾಗಿ ಸರ್ವತ್ರವ್ಯಾಪ್ತನೂ ಆಗಿರುತ್ತಾನೆ.

ಈ ರೀತಿಯಾದ ಬಿಂಬನನ್ನು ಜ್ಞಾನವೈರಾಗ್ಯಗಳಿಂದ ಕೂಡಿದ ಭಕ್ತಿಯೋಗಿಗಳು ತಮ್ಮ ಹೃತ್ಸ್ಥಲದಲ್ಲಿ ಕಾಣುತ್ತಾರೆ. ಆವಾಗ, ಯಾವ ಗುಣತ್ರಯಗಳಿಗೆ ಅಭಿಮಾನಿಯಾದ ಲಕ್ಷ್ಮೀದೇವಿಯು, ತಮ್ಮನ್ನು ಸಂಸಾರದಲ್ಲಿ ಬಂಧಿಸುತ್ತಿದ್ದಳೋ, ಅಂತಹ ಲಕ್ಷ್ಮಿಯು ತನ್ನ ಬಂಧಕಶಕ್ತಿಗೆ ಒಳಪಡಿಸದೇ ದೇಹದಿಂದ ಇವರನ್ನು ಬಿಡಿಸಿ, ತನಗೆ ಏನೂ ಬಂಧಕಶಕ್ತಿಇಲ್ಲದಂತೆ ಇವರಿಗೆ ಉದಾಸೀನದಿಂದಿರುವಳಂತೆ ಕಾಣುವಳಾಗಿ, ತಾನು ಪರಮಾತ್ಮನ ಅಧೀನಳೆಂಬುವುದನ್ನು ತೋರಿಸಿ ಕೊಡುವವಳಾಗುತ್ತಾಳೆ. ಈ ರೀತಿಯಾಗಿ ಯೋಗಿಗೆ, ಸಕಲ ತತ್ವಾಭಿಮಾನಿದೇವತೆಗಳ, ಮುಖ್ಯಪ್ರಾಣದೇವರ, ಲಕ್ಷ್ಮೀದೇವಿಯರ, ಅನುಗ್ರಹಗಳೂ ದರ್ಶನಗಳೂ ಆಗುತ್ತವೆಂದು ಇದರಿಂದ ನಿರೂಪಿತವಾಯಿತು. ಪರಮಾತ್ಮನ ಪ್ರತ್ಯಕ್ಷಕ್ಕೆ ಕೇವಲ ಅಂತರಂಗಭಕ್ತಿಯೇ ಸಾಧನವು. ಅಂತರಂಗ ಭಕ್ತರನ್ನು, ಪರಮಾತ್ಮನ ಭಕ್ತಾಗ್ರೇಸರಳಾದ

ಲಕ್ಷ್ಮೀದೇವಿಯು ತ್ರಿಗುಣಗಳಿಂದ ಬಂಧಿಸುವುದಿಲ್ಲ. ಈ ರೀತಿ ತಾರತಮ್ಯೋಪೇತರಾದ ಸಕಲ ಸಾಧಕರಿಗೂ ಪರಮಾತ್ಮನ ಪ್ರಸಾದಕ್ಕಾಗಿ ಅನುಸರಿಸಬೇಕಾದ ಮಾರ್ಗವು ಒಂದೇ ತರಹಗಳಾದ್ದರಿಂದ ಸಾದೃಶ್ಯವೆಂಬ ಮಾರ್ಗವೇ ಆಗಿರುತ್ತದೆ. ಇಂತಹ ಸತ್ಪುರುಷರ ಮಾರ್ಗವೇ ಮಂಗಳಪ್ರದವಾದದ್ದು. ಅಸಭ್ಯಳಾದ ಪತ್ನಿಯಲ್ಲಿ ಅತಿ ಸ್ನೇಹ, ಪುನಃ ಪುನಃ ಪತ್ನಿಯನ್ನು ಹೊಂದಬೇಕೆಂಬ ಭಾವ, ಇವುಗಳು ಬಂಧಕಗಳಾಗುತ್ತವೆ. ಮೋಕ್ಷಕ್ಕೆ ಪ್ರಸಂಗವೆಂಬ ಆ ಸತಿಯ ಸ್ನೇಹವೂ, ಅಜರ ಅಥವಾ ಅಕ್ಷಯವೆಂಬ ಮೈಥುನಭಾವವೂ ಸಹ ಪ್ರತಿಬಂಧಕಗಳು. ಆದರೆ ಪತ್ನಿಯು ಸಜ್ಜನಳಾಗಿದ್ದರೆ ಮೋಕ್ಷಕ್ಕೆ ಸಹಾಯಕಳಾಗುತ್ತಾಳೆ.

## ಸಜ್ಜನರ ಲಕ್ಷಣ :-

ಸಜ್ಜನರೆಂಥವರೆಂದರೆ, ಸಹನಶಕ್ತಿಯುಳ್ಳವರು, ಸರ್ವಪ್ರಾಣಿಗಳಲ್ಲೂ ದಯೆ, ಸ್ನೇಹಗಳುಳ್ಳವರು, ಸರ್ವಜನಪ್ರಿಯರಾದ ಕಾರಣ ಶತೃಗಳೇ ಇಲ್ಲದವರೂ, ಶಾಂತ ಸ್ವಭಾವದವರು, ನಿರ್ದುಷ್ಟಸ್ವಭಾವದವರೂ ಆಗಿರುತ್ತಾರೆ. ಈ ಸಜ್ಜನರು ನನ್ನಲ್ಲಿ ನಿರಂತರವೂ ದೃಢವಾದ ಭಕ್ತಿಯನ್ನು ಮಾಡುತ್ತಾರೆ. ಸರ್ವಸತ್ಕರ್ಮಗಳನ್ನೂ ನಿಷ್ಕಾಮದಿಂದ ನನ್ನ ಪೂಜಾರೂಪವಾಗಿ ಮಾಡಿ ನನಗೇ ಸಮರ್ಪಿಸುತ್ತಾರೆ. ಪತ್ನೀಪುತ್ರಬಾಂಧವಾದಿ ಅತ್ಯಂತ ಪ್ರೀತಿಪಾತ್ರರನ್ನಾದರೂ ನನಗಾಗಿ ಬಿಡಲು ಸಿದ್ಧರಾಗಿರುತ್ತಾರೆ. ನನ್ನನ್ನೇ ಸರ್ವಭಾವಗಳಿಂದಲೂ ಗತಿ ಎಂದು ಭಾವಿಸಿ ಆಶ್ರಯಿಸುತ್ತಾರೆ. ನನ್ನ ಅವತಾರ ಲೀಲಾ ಚರಿತ್ರೆಗಳನ್ನು ಪರಸ್ಪರ ಹೇಳಿ ಕೇಳಿ ಆನಂದ ಪಡುತ್ತಾರೆ. ನನ್ನನ್ನೇ ಸರ್ವೋತ್ತಮನೆಂದೂ, ಪರಮಮುಖ್ಯಾರಾಧ್ಯನೆಂದೂ ತಿಳಿದು, ಅನೇಕ ವಿಧ ಯಜ್ಞ, ಯಾಗ, ಕೃಚ್ಛ್ರ, ಚಾಂದ್ರಾಯಣ, ಜಪ, ಹೋಮ, ಅರ್ಚನಾದಿಗಳಿಂದ ನನ್ನನ್ನು ಆರಾಧಿಸುತ್ತಾರೆ. ಎಲೈ ಸಾಧುಗಳಲ್ಲಿ ಶ್ರೇಷ್ಠಳಾದವಳೆ! ಇಂತಹ ಗುಣಗಳುಳ್ಳವರೇ ಸಜ್ಜನರು. ಇಂತಹ ಸಜ್ಜನರ ಸಹವಾಸದಿಂದ ವಿಷಯಾದಿ ದುಸ್ಸಂಗಗಳ ಪೂರ್ಣನಿವೃತ್ತಿಯುಂಟಾಗುವುದು.

ಸಜ್ಜನರು ಯಾವಾಗಲೂ ನನ್ನ ಅನುಗ್ರಹವೆಂಬ ಅಪರಿಮಿತ ಶಕ್ತಿಯ ಪರಮೈಶ್ವರ್ಯರೂಪವಾದ ಪ್ರಸಾದವನ್ನು ಲೋಕಕ್ಕೆ ಉಂಟುಮಾಡತಕ್ಕ, ಕೇಳುವ ಮಾತ್ರದಿಂದ ಶ್ರೋತ್ರೇಂದ್ರಿಯ ದ್ವಾರಾ ಮನಸ್ಸಿಗೆ ಅಮೃತಪಾನದಂತೆ ಆಪ್ಯಾಯಮಾನವನ್ನುಂಟುಮಾಡುವ, ಹರಿಕಥಾಶ್ರವಣದಲ್ಲಿಯೇ ನಿರತರಾಗಿರುತ್ತಾರೆ. ಅಂತಹವರ ಸಹವಾಸ ಮಾಡಿದರೆ ದುಷ್ಪಸಂಗಗಳು ತಾವಾಗಿಯೇ ತಪ್ಪುತ್ತವೆ. ಮತ್ತು ಸಜ್ಜನರ ಉತ್ಕೃಷ್ಟ ಭಕ್ತಿಯಿಂದ ಕೂಡಿದ ಭಗವಚ್ಚರಿತ್ರೆಗಳ ಅನುವಾದವನ್ನು ಕೇಳಿದರೆ, ಶ್ವಪಚನೆಂಬ ನಾಯಿಯ ಮಾಂಸ ಭೋಜಕನಾದ ನೀಚನಿಗಾದರೂ, ಕ್ರಮೇಣ

ಪರಮಾತ್ಮನಲ್ಲಿ ಭಕ್ತಿಯುಂಟಾಗುತ್ತದೆ. ಇನ್ನು ವೇದೋಕ್ತ ಕರ್ಮಾನುಷ್ಠಾನಪರರೂ, ಸ್ವಧರ್ಮಾಚರಣಶೀಲರಾದವರಿಗೆ, ಉತ್ಕೃಷ್ಟ ಭಕ್ತಿಯು ಉಂಟಾಗುವುದೆಂದು ಏನು ಹೇಳತಕ್ಕದ್ದಿದೆ? ಭಗವನ್ಮಹಿಮೆಗಳಶ್ರವಣಮಾತ್ರದಿಂದಉಂಟಾಗುವಭಕ್ತಿಯಿಂದ, ವಿಷಯಭೋಗಗಳಲ್ಲಿ ಆಶೆಯು ಹೋಗಿ, ವೈರಾಗ್ಯ ಉಂಟಾಗುತ್ತದೆ. ಆ ವೈರಾಗ್ಯದಿಂದ ಮನಸ್ಸು ನಿರ್ಮಲವಾಗುತ್ತದೆ. ಆ ನಿರ್ಮಲವಾದ ಮನಸ್ಸು, ಕೇಳಿದ ಭಗವನ್ಮಹಿಮೆಗಳನ್ನು ಪುನಃಪುನಃ ಸ್ಮರಿಸುತ್ತಿರಬೇಕೆಂಬ ಆಶೆಯನ್ನು, ಸ್ಮರಣೆಶಕ್ತಿಯನ್ನುಂಟು ಮಾಡುತ್ತದೆ.

ಸ್ಮರಣೆಯಿಂದ ಪರಮಾತ್ಮನಲ್ಲಿ ಮನೋಯೋಗವೆಂಬ ಧ್ಯಾನವು, ಅಂದರೆ ಕೇಳಿದ ಮಹಾತ್ಮೆಗಳುಳ್ಳ ಆ ಪರಮಾತ್ಮನನ್ನು ನೋಡಬೇಕೆಂಬ ಅಭಿಲಾಷೆಯಿಂದ ಪ್ರಯತ್ನವು ಹುಟ್ಟುತ್ತದೆ. ಇಂತಹ ಪ್ರಯತ್ನಕ್ಕೆ ಪ್ರಸನ್ನನಾಗಿ, ನಮ್ಮ ಹೃತ್ಸ್ಥಲದಲ್ಲಿಯೇ ವಾಸವಾಗಿರುವ ಬಿಂಬರೂಪ ಪರಮಾತ್ಮನ ದರ್ಶನವು ಉಂಟಾಗುತ್ತದೆ. ದರ್ಶನವಾದ ನಂತರ ಪರಮಾತ್ಮನಲ್ಲಿ ಇನ್ನೂ ಭಕ್ತಿಯು ಹೆಚ್ಚುತ್ತದೆ. ಸಾಧಕನು ನಿಷ್ಕಪಟಮನೋವೃತ್ತಿಯೆಂಬ ಮನೋವಾಕ್ಕಾಯ ಕರ್ಮಗಳಲ್ಲಿ ಒಂದೇ ಭಾವವುಳ್ಳವನಾಗಿ, ತಾನು ನೋಡಿದ ಭಗವದ್ರೂಪದಲ್ಲಿ ತಾನು ಶ್ರವಣಮಾಡಿದ ಕಲ್ಯಾಣಗುಣಗಳನ್ನೂ, ಮಹಿಮೆಗಳನ್ನೂ ತಿಳಿಯುವನಾಗಿ, ಆದರಿಂದ ಉದ್ರೇಕವಾದ ನಿರಂತರ ಪ್ರೇಮಪ್ರವಾಹರೂಪವಾದ ಭಕ್ತಿಯನ್ನು ನನ್ನಲ್ಲಿಮಾಡಿ, ನಂತರ ಜೀವಾಕಾರಮೂರ್ತಿಯಾದ, ಪ್ರತ್ಯಗಾತ್ಮನಾದ ನನ್ನನ್ನು ನೋಡಿದವನಾಗಿ, ಪ್ರಾರಬ್ಧಕರ್ಮಗಳ ಭೋಗಾನಂತರ, ಬ್ರಹ್ಮದೇವರ ಜೊತೆಯಲ್ಲಿ ಲಿಂಗಭಂಗಹೊಂದಿ, ಸ್ವರೂಪಸುಖ ಾವಿರ್ಭಾವರೂಪಮೋಕ್ಷವನ್ನು ಪಡೆಯುತ್ತಾನೆ, ಎಂದನು.

## ಭಕ್ತಿಯೋಗ, ವೈರಾಗ್ಯಗಳ ಲಕ್ಷ್ಣ ವಿವರಣೆ :-

ಆಗ ದೇವಹೂತೀದೇವಿಯು, ಎಲೈ! ಶಾಶ್ವತಸ್ವರೂಪನಾದ ಅಚ್ಯುತನೆ! ನೀನು ಹೇಳಿದ ಭಕ್ತಿಯ ಲಕ್ಷಣವೇನು? ಆ ಭಕ್ತಿಯು ನನಗೆ ಹೇಗೆ ಲಭ್ಯವಾದೀತು? ನೀನು ಮೋಕ್ಷವೆಂದು ಹೇಳಿರುವೆಯಲ್ಲಾ ಅದನ್ನು ಶೀಘ್ರದಲ್ಲಿ ನಾನು ಪಡೆಯಲು ಮಾರ್ಗವೇನು? ಆ ಮೋಕ್ಷವೆಂಬ ಭಗವತ್ಪ್ರಾಪ್ತಿಗೆ ಸಾಧಕವಾದ ಯೋಗದಲಕ್ಷಣವನ್ನು ನನಗೆ ತಿಳಿಸು. ಯೋಗಕ್ಕೆ ಅಂಗಗಳ್ಯಾವುವು? ಯೋಗಿಯು ಎಂತಹ ತತ್ವಜ್ಞಾನಿಯಾಗಿರಬೇಕೋ, ಆ ತತ್ವಗಳಸ್ವರೂಪಗಳೇನು? ಸ್ವಾಮಿ! ನಾನು ಸ್ತ್ರೀಯಾದಕಾರಣ ಶಾಸ್ತ್ರಜನ್ಯಜ್ಞಾನಕ್ಕೆ ನಾನು ಅರ್ಹಳಾಗಿಲ್ಲ. ನನ್ನ ಬುದ್ಧಿಯೂ ಅಲ್ಪವಾದದ್ದು. ಮಂದಮತಿಯಾದ ನನಗೆ ಈ ಮಹದ್ವಿಷಯಗಳು ಮನಸ್ಸಿಗೆ ಚೆನ್ನಾಗಿ ತಿಳಿಯುವಂತೆ, ನೀನೇ ಅನುಗ್ರಹಮಾಡಿ ನನಗೆ ತಿಳಿಸುವನಾಗು, ಎಂದಳು.

ಕಪಿಲರೂಪಪರಮಾತ್ಮನುತಾಯಿಯಮಾತನ್ನುಕೇಳಿ, ಆಕೆಯಇಂಗಿತವನ್ನರಿತವನಾಗಿ, ತಾಯಿಯೆಂಬ ಸ್ನೇಹ, ಪ್ರೀತಿಗಳಿಂದ ಕೂಡಿದವನಾಗಿ, ವೇದೋಕ್ತತತ್ವಗಳನ್ನು ವಿವರಿಸಿ ಹೇಳುವ ಸಾಂಖ್ಯಯೋಗವನ್ನೂ, ಸಾಂಖ್ಯಯೋಗ ಜ್ಞಾನದಿಂದ ಉಂಟಾಗತಕ್ಕ ಭಕ್ತಿಯೋಗಲಕ್ಷಣವನ್ನೂ ದೇವಹೂತೀದೇವಿಗೆ ಹೇಳಲು ನಿರ್ಧರಿಸಿ, ಈ ರೀತಿ ಹೇಳಿದನು:- ಎಲೈ! ತಾಯಿಯೆ! ಸದಾಸರ್ವಗುಣಾತ್ಮಸ್ವರೂಪನಾದ ವಿಷ್ಣುವು ಸತ್ವನೆಂದು ಕರೆಯಲ್ಪಡುತ್ತಾನೆ. ಇಂತಹ ಸರ್ವಗುಣಾಢ್ಯನಾದ ವಿಷ್ಣುವಿನಲ್ಲಿ, ಯಾವ ಅನುಸ್ರಾವಿಕಕರ್ಮರೆಂಬ ವೇದೋಕ್ತಕರ್ಮಗಳನ್ನು ಉಲ್ಲಂಘಿಸದೆ ಕ್ರಮವಾಗಿಮಾಡುತ್ತಾ, ಅವರ ಮನಸ್ಸಿನಿಂದ ನನ್ನನ್ನು ಸೇವಿಸುವ ಮನುಷ್ಯೋತ್ತಮರಿರುತ್ತಾರೆಯೋ, ಅವರ ಮನಸ್ಸಿನಲ್ಲಿರುವ ನನ್ನ ವಿಷಯಕವಾದ ಪ್ರೇಮಭಾವವು ಭಕ್ತಿ ಎನಿಸುತ್ತದೆ. ಆ ಭಕ್ತಿಯು ಪ್ರಯತ್ನವಿಲ್ಲದೇ ಸ್ವಾಭಾವಿಕವಾಗಿರುತ್ತದೆ. ಏನೂ ಫಲಾಪೇಕ್ಷೆಇಲ್ಲದೆ ನಿಷ್ಕಾರಣ ಪ್ರೇಮರೂಪವಾಗಿರುತ್ತದೆ. ದುಃಖಲೇಶದ ಸಂಪರ್ಕವೂ ಇಲ್ಲದೆ ಆನಂದಪ್ರವಾಹರೂಪವಾಗಿರುತ್ತದೆ. ಇಂತಹ ಭಕ್ತಿಯು ಅಪಕ್ವಯೋಗಿಗಳ ಭಕ್ತಿಯು. ಸಾಧನಕಾಲದಲ್ಲಿ ಪೂರ್ಣವಾಗತಕ್ಕದ್ದಲ್ಲ. ಬ್ರಹ್ಮದೇವರ ಜೊತೆಯಲ್ಲಿ ಲಿಂಗಭಂಗ ಹೊಂದಿದನಂತರ, ಮೋಕ್ಷದಲ್ಲಿ ಭಕ್ತೋತ್ತಮರಿಗೆ ಮಾತ್ರ ಅವರಸ್ವರೂಪಭಕ್ತಿಯೂ, ಆನಂದವೂ ತಾರತಮ್ಯಯೋಗ್ಯತೆಯಂತೆ ಪೂರ್ಣವಾಗುತ್ತದೆ. ಸಾಧನೆಯಕಾಲದಲ್ಲೂ ಉತ್ಕೃಷ್ಟಭಕ್ತಿಮಾಡದವರಿಗೆ, ಕ್ಲುಪ್ತವಾದ ಭಕ್ತಿ, ಆನಂದಗಳೂ ದೊರಕುವುದಿಲ್ಲ, ಕಮ್ಮಿಯಾಗಿ ಅಭಿವ್ಯಕ್ತಿಯಾಗುತ್ತವೆ.

## ಭಕ್ತಿಯಲ್ಲಿ ತಾರತಮ್ಯ :-

ಈ ಮನುಷ್ಯೋತ್ತಮರಿಂದ ಭಿನ್ನರಾದ ಇಂದ್ರಿಯಪ್ರೇರಕರಾದ ತತ್ವಾಭಿಮಾನಿದೇವತೆಗಳ, ಏಕಾಗ್ರಭಕ್ತಿಯು ಉತ್ತಮವಾದದ್ದು. ಈ ತತ್ವಾಭಿಮಾನಿದೇವತೆಗಳು ಇಂದ್ರಿಯಗಳನ್ನು ಭಗವದ್ವಿಷಯದಲ್ಲಿಯೇ ಪ್ರೇರಿಸುತ್ತಾರೆ. ತತ್ವಾಭಿಮಾನಿದೈತ್ಯರು ಇಂದ್ರಿಯಗಳನ್ನು ಅಸದ್ವಿಷಯಗಳಲ್ಲಿ ಪ್ರೇರಿಸುತ್ತಾರೆ. ಮುಖ್ಯಪ್ರಾಣದೇವರು ಇಬ್ಬರಲ್ಲಿಯೂ ಇದ್ದು ಅವರವರ ಇಂದ್ರಿಯಪ್ರೇರಕವ್ಯಾಪಾರವನ್ನು ಮಾಡಲು, ಶ್ರೀಹರಿಯಾಜ್ಞೆಯಿಂದ ಶಕ್ತಿಪ್ರದರಾಗಿ ತಾವು ನಿರ್ಲಿಪ್ತರಾಗಿರುತ್ತಾರೆ. ಆದುದರಿಂದ ತತ್ವಾಭಿಮಾನಿದೇವತೆಗಳ ಇಂದ್ರಿಯಪ್ರೇರಕತ್ವವು ಅವರು ಪರಮಾತ್ಮನಲ್ಲಿ ಅವಿಚ್ಛಿನ್ನವಾಗಿ ಏಕಾಗ್ರಮನಸ್ಸಿನಿಂದ ಮಾಡುವಭಕ್ತಿಗೆ ಅಡ್ಡಿಯಾಗುವುದಿಲ್ಲ. ಈ ತತ್ವಾಭಿಮಾನಿದೇವತೆಗಳ ಏಕಾಗ್ರಚಿತ್ತತೆಯಿಂದ ಕೂಡಿದ ಭಕ್ತಿಯೋಗವು, ಸಮಾಧಿಯೋಗರೂಪವಾಗಿರುತ್ತದೆ. ಆದುದರಿಂದ ಇವರು ಅನುಸ್ರಾವಿಕ ಕರ್ಮರಲ್ಲ. ಏಕೆಂದರೆ ವೇದೋಕ್ತಸತ್ಕರ್ಮಾನುಷ್ಠಾನವು ಬಾಹ್ಯಕರ್ಮರೂಪವಾದದ್ದು. ಸಮಾಧಿಯೋಗದಲ್ಲಿ ಬಾಹ್ಯಜ್ಞಾನವಾಗಲೀ, ಕರ್ಮವಾಗಲೀ

ಇಲ್ಲವಾದುದರಿಂದ, ದೇವತೆಗಳು ಕರ್ಮಾತೀತರು. ಇಂತಹ ತತ್ವಾಭಿಮಾನಿದೇವತೆಗಳ ಭಕ್ತಿಯೂ, ಅನಿಮಿತ್ತ ಸ್ವರೂಪವಾದದ್ದೂ, ಸತ್ವನಾಮಕ ಶ್ರೀಪರಮಾತ್ಮನಲ್ಲೇ ಏಕನಿಷ್ಠೆಯುಳ್ಳದ್ದೂ, ಉತ್ಕೃಷ್ಟಭಕ್ತಿರೂಪವಾದದ್ದೂ ಆಗಿರುತ್ತಾರೆ. ಯೋಗ್ಯತಾತಾರತಮ್ಯದಂತೆ ಇವರು ಮೋಕ್ಷದಲ್ಲಿ ಪೂರ್ಣವಾಗಿ ಸ್ವಯೋಗ್ಯಭಕ್ತಿ ಆನಂದಗಳನ್ನು ಪಡೆಯುತ್ತಾರೆ.

ಪರಮಾತ್ಮನಲ್ಲಿ ಮಾಡತಕ್ಕ ನಿಷ್ಕಾರಣ, ನಿಷ್ಕುಟಿಲಭಕ್ತಿಯು ಲಿಂಗಶರೀರವನ್ನು, ಅಗ್ನಿಯು ತರಗನ್ನು ಹೇಗೆ ಭಸ್ಮಸ್ನಾಗಿ ಮಾಡುವುದೋ ಅದರಂತೆ, ದಗ್ಧಪಟಸದೃಶವನ್ನಾಗಿ ಮಾಡುವುದು. ಯಾವ ನನ್ನ ಏಕಾಂತಭಕ್ತರು ನನ್ನ ವಿಮಲಕಥಾಪ್ರಸಂಗ ಶ್ರವಣಾದಿಗಳಲ್ಲಿಯೇ ಮಗ್ನರಾಗಿರುವರೋ, ಅವರು ನಾನು ಸಾಯುಜ್ಯಮುಕ್ತಿಯನ್ನು ಕೊಟ್ಟರೂ ಅದನ್ನು ಅಪೇಕ್ಷಿಸುವವರಲ್ಲ. ಅವರು ನನ್ನ ಮಹಿಮೆಗಳ ಸ್ಮರಣೆಯನ್ನೂ, ನಾನಾವತಾರಲೀಲೆಗಳಿಂದ ಅವರ ನಿರ್ಮಲ ಮನಸ್ಸಿಗೆ ದರ್ಶನವಿಷಯಗಳಾಗುವ, ನನ್ನ ಅನಂತಾನಂದರೂಪುಗಳ, ಗುಣಕ್ರಿಯಾದಿಗಳೆಂಬ ಅಮೃತಸಮುದ್ರದಲ್ಲಿಯೇ ಮುಳುಗಿದವರಾಗಿ, ಆ ಸುಖವನ್ನು ಸಾಯುಜ್ಯಾದಿಮೋಕ್ಷಸುಖಕ್ಕಿಂತ ಹೆಚ್ಚಾದದ್ದನ್ನಾಗಿ ಭಾವಿಸುತ್ತಾರೆ. ನನ್ನ ಏಕಾಂತ ಭಕ್ತರು ಅತಿಮನೋಹರರೂಪನೂ, ಉದಾರ ಭಾವದಿಂದ ಕೂಡಿದ ನಗು ಮುಖವುಳ್ಳವನೂ, ಪ್ರಸನ್ನದೃಷ್ಟಿಯುಳ್ಳವನೂ ಆದ ನನ್ನ ಪರಮಸುಂದರರೂಪವನ್ನು ನೋಡುವುದರಲ್ಲಿಯೂ, ನನ್ನ ಕೂಡ ಮೃದುಮಧುರ ಸಂಭಾಷಣೆಗಳನ್ನು ಮಾಡತಕ್ಕವರಾಗಿಯೂ, ಆನಂದಪರವಶರಾಗಿ ಆ ಕಾಲದಲ್ಲಿ ಅವರು ನಿರಂತರ ನನ್ನಲ್ಲಿ ಮಾಡುವ ಏಕಾಂತಭಕ್ತಿಗೆ ಮೆಚ್ಚಿ ನಾನು ಅವರಿಗೆ ಮುಕ್ತಿಗಳಲ್ಲಿ ಶ್ರೇಷ್ಠವಾದ ನನ್ನ ಅಂತಃಪುರಪ್ರವೇಶವೆಂಬ ಸಾಯುಜ್ಯ ಮುಕ್ತಿಯನ್ನೇ ಕೊಡುತ್ತೇನೆ.

ಇಂತಹ ಏಕಾಂತ ಭಕ್ತರು ನನ್ನಿಂದ ಅಷ್ಟಾಂಗ ಯೋಗ ಸಿದ್ಧಿರೂಪವಾದ ಅಣಿಮಾದಿ ಐಶ್ವರ್ಯಗಳನ್ನಾಗಲೀ, ಸ್ವರ್ಗ, ಮಹರ್ಲೋಕಾದಿ ಸುಖಗಳನ್ನಾಗಲೀ, ಭೂಲೋಕದಲ್ಲಿ ಸಮೃದ್ಧಿಯಾದ ಪಶು, ಧನ, ಸುತ, ಪತ್ನಿ ಮುಂತಾದವುಗಳನ್ನಾಗಲೀ, ಪದವಿಗಳನ್ನಾಗಲೀ ಅಪೇಕ್ಷಿಸುವುದಿಲ್ಲ. ಇಂತಹ ನನ್ನ ಭಕ್ತರಿಗೆ ಕಾಲಚಕ್ರವೆಂಬ ನನ್ನಪಾಶದ ಭಯವಿಲ್ಲ. ಅವರು ಮೃತ್ಯುವನ್ನು ಜಯಿಸುತ್ತಾರೆ. ಅವರು ನನ್ನನ್ನೇ ಆತ್ಮನೆಂದೂ, ಸಖನೆಂದೂ, ಸುತನೆಂದೂ, ಗುರುವೆಂದೂ, ಇಷ್ಟದೇವತೆ ಎಂದೂ ಭಜಿಸುತ್ತಾರೆ. ನಾನು ಅವರ ಅಪಮೃತ್ಯುಗಳನ್ನು ಪರಿಹರಿಸುತ್ತೇನೆ.

ಪ್ರಧಾನ ಪುರುಷೇಶ್ವರನೂ, ಆತ್ಮಶಬ್ದವಾಚ್ಯನೂ, ಷಡ್ಗುಣೈಶ್ವರ್ಯಸಂಪನ್ನನೂ ಆದ ನನ್ನ ಹೊರತು ಸರ್ವರ ಸರ್ವಭಯಪರಿಹಾರಕರು ಬೇರೆ ಯಾರೂ ಎಲ್ಲೂ ಇಲ್ಲ. ನನ್ನನ್ನು ಸರ್ವಭೂತಾತ್ಮನೆಂದು ಮೊರೆಹೊಕ್ಕರೆ ಸಮಸ್ತಭಯಪರಿಹಾರವಾಗುತ್ತದೆ. ನನ್ನ ಭಯದಿಂದಲೇ ಭೂತವಾಯುವು

ಪ್ರವಹಿಸುತ್ತದೆ. ಸೂರ್ಯನು ನನ್ನ ಭಯದಿಂದ ಉದಯಿಸಿ ಪ್ರಕಾಶಿಸುತ್ತಾನೆ. ಇಂದ್ರನು ನನ್ನ ಭಯದಿಂದ ಮಳೆ ಸುರಿಸುತ್ತಾನೆ. ಅಗ್ನಿಯು ಸುಡುತ್ತಾನೆ. ಯಮನು ಕಾಲಕ್ಕೆ ಸರಿಯಾಗಿ ಮರಣವನ್ನು ಜನರಿಗೆ ಉಂಟುಮಾಡುತ್ತಾನೆ. ಜ್ಞಾನಿಗಳು ಅಭಯವನ್ನು ನನ್ನಿಂದ ಪಡೆಯುವುದಕ್ಕಾಗಿ, ಜ್ಞಾನಭಕ್ತಿ ವೈರಾಗ್ಯಗಳಿಂದ ನನ್ನ ಪಾದಾಶ್ರಯವನ್ನು ಹೊಂದುತ್ತಾರೆ. ಆದುದರಿಂದ ನಿಖಿಲ ಪುರುಷಾರ್ಥಗಳನ್ನು ಪಡೆಯಬೇಕಾದರೆ, ಸರ್ವರೂ ನನ್ನಲ್ಲಿ ಅತ್ಯಂತ ಆಸಕ್ತವಾದ ಭಕ್ತಿಯೋಗರೂಪಮನಸ್ಸಂಬಂಧ ವುಳ್ಳವರಾಗತಕ್ಕದ್ದು, ಎಂದನು.

**ಎಂಬಲ್ಲಿಗೆ ಶ್ರೀಮದ್ಭಾಗವತ ಮಹಾಪುರಾಣದ ತೃತೀಯ ಸ್ಕಂಧದ ಕಪಿಲೋಪಾಖ್ಯಾನದ ಇಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

## अथ सप्तविंशोऽध्यायः

**भगवानुवाच**

अथ ते सम्प्रवक्ष्यामि तत्त्वानां लक्षणं पृथक् ।
यद् विदित्वा विमुच्येत पुरुषः प्राकृतैर्गुणैः ॥ १ ॥

ज्ञानं निःश्रेयसार्थाय पुरुषस्यात्मदर्शनम् ।
यदाहुर्वर्णये तत् ते हृदयग्रन्थिभेदनम् ॥ २ ॥

अनादिरात्मा पुरुषो निर्गुणः प्रकृतेः परः ।
प्रत्यग्धामा स्वयंज्योतिर्विश्वं येन समन्वितम् ॥ ३ ॥

न जातो न म्रियेतात्मा स हि देहाद्युपाधिभिः ।
निमित्तैरात्ततद्धर्मा यथा स्वप्ने तदीक्षिता ॥ ४ ॥

स एव प्रकृतिं सूक्ष्मां देवीं गुणमयीं विभुः ।
यदृच्छयैवोपगतामभ्यपद्यत लीलया ॥ ५ ॥

गुणैर्विचित्राः सृजतीं सरूपाः प्रकृतिं प्रजाः ।
विलोक्य मुमुहे सद्यः स इह ज्ञानगूहया ॥ ६ ॥

एवं पराभिध्यानेन कर्तृत्वं प्रकृतेः पुमान् ।
कर्मसु क्रियमाणेषु गुणैरात्मनि मन्यते ॥ ७ ॥

तदस्य संसृतिर्बन्धः पारतन्त्र्यं च तत्कृतम् ।
भवत्यकर्तुरीशस्य साक्षिणो निर्वृतात्मनः ॥ ८ ॥

कार्यकारणकर्तृत्वे कारणं प्रकृतिं विदुः ।
भोक्तृत्वे सुखदुःखानां पुरुषः प्रकृतेः परः ॥ ९ ॥

देवहूतिरुवाचप्रकृतेः पुरुषस्यापि लक्षणं पुरुषोत्तम ।
ब्रूहि कारणयोरस्य सदसच्च यदात्मकम् ॥ १० ॥

**भगवानुवाच**

यत् तत् त्रिगुणमव्यक्तं नित्यं सदसदात्मकम् ।
प्रधानं प्रकृतिं प्राहुरविशेषं विशेषवत् ॥ ११ ॥

पञ्चभिः पञ्चभिर्ब्रह्म चतुर्भिर्दशभिस्तथा ।
एतच्चतुर्विंशतिकं गणं प्राधानिकं विदुः ॥ १२ ॥

महाभूतानि पञ्चैव भूरापोऽग्निर्मरुन्नभः ।
तन्मात्राणि च तावन्ति गन्धादीनि मतानि मे ॥ १३ ॥

इन्द्रियाणि दश श्रोत्रं त्वग्दृग्रसननासिकम् ।
वाक् करौ चरणौ मेढ्रं पायुर्दशम उच्यते ॥ १४ ॥

मनो बुद्धिरहङ्कारश्चित्तमित्यन्तरात्मनः ।
चतुर्धा लक्ष्यते भेदो वृत्त्या लक्षणरूपया ॥ १५ ॥

एतावानेव संख्यातो ब्रह्मणः सगुणस्य हि ।
सन्निवेशो मया प्रोक्तो यः कालः पञ्चविंशकः ॥ १६ ॥

प्रभावं पौरुषं प्राहुः कालमेके यतो भयम् ।
अहङ्कारविमूढस्य कर्तुः प्रकृतिमीयुषः ॥ १७ ॥

प्रकृतेर्गुणसाम्यस्य निर्विशेषस्य मानवि ।
चेष्टा यतः स भगवान् काल इत्युपलक्षितः ॥ १८ ॥

अन्तः पुरुषरूपेण कालरूपेण यो बहिः ।
समन्वेत्येष सत्त्वानां भगवानात्ममायया ॥ १९ ॥

दैवात् क्षुभितधर्मिण्यां स्वस्यां योनौ परः पुमान् ।
आधत्त वीर्यं साऽसूत महत्तत्त्वं हिरण्मयम् ॥ २० ॥

विश्वमात्मगतं व्यञ्जन् कूटस्थो जगदङ्कुरः ।
स्वतेजसाऽपिबत् तीव्रमात्मप्रस्वापनं तमः ॥ २१ ॥

यत् तत् सत्वगुणं स्वच्छं शान्तं भगवतः पदम् ।
यदाहुर्वासुदेवाख्यं चित्तं तन्महदात्मकम् ॥ २२ ॥

स्वच्छत्वमविकारित्वं शान्तत्त्वमिति चेतसः ।
वृत्तिभिर्लक्षणं प्रोक्तं यथाऽपां प्रकृतिः परा ॥ २३ ॥

महत्तत्त्वाद् विकुर्वाणाद् भगवद्वीर्यसम्भवात् ।
क्रियाशक्तिरहङ्कारस्त्रिविधः समपद्यत ॥ २४ ॥

वैकारिकस्तैजसश्च तामसश्च यतो भवः ।
मनसश्चेन्द्रियाणां च भूतानां महतामपि ॥ २५ ॥

वैकारिकोऽधिदैवं तु बुद्धिः प्राणश्च तैजसः ।
तामसस्त्वर्थमात्रं च गुणव्यतिकरस्त्रिवृत् ॥ २६ ॥

सहस्रशिरसं साक्षाद् यमनन्तं प्रचक्षते ।
संकर्षणाख्यं पुरुषं भूतेन्द्रियमनोमयम् ॥ २७ ॥

कर्तृत्वं करणत्वं च कार्यत्वं चेति लक्षणम् ।
शान्तघोरविमूढत्वमिति वा स्यादहंकृतेः ॥ २८ ॥

वैकारिकाद् विकर्वाणान्मनस्तत्त्वमजायत ।
यत् सङ्कल्पविकल्पाभ्यां वर्तते कामसम्भवः ॥ २९ ॥

यद् विदुर्ह्यनिरुद्धाख्यं हृषीकाणामधीश्वरम् ।
शारदेन्दीवरश्यामं संराध्यं योगिभिः शनैः ॥ ३० ॥

तैजसात् तु विकुर्वाणाद् बुद्धितत्त्वमभूत् सति ।
द्रव्यस्फुरणविज्ञानमिन्द्रियाणामनुग्रहात् ॥ ३१ ॥

संशयोऽथ विपर्यासो निश्चयः स्मृतिरेव च।
स्वाप इत्युच्यते बुद्धेर्लक्षणं वृत्तितः पृथक्॥ ३२ ॥

तैजसानीन्द्रियाण्येव क्रियाज्ञानविभागशः।
प्राणस्य हि क्रियाशक्तिर्बुद्धेर्विज्ञानशक्तिता॥ ३३ ॥

तामसाच्च विकुर्वाणाद् भगवद्वीर्यचोदितात्।
शब्दमात्रमभूत् तस्मान्नभः श्रोत्रं तु शब्दगम्॥ ३४ ॥

अर्थाश्रयत्वं शब्दस्य द्रष्टुर्लिङ्गत्वमेव च।
तन्मात्रत्वं च नभसो लक्षणं कवयो विदुः॥ ३५ ॥

भूतानां छिद्रदातृत्वं बहिरन्तरमेव च।
प्राणेन्द्रियात्मधिष्ण्यत्वं नभसो वृत्तिलक्षणम्॥ ३६ ॥

नभसः शब्दतन्मात्रात् कालगत्या विकुर्वतः।
स्पर्शोऽभवत् ततो वायुस्त्वक् स्पर्शस्य च संग्रहः॥ ३७ ॥

मृदुत्वं कठिणत्वं च शैत्यमुष्णत्वमेव च।
एतत् स्पर्शस्य स्पर्शत्वं तन्मात्रत्वं नभस्वतः॥ ३८ ॥

चालनं व्यूहनं प्राप्तिर्नेतृत्वं द्रव्यशब्दयोः।
सर्वेन्द्रियाणामात्मत्वं वायोः कर्माभिलक्षणम्॥ ३९ ॥

वायोश्च स्पर्शतन्मात्राद् रूपं दैवेरितादभूत्।
समुत्थितं ततस्तेजश्चक्षू रूपोपलम्भनम्॥ ४० ॥

द्रव्याकृतित्वं गुणता व्यक्तिसंस्थात्वमेव च।
तेजस्त्वं तेजसः साध्वि रूपमात्रस्य वृत्तयः॥ ४१ ॥

द्योतनं पचनं पानमदनं हिममर्दनम्।
तेजसो वृत्तयस्त्वेताः शोषणं क्षुत्तृडुद्भवः॥ ४२ ॥

रूपमात्राद् विकुर्वाणाद् तेजसो दैवचोदितात्।
रसमात्रमभूत् तस्मादम्भो जिह्वा रसग्रहः॥ ४३ ॥

कषायो मधुरस्तिक्तः कवाम्ल इति नैकधा ।
भौतिकानां विकारेण रस एको विभिद्यते ॥ ४४ ॥

क्लेदनं पिण्डनं तृप्तिः प्राणनाप्ययनोन्दनम् ।
तापापनोदो भूयस्त्वमम्भसो वृत्तयस्त्विमाः ॥ ४५ ॥

रसमात्राद् विकुर्वाणादम्भसो दैवचोदितात् ।
गन्धमात्रमभूत् तस्मात् पृथ्वी घ्राणस्तु गन्धगः ॥ ४६ ॥

करम्भपूतिसौरभ्यशान्तोग्राम्लादिभिः पृथक् ।
द्रव्यावयववैषम्याद् गन्ध एको विभिद्यते ॥ ४७ ॥

भावनं ब्रह्मणः स्थानं धारणं सद्विशेषणम् ।
सर्वसत्वगुणोद्भेदः पृथिवीवृत्तिलक्षणम् ॥ ४८ ॥

नभोगुणविशेषोऽर्थो यस्य तच्छ्रोत्रमुच्यते ।
वायोर्गुणविशेषोऽर्थो यस्य तत् स्पर्शनं विदुः ॥ ४९ ॥

तेजोगुणविशेषोऽर्थो यस्य तच्चक्षुरुच्यते ।
अम्भोगुणविशेषोऽर्थो यस्य तद् रसनं विदुः ॥ ५० ॥

भूमेर्गुणविशेषोऽर्थो यस्य स घ्राण उच्यते ।
परस्य दृश्यते धर्मो ह्यपरस्मिन् समन्वयात् ॥ ५१ ॥

अतो विशेषो भावानां भूमावेवोपलक्ष्यते ।
एतान्यसंहत्य यदा महदादीनि सप्त वै ॥ ५२ ॥

न शेकुः पुरुषं स्रष्टुं भोगायतनमञ्जसा ।
कालकर्मगुणोपेतो जगदादिरुपाविशत् ॥ ५३ ॥

ततस्तेनानुविद्धेभ्यस्तत्त्वेभ्योऽण्डमचेतनम् ।
उत्थितं पुरुषो यस्मादुदतिष्ठदसौ विरा ॥ ५४ ॥

एतदण्डं विशेषाख्यं क्रमवृद्धैर्दशोत्तरैः ।
तोयादिभिः परिवृतं प्रधानेनावृतं बहिः ।

यत्र लोकवितानोऽयं रूपं भगवतो हरेः ॥ ५५ ॥

हिरण्मयादाण्डकोशादुत्थाय सलिले शयात् ।
तमाविश्य महादेवो बहुधा निर्बिभेद खम् ॥ ५६ ॥

निरभिद्यतास्य प्रथमं मुखं वाणी ततोऽभवत् ।
वाण्या वह्निरथो नासे घ्राणोऽतः प्राण एतयोः ॥ ५७ ॥

प्राणाद् वायुरभिद्येतामक्षिणी चक्षुरेतयोः ।
तस्मात् सूर्योऽन्वभिद्येतां कर्णौ श्रोत्रं ततो दिशः ॥ ५८ ॥

निर्बिभेद विराजस्त्वग् रोमश्मश्र्वादयस्ततः ।
ततश्चौषधयः पश्चाच्छिश्नं निर्बिभिदे ततः ॥ ५९ ॥

रेतस्तस्मादाप आसन् निरभिद्यत वै गुदम् ।
गुदादपानोऽपानाच्च मृत्युर्लोकभयङ्करः ॥ ६० ॥

हस्तौ च निरभिद्येतां बलं ताभ्यां ततः स्वरा ।
पादौ च निरभिद्येतां गतिस्ताभ्यां ततो हरिः ॥ ६१ ॥

नाड्योऽस्य निरभिद्यन्त ताभ्यो लोहितमाहृतम् ।
नद्यस्ततः समभवन्नुदरं निरभिद्यत ॥ ६२ ॥

क्षुत्पिपासे ततः स्यातां समुद्रस्तु तयोरभूत् ।
अथास्य हृदयं भिन्नं हृदयान्मन उत्थितम् ॥ ६३ ॥

मनसश्चन्द्रमा जातो बुद्धिर्बुद्धेर्गिरांपतिः ।
अहङ्कारस्ततो रुद्रश्चित्तं चैत्यस्ततोऽभवत् ॥ ६४ ॥

एते ह्यभ्युत्थिता देवा नैवास्योत्त्थापनेऽशकन् ।
पुनराविविशुः खानि तमुत्थापयितुं क्रमात् ॥ ६५ ॥

वह्निर्वाचा मुखं भेजे नोदतिष्ठत् ततो विरा ।
घ्राणेन नासिको वायुः नोदतिष्ठत् ततो विरा ॥ ६६ ॥

अक्षिणी चक्षुषाऽऽदित्यो नोदनिष्ठत् ततो विरा ।

श्रोत्रेण कर्णौ च दिशो नोदतिष्ठत् ततो विरा ॥ ६७ ॥

त्वचं रोमभिरोषध्यो नोदतिष्ठत् ततो विरा ।
रेतसा शिश्नमापस्तु नोदतिष्ठत् ततो विरा ॥ ६८ ॥

गुदं मृत्युरपानेन नोदतिष्ठत् ततो विरा ।
हस्ताविन्द्रो बलेनैव नोदतिष्ठत् ततो विरा ॥ ६९ ॥

विष्णुर्गत्यैव चरणौ नोदतिष्ठत् ततो विरा ।
नाडीर्नद्यो लोहितेन नोदतिष्ठत् ततो विरा ॥ ७० ॥

क्षुत्तृ---भ्यामुदरं सिन्धुर्नोदतिष्ठत् ततो विरा ।
हृदयं मनसा चन्द्रो नोदतिष्ठत् ततो विरा ॥ ७१ ॥

बुद्ध्या ब्रह्माऽपि हृदयं नोदतिष्ठत् ततो विरा ।
रुद्रोऽभिमत्या हृदयं नोदतिष्ठत् ततो विरा ॥ ७२ ॥

चित्तेन हृदयं चैत्यः क्षेत्रज्ञः प्राविशद् यदा ।
विरा तदैव पुरुषः सलिलादुदतिष्ठत ॥ ७३ ॥

यथा प्रसुप्तं पुरुषं प्राणेन्द्रियमनोधियः ।
प्रभवन्ति विना येन नोत्थापयितुमोजसा ॥ ७४ ॥

तमस्मिन् प्रत्यगात्मानं धिया योगविपक्कया ।
भक्त्या विरक्त्या ज्ञानेन विविच्यात्मनि चिन्तयेत् ॥ ७५ ॥

**॥ इति श्रीमद्भागवते (तृतीयस्कन्धे(*3) सप्तविंशोऽध्यायः ॥**

**॥ ಇಪ್ಪತ್ತೇಳನೆಯ ಅಧ್ಯಾಯ ॥**

## ತತ್ವಗಳ ಸಂಖ್ಯಾ, ಲಕ್ಷಣ ಫಲ ನಿರೂಪಣೆ, ಜೀವ ಬ್ರಹ್ಮರ ವಿವೇಕ :-

ಹಿಂದಿನ ಅಧ್ಯಾಯದಲ್ಲಿ ಕಪಿಲರು ಭಕ್ತಿಯಲಕ್ಷಣವನ್ನೂ, ಅನುಷ್ಠಾನಪ್ರಕಾರವನ್ನೂ ದೇವಹೂತೀದೇವಿಗೆ ಹೇಳಿ ಈ ಅಧ್ಯಾಯದಲ್ಲಿ ತತ್ವಗಳ ಸಂಖ್ಯೆಯನ್ನೂ, ಲಕ್ಷಣಗಳನ್ನೂ, ಆ ತತ್ವಜ್ಞಾನಕ್ಕೆ ಫಲವನ್ನೂ ನಿರೂಪಿಸುತ್ತಾರೆ:- ಕಪಿಲಪರಮಾತ್ಮನು ಎಲೈ ದೇವಹೂತೀದೇವಿಯೆ!

ನಾನು ನಿನಗೆ ತತ್ವಗಳ ವಿವರ, ಲಕ್ಷಣಗಳನ್ನೂ, ಬೇರೆಬೇರೆಯಾಗಿ ವಿವರಿಸಿ ಹೇಳುತ್ತೇನೆ. ಭಕ್ತಿಯೂ ಜ್ಞಾನವೂ ಹೇಗೆ ಭಗವತ್ಸಾಕ್ಷಾತ್ಕಾರಕ್ಕೆ ಕಾರಣವೋ, ಅದರಂತೆ ಈ ತತ್ವಗಳ ನಿಶ್ಚಯಜ್ಞಾನದಿಂದ ಜ್ಞಾನಿಯು ಪ್ರಾಕೃತಗುಣಸಂಬಂಧದಿಂದ ಬಿಡಲ್ಪಡುವವನಾಗುತ್ತಾನೆ. ಅಂದರೆ ಸತ್ವರಜಸ್ತಮೋಗುಣಗಳ ಅಧೀನನಾಗದೇ ನಿರ್ಗುಣನೆಂಬ ಪ್ರಾಕೃತ ಗುಣಾತೀತನಾಗುತ್ತಾನೆ. ಅಂದರೆ ಪಾಪಸಂಬಂಧವಿಲ್ಲದೇ ನಿರ್ದೋಷವಾದ ಗುಣಗಳುಳ್ಳವನಾಗುತ್ತಾನೆ ಎಂದರ್ಥ.

ವಿಶೇಷಾರ್ಥ - ಪರಮಾತ್ಮನು ಸತ್ವಾದಿ ಪ್ರಾಕೃತ ತ್ರಿಗುಣವರ್ಜಿತನಾಗಿ ನಿರ್ಗುಣನೆಂದು ಕರೆಯಲ್ಪಟ್ಟು ಹೇಗೆ ಅನಂತಸತ್ಕಲ್ಯಾಣಗುಣಪೂರ್ಣನಾಗಿರುತ್ತಾನೆಯೋ, ಲೇಶಕ್ಲೇಶದೋಷದೂರ ನಾಗಿರುತ್ತಾನೆಯೋ, ಅದರಂತೆಯೇ ತಾರತಮ್ಯೋಪೇತರಾದ ಜೀವರೂ ಅನೇಕವಿಧ ನಿರ್ದೋಷಗಳಾದ ಸದ್ಗುಣಗಳಿಂದ ಯೋಗ್ಯತಾನುಸಾರ ಪೂರ್ಣರಾಗಿರುತ್ತಾರೆ, ಎಂದು ತಾತ್ಪರ್ಯ. ಆದುದರಿಂದಲೇ ಜೀವನು ಪರಮಾತ್ಮನ ಸದೃಶ, ಅಂದರೆ ಸಚ್ಚಿದಾನಂದಸ್ವರೂಪನೆಂದು ಕರೆಯಲ್ಪಡುತ್ತಾನೆ. ಈ ತತ್ವಗಳ ಜ್ಞಾನವೂ ಪರಮಾತ್ಮನ ಮಹಾತ್ಮೆಯ ಜ್ಞಾನವಾಗಿರುತ್ತೆ. ಇದರಿಂದ ಪರಮಾತ್ಮನನ್ನು ಸರಿಯಾಗಿ ತಿಳಿಯಲು ಸಾಧ್ಯರಾಗಿ, ಆ ಜ್ಞಾನೋಪಾಸನೆಯಿಂದ ಪರಮಾತ್ಮನ ದರ್ಶನಪ್ರಾಪ್ತಿ, ಸಂಸಾರಬಂಧನದ ಬಿಡುಗಡೆಗಳೂ ಆಗುತ್ತವೆ. ಈ ತತ್ವಜ್ಞಾನಗಳಿಂದ ತಿಳಿಯಬೇಕಾದ ಆ ಪರಮಾತ್ಮನು ಆದಿ ಎಂಬ ಜನನ, ಅಂತ್ಯ ಎಂಬ ಮರಣರಹಿತನಾದ್ದರಿಂದ ಅನಾದಿ ಎಂದು ಕರೆಯಲ್ಪಡುತ್ತಾನೆ ಅಥವ ಅನ-ಎಂದರೆ ಬ್ರಹ್ಮವಾಯುಗಳಿಗೆ ಆದಿ-ಎಂದರೆ ಉತ್ಪತ್ತಿಕಾರಣನು. ತನಗೆ ಕಾರಣವಿಲ್ಲದವನಾದ್ದರಿಂದಲೂ ಅನಾದಿ ಶಬ್ದವಾಚ್ಯನು. ವಿಜ್ಞಾನಾದಿಗುಣರಾಶಿಯಾದ್ದರಿಂದ ಆತ್ಮಶಬ್ದವಾಚ್ಯನು. ಪುರು-ಪೂರ್ಣಾನಂದಂ, ಸನೋತಿ-ದದಾತೀತಿ ಪುರುಷಃ, ಎಂಬ ವ್ಯುತ್ಪತ್ತಿಯಂತೆ ಮುಕ್ತಿಯೋಗ್ಯರಿಗೆ ಮೋಕ್ಷದಲ್ಲಿ ಸ್ವಯೋಗ್ಯಪೂರ್ಣವಾದ ಆನಂದವನ್ನು ಅಭಿವ್ಯಕ್ತಿಮಾಡತಕ್ಕವನು ಅಥವ ಸರ್ವಾಂತರ್ಯಾಮಿ. ಪ್ರಾಕೃತಗುಣರಹಿತನೂ, ಚೇತನಪ್ರಕೃತಿಗಿಂತ ಉತ್ತಮನೂ ಆದುದರಿಂದ ನಿರ್ಗುಣಶಬ್ದವಾಚ್ಯನು. ಸಕಲಗುಣಗಳಿಗೂ ಪ್ರವೃತ್ತಿಶಕ್ತಿಪ್ರದನಾದ್ದರಿಂದಲೂ ನಿರ್ಗುಣನು. ಯೋಗಿಗಳು ಅಭಿಮುಖವನ್ನಾಗಿ ಮಾಡಿಕೊಳ್ಳುವ ಹೃತ್ಪದ್ಮವೇ ವಾಸಸ್ಥಾನವಾಗಿವುಳ್ಳವನು, ಸ್ವಪ್ರಕಾಶದಿಂದ ಬೆಳಗುವನಾದ್ದರಿಂದ ಪರಂಜ್ಯೋತಿನಾಮಕನು, ಪ್ರಪಂಚವನ್ನು ಸರ್ವತ್ರವ್ಯಾಪಿಸಿ ಇರತಕ್ಕವನು.

ಜೀವನೇ ಆಗಲೀ ಪರಮಾತ್ಮನೇ ಆಗಲಿ ಸ್ವರೂಪದೇಹದಿಂದಲೇ ಯಾವಾಗಲೂ ಇರುತ್ತಾರಾಗಿ, ಆ ಸ್ವರೂಪಕ್ಕೆ ಜನನಮರಣಾದಿಗಳಿಲ್ಲ. ಜೀವನು ಮಾತ್ರ ಅನಾದಿಲಿಂಗಶರೀರದಿಂದ ಬದ್ಧನಾದಕಾರಣ ಪ್ರಾಕೃತದೇಹವನ್ನು ಹೊಂದಿದಾಗ ಹುಟ್ಟಿದನೆಂದೂ, ದೇಹತ್ಯಾಗವಾದಾಗ

ಮರಣಹೊಂದಿದನೆಂದೂ, ದೇಹವನ್ನೇ ಆತ್ಮನೆಂಬ ಭ್ರಮೆಯಿಂದ ಹೇಳುತ್ತಾರಾಗಿ, ಪ್ರಾಕೃತದೇಹಕ್ಕೇ ಜನನಮರಣಾದಿಗಳು. ಜೀವನು ಸ್ವರೂಪತ್ವೇನ ಹುಟ್ಟುವುದೂ ಇಲ್ಲ ಸಾಯುವುದೂ ಇಲ್ಲ. ಅಸ್ವತಂತ್ರ, ಸ್ವತಂತ್ರತ್ವ , ಪ್ರಾಕೃತವೈಕೃತದೇಹರಹಿತತ್ವ , ಅವಿದ್ಯಾರಹಿತತ್ವಾದಿ ದಿವ್ಯಲಕ್ಷಣೋಪೇತನಾದ ಆತ್ಮಶಬ್ದವಾಚ್ಯನಾದ ಪರಮಾತ್ಮನಿಗೆ ದೇಹಪ್ರಾಪ್ತಿ, ದೇಹವಿಯೋಗರೂಪ ಜನನಮರಣಗಳು ಇಲ್ಲವೆಂದು ಏನು ಹೇಳತಕ್ಕದ್ದಿದೆ? ಪರಮಾತ್ಮನೂ ಸ್ವತಂತ್ರನೂ, ಪ್ರಕೃತಿಯು ಅವನಧೀನಳೂ ಆದುದರಿಂದ ಪರಮಾತ್ಮನು ಸೃಷ್ಟಿಕರ್ತನು ಆಗಿರುತ್ತಾನೆ. ಪ್ರಕೃತಿಗೆ ಅಧೀನನಾದ ಜೀವನು, ಪರಮಾತ್ಮನ ಇಚ್ಛೆಯಿಂದ ದೇಹಸಂಬಂಧ, ದೇಹವಿಯೋಗಗಳೆಂಬ ಜನನಮರಣಗಳನ್ನು ಹೊಂದುತ್ತಾನೆ. ಚೇತನಾಚೇತನಪ್ರಕೃತಿಗೆ ದೇವತೆಯಾದ ಲಕ್ಷ್ಮಿಯು, ಸದಾ ಪರಮಾತ್ಮನ ಸಮೀಪಸ್ಥಳೂ, ಆತನ ಪ್ರಿಯಪತ್ನಿಯಾಗಿ ಸರ್ವದಾ ಅವನ ಅಧೀನಳೂ ಆಗಿರುವುದರಿಂದ, ಪರಮಾತ್ಮನಿಗೆ ಪತ್ನಿಯಾದ ಲಕ್ಷ್ಮೀದೇವಿಯಿಂದ ಹೊಂದಬೇಕಾದ ಸುಖವು ಏನು ಇಲ್ಲವಾದರೂ, ಗುಣಮಯಿಯೂ, ವಿಚಿತ್ರಜಗತ್ಸೃಷ್ಟಿಮಾಡಲು ಇಚ್ಛಿಸುವ ದೇವಿಗೆ ಸಂತೋಷವನ್ನೂ, ಆನಂದವನ್ನೂ ಕೊಡುವುದಕ್ಕಾಗಿ ಪರಮಾತ್ಮನು ಲಕ್ಷ್ಮಿಯನ್ನು ಪತ್ನಿಯನ್ನಾಗಿ ಸ್ವೀಕರಿಸಿ, ಆಕೆಯಿಂದ ಸಕಲಜಗತ್ಸೃಷ್ಟಿಕಾರ್ಯವನ್ನು ಕೇವಲ ಲೀಲೆಗಾಗಿ ಮಾಡುವನು.

ಸತ್ವಾದಿಗುಣವೈಚಿತ್ರ್ಯಗಳಿಂದ ಶ್ರೀಪರಮಾತ್ಮನ ಅಧೀನಳಾಗಿ ಪ್ರಕೃತಿ ಸ್ತ್ರೀಪುರುಷರೂಪರಾದ, ಅನೇಕ ಪ್ರಾಣಿರಾಶಿಗಳನ್ನು ಸೃಷ್ಟಿ ಮಾಡುತ್ತಾಳೆ. ಸೃಷ್ಟರಾದ ಜೀವರು ಪರಸ್ಪರನೋಡಿ, ಪ್ರಾಕೃತರೂಪಗುಣಗಳಿಂದ ಮೋಹಿತರಾಗಿ ಸಂಸಾರದಲ್ಲಿ ಬಂಧಿತರಾಗುತ್ತಾರೆ. ಜೀವರು ಪ್ರಕೃತಿಯ ಅಧೀನರಾಗಿ ಗುಣಕರ್ಮಗಳನ್ನು ಮಾಡುತ್ತಾ, ಅಜ್ಞಾನದಿಂದ ತಾವೇ ಆ ಕರ್ಮಗಳನ್ನು ಮಾಡುತ್ತಿರುವೆವೆಂದು ಭಾವಿಸುತ್ತಾರೆ. ಈ ರೀತಿಯಾಗಿ ಜೀವರು ಪರಾಧೀನರಾಗಿಯೂ, ಕರ್ಮಬಂಧನೆಗೆ ಸಿಕ್ಕಿದವರಾಗಿಯೂ ಆಗುತ್ತಾರೆ.

ಸ್ವತಂತ್ರನಾದ ಪರಮಾತ್ಮನು ತಾನು ಪ್ರಕೃತಿಯ ಮೂಲಕ ಜೀವರಲ್ಲಿ ಮಾಡಿಸುವ ಕರ್ಮವನ್ನು, ಜೀವರು ತಾವೇ ಮಾಡುತ್ತೇವೆಂದು ಭಾವಿಸಿದಾಗ, ಪರಮಾತ್ಮನು ಅವರ ಭಾವನೆಗೆ ಅನುಸಾರವಾಗಿ ಜೀವರನ್ನೇ ಕರ್ಮಫಲಗಳಿಗೆ ಗುರಿಮಾಡಿ, ತಾನು ಕರ್ತನಲ್ಲದಂತೆ, ಜೀವನಿಂದ ಅಂಗೀಕರಿಸಲ್ಪಟ್ಟ ತಾನೇ ಮಾಡುತ್ತೇನೆಂಬ ಜೀವನ ಕರ್ಮಕ್ಕೆ, ಸುಮ್ಮನೇ ನೋಡತಕ್ಕವನಂತೆ ಸಾಕ್ಷಿಸ್ವರೂಪನಾಗುತ್ತಾನೆ. ಆದುದರಿಂದ ಪರಮಾತ್ಮನು ನಿರ್ಲಿಪ್ತನೂ, ಕಾರ್ಯ, ಕಾರಣ, ಕರ್ತುತ್ವಗಳಿಗೆ ಮೂಲಕಾರಣವಾಗಿ ಪ್ರಕೃತಿಯೂ, ಪ್ರಕೃತಿಗೆ ಭಿನ್ನನಾದ ಜೀವನು ಸುಖದುಃಖಗಳನ್ನು ಭೋಗಿಸುವಂತೆಯೂ ಆಗಿರುತ್ತಾರೆ, ಎಂದನು. ಅದಕ್ಕೆ ದೇವಹೂತೀದೇವಿಯು, ಎಲೈ ಪುರುಷೋತ್ತಮನೇ! ಈ ಪ್ರಕೃತಿಪುರುಷರ ಲಕ್ಷಣಗಳನ್ನೂ,

ಈ ಸದಸದಾತ್ಮಕ ಸ್ಥೂಲಸೂಕ್ಷ್ಮರೂಪಗಳುಳ್ಳ ಜಗತ್ತು, ಯಾವ್ಯಾವುದರಿಂದ ವ್ಯಾಪ್ತವಾಗಿದೆಯೋ, ಅವುಗಳಿಗೆ ಯಾವುದು ಕಾರಣವೋ ಅದನ್ನು ನನಗೆ ಹೇಳು, ಎಂದಳು. ದೇವಹೂತಿಯ ಮಾತನ್ನು ಕೇಳಿ ಕಪಿಲ ಪರಮಾತ್ಮನು ಪ್ರಕೃತಿಲಕ್ಷಣವನ್ನೂ, ತತ್ವವಿಭಾಗ ಕ್ರಮಗಳನ್ನೂ ಈ ರೀತಿಯಾಗಿ ಹೇಳಿದನು:-

## ಪ್ರಕೃತಿಯ ಲಕ್ಷಣ ಹಾಗೂ ತತ್ವವಿಭಾಗ :-

ಶ್ರೀಪರಮಾತ್ಮನು ಅನಂತಾನಂತರೂಪಗುಣಗಳುಳ್ಳವನಾದ ಕಾರಣ ಸುಲಭವಾಗಿ ಬುದ್ಧಿಯಿಂದ ಗ್ರಾಹ್ಯನಲ್ಲ. ಆದುದರಿಂದ ಮುಖ್ಯಅವ್ಯಕ್ತಸ್ವರೂಪನು. ಪರಮಾತ್ಮನಂತೆ ಅವ್ಯಕ್ತವಾಚ್ಯಳಾದ ಚಿತ್ಪ್ರಕೃತಿಯ ಲಕ್ಷಣಗಳನ್ನು ತಿಳಿಯುವುದು ಪರಮಾತ್ಮನ ಜ್ಞಾನಕ್ಕೆ ಸಹಕಾರಿಯಾಗುತ್ತದೆ. ಆದುದರಿಂದ, ಪ್ರಕೃತಿಯಗುಣಗಳು ಮೊದಲು ಹೇಳಲ್ಪಡುತ್ತವೆ.

ಅವ್ಯಕ್ತತತ್ವವು ಅತ್ಯಂತ ಸೂಕ್ಷ್ಮರೂಪವಾದುದರಿಂದ ತಿಳಿಯಲಸಾಧ್ಯವಾದದ್ದು. ಆದುದರಿಂದ ಅವ್ಯಕ್ತಶಬ್ದದಿಂದ ಕರೆಯಲ್ಪಡತಕ್ಕದ್ದು. ಇದು ನಾಶವಿಲ್ಲದೇ ಸರ್ವದಾ ಇರತಕ್ಕದ್ದು. ಇದು ಅವ್ಯಕ್ತಸ್ವರೂಪದ್ದಾದರೂ, ಮಹದಾದಿತತ್ವರೂಪವಿಕಾರಗಳನ್ನು ಹೊಂದಿದಾಗ ಬುದ್ಧಿ ಗ್ರಾಹ್ಯವಾಗುವುದರಿಂದ ವ್ಯಕ್ತಾವ್ಯಕ್ತವೆಂದೆನಿಸುವುದು. ಇದರಂತೆಯೇ ಪರಮಾತ್ಮನು ಸಾಕಲ್ಯೇನ ಅವ್ಯಕ್ತನಾದರೂ, ಅಪರೋಕ್ಷಾನಂತರ ಚಿನ್ಮನಸ್ಸಿಗೆ ಪ್ರಕಾಶನಾಗಿ ಕಾಣುವನಾದ ಕಾರಣ ವ್ಯಕ್ತನಾಗಿ, ಪರಮಾತ್ಮನೂ ವ್ಯಕ್ತಾವ್ಯಕ್ತಸ್ವರೂಪನು. ಈ ರೀತಿಯಲ್ಲಿ ಜ್ಞಾನಿಗಳು ಅವ್ಯಕ್ತತತ್ವವನ್ನು, ಪ್ರಧಾನಕಾರಣವೆಂದೂ, ಪ್ರಕೃತಿಯೆಂದೂ ಕರೆಯುತ್ತಾರೆ. ಮುಖ್ಯಪ್ರಧಾನ ಸೃಷ್ಟ್ಯಾದಿಕಾರಣನು ಶ್ರೀಪರಮಾತ್ಮನೇ ಆದರೂ, ಆತನ ಅಧೀನವಾದ ಈ ಅವ್ಯಕ್ತತತ್ವವಾದ ಪ್ರಕೃತಿಯಿಂದಲೇ ಮಹತ್ತತ್ವ ಮೊದಲಾದ ಬ್ರಹ್ಮದೇವರ ಶರೀರಾದಿ ಸಕಲಜಗತ್ಸೃಷ್ಟಿಯೂ ಆಗುವಕಾರಣ, ಪರಮಾತ್ಮನಂತೆ ಪ್ರಕೃತಿಯನ್ನೂ ತದಧೀನ ಪ್ರಧಾನಕಾರಣಳೆಂದು ಜ್ಞಾನಿಗಳು ತಿಳಿಯುತ್ತಾರೆ. ಅಂದರೆ ಪ್ರಕೃತಿಯು ಅವಿಶೇಷಳಾದರೂ ವಿಶೇಷಳಂತೆ ಪ್ರಧಾನಳೆನಿಸುತ್ತಾಳೆ.

ಈ ಪ್ರಧಾನ ಪ್ರಕೃತಿಯು ಇಪ್ಪತ್ನಾಲ್ಕುತತ್ವಗಳಿಂದ ಪೂರ್ಣವಾದದ್ದು. ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಎಂಬ ಪಂಚಭೂತಗಳೂ, ಗಂಧ, ರಸ, ರೂಪ, ಸ್ಪರ್ಶ, ಶಬ್ದಗಳೆಂಬ ಪಂಚತನ್ಮಾತ್ರಗಳೆಂಬ ಪೃಥಿವ್ಯಾದಿಪ್ರಧಾನವಾದ ಐದುಗುಣಗಳೂ, ಶ್ರೋತ್ರ, ತ್ವಕ್, ಜಿಹ್ವಾ, ನಾಸಿಕ, ವಾಕ್, ಕರ, ಚರಣ, ಮೇಢ್ರ, ಪಾಯುಗಳೆಂಬ ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯಗಳೆಂಬ ಹತ್ತು ಇಂದ್ರಿಯಗಳೂ, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತಗಳೆಂಬ ಮನೋವ್ಯಾಪಾರಭೇದಗಳೂ ಸೇರಿ ಇಪ್ಪತ್ನಾಲ್ಕು

ತತ್ವಗಳಾಗುವವು.

ಈ ತತ್ವಗಳೇ ಪ್ರಧಾನಪುರುಷರೆಂಬ ಪ್ರಕೃತಿ, ಪರಮಾತ್ಮರುಗಳ ಸನ್ನಿಧಾನಕ್ಕೆ ಯೋಗ್ಯಗಳಾದ ಅಧಿಷ್ಠಾನಗಳು. ಇವರಿಂದ ಯಾವಾಗಲೂ ವ್ಯಾಪ್ತವಾದವುಗಳೂ ಆಗಿವೆ. ಇವುಗಳಿಗೆ ಕಾಲನಾಮಕ ಪರಮಾತ್ಮನು ನಿಯಾಮಕನಾಗಿ ಇಪ್ಪತ್ತೈದನೆಯ ತತ್ವರೂಪನಾಗಿರುತ್ತಾನೆ. ಈ ಕಾಲನಾಮಕಪುರುಷನ ಇಚ್ಛೆಯೆಂಬ ಮಹಾಶಕ್ತಿಯಿಂದಲೇ, ಅವಿದ್ಯಾಕಾಮಕರ್ಮಶೀಲರಾದ ಅಹಂಕಾರಯುಕ್ತ ಪ್ರಾಣಿಗಳಿಗೆ ಜನನಮರಣರೂಪವಾದ ಸಂಸಾರಭಯವು ಪ್ರಾಪ್ತವಾಗುತ್ತದೆ.

ಪ್ರಳಯಕಾಲದಲ್ಲಿ ಗುಣಸಾಮ್ಯವನ್ನು ಹೊಂದಿ ನಿರ್ವ್ಯಾಪಾರಳಾದ ಚಿತ್ಪ್ರಕೃತಿಯು ಅವಿಶೇಷಳೆಂದು ಕರೆಯಲ್ಪಡುತ್ತಾಳೆ. ಆಕೆಯನ್ನು ಗುಣವ್ಯತ್ಯಾಸಮಾಡಿ ಸೃಷ್ಟಿಕಾರ್ಯದಲ್ಲಿ ಪ್ರೇರಿಸತಕ್ಕವನು ಕಾಲನಾಮಕ ಪರಮಾತ್ಮನು. ಪುರುಷರೂಪದಿಂದ ಒಳಗೂ, ಕಾಲರೂಪದಿಂದ ಹೊರಗೂ ಇದ್ದು ಪರಮಾತ್ಮನು ಪ್ರಕೃತಿಯನ್ನು ಸೃಷ್ಟಿಕಾರ್ಯದಲ್ಲಿ ಪ್ರೇರಿಸುತ್ತಾನೆ. ಆದುದರಿಂದ ಜಗನ್ಮೋಹಿನಿಯಾದ ಚಿತ್ಪ್ರಕೃತ್ಯಭಿಮಾನಿಯಾದ ಲಕ್ಷ್ಮೀದೇವಿಯು, ಪುರುಷನಾಮಕ ಪರಮಾತ್ಮನ ಇಚ್ಛೆಯೆಂಬ ಮಾಯೆಯಿಂದ ಮೋಹಿತಳಾಗಿ, ಪರಮಾತ್ಮನ ಅಂಗಸಂಗದಿಂದ ವೀರ್ಯವನ್ನು ಗರ್ಭದಲ್ಲಿ ಧರಿಸುವವಳಾಗಿ ಸುವರ್ಣಾತ್ಮಕವಾದುದರಿಂದ ಹಿರಣ್ಮಯವೆನಿಸುವ ಬ್ರಹ್ಮದೇವರ ಶರೀರವಾದ ಮಹತ್ತತ್ವವನ್ನು ಪ್ರಸವಿಸಿದಳು.

ಪ್ರಳಯಕಾಲದಲ್ಲಿ ಸಂಹಾರಮಾಡಲ್ಪಟ್ಟ ಜಡಚೇತನಾತ್ಮಕ ಜಗತ್ತನ್ನೇ ಪರಮಾತ್ಮನ ವೀರ್ಯರೂಪದಿಂದ ಪ್ರಕೃತಿನಾಮಕ ಲಕ್ಷ್ಮಿಯು ಮಹತ್ತತ್ವರೂಪದಿಂದ ಪ್ರಸವಿಸಿದಳು. ಆ ಮಹತ್ತತ್ವದಲ್ಲಿ ಅಡಗಿರುವ ಬ್ರಹ್ಮಾದಿ ಸಕಲಜಗತ್ತನ್ನು ಬೇರೆಬೇರೆಯಾಗಿ ಸೃಷ್ಟಿಸಿ, ಅಭಿವ್ಯಕ್ತಿ ಮಾಡುವುದಕ್ಕಾಗಿ, ಪರಮಾತ್ಮನು ತನ್ನ ಸ್ವಪ್ರಕಾಶದಿಂದ, ಎಲ್ಲೆಲ್ಲೂ ಆವರಿಸಿದ್ದ ದುರ್ಗಾರೂಪಳಾದ ತನ್ನ ಪತ್ನಿಯು ತಮಸ್ಸೆಂಬ ಕತ್ತಲೇರೂಪದಿಂದಿದ್ದವಳನ್ನು, ಸ್ತ್ರೀಯರ ಅಧರಪಾನಮಾಡುವಂತೆ, ಪಾನಮಾಡಿ ಸರ್ವತ್ರ ಬೆಳಕನ್ನುಂಟುಮಾಡಿದನು.

## ಅಹಂಕಾರ ತತ್ವ ವಿಭಾಗ :-

ಪೂರ್ಣಾನಂದಾದಿಗುಣಸ್ವರೂಪನೂ, ಸ್ವಚ್ಛವಾದ ಬಿಳುಪುವರ್ಣವುಳ್ಳದ್ದೂ, ಕಲ್ಮಷರಹಿತವಾದುದೂ, ಸ್ಥಿಮಿತವಾದ ಯಾವ ಶ್ರೀಪರಮಾತ್ಮನ ವಾಸುದೇವಾಖ್ಯರೂಪವೋ ಅದು ಮಹತ್ತತ್ವನಿಯಾಮಕ ಭಗವದ್ರೂಪವು. ಈ ಮಹತ್ತತ್ವದಿಂದ ಅಭಿಮನ್ಯವಾದ ಚಿತ್ತವು, ಸರ್ವಜೀವರ

ಚಿತ್ತಸ್ವರೂಪವಾಗಿ ವಾಸುದೇವನಿಂದ ಮಹತ್ತತ್ವದದ್ವಾರಾ ಸೃಷ್ಟಿಸಲ್ಪಟ್ಟಿತು. ನಿರ್ಮಲವಾಗಿರುವುದೂ, ವಿಕಾರವನ್ನು ಹೊಂದದೇ ಇರುವುದೂ, ಶಾಂತವೆಂಬ ಪ್ರಸನ್ನತೆ ಇಂದಿರುವುದೂ ಚಿತ್ತದಲಕ್ಷಣ. ಇದು ಚಲನೆಇಲ್ಲದ ನಿರ್ಮಲೋದಕ ಸರೋವರದಂತೆ ಗಂಭೀರಸ್ವಭಾವವುಳ್ಳದ್ದು. ಪ್ರಕೃತಿಯಿಂದ ಸೃಷ್ಟವಾದ ಜಲವು, ನಿರ್ಮಲೋದಕವು, ಪ್ರಕೃತಿಯಿಂದ ಹೇಗೆ ಬೇರೆಯೋ, ಅದರಂತೆ ಮಹತ್ತತ್ವದಿಂದ ಅಭಿವ್ಯಕ್ತವಾದ ಚಿತ್ತವು ಮಹತ್ತತ್ವದಿಂದ ಬೇರೆಯಾದದ್ದು. ಜ್ಞಾನ ಪ್ರಧಾನವಾದದ್ದು, ಅಂದರೆ ವಿಜ್ಞಾನಾತ್ಮಕವಾದದ್ದು ಮಹತ್ತತ್ವ. ಈ ಮಹತ್ತತ್ವವನ್ನು ತನ್ನ ವೀರ್ಯದಿಂದ ವಿಕಾರವನ್ನು ಹೊಂದಿಸಿ ಪರಮಾತ್ಮನು ಜ್ಞಾನಕ್ರಿಯಾಶಕ್ತಿಗಳುಳ್ಳ ಅಹಂಕಾರತತ್ವವನ್ನು, ವೈಕಾರಿಕ, ತೈಜಸ, ತಾಮಸಾಹಂಕಾರಗಳೆಂದು ಮೂರುವಿಧವಾಗಿ ಸೃಷ್ಟಿಸಿದನು.

ಈ ಅಹಂಕಾರತ್ರಯಗಳಿಂದ ಮನಸ್ಸೂ, ಪಂಚಜ್ಞಾನಪಂಚಕರ್ಮೇಂದ್ರಿಯಗಳೂ, ಪಂಚಭೂತಪಂಚತನ್ಮಾತ್ರಗಳೂ, ಅಭಿಮಾನಿದೇವತೆಗಳಸಹಿತ ಸೃಷ್ಟಿಸಲ್ಪಟ್ಟವು. ವೈಕಾರಿಕಾಹಂಕಾರದಿಂದ ದಿಗ್ದೇವತೆಗಳೂ, ತೈಜಸಾಹಂಕಾರದಿಂದ ಬುದ್ಧಿತತ್ವವೂ, ತದಭಿಮಾನಿಯಾದ ಉಮಾದೇವಿಯೂ, ಅಹಂಕಾರಿಕ ಪ್ರಾಣನೂ ಹುಟ್ಟಿದರು. ತಾಮಸಾಹಂಕಾರದಿಂದ ಪಂಚಭೂತಗಳು ತನ್ಮಾತ್ರಸಹಿತವಾಗಿ ಹುಟ್ಟಿದವು. ಇವು ಪ್ರಾಣಿಗಳಲ್ಲಿ ಸತ್ವರಜಸ್ತಮೋಗುಣಗಳ ವೃತ್ತಿಭೇದಗಳನ್ನುಂಟುಮಾಡತಕ್ಕವು. ಅಹಂಕಾರತತ್ವವು ಸೂಕ್ಷ್ಮವಾಗಿರುವುದನ್ನು, ಭೂತೇಂದ್ರಿಯಮನೋಮಯನೆನಿಸುವ ಸಹಸ್ರಶೀರ್ಷಾದಿ ಲಕ್ಷಣೋಪೇತನಾದ ಸಂಕರ್ಷಣರೂಪ ಪರಮಾತ್ಮನಿಂದ ನಿಯಮಿಸಲ್ಪಡುತ್ತದೆ. ಅದುದರಿಂದ ಸಂಕರ್ಷಣನೆಂಬ ಅನಂತರೂಪಿಯು ಸಹಸ್ರಫಣಾನ್ವಿತನಾದವನು ತ್ರಿವಿಧ ಅಹಂಕಾರಕಾರ್ಯಗಳಲ್ಲೂ ಪ್ರಧಾನಪ್ರೇರಕನು. ಸ್ಥೂಲಾಹಂಕಾರವೆಂಬ ಇಂದ್ರಿಯಗಳ ಪ್ರೇರಕನು ಪ್ರದ್ಯುಮ್ನರೂಪೀ ಪರಮಾತ್ಮನು. ಸಂಕಲ್ಪವಿಕಲ್ಪಾ ತ್ಮಕ ಮನಸ್ಸಿಗೆ ಪ್ರೇರಕನು ಅನಿರುದ್ಧನು.

ವೈಕಾರಿಕಾಹಂಕಾರವು ಮನೋರೂಪಪರಿಣಾಮವನ್ನು ಹೊಂದಿ ಸ್ಥೂಲದೇಹಸಂಬಂಧದಿಂದ ನಾನು ನನ್ನದೆಂಬ ಭಾವವನ್ನು ಜೀವರಿಗೆ ಹುಟ್ಟಿಸಿ ಆದರಿಂದ ಜೀವರಿಗೆ ಕರ್ತೃತ್ವಭಾವನೆಯನ್ನು ಂಟುಮಾಡುತ್ತದೆ. ಈ ರೀತಿ ವೈಕಾರಿಕಾಹಂಕಾರವು ಕರ್ತೃತ್ವಲಕ್ಷಣವುಳ್ಳದ್ದು. ತೈಜಸಾಹಂಕಾರವು ಇಂದ್ರಿಯಗಳಸೃಷ್ಟಿಗೆ ಕಾರಣವಾಗಿ, ಇಂದ್ರಿಯಾಭಿಮಾನಿದೇವತೆಗಳ ಅಧೀನಗಳಾದ ಇಂದ್ರಿಯಗಳಿಗೆ ವಿಷಯಜ್ಞಾನವನ್ನು ಉತ್ಪತ್ತಿಮಾಡುವುದರಿಂದ, ತೈಜಸಾಹಂಕಾರವು ಇಂದ್ರಿಯಗಳಕರಣವೆಂದು ಹೇಳಲ್ಪಡುತ್ತದೆ. ತೈಜಸಾಹಂಕಾರವು ಆದರಿಂದ ಕರಣತ್ವ ಲಕ್ಷಣವುಳ್ಳದ್ದು. ತಾಮಸಾಹಂಕಾರವು ಪಂಚಭೂತತನ್ಮಾತ್ರಸೃಷ್ಟಿಮಾಡಿ, ಪಂಚಭೂತಾತ್ಮಕವಾದ ಪ್ರಾಣಿಗಳ ದೇಹದಲ್ಲಿ ನಿಯಾಮಕರೂಪದಿಂದ,

ದೇಹಕ್ಕೆ ಇಂದ್ರಿಯವ್ಯಾಪಾರರೂಪ ಕ್ರಿಯಾಶಕ್ತಿಯನ್ನು ಕೊಡತಕ್ಕದ್ದಾದ್ದರಿಂದ, ತಾಮಸಾಹಂಕಾರವು ಕ್ರಿಯಾಲಕ್ಷಣವಾದದ್ದು.

ವೈಕಾರಿಕಾಹಂಕಾರವು ಸಾತ್ವಿಕದೇವತೆಗಳ ಸೃಷ್ಟಿಗೆಕಾರಣವಾದುದರಿಂದ ಶಾಂತಸ್ವರೂಪವಾದದ್ದೆಂದೂ, ತೈಜಸಾಹಂಕಾರವು ಪ್ರಾಣಿಗಳನ್ನು ಭಯಂಕರವಾದ ದುರ್ವಿಷಯಗಳಿಗೆ ಎಳೆಯಲು ಸಹಕಾರಗಳಾದ ರಜೋಗುಣಪ್ರಧಾನಗಳಾದ ಕರಣಗಳೆಂಬ ಇಂದ್ರಿಯಗಳನ್ನು ಸೃಷ್ಟಿಸಿದ್ದರಿಂದ ಘೋರರೂಪವಾದುದೆಂದೂ, ತಾಮಸಾಹಂಕಾರವು ಪಂಚಭೂತನಿರ್ಮಿತ ದೇಹವುಳ್ಳ ಮೂಢರಾದ ಮನುಷ್ಯರನ್ನು ಸೃಷ್ಟಿಸಿದ್ದರಿಂದ ಮೂಢಸ್ವಭಾವವುಳ್ಳದ್ದೆಂದೂ ಹೇಳಲ್ಪಡುತ್ತವೆ. ಇವುಗಳಲ್ಲಿ ಸಂಕರ್ಷಣನಾಮಕ ಶೇಷದೇವರು, ಶಾಂತ, ಘೋರ, ಮೂಢರೆಂಬ ಹೆಸರುಗಳಿಂದಿದ್ದು ಇವುಗಳನ್ನು ಸೃಷ್ಟಿಸುತ್ತಾರೆ. ವೈಕಾರಿಕಾಹಂಕಾರದ ವಿಕಾರರೂಪವಾಗಿ ಸಂಕಲ್ಪ, ವಿಕಲ್ಪಗಳುಳ್ಳ ಮನಸ್ತತ್ವವು ಹುಟ್ಟಿತು. ಈ ಮನಸ್ಸು ನಾನಾವಿಧಗಳಾದ ಇಂದ್ರಿಯಭೋಗರೂಪ ವಿಷಯಾಪೇಕ್ಷೆಗಳೆಂಬ ಕಾಮೋತ್ಪತ್ತಿಗೆ ಕಾರಣವಾದದ್ದು. ಮನಸ್ಸು ಕಾಮವನ್ನು ಹುಟ್ಟಿಸತಕ್ಕ ಲಕ್ಷಣವಾದದ್ದು. ಆದುದರಿಂದ ಮನಸ್ಸು ಸರ್ವೇಂದ್ರಿಯ ವ್ಯಾಪಾರಗಳನ್ನೂ ನಿಯಮಿಸತಕ್ಕದ್ದು. ಈ ಸ್ಥೂಲಮನಸ್ಸು ಕಾಮಪುತ್ರನಾದ ಅನಿರುದ್ಧನಿಂದ ಅಭಿಮನ್ಯವಾದದ್ದು. ಕಾಮಪುತ್ರಅನಿರುದ್ಧನು ಆದರಿಂದ ದೇಹಕ್ಕೂ ಇಂದ್ರಿಯಗಳೆಂಬ ಕರಣಗಳಿಗೂ ನಿಯಾಮಕನು.

ಈ ಸ್ಥೂಲಮನಸ್ಸಿನಲ್ಲಿ ವ್ಯಾಪ್ತವಾದ ಜೀವನ ಸ್ವರೂಪವಾದ ಮನಸ್ಸು ಇರುತ್ತದೆ. ಅದಕ್ಕೆ ಪ್ರದ್ಯುಮ್ನಾಖ್ಯ ಪ್ರಾಣಮಯನಾದ ಪರಮಾತ್ಮನಿಂದ ಅಭಿವ್ಯಕ್ತನಾದ, ನೀಲಮೇಘಶ್ಯಾಮ ಸರ್ವಸಾರ ಸುಂದರಪುರುಷನಾದ ಅನಿರುದ್ಧಾಖ್ಯ ಪರಮಾತ್ಮನು ನಿಯಾಮಕನಾಗಿ, ಕಾಮಪುತ್ರ ಅನಿರುದ್ಧನಲ್ಲೂ ನಿಯಾಮಕನಾಗಿರುತ್ತಾನೆ. ಈ ಅನಿರುದ್ಧನನ್ನು, ಪ್ರಾಣಾಯಾಮ, ಪ್ರತ್ಯಾಹಾರ, ಮನೋನಿರೋಧ, ಬ್ರಹ್ಮಜ್ಞಾನಾದಿ ನಿಯಮಗಳಿಂದ ಕೂಡಿದ ಯೋಗಿಗಳು ಸಮಾಧಿಯೋಗರೂಪ ಧ್ಯಾನದಿಂದ ಕಾಣುತ್ತಾರೆ. ಮನಸ್ಸು ಪದಾರ್ಥಗಳ ಸಾಮಾನ್ಯಜ್ಞಾನವನ್ನುಂಟುಮಾಡುತ್ತದೆ.

ತೈಜಸಾಹಂಕಾರ ವಿಕಲ್ಪದಿಂದ ಬುದ್ಧಿತತ್ವವು ಹುಟ್ಟಿತು. ಇದು ಇಂದ್ರಿಯಗಳ ಪ್ರಸನ್ನತೆಯನ್ನು ಹುಟ್ಟಿಸಿ ವಸ್ತುಗಳಲ್ಲಿ ಮನಸ್ಸಿಗಿಂತ ಹೆಚ್ಚಾದ ವಿಶೇಷಜ್ಞಾನವನ್ನುಂಟುಮಾಡತಕ್ಕದ್ದು. ಮನಸ್ಸು ಸಂಶಯ, ವಿಕಲ್ಪವೆಂಬ ಬದಲಾವಣೆಗಳನ್ನು ಮಾಡತಕ್ಕ ಸ್ವಭಾವದ್ದಾದರೆ, ಬುದ್ಧಿಯು, ಸಂಶಯ, ಮಿಥ್ಯಾಜ್ಞಾನ, ನಿಶ್ಚಯಜ್ಞಾನ, ಸ್ಮರಣಶಕ್ತಿ ಮತ್ತು ಅಜ್ಞಾನವೆಂಬ ಐದುರೂಪಗಳಿಂದಿದ್ದು, ಜೀವರಿಗೆ ಅವರವರ ಜ್ಞಾನಭೇದಗಳಿಗನುಸಾರವಾಗಿ ಸಂಶಯ, ಮಿಥ್ಯಾ, ನಿಶ್ಚಯಾದಿ ಜ್ಞಾನಗಳನ್ನೇ

ದೃಢವನ್ನಾಗಿ ಮಾಡತಕ್ಕದ್ದು. ಬುದ್ಧಿಯು ದೃಢಜ್ಞಾನಸ್ವರೂಪವಾದದ್ದು ಮತ್ತು ಮೇಲೆ ಹೇಳಿದ ಐದು ವಿಧವಾದದ್ದು, ವೃತ್ತಿಗಳಿಂದ ಬೇರೆಬೇರೆಯಾದದ್ದು. ಅಂದರೆ, ಸಂಶಯಜ್ಞಾನಿಗೆ ಸಂಶಯಜ್ಞಾನವನ್ನೇ, ಮಿಥ್ಯಾಜ್ಞಾನಿಗೆ ಮಿಥ್ಯಾಜ್ಞಾನವೇ ಸರಿಯಾದ ಜ್ಞಾನವೆಂದೂ, ನಿಶ್ಚಯಜ್ಞಾನಿಗೆ ಯಥಾರ್ಥಜ್ಞಾನವನ್ನೇ ದೃಢಮಾಡತಕ್ಕದ್ದು. ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯಗಳು ತೈಜಸಗಳೆಂದು ಕರೆಯಲ್ಪಡುತ್ತವೆ. ಕರ್ಮೇಂದ್ರಿಯಗಳಿಗೆ ಕ್ರಿಯಾಶಕ್ತಿಯು ಅಹಂಕಾರಿಕ ಪ್ರಾಣನಿಂದ ಉಂಟಾಗುತ್ತದೆ. ಜ್ಞಾನೇಂದ್ರಿಯಗಳಿಗೆ ವಿಜ್ಞಾನಶಕ್ತಿಯು ಉಮಾದೇವಿಯರಿಂದ ಉಂಟಾಗುತ್ತದೆ.

## ಪಂಚಭೂತ ಹಾಗೂ ಪಂಚತನ್ಮಾತ್ರಗಳ ಲಕ್ಷಣಗಳು :-

ತಾಮಸಾಹಂಕಾರವು ಪರಮಾತ್ಮನಿಂದ ವಿಕಲ್ಪಮಾಡಲ್ಪಟ್ಟು ಅದರಿಂದ ಶಬ್ದತನ್ಮಾತ್ರವೂ, ಆಕಾಶವೂ, ಶಬ್ದಗ್ರಹಣಶಕ್ತಿಯುಳ್ಳ ಶ್ರೋತ್ರೇಂದ್ರಿಯವೆಂಬ ಕಿವಿಯೂ ಉತ್ಪತ್ತಿಯಾಯಿತು. ಶಬ್ದವು ಸಾಧಾರಣವಾಗಿ ಪದಾರ್ಥಗಳ ಜ್ಞಾನವನ್ನು ಹುಟ್ಟಿಸತಕ್ಕದ್ದು, ವಿಶೇಷವಾಗಿ ವರ್ಣಗಳಲ್ಲೂ, ವೇದಗಳಲ್ಲೂ ಇದ್ದು ಪರಮಾತ್ಮನ ಜ್ಞಾನವನ್ನೂ ಹುಟ್ಟಿಸತಕ್ಕದ್ದು, ಧ್ವನ್ಯಾತ್ಮಕವಾದ ಆಕಾಶದ ಸೂಕ್ಷ್ಮರೂಪವಾದದ್ದೂ, ಶಬ್ದದ ಲಕ್ಷಣಗಳು. ಆಕಾಶವು ಪ್ರಾಣಿಗಳಿಗೂ, ಇತರವಸ್ತುಗಳಿಗೂ, ಒಳಗೂಹೊರಗೂ ಛಿದ್ರತೆ ಎಂಬ ಅವಕಾಶವನ್ನು ಕೊಡತಕ್ಕದ್ದು, ಪಂಚಪ್ರಾಣಗಳಾದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನರಿಗೂ, ದಶೇಂದ್ರಿಯಗಳಿಗೂ, ಜೀವನಿಗೂ ವಾಸಸ್ಥಾನವನ್ನು ಕೊಡತಕ್ಕದ್ದು. ಈ ಲಕ್ಷಣಗಳು ಆಕಾಶದ್ದೂ ಆಗಿರುತ್ತವೆ.

ಆಕಾಶಕ್ಕೂ ಶಬ್ದಕ್ಕೂ ಪರಮಾತ್ಮನ ಶಕ್ತಿಯಿಂದ ಘರ್ಷಣೆಯುಂಟಾಗಿ ಸ್ಪರ್ಶತನ್ಮಾತ್ರವೂ, ಪ್ರಧಾನವಾಯುವಾದ ಸೂತ್ರನಾಮಕವಾಯುವೂ, ಸ್ಪರ್ಶಗ್ರಹಣಶಕ್ತಿಯುಳ್ಳ ತ್ವಗೀಂದ್ರಿಯವೂ ಉತ್ಪನ್ನಗಳಾದವು. ಸ್ಪರ್ಶವು, ಮೃದುತ್ವ, ಕಠಿಣತ್ವ, ಶೀತ, ಉಷ್ಣಗಳನ್ನು ತಿಳಿಸಿಕೊಡುತ್ತದೆ. ಚಲನೆ, ಒಟ್ಟುಗೂಡಿಸುವಿಕೆ, ಸಮೀಪವನ್ನು ಹೊಂದಿಸುವಿಕೆ, ಪದಾರ್ಥಗಳನ್ನೂ ಶಬ್ದಗಳನ್ನೂ ಸ್ಥಳದಿಂದ ಸ್ಥಳಕ್ಕೆ ತೆಗೆದುಕೊಂಡು ಹೋಗುವಿಕೆ, ಎಲ್ಲಾ ಇಂದ್ರಿಯಗಳನ್ನೂ ವ್ಯಾಪಿಸಿ, ಇಂದ್ರಿಯಗಳಿಗೂ, ಜೀವನಿಗೂ ಪ್ರಾಣಶಕ್ತಿಯನ್ನುಂಟುಮಾಡುವುದೂ ವಾಯುವಿನ ಲಕ್ಷಣಗಳು.

ವಾಯುವಿಗೂ ಸ್ಪರ್ಶಕ್ಕೂ ಸಂಘರ್ಷಣೆಯಿಂದ ರೂಪತನ್ಮಾತ್ರವೂ, ಅಗ್ನಿಯೂ, ರೂಪವನ್ನು ತಿಳಿಸತಕ್ಕ ಚಕ್ಷುರಿಂದ್ರಿಯವೂ ಹುಟ್ಟಿದವು. ಪ್ರಕಾಶವೂ, ದ್ರವ್ಯತ್ವವೂ, ಆಕೃತಿಯೂ ಮತ್ತು ಇವುಗಳನ್ನು ತಿಳಿಸುವ ಶಕ್ತಿಎಂಬ ದೃಶ್ಯತ್ವವೆಂಬ ಗುಣವೂ ರೂಪತನ್ಮಾತ್ರದ ಲಕ್ಷಣವು. ರೂಪವು ಅಗ್ನಿಸ್ವರೂಪವಾದುದರಿಂದ

ಕ್ರೂರವಾದ ಸ್ವಭಾವವುಳ್ಳದ್ದು. ಇದರ ಕಾರ್ಯಗಳು ಬೆಳಕನ್ನುಂಟುಮಾಡುವಿಕೆ, ಬೇಯಿಸುವಿಕೆ, ಪಾನಮಾಡುವಿಕೆ, ತಿನ್ನುವಿಕೆ ಮತ್ತು ಹಿಮವನ್ನು ನಾಶಮಾಡುವಿಕೆಗಳು ಆಗಿವೆ. ಅಗ್ನಿಯವೃತ್ತಿಯು ಶೋಷಣವೆಂಬ ವಣಗಿಸುವಿಕೆ, ಹಸಿವು ಬಾಯಾರಿಕೆಗಳ ಉತ್ಪತ್ತಿ ಇವು ಅಗ್ನಿಯ ಸ್ವಭಾವಲಕ್ಷಣಗಳು.

ರೂಪತನ್ಮಾತ್ರಕ್ಕೂ ಅಗ್ನಿಗೂ ಘರ್ಷಣೆ ಉಂಟುಮಾಡಿ ಪರಮಾತ್ಮನು ರಸತನ್ಮಾತ್ರವನ್ನೂ, ನೀರನ್ನೂ, ರಸವನ್ನು ತಿಳಿಸುವ ಜಿಹ್ವೇಂದ್ರಿಯವನ್ನೂ ಸೃಷ್ಟಿಸಿದನು. ರಸಗಳು ಕಹಿ, ಸಿಹಿ, ಖಾರ, ವಗರು, ಉಪ್ಪು, ಹುಳಿಎಂದು ಆರುವಿಧಗಳಾಗಿ, ಒಂದೇ ರಸವಾದ ನೀರು, ಪದಾರ್ಥಗಳ ದ್ರವ್ಯವೈಲಕ್ಷಣ್ಯಗಳಿಂದ ನಾಲಿಗೆಗೆ ತೋರಿಬರುತ್ತದೆ. ನೀರೆಂಬ ಜಲಕ್ಕೆ, ಒದ್ದೆಮಾಡುವಿಕೆ, ಉಂಡೆಮಾಡುವಿಕೆ, ತೃಪ್ತಿಯನ್ನುಂಟುಮಾಡುವಿಕೆ, ಪ್ರಾಣಶಕ್ತಿ ಎಂಬ ಚೇಷ್ಟಾಶಕ್ತಿಯನ್ನು, ಲವಲವಿಕೆಯನ್ನು ಹುಟ್ಟಿಸುವಿಕೆ, ಬಿಂದು ಎಂದರೆ ಹನಿಯಾಗುವಿಕೆ, ತಾಪವನ್ನು ಪರಿಹಾರಮಾಡುವಿಕೆ, ಇತರ ತತ್ವಗಳಲ್ಲಿ ಪ್ರಾಧಾನ್ಯತೆಯಿಂದ ಇರುವಿಕೆ, ಇವು ಉದಕದ ಲಕ್ಷಣಗಳು.

ರಸತನ್ಮಾತ್ರಕ್ಕೂ ಜಲಕ್ಕೂ ಘರ್ಷಣೆಯುಂಟುಮಾಡಿ ಪರಮಾತ್ಮನು ಗಂಧತನ್ಮಾತ್ರವನ್ನು ಸೃಷ್ಟಿಸಿದನು. ಗಂಧತನ್ಮಾತ್ರದಿಂದ ಪೃಥ್ವಿಯನ್ನೂ, ಗಂಧವನ್ನೂ ತಿಳಿಸುವ ಘ್ರಾಣೇಂದ್ರಿಯವನ್ನೂ ಸೃಷ್ಟಿಸಿದನು. ಒಂದೇವಾಸನೆ ಪದಾರ್ಥಗಳ ಅವಸ್ಥಾ, ವೈಲಕ್ಷಣಗಳ ಭೇದದಿಂದ, ಕರಂಭಾ ಎಂಬ ಪದಾರ್ಥಗಳ ವಾಸನೆಯೂ, ಪ್ರತಿಎಂಬ ಕೊಳೆತ ಪದಾರ್ಥಗಳ ದುರ್ಗಂಧವೂ, ಸೌರಭ್ಯವೆಂಬ ಪುಷ್ಪಾದಿಗಳ ಸುಗಂಧವೂ, ಶಾಂತವೆಂಬ ಮಿಶ್ರಗಂಧವೂ, ಉಗ್ರವೆಂಬ ಮಾತಾಡುವಾಗ ಬಾಯಿಯಿಂದ ವ್ಯಕ್ತವಾಗುವ ಗಂಧವೂ, ಆಮ್ಲಎಂಬ ಹುಳೀವಾಸನೆಯೂ ಈ ವಿಧವಾಗಿ ಆರುವಿಧ ವಾಸನೆಗಳಾಗುತ್ತವೆ. ಪದಾರ್ಥಗಳನ್ನು ಉತ್ಪತ್ತಿಮಾಡುವಿಕೆಯೂ, ಭಗವದ್ದರ್ಶನಕ್ಕೆ ಸಾಧನವಾದ ಮನುಷ್ಯದೇಹೋತ್ಪತ್ತಿ ಮಾಡತಕ್ಕ ಲಕ್ಷಣವುಳ್ಳದ್ದೂ ಆದಕಾರಣ ಬ್ರಹ್ಮನಾಮಕ ಪರಮಾತ್ಮನ ಆವಾಸಸ್ಥಾನವಾದದ್ದೂ, ಸಕಲಪ್ರಾಣಿಗಳನ್ನೂ ಧರಿಸತಕ್ಕದ್ದೂ, ವಾಯು, ಅಗ್ನಿ, ಆಪಗಳೆಂಬ ಭೂತತ್ರಯಗಳಿಗಿಂತ ಚೆನ್ನಾಗಿ ವ್ಯಕ್ತವಾದದ್ದೂ, ಸಮಸ್ತಪ್ರಾಣಿ, ಪದಾರ್ಥಗಳ ಸತ್ವಾದಿಗುಣವಿಚಿತ್ರ ಸ್ವಭಾವಗಳನ್ನು ಬೇರೆಬೇರೆ ವ್ಯಕ್ತಿಮಾಡತಕ್ಕದ್ದೂ, ಪೃಥ್ವಿಯ ವೃತ್ತಿಲಕ್ಷಣಗಳು.

ಈ ರೀತಿಯಾಗಿ ಶ್ರೋತ್ರೇಂದ್ರಿಯವು ಆಕಾಶ, ಶಬ್ದ ಪ್ರಧಾನವಾದದ್ದು. ತ್ವಗಿಂದ್ರಿಯವು ವಾಯು ಸ್ಪರ್ಶಪ್ರಧಾನವಾದದ್ದು. ಕಣ್ಣುಗಳು ತೇಜಸ್ಸುರೂಪ ಪ್ರಧಾನವಾದವುಗಳು. ನಾಲಿಗೆಯು ಜಲ, ರಸಪ್ರಧಾನವಾದದ್ದು. ಮೂಗು ಪೃಥ್ವೀಗಂಧಪ್ರಧಾನವಾದ ಇಂದ್ರಿಯವು. ಮೊದಲು ಹುಟ್ಟಿದ ಆಕಾಶಾದಿತತ್ವಗಳ ಗುಣಗಳೂ, ಪರಸ್ಪರ ಸಂಬಂಧದಿಂದ ಆಮೇಲೆ ಹುಟ್ಟಿದ ಆಕಾಶಾದಿ

ತತ್ವಗಳಗುಣದ ಜೊತೆಯಲ್ಲಿ ಹೊಂದಿರುತ್ತವೆ. ಹೇಗೆಂದರೆ ಆಕಾಶಕ್ಕೆ ಶಬ್ದಗುಣ. ವಾಯುವಿನಲ್ಲಿ ಶಬ್ದ, ಸ್ಪರ್ಶ ಎಂಬ ಎರಡು ಗುಣಗಳು. ಅಪ್ಪು ಎಂಬ ಜಲದಲ್ಲಿ, ಶಬ್ದ, ಸ್ಪರ್ಶ, ರಸ ಈ ಮೂರುಗುಣಗಳೂ. ತೇಜಸ್ಸೆಂಬರೂಪಿನಲ್ಲಿ ಶಬ್ದ, ಸ್ಪರ್ಶ, ರಸ, ರೂಪ ನಾಲ್ಕುಗುಣಗಳೂ, ಪೃಥ್ವಿಯಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದುಗುಣಗಳೂ ಇರುವವು. ಹೀಗೆ ಮಹತ್ತತ್ವ, ಅಹಂಕಾರತತ್ವ, ಪಂಚಮಹಾಭೂತಗಳು ಸೃಷ್ಟಿಸಲ್ಪಟ್ಟಮೇಲೆ ಇವುಗಳೂ, ಪರಸ್ಪರಸಂಬಂಧಹೊಂದಲೂ, ಬ್ರಹ್ಮಾಂಡವನ್ನೂ, ವಿರಾಟ್ಪುರುಷನದೇಹವನ್ನೂ ಸೃಷ್ಟಿಸಲು ಸಮರ್ಥಗಳಾಗಲಿಲ್ಲ.

## ಬ್ರಹ್ಮಾಂಡ ಮತ್ತು ಬ್ರಹ್ಮದೇವರ ಸೃಷ್ಟಿ:-

ಮಹದಾದಿ ತತ್ವನಿಯಾಮಕರಾದ ಬ್ರಹ್ಮ, ಶೇಷ, ರುದ್ರ, ಇಂದ್ರಾದಿದೇವತೆಗಳಿಂದ ಸ್ತುತ್ಯನಾಗಿ ಪರಮಾತ್ಮನು ಅವರ ಪ್ರಾರ್ಥನೆಯಿಂದ ಈ ಎಲ್ಲಾ ತತ್ವಗಳಲ್ಲೂ ಪ್ರವೇಶಿಸಿ ಅವುಗಳನ್ನು ಒಟ್ಟುಗೂಡಿಸಿ, ಬ್ರಹ್ಮಾಂಡವನ್ನೂ, ವಿರಾಟ್ಪು ರುಷದೇಹವನ್ನೂ ಸೃಷ್ಟಿಮಾಡಲು ಶಕ್ತಿಯನ್ನುಕೊಟ್ಟು, ಬ್ರಹ್ಮಾಂಡವನ್ನು ಹೊರಗಿನ ಸಪ್ತಾವರಣಗಳಸಹಿತ, ಕ್ರಮಕ್ರಮವಾಗಿ ಒಂದಕ್ಕಿಂತ ಒಂದು ಹತ್ತುಹತ್ತರಷ್ಟು ಹೆಚ್ಚಾದ್ದನ್ನಾಗಿ ಸೃಷ್ಟಿಮಾಡಿದನು. ಸಪ್ತಾವರಣಗಳೆಂಬ ಪಂಚಭೂತ, ಅಹಂಕಾರತತ್ವ, ಮಹತ್ತತ್ವಾವರಣಗಳ ಹೊರಭಾಗದಲ್ಲಿ ತ್ರಿಗುಣಾತ್ಮಕವಾದ ಮೂಲಪ್ರಕೃತಿಯೆಂಬ ಪ್ರಧಾನಾವರಣವೂ, ಅದರಾಚೆಗೆ ಪರಮಾತ್ಮನ ವ್ಯಾಪ್ತಿಯೂ ಇರುವುದು.

ಬ್ರಹ್ಮಾಂಡದೊಳಗೆ ಪಾತಾಳಾದಿ ಸತ್ಯಲೋಕಪರಿಯಂತ ಹದಿನಾಲ್ಕುಲೋಕಗಳೂ, ವಿರಾಟ್ಪು ರುಷನೆಂಬ ಬ್ರಹ್ಮದೇವರ ಶರೀರವೂ ವ್ಯಕ್ತಗಳಾದವು. ಈ ಹದಿನಾಲ್ಕುಲೋಕಗಳೂ, ವಿರಾಟ್‌ದೇಹವೂ ಪರಮಾತ್ಮನಿಗೆ ಪ್ರತಿಮಾರೂಪವಾಗಿ, ಸನ್ನಿಧಾನದಿಂದ ಕೂಡಿವೆ. ಬ್ರಹ್ಮಾಂಡದೊಳಗೆ ಆ ಆಕಾರದಿಂದಲೇ ಇದ್ದ ಪರಮಾತ್ಮನಿಂದ ಸೃಷ್ಟವಾದ ವಿರಾಟ್‌ನಾಮಕ ಬ್ರಹ್ಮದೇವರ ಶರೀರಕ್ಕೆ ಅಂಗಾಂಗಗಳನ್ನೂ, ಚೇತನಶಕ್ತಿಯನ್ನೂ ಉಂಟುಮಾಡುವುದಕ್ಕಾಗಿ, ಪರಮಾತ್ಮನು ಅಂಡವನ್ನು ಭೇದಿಸಿಕೊಂಡು ಒಳಗೆ ಪ್ರವೇಶಿಸಿದನು.

ಒಳಗೆ ಪ್ರವೇಶಿಸಿ ಮೊದಲು ಮುಖವೆಂಬ ಆಕಾಶವನ್ನು ಛಿದ್ರಮಾಡಿವ್ಯಕ್ತಮಾಡಿದನು. ಆ ಮುಖದಲ್ಲಿ ಮೊದಲು ವಾಗಿಂದ್ರಿಯವೂ, ಪ್ರಾಣವಾಯುವೂ ನಾಸಿಕ್ಯದೇವತೆಗಳೆಂಬ ಅಶ್ವಿನೀದೇವತೆಗಳೂ ಹುಟ್ಟಿದರು. ನಂತರ ಕಣ್ಣುಗಳೆಂಬ ಗೋಳಕಗಳೂ, ಚಕ್ಷುರಿಂದ್ರಿಯವೂ ಅಲ್ಲಿ ಸೂರ್ಯನೂ, ನಂತರ ಕಿವಿಗಳೂ, ಶ್ರವಣೇಂದ್ರಿಯವೂ, ದಿಗ್ದೇವತೆಗಳೂ ಹುಟ್ಟಿದರು.

ನಂತರ ತಲೇಕೂದಲು, ಮೈಮೇಲಿನ, ಮುಖದಮೇಲಿನ ಕೂದಲುಗಳೂ, ಅವುಗಳಿಂದ ಓಷಧಿಗಳೂ ಉತ್ಪನ್ನಗಳಾದವು. ನಂತರ ಜನನೇಂದ್ರಿಯವೂ, ರೇತಸ್ಸೂ, ಜಲವೂ ಆದವು. ಆಮೇಲೆ ಗುದವೆಂಬ ಪಾಯ್ವಿಂದ್ರಿಯವೂ, ಅಪಾನವಾಯುವೂ, ಲೋಕಭಯಂಕರನಾದ ಮೃತ್ಯುವೂ ಹುಟ್ಟಿದವು. ನಂತರ ಕೈಗಳೂ ಅಭಿವ್ಯಕ್ತಗಳಾದವು. ಅಲ್ಲಿ ವಾಯುವೂ ಇಂದ್ರದೇವರೂ ಹುಟ್ಟಿದ್ದರು. ಪಾದಗಳೂ, ಗಮನಶಕ್ತಿಯೂ ಅಭಿಮಾನಿದೇವತೆಯಾದ ಯಜ್ಞ ಎಂಬುವನಲ್ಲಿ ಶ್ರೀಹರಿಯು ಆವಿಷ್ಟನಾಗಿ ಗಮನಶಕ್ತಿಪ್ರದನಾದನು. ನಾಡಿಗಳು ಉತ್ಪನ್ನಗಳಾಗಿ, ಅವುಗಳಲ್ಲಿ ರಕ್ತವು ಉತ್ಪನ್ನವಾಗಿ ಹರಿಯಲಾರಂಭಿಸಿದವು. ಅವುಗಳಿಂದ ನದಿಗಳೂ ಉತ್ಪನ್ನಗಳಾದವು.

ನಂತರ ಉದರವೆಂಬ ಹೊಟ್ಟೆಯು ವಿಭಾಗಿಸಲ್ಪಟ್ಟಿತು. ಅಲ್ಲಿ ಹಸಿವು ಬಾಯಾರಿಕೆಗಳೂ, ಸಮುದ್ರವೂ ಹುಟ್ಟಿದವು. ನಂತರ ಹೃದಯವೂ, ಅದರಲ್ಲಿ ಮನಸ್ಸೂ, ಮನೋಭಿಮಾನಿ ಚಂದ್ರನೂ, ಬುದ್ಧಿಯೂ ಬೃಹಸ್ಪತಿಯೂ, ಅಹಂಕಾರವೂ ರುದ್ರನೂ ಉತ್ಪನ್ನರಾದರು. ನಂತರ ಚಿತ್ತವೂ, ಚಿತ್ತಾಭಿಮಾನಿಯಾದ ಬ್ರಹ್ಮನೂ ರೂಪಾಂತರದಿಂದ ಹೃದಯವನ್ನು ಪ್ರವೇಶಿಸಿದರು. ಪೂರ್ವೋಕ್ತ ವನ್ಹ್ಯಾದಿದೇವತೆಗಳೆಲ್ಲರೂ, ತಮ್ಮತಮ್ಮ ಶಕ್ತಿಗಳಿಂದ ತಮ್ಮತಮ್ಮ ಅಂಗಗಳಲ್ಲಿ ಪ್ರವಿಷ್ಟರಾಗಿದ್ದರೂ ಆ ಬ್ರಹ್ಮಶರೀರವು ಮೇಲಕ್ಕೇಳಲಿಲ್ಲ. ಯಾವಾಗ ಪ್ರತ್ಯನಾತ್ಮನೆನಿಸುವ ಚಿತ್ತಾಭಿಮಾನಿಯಾದ ಬ್ರಹ್ಮನು, ಕ್ಷೇತ್ರಜ್ಞನಾಮಕನು ಹೃದಯವನ್ನು ಪ್ರವೇಶಿಸಿದನೋ ಆವಾಗ ಬ್ರಹ್ಮಶರೀರವು ಮೇಲಕ್ಕೆದ್ದು ಚಲನೆಯಿಂದ ಕೂಡಿತು, ಚೇತನವಿಶಿಷ್ಟವಾಯಿತು. ಆದುದರಿಂದಲೇ ಬ್ರಹ್ಮಶರೀರವು ನಿದ್ರೆಯಿಂದ ಎದ್ದಂತೆ ಎದ್ದುಕೂತಿತು. ಇಂತಹ ಪರಮಮುಖ್ಯ ಚೇತನನಾದ ಪ್ರತ್ಯಗಾತ್ಮನಾಮಕ ಪರಮಾತ್ಮನನ್ನು ಯೋಗಿಗಳು ಭಕ್ತಿ, ವಿರಕ್ತಿ, ಜ್ಞಾನಗಳಿಂದ ಚೆನ್ನಾಗಿ ತಿಳಿದು ಧ್ಯಾನಿಸಬೇಕು, ಎಂದನು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಇಪ್ಪತ್ತೇಳನೆಯ ಅಧ್ಯಾಯವು ಮುಗಿಯುತು.**
**ಶ್ರೀಕೃಷ್ಣಾರ್ಪಣಮಸ್ತು**

## अथ अष्टाविंशोऽध्यायः

प्रकृतिस्थोऽपि पुरुषो नाज्यते प्राकृतैर्गुणैः ।
अविकारादकर्तृत्वान्निर्गुणत्वाज्जलाकवत् ॥ १ ॥

स एष यर्हि प्रकृतेर्गुणेष्वभिविषज्जते ।
अहङ्कारविमूढात्मा कर्ताऽस्मीत्यभिमन्यते ॥ २ ॥

तेन संसारपदवीमवशोऽभ्येत्य निर्वृतः ।
प्रासङ्गिकैः कर्मदोषैः सदसन्मिश्रयोनिषु ॥ ३ ॥

अर्थे ह्यविद्यमानेऽपि संसृतिर्न निवर्तते ।
ध्यायतो विषयानस्य स्वप्नेऽनर्थागमो यथा ॥ ४ ॥

प्रबुद्ध्य स्वप्नसुप्तिभ्यां संस्मरन्नात्मवैशसम् ।
वैतथ्यं व्यभिचारं च नासौ ध्यायेद् यतो भयम् ॥ ५ ॥

अत एव शनैश्चित्तं प्रसक्तमसतां पथि ।
भक्तियोगेन तीव्रेण विरक्त्याऽऽत्मवशं नयेत् ॥ ६ ॥

यमादिभिर्योगपथैरभ्यसंच्छ्रद्धयाऽन्वितः ।
मयि भावेन सत्येन मत्कथाश्रवणेन च ॥ ७ ॥

सर्वभूतसमत्वेन निर्वैरेणाप्रसङ्गतः ।
ब्रह्मचर्येण मौनेन स्वधर्मेण महीयसा ॥ ८ ॥

यदृच्छयोपलब्धेन सन्तुष्टो मितभु मुनिः ।
विविक्तशरणः शान्तो मैत्रः करुण आत्मवान् ॥ ९ ॥

सानुबन्धे च देहेऽस्मिन्नकुर्वन्नसदाग्रहम् ।
ज्ञानेन दृष्टतत्त्वेन प्रकृतेः पुरुषस्य च ॥ १० ॥

निवृत्तबुद्ध्यवस्थानो दूरीभूतान्यदर्शनः ।
उपलभ्यात्मनाऽऽत्मानं चक्षुषेवाकमेकदृक् ॥ ११ ॥

मुक्तलिङ्गः सदाभासमसति प्रतिपद्यते ।
सतो बन्धुं समं चक्षुः सर्वानुस्यूतमद्वयम् ॥ १२ ॥

यथा जलस्थ आभासः स्थलस्थेनावदृश्यते ।
स्वाभासेन यथा सूर्यो जलस्थेन दिवि स्थितः ॥ १३ ॥

एवं त्रिवृदहङ्कारो भूतेन्द्रियमनोगुणैः ।
स्वाभासैर्लक्षितोऽनेन सदाभासेन सत्यदृक् ॥ १४ ॥

भूतसूक्ष्मेन्द्रियमनोबुद्ध्यादिष्विह निद्रया ।
लीनेषु सत्सु यस्तत्र विनिद्रो निरहङ्क्रियः ॥ १५ ॥

मन्यमानस्तदात्मानमनष्टो नष्टवन्मृषा ।
नष्टेऽहङ्करणे द्रष्टा नष्टचित्त इवातुरः ॥ १६ ॥

एवं प्रत्यवमृश्यासावात्मानं प्रतिपद्यते ।
साहङ्कारस्य द्रव्यस्य योऽवस्थानमनुग्रहः ॥ १७ ॥

देवहूतिरुवाचपुरुषं प्रकृतिर्ब्रह्मन् न विमुञ्चति कर्हिचित् ।
अन्योन्यापाश्रयत्वाच्च नित्यत्वादनयोः प्रभो ॥ १८ ॥

यथा गन्धस्य भूमेश्च न भावो व्यतिरेकतः ।
अपां रसस्य च यथा तथा बुद्धेः परस्य च ॥ १९ ॥

अकर्तुः कर्मबन्धोऽयं पुरुषस्य यदाश्रयः ।
गुणेषु सत्सु प्रकृतेः कैवल्यं तेष्वतः कथम् ॥ २० ॥

सकृत् तत्त्वावमर्शेन निवृत्तं भयमुल्बणम् ।
निवृत्तस्यानिवृत्तत्त्वात् पुनः प्रत्यवतिष्ठते ॥ २१ ॥

**भगवानुवाच**

अनिमित्तप्रवृत्तेन स्वधर्मेणामलत्मना ।
तीव्रया मयि भक्त्या च श्रुतिसंभृतया चिरम् ॥ २२ ॥

दृष्टतत्त्वेन ज्ञानेन वैराग्येण बलीयसा ।
तपोयुक्तेन योगेन तीव्रेणात्मसमाधिना ॥ २३ ॥

प्रकृतिः पुरुषस्यैवं दह्यमाना त्वहर्निशम् ।
तिरोभवित्री शनकैरग्नेर्योनिरिवारणिः ॥ २४ ॥

भुक्तभोगा परित्यक्ता दृष्टदोषा च नित्यशः ।
नेश्वरस्याशुभं धत्ते स्वे महिम्नि स्थितस्य च ॥ २५ ॥

यथा ह्यप्रतिबुद्धस्य प्रस्वापो बह्वनर्थकृत् ।
स एव प्रतिबुद्धस्य न वै मोहाय कल्पते ॥ २६ ॥

एवं विदिततत्त्वस्य प्रकृतिर्मयि मानसम् ।
युञ्जतो नापकुरुते आत्मारामस्य कर्हिचित् ॥ २७ ॥

यदैवमध्यात्मरतः कालेन बहुजन्मना ।
सर्वत्र जातवैराग्य आब्रह्मभवनान्मुनिः ॥ २८ ॥

मद्भक्तः प्रतिबुद्धार्थो मत्प्रसादेन भूयसा ।
निःश्रेयसं स्वसंस्थानं कैवल्याख्यं मदाश्रयम् ॥ २९ ॥

प्राप्नोतीहाञ्जसा धीरः स्वदृशा च्छिन्नसंशयः ।
यद् गत्वा न निवर्तेत योगी लिङ्गविनिर्गमे ॥ ३० ॥
यदा न योगोपचितासु चेतो मायासु सिद्धस्य विषज्जते च ।
अनन्यहेतुष्वथ मे गतिः स्याद् आत्यन्तिकी यत्र न मृत्युहासः ॥ ३१ ॥

## ॥ इति श्रीमद्भागवते (तृतीयस्कन्धे( *3) अष्टाविंशोऽध्यायः ॥

**॥ ಇಪ್ಪತ್ತೆಂಟನೆಯ ಅಧ್ಯಾಯ ॥**

### ಜೀವರಿಗೆ ಗುಣ, ಕರ್ಮ ಸಂಬಂಧ ವಿಚಾರ :-

ಪರಮಾತ್ಮನಂತಹ ಉತ್ಕೃಷ್ಟನಾದ ಜ್ಞಾನೋಪದೇಶಕನು ಇರಲಾಗಿ, ದೇವಹೂತೀದೇವಿಯಂತಹ ಉತ್ತಮಶ್ರೋತೃವು ಇದ್ದದ್ದರಿಂದ, ಹಿಂದೆ ಹೇಳಿದ ವಿಚಾರಗಳನ್ನೇ ವಿಶೇಷಾಕಾರವಾಗಿ ಬಿಡಿಸಿ ಜ್ಞಾನೋಪದೇಶವು ಈ ಅಧ್ಯಾಯದಲ್ಲಿ ಕಪಿಲಪರಮಾತ್ಮನಿಂದ ಮಾಡಲ್ಪಡುತ್ತದೆ. ಮೊದಲು, ಪರಮಾತ್ಮನು, ಜೀವಪರಮಾತ್ಮರಿಬ್ಬರೂ ಒಂದೇದೇಹದಲ್ಲಿದ್ದು, ಪ್ರೇರಕಪ್ರೇರ್ಯಭಾವಗಳಿಂದ ಗುಣ ಕರ್ಮಗಳನ್ನಾಚರಿಸುತ್ತಿದ್ದರೂ, ಪರಮಾತ್ಮನು ಏಕೆ ಗುಣಕರ್ಮಗಳ ಸಂಬಂಧವನ್ನು ಹೊಂದುವುದಿಲ್ಲ? ಏಕೆ ಜೀವನು ಸಂಬಂಧ ಹೊಂದಿ ಜನನಮರಣಾಖ್ಯ ದುಃಖಗಳನ್ನನುಭವಿಸುತ್ತಾನೆ? ಎಂಬುವುದನ್ನು ದೇವಹೂತೀದೇವಿಗೆ ವಿವರಿಸುತ್ತಾನೆ:-

ಎಲೈ ದೇವಹೂತೀದೇವಿಯೆ! ಪೂರ್ಣಾನಂದರೂಪನಾದ ವಿಷ್ಣುವು ಜಡಪ್ರಕೃತಿಯಿಂದ ನಿರ್ಮಿತಗಳಾದ ಆಯಾಯಶರೀರಗಳಲ್ಲಿ ಜೀವನಸಂಗಡ ಪ್ರವೇಶಿಸಿ, ಜೀವನಿಂದ ಗುಣಕರ್ಮಗಳನ್ನು ಮಾಡಿಸುತ್ತಿದ್ದಾಗ್ಯೂ, ಆ ಪರಮಾತ್ಮನು ಷಡ್ವಿಕಾರರಹಿತನೂ, ಪಾರತಂತ್ರ್ಯಕರ್ತುತ್ವವಿಲ್ಲದೇ

ಸ್ವತಂತ್ರಕರ್ತನಾದ್ದರಿಂದಲೂ, ಪ್ರಕೃತಿಯಗುಣಗಳಾದ ಸತ್ವಾದಿಗುಣರಹಿತನಾದುದರಿಂದಲೂ, ಸ್ವತಃ ಕರ್ತುತ್ವಶಕ್ತಿಇಲ್ಲದ ಜಡಪ್ರಕೃತಿಗೆ ಕರ್ತುತ್ವಶಕ್ತಿ ಕೊಡುವವನಾದುದರಿಂದಲೂ, ಪರಮಾತ್ಮನು ಜನನಮರಣ, ಸುಖದುಃಖಾದಿ ಪ್ರಕೃತಿಬಂಧನಕ್ಕೆ ಒಳಪಟ್ಟವನಲ್ಲ. ಹೇಗೆ ಸೂರ್ಯನ ಪ್ರತಿಬಿಂಬವು ಅಲುಗಾಡುವ ನೀರಲ್ಲಿ ನಡುಗುವಂತೆ ಕಂಡರೂ, ಆಕಾಶದಲ್ಲಿರುವ ಸೂರ್ಯನು ಚಲನಾದಿಗಳಿಲ್ಲದೇ ಸ್ಥಿರವಾಗಿರುವನೋ, ಅದರಂತೆ ಪರಮಾತ್ಮನಿಗೆ ಪ್ರಾಕೃತವಿಕಾರಗಳು ಇಲ್ಲ. ಪ್ರಾಕೃತದೇಹವು ಪರಮಾತ್ಮನಿಂದ ಸೃಷ್ಟಿಸಲ್ಪಟ್ಟನಂತರ ಪರಮಾತ್ಮನೆಂಬ ಆತ್ಮನೊಡನೆ ಆ ಪ್ರಾಕೃತಶರೀರವನ್ನು ಪ್ರತ್ಯಗಾತ್ಮನೆನಿಸುವ ಒಬ್ಬಜೀವನೂ ಪ್ರವೇಶಿಸುತ್ತಾನೆ.

ಆ ಜೀವನು ಆವಾಗ, ಸತ್ವಾದಿಪ್ರಾಕೃತಗುಣಸಂಬಂಧವನ್ನು ಹೊಂದಿ, ತ್ರಿವಿಧ ಅಹಂಕಾರಗಳೆಂಬ ದೇಹ, ಇಂದ್ರಿಯ, ಮನಸ್ಸುಗಳಿಂದ ಸಂಬಂಧಹೊಂದಿ, ಆ ದೇಹಾದಿ ಇಂದ್ರಿಯಗಳೂ ತನ್ನದೆಂದೂ, ತಾನೇ ಸ್ವತಂತ್ರಕರ್ತುವೆಂದೂ ಭಾವಿಸಿ, ಅವಿದ್ಯೆಯೆಂಬ ಅಜ್ಞಾನದಿಂದ ಕೂಡಿದವನಾಗಿ, ಸ್ವತಂತ್ರಕರ್ತನಾದ ಪರಮಾತ್ಮನನ್ನು ತಿಳಿಯದೇ, ತಾನು ಪರತಂತ್ರಕರ್ತನೆಂದೂ ತಿಳಿಯದೇ, ಸಂಸಾರರೂಪವಿಷಯಾದಿಗಳಲ್ಲಿ ಆಶೆಯುಳ್ಳವನಾಗಿ ಪ್ರವೇಶಿಸಿ, ಹಿಂತಿರುಗದೇ ಪುನಃಪುನಃ ಅದರಿಂದ ಅನೇಕ ಸುಖದುಃಖಗಳನ್ನೂ, ಉತ್ತಮ, ಮಧ್ಯಮ, ನೀಚಜನ್ಮಗಳನ್ನೂ ಪಡೆಯುತ್ತಾ ಸುತ್ತುತ್ತಿರುತ್ತಾನೆ. ಜೀವನು ಸ್ವತಃ ಜ್ಞಾನಾನಂದಸ್ವರೂಪನೂ, ಆದುದರಿಂದ ಪ್ರಾಕೃತಭೋಗಗಳಿಂದ ಪ್ರಯೋಜನವು ಅವನಿಗಿಲ್ಲದಿದ್ದರೂ, ಇಂದ್ರಿಯಗಳೂ ಹೊರಗಿನ ವಿಷಯಗಳನ್ನೇ ತಿಳಿಸುವವಾದ್ದರಿಂದ, ಜೀವನು ಈ ಇಂದ್ರಿಯಗಳೀಗೆ ಅಧೀನನಾಗಿ, ಶಬ್ದ, ರೂಪ, ರಸಾದಿವಿಷಯಭೋಗಗಳಲ್ಲಿ ಆಸಕ್ತನಾಗುತ್ತಾನೆ. ಹೇಗೆ ಬೀಜದಿಂದ ವೃಕ್ಷವೂ, ವೃಕ್ಷದಿಂದ ಬೀಜವೂ ಹುಟ್ಟಿ ಸ್ವಾಭಾವಿಕವಾಗಿಯೇ ಹುಟ್ಟಿ, ಬೆಳೆದು, ನಾಶವಾಗಿ, ಪುನಃಪುನಃ ಹುಟ್ಟುತ್ತಿರುವವೋ ಅದರಂತೆ ವಿಷಯಗಳೆಂಬ ಸಂಸೃತಿಯಲ್ಲಿ ಸಿಕ್ಕಿಬಿದ್ದ ಜೀವನಿಗೆ ಹುಟ್ಟುಸಾವುಗಳು ಅನಿವಾರ್ಯಗಳಾಗುತ್ತವೆ. ವಿಷಯಗಳು ಅಕಸ್ಮಾತ್ ಪ್ರಾಪ್ತವಾಗದೇಇದ್ದರೂ, ಜೀವನು ವಿಷಯಾಪೇಕ್ಷೆಯಿಂದ ವಿಷಯಗಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ, ಹ್ಯಾಗೆ ಸ್ವಪ್ನದಲ್ಲಿ ಕಂಡ ಧನವನ್ನು ಉಪಯೋಗಿಸಿಕೊಂಡು ಸುಖಪಡುವಂತೆ ಜೀವನು ಸ್ವಪ್ನಾವಸ್ಥೆಯಲ್ಲಿ ತಿಳಿಯುತ್ತಾನೋ, ಹಾಗೆಯೇ ಜಾಗ್ರತಾವಸ್ಥೆಯಲ್ಲೂ ಜೀವನು ವಿಷಯಗಳನ್ನು ಸ್ವಪ್ನಭೋಗಗಳ ಸದೃಶವಾಗಿ ಧ್ಯಾನಿಸುತ್ತಾನೆ. ಇದು ಕೆಟ್ಟ ಸಂಸ್ಕಾರರೂಪವಾಗಿ ಜೀವನನ್ನು ಚೆನ್ನಾಗಿ ವಿಷಯವಾಸನೆಯಿಂದ ಕಟ್ಟಿಹಾಕುತ್ತದೆ. ಇದೇ ಎಲ್ಲಾ ಅನರ್ಥಗಳಿಗೂ ಮೂಲಕಾರಣವು. ಆದುದರಿಂದ ನಿಜವಾದ ಭೋಗವಲ್ಲದ, ಜಾರತ್ವಸ್ವರೂಪವಾದ, ಸಮಸ್ತಭಯಗಳನ್ನುಂಟುಮಾಡುವ, ಪಾಪಮಯವಾದ ವಿಷಯಧ್ಯಾನವನ್ನು ಮೊದಲು ಬಿಡತಕ್ಕದ್ದು.

## ವಿಷಯಾಪೇಕ್ಷೆ ಗೆಲ್ಲುವ ಮಾರ್ಗ :-

ಬಹುಜನ್ಮಗಳಲ್ಲಿ ಅಭ್ಯಾಸಮಾಡಿದ ವಿಷಯಾಪೇಕ್ಷೆ, ವಿಷಯಧ್ಯಾನಗಳನ್ನು ಹೇಗೆ ಬಿಡಲುಸಾಧ್ಯ? ಎಂದರೆ ಮೊದಲು ವಿಷಯಗಳಲ್ಲಿ ಮನಸ್ಸು ಪ್ರವೇಶಿಸಲು ಪ್ರಾರಂಭಿಸಿದಾಗ ಸ್ವಲ್ಪಸ್ವಲ್ಪವಾಗಿ, ನಿಧಾನವಾಗಿ ಮನಸ್ಸನ್ನು ವಿಷಯಗಳಲ್ಲಿ ಪ್ರವೇಶಿಸದಂತೆ ತಡೆಯಬೇಕು. ಹೀಗೆ ತಡೆಯುತ್ತಿದ್ದರೆ ಮನಸ್ಸು ನಂತರ ತಾನಾಗಿಯೇ ವಿಷಯಗಳಲ್ಲಿ ಪ್ರವೇಶಿಸುವುದಿಲ್ಲ. ಆಗ ವಿಷಯವೆಂಬ ದುರ್ವಾಸನೆಯಿಂದ ಬಿಡಲ್ಪಟ್ಟ ಮನಸ್ಸು ಶುದ್ಧವಾಗುವುದು. ಶುದ್ಧವಾದ ಮನಸ್ಸಿಗೆ ನನ್ನ ಮಹಿಮೆಗಳನ್ನು ತಿಳಿಸುವ ಸತ್ಕಥಾಶ್ರವಣದಲ್ಲೂ, ಶಾಸ್ತ್ರಶ್ರವಣದಲ್ಲೂ ಆಸಕ್ತಿಯುಂಟಾಗಿ, ಆ ಶ್ರವಣದಿಂದ ನನ್ನಲ್ಲಿ ಜೀವರಿಗೆ ಮಹಾತ್ಮ್ಯಜ್ಞಾನದಿಂದ ಕೂಡಿದ ಭಕ್ತಿಯು ಉಂಟಾಗುವುದು. ಶಾಸ್ತ್ರಜನ್ಯಜ್ಞಾನದಿಂದ ಯಮ, ನಿಯಮ, ಸತ್ಕರ್ಮಾನುಷ್ಠಾನಾದಿ ಸಂಪತ್ತುಗಳು ಜೀವನಿಗೆ ನನ್ನಲ್ಲಿ ಭಕ್ತಿರೂಪ ಮನೋಯೋಗವು ಉಂಟಾಗುವುದು.

ಭಕ್ತನು ಆ ಭಕ್ತಿಯನ್ನೇ ಅಭ್ಯಾಸದಿಂದ ದೃಢಮಾಡಿಕೊಂಡು ನಿಶ್ಚಂಚಲವಾದ ತೀವ್ರಭಕ್ತಿಯನ್ನು ನನ್ನಲ್ಲಿ ಮಾಡಿ, ನನ್ನನ್ನು ಆರಾಧಿಸುವನು. ನಂತರ ನನ್ನ ಪ್ರಸಾದದಿಂದ ಜೀವನಿಗೆ ಇಂದ್ರಿಯಗಳೂ ಪ್ರಸನ್ನಗಳಾಗಿ, ಅವನನ್ನು ಪುನಃ ವಿಷಯಾದಿದೋಷಸಂಬಂಧಗಳಿಗೆ ಎಳೆಯಲಾರದಂತಾಗುವುದು. ಈ ರೀತಿಯಾಗಿ ವಿಷಯವಾಸನೆಯು ಹೋಗುವುದು. " ಸತ್ಯಂಬ್ರೂಹಿ ಹಿತಂ ನೃಣಾಂ " ಎಂಬಂತೆ ಪ್ರಾಣಿಗಳಿಗೆ ಸುಖಪ್ರಾಪ್ತಿಗೆ ಸಾಧಕವಾದ ಮಾತುಗಳು ಸತ್ಯವೆನಿಸುತ್ತವೆ. ಉಪಾಸಕನು ಸಾಧುಪ್ರಾಣಿಗಳಿಗೂ ಹಿತ, ಕ್ಷೇಮಗಳನ್ನುಂಟುಮಾಡುವ ಮಾತುಗಳಾದ ಸತ್ಯವಾಕ್ಯಗಳನ್ನೇ ಆಡಬೇಕು. ಸಮಸ್ತಪ್ರಾಣಿಗಳಲ್ಲಿ ಅಂತರ್ಯಾಮಿಯಾದ ಶ್ರೀಪರಮಾತ್ಮನು ಪೂರ್ಣಗುಣಾತ್ಮಕನೆಂದು ಭಾವಿಸಿ, ನನ್ನ ಅಂತರ್ಯಾಮಿಯೇ ಸರ್ವಾಂತರ್ಯಾಮಿಯೆಂದೂ, ಉತ್ತಮಮಧ್ಯಮಅಧಮಜೀವರು ಸರ್ವಕರ್ಮಗಳನ್ನೂ ತಮ್ಮತಮ್ಮ ಯೋಗ್ಯತಾ ತಾರತಮ್ಯದಂತೆ ಪರಮಾತ್ಮನಿಂದಲೇ ಪ್ರೇರಿತರಾಗಿ ಮಾಡುತ್ತಾರೆಂಬ ಜ್ಞಾನದಿಂದ, ಸರ್ವರಲ್ಲೂ ನಿರ್ವೈರದಿಂದ, ನಿರಹಂಕಾರದಿಂದ ಪ್ರವರ್ತಿಸುವ ಸರ್ವಭೂತ ಸಮಭಾವನೆಯುಳ್ಳವನಾಗಬೇಕು.

ವೈಷ್ಣವದ್ವೇಷವನ್ನೂ, ದುರ್ವಿಷಯಾಸಕ್ತರ ಸಹವಾಸವನ್ನೂ ಬಿಡಬೇಕು. ವಿವಾಹಾದಿಗಳನ್ನೂ ಮಾಡಿಕೊಳ್ಳದೇ ಊರ್ಧ್ವರೇತಸ್ಕರಾದವರು ಯತ್ಯಾದಿ ಆಶ್ರಮಧರ್ಮರೂಪ ಬ್ರಹ್ಮಚರ್ಯವೆಂಬ ನೈಷ್ಠಿಕಬ್ರಹ್ಮಚರ್ಯೆಯಿಂದಲೂ, ಗೃಹಸ್ಥಾಶ್ರಮಿಗಳು ಋತುಕಾಲದಲ್ಲಿ ಏಕಪತ್ನೀಗಮನವೆಂಬ

ಪ್ರಾಜಾಪತ್ಯಬ್ರಹ್ಮಚರ್ಯೆಯಿಂದಲೂ, ವಟುಗಳು ವೇದಾಧ್ಯಯನ ಗುರುಶುಶ್ರೂಷಾ ರೂಪವಾದ, ವಿಷಯಚಿಂತನೆಇಲ್ಲದ ಬ್ರಹ್ಮಚರ್ಯೆಯಿಂದಲೂ, ವೇದೋಕ್ತಜ್ಞಾನವನ್ನು ಸಂಪಾದಿಸಿ ಮಹಾತ್ಮ್ಯಜ್ಞಾನಪೂರ್ವಕ ನಿರಂತರ ಭಕ್ತಿಯಿಂದ ಪರಮಾತ್ಮನ ಸೇವಾ, ಉಪಾಸನಾರೂಪವಾದ ಮುಖ್ಯ, ಪ್ರಧಾನಬ್ರಹ್ಮಚರ್ಯೆಯನ್ನು ಆಚರಿಸಬೇಕು. ಇದೇ ಧರ್ಮಾನುಷ್ಠಾನವು. ಸರ್ವಪ್ರಾಣಿಗಳಿಗೂ ಸರ್ವವನ್ನೂ ಕಾಲಕಾಲಕ್ಕೆ ಸರಿಯಾಗಿ ಅವರವರು ಅನುಭವಿಸಬೇಕಾದದ್ದನ್ನು ಪರಮಾತ್ಮನೇ ಕೊಡುತ್ತಾನಾಗಿ, ತಾನಾಗಿಯೇ ಕಾಲಕಾಲಕ್ಕೆ ಏನು ಸಿಕ್ಕುತ್ತದೆಯೋ ಅದರಿಂದಲೇ ತೃಪ್ತನಾಗಬೇಕು.

ದೇಹಧಾರಣೆಗೆ ಅವಶ್ಯಕವಾದಷ್ಟೇ, ಮಿತವಾಗಿ ಸಾತ್ವಿಕಭಗವದರ್ಪಿತ ಪ್ರಸಾದವನ್ನು ಭೋಜನ ಮಾಡಬೇಕು. ಪರಮಾತ್ಮನ ವೇದೋಕ್ತಮಹಿಮೆಗಳನ್ನು ಚಿಂತನೆಮಾಡಿ ಮುನಿಚರ್ಯೆಯುಳ್ಳವನಾಗಬೇಕು. ಪರಮಾತ್ಮಭಕ್ತರಲ್ಲದ ಜನಸಮೂಹಗಳನ್ನು ವರ್ಜಿಸಬೇಕು. ಏಕಾಂತಸ್ಥಳದಲ್ಲಿ ವಾಸಮಾಡಬೇಕು. ಯಾವಾಗಲೂ ಶಾಂತಮನಸ್ಸುಳ್ಳವನಾಗಿರಬೇಕು. ಪ್ರಾಣಿಗಳಲ್ಲಿ ಸ್ನೇಹವನ್ನೂ, ಕರುಣವನ್ನೂ ಮಾಡಬೇಕು. ಭಗವತ್ಪರನಾಗಿ, ಭಗವನ್ನಿಷ್ಠೆಯೆಂಬ ಭಾಗ್ಯವುಳ್ಳವನಾಗಬೇಕು. ಪತ್ನಿ, ಪುತ್ರ, ಬಾಂಧವರೂ, ಇತರರೂ ಸುಖದುಃಖಾದಿಗಳಲ್ಲೂ, ಸಂಪತ್ತಿನಿಂದಲೂ ಸಮಾನಭೋಗಾರ್ಹರೆಂಬ ಭಾವನೆಯಿಂದ ನಾನು, ನನ್ನದು, ಅವರದು ಎಂಬ ಭೇದಭಾವನೆಯಿಲ್ಲದವನಾಗಬೇಕು.

ಸ್ವರೂಪಭೂತವಾದ ನಿರ್ದುಷ್ಟಜ್ಞಾನದಿಂದ ಪ್ರಕೃತಿಪುರುಷ ವಿವೇಕಜ್ಞಾನವುಳ್ಳವನಾಗಿ, ಪರಮಾತ್ಮನು ಪ್ರಪಂಚದಲ್ಲಿ ಸಮಸ್ತವಸ್ತುಗಳನ್ನೂ ಸರ್ವಪ್ರಾಣಿಗಳ ಸಮಾನಹಿತಕ್ಕಾಗಿಯೂ, ಯಜ್ಞರೂಪದಿಂದ ತನಗೆ ಸಮರ್ಪಿಸುವುದಕ್ಕಾಗಿಯೂ ಸೃಷ್ಟಿಸಿರುವನೆಂಬ ಪರಿಶುದ್ಧಜ್ಞಾನವುಳ್ಳವನಾಗಬೇಕು. ಪರರನ್ನು ವಂಚಿಸಿ, ತಾನೇ ಹೆಚ್ಚು ಸುಖವನ್ನು ಹೊಂದುವೆನೆಂಬ ದುರಾಶೆ ಇಲ್ಲದವನಾಗಬೇಕೆಂದರ್ಥ. ತಮೋಗುಣದ ಕಾರ್ಯವಾದ ಅಕಾಲನಿದ್ರೆ, ಸತ್ಕಾರ್ಯಗಳನ್ನು ಮಾಡಲು ಆಲಸ್ಯ, ಜೀವಪರಮಾತ್ಮರು ಒಂದೇ, ಜಗತ್ತು ಸುಳ್ಳು ಇತ್ಯಾದಿಗಳನ್ನು ಬೋಧಿಸುವ ಕುತರ್ಕ, ದುಷ್ಟಾಭಾವಗಳನ್ನು ಹೇಳುವ ಉಪದೇಶ ಮತ್ತು ಗ್ರಂಥಗಳೂ ಅನರ್ಥದಾಯಕಗಳೂ ಹೇಯವೆಂದು ತಿಳಿಯಬೇಕು. ಅಸಾರವಸ್ತುಗಳಾದ ವಿಷಯೇಚ್ಛೆಗಳಿಂದ ರಹಿತನಾಗಿ ನಿಸ್ಸಂಗನಾಗಬೇಕು. ಅಂದರೆ ಬಾಹ್ಯವಸ್ತುಗಳೂ ಭೋಗಸಾಧನಗಳೆಂಬ ಭಾವನೆಇಲ್ಲದವನಾಗಿಬೇಕು. ಸೂರ್ಯನು ಕಣ್ಣಿನಲ್ಲಿದ್ದು ದೃಷ್ಟಿಶಕ್ತಿಯನ್ನು ಕೊಟ್ಟು, ಆ ಕಣ್ಣಿನಿಂದ ತಾನು ನೋಡದೆ ಹೇಗೆ ಇರುತ್ತಾನೋ, ಹಾಗೆಯೇ ಬಾಹ್ಯ ಅಂತಃಕರಣದಲ್ಲಿ ಮಿಶ್ರವಾದ ತನ್ನ ಸ್ವರೂಪಾಂತಃ ಕರಣವನ್ನು ಬೇರೆಮಾಡಿ, ಆ ಶುದ್ಧವಾದ ಸ್ವರೂಪಾಂತಃಕರಣದಿಂದ, ತತ್ವಗಳಸ್ವರೂಪವನ್ನೂ,

ತತ್ತ್ವಾಭಿಮಾನಿದೇವತೆಗಳ ಸ್ವಭಾವಗಳನ್ನೂ ತಿಳಿದು, ಅವರನ್ನು ಭಕ್ತಿಯಿಂದ ಪೂಜಿಸಿ ಅವರ ಅನುಗ್ರಹದಿಂದ ಮೊದಲು ಅವರನ್ನು ಪ್ರತ್ಯಕ್ಷಮಾಡಿಕೊಂಡು, ನಂತರ ಅವರ ಆಜ್ಞೆಯಿಂದ ಹೃತ್ಕಮಲನಿವಾಸಿಯಾದ ನನ್ನ ದಿವ್ಯರೂಪದರ್ಶನವನ್ನು ಸಾಧಕರು ಪಡೆಯುತ್ತಾರೆ.

## ಬಿಂಬ ದರ್ಶನದಲ್ಲಿರುವ ವೈಲಕ್ಷಣ್ಯ :-

ಭಗವದ್ದರ್ಶನಾನಂತರ ಪ್ರಾರಬ್ಧಕರ್ಮಫಲಭೋಗವನ್ನು ಹೊಂದಿ, ದೇವಯಾನ ಮಾರ್ಗದಿಂದ, ಬ್ರಹ್ಮಲೋಕಕ್ಕೆ ಹೋಗಿ, ಬ್ರಹ್ಮದೇವರ ಜೊತೆಯಲ್ಲಿ ಮಹಾಪ್ರಳಯಕಾಲದಲ್ಲಿ ವಿರಜಾನದೀಸ್ನಾನದಿಂದ, ಲಿಂಗದೇಹಮುಕ್ತರಾಗಿ, ಸ್ವಸ್ವರೂಪಾತ್ಮಕ, ಸಚ್ಚಿದಾನಂದಸ್ವರೂಪರಾಗಿ ಅನಿರುದ್ಧದೇವರ ಸಮೀಪವನ್ನು ಹೊಂದಿ, ನಂತರ ಲಕ್ಷ್ಮೀ, ಪರಮಾತ್ಮರ ಆಜ್ಞೆಯಿಂದ ಮುಕ್ತರಾಗಿ, ಮುಕ್ತಸ್ಥಾನಗಳಲ್ಲಿ ನಿರ್ದುಃಖಸುಖಾನುಭವವುಳ್ಳವರಾಗಿ, ಪರಮಾತ್ಮನ ದರ್ಶನಮಾಡುತ್ತಾ ಇರುತ್ತಾರೆ. ಆ ಪರಮಾತ್ಮನು ಬ್ರಹ್ಮವಾಯುಗಳಿಂದ ತಂದೆ ಎಂದು ಉಪಾಸನೇ ಮಾಡಿಸಿಕೊಳ್ಳುತ್ತಾನೆ. ಲಕ್ಷ್ಮೀದೇವಿಯಿಂದ ಪತಿಯೆಂದು ಉಪಾಸ್ಯನು. ಸರಸ್ವತೀಭಾರತಿಯರಿಂದ ಮಾವನೆಂದು ಉಪಾಸ್ಯನು. ಗರುಡಶೇಷರುದ್ರಾದಿಗಳಿಂದ ಪಿತಾಮಹನೆಂದು, ಈ ರೀತಿ ಬಾಂಧವ್ಯಗಳಿಂದಲೂ ದೇವೋತ್ತಮರಿಂದ ಉಪಾಸ್ಯನು. ಇತರರಿಂದ, ಸ್ವಾಮಿ ಎಂದು ಉಪಾಸ್ಯನು. ಇಂತಹ ಪರಮಾತ್ಮನು ಸರ್ವವನ್ನೂ ಸರ್ವಕಾಲದಲ್ಲೂ ನೋಡತಕ್ಕವನೂ, ತಿಳಿದವನೂ, ತಿಳಿಸುವವನೂ ಆದುದರಿಂದ ಚಕ್ಷುನಾಮಕನು. ಮಣಿಗಳು ದಾರದಿಂದ ಹೇಗೆ ಮಾಲಾರೂಪವಾಗಿ ಧರಿಸಲ್ಪಡುತ್ತೋ, ಮಣಿಯಿಂದ ದಾರವು ಹೇಗೆ ಬೇರೆಯೋ ವಿಲಕ್ಷಣವೋ, ಅದರಂತೆ ಸಮಸ್ತಪ್ರಾಣಿಗಳಲ್ಲಿಯೂ, ಜಗತ್ತಿನಲ್ಲಿಯೂ ಪರಮಾತ್ಮನು ವ್ಯಾಪಿಸಿ ಧಾರಕನಾಗಿರುತ್ತಾನೆ.

ಸರ್ವಪ್ರಾಣಿಗಳಿಂದಲೂ, ಸರ್ವಜಗತ್ತಿನಿಂದಲೂ ಭಿನ್ನನು, ವಿಲಕ್ಷಣನು. ಅಜ್ಞಾನಿಗಳೂ ಅಂದರೆ ಅಸದ್ವೃತ್ತಿಶೀಲರೂ, ಮಿಥ್ಯಾಜ್ಞಾನಿಗಳೆನಿಸುವ ಸುಳ್ಳನ್ನೇ ಜ್ಞಾನವೆಂದು ಉಪಾಸನೆಮಾಡುವ ಸ್ವಭಾವದವರೂ ಬೋಧಿಸುವಂತೆ, ದೇವರೇ ಜಗತ್ತು ಮತ್ತು ಪ್ರಾಣಿಗಳರೂಪದಿಂದ ಪರಿಣಾಮಹೊಂದಿಲ್ಲ. ಆದುದರಿಂದ ಪರಮಾತ್ಮನು ಸಮಾನಾಧಿಕರಹಿತನಾದ ಸರ್ವೋತ್ತಮನು. ಸೂರ್ಯನು ಜಲದಲ್ಲಿ ಪ್ರತಿಬಿಂಬಿಸುವ ತನ್ನ ರೂಪದ ಸದೃಶನಾಗಿಯೇ ಹೇಗೆ ಇರುತ್ತಾನೋ, ಸ್ಥಳದಲ್ಲಿ ನಿಂತಿರುವ ಮನುಷ್ಯನು ಜಲದಲ್ಲಿ ಪ್ರತಿಬಿಂಬಿಸಿರುವ ಸೂರ್ಯನನ್ನು ನೋಡಿ, ಗಗನದಲ್ಲಿರುವ ಸೂರ್ಯನು ಅದೇರೀತಿಯಲ್ಲಿರುವನೆಂದು ಹೇಗೆ ತಿಳಿಯುವನೋ, ಅದರಂತೆ ಬಿಂಬನಾದ ಪರಮಾತ್ಮನ ದರ್ಶನವು ಸಾಕ್ಷಾತ್ತಾಗಿ ಬ್ರಹ್ಮದೇವರಿಗೆ ಆಗುವುದು. ಅದೇ ಜಲದಲ್ಲಿ ತನ್ನ ಮುಖದ

ಪ್ರತಿಬಿಂಬವೂ ಕಂಡು ತಾನು ಹಾಗೆಯೇ ಇರುವೆನೆಂದು ಪುರುಷನು ಹೇಗೆ ತಿಳಿಯುವನೋ. ಅದರಂತೆ ತನ್ನ ಸ್ವಸ್ವರೂಪವೂ ವ್ಯಕ್ತವಾಗುವುದು. ಆದುದರಿಂದ ಮೋಕ್ಷದಲ್ಲಿಯೂ ಜೀವ ಪರಮಾತ್ಮರು ಸ್ವರೂಪದಿಂದ ಬೇರೆಬೇರೆಯೇ ಇರುವರೆಂಬುದು ವ್ಯಕ್ತವಾಗುವುದು.

ಅಂದರೆ ಬ್ರಹ್ಮದೇವರು ಅವ್ಯಕ್ತತತ್ವದಲ್ಲಿದ್ದು ಸೂರ್ಯನಂತೆ ಬಿಂಬನಾದ ಪರಮಾತ್ಮನ ಪ್ರತಿಬಿಂಬವನ್ನು, ಮಹತ್ತತ್ವವೆಂಬ ತಮ್ಮ ಉಪಾಧಿಯೆಂಬ ಜಲದಲ್ಲಿ ನೋಡಿ, ಅವ್ಯಕ್ತನಾಮಕ ಪರಮಾತ್ಮನನ್ನು ತಿಳಿಯುತ್ತಾರೆ. ಶೇಷದೇವರು ತ್ರಿವಿಧ ಅಹಂಕಾರತತ್ವಗಳೆಂಬ ಜಲದಲ್ಲಿ ಪ್ರತಿಬಿಂಬಿಸಿದ, ಬಿಂಬಭೂತರಾದ ಮಹತ್ತತ್ವನಾಮಕ ಬ್ರಹ್ಮದೇವರಲ್ಲಿ ಪ್ರತಿಬಿಂಬಿಸಿದ, ಆಭಾಸಾಭಾಸರೂಪನಾದ ಪರಮಾತ್ಮನನ್ನು ನೋಡುತ್ತಾರೆ. ಇಂದ್ರಾದಿತತ್ವದೇವತೆಗಳೂ, ಮನಸ್ಸು, ಇಂದ್ರಿಯಭೇದಗಳೆಂಬ ತಮ್ಮ ತಮ್ಮ ಉಪಾಧಿರೂಪ ಜಲದಲ್ಲಿ, ಪ್ರತಿಬಿಂಬನಾದ, ಅಹಂಕಾರತತ್ವಗತ ಆಭಾಸಾಭಾಸ ಬಿಂಬರೂಪ ಪರಮಾತ್ಮನನ್ನು, ಶೇಷದೇವರದ್ವಾರಾ ಕಾಣುತ್ತಾರೆ. ಹೀಗೆ ಬಿಂಬದರ್ಶನದಲ್ಲಿ ಸ್ಪಷ್ಟತ್ವ, ಪ್ರಕಾಶತ್ವ, ವೈಚಿತ್ರ್ಯ, ಕಾಲಪ್ರಮಾಣಗಳು ತಾರತಮ್ಯಾನುಸಾರ ಉತ್ತಮದೇವತೆಗಳಿಗಿಂತ, ಅವರರಾದವರಲ್ಲಿ ಕಮ್ಮಿಕಮ್ಮಿಯಾಗಿ ದರ್ಶನವಾಗುವುದೆಂದು ತಿಳಿಯಬೇಕು. ಅಹಂಕಾರ, ಬುದ್ಧಿ, ಮನಸ್ಸು, ಇಂದ್ರಿಯಗಳಲ್ಲಿ ಸನ್ನಿಹಿತರೂ, ಆಸಕ್ತರಾದವರೂ ನಿದ್ರೆಮಾಡುತ್ತಿರುವವರಂತೆ ಅಜ್ಞಾನದಿಂದ ಆವೃತರಾದರು. ಅಂದರೆ ಶೇಷ, ಗರುಡ, ಇಂದ್ರಾದಿದೇವತೆಗಳಿಂದ, ಮನುಷ್ಯೋತ್ತಮಪರ್ಯಂತ ಮೋಕ್ಷಯೋಗ್ಯಜೀವರು ನಿದ್ರೆಯಿಂದಕೂಡಿ ಸದಾಜಾಗ್ರತರಾಗಿಲ್ಲದಕಾರಣ ಛಿನ್ನಭಕ್ತರುಗಳೂ, ಪರಮಾತ್ಮನಿಂದ ವಿಮುಖರಾಗುವಕಾರಣ, ಅಜ್ಞಾನಸ್ಪೃಷ್ಟರೂ ಆಗಿರುತ್ತಾರೆ.

ಬ್ರಹ್ಮವಾಯುಗಳು ವಿಜ್ಞಾನತತ್ವವಾದ ಮಹತ್ತತ್ವಾಭಿಮಾನಿಗಳಾದುದರಿಂದ, ಎಲ್ಲಜೀವರು ನಿದ್ರಿಸುತ್ತಿದ್ದರೂ, ಇವರು ನಿದ್ರಾರಹಿತರಾಗಿ ಭಗವತ್ಪರರಾಗಿರುತ್ತಾರಾಗಿ ಬ್ರಹ್ಮವಾಯುಗಳಲ್ಲಿ ಅಜ್ಞಾನಾದಿದೋಷಗಳಿಲ್ಲ. ಇವರು ನಿರಹಂಕಾರಿಗಳು. ಆದುದರಿಂದ ಇವರು ಪರಮಾತ್ಮನನ್ನು ಸದಾ ದರ್ಶನಮಾಡತಕ್ಕವರು. ಇತರರು ಸ್ವರೂಪದಿಂದ ಶಾಶ್ವತರಾದರೂ, ಅದನ್ನು ತಿಳಿಯದೆ, ಇಂದ್ರಿಯ ಮನಸ್ಸುಗಳಿಗೆ ಬೇಕಾದ ಪದಾರ್ಥಗಳೂ ಸಿಕ್ಕದಿದ್ದಲ್ಲಿ, ತಾವೇ ನಾಶವಾದಂತೆ ಭಾವಿಸುತ್ತಾ, ಅಹಂಕಾರವೆಂಬ ನಿದ್ರೆಯಲ್ಲಿ ಆಸಕ್ತರಾಗಿರುತ್ತಾರಾದಕಾರಣ, ಇವರಿಗೆ ಯಾವಾಗ ಬ್ರಹ್ಮಾದಿ ತೃಣಾಂತತಾರತಮ್ಯೋಪೇತ ಭಗವದ್ಜ್ಞಾನವು ಹುಟ್ಟುವುದೋ ಆಗ ಎಚ್ಚೆತ್ತು, ಯೋಗಾದಿ ಮನೋಭಾವನೆಗಳಿಂದ ಪ್ರಯತ್ನಮಾಡಿ, ಕಳೆದುಕೊಂಡ ಸಂಪತ್ತನ್ನು ಸ್ವಪ್ನದಲ್ಲಿ ಕಂಡು ಸಂತೋಷದಿಂದ, ಆತುರದಿಂದ ಗ್ರಹಿಸುವಂತೆ, ಬಿಂಬರೂಪನಾದ ನನ್ನ ದರ್ಶನವನ್ನು ಮಾಡುತ್ತಾರೆ.

ಅದು ಅಹಂಕಾರತತ್ವದಲ್ಲಿ ಸನ್ನಿಹಿತನಾದ ಶೇಷಾಂತರ್ಯಾಮಿ ಅನಂತನಾದ ನನ್ನ ಅನುಗ್ರಹದಿಂದ ಉಂಟಾಗುವುದು. ಈ ರೀತಿಯಾಗಿ, ದೇವತೆಗಳಲ್ಲಿಯೂ, ಇತರರಲ್ಲಿಯೂ ಪರಸ್ಪರಬಿಂಬದರ್ಶನದಲ್ಲಿ ವೈಲಕ್ಷಣ್ಯಗಳಿರುತ್ತವೆ, ಎಂದನು.

## ಜೀವನಿಗೆ ಬಂಧ ನಿವೃತ್ತಿ ಹೇಗೆಂಬುದರ ವಿವರಣೆ :-

ದೇವಹೂತೀದೇವಿಯು ಕಪಿಲಪರಮಾತ್ಮನಿಂದ ಜೀವೇಶ್ವರಭೇದಜ್ಞಾನವು ಮುಕ್ತಿಗೆ ಸಾಧನವೆಂಬುದನ್ನು ಕೇಳಿ, ಬಲವಾದ, ಶಾಶ್ವತವಾಗಿ ಅನಾದಿಕಾಲದಿಂದ ಇರತಕ್ಕ ಪ್ರಕೃತಿಬಂಧನವು ಜೀವನಿಗೆ ಹೇಗೆ ತಪ್ಪು ತ್ತದೆ, ಎಂಬುವುದನ್ನು ತಿಳಿಯಲಪೇಕ್ಷಿಸಿ, ಎಲೈ! ಸರ್ವಾಧಿಕಸರ್ವೋತ್ತಮ ಗುಣನಿಧಿ ಯಾದ ಬ್ರಹ್ಮನಾಮಕನೆ! ಈ ತ್ರಿಗುಣಾತ್ಮಕವಾದ ಪ್ರಕೃತಿಯು, ಪಾಪಪುಣ್ಯಕರ್ಮಮಾಡುವವನಾದ ಜೀವನನ್ನು ಅನ್ಯೋನ್ಯಾಶ್ರಯದಿಂದ ಅನಾದಿಕಾಲದಿಂದಲೂ ಬಂಧಿಸಿರುತ್ತಾದಕಾರಣ, ಪೃಥ್ವಿಯಲ್ಲಿ ಗಂಧಗುಣವು ಹೇಗೆ ಬೇರ್ಪಡಿಸಲಸಾಧ್ಯವಾಗಿ ಸೇರಿರುತ್ತದೆಯೋ ಅದರಂತೆ ಜೀವನನ್ನು ಬಿಡುವುದಿಲ್ಲ. ಜಲಕ್ಕೂ ರಸಕ್ಕೂ ಹೇಗೆ ಸಂಬಂಧವೋ ಅದರಂತೆ ಜೀವನಿಗೂ ಪ್ರಕೃತಿಗೂ ಅತ್ಯಂತ ಸಂಬಂಧವಿರುತ್ತೆ. ಸ್ವಾತಂತ್ರ್ಯದಿಂದ ಕಾರ್ಯಮಾಡಲಶಕ್ತನಾದ ಜೀವನನ್ನು, ಕಾರ್ಯಗಳಲ್ಲಿ ಪ್ರೇರಿಸಿ ಮಾಡಿಸುವಂತಹ ಬಲವತ್ತರವಾದ ಆ ಪ್ರಕೃತಿಯಿಂದ ಜೀವನಿಗೆ ಬಂಧನವು ಹೇಗೆ ತಪ್ಪು ತ್ತದೆ?

ಎಲೈ ಸ್ವಾಮಿಯೆ! ನಿನ್ನ ಉಪದೇಶದಿಂದ ತತ್ವಜ್ಞಾನವು ಪ್ರಕೃತಿಬಂಧನನಾಶಕ್ಕೆ ಕಾರಣವೆಂಬ ವಿಷಯವು ತಿಳಿದು, ನನಗೆ ತತ್ವಜ್ಞಾನಪ್ರಾಪ್ತಿಯಿಂದ ಪ್ರಕೃತಿಬಂಧನದ ಭಯವು ಅಂತಃಕರಣದಲ್ಲಿ ತಪ್ಪಿ ದ್ದರೂ, ಪುನಃ ಈಗ ಪ್ರಕೃತಿಬಂಧನದಲ್ಲೇ ಇರುವ ನನ್ನ ಬಾಹ್ಯವಾದ ಅಂತಃಕರಣವು, ಗುಣಕರ್ಮಗಳಲ್ಲಿ ಬಲವಾದ ಪ್ರಕೃತಿಯಿಂದ ಪ್ರೇರಿಸಲ್ಪಟ್ಟರೆ ಆಗ ನನಗೆ ಗುಣಕರ್ಮಗಳ ಪ್ರವೃತ್ತಿಯಿಂದ ನಿವೃತ್ತಿಯೂ, ಪ್ರಕೃತಿಯು ನನ್ನನ್ನು ಬಂಧಿಸಲಾಗದಂತೆ ಹೇಗೆ ಮಾಡಲು ಸಾಧ್ಯ? ಎಂಬ ಸಂಶಯವು ಇನ್ನೂ ಇರುವುದರಿಂದ ಈ ರೀತಿಯಾಗಿ ಪ್ರಶ್ನೆ ಮಾಡಿರುತ್ತೇನೆ, ಎಂದಳು.

ಅದಕ್ಕೆ ಕಪಿಲಪರಮಾತ್ಮನು, ಎಲೈ ದೇವಹೂತಿದೇವಿಯೆ! ಪ್ರಕೃತಿಯು ಜೀವನಸಂಬಂಧ ಮಾತ್ರಹೊಂದಿದೆ. ಪೃಥ್ವೀಗಂಧ, ಜಲರಸಗಳಂತೆ ಒಂದೇ ಆದ ದ್ರವ್ಯವಲ್ಲ. ಆದುದರಿಂದ ಬೇರೆಬೇರೆಯಾದ ಎರಡು ವಸ್ತುಗಳು ಒಟ್ಟಿಗೆ ಸೇರಿದ್ದರೂ ಪ್ರತ್ಯೇಕವಾಗುವುದಕ್ಕೆ ಸಾಧ್ಯವಿದೆ. ಕಾಷ್ಠದಂತೆ ಪ್ರಕೃತಿಎಂದು ತಿಳಿ. ಅಗ್ನಿಯಂತೆ ನನ್ನ ಭಕ್ತರಾದ ಜೀವರು. ಸಾಧಕನಾದವನು ಶ್ರದ್ಧೆಯಿಂದ ನಿಷ್ಕಾಮಕರ್ಮಗಳನ್ನಾಚರಿಸಿ, ವೇದೋಕ್ತಜ್ಞಾನವನ್ನು ಸಂಪಾದಿಸಿ ನನ್ನ ಪಾದಾರವಿಂದಗಳಲ್ಲಿ

ಭಕ್ತಿಮಾಡುವುದರಿಂದಲೂ, ಕೃಚ್ಛ್ರಚಾಂದ್ರಾಯಣಾದಿವ್ರತರೂಪವಾದ ತಪಸ್ಸಿನಿಂದಲೂ, ಸಮಾಧಿ ಯೋಗದಿಂದಲೂ, ಅಗ್ನಿಯಂತೆ ಪರಿಶುದ್ಧನೂ ಸುಡತಕ್ಕವನೂ ಆಗಿ ಪ್ರಕೃತಿಎಂಬ ಕಾಷ್ಠವನ್ನು, ಹೇಗೆ ಅರಣೀಕಾಷ್ಠದಿಂದ ಉತ್ಪನ್ನವಾದ ಅಗ್ನಿಯು ಆ ಕಾಷ್ಠವನ್ನೇ ಸುಡುತ್ತದೆಯೋ ಅದರಂತೆ ಸುಟ್ಟು ಕಾಷ್ಠಸಂಬಂಧವಿಲ್ಲದಂತೆ ಆಗುತ್ತದೆ. ನಿತ್ಯದಲ್ಲೂ ಪ್ರಕೃತಿಸಂಬಂಧ ಗುಣಗಳನ್ನು ಹೇಯವೆಂದು ತಿರಸ್ಕರಿಸುತ್ತಾ ನನ್ನ ಭಕ್ತರು ಅವನ್ನು ದೂರದಲ್ಲಿಡುವ ಕಾರಣದಿಂದ ಉಪೇಕ್ಷೆಗೊಳಗಾದ ಪ್ರಕೃತಿಯು, ಮೆಲ್ಲಮೆಲ್ಲಗೆ ತಾನಾಗಿಯೇ ಬಿಟ್ಟು ದೂರವಾಗುವಳು ಅಥವ ಬೇರೆಯಾಗದೆ ಜೊತೆಯಲ್ಲಿಯೇ ಸಂಬಂಧಿಸಿ ಇದ್ದರೂ, ಪ್ರಕೃತಿಯು ನನ್ನಧೀನಳಾದ ಕಾರಣ ನನ್ನ ಆಜ್ಞೆಯಿಂದ ನನ್ನ ಭಕ್ತರನ್ನು ತನ್ನ ಗುಣಕಾರ್ಯಗಳಲ್ಲಿ ಬಂಧಿಸುವುದಿಲ್ಲ. ಆದುದರಿಂದ ಅನನ್ಯಾಶ್ರಯವನ್ನು ನನ್ನಲ್ಲಿ ಮಾಡುವ ನನ್ನ ಭಕ್ತನಿಗೆ, ಆ ಬ್ರಹ್ಮಪರ್ಯಂತವಾದ ಲೋಕಗಳೂ ವೈಭವಗಳೂ, ಅಸಾರವಾದವುಗಳೆಂದೂ, ಕೇವಲ ಮೋಕ್ಷವೇ ಸಕಲಶ್ರೇಯಸ್ಸುಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದೆಂಬ ಭಾವನೆಯು ಉಂಟಾಗಿ, ಜ್ಞಾನವೈರಾಗ್ಯಭಕ್ತಿಯಿಂದ ನನ್ನನ್ನು ಆರಾಧಿಸುವನು. ಆಗ ನನ್ನ ಅನುಗ್ರಹವು ಅವನಿಗೆ ಉಂಟಾಗಿ, ಲಿಂಗಭಂಗರೂಪವಾದ, ಸ್ವಸ್ವರೂಪಾವಿರ್ಭಾವವೂ, ಪುನರಾವರ್ತಿರಹಿತವಾದ ಪದವಿಯಪ್ರಾಪ್ತಿಯೂ ಯೋಗ್ಯತಾನುಸಾರ ಪ್ರಾಪ್ತಿಯಾಗುವುದು. ನನ್ನಲ್ಲಿ ಸಮಾಧಿ ಯೋಗರೂಪ ಧ್ಯಾನಾಸಕ್ತರಾದವರಿಗೆ, ಅಷ್ಟಾಂಗಯೋಗಗಳು ಸಿದ್ಧಿಯಾಗಿ ಅಣಿಮಾದಿ ಅಷ್ಟೈಶ್ವರ್ಯಗಳು ಪ್ರಾಪ್ತವಾದರೂ, ಅವರು ಅದನ್ನು ಪುನಃ ವಿಷಯಾದಿಭೋಗಗಳಿಗೆ ಉಪಯೋಗಿಸದೇ, ನನ್ನ ಉಪಾಸನೆಗಾಗಿಯೇ ಉಪಯೋಗಿಸುತ್ತಾರೆಅಂತಹ ಅಂತರಂಗಭಕ್ತರಿಗೆ ಸರ್ವಮೃತ್ಯು ಭಯಪರಿಹಾರಕವೂ, ನಿರ್ದುಃಖಸುಖಪ್ರದವೂ ಆದ ಕೈವಲ್ಯವೆಂಬ ನನ್ನ ಲೋಕದಲ್ಲಿ ಮುಕ್ತಿಯು ಲಭಿಸುವುದು, ಎಂದನು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು.**

**ಶ್ರೀಕೃಷ್ಣಾರ್ಪಣಮಸ್ತು**

## अथ एकोनत्रिंशोऽध्यायः

**भगवानुवाच**

योगस्य लक्षणं वक्ष्ये सबीजस्य नृपात्मजे ।
मनो येनैव विधिना प्रसन्नं याति सत्पथम् ॥ १ ॥

स्वधर्माचरणं शक्त्या विधर्माच्च निवर्तनम् ।

दैवलब्धेन सन्तोष आत्मविच्चरणार्चनम् ॥ २ ॥

ग्राम्यधर्मनिवृत्तिश्च मोक्षधर्मरतिस्तथा ।
मितमेध्यादनं शश्वद् विविक्तक्षेत्रसेवनम् ॥ ३ ॥

अहिंसा सत्यमस्तेयं यावदर्थपरिग्रहः ।
ब्रह्मचर्यं तपः शौचं स्वाध्यायः पुरुषार्चनम् ॥ ४ ॥

मौनं सदासनं स्थैर्य प्राणानां च जयः शनैः ।
प्रत्याहारश्चेन्द्रियाणां विषयान्मनसा हृदि ॥ ५ ॥

स्वधिष्ण्यानामेकदेशे मनसा प्राणधारणम् ।
वैकुण्ठलीलाभिध्यानं समाधानं तथाऽऽत्मनः ॥ ६ ॥

एतैरन्यैश्च पथिभिर्मनो दुष्टमसत्पथम् ।
बुद्ध्या युञ्जीत शनकैर्जितप्राणो ह्यतन्द्रितः ॥ ७ ॥

शुचौ देशे प्रतिष्ठाप्य विजितासन आसनम् ।
तस्मिन् स्वस्तिसमासीन ऋजुकायः समभ्यसेत् ॥ ८ ॥

प्राणस्य शोधयेन्मार्गं पूरकुम्भकरेचकैः ।
प्रतिकूलेन वा चित्तं यथा स्थिरमचञ्चलम् ॥ ९ ॥

मनोऽचिरात् स्याद् विरजं जितश्वासस्य योगिनः ।
वाय्वग्निभ्यां यथा लोहं ध्मातं त्यजति वै मलम् ॥ १० ॥

प्राणायामैर्दहेद् दोषान् धारणाभिश्च किल्बिषान् ।
प्रत्याहारेण संसर्गान् ध्यानेनानीश्वरान् गुणान् ॥ ११ ॥

यदा मनः स्वं विरजं योगेन सुसमाहितम् ।
काष्ठां भगवतो ध्यायेत् स्वनासाग्रावलोकनः ॥ १२ ॥

प्रसन्नवदनाम्भोजं पद्मगर्भारुणेक्षणम् ।
नीलोत्पलदलश्यामं शङ्खचक्रगदाधरम् ॥ १३ ॥

लसत्पङ्कजकिञ्जल्कपीतकौशेयवाससम् ।

श्रीवत्सवक्षसं भ्राजत्कौस्तुभामुक्तकन्धरम् ॥ १४ ॥

मत्तद्विरेफाकुलया परीतं वनमालया ।
परार्घ्यहारवलयकिरीटाङ्गदनूपुरम् ॥ १५ ॥

काञ्चीगुणोल्लसच्छ्रोणिं हृदयाम्भोजविष्टरम् ।
दर्शनीयतमं शान्तं मनोनयननन्दनम् ॥ १६ ॥

अपीच्यदर्शनं शश्वत् सर्वलोकनमस्कृतम् ।
सन्तं वयसि कैशोरे भक्तानुग्रहकातरम् ॥ १७ ॥

कीर्तन्यतीर्थयशसं पुण्यश्लोकयशस्करम् ।
ध्यायेद् देवं समग्राङ्गं यावन्न च्यवते मनः ॥ १८ ॥

स्थितं व्रजन्तमासीनं शयानं वा गुहाशयम् ।
प्रेक्षणीयेहितं ध्यायेच्छुद्धभावेन चेतसा ॥ १९ ॥

तस्मिन् लब्धपदं चित्तं सर्वावयवसंस्थितम् ।
विलोक्यैकत्र संयुज्यादङ्गे भगवतो मुनिः ॥ २० ॥

सञ्चिन्तयेद् भगवतश्चरणारविन्दं वज्राङ्कुशध्वजसरोरुहलाञ्छनाढ्यम् ।
उत्तुङ्गरक्तविलसन्नखचक्रवालज्योत्स्नाभिराहतमहद्धृदयान्धकारम् ॥ २१ ॥
यच्छौचनिःसृतसरित्प्रवरोदकेन तीर्थेन मूर्ध्न्यधिधृतेन शिवः शिवोऽभूत् ।
ध्यातुर्मनः शमलशैलनिसृष्टवज्रं ध्यायेच्चिरं भगवतश्चरणारविन्दम् ॥ २२ ॥
ऊरू सुपर्णभुजयोरधिशोभमानावोजोनिधी स्वतसिकाकुसुमावभासौ ।
व्यालम्बिपीतवरवाससि वर्तमानकाञ्चीकलापपरिरम्भिनितम्बमम्ब ॥ २३ ॥
नाभिह्रदं भुवनकोशगुहोदरस्थं यत्रात्मयोनिधिषणाखिललोकपद्मम् ।
व्यूढं हरिन्मणिवृषः स्तनयोरमुष्य ध्यायेद् द्वयं विततहारमयूखगौरम् ॥ २४ ॥
वक्षोऽधिवासमृषभस्य महाविभूतेः पुंसां मनोनयननिर्वृतिमादधानम् ।
कण्ठं च कौस्तुभमणेरधिभूषणार्थं कुर्यान्मनस्यखिललोकनमस्कृतस्य ॥ २५ ॥
बाहूंश्च मन्दरगिरेः परिवर्तनेन निर्णिक्तबाहुवलयानधिलोकपालान् ।

सञ्चिन्तयेद् दशशतारमसह्यतेजः शङ्खं च तत्करसरोरुहराजहंसम् ॥ २६ ॥
कौमोदकीं भगवतो दयितां स्मरेत दिग्धामरातिभटशोणितकर्दमेन ।
मालां मधुव्रतवरूथगिरोपघुष्टां चैत्त्यस्य तत्त्वममलं मणिमस्य कण्ठे ॥ २७ ॥
भृत्यानुकम्पितधियेह गृहीतमूर्तेः सञ्चिन्तयेद् भगवतो वदनारविन्दम् ।
यद् विस्फुरन्मकरकुण्डलवल्गितेन विद्योतितामलकपोलमुदारहासम् ॥ २८ ॥
यच्छ्रीनिकेतमलिभिः परिसेव्यमानं भूत्या स्वया कुटिलकुन्तलवृन्दजुष्टम् ।
मीनद्वयाश्रियमधिक्षिपदब्जनेत्रं ध्यायेन्मनोमयमतन्द्रित उल्लसद्भ्रु ॥ २९ ॥
तस्यावलोकमधिकं कृपयाऽतिघोरतापत्रयोपशमनाय निसृष्टमक्ष्णोः ।
स्निग्धस्मितानुगुणितं विपुलप्रसादं ध्यायेच्चिरं विततभावनया गुहायाम् ॥ ३० ॥
हासं हरेरवनताखिललोकतीव्रशोकाश्रुसागरविशोषणमत्युदारम् ।
संमोहनाय रचितं निजमाययाऽस्य भ्रूमण्डलं मनुसुते मकरध्वजस्य ॥ ३१ ॥
ध्यानायनं रहसि तद् बहुलाधरोष्ठभासाऽरुणायिततनुद्विजकुन्दपङ्क्ति ।
ध्यायेत् स्वहृत्कुहरकेऽवसितस्य विष्णोर्भक्त्याऽऽर्द्रयाऽर्पितमना न पृथग् दिदृक्षेत् ॥ ३२ ॥
एवं हरौ भगवति प्रतिलब्धभावो भक्त्या द्रवद्धृदय उत्पुलकप्रमोदः ।
औत्कण्ठ्यबाष्पकलया मुहुरर्द्यमानस्तच्चापि चित्तबडिशं शनकैर्वियुङ्क्ते ॥ ३३ ॥
मुक्ताश्रयं यर्हि निर्विषयं स्वचित्तं निर्वाणमृच्छति मनः सहसा यथाऽर्चिः ।
आत्मानमत्र पुरुषोऽव्यवधानमेकमन्वीक्षते प्रतिनिवृत्तगुणप्रवाहः ॥ ३४ ॥
सोऽप्येतया चरमया मनसो निवृत्त्या तस्मिन् महिम्न्यवसितः सुखदुःखबाह्ये ।
हेतुत्वमप्यसति कर्तरि दुःखयोर्न स्वात्मन् विधत्त उपलब्धपरात्मकाष्ठः ॥ ३५ ॥
देहं तु तं न चरमं स्थितमुज्झितं वा सिद्धो विपश्यति यतोऽध्यगमत् स्वरूपम् ।
दैवादुपेतमथ दैववशादपेतं वासो यथा परिकृतं मदिरामदान्धः ॥ ३६ ॥
देहोऽपि दैववशगः खलु कर्म यावत् स्वारम्भकं प्रतिसमीक्षत एव सासुः ।
तं सप्रपञ्चमधिरूढसमाधियोगः स्वाप्नं पुनर्न भजते प्रतिबुद्धवत् सः ॥ ३७ ॥
यथा पुत्राच्च वित्ताच्च पृथ मर्त्यः प्रतीयते ।

अप्यात्मत्वेनाभिमताद् देहादेः पुरुषस्तथा ॥ ३८ ॥

यथोल्मुकाद् विस्फुलिङ्गाद् धूमाद् वाऽपि स्वसम्भवात् ।
अप्यात्मत्वेनाभिमताद् दाहकोऽग्निः पृथ मतः ॥ ३९ ॥

भूतेन्द्रियान्तःकरणात् प्रधानाज्जीवसंज्ञितात् ।
आत्मा तथा पृथग् द्रष्टा भगवान् ब्रह्मसंज्ञितः ॥ ४० ॥

सर्वभूतेषु चात्मानं सर्वभूतानि चात्मनि ।
ईक्षेतानन्यभावेन भूतेषु च तदात्मताम् ॥ ४१ ॥

स्वयोनिषु यथा ज्योतिरेकं नाना प्रतीयते ।
योनीनां गुणवैषम्यात् तथाऽऽत्मा प्रकृतौ स्थितः ॥ ४२ ॥

तस्मादिमां स्वां प्रकृतिं देवीं सदसदात्मिकाम् ।
दुर्विभाव्यां पराभाव्य स्वरूपेणावतिष्ठते ॥ ४३ ॥

अन्वयव्यतिरेकाच्च साक्ष्यात्मा व्यभिचारिणः ।
वैतथ्यं व्यभिचारं च निद्रान्तेऽस्यानुचिन्तयेत् ॥ ४४ ॥

**॥ इति श्रीमद्भागवते (तृतीयस्कन्धे( *3) एकोनत्रिंशोऽध्यायः ॥**

**॥ ಇಪ್ಪತ್ತೊಂಭತ್ತನೆಯ ಅಧ್ಯಾಯ ॥**

## ಸಬೀಜಯೋಗದ ಲಕ್ಷಣ :-

ಈ ಅಧ್ಯಾಯದಲ್ಲಿ ಕಪಿಲಪರಮಾತ್ಮನು ದೇವಹೂತೀದೇವಿಗೆ, ಪರಮಾತ್ಮಾಪರೋಕ್ಷಜ್ಞಾನ ಸಾಧನವಾದ ಸಬೀಜಯೋಗವೆಂಬ ವಿಷ್ಣುಪರವಾದ ಯೋಗಲಕ್ಷಣವುಳ್ಳ ಮಾಡಬೇಕಾದ ಧರ್ಮಗಳನ್ನು ವಿವರಿಸಿ ಹೇಳಲು ಉದ್ದೇಶಿಸಿ, ಎಲೈ ರಾಜಪುತ್ರಿಯೆ! ಮನಃಪ್ರಸಾದವನ್ನೂ, ಮನಸ್ಸು ಸದ್ವಿಷಯಗಳಲ್ಲಿಯೇ ಇರುವಂತೆಯೂ, ಮಾಡಲು ಶಕ್ತವಾದ ವೈಷ್ಣವಯೋಗವೆಂಬ, ಸಬೀಜಯೋಗದ ಲಕ್ಷಣಗಳನ್ನು ನಿನಗೆ ಹೇಳುವೆನು ಕೇಳು, ಎಂದು ಹೇಳಿ, ದೇವಹೂತೀದೇವಿಗೆ ಈ ರೀತಿಯಾಗಿ ಉಪದೇಶಿಸಿದನು:-

ಭಗವದ್ವಿಷಯಕ ಜ್ಞಾನವನ್ನಪೇಕ್ಷಿಸತಕ್ಕವನು, ಪ್ರಯತ್ನಪೂರ್ವಕವಾಗಿ ಸ್ವಧರ್ಮಾಚರಣೆಯನ್ನು

ಮಾಡುತ್ತಾ, ನಿಷೇಧಕರ್ಮಗಳನ್ನು ಬಿಡಬೇಕು. ಭಗವದನುಗ್ರಹದಿಂದ ಪ್ರಾಪ್ತವಾದವುಗಳಲ್ಲಿಯೇ ಸಂತುಷ್ಟನಾಗಿರಬೇಕು. ಜ್ಞಾನಿಗಳಾದ ಭಗವದ್ಭಕ್ತರನ್ನು ಭಕ್ತಿಯಿಂದ ಆದರಪೂರ್ವಕವಾಗಿ ಸೇವಿಸಬೇಕು. ವಿಷಯಾದಿಗ್ರಾಮ್ಯ ಅಪೇಕ್ಷೆಗಳನ್ನು ತ್ಯಜಿಸಿ, ಮೋಕ್ಷಾಪೇಕ್ಷೆಯಿಂದ ಜ್ಞಾನಸಂಪಾದನೆಗಾಗಿ ಪ್ರಯತ್ನಮಾಡಬೇಕು. ಪರಮಾತ್ಮನಿವೇದಿತ, ವೈಶ್ವದೇವ, ಬಲಿಹರಣಾದಿ ಹೋಮಶೇಷವಾದ ಸಾತ್ವಿಕ ಆಹಾರವನ್ನು ಮಿತಿಯಾಗಿ, ದೇಹಧಾರಣೆಗೆ ಅತ್ಯಂತಾವಶಕ್ಯವಾದಷ್ಟು ಮಾತ್ರ ಸ್ವೀಕರಿಸಬೇಕು.

ಭಗವತ್ಸನ್ನಿಧಾನೋಪೇತ ಪುಣ್ಯಸ್ಥಳಗಳಯಾತ್ರೆಯನ್ನು ಮಾಡಬೇಕು. ಶುದ್ಧವಾದ, ಏಕಾಂತಸ್ಥಳದಲ್ಲಿ ವಾಸಿಸಬೇಕು. ಪರದ್ರೋಹವೆಂಬ ಹಿಂಸೆಯನ್ನು ಮಾಡಬಾರದು. ಎಲ್ಲರಿಗೂ ಶುಭವನ್ನುಂಟುಮಾಡುವ ಹಿತವಾಕ್ಯಗಳೆಂಬ, ಸತ್ಯವನ್ನೇ ನುಡಿಯಬೇಕು. ಇತರರಿಗೆ ಸೇರಿದ ಒಂದುಹುಲ್ಲುಕಡ್ಡಿಯನ್ನೂ ಅವರಿಗೆ ತಿಳಿಯದಂತೆ ಅಪಹರಿಸಬಾರದು. ಜೀವನಕ್ಕೆ ಆಯಾಯಹೊತ್ತಿಗೆ ಬೇಕಾದಷ್ಟನ್ನೇ ದಾನದಿಂದಾಗಲೀ, ಸಂಗ್ರಹದಿಂದಾಗಲೀ ಪಡೆಯಬೇಕು. ಮನೋವಾಕ್ಕಾಯಗಳಿಂದ ಪರಸ್ತ್ರೀಗಮನಾದಿಗಳನ್ನು ಮಾಡದೇ ಬ್ರಹ್ಮಚರ್ಯವ್ರತವುಳ್ಳವನಾಗಬೇಕು. ಕಾಯಿಕ, ವಾಚಿಕ, ಮಾನಸಿಕನಿಯಮಗಳೆಂಬ ತಪಸ್ಸನ್ನಾಚರಿಸಿ, ನಿರಂತರ ಶಾಸ್ತ್ರಶ್ರವಣರೂಪ ತಪಸ್ಸನ್ನು ಮಾಡಬೇಕು. ದೇಹ ಮತ್ತು ಮನಸ್ಸುಗಳನ್ನು ನಿರ್ಮಲವಾಗಿಡಬೇಕು.

ವೇದಾಧ್ಯಯನವನ್ನೂ ಸಾಲಿಗ್ರಾಮ, ಪ್ರತಿಮಾರ್ಚನೆಗಳನ್ನು ತಂತ್ರಸಾರೋಕ್ತಪ್ರಕಾರ ಮಾಡಬೇಕು. ಅನವಶ್ಯಕಮಾತುಗಳಾಡದೆ ಮೌನವನ್ನು ಧರಿಸಬೇಕು. ಆಸನಜಯವನ್ನೂ, ಪ್ರಾಣಾಯಾಮದಿಂದ ಶ್ವಾಸಜಯವನ್ನೂ ಪಡೆಯಬೇಕು. ವಿಷಯಗಳಕಡೆಗೆ ಹೋಗುವ ಇಂದ್ರಿಯಗಳನ್ನೂ, ಮನಸ್ಸನ್ನೂ ನಿಯಮಿಸಿ ವಿಷಯಸಂಬಂಧಹೊಂದದಂತೆ ನಿರೋಧಿಸಬೇಕು. ಮನಸ್ಸನ್ನು ಸ್ವಚ್ಛವಾದದ್ದನ್ನಾಗಿಯೂ, ಚಂಚಲವಿಲ್ಲದಂತೆಯೂ, ಸ್ವಲ್ಪಸ್ವಲ್ಪವಾಗಿ ಅಭ್ಯಾಸಬಲದಿಂದ ಮಾಡಿಕೊಳ್ಳಬೇಕು. ಈ ನಿರ್ಮಲವಾದ ಮನಸ್ಸಿಗೆ ಧ್ಯಾನದಿಂದ ಪರಮಾತ್ಮನು ದೃಷ್ಟಿವಿಷಯನಾಗುತ್ತಾನೆ. ಆಗ ಒಂದೊಂದಂಗವನ್ನಾಗಿ ಸ್ಥಿರವಾಗಿ ಮನಸ್ಸಿನಲ್ಲಿ ನಿಲ್ಲಿಸಿಕೊಳ್ಳುತ್ತಾ, ಕ್ರಮೇಣ ಎಲ್ಲಾ ಅವಯವ ಆಭರಣಾದಿಗಳಿಂದ ಕೂಡಿದ ಪರಮಾತ್ಮನರೂಪವು ದರ್ಶನವಾಗುತ್ತದೆ. ಆ ದರ್ಶನಕಾಲದಲ್ಲಿ ಪರಮಾತ್ಮನ ಅನೇಕ ಅವತಾರ ಲೀಲಾಚರಿತ್ರೆಗಳ ಸ್ಮರಣೆಯನ್ನು ನಿರಂತರ ಮಾಡುತ್ತಿರಬೇಕು.

ನಂತರ ಪ್ರಯತ್ನವಿಲ್ಲದೇ ಮನಸ್ಸು ಧ್ಯಾನಸಮಾಧಿಯೋಗದಿಂದ ಪರಮಾತ್ಮನರೂಪ ಗುಣ, ಕ್ರಿಯಾದಿಗಳಲ್ಲಿ ಮಾಹಾತ್ಮ್ಯಜ್ಞಾನಪೂರ್ವಕ ದೃಢಭಕ್ತಿಯಿಂದ ನಿಲ್ಲುತ್ತದೆ. ಇದರಿಂದ ಮನಸ್ಸು ಸಮಾಧಾನಸ್ಥಿತಿಗೆ ಬಂದು ದುಷ್ಟವಿಷಯಗಳಲ್ಲಿ ಸಂಬಂಧವಿಲ್ಲದೇ, ಸದ್ವಿಷಯವೆಂಬ ಭಗವನ್ನಿಷ್ಠೆಯಲ್ಲಿ

ಪ್ರತಿಷ್ಠಿತವಾಗುತ್ತದೆ. ಇನ್ನೂ ಎಲ್ಲಾತರಹ ಬೇರೆ ಉಪಾಯಗಳಿಂದಲೂ, ಮನಸ್ಸನ್ನು ಅಸದ್ವಿಷಯಗಳಲ್ಲಿ ಪ್ರವೇಶಿಸದಂತೆ ಬುದ್ಧಿಯಿಂದ ತಡೆದು ಇಂದ್ರಿಯಗಳ ನಿಗ್ರಹವನ್ನು ಮಾಡಿಕೊಳ್ಳಬೇಕು. ಇದರಂತೆ ಸ್ವಸ್ತಿಕಾ ಅಥವ ಪದ್ಮಾಸನದಿಂದ ಆಯಾಸವಿಲ್ಲದೆ ಬಹುಕಾಲ ಸುಖಾಸನದ ಮೇಲೆ ಕೂತುಕೊಂಡಿರುವ ಅಭ್ಯಾಸ ಮಾಡಿ, ಆಸನಜಯವನ್ನೂ ಪಡೆಯಬೇಕು.

## ಧ್ಯಾನ ಸಮಾಧಿ ಯೋಗ :-

ನಂತರ ಧ್ಯಾನಸಮಾಧಿಯೋಗವನ್ನು ಅಭ್ಯಾಸಮಾಡಲಿಚ್ಛಿಸುವವನು ಮೊದಲು, ಪರಿಶುದ್ಧವಾದ ಸ್ಥಳದಲ್ಲಿ, ದರ್ಭಾ, ಕೃಷ್ಣಾಜಿನಾದಿ ಆಸನವನ್ನು ಮಾಡಿಕೊಳ್ಳಬೇಕು. ತಾನು ಸ್ನಾನಾಹ್ನಿಕಗಳನ್ನು ಮಾಡಿದನಂತರ ಆ ಆಸನದಮೇಲೆ ಸುಖಾಸನದಿಂದ ಕುಳಿತುಕೊಳ್ಳಬೇಕು. ಶರೀರ ಮತ್ತು ಕುತ್ತಿಗೆ, ಮುಖಗಳನ್ನು ವಕ್ರವಿಲ್ಲದೆ ನೆಟ್ಟಗೆ, ಋಜುವಾಗಿ ಇಟ್ಟುಕೊಂಡು ಕೂಡುವುದನ್ನು ಕಲಿಯಬೇಕು. ಹೀಗೆ ಸ್ಥಿರವಾದ ಋಜುವಾದ ಆಸನಜಯವನ್ನು ಪಡೆದ ನಂತರ, ಪೂರಕ, ಕುಂಭಕ, ರೇಚಕಕ್ರಮಗಳಿಂದ ಪ್ರಾಣಾಯಾಮವನ್ನು ಮಾಡುವುದಕ್ಕಾಗಿ ಮೊದಲು ಶ್ವಾಸಮಾರ್ಗಗಳನ್ನು ಶುದ್ಧಿ ಮಾಡಿಕೊಳ್ಳಬೇಕು. ನಂತರ ರೇಚಕ, ಪೂರಕ, ಕುಂಭಕರೂಪ ವ್ಯುತ್ಕ್ರಮದಿಂದಲೂ ಪ್ರಾಣಾಯಮಗಳನ್ನು ಮಾಡಿ, ಶ್ವಾಸಮಾರ್ಗವನ್ನು ನಿರ್ಮಲವಾಗಿ ಮಾಡಿಕೊಳ್ಳಬೇಕು. ಇದರಿಂದ ಚಂಚಲವಾದ ಚಿತ್ತವು ಜೀವನವಶವಾಗಿ ಸ್ಥಿರವಾದದ್ದಾಗುತ್ತದೆ. ಪ್ರಾಣಾಪಾನವಾಯುಗಳ ನಿರೋಧದಿಂದ ಶ್ವಾಸಜಯವೂ ಲಭಿಸುತ್ತದೆ. ಮನಸ್ಸು ಬಹುಕಾಲ ಶುದ್ಧವಾಗಿಯೇ ಇರುವ ಶಕ್ತಿಯನ್ನು ಪಡೆಯುತ್ತದೆ.

ಚೆನ್ನಾಗಿ ಬೀಸುವ ವಾಯುವಿನಿಂದ ಪ್ರಜ್ವಲಿತವಾದ ಅಗ್ನಿಯು ಹೇಗೆ ಲೋಹವನ್ನು ಕರಗಿಸಿ, ಅದರಲ್ಲಿರತಕ್ಕ ಕಲ್ಮಷಗಳನ್ನು ನಾಶಮಾಡಿ, ಸ್ವಚ್ಛಗೊಳಿಸುತ್ತದೆಯೋ, ಅದರಂತೆ ವಾಯುಬೀಜಾಕ್ಷರವಾದ "ಓಂ ಯಂ ಓಂ ಎಂಬ ಮಂತ್ರಜಪಪೂರ್ವಕವಾದ ಪೂರಕದಿಂದಲೂ "ಓಂ ರಂ ಓಂ "ಎಂಬ ಅಗ್ನಿಬೀಜಾಕ್ಷರ ಜಪಪೂರ್ವಕ ಕುಂಭಕದಿಂದಲೂ, ಶರೀರದ ಕಲ್ಮಷಗಳು ದಹಿಸಲ್ಪಟ್ಟು, ಶರೀರವು ಶುದ್ಧವಾಗುವುದು. ರಾಗಾದಿದೋಷಗಳು ಬಿಟ್ಟುಹೋಗುವವು. ಪ್ರಾಣಾಯಾಮದಿಂದ ಕೂಡಿದ ಧಾರಣಾಯೋಗವೆಂಬ ಖಂಡಧ್ಯಾನದಿಂದ, ಜನ್ಮಾಂತರ ಸಂಚಿತಪಾಪಗಳೂ, ದುರ್ಜನರ ಸಹವಾಸದಿಂದ ಬರುವ ಕಷ್ಟಗಳೂ, ಜ್ಞಾನಭಕ್ತಿವಿರಕ್ತಿಗಳೆಂಬ ಐಶ್ವರ್ಯವಿರೋಧಿಯಾದ, ದೇವರಿಲ್ಲವೆಂಬ ದುರ್ಬುದ್ಧಿಯೂ ಕಾಮಾದಿಗಳು ಎಂಬ ಕಿಲ್ಬಿಷಗಳು ನಾಶವನ್ನು ಹೊಂದುವವು. ಪ್ರತ್ಯಾಹಾರವೆಂಬ ಇಂದ್ರಿಯಗಳ ಸ್ವಾಧೀನತೆಯಿಂದ ಸಂಸರ್ಗಗಳೆಂಬ ಹೊರಗಿನ ಪದಾರ್ಥಗಳಲ್ಲಿನ ಆಸಕ್ತಿಯು ಹೋಗುವುದು. ಧ್ಯಾನವೆಂಬ ಅಖಂಡದರ್ಶನರೂಪಯೋಗದಿಂದ ಸಮಸ್ತಪಾಪಗಳ ನಾಶವೂ ಆಗುವುದು.

ಯಾವಾಗ ಮನಸ್ಸು ಸತ್ವಗುಣಪ್ರಧಾನವಾಗಿ ಶುದ್ಧವಾಗುವುದೋ, ಆವಾಗ ದೃಷ್ಟಿಯನ್ನು ನಾಸಿಕಾಗ್ರದಲ್ಲಿಯೇ ಇಟ್ಟು, ಏಕಾಗ್ರವಾದ ಚಿತ್ತದಿಂದ ಪರಮಾತ್ಮನ ರೂಪವನ್ನು ಸಮಾಧಿ ಯೋಗದಿಂದ ಧ್ಯಾನಿಸಬೇಕು. ಈ ಮೇಲಿನ ಯಾಗಾನುಷ್ಠಾನ ಅಂಗಗಳು ದಿಗ್ದರ್ಶನಕ್ರಮದಿಂದ ಹೇಳಲ್ಪಟ್ಟಿವೆ. ಆಸನ, ಪ್ರಾಣಾಯಾಮದಿ ಯೋಗವಿದ್ಯೆಗಳು ಬಹಳ ರಹಸ್ಯಗಳಾದುದರಿಂದ ಹೆಚ್ಚು ವಿಶದವಾಗಿ ಇಲ್ಲಿ ಪ್ರಕೃತವಿಲ್ಲದ್ದರಿಂದಲೂ, ಗುರೂಪದೇಶದಿಂದ ಯೋಗ್ಯಶಿಷ್ಯನು ತಿಳಿಯತಕ್ಕದ್ದಾದವುಗಳಾಗಿರುವುದರಿಂದಲೂ, ಇಲ್ಲಿ ವಿವರಿಸಲು ನಿಷೇಧವಾದುದರಿಂದ ವಿವರಿತವಾಗಿಲ್ಲ. ಸ್ವಧರ್ಮದಿಂದ ಯೋಗಾನುಷ್ಠಾನ ಮಾಡುವವರಿಗೆ, ಸ್ವಾಭಾವಿಕವಾಗಿಯೇ ಉಪದೇಶದಿಂದ ಈ ರಹಸ್ಯಗಳು ಸ್ವಯಂ ವ್ಯಕ್ತವಾಗುತ್ತವೆ. ಎಲೈ ದೇವಹೂತೀದೇವಿಯೆ, ಹೃತ್ಸ್ಥಲದಲ್ಲಿ ಪರಮಾತ್ಮನು ಈ ರೀತಿಯಾಗಿರುವನೆಂದು ಧ್ಯಾನಮಾಡಬೇಕು:- ಮೊದಲು ಒಂದೊಂದು ಅವಯವದ ಲಕ್ಷಣವನ್ನೂ ತಿಳಿದು ಧ್ಯಾನಮಾಡಿ, ಒಂದೊಂದವಯವವನ್ನೇ ಪ್ರತ್ಯಕ್ಷಮಾಡಿಕೊಂಡು ಮನಸ್ಸಿನಲ್ಲಿ ನಿಲ್ಲಿಸಿಕೊಳ್ಳಬೇಕು. ಇದು ಖಂಡಧ್ಯಾನ ಮತ್ತು ಧಾರಣಾಕ್ರಮವು:-

ಪರಮಾತ್ಮನಮುಖಕಮಲವು ಯಾವಾಗಲೂ ಪ್ರಸನ್ನವಾಗಿ ಭಕ್ತಾನುಗ್ರಹೋನ್ಮುಖವಾಗಿರುತ್ತೆಂದೂ, ನೇತ್ರಗಳು ಕಮಲದಂತೆ ವಿಶಾಲವಾದವುಗಳೂ ಎಳೆಗೆಂಪಾದವುಗಳೂ ಆಗಿರುತ್ತವೆಂದೂ, ದೇಹವು ಕನ್ನೈದಿಲೆಯ ಪುಷ್ಪ ದಂತೆ ನೀಲವರ್ಣವೂ ಕೋಮಲವೂ ಆಗಿರುವುದೆಂದೂ, ನಾಲ್ಕು ಹಸ್ತಗಳಲ್ಲಿ ಶಂಖ, ಚಕ್ರಗದಾಯುಧಗಳನ್ನೂ, ಅರಳಿದ ಸಹಸ್ರದಳಪದ್ಮವನ್ನೂ ಧರಿಸಿರುವನೆಂದೂ ಚಿಂತಿಸಬೇಕು. ಸುವರ್ಣಮಯ ಪೀತಾಂಬರವನ್ನೂ, ಕಂಠದಲ್ಲಿ ಕೌಸ್ತುಭರತ್ನ, ವನಮಾಲೆ, ಅನರ್ಘ್ಯ ರತ್ನಹಾರಗಳನ್ನೂ, ಕಿರೀಟ, ಕುಂಡಲ, ಕಾಂಚೀದಾಮವೆಂಬ ವಡ್ಯಾಣ, ನೂಪುರ, ಭುಜಕೀರ್ತಿಗಳನ್ನು ಧರಿಸಿರತಕ್ಕವನೆಂದೂ, ಸರ್ವಾಭರಣಭೂಷಿತನೂ, ಸರ್ವಾಂಗಸುಂದರ ಅತಿಮನೋಹರರೂಪನೆಂದು ಧ್ಯಾನಿಸತಕ್ಕದ್ದು.

ಆನಂದಭರಿತರಾದ ಮುಕ್ತರು ಭ್ರಮರಗಳ ಆಕೃತಿಯಿಂದ ವನಮಾಲೆಯ ಪರಿಮಳವನ್ನು ಆಘ್ರಾಣಿಸುವವರಾಗಿ, ಅನಂತ ವೇದೋಕ್ತನುಸಾರ ಸಾಮಗಾನವೆಂಬ ಝೇಂಕೃತಿಯನ್ನು ಮಾಡುತ್ತಾ, ಆ ವನಮಾಲೆಯ ಸಮೀಪದಲ್ಲಿ ಹಾರಾಡುತ್ತಿರುತ್ತಾರೆಂದು ಭಾವಿಸಬೇಕು. ಇಂತಹ ಪರಮಾತ್ಮನರೂಪವು ನವತಾರುಣ್ಯದಿಂದ ಕೂಡಿದ್ದೂ, ಭಕ್ತರ ಉದ್ಧಾರಕಾರ್ಯಕ್ಕಾಗಿ ಲವಲವಿಕೆಯಿಂದಲೂ, ಉತ್ಸಾಹದಿಂದಲೂ ಕೂಡಿ ನೋಡುವವರ ಹೃತ್ತಾಪವನ್ನು ನಾಶಮಾಡತಕ್ಕದ್ದಾಗಿದೆ. ಈತನು ಸರ್ವವೇದಪ್ರಸಿದ್ಧಗಳಾದ ಅನಂತಾನಂತಸತ್ಕಲ್ಯಾಣಗುಣಪೂರ್ಣನು. ಬ್ರಹ್ಮಾದಿದೇವತೆಗಳು ಇವನ

ಮಹಿಮಾತಿಶಯಗಳನ್ನು ತಿಳಿದು ಗಾನಮಾಡಿ, ಆನಂದಭರಿತರಾಗುತ್ತಾರೆ. ಇಂತಹ ಪರಮಾತ್ಮನನ್ನು, ಹೃತ್ಸ್ಥಲದಲ್ಲೇ ಇರುತ್ತಾನೆಂದಾಗಲೀ, ಕುಳಿತಂತಾಗಲೀ, ಮಲಗಿರುವಂತಾಗಲೀ ನಿಂತಾಗಲೀ, ಸಂಚಾರಮಾಡುತ್ತಿರುವಂತಾಗಲೀ ಧ್ಯಾನಿಸಬಹುದು.

ಇಂತಹ ಯಾವಾಗಲೂ ದರ್ಶನಾಪೇಕ್ಷೆಯನ್ನು ಹುಟ್ಟಿಸುವ ಅತಿಮನೋಹರರೂಪ ಪರಮಾತ್ಮನನ್ನು ಪರಿಶುದ್ಧಭಾವದಿಂದ ಧ್ಯಾನಿಸಬೇಕು. ಮೊದಲು ಬೇರೆಬೇರೆ ಅವಯವಗಳನ್ನು ಪ್ರತ್ಯೇಕಧ್ಯಾನದಿಂದ ಪ್ರತ್ಯಕ್ಷ ಮಾಡಿಕೊಂಡು, ನಂತರ ಧಾರಣಾಯೋಗದಿಂದ ಸರ್ವಾಯವ, ಸರ್ವಾಭರಣಭೂಷಿತ, ಸಾರಸೌಂದರ್ಯರೂಪನೂ, ಕರುಣಾಸಮುದ್ರನೂ, ಪ್ರಸನ್ನಮುಖ, ದೃಷ್ಟಿಯುಳ್ಳ ಪರಮಾತ್ಮನ ಒಟ್ಟುರೂಪವನ್ನು ಮನಸ್ಸಿನಿಂದ ಗ್ರಹಿಸಿ ಅಖಂಡರೂಪವನ್ನು ಪ್ರತ್ಯಕ್ಷಮಾಡಿಕೊಂಡು ಕಾಣಬೇಕು.

## ಭಗವಂತನ ಸರ್ವಾವಯವ ಧ್ಯಾನ ಕ್ರಮ :-

ನಂತರ ವಿಶೇಷಾಕಾರವಾಗಿ ಈ ರೀತಿಯಾಗಿ ಪಾದವನ್ನಾರಂಭಿಸಿ ಶಿರಪರ್ಯಂತರವಾಗಿ, ಅಖಂಡಧ್ಯಾನವನ್ನು ಮಾಡಬೇಕು:- ಪರಮಾತ್ಮನ ಅಂಗಾಲುಗಳು ತಾವರೇಕಮಲದಂತೆ ಕೆಂಪಾಗಿಯೂ, ಮೃದುವಾಗಿಯೂ, ವಜ್ರ, ಅಂಕುಶ, ಧ್ವಜ, ಪದ್ಮರೇಖೆಗಳಿಂದ ಚಿನ್ಹಿತವಾಗಿ ಶೋಭಿಸುತ್ತಿವೆ. ಕಾಲ್ಬೆರಳುಗಳ ಉಗುರುಗಳು ಚಂದ್ರಮಂಡಲದಂತೆ ಗುಂಡಾಗಿಯೂ, ಸ್ವಪ್ರಕಾಶದಿಂದ ಕಿರಣಗಳುಳ್ಳದ್ದಾಗಿಯೂ, ಸ್ವಲ್ಪ ಉಬ್ಬಿದಂತೆ ವರ್ತುಳಾಕಾರವಾಗಿಯೂ, ರಕ್ತವು ಉಕ್ಕುತ್ತಿದೆಯೋ ಎಂಬಂತೆ ರಕ್ತವರ್ಣವಾಗಿಯೂ ಇವೆ. ಉಗುರುಕೊನೆಗಳು ವಜ್ರದಕಾಂತಿಯಿಂದ ಹೊಳೆಯುತ್ತಿವೆ. ಮಾಲಾಕಾರವಾಗಿ ಶೋಭಿಸುವ ಈ ಎರಡು ಪಾದಪದ್ಮಗಳ ನಖಗಳ ಚಂದ್ರಿಕೆಯು, ಯೋಗಿಗಳ ಹೃದಯದಲ್ಲಿರುವ ಅಂಧಕಾರವನ್ನು ಸ್ವಪ್ರಕಾಶದಿಂದ ನಾಶಮಾಡಿ, ಹೃತ್ತಾಪ ಪರಿಹಾರಮಾಡಿ, ಅವರಿಗೆ ದಿವ್ಯಜ್ಞಾನಪ್ರಕಾಶವನ್ನೂ ಆನಂದವನ್ನೂ ಉಂಟುಮಾಡುವದಾಗಿರುತ್ತೆ. ವಾಮನರೂಪಿಯಾದ ಪರಮಾತ್ಮನು ತ್ರಿವಿಕ್ರಮಾವತಾರ ಮಾಡಿ ತನ್ನ ಪಾದವನ್ನು ಮೇಲಕ್ಕೆತ್ತಿದಾಗ ಬ್ರಹ್ಮಾಂಡಕಟಾಹವು ಭೇದಿಸಲ್ಪಟ್ಟು ದೇವಗಂಗೆಯು ಹೊರಗಿನಿಂದ ಸತ್ಯಲೋಕಕ್ಕೆ ಇಳಿಯಲಾಗಿ ಬ್ರಹ್ಮದೇವರು, ಸತ್ಯಲೋಕದಲ್ಲಿ ಕಂಡ ಪರಮಾತ್ಮನ ಈ ಯಾವ ಪಾದಕಮಲವನ್ನು ದೇವಗಂಗೆಯು ಉದಕವನ್ನು ತಮ್ಮ ಕಮಂಡಲುವಿನಿಂದ ತುಂಬಿಕೊಂಡು ಪಾದ ಪ್ರಕ್ಷಾಳನೆ ಮಾಡಲಾಗಿ, ಆ ಪರಮಾತ್ಮನ ಕಾಲ್ತೊಳೆದ ನೀರು ಪ್ರವಾಹರೂಪದಿಂದ ತಪೋಲೋಕದಲ್ಲಿ ಬೀಳುತ್ತಿರುವಾಗ, ಯಾವ ರುದ್ರದೇವರು ಆ ಪ್ರವಾಹವನ್ನು ತಮ್ಮ ಜಟೆಯಿಂದ ಧರಿಸಿ ಪಾವನರಾಗಿ, ಶಿವನೆಂಬ ಹೆಸರುಳ್ಳವರಾದರೋ, ಇಂತಹ ಪಾದಕಮಲವನ್ನು ಬಹಳಕಾಲ ಧ್ಯಾನಿಸಬೇಕು.

ಈ ಪಾದಗಳೂ ಧ್ಯಾನಮಾಡುವರ ಸಕಲಪಾಪಗಳೆಂಬ ಪರ್ವತರಾಶಿಗಳನ್ನು ವಜ್ರಾಯುಧದಂತೆ ಛೇದಿಸಿ ನಾಶಪಡಿಸತಕ್ಕದ್ದಾಗಿರುತ್ತವೆ. ಗರುಡದೇವರ ಭುಜಗಳ ಮೇಲೆ ಶೋಭಿಸುವ ಪರಮಾತ್ಮನ ತೊಡೆಗಳೂ ಮೊಳಕಾಲುಗಳೂ, ಸೊಂಟವೂ ದಿವ್ಯವಾದ ಪೀತಾಂಬರದಿಂದ ಆವೃತಗಳಾಗಿ ಪುಷ್ಟವಾಗಿ, ಸರಳವಾಗಿ, ರಮ್ಯಗಳಾಗಿ, ಸಕಲಬಲಕ್ಕೂ ಆಶ್ರಯಸ್ಥಾನವಾದ ಸಮುದ್ರದಂತೆ ಶೋಭಿಸುತ್ತಿವೆ. ಸೊಂಟದಲ್ಲಿ ಏಳುಸಾರಿ ಸುತ್ತಲ್ಪಟ್ಟ ಕಾಂಚೀದಾಮವೆಂಬ ಹೇಮರಂಜಿತ ನವರತ್ನಮಯ ಒಡ್ಯಾಣವು ತನ್ನ ಪ್ರಕಾಶವನ್ನು ನಾನಾವರ್ಣಗಳಿಂದ ಹೊರಚಿಮ್ಮುತ್ತ ಶೋಭಿಸುತ್ತಿದೆ. ಬ್ರಹ್ಮದೇವರ ಉತ್ಪತ್ತಿಗೆ ಕಾರಣವಾದ ಚತುರ್ದಶಭುವನಾತ್ಮಕ ಪದ್ಮಕ್ಕೆ ಆಧಾರವಾದ ಗರ್ಭೋದಕಕ್ಕೆ ಆಶ್ರಯವಾದ, ಅಗಾಧವಾದ ಪರಮಾತ್ಮನ ನಾಭಿದೇಶವನ್ನು ಧ್ಯಾನಿಸತಕ್ಕದ್ದು. ಇಂದ್ರನೀಲಮಣಿಕಾಂತಿಯಂತೆ ಶೋಭಿಸುವ ಪರಮಾತ್ಮನ ಸ್ತನದ್ವಯಗಳೂ, ನಾನಾರತ್ನಹಾರಗಳ ಶೋಭೆಯಿಂದ ಪ್ರಕಾಶಿಸುತ್ತಿರುವುದನ್ನು ಧ್ಯಾನಿಸಬೇಕು. ಸ್ಮರಿಸತಕ್ಕವರಿಗೆ ಮನಸ್ಸು, ನೇತ್ರಗಳಿಗೆ ಆನಂದಪ್ರದರಾದ ರಮಾದೇವಿಯರ ವಾಸಸ್ಥಳವಾದ ಪರಮಾತ್ಮನ ವಕ್ಷಸ್ಥಳವನ್ನು ಧ್ಯಾನಿಸಬೇಕು. ಸಕಲಲೋಕನಮಸ್ಕೃತರಾದ ಬ್ರಹ್ಮದೇವರಿಂದ ಅಧಿಷ್ಠಿತವಾದ ಕೌಸ್ತುಭರತ್ನಕ್ಕೆ ಅಲಂಕಾರಪ್ರಾಯವಾದ ಪರಮಾತ್ಮನ ಕಂಠಪ್ರದೇಶವನ್ನು ಧ್ಯಾನಮಾಡಬೇಕು.

ಮಂದರಪರ್ವತವನ್ನು ಸಮುದ್ರಮಥನಕಾಲದಲ್ಲಿ ತಿರುಗಿಸುವುದರಿಂದ ಪ್ರಕಟಿತವಾದ, ದೇವಾಸುರರಿಂದ ದುಸ್ಸಹವಾದ ಬಾಹುಬಲವುಳ್ಳ ಪರಮಾತ್ಮನ ಭುಜಗಳನ್ನು ಧ್ಯಾನಿಸತಕ್ಕದ್ದು. ಈ ಭುಜಬಲದ ಆಶ್ರಯದಿಂದ ಲೋಕಪಾಲಕರಾದ ಇಂದ್ರಾದಿ ದೇವತೆಗಳು ತಮ್ಮ ಸ್ಥಾನಗಳಲ್ಲಿ ಪ್ರತಿಷ್ಠಿತರಾಗಿರುತ್ತಾರೆ. ಪರಮಾತ್ಮನ ಕೈಯ್ಯಲ್ಲಿ ಧರಿಸಿರುವ ಸಹಸ್ರದಳಗಳಂತೆ ಕಿರಣಸಮೂಹಗಳುಳ್ಳ, ಶತೃಭಯಂಕರವಾದ, ಸೂರ್ಯಕೋಟಿಪ್ರಕಾಶವಾದ ಚಕ್ರವನ್ನೂ, ಪರಮಾತ್ಮನ ಕರಕಮಲವನ್ನಾಶ್ರಯಿಸಿರುವ ರಾಜಹಂಸದಂತೆ ಶುಭ್ರವರ್ಣವಾದ ಶಂಖವನ್ನೂ ಧ್ಯಾನಮಾಡಬೇಕು. ದೇವತೆಗಳ ಶತೃಗಳಾದ ದೈತ್ಯಭಟರುಗಳ ರಕ್ತದಿಂದ ಶೋಭಿಸುವ, ಪರಮಾತ್ಮನ ಕೈಯ್ಯಲ್ಲಿರುವ ಗದಾಯುಧವನ್ನು ಚಿಂತಿಸಬೇಕು. ಝೇಂಕರಿಸುವ ದುಂಬಿಗಳಿಂದ ಕೂಡಿದ, ಕಂಠದ ವನಮಾಲೆಯನ್ನೂ, ಕೌಸ್ತುಭರತ್ನಹಾರಗಳನ್ನೂ ಕಂಠದಲ್ಲಿ ಧ್ಯಾನಿಸಬೇಕು. ಭೃತ್ಯಾನುಗ್ರಹೋನ್ಮುಖವಾದ ಪರಮಾತ್ಮನ ಪ್ರಸನ್ನವಾದ ಮುಖಕಮಲವನ್ನು ಧ್ಯಾನಿಸಬೇಕು.

ಮಕರಾಕೃತಿವುಳ್ಳ ರತ್ನಕುಂಡಲಗಳ ಚಲನೆಯಿಂದ ಚಲಿಸುವ ರತ್ನಗಳಕಾಂತಿಯಿಂದ ಕೂಡಿದ ಪರಮಾತ್ಮನ ಸುಂದರಗಳಾದ ಕಪೋಲಗಳನ್ನೂ, ಮಂಗಳಕರವಾದ ಭ್ರೂವಿಲಾಸವನ್ನೂ, ಮೀನಿನ ಆಕೃತಿಯಂತೆ ಇರುವ, ಕೃಪಾಪೂರ್ಣ, ನಗೆನೋಟದಿಂದ ಕೂಡಿದ ಲಕ್ಷ್ಮೀಕಟಾಕ್ಷವನ್ನು ಬೀರುವ

ಪರಮಾತ್ಮನ ಕಮಲನೇತ್ರಗಳನ್ನೂ, ಸಹಸ್ರಾರು ಸುಂದರಮುಂಗುರುಳುಗಳಿಂದ ಆವೃತವಾದ ಪರಮಾತ್ಮನ ಸ್ಮರಣೆಯನ್ನೂ, ಶ್ರೀದೇವಿಯರೆಂಬ ದುಂಬಿಯಿಂದ ಸೇವಿತವಾದ ಪದ್ಮಸದೃಶವಾದ ಪರಮಾತ್ಮನ ಮಂದಹಾಸದಿಂದ ಕೂಡಿದ ಬಾಯಿಯನ್ನೂ, ಪ್ರಪಂಚದ ತಾಪತ್ರಯಗಳ ನಾಶಕ್ಕಾಗಿ ಪರಮಾತ್ಮನಿಂದ ಮಾಡಲ್ಪಟ್ಟ ಕರುಣಾಪೂರಿತವಾದ ಕಟಾಕ್ಷವೆಂಬ ನೋಟವನ್ನೂ, ಅತ್ಯಂತ ಪ್ರಸಾದವಾದ ಮೋಕ್ಷದಾನವನ್ನು ಸೂಚಿಸತಕ್ಕ ಪರಮಾತ್ಮನ ಮಂದಹಾಸವನ್ನೂ, ಸದಾ ಹೃತ್ಕಮಲದಲ್ಲಿ ಭಾವಿಸಬೇಕು.

ದೇವರನಗುವು ಅಶೇಷಭಕ್ತರ ದುಃಖಗಳಿಂದಾದ ಕಣ್ಣೀರೆಂಬ ಸಮುದ್ರವನ್ನು ಪಣಗಿಸತಕ್ಕದ್ದಾಗಿದೆ. ಪರಮಾತ್ಮನ ಇಚ್ಛಾರೂಪಮಾಯೆಯು ಅವಿದ್ಯೆಯಲ್ಲಿ ನಿರತರಾದವರನ್ನು ಸಂಸಾರಪಾಶದಲ್ಲಿ ಕಟ್ಟಿ ದುಃಖಪಡಿಸತಕ್ಕದ್ದಾಗಿದೆ. ಇದು ಪರಮಾತ್ಮನ ಹುಬ್ಬಿನಾಟದಿಂದ ಪ್ರೇರಿತವಾದ ಮಾಯೆಯೆಂಬ ಪ್ರಕೃತಿಯ ವ್ಯಾಪಾರಲಕ್ಷಣವು. ಮಂದಹಾಸವನ್ನು ಸೂಚಿಸುವ ತುಟಿಗಳು ರಕ್ತವರ್ಣದಿಂದ ಶೋಭಿಸುತ್ತಿವೆ. ಶುಭ್ರವಾದ ದಂತಪಂಕ್ತಿಗಳು ಪೋಣಿಸಿದ ಮಲ್ಲಿಗೆಯ ಮಗ್ಗುಗಳಂತಿವೆ ಎಂದು, ನಿರ್ಮಲವಾದ ಭಕ್ತಿಯಿಂದ, ಪ್ರತ್ಯೇಕಪ್ರತ್ಯೇಕ ಅವಯವಗಳ ಬಹುಕಾಲ ಧ್ಯಾನದಿಂದ ಉಂಟಾದ ಸರ್ವಾವಯವ ಪ್ರತ್ಯಕ್ಷವೆಂಬ ಭಗವತ್ಪ್ರಸಾದದಿಂದ, ಸಮಸ್ತ ದುಃಖನಾಶಮಾಡಿ, ನಿರಂತರ ಸುಖಪ್ರದವಾದ ಈ ರೀತಿಯಾದ ಪರಮಾತ್ಮನ ಪರಮಮಂಗಳರೂಪವನ್ನು, ಹೃತ್ಕಮಲದಲ್ಲಿ ಧ್ಯಾನಿಸಬೇಕು. ಈ ಧ್ಯಾನದಿಂದ ಉಂಟಾದ ಆನಂದದಿಂದ ಕರಗಿದ ಹೃದಯ, ಮನಸ್ಸುಗಳುಳ್ಳ ಭಕ್ತನು, ಆನಂದಾಶ್ರುಪೂರಿತಗಳಾದ ಕಣ್ಣುಗಳಿಂದ ಕೂಡಿ, ಪರಮಾತ್ಮನಲ್ಲದ ಇತರ ವಸ್ತುಗಳನ್ನು ಸರ್ವಥಾ ನೋಡಲಾರನು.

## ಜೀವನ್ಮುಕ್ತಾವಸ್ಥೆ :-

ಈ ರೀತಿಯಾದ ಮನೋಯೋಗವನ್ನು ಪರಮಾತ್ಮನನ್ನು ಹೊಂದಿದವನು, ಭಕ್ತ್ಯುದ್ರೇಕದಿಂದ ಬಿಗಿದ ಕಂಠವುಳ್ಳವನಾಗಿ, ಆನಂದಾಶ್ರುಗಳನ್ನು ಕಣ್ಣಿನಿಂದ ಸುರಿಸುತ್ತಾ, ಆನಂದಪರವಶವಾದ ಮನಸ್ಸುಳ್ಳವನಾಗುತ್ತಿರಲಾಗಿ, ಆಗ ಸ್ವಪ್ರಯತ್ನದಿಂದ ಯೋಗಲಬ್ಧವಾದ ಭಗವದ್ರೂಪದ ಪೂರ್ಣಸಾಕ್ಷಾತ್ಕಾರವೂ, ಸ್ಥಿರವಾಗಿ ಹೃತ್ಕಮಲದಲ್ಲಿ ತಾನಾಗಿಯೇ ಪ್ರಯತ್ನವಿಲ್ಲದೇ ನಿಂತು, ಯೋಗಿಗೆ ಬಾಹ್ಯಜ್ಞಾನಶೂನ್ಯವಾದ ಸಮಾಧಿಧ್ಯಾನಾವಸ್ಥೆಯು ಪ್ರಾಪ್ತವಾಗುವುದು. ಆಗ ಬಾಹ್ಯವಿಷಯಗಳೆಂಬ ಎಣ್ಣೆಯಲ್ಲಿ ತೊಯ್ದು ಇಂದ್ರಿಯಗಳೆಂಬ ಬತ್ತಿಗಳಲ್ಲಿ ಪ್ರಜ್ವಲಿಸುತ್ತಿದ್ದ ಬಹಿರ್ಮನಸ್ಸೆಂಬ ಅಗ್ನಿಯು, ಬಾಹ್ಯವಿಷಯಗಳಿಲ್ಲದ್ದರಿಂದ ಎಣ್ಣೆಇಲ್ಲದೇ ಆರಿಹೋಗಿ ನಷ್ಟವಾಗುವುದು. ಆದುದರಿಂದ ಸ್ವರೂಪಭೂತವಾದ ಮನಸ್ಸೆಂಬ ಅಗ್ನಿಯು ಮಾತ್ರ ಉಳಿಯುವುದು. ಈ ಸ್ವರೂಪಮನಸ್ಸೆಂಬ

ಅಗ್ನಿಯು, ಇಂದ್ರಿಯಗಳೆಂಬ ಬತ್ತಿಗಳು ಪುನಃ ಜ್ಞಾನ, ಭಕ್ತಿ, ವೈರಾಗ್ಯ, ಆನಂದಗಳೆಂಬ ಸುಗಂಧಯುಕ್ತ ಎಣ್ಣೆಗಳಲ್ಲಿ ನೆನೆಯಲು, ಪರಮಾತ್ಮದರ್ಶನವೆಂಬ ಅಗ್ನಿಯಿಂದ ಚೆನ್ನಾಗಿ ಪ್ರಕಾಶಿಸುತ್ತದೆ. ಆಗ ಸಾಧಕನು ಸತ್ವಾದಿಗುಣಪ್ರವಾಹಗಳ ಉಪಹತಿಇಲ್ಲದೇ, ನಿರ್ಮಲವಾದ ಭಾವದಿಂದ ಆ ಪರಮಾತ್ಮನೊಬ್ಬನನ್ನೇ ನೋಡುತ್ತಿರಲು ಶಕ್ತನಾಗುತ್ತಾನೆ.

ಈ ರೀತಿಯಾಗಿ ಸಂಸಾರಬಂಧನದಿಂದುಂಟಾಗುತ್ತಿದ್ದ ಸುಖದುಃಖದ್ವಂದ್ವಗಳು ಜೀವನಿಗೆ ತಪ್ಪಿ, ಪರಮ ಉತ್ಕೃಷ್ಟಶಾಂತಿ, ಸುಖರೂಪವಾದ ಭಗವತ್ಪ್ರಾಪ್ತಿಎಂಬ, ಭಗವದ್ದರ್ಶನಗಳು ಬಂಧಕವಲ್ಲದೇ ಪರಮಾತ್ಮನಪ್ರಸಾದದಿಂದ ಬಿಟ್ಟುಹೋಗುವವು. ಜೀವನಿಗೆ ಆಗ ಜೀವನ್ಮುಕ್ತ್ಯವಸ್ಥೆಯು ಪ್ರಾಪ್ತವಾಗುವುದು. ಆಗ ತಾನು ಅನುಭವಿಸುತ್ತಿದ್ದ ಪ್ರಾರಬ್ಧಮಾತ್ರ ಕರ್ಮಫಲವನ್ನು ಅನುಭವಿಸಲು, ಸಾಧಕನು ಹಲವು ಜನ್ಮಗಳಲ್ಲಿ ಕ್ಲುಪ್ತವಾಗಿ ಅನುಭವಿಸುವನು. ಆ ಕಾಲದಲ್ಲಿ ಅವನಿಗೆ ಜ್ಞಾನವು ತಿರೋಹಿತವಾಗದೆ, ಪರಮಾತ್ಮನಲ್ಲಿ ಮನೋಯೋಗದಿಂದ ತಾನುಮಾಡುವ ಇತರ ಕರ್ಮಗಳೂ ಸಹ ಬಂಧಕವಾಗದೇ, ಸುಖಾತಿಶಯವನ್ನು ಕ್ರಮೇಣ ವೃದ್ಧಿಮಾಡುವವದೇ ಆಗುತ್ತವೆ. ಹಸಿವುಬಾಯಾರಿಕೆ ಮುಂತಾದ ಬಾಧೆಗಳಾಗಲೀ, ದೇಹಸಂರಕ್ಷಣೆಗೆ ಬೇಕಾದ ಮಾಡತಕ್ಕ ಕಾರ್ಯಗಳಾಗಲೀ ಸಮಾಧಿಯೋಗದಲ್ಲಿರುವವನಿಗೆ ಇರುವುದಿಲ್ಲ. ಅಮೃತಪಾನಮಾಡಿದವನಂತೆ ಅವನು ಭಗವದ್ದರ್ಶನದಿಂದುಂಟಾದ ಆಪ್ಯಾಯನದಿಂದ ಸುಖಪೂರ್ಣನಾಗಿರುತ್ತಾನೆ. ಈ ರೀತಿಯಾಗಿ ಮನೋಭಾವನೆಯುಳ್ಳವನು ಹೇಗೆ ಪುತ್ರನೂ, ಧನವೂ ತನ್ನದೆಂದು ಒಬ್ಬ ಪುರುಷನು ತಿಳಿದಿದ್ದರೂ, ಅವನಿಗೆ ಪುತ್ರನಿಂದ, ಧನವು ಬೇರೆ ಎಂಬ ಭಾವವಿರುತ್ತದೆಯೋ, ಅಗ್ನಿಯಿಂದಲೇ ಹೊಗೆಯು ಹೊರಡುತ್ತಿದ್ದರೂ, ಅಗ್ನಿಯಿಂದ ಹೊಗೆಯೂ, ಕಾಷ್ಠವೂ ಬೇರೆಎಂಬ ಭಾವನೆಯು ಇರುತ್ತದೆಯೋ, ಅದೇರೀತಿಯಾಗಿ, ಈ ದೇಹದಿಂದ, ನಾನು ಎಂದು ಕರೆದುಕೊಳ್ಳುವ ಚೇತನಸ್ವರೂಪನಾದ ಜೀವನು ಬೇರೆ ಎಂದೂ, ಕಾಷ್ಠಸದೃಶದೇಹವೂ ಧೂಮಸದೃಶನಾದ ಜೀವನೂ, ಅಗ್ನಿಸದೃಶನಾದ ಪರಮಾತ್ಮನಿಂದ ಭಿನ್ನತೆಯನ್ನು ದೃಢವಾಗಿ ತಿಳಿಯುತ್ತಾನೆ. ಜೀವನು ಭೂತಮನಸ್ಸು, ಇಂದ್ರಿಯ, ಅಂತಃಕರಣ ಪ್ರಧಾನತೆಯಿಂದ ವ್ಯಕ್ತನಾಗತಕ್ಕವನು. ಅಂದರೆ ಪ್ರಾಕೃತದೇಹಪ್ರಾಪ್ತಿ ಹೊಂದುವುದೇ ಜನ್ಮಹೊಂದಿದನೆಂದು ಹೇಳಲ್ಪಡತಕ್ಕವನು. ಸ್ವರೂಪದಿಂದ ಜೀವನು ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ, ಯಾವಾಗಲೂ ಶಾಶ್ವತನಾಗಿ ಇರತಕ್ಕವನು.

ಬ್ರಹ್ಮನಾಮಕನಾದ ಗುಣಪೂರ್ಣ, ಜನ್ಮಾದಿರಹಿತನಾದ, ನಿರ್ದೋಷನಾದ ಪರಮಾತ್ಮನು ಜೀವನಿಂದ ಅತ್ಯಂತ ವಿಲಕ್ಷಣನು, ಬೇರೆಯಾದವನು. ಸರ್ವಪ್ರಾಣಿಗಳು ಪರಮಾತ್ಮನನ್ನು

ಆಶ್ರಯಿಸಿರುತ್ತವೆ. ಸರ್ವಪ್ರಾಣಿ, ಸರ್ವಪದಾರ್ಥಗಳಲ್ಲೂ, ದೇವರು ಅಖಂಡವ್ಯಾಪ್ತಿಯಿಂದ ವ್ಯಾಪಿಸಿರುತ್ತಾನೆ. ರೂಪ, ನಾಮಭೇದದಿಂದ ನಾನಾಗುಣಗಳುಳ್ಳವು ಪುರುಷರೂ, ಪದಾರ್ಥಗಳೂ ಆದರೂ, ಅವರಲ್ಲಿ ವ್ಯಾಪಿಸಿರುವ ಪರಮಾತ್ಮನು ನಾನಾ ಪ್ರಣಿತೆಗಳಲ್ಲಿ, ನಾನಾ ಬತ್ತಿಗಳಲ್ಲಿ ಉರಿಯುವ ದೀಪಗಳಲ್ಲಿರುವ ಅಗ್ನಿಯು ಪ್ರತ್ಯೇಕಪ್ರತ್ಯೇಕವಾಗಿ ಕಂಡರೂ ಹೇಗೆ ಒಂದೆಯೋ, ಅದರಂತೆ ಸರ್ವತ್ರ ಏಕಾತ್ಮಭಾವವುಳ್ಳವನಾಗಿ ಪರಮಾತ್ಮನು ಸರ್ವರಲ್ಲೂ ಇದ್ದು, ಗುಣಕರ್ಮಗಳನ್ನು ಪ್ರಕಟಿಸಲು ಶಕ್ತಿಕೊಡುವವನಾಗಿರುತ್ತಾನೆ. ಆದುದರಿಂದ ಸದಸದಾತ್ಮಕಳಾದ ಪ್ರಕೃತಿ ಎಂದು ಕರೆಸುವ ಲಕ್ಷ್ಮೀದೇವಿಯೂ ಪರಮಾತ್ಮನನ್ನೇ ಆಶ್ರಯಿಸಿ, ಅವನ ಅಧೀನಳಾಗಿರುತ್ತಾಳೆ. ಅಧೀನಳಾದ ಪ್ರಕೃತಿಯನ್ನು ಸ್ವತಂತ್ರನಾದ ಪರಮಾತ್ಮನು ಸಮಸ್ತಕಾರ್ಯಗಳಲ್ಲೂ ಪ್ರೇರಿಸುತ್ತಾನೆ. ಈ ರೀತಿ ತಿಳಿದು ಉಪಾಸನೇ ಮಾಡತಕ್ಕವರಿಗೆ, ಜೀವಾಚ್ಛಾದಕ, ಪರಮಾಚ್ಛಾದಕಗಳೆಂಬ ಪರಮಾತ್ಮನ ದರ್ಶನವನ್ನು ಮರೆಮಾಡತಕ್ಕ ಎರಡು ತೆರೆಗಳು ತೆಗೆಯಲ್ಪಟ್ಟು, ಸ್ಪಷ್ಟವಾಗಿ ಪರಮಾತ್ಮನ ಸಂದರ್ಶನವು ಉಂಟಾಗುವುದು. ಇಂತಹ ಯೋಗವು ಪ್ರಾಪ್ತವಾಗುವುದಕ್ಕಾಗಿ ಉಪಾಸಕರು ಸಂಸಾರಾವಸ್ಥೆಯಲ್ಲಿದ್ದಾಗ, ಬ್ರಾಹ್ಮೀಮುಹೂರ್ತದಲ್ಲಿ ನಿದ್ರೆಯಿಂದ ಎದ್ದು, ಶುಚಿರ್ಭೂತರಾಗಿ, ಪರಮಾತ್ಮನು ಸರ್ವದೇಶ, ಕಾಲಗಳಲ್ಲಿ ಸರ್ವವನ್ನೂ ನೋಡತಕ್ಕವನೂ, ತಿಳಿಯುವವನೂ ಆದ್ದರಿಂದ ಸಾಕ್ಷಿಎಂದೂ, ಸರ್ವತ್ರವ್ಯಾಪಿಸಿ ಸರ್ವವ್ಯಾಪಾರಗಳನ್ನುಮಾಡಿ ಜಗತ್ಪೋಷಕನಾದ್ದರಿಂದ ಆತ್ಮನೆಂದೂ, ಜಗತ್ಸೃಷ್ಟ್ಯಾದಿಕರ್ತಪ್ರಭುವೆಂದೂ ಧ್ಯಾನಿಸಬೇಕು, ಎಂದನು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.**

## अथ त्रिंशोऽध्यायः

**देवहूतिरुवाच**

लक्षणं महदादीनां प्रकृतेः पुरुषस्य च।
स्वरूपं लक्ष्यतेऽमीषां येन तत् पारमार्थिकम्॥ १ ॥

यथा साङ्ख्येषु कथितं यन्मूलं तत् प्रचक्षते।
भक्तियोगस्य मे मार्गं ब्रूहि विस्तरशः प्रभो॥ २ ॥

विरागो येन पुरुषो भगवन् सर्वतो भवेत्।
आचक्ष्व जीवलोकस्य विविधाः कर्मसंसृतीः॥ ३ ॥

कालस्येश्वररूपस्य परेषां च परस्य ते।

स्वरूपं वत कुर्वन्ति यद्धेतोः कुशलं जनाः ॥ ४ ॥

लोकस्य मिथ्याभिमतेरचक्षुषः चिरं प्रसुप्तस्य तमस्यनाश्रये ।
श्रान्तस्य कर्मण्यनुविद्धया धिया त्वमाविरासीः किल योगभास्करः ॥ ५ ॥

**मैत्रेय उवाच**

इति मातुर्वचः श्लक्ष्णं प्रतिनन्द्य महामुनिः ।
आबभाषे कुरुश्रेष्ठ प्रीतस्तां करुणार्दितः ॥ ६ ॥

**भगवानुवाच**

भक्तियोगो बहुविधो मार्गैर्भामिनि भाव्यते ।
स्वभावगुणमार्गेण पुंसां भावो विभिद्यते ॥ ७ ॥

अभिसन्धाय यो हिंसां दम्भं मात्सर्यमेव च ।
संरम्भी भिन्नदृग् भावं मयि कुर्यात् स तामसः ॥ ८ ॥

विषयानभिसन्धाय यश ऐश्वर्यमेव च ।
अर्चादावर्चयेद् यो मां पृथग्भावः स राजसः ॥ ९ ॥

कर्मनिर्हारमुद्दिश्य परस्मिन् वा तदर्पणम् ।
यजेद् यष्टव्यमिति वाऽपृथग्भावः स सात्त्विकः ॥ १० ॥

मद्गुणश्रुतमात्रेण मयि सर्वगुणाश्रये ।
मनोगतिरविच्छिन्ना यथा गङ्गाम्भसोऽम्बुधौ ॥ ११ ॥

लक्षणं भक्तियोगस्य निर्गुणस्य ह्युदाहृतम् ।
अहैतुक्यव्यवहिता या भक्तिः पुरुषोत्तमे ॥ १२ ॥

सालोक्यसार्ष्टिसामीप्यसारूप्यैवकत्वमित्युत ।
दीयमानं न गृह्णन्ति विना मत्सेवनं जनाः ॥ १३ ॥

स एव भक्तियोगाख्य आत्यन्तिक उदाहृतः ।
येनातिव्रज्य त्रिगुणान् मद्भावायोपपद्यते ॥ १४ ॥

निषेवितेनानिमित्तेन स्वधर्मेण महीयसा ।
क्रियायोगेन शस्तेन नातिहिंस्रेण नित्यशः ॥ १५ ॥

मद्धिष्ण्यदर्शनस्पर्शपूजास्तुत्यभिवन्दनैः ।
भूतेषु मद्भावनया सत्त्वेनासङ्गमेन च ॥ १६ ॥

महतां बहुमानेन हीनानामनुकम्पया ।
मैत्र्या वा चात्मतुल्येषु यमेन नियमेन च ॥ १७ ॥

आध्यात्मिकानुश्रवणान्नामसङ्कीतनाच्च मे ।
आर्जवेनार्यसङ्गेन निरहंक्रियया तथा ॥ १८ ॥

मद्धर्मणापि यद्वैतैः परिसंशुद्ध आशयः ।
पुरुषस्याञ्जसाऽभ्येति श्रुतमात्रगुणं हि माम् ॥ १९ ॥

यथा वातरथो घ्राणमावृङ्क्ते गन्ध आशयात् ।
एवं योगरतं चेत आत्मानमविकारि यत् ॥ २० ॥

अहं सर्वेषु भूतेषु भूतात्माऽवस्थितः सदा ।
तमवज्ञाय मां मर्त्यः कुरुतेऽर्चाविडम्बनम् ॥ २१ ॥

यो मां सर्वेषु भूतेषु सन्तमात्मानमीश्वरम् ।
हित्वाऽर्चां भजते मौढ्याद् भस्मन्येव जुहोति सः ॥ २२ ॥

द्विषतः परकाये मां मानिनो भिन्नदर्शिनः ।
भूतेषु बद्धवैरस्य न मनः शान्तिमृच्छति ॥ २३ ॥

अहमुच्चावचैर्द्रव्यैः क्रिययोत्पन्नयाऽनघे ।
नैव तृप्येऽर्चितोऽर्चायां भूतग्रामावमानिनः ॥ २४ ॥

अर्चादावर्चयेत् तावदीश्वरं मां स्वकर्मकृत् ।
यावन्न वेद स्वहृदि सर्वभूतेष्ववस्थितम् ॥ २५ ॥

आत्मनश्च परस्यापि यः करोत्यन्तरोदरम् ।
तस्य भिन्नदृशो मृत्युर्विधत्ते भयमुल्बणम् ॥ २६ ॥

अथ मां सर्वभूतेषु भूतात्मानं कृतालयम् ।
अर्हयेद् दानमानाभ्यां मैत्र्या भिन्नेन चक्षुषा ॥ २७ ॥

जीवाः श्रेष्ठा ह्यजीवानां ततः प्राणभृतः शुभे।
ततः सचित्ताः प्रवरास्ततश्चेन्द्रियवृत्तयः॥ २८ ॥

अत्रापि स्पर्शवेदिभ्यः प्रवरा रसवेदिनः।
तेभ्यो गन्धविदः श्रेष्ठास्ततः शब्दविदो वराः॥ २९ ॥

रूपभेदविदस्तत्र ततश्चोभयतोदतः।
तेषां बहुपदः श्रेष्ठाश्चतुष्पादस्ततो द्विपात्॥ ३० ॥

ततो वर्णाश्च चत्वारस्तेषां ब्राह्मण उत्तमः।
ब्राह्मणेष्वपि वेदज्ञो ह्यर्थज्ञोऽभ्यधिकस्ततः॥ ३१ ॥

अर्थज्ञात् संशयच्छेत्ता ततः श्रेयान् स्वधर्मकृत्।
मुक्तसङ्गस्ततो भूयान् न दोग्धा धर्ममात्मनः॥ ३२ ॥

तस्मान्मय्यर्पिताशेषक्रियार्थात्मरतिर्नरः।
मय्यर्पितात्मनः पुंसो मयि संन्यस्तकर्मणः॥ ३३ ॥

न पश्यामि परं भूतमकर्तुः समदर्शनात्।
मनसैतानि भूतानि प्रणमेद् बहुमानयन्।
ईश्वरो जीवकलया प्रविष्टो भगवानिति॥ ३४ ॥

भक्तियोगश्च योगश्च मया मानव्युदीरितः।
ययोरेकतरेणैव पुरुषः पुरुषं व्रजेत्॥ ३५ ॥

यत् तद् भगवतो रूपं ब्रह्मणः परमात्मनः।
परं प्रधानात् पुरुषाद् दैवं कर्मविचेष्टितम्॥ ३६ ॥

रूपभेदास्पदं दिव्यं काल इत्यभिधीयते।
भूतानां महदादीनां यतो भिन्नदृशां भयम्॥ ३७ ॥

योऽन्तः प्रविश्य भूतानि भूतैरत्त्यखिलाश्रयः।
स विष्णवाख्यो धिया ज्ञेयः कालः कलयतां प्रभुः॥ ३८ ॥

न चास्य कश्चिद् दयितो न द्वेष्यो न च बान्धवः।

आविशत्यप्रमत्तोऽसौ प्रमत्तं जनमन्तकृत् ॥ ३९ ॥

यद्भयाद् वति वातोऽयं सूर्यस्तपति यद्भयात् ।
यद्भयाद् वर्षते देवो भगणो भाति यद्भयात् ॥ ४० ॥

यद् वनस्पतयो भीता लताश्चौषधिभिः सह ।
स्वे स्वे कालेऽभिगृह्णन्ति पुष्पाणि च फलानि च ॥ ४१ ॥

स्रवन्ति सरितो भीता नोत्सर्पत्युदधिर्यतः ।
अग्निरिन्धे सगिरिभिर्भूर्न मज्जति यद्भयात् ॥ ४२ ॥

नभो ददाति श्वसतां मार्गं यन्नियमाददः ।
लोकस्य देहं तनुते महान् सप्तभिरावृतः ॥ ४३ ॥

गुणाभिमानिनो देवाः सर्गादिष्वस्य यद्भयात् ।
वर्तन्तेऽनुयुगं येषां वश एतच्चराचरम् ॥ ४४ ॥

सोऽनन्तोऽन्तकरः कालोऽनादिरादिकृदव्ययः ।
जनं जनेन जनयन् मारयन् मृत्युनाऽऽत्मना ॥ ४५ ॥

## ॥ इति श्रीमद्भागवते (तृतीयस्कन्धे(*3) त्रिंशोऽध्यायः ॥

**॥ ಮೂವತ್ತನೆಯ ಅಧ್ಯಾಯ ॥**

## ಭಕ್ತಿಯಲ್ಲಿ ಪ್ರಭೇದಗಳು :-

ಹಿಂದಿನ ಅಧ್ಯಾಯದಲ್ಲಿ ಕಪಿಲಪರಮಾತ್ಮನ ಉಪದೇಶದಿಂದ, ಜ್ಞಾನವು ಮೋಕ್ಷಕ್ಕೆಸಾಧನವೆಂದೂ, ಆ ಜ್ಞಾನವು ಅಷ್ಟಾಂಗಯೋಗಗಳಿಂದ ಭಗವದುಪಾಸನೆ ಮಾಡುವುದರಿಂದ ಉಂಟಾಗುವುದೆಂದೂ, ಜ್ಞಾನದಿಂದ ಪರಮಾತ್ಮನಲ್ಲಿ ಭಕ್ತಿಯೂ, ಭಕ್ತಿಯಿಂದ ಭಗವತ್ಪ್ರಸಾದರೂಪ ಮೋಕ್ಷವೂ ಲಭಿಸುವುದೆಂದು ದೇವಹೂತಿದೇವಿಯು ತಿಳಿದಮೇಲೆ, ಭಕ್ತಿಲಕ್ಷಣಗಳನ್ನೂ, ಮಹದಾದಿತತ್ವಗಳ ಸ್ವರೂಪವನ್ನೂ ವಿಶವಾಗಿ ತಿಳಿಯುವುದಕ್ಕಾಗಿ ಪರಮಾತ್ಮನನ್ನು ಈ ರೀತಿಯಾಗಿ ಪ್ರಶ್ನೆಮಾಡಿದಳು:-

ಎಲೈ ಸಕಲಚರಾಚರಜಗತ್ತಿಗೆ ಸ್ವಾಮಿಯಾದ ಪ್ರಭುವೇ! ಪ್ರಕೃತಿ, ಪುರುಷರೂ, ಮಹದಾದಿತತ್ವಗಳೂ ಸಾಮಾನ್ಯಲಕ್ಷಣಗಳಿಂದ ತಿಳಿಯಲ್ಪಟ್ಟರೂ, ಅವುಗಳ ಪಾರಮಾರ್ಥಿಕ

ನಿಜಸ್ವರೂಪಜ್ಞಾನವು ಹೇಗೆ ಉಂಟಾಗುತ್ತದೆ? ಇಂತಹ ತಿಳಿಸಲ್ಪಟ್ಟ ಪಾರಮಾರ್ಥಿಕ ಸ್ವರೂಪವು ಸಾಂಖ್ಯಶಾಸ್ತ್ರದಲ್ಲಿ ವರ್ಣಿತವಾಗಿರುವುದೆಂದು ಪ್ರಾಜ್ಞರಿಂದ ನಾನು ಕೇಳಿರುತ್ತೇನೆ. ಸಾಂಖ್ಯಶಾಸ್ತ್ರಪ್ರಣೀತ ತತ್ವಸ್ವರೂಪಗಳನ್ನೂ, ಭಕ್ತಿಯೋಗದಿಂದ ವಿಭಾಗಗಳೂ ಲಕ್ಷಣಗಳನ್ನೂ, ಎಲೈ ಸ್ವಾಮಿಯೆ, ನನಗೆ ಹೇಳುವವನಾಗು. ಯಾವ ಸಾಂಸಾರಿಕ ಕರ್ಮಗಳಿಂದ ನಾನಾಜನ್ಮಗಳು ಪ್ರಾಪ್ತವಾಗಿ ಅವುಗಳಿಂದ ಜೀವರಿಗೆ ನಾನಾಕ್ಲೇಶಗಳುಂಟಾಗುವವೋ, ಅವುಗಳನ್ನು ನನಗೆ, ದೃಢವೈರಾಗ್ಯವು ಸರ್ವತೋಮುಖವಾಗಿ ವಿಷಯಾದಿ ಅನ್ಯಪದಾರ್ಥಗಳಲ್ಲಿ ಹುಟ್ಟುವಂತೆ ಹೇಳುವವನಾಗು. ಪರಮೈಶ್ವರ್ಯಪೂರ್ಣನಾದ, ಕಾಲನಾಮಕನಾದ ಯಾವ ನಿನ್ನ ಭಯದಿಂದ ಜ್ಞಾನಿಗಳು ವೇದೋಕ್ತಕರ್ಮಗಳನ್ನು ಆಚರಿಸುವರೋ, ಅಂತಹ ಕಾಲನಾಮಕಪುರುಷನಾದ ನಿನ್ನ ಲಕ್ಷಣಗಳನ್ನು ನನಗೆ ಹೇಳುವವನಾಗು. ಈ ಜ್ಞಾನವು ಸ್ತ್ರೀಯಾದ ಕಾರಣನನಗೆ ತಿಳಿಯಲಾಗದಂತಹ ಅದ್ಭುತ, ಆಶ್ಚರ್ಯಕವಾದದ್ದಾದರೂ, ನಿನ್ನ ಪ್ರಸಾದದಿಂದ ನಾನು ತಿಳಿದೇನು!

ಎಲೈ ಸ್ವಾಮಿಯೆ! ಮೋಕ್ಷೋಪಯುಕ್ತ ಜ್ಞಾನಾರ್ಥಿಗಳಿಗೆ ಸುಜ್ಞಾನೋಪದೇಶ ಕ್ಕಾಗಿಯೇ ಜ್ಞಾನಸೂರ್ಯನಾದ ನೀನು ಈ ಅವತಾರವನ್ನು ಮಾಡಿರುತ್ತೀಯೆ. ನಿನ್ನಂತೆ ತತ್ವಜ್ಞಾನವನ್ನು ತಿಳಿಯುವಂತೆ, ನಿಶ್ಚಯವಾಗಿ ಬೋಧಿಸತಕ್ಕವರು, ಬೇರೆಯಾರೂ ಎಲ್ಲೂ ಇಲ್ಲ. ನಾವಾದರೋ ನಿನ್ನ ಮಾಯಾಮೋಹಿತರಾಗಿ, ಅವಿದ್ಯಾಕಾಮಕರ್ಮಗಳೆಂಬವುಗಳನ್ನು ಅನುಭವಿಸುದಕ್ಕಾಗಿ, ಅನೇಕ ನೀಚ, ಉತ್ತಮಜನ್ಮಗಳಲ್ಲಿ ಹುಟ್ಟಿ ಅಪಾರದುಃಖ ಗಳನ್ನನುಭವಿಸುತ್ತಾ, ಬಹುಬಳಲಿ, ಇದರಿಂದ ಪಾರಗಾಣಲು ಮಾರ್ಗತೋರದೆ ಕಂಗೆಟ್ಟವರಾಗಿರುತ್ತೇವೆ! ಆದುದರಿಂದ ಕೇವಲ ನಿನ್ನ ದಯೆಯಿಂದ ನಾವು ಉದ್ಧೃತರಾಗಬೇಕಲ್ಲದೆ ಬೇರೆ ಮಾರ್ಗವಿಲ್ಲ. ಇಂತಹ ದೀನರಾದ ನಮ್ಮನ್ನು ಜ್ಞಾನೋಪದೇಶದಿಂದ ಉದ್ಧಾರಮಾಡಬೇಕು, ಎಂದಳು.

ಎಲೈ ಕುರುಶ್ರೇಷ್ಠನಾದ ವಿದುರನೇ, ಕಪಿಲಪರಮಾತ್ಮನು ತಾಯಿಯ ಈ ನಮ್ರವಾಕ್ಯಗಳನ್ನು ಕೇಳಿ, ಮನಕರಗಿದವನಾಗಿ, ತಾಯಿಯ ಪ್ರಶ್ನೆಗಳನ್ನು ಕೊಂಡಾಡಿ, ಪ್ರೀತಿಪೂರ್ವಕವಾಗಿ ಉತ್ತರಹೇಳಿದ್ದನ್ನು ಕೇಳುವನಾಗು ಎಂದು ಮೈತ್ರೇಯರು ಹೇಳಿ, ಪರಮಾತ್ಮನ ಉಪದೇಶವನ್ನು ಈ ರೀತಿಯಾಗಿ ವರ್ಣಿಸುವವರಾದರು:-

ಎಲೈ ಜ್ಞಾನಪ್ರಕಾಶದಿಂದ ಕೂಡಿದ ಭಾಮಿನಿಯೆ! ಲೋಕದಲ್ಲಿ ಜನರು ಸತ್ವ , ರಜಸ್ತಮೋಗುಣಗಳ ವಿಧವಿಧಭೇದದಿಂದ ಅನೇಕ ಭಾವಗಳಿಂದ ಕೂಡಿದವರಾಗಿರುತ್ತಾರೆ. ಆದುದರಿಂದ ಭಕ್ತಿ, ಯೋಗಗಳು ಅವರವರಿಂದ ಅನುಷ್ಠಾನಮಾಡಲ್ಪಡುವವುಗಳು ವಿಧವಿಧವಾಗಿರುತ್ತವೆ. ಇವರಲ್ಲಿ

ತಾಮಸಭಕ್ತಿಯುಳ್ಳವರು ಪರಹಿಂಸೆ, ಡಂಭ, ಹೊಟ್ಟೇಕಿಚ್ಚು ವುಳ್ಳವರಾಗಿ, ಪರಪೀಡನೆಗಾಗಿಯೇ ನನ್ನ ಪೂಜಾದಿಕರ್ಮಗಳನ್ನು ದುರ್ಮಾರ್ಗಗಳಿಂದ ಸಾಧಿಸಿದ ದ್ರವ್ಯಗಳಿಂದ ಮಾಡುತ್ತಾರೆ. ಯಶಸ್ಸು, ಐಶ್ವರ್ಯ, ಸ್ತ್ರೀಸಂಭೋಗಾದಿಸುಖಗಳು ತಮಗೆ ಪ್ರಾಪ್ತವಾಗಲೆಂದು ಬಯಸಿ, ನನ್ನನ್ನು ಆರಾಧಿಸತಕ್ಕವರು ರಾಜಸಭಕ್ತಿಯನ್ನು ನನ್ನಲ್ಲಿ ಮಾಡುತ್ತಾರೆ. ಪಾಪನಾಶದ ಉದ್ದೇಶದಿಂದಾಗಲೀ, ಭಗವದಾಜ್ಞಾರೂಪವಾಗಿ ಸತ್ಕರ್ಮಗಳು ಆಚರಿಸಬೇಕಾದ್ದೆಂದು ಭಾವಿಸಿ, ಶ್ರದ್ಧೆಯಿಂದ ಸತ್ಕರ್ಮಾನುಷ್ಠಾನಮಾಡಿ, ಫಲವನ್ನು ನನಗೇ ಸಮರ್ಪಿಸುವವರು ಸಾತ್ವಿಕಭಕ್ತಿಯನ್ನು ನನ್ನಲ್ಲಿ ಮಾಡುತ್ತಾರೆ. ಇವು ಸತ್ವಾದಿಗುಣತ್ರಯಯುಕ್ತ ಭಕ್ತಿಲಕ್ಷಣವು.

ಯಾರಿಗೆ ನನ್ನ ಗುಣಗಾನ ಶ್ರವಣಮಾತ್ರದಿಂದ ಸಮುದ್ರವನ್ನು ಸೇರುವ ಗಂಗಾಪ್ರವಾಹದಂತೆ ಮನಸ್ಸು ನನ್ನಲ್ಲಿ ಸನ್ನಿಹಿತವಾಗುವುದೋ, ಈ ಲಕ್ಷಣವು, ಗುಣಾತೀತನಾದ್ದರಿಂದ ನಿರ್ಗುಣನೆಂದು ಕರೆಯಲ್ಪಡುವ ಉತ್ತಮ ಭಕ್ತನಲ್ಲಿ ಉಂಟಾಗುವ ಈ ಭಾವವು, ಭಕ್ತಿಯೋಗಲಕ್ಷಣವನ್ನು ಹೊಂದಿರುತ್ತದೆ. ನಿಷ್ಕಾರಣವಾಗಿ ಸ್ವಭಾವದಿಂದಲೇ ಪುರುಷೋತ್ತಮನಾದ ಪರಮಾತ್ಮನಲ್ಲಿ ನಿಶ್ಚಲವಾದ ಭಕ್ತಿಯೂ, ಸಾಲೋಕ್ಯ, ಸಾರ್ಷ್ಟಿ, ಸಾಮೀಪ್ಯ, ಸಾರೂಪ್ಯಗಳೆಂಬ ನಾಲ್ಕುವಿಧಮೋಕ್ಷಗಳಲ್ಲಿ ಯಾವುದನ್ನು ಕೊಟ್ಟರೂ ಅಪೇಕ್ಷಿಸದೆ, ನನ್ನ ಪಾದಸೇವೆಯನ್ನೇ ಅಪೇಕ್ಷಿಸತಕ್ಕ ಸ್ವಭಾವವುಳ್ಳ ನನ್ನ ಭಕ್ತರು ಆತ್ಯಂತಿಕಭಕ್ತಿ ಯೋಗವುಳ್ಳವರೆಂದೆನಿಸುತ್ತಾರೆ. ಈ ಆತ್ಯಂತಿಕ ಭಕ್ತಿಯೋಗವುಳ್ಳವರು ತ್ರಿಗುಣಾತ್ಮಕವಾದ ಪ್ರಕೃತಿಬಂಧನವಿಲ್ಲದವರಾಗಿ, ಶುದ್ಧಸತ್ವಗುಣದಿಂದ ನಿರಂತರ ನನ್ನ ಉಪಾಸನೆ ಮಾಡಲು ಶಕ್ತರಾಗುತ್ತಾರೆ.

## ಭಕ್ತಿಯೋಗಕ್ಕೆ ಬೇಕಾದ ಸಾಧನಗಳು :-

ಈ ಆತ್ಯಂತಿಕ ಭಕ್ತಿಯೋಗವನ್ನೂ, ಗುಣಗಾನಶ್ರವಣಮಾತ್ರದಿಂದ ನಿಶ್ಚಲವಾಗಿ ಮನಸ್ಸು ನನ್ನಲ್ಲಿ ನಿಲ್ಲುವಂತೆ ಆಗುವ ಭಕ್ತಿಯೋಗವನ್ನೂ, ಹೊಂದಲಪೇಕ್ಷಿಸುವವರು ಮಾಡಬೇಕಾದ ಸಾಧನೆಗಳು ಈ ರೀತಿಯಾಗಿರುತ್ತವೆ:- ಫಲಾಪೇಕ್ಷೆಇಲ್ಲದೆ, ನಿಷ್ಕಾಮದಿಂದ ವೇದೋಕ್ತಸ್ವಧಮ ರ್ಕರ್ಮಗಳನ್ನು ಕಾಲಕಾಲದಲ್ಲಿ ಸರಿಯಾಗಿ ಮಾಡಬೇಕು. ಸಕಲಕರ್ಮಗಳನ್ನೂ ಭಗವಂತನ ಪೂಜೆಗಳೆಂಬ ಭಾವನೆಯಿಂದಮಾಡಿ, ಕರ್ಮಸಮರ್ಪಣೆಯನ್ನು ಪರಮಾತ್ಮನಿಗೆ ಮಾಡಬೇಕು. ಪ್ರಾಣಿಹಿಂಸೆಗಳನ್ನು ಸರ್ವಥಾಮಾಡಬಾರದು. ನನ್ನ ಸನ್ನಿಧಾನವುಳ್ಳ ಕೇಶವಾದಿಮೂರ್ತಿಲಕ್ಷಣಗಳುಳ್ಳ ಪ್ರತಿಮೆಗಳನ್ನು ದರ್ಶನ, ಸ್ಪರ್ಶನ, ಅರ್ಚನ, ಸ್ತೋತ್ರ, ನಮಸ್ಕಾರಗಳಿಂದ ಪೂಜಿಸಬೇಕು. ಪ್ರಾಣಿಗಳಲ್ಲಿ ನಾನು ಅಂತರ್ಯಾಮಿಯಾಗಿರುವೆನೆಂದು ತಿಳಿದು, ಪ್ರಾಣಿಗಳಿಗೆ ಹಿತವಾದ ಮಾತುಗಳಿಂದಲೂ, ಆದರದಿಂದಲೂ ಗೌರವವನ್ನು ಕೊಡಬೇಕು. ದುರ್ಜನರ ಸಹವಾಸಮಾಡಬಾರದು. ಮಹಾತ್ಮರನ್ನು

ಸೇವಿಸಬೇಕು. ಅಧಮರಲ್ಲಿ ಕರುಣೆಯೂ, ಸಮಾನರಲ್ಲಿ ಪ್ರೀತಿಯೂ ಇರಬೇಕು. ಯಮ, ನಿಯಮಗಳೆಂಬ ಭಾಗವತಧರ್ಮಗಳನ್ನು ತಿಳಿದು ಆಚರಿಸಬೇಕು.

ಅಧ್ಯಾತ್ಮಿಕ ತತ್ವರಹಸ್ಯಗಳನ್ನೂ, ಭಗವನ್ಮಹಿಮೆಗಳನ್ನೂ ಜ್ಞಾನಿಗಳಿಂದ ಕೇಳಿ ತಿಳಿಯಬೇಕು. ಪರಮಾತ್ಮನ ಗುಣಗಾನವೆಂಬ ನಾಮಸಂಕೀರ್ತನೆಯನ್ನು ಮಾಡಬೇಕು. ಆರ್ಜವವೆಂಬ, ವಕ್ರಬುದ್ಧಿ, ವಕ್ರಮಾರ್ಗವಿಲ್ಲದಸ್ವಭಾವವುಳ್ಳವರಾಗಬೇಕು. ಜ್ಞಾನಿಗಳಸಹವಾಸವನ್ನುಮಾಡಬೇಕು. ಅಹಮ್ಮಮತಾದಿ ದುಷ್ಟಸ್ವಭಾವವಿಲ್ಲದೇ, ನಿರಹಂಕಾರಿಯಾದ ಸಾಧುಸ್ವಭಾವವುಳ್ಳವನಾಗಬೇಕು. ಇವುಗಳೆಲ್ಲವೂ ನನಗೆ ಅಭಿಮತಗಳಾದ ಶುದ್ಧಭಾಗವತಧರ್ಮಗಳೆಂದು ಕರೆಸುವವು. ಇವುಗಳನ್ನು ನಿಷ್ಕಪಟವಾಗಿ, ಶ್ರದ್ಧೆಯಿಂದ ಯಾರು ಆಚರಿಸುತ್ತಾರೆಯೋ, ಅವರಿಗೆ ನನ್ನ ಗುಣಗಾನ ಕೇಳುವಮಾತ್ರದಿಂದ ನನ್ನಲ್ಲಿ ಅಚಲಿತ ಭಕ್ತಿಯುಕ್ತ ಮನೋಯೋಗವು, ಅಂದರೆ ಭಕ್ತಿಯೋಗವು ಉಂಟಾಗುವುದು. ಈ ಭಕ್ತಿಯೋಗವನ್ನು ಅಭ್ಯಾಸಮಾಡುತ್ತಾ ಮಾಡುತ್ತಾ, ಕ್ರಮೇಣ ಹೇಗೆ ಪುಷ್ಪಗಳಲ್ಲಿರುವ ಸುಗಂಧವನ್ನು ಗಾಳಿಯು ಮೂಗಿಗೆ ತಾನಾಗಿಯೇ ತಂದು, ಆ ಸುವಾಸನೆಯಿಂದ ಘ್ರಾಣೇಂದ್ರಿಯವನ್ನು ತನ್ನ ವಶಪಡಿಸಿಕೊಂಡು, ಘ್ರಾಣೇಂದ್ರಿಯವು ಆ ಸುವಾಸನೆಯ ತನ್ಮಯತೆಎಂಬ ಸುಖವನ್ನು ಹೊಂದುತ್ತದೆಯೋ, ಅದೇ ರೀತಿಯಾಗಿ, ಈ ಭಕ್ತಿಯೋಗವು ಭಗವತ್ಸಾಕ್ಷಾತ್ಕಾರವೆಂಬ ದಿವ್ಯರೂಪದರ್ಶನವೆಂಬ ರಸವಿಶೇಷದಿಂದ ಚಿತ್ತವನ್ನು ಆಕರ್ಷಿಸಿ, ಪರಮಾತ್ಮನಲ್ಲೇ ನಿಲ್ಲುವಂತೆ ಮಾಡಿ, ಅದರಿಂದ ಭಗವತ್ಪ್ರಸಾದರೂಪ ಅನುಗ್ರಹವನ್ನು ಭಕ್ತನಿಗೆ ಉಂಟುಮಾಡಿ, ಅವನಿಗೆ ಆತ್ಯಂತಿಕ ಭಕ್ತಿಯನ್ನುಂಟುಮಾಡುವುದು.

ಇಂತಹ ಆತ್ಯಂತಿಕ ಭಕ್ತಿಯೋಗಿಗಳು ನನ್ನನ್ನು ಸರ್ವಜೀವರಲ್ಲೂ ಆದಾನಾದಿಕರ್ತೃವೆಂದೂ, ಸರ್ವಾಂತರ್ಯಾಮಿಎಂದೂ, ತಮ್ಮ ಹೃತ್ಪುಟದಲ್ಲಿ ವಾಸನಾಗಿರುವ ಆತ್ಮಸ್ವರೂಪನೆಂದೂ ನನ್ನನ್ನು ಉಪಾಸನೆ ಮಾಡುತ್ತಾರೆ. ಇಂತಹ ಸರ್ವಪ್ರಾಣಿಗಳಲ್ಲಿ ಆತ್ಮನಾಗಿ ನಾನಿರುವೆನೆಂಬ ಜ್ಞಾನವನ್ನು ಹೊಂದದೆ, ಪ್ರಾಣಿಗಳ ಹಿಂಸೆ, ಅಪಮಾರ್ಗಗಳನ್ನು ಮಾಡಿ, ಅವರ ಅಂತರ್ಯಾಮಿಯಾದ ನನ್ನ ಅವಜ್ಞತೆಯನ್ನು ರಾಜಸ, ತಾಮಸಭಕ್ತರು ಮಾಡುತ್ತಾರಾಗಿ, ಅವರ ಪೂಜಾದಿಸಾಧನಗಳು, ಭಸ್ಮದಲ್ಲಿ ಹೋಮಮಾಡಿದಂತೆ, ಕೇವಲ ವಿಡಂಬನಗಳೂ ಮತ್ತು ವ್ಯರ್ಥವಾದವುಗಳೂ ಆಗಿರುತ್ತವೆ.

ಹೀಗೆ ಇತರರಲ್ಲಿ ದ್ವೇಷ, ದ್ರೋಹ, ಅಸೂಯಾದಿಗಳನ್ನು ಮಾಡುವುದರಿಂದ ರಾಜಸ, ತಾಮಸರಿಗೆ ಮನಶ್ಶಾಂತಿಯು ಉಂಟಾಗುವುದಿಲ್ಲ. ಉತ್ತಮ, ಮಧ್ಯಮಾಧಮರಲ್ಲಿ ಸಮಾನವಾಗಿ ವಾಸಿಸುವ ನಾನು, ಭೂತದ್ರೋಹಿಗಳ ಪೂಜಾದಿಗಳನ್ನು ಸ್ವೀಕರಿಸುವುದಿಲ್ಲ. ಆದುದರಿಂದ ಇವರ ಪೂಜಾದಿವಿಡಂಬನೆಯು ನನಗೆ ಪ್ರಿಯವಲ್ಲ. ಯಾರು ಸ್ವಧರ್ಮಗಳಾದ ಸತ್ಕರ್ಮಾನುಷ್ಠಾನಪರರೋ, ಭೂತದಯಾಶೀಲರೋ,

ಅವರು ತಮ್ಮ ಹೃತ್ಸ್ಥಲದಲ್ಲಿಯೇ ಸನ್ನಿಹಿತನಾಗಿರುವ ನನ್ನನ್ನು ತಿಳಿಯದೇ ಇರುವತನಕ, ಪ್ರತಿಮಾ, ಸಾಲಿಗ್ರಾಮಾದಿಗಳಲ್ಲಿ ನನ್ನನ್ನು ಅರ್ಚಿಸಬೇಕು. ಇಂತಹ ಪ್ರತಿಮಾಪೂಜೆಯು ಸಾಧಾರಣವಾದ, ನನಗೆ ಪ್ರಿಯವಾದ ಪೂಜೆಯು. ತನ್ನಲ್ಲೂ ಇತರರಲ್ಲೂ ಇರತಕ್ಕ ಆತ್ಮನಾದ ನನ್ನನ್ನು ಒಬ್ಬನೇ ಎಂದು ತಿಳಿಯದೆ, ಬ್ರಹ್ಮನಿಂದ ಬೇರೆಯಾದವನೆಂದು ಇತರರಲ್ಲಿರತಕ್ಕ ನನ್ನನ್ನು ತಿಳಿಯುವರೊ, ಅವರು ಸಂಸಾರವೆಂಬ ಅನೇಕ ದುಃಖಗಳಲ್ಲಿ ನರಳಿ, ನಂತರ ಮೃತ್ಯುವಶರಾಗಿ, ಶಾಶ್ವತದುಃಖವೆಂಬ ಅಂಧಂತಮಸ್ಸಿನಲ್ಲಿ ಬೀಳುತ್ತಾರೆ. ಆದುದರಿಂದ ಸರ್ವರಲ್ಲೂ ಪೂಜಾರ್ಹನಾದ ನಾನು ಅಂತರ್ಯಾಮಿಯಾಗಿರುತ್ತೇನೆಂದು ತಿಳಿದು, ಎಲ್ಲಾ ಪ್ರಾಣಿಗಳನ್ನೂ, ಮಾನ, ಮರ್ಯಾದೆ, ಅನ್ನ, ಉದಕ, ದ್ರವ್ಯ, ವಸ್ತ್ರಾದಿದಾನಗಳಿಂದ ಸಂತೋಷಪಡಿಸಿ ಬಹುಮಾನಮಾಡುವುದೇ, ಜೀವವಿಲ್ಲದ ಜಡಪ್ರತಿಮಾ ಪೂಜೆಗಿಂತ, ಶ್ರೇಷ್ಠವಾದದ್ದೂ, ನನಗೆ ಹೆಚ್ಚು ಸಂತೋಷವನ್ನು ಉಂಟುಮಾಡುವ ಪೂಜೆಯಾಗಿರುತ್ತದೆ. ಆದುದರಿಂದ ಸರ್ವರನ್ನೂ, ಪ್ರೀತಿಯಿಂದಲೂ, ಗೌರವದಿಂದಲೂ ಆದರಿಸಬೇಕು. ಸರ್ವಾಂತರ್ಯಾಮಿಯಾದ ಪರಮಾತ್ಮನು ನಾನೊಬ್ಬನೇ ಎಂಬ ಜ್ಞಾನವುಳ್ಳವನಾಗಬೇಕು.

## ತಾರತಮ್ಯ ಜ್ಞಾನೋಪದೇಶ :-

ದೇವ, ಮನುಷ್ಯ, ದೈತ್ಯ, ತಿರ್ಯಗಾದಿಜೀವರ ಯೋಗ್ಯತೆಗಳೆಂಬ ತಾರತಮ್ಯಜ್ಞಾನವು ಮೋಕ್ಷಕ್ಕೆ ಸಾಧಕವಾದದ್ದು. ಆದುದರಿಂದ ಜೀವ, ಜಡ ಮೊದಲಾದ ವಸ್ತುಗಳ ಯೋಗ್ಯತಾತಾರರಮ್ಯವು ಹೀಗಿರುತ್ತದೆ ಎಂದು ತಿಳಿಯಬೇಕು:- ಜೀವವಿಲ್ಲದ ಜಡಪದಾರ್ಥಗಳಿಗಿಂತ ಜೀವವುಳ್ಳ ತೃಣ, ಕ್ರಿಮಿ, ಕೀಟಾದಿಗಳು ಶ್ರೇಷ್ಠವಾದವು. ಅವುಗಳಿಗಿಂತ ಪಶ್ವಾದಿ ದೊಡ್ಡಪ್ರಾಣಿಗಳು ಶ್ರೇಷ್ಠವು. ಇವುಗಳಿಗಿಂತ ಮನೋವ್ಯಾಪಾರವುಳ್ಳ ಪ್ರಾಣಿಗಳು, ಅವುಗಳಿಗಿಂತ ಇಂದ್ರಿಯವ್ಯಾಪಾರವುಳ್ಳ ಪ್ರಾಣಿಗಳು ಶ್ರೇಷ್ಠಗಳು. ಈ ಇಂದ್ರಿಯವ್ಯಾಪಾರವುಳ್ಳ ಪ್ರಾಣಿಗಳಲ್ಲಿ ಸ್ಪರ್ಶಜ್ಞಾನವುಳ್ಳ ಪ್ರಾಣಿಗಳಿಗಿಂತ ರಸಜ್ಞಾನವುಳ್ಳ ಪ್ರಾಣಿಗಳೂ, ಅವುಗಳಿಗಿಂತ ಗಂಧಜ್ಞಾನವುಳ್ಳ ಪ್ರಾಣಿಗಳೂ, ಅವುಗಳಿಗಿಂತ ಶಬ್ದಜ್ಞಾನವುಳ್ಳವೂ, ಅವುಗಳಿಗಿಂತ ರೂಪಜ್ಞಾನವುಳ್ಳ ಪ್ರಾಣಿಗಳು ಶ್ರೇಷ್ಠವಾದವುಗಳು. ಇವುಗಳಿಗಿಂತ ಎರಡು ಸಾಲುಹಲ್ಲುಗಳೂ, ಬಹುಪಾದಗಳೂ ವುಳ್ಳ ಪ್ರಾಣಿಗಳು ಶ್ರೇಷ್ಠ. ಅವುಗಳಿಗಿಂತ ಕಾಲುಳ್ಳ ಪ್ರಾಣಿಗಳು, ಅವುಗಳಿಗಿಂತ ಎರಡುಪಾದಗಳುಳ್ಳ ಮನುಷ್ಯರಲ್ಲಿ ಹೀನಜಾತಿಯವರೂ, ಮನುಷ್ಯಾಧಮರೂ ಶ್ರೇಷ್ಠ. ಇವರಿಗಿಂತ ಶೂದ್ರನೂ, ಶೂದ್ರನಿಗಿಂತ ವೈಶ್ಯರೂ, ವೈಶ್ಯರಿಗಿಂತ ಕ್ಷತ್ರಿಯರೂ, ಕ್ಷತ್ರಿಯರಿಗಿಂತ ಬ್ರಾಹ್ಮಣರೂ ಶ್ರೇಷ್ಠರು.

ಬ್ರಾಹ್ಮಣರಲ್ಲಿ ವೇದಪಾಠಮಾತ್ರ ಕಲಿತವನು ಶ್ರೇಷ್ಠನು. ಅವನಿಗಿಂತ ವೇದಾರ್ಥತಿಳಿದ

ಬ್ರಾಹ್ಮಣಶ್ರೇಷ್ಠನು. ಅವನಿಗಿಂತ ಸಂಶಯಗಳನ್ನು ಪರಿಹರಿಸತಕ್ಕ ಪಂಡಿತನು ಶ್ರೇಷ್ಠ. ಪಂಡಿತನಿಗಿಂತ ಸ್ವಧರ್ಮಗಳಾದ ಸತ್ಕರ್ಮಾನುಷ್ಠಾನ ಮಾಡತಕ್ಕವನು ಶ್ರೇಷ್ಠನು. ಏಕೆಂದರೆ ಇವರು ಸ್ವಧರ್ಮವೆಂಬ ಗೋವಿನಹಾಲನ್ನು ಎಂದರೆ ಕರ್ಮಫಲವನ್ನು, ತಮ್ಮ ಉಪಯೋಗಕ್ಕಾಗಿ ಕರೆದುಕೊಳ್ಳುವುದಿಲ್ಲ ಎಂದರೆ ಫಲಾಸಕ್ತಿಇಲ್ಲದವರಾಗಿರುತ್ತಾರೆ, ಎಂದರ್ಥ. ಇವರಿಗಿಂತ ಕ್ರಿಯಾಭಿಮಾನಿಗಳೆಂಬ ಕರ್ಮಯೋಗಿಗಳೂ, ಕರ್ಮೇಂದ್ರಿಯಭಿಮಾನಿದೇವತೆಗಳೂ, ಜ್ಞಾನೇಂದ್ರಿಯಾಭಿಮಾನಿದೇವತೆಗಳೂ, ಅವರಿಗಿಂತ ಇಂದ್ರ, ರುದ್ರ, ಶೇಷ, ಗರುಡರೆಂಬ ಪರಮಾತ್ಮನಲ್ಲೇ ಮನಸ್ಸನ್ನು ಅರ್ಪಿಸಿರುವ ದೇವತೆಗಳೂ, ಅವರಿಗಿಂತ ಸರ್ವಕರ್ಮಪ್ರವರ್ತಕರು ಭಗದರ್ಪಣಬುದ್ಧಿಯಿಂದ ಆಗಿರುವ, ಭಾರತಿ, ಸರಸ್ವತಿ, ಬ್ರಹ್ಮವಾಯುಗಳು ಶ್ರೇಷ್ಠರು. ಇವರಿಗಿಂತ ಪ್ರಕೃತ್ಯಾಭಿಮಾನಿ ಲಕ್ಷ್ಮೀದೇವಿಯು ಸರ್ವಶ್ರೇಷ್ಠಳು. ಇವರೆಲ್ಲರಲ್ಲಿಯೂ ನಿಯಾಮಕನಾಗಿರುವ ನಾನು ಅತ್ಯಂತ ಶ್ರೇಷ್ಠನು ಮತ್ತು ಸಮಾಧಿಕರಹಿತನು. ಈ ರೀತಿಯಾಗಿ ಜೀವರತಾರತಮ್ಯವನ್ನೂ ತಿಳಿದು, ಇವರುಗಳಲ್ಲಿರುವ ಅಂತರ್ಯಾಮಿಯಾದ ನನ್ನನ್ನು ಚಿಂತಿಸಿ ಮನಸ್ಸಿನಿಂದ, ಎಲ್ಲಾ ಜೀವರೆಂಬ ಕಲೆಗಳಲ್ಲಿರುವ ನನ್ನನ್ನು ಸದಾ ನಮಸ್ಕರಿಸುತ್ತಿರಬೇಕು. ಇದು ವ್ಯಾಪ್ತ್ಯೋಪಾಸನೆ, ದೇವತೆಗಳು ಮಾಡತಕ್ಕದ್ದು. ಮನುಷ್ಯೋತ್ತಮರು ಈ ಜ್ಞಾನಮಾತ್ರಕ್ಕೆ ಅಧಿಕಾರಿಗಳು. ಎಲೈ ಮಾನವಿ! ಜ್ಞಾನಪಾತ್ರಳೆ! ನಾನು ನಿನಗೆ ಇದುವರೆವಿಗೆ ಯೋಗವನ್ನೂ, ಭಕ್ತಿಯೋಗವನ್ನೂ ವಿಂಗಡಿಸಿ ಹೇಳಿರುತ್ತೇನೆ. ಇವುಗಳಲ್ಲಿ ಒಂದನ್ನಾಶ್ರಯಿದರೂ ಸಾಧಕನು ನನ್ನ ಪ್ರೀತಿಯನ್ನು ಹೊಂದುತ್ತಾನೆ.

## ಕಾಲರೂಪ ಪರಮಾತ್ಮನ ಸ್ವರೂಪ :-

ಜೀವ ಸಂಸೃತಿಕಾರಣಗಳಾದ ಕರ್ಮಗಳ ಸ್ವರೂಪಗಳು ಬಹಳಗಳಾದ ಪ್ರಯುಕ್ತ ಅದನ್ನು ಹೇಳದೇಬಿಟ್ಟು, ಕಾಲರೂಪಪರಮಾತ್ಮನ ಸ್ವರೂಪವು ಕಪಿಲನಾಮಕ ಪರಮಾತ್ಮನಿಂದ ಹೇಳಲ್ಪಡುತ್ತೆ:- ಗುಣಪೂರ್ಣನಾದ ಬ್ರಹ್ಮವಾಚ್ಯನೂ, ಸರ್ವಾಂತರ್ಯಾಮಿಯೂ, ಭಾಗ್ಯನಿಧಿ ಯೂ, ಪ್ರಧಾನನಾಮಕಳಾದ ಪ್ರಕೃತಿ, ಮಹತ್ತತ್ವಾಭಿಮಾನಿ ಬ್ರಹ್ಮದೇವರಿಗಿಂತಲೂ ಉತ್ತಮನೂ, ಸರ್ವದೇವೋತ್ತಮನೂ, ಸರ್ವಚೇಷ್ಟಾಪ್ರದನೂ, ಶುಕ್ಲ, ಕೃಷ್ಣ, ರಕ್ತಾಧಿವರ್ಣಭೇದಗಳಿಗೂ, ಬ್ರಹ್ಮಾಂಡಾದಿ ಸಕಲಪದಾರ್ಥಭೇದಗಳ ಅಭಿವ್ಯಕ್ತಿಗೂ ಕಾರಣನಾದವನೂ, ಅಪ್ರಾಕೃತ ಸಚ್ಚಿದಾನಂದ ಸ್ವರೂಪನೂ, ತನ್ನರೂಪ, ಗುಣ, ಕ್ರಿಯಾದಿಗಳಿಗೂ ತನಗೂ ಭೇದವನ್ನು ತಿಳಿಯುವವರಿಗೆ ಮಹಾಭಯ ವನ್ನುಂಟುಮಾಡುವನೂ, ಮಹದಾದಿ ಸಮಸ್ತತತ್ವಗಳಲ್ಲಿದ್ದು ತದಭಿಮಾನಿಗಳಿಗೆ ಭಯವನ್ನುಂಟುಮಾಡಿ ಅವರಿಂದ ಸಕಲ ತತ್ವಕಾರ್ಯಗಳನ್ನೂ ಮಾಡಿಸುವವನೂ, ಸರ್ವೇಶ್ವರನೂ

ಆದ ಪರಮಾತ್ಮನಿಗೆ, ಕಾಲನಾಮಕ ಪರಮಾತ್ಮನೆಂದು ಕರೆಯುತ್ತಾರೆ. ಯಾರು ಪ್ರಾಣಿಗಳಲ್ಲಿ ಪ್ರವೇಶಿಸಿ ಪ್ರಾಣಿಗಳನ್ನು ಸಂಹರಿಸುತ್ತಾನೆಯೋ, ಸಮಸ್ತರಿಗೂ ಆಶ್ರಯನಾಗಿ ಸಂರಕ್ಷಣೆ ಮಾಡುತ್ತಾನೆಯೋ, ಅಂತಹ ಬ್ರಹ್ಮರುದ್ರರನಿಯಾಮಕನಾದ ವಿಷ್ಣುವು ಕಲ, ಕಾಷ್ಠಾದಿ, ಕಾಲವ್ಯವಧಾನಗಳಲ್ಲಿಯೂ ಸನ್ನಿಹಿತನಾಗಿದ್ದು ಕಾಲನಾಮಕ ನಾಗಿರುತ್ತಾನೆಂದು ಧ್ಯಾನಿಸಬೇಕು.

ಇಂತಹ ಕಾಲನಮಕ ಪರಮಾತ್ಮನಿಗೆ, ಪ್ರಿಯರಾಗಲೀ, ದ್ವೇಷಿಗಳಾಗಲೀ, ಬಂಧುಗಳಾಗಲೀ ಯಾರೂ ಇಲ್ಲ. ಇವರು ಅಪ್ತಮಿತ್ರನಾಗಿ ಜಗತ್ತಿನಲ್ಲೆಲ್ಲಾ ವ್ಯಾಪಿಸಿ ಮತ್ತರಾದ ದುರ್ಜನರನ್ನು ಸಂಹರಿಸುತ್ತಾನೆ. ಈತನ ಭಯದಿಂದಲೇ ಗಾಳಿಯು ಬೀಸುವುದು, ಸೂರ್ಯನು ತಪಿಸುವನು, ದೇವತೆಗಳು ಮಳೆಯನ್ನು ಸುರಿಸುವರು, ನಕ್ಷತ್ರಗಣಗಳು ಪ್ರಕಾಶಮಾಡುವವು, ಅಗ್ನಿಯು ಜ್ವಲಿಸುವನು, ವನಸ್ಪತಿ, ಬಳ್ಳಿ, ಓಷದಿಗಳು ಫಲಪುಷ್ಪ ಗಳನ್ನು ಸಕಾಲಗಳಲ್ಲಿ ಬಿಡುವವು. ನದಿಗಳು ಹರಿಯುವವು, ಸಮುದ್ರವು ಎಲ್ಲೆ ಮೀರದಿರುವುದು, ಪರ್ವತಗಳಿಂದ ಕೂಡಿದ ಭೂಮಿಯು ಸಮುದ್ರದಲ್ಲಿ ಮುಳುಗದೇ ತೇಲುತ್ತಿರುವುದು, ಆಕಾಶವು ಪ್ರಾಣಿಗಳ ಸಂಚಾರಕ್ಕೆ ಮಾರ್ಗಕೊಡುವುದು, ಸಪ್ತಾವರಣಗಳಿಂದ ಕೂಡಿದ ಬ್ರಹ್ಮಾಂಡಕ್ಕೆ ಅಭಿಮಾನಿಯಾದ ಬ್ರಹ್ಮನು ಪ್ರಾಣಿಗಳ ದೇಹಗಳನ್ನು ಸೃಷ್ಟಿಸುವನು. ರುದ್ರಾದಿದೇವತೆಗಳೂ ಈತನ ಭಯದಿಂದ ಸಂಹಾರಾದಿ ಕಾರ್ಯಗಳನ್ನು ಮಾಡುವರು. ಈ ರೀತಿಯಾಗಿ ಜ್ಞಾನಸ್ವರೂಪನಾದುದರಿಂದ ಕಾಲನಾಮಕನೂ, ಪ್ರಪಂಚದಂತೆ ಉತ್ಪತ್ತಿನಾಶವಿಲ್ಲ ದವನಾದುದರಿಂದ ಅನಂತನಾಮಕನೂ, ಸರ್ವರನ್ನೂ ಸಂಹರಿಸುವನಾದುದರಿಂದ ಅಂತಕನಾಮಕನೂ, ತನಗೇ ಉತ್ಪತ್ತಿಕಾರಣವಿಲ್ಲದ್ದರಿಂದ ಅನಾದಿಶಬ್ದವಾಚ್ಯನೂ, ಸರ್ವವನ್ನೂ ಸೃಷ್ಟಿಸುವುದರಿಂದ ಆದಿಶಬ್ದವಾಚ್ಯನೂ, ನಾಶರಹಿತನಾದ್ದರಿಂದ ಅವ್ಯಯನೂ, ಬ್ರಹ್ಮಾದಿಗಳಲ್ಲಿ ಪ್ರವಿಷ್ಟನಾಗಿ ಸೃಷ್ಟಿಸುತ್ತಲೂ, ರುದ್ರಾದಿಗಳಲ್ಲಿದ್ದು ಸಂಹರಿಸುತ್ತಲೂ, ಸರ್ವತಂತ್ರಸ್ವತಂತ್ರನಾಗಿ, ಕಾಲನಾಮಕನಾಗಿ, ಶ್ರೀಮನ್ನಾರಾಯಣನು ಪ್ರಕಾಶಿಸುವನೆಂದು ಧ್ಯಾನಿಸತಕ್ಕದ್ದು, ಎಂದನು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಮೂವತ್ತನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ एकत्रिंशोऽध्यायः

**भगवानुवाच**

तस्यैतस्य जनो नूनं नायं वेदोरुविक्रमम् ।
काल्यमानोऽपि बलिना वायोरिव घनावलिः ॥ १ ॥

यं यमर्थमुपादत्ते दुःखेन सुखहेतवे ।
तं तं धुनोति भगवान् पुमाञ्छोचति यत्कृते ॥ २ ॥

यदध्रुवस्य देहस्य सानुबन्धस्य दुर्मतिः ।
ध्रुवाणि मन्यते मोहाद् गृहक्षेत्रवसूनि च ॥ ३ ॥

जन्तुर्वै भव एतस्मिन् यां यां योनिमुपव्रजेत् ।
तस्यां तस्यां स लभते निर्वृतिं न विरज्यते ॥ ४ ॥

नरकस्थोऽपि देहं वै न पुमांस्त्यक्तुमिच्छति ।
नारक्यां निर्वृतौ सत्यां देवमायाविमोहितः ॥ ५ ॥

आत्मजायासुतागारपशुद्रविबन्धुषु ।
निरूढमूलहृदय आत्मानं बहुमन्यते ॥ ६ ॥

सन्दह्यमानसर्वाङ्ग एषामुद्वहनाधिना ।
करोत्यविरतं मूढो दुरितानि दुराशयः ॥ ७ ॥

आक्षिप्तात्मेन्द्रियः स्त्रीणामसतीनां च मायया ।
रहोरचितसल्लापैः शिशूणां कलभाषणैः ॥ ८ ॥

गृहेषु कूटधर्मेषु दुःखतन्त्रेष्वतन्द्रितः ।
कुर्वन् दुःखप्रतीकारं सुखवन्मन्यते गृही ॥ ९ ॥

अर्थैरापादितैर्गुर्व्या हिंसयेतस्ततश्च तान् ।
पुष्णाति येषां पोषेण शेषभुग् यात्यधः स्वयम् ॥ १० ॥

वार्तायां लुप्यमानायामारब्धायां पुनः पुनः ।
लोभाभिभूतो निःसत्वः परार्थे कुरुते स्पृहाम् ॥ ११ ॥

कुटुम्बभरणाकल्पो मन्दभाग्यो वृथोद्यमः ।
श्रिया विहीनः कृपणो ध्यायञ्छ्वसति मूढधीः ॥ १२ ॥

एवं स्वभरणाकल्पं तत्कलत्रादयस्तदा ।
नाद्रियन्ते यथापूर्वं कीनाश इव गोजरम् ॥ १३ ॥

तत्राप्यजातनिर्वेदो भ्रियमाणः स्वयंभृतैः ।
जरयोपात्तवैरूप्यो मरणाभिमुखो गृहे ॥ १४ ॥

आस्तेऽवमत्याऽपत्याद्यैर्गृहपाल इवाहरन् ।
आमयेनाप्रदीप्ताग्निरल्पाहारोऽल्पचेष्टितः ॥ १५ ॥

वायुनोत्क्रमतोत्तारकफसंरुद्धनासिकः ।
कासश्वासकृतायासः कण्ठो घुरुघुरायते ॥ १६ ॥

शयानः परिशोचद्भिः परिवीतः स्वबन्धुभिः ।
वाच्यमानोऽपि न ब्रूते कालपाशवशं गतः ॥ १७ ॥

एवं कुटुम्बभरणे व्यापृतात्माऽजितेन्द्रियः ।
म्रियते रुदतां स्वानामुरुवेदनयाऽस्तधीः ॥ १८ ॥

यमदूतौ तदा प्राप्तौ भीमौ सरभसेक्षणौ ।
स दृष्ट्वा त्रस्तहृदयः शकृन्मूत्रं विमुञ्चति ॥ १९ ॥

यातनादेह आवृत्त्य पाशैर्बध्वा गले बलात् ।
नीयते दीर्घमध्वानं दण्ड्यं राजभटा यथा ॥ २० ॥

तयोर्निर्भिन्नहृदयस्तर्जनैर्जातवेपथुः ।
पथि श्वभिर्भक्ष्यमाण आर्तोऽघं स्वमनुस्मरन् ॥ २१ ॥

क्षुत्तृरीतोऽकदवानलानिलैः सन्तप्यमानः पथि तप्तवालुके ।
कृच्छ्रेण पृष्ठे कशया च ताडितश्चलत्यशक्तोऽपि निराश्रयोदके ॥ २२ ॥

तत्र तत्र पतञ्छ्रान्तो मूर्च्छितः पुनरुत्थितः ।
तथा पापीयसा नीतस्तमसा यमसादनम् ॥ २३ ॥

योजनानां सहस्राणि नवतिर्नव चाध्वनः ।
त्रिभिर्मुहूर्तैर्द्वाभ्यां वा नीतः प्राप्नोति यातनाम् ॥ २४ ॥

आदीपनं स्वगात्राणां वेष्टयित्वोल्मुकादिभिः ।
आत्ममांसादनं क्वापि स्वकृतं परतोऽपि वा ॥ २५ ॥

जीवतश्चान्त्राभ्युद्धारः श्वगृध्रैर्यमसादने ।
सर्पवृश्चिकदंशाद्यैः स्मरद्भिश्चात्मवैशसम् ॥ २६ ॥

कृन्तनं चावयवशो गजादिभ्योऽभिधावनम् ।
पातनं गिरिशृङ्गेभ्यो रोधनं बन्धगर्तयोः ॥ २७ ॥

यास्तामिस्रान्धतामिस्ररौरवाद्याश्च यातनाः ।
भुङ्क्ते नरो वा नारी वा मिथः सङ्गेन निर्मिताः ॥ २८ ॥

अत्रैव नरकः स्वर्ग इति मातः प्रचक्षते ।
या यातना वै नारक्यस्ता इहाप्युपलक्षिताः ॥ २९ ॥

एवं कुटुम्बं बिभ्राण उदरम्भर एव वा ।
विसृज्येहोभयं प्रेत्य भुङ्क्ते तत्फलमीदृशम् ॥ ३० ॥

एकः प्रपद्यतेऽध्वानं हित्वेह स्वकलेवरम् ।
कुशलेतरपाथेयो भूतद्रोहेण यद् भृतम् ॥ ३१ ॥

दैवेनासादितं तस्य शमलं निरये पुमान् ।
भुङ्क्ते कुटुम्बपोषस्य हृतचित्त इवातुरः ॥ ३२ ॥

केवलेन ह्यधर्मेण कुटुम्बभरणोत्सुकः ।
याति जीवोऽन्धतामिस्रं चरमं तमसः पदम् ॥ ३३ ॥

अधस्तान्नरलोकस्य यावतीर्यातनास्तु ताः ।
क्रमशः समनुक्रम्य पुनरत्राव्रजेच्छुचिः ॥ ३४ ॥

**॥ इति श्रीमद्भागवते (तृतीयस्कन्धे(*३) एकत्रिंशोऽध्यायः ॥**

**॥ ಮೂವತ್ತೊಂದನೆಯ ಅಧ್ಯಾಯ ॥**

## ಕರ್ಮ ಲಕ್ಷಣಗಳು ಹಾಗೂ ಅವುಗಳಿಗಾಗುವ ಫಲಗಳು :-

ಪರಮಾತ್ಮನ ಪಾದಾರವಿಂದಗಳಲ್ಲಿ ಸದ್ಭಕ್ತಿಯುಂಟಾಗುವುದಕ್ಕೆ ಕಾರಣವಾದ ವೈರಾಗ್ಯಪ್ರಾಪ್ತಿಗಾಗಿ, ದೇವಹೂತೀದೇವಿಯರು ಕೇಳಿದ, ವಿವಿಧದುಃಖಮಯವಾದ ಸಾಂಸಾರಿಕಕ್ಲೇಶಗಳಿಗೆ ಕಾರಣಗಳಾದ

ಕರ್ಮಸಂಸ್ಕೃತಿಗಳ ವಿವರಗಳನ್ನು ಹೇಳು, ಎಂದು ಪ್ರಾರ್ಥಿತನಾದ ಕಪಿಲಪರಮಾತ್ಮನು, ಸಂಸ್ಕೃತಿಗೆ ಕಾರಣಗಳಾದ ಜನರ ಕರ್ಮಲಕ್ಷಣಗಳನ್ನೂ, ಆ ಕರ್ಮಗಳಿಗೆ ಉಂಟಾಗುವ ಫಲಗಳನ್ನೂ ಈ ಅಧ್ಯಾಯದಲ್ಲಿ ಹೇಳುತ್ತಾನೆ:- ಎಲೈ ದೇವಹೂತೀದೇವಿಯೆ! ಜೀವರ ಉತ್ಪತ್ತಿಯನ್ನೂ, ಅವರಿಗೆ ಸಂಸಾರಬಂಧನಕ್ಕೆ ಕಾರಣಗಳಾದ ಕರ್ಮಗಳನ್ನೂ, ಆ ಕರ್ಮಫಲಗಳನ್ನೂ ಹೇಳುವೆನು ಕೇಳು. ಸಮಸ್ತಜಗತ್ಸೃಷ್ಟಿಗೆ ಕಾರಣನಾದ ಭಗವಂತನು ತನ್ನ ಇಚ್ಛೆಯಿಂದ, ವಾಯುಮಂಡಲವು ಮೇಘಗಳನ್ನು ಹೇಗೆ ಸಂಚಾರಮಾಡಿಸುತ್ತದೆಯೋ, ಅದರಂತೆ ಈ ಬ್ರಹ್ಮಾಂಡವನ್ನೂ ಬ್ರಹ್ಮಾದಿ ಸಕಲಜೀವರನ್ನೂ ಪ್ರವಾಹರೂಪವಾಗಿ ಸೃಷ್ಟಿಮಾಡುತ್ತಾನೆ. ಹೀಗೆ ಸೃಷ್ಟರಾದ ಜೀವರಲ್ಲಿ ಭಕ್ತಿಯೋಗಿಗಳಾದ ದೇವತೆಗಳು, ಜ್ಞಾನಯೋಗಿಗಳಾದ ಋಷಿಗಳು, ಕರ್ಮಯೋಗಿಗಳಾದ ಭಗವದ್ಭಕ್ತರುಗಳನ್ನು ಬಿಟ್ಟು, ಅನಧಿ ಕಾರಿಗಳಾದ ಜನರು, ತಮ್ಮನ್ನು ಸೃಷ್ಟಿಸಿ, ಪಾಲಿಸಿ, ಸಂಹರಿಸುವ ಅಸಮಪರಾಕ್ರಮಿಯಾದ ನನ್ನನ್ನು ತಿಳಿಯುವುದಿಲ್ಲ. ಪರಮಾತ್ಮನನ್ನು ತಿಳಿಯದೇ ಇರುವುದೇ ಇವರಿಗೆ ನಾನಾ ಸಂಸಾರದುಃಖಗಳಿಗೆ ಕಾರಣವಾಗುತ್ತದೆ.

ಈ ಅನಧಿಕಾರಿಗಳಾದ ಪರಮಾತ್ಮಜ್ಞಾನರಹಿತರು, ತಮ್ಮ ದೇಹಸುಖಕ್ಕಾಗಿಯೂ, ಕುಟುಂಬ ಪೋಷಣೆಗಾಗಿಯೂ, ಇತರರಿಗೆ ದುಃಖಕೊಟ್ಟು ಅನ್ಯಾಯದಿಂದ ತಮ್ಮ ಸುಖಸಾಧನೆಗಳನ್ನು ಸಂಪಾದಿಸಿ, ಅದರಿಂದ ತಾವು ಸುಖಪಡುತ್ತೇವೆಂದು ಭಾವಿಸುತ್ತಾರೆ. ಆದರೆ ಅವರ ದುಷ್ಕರ್ಮಕ್ಕೆ ಫಲರೂಪವಾಗಿ ಕಾಲನಾಮಕ ಪರಮಾತ್ಮನು ಅವರು ಸಂಪದಿಸಿದ ಎಲ್ಲಾ ಸುಖಸಾಧನೆಗಳನ್ನೂ ನಾಶಮಾಡುತ್ತಾನೆ. ಅದರಿಂದ ಅವರಿಗೆ ಸುಖಸಾಧನೆಗಳನ್ನು ಸಂಪಾದಿಸುವಾಗಲೂ ದುಃಖವೂ, ನಂತರ ಅವುಗಳು ಅನುಭವಕ್ಕೆ ಬರದೆ ನಾಶವಾಗುವುದರಿಂದ, ಅತ್ಯಂತ ದುಃಖವೇ ಪ್ರಾಪ್ತವಾಗುತ್ತದೆ. ಅಜ್ಞಾನಾತಿರೇಕದಿಂದ, ದೇವಮನುಷ್ಯಾದಿದೇಹಗಳೂ ಕ್ಷಣಿಕವೂ, ನಾಶಹೊಂದುವವೂ ಆದರೂ, ಜೀವನು ಅವುಗಳು ಶಾಶ್ವತಸುಖಸಾಧನೆಗಳೆಂದು ದುಷ್ಟಭಾವನೆಯುಳ್ಳವನಾಗುತ್ತಾನೆ. ಪ್ರಾಣಿಯು ಕರ್ಮವಶದಿಂದ ನಾನಾಜನ್ಮಗಳನ್ನು ಪಡೆದು ಆ ಜನ್ಮಗಳಲ್ಲೆಲ್ಲಾ ಗೃಹ, ಕುಟುಂಬ, ಧನಾದಿಗಳನ್ನು ಕ್ಷಣಿಕವಾಗಿ ಸುಖದಂತೆ ತಿಳಿದು ಅನುಭವಿಸುತ್ತಾ, ದುಃಖಪರಂಪರೆಗಳನ್ನು ಅವುಗಳಿಂದ ಹೊಂದಿ, ಕೊನೆಗೆ ಅವುಗಳು ನಾಶವಾಗಲು ಅತ್ಯಂತದುಃಖವನ್ನೇ ಹೊಂದುತ್ತಿದ್ದರೂ, ಅಂತಹ ದುಷ್ಟಪ್ರಾಣಿಗಳಿಗೆ ದುಃಖನಿವರ್ತಕನಾದ ಪರಮಾತ್ಮನನ್ನು ತಿಳಿಯಬೇಕೆಂಬ ಅಪೇಕ್ಷೆಯಾಗಲೀ, ಜ್ಞಾನಸಾಧನವಾದ ವೈರಗ್ಯಭಾವವಾಗಲೀ ಅವರಿಗೆ ಉಂಟಾಗುವುದಿಲ್ಲ. ದೇಹಸಹಿತನಾಗಿ ನರಕದುಃಖಾನುಭವ ಮಾಡುತ್ತಾ ನರಕವಾಸಿಯಾದ ಜೀವನೂ ಸಹ, ಪರಮಾತ್ಮನು ನಿನಗೆ ನರಕವನ್ನು ತಪ್ಪಿಸುತ್ತೇನೆ ಆ ದೇಹವನ್ನು

ಬಿಡು ಎಂದರೂ ಜೀವನು ಆ ನರಕಸ್ಥದೇಹವನ್ನು ಬಿಡಲು ಒಪ್ಪುವುದಿಲ್ಲ. ಇನ್ನು ದೇವ, ಮಾನವಾದಿ, ಸುಖಸಾಧಕದೇಹಗಳನ್ನು ಮಮತೆಇಲ್ಲದೆ ಜೀವನಿಂದ ಬಿಡಲು ಹೇಗೆ ಸಾಧ್ಯವಾದೀತು? ಜೀವನ ಈ ಭಾವನೆಯೇ ಭಗವನ್ಮಾಯಾರಚಿತವಾದ ಜಗನ್ಮೋಹಕ ಬಂಧಕಶಕ್ತಿಯು.

## ಮೋಹಕ ಬಂಧಕ ಶಕ್ತಿಯ ವ್ಯಾಪಾರ ಮತ್ತು ಸಾಂಸಾರಿಕ ದುಃಖ :-

ಜೀವನ ಈ ದೇಹ ಮಮತೆಯಿಂದ, ಅವನು ಹೆಂಡತಿ, ಮಕ್ಕಳು, ಮನೆ, ಪಶು, ಧನ, ಬಂಧುಗಳು ಮುಂತಾದವನ್ನು ತನ್ನ ಸುಖಸಾಧನಗಳೆಂದು ಭಾವಿಸಿ ಅವುಗಳಲ್ಲಿ ಮಮತೆಯುಳ್ಳವನಾಗುತ್ತಾನೆ. ಇವರಿಂದ ಸಹಿತನಾದ ತನ್ನನ್ನು ಧನ್ಯನೆಂದೂ, ಬಹಳ ದೊಡ್ಡವನೆಂದು, ಸುಖಿಯೆಂದೂ ಹೆಮ್ಮೆ ಪಡುತ್ತಾನೆ. ಹೆಂಡತಿ ಮಕ್ಕಳುಗಳ ಪೋಷಣೆಗಾಗಿಯೂ, ಅವರ ಮದುವೆ ಮುಂಜಿಗಾಗಿಯೂ ಗಳಿಸಿದ ದ್ರವ್ಯವು ವ್ಯಯವಾಗಿ, ಋಣಬಾಧೆ ಎಂಬ ಅಗ್ನಿಯಿಂದ ಯಾವಾಗಲೂ ಇವನ ಸರ್ವಾಂಗಗಳು ಸುಡಲ್ಪಡುತ್ತಿದ್ದರೂ, ಪುನಃಪುನಃ ವ್ಯವಧಾನವಿಲ್ಲದೆ ಪರರನ್ನು ವಂಚಿಸಿ, ಧನಾರ್ಜನೆಮಾಡಿ ಅದರಿಂದ ಬಹುಪಾಪಗಳನ್ನೇ ಸಂಪಾದಿಸುತ್ತಾನೆ. ಆದರೂ ಇವನ, ದುರ್ಮಾರ್ಗಗಳಿಂದ, ಭೂತದ್ರೋಹದಿಂದ, ಧನಗಳಿಸುವ ಪಾಪಮಯವಾದ ದುರಾಶೆಯು ಇನ್ನೂ ಹೆಚ್ಚುತ್ತದೆಯೇ ಹೊರತು, ನಾಶವಾಗುವುದಿಲ್ಲ. ಸದ್ಗುಣ, ಶೀಲಾದಿ ಸದ್ವೃತ್ತಿಗಳನ್ನು ತ್ಯಜಿಸಿ, ಶೌಚಾದಿಗಳಿಲ್ಲದೆ, ವಿಷಯಾಭಿಲಾಷೆಯಿಂದ ತಮ್ಮ ದೇಹಾದಿಗಳನ್ನಲಂಕರಿಸಿಕೊಂಡು ಮೆರೆಯುವ ಸ್ತ್ರೀಯರಲ್ಲಿ ಮನಸ್ಸಿಟ್ಟು ಮೋಹಿಸುತ್ತಾ, ಅವರೊಡನೆ ಸರಸಸಲ್ಲಾಪಾದಿಗಳನ್ನು ಮಾಡುತ್ತಾ, ಮಕ್ಕಳ ಮುದ್ದುಮಾತುಗಳನ್ನು ಕೇಳುವುದು, ಲಾಲನೇ ಮಾಡುವುದು, ಈ ವಿಧಗಳಾದ ಇಂದ್ರಿಯಸುಖಭೋಗಗಳಿಂದ ಮೂಢಜನರು ಕಾಲಕಳೆಯುವರು.

ಪರಸ್ಪರ ವಂಚನೆಯಿಂದ ತಮ್ಮತಮ್ಮ ಸುಖವನ್ನು ಸಾಧಿಸಿಕೊಳ್ಳುವ ಸ್ವಭಾವವುಳ್ಳ ಗುಂಪಿನಸದೃಶರಾದ, ಕೂಟಧರ್ಮವುಳ್ಳ ಸತಿ, ಸುತ, ಬಾಂಧವರನ್ನು ಪೋಷಿಸುವೆನೆಂದು ಮಾಡುವ ಪ್ರಯತ್ನಗಳಿಂದ, ಅವರಿಂದ ನಿರಂತರ ದುಃಖಗಳನ್ನೇ ಹೊಂದುತ್ತಿದ್ದರೂ, ಮೂಢನಾದ ಜೀವನು ಅವನ್ನು ಸುಖವೆಂಬ ಭಾವನೆಯುಳ್ಳವನಾಗುತ್ತಾನೆ. ಕಷ್ಟಪಟ್ಟು ಧನಸಂಪಾದಿಸಿ ಕುಟುಂಬಪೋಷಣೆಯನ್ನು ಮಾಡುತ್ತಾ, ಯಾರನ್ನು ಇವನು ಪೋಷಿಸುವನೋ ಅವರು ತಿಂದು ಮಿಕ್ಕಿದ್ದನ್ನು ಇವನು ತಿನ್ನುತ್ತಾ, ತಂದ ಧನಗಳೆಲ್ಲಾ ವ್ಯಯವಾಗಲು, ಇವನು ಅಧೋಗತಿಗೆ ಇಳಿದು ದುಃಖಿಯಾಗುವನು. ಅನೇಕ ಸದ್ವ್ಯಾಪಾರ, ದುರ್ವ್ಯಾಪಾರಾದಿಗಳಿಂದ ಧನಸಂಪಾದನೆಗೆ ಪ್ರಯತ್ನಿಸಿ ವಿಫಲನಾದಾಗ, ಅವನು ಅನ್ಯಾಯದಿಂದ ಇತರರ ದ್ರವ್ಯಾಪಹಾರ ಮಾಡಲು ಪ್ರಯತ್ನಿಸುವನು. ಅದೂ ಸಿಕ್ಕದೇ ಹೋದರೆ ಜೀವನಕ್ಕೆ ಉಪಾಯಕಾಣದೆಯೋಚಿಸುತ್ತಾ ನಿಟ್ಟುಸಿರು ಬಿಡುವನು. ಈ ರೀತಿ ಸಂಪಾದನೆ ಇಲ್ಲದೇ ಇರುವ

ಇವನನ್ನು ನೋಡಿ ಅದುವರಿಗೆ ಇವನಿಂದ ಪೋಷಿತರಾದ ಪತ್ನೀಪುತ್ರಾದಿಗಳೂ ಬಾಂಧವರೂ, ಇವನನ್ನು ಮೊದಲಿನಂತೆ ಗೌರವಿಸದೆ, ಉಳುವಎತ್ತು ಮುದಿಯಾದರೆ ಹೇಗೆ ಉದಾಶೀನಮಾಡಿಬಿಡುವರೋ ಅದರಂತೆ ತ್ಯಜಿಸುತ್ತಾರೆ. ಸ್ವಜನರ ಉಪೇಕ್ಷೆಯಿಂದ ದುಃಖಿಸುತ್ತಾ ಇವನು ಬೇಗನೆ ಮುದಿತನವನ್ನು ಹೊಂದಿ, ಕುರೂಪಿಯಾಗುತ್ತಾನೆ. ರೋಗಗಳು ಪ್ರಾಪ್ತವಾಗಿ ಮರಣೋನ್ಮುಖನಾಗುತ್ತಾನೆ.

ಮನೆಯನ್ನು ಕಾಯುವುದಕ್ಕಾಗಿ ನಾಯಿಗೆ ಎಂಜಲೆಲೆ ಎಸೆಯುವಂತೆ ಉದಾಸೀನದಿಂದ ತನ್ನ ಜನರು ತನಗೆ ಕೊಡುವ ಆಹಾರಾದಿಗಳನ್ನು ದುಃಖದಿಂದ ಭುಂಜಿಸುತ್ತಾನೆ. ಕೊನೆಗೆ ಅಗ್ನಿಮಾಂದ್ಯದಿಂದ ಆಹಾರಾದಿಗಳನ್ನು ತೆಗೆದುಕೊಳ್ಳಲಾಗದೆ, ಶ್ವಾಸ, ಕಫಗಳಿಂದ ನರಳುತ್ತಾ, ಮಾತಾಡಲೂ ಆಗದೆ ಹಾಸಿಗೆ ಹತ್ತಿ ಮಲಗಿದಾಗ ಸುತ್ತಲೂ ಶೋಕಿಸುವರಂತೆ ಇರುವ ಬಂಧುಜನರಿಂದ ಕೂಡಿದವನಾಗಿ, ಕಾಲಪಾಶದಿಂದ ಬದ್ಧನಾಗಿ ತನ್ನ ದೇಹವನ್ನು ಬಿಡುತ್ತಾನೆ. ಆ ಕಾಲದಲ್ಲಿ ಸುತ್ತಲೂ ನಿಂತ ಬಂಧುಗಳನ್ನು ನೋಡಿ ಉದ್ವೇಗವುಳ್ಳ ಮನಸ್ಸುಳ್ಳವನಾಗಿ, ದುಃಖಭರಿತನಾಗಿಯೇ, ಅಜಿತೇಂದ್ರಿಯನೂ, ಪರಮಾತ್ಮನನ್ನು ತಿಳಿಯದೇ ಇದ್ದವನೂ ಆದ ಆ ದುರ್ಬುದ್ಧಿಯುಳ್ಳ ಜೀವನು ದೇಹದಿಂದ ಹೊರಗೆ ಹಾಕಲ್ಪಡುವನು. ಆ ಕಾಲದಲ್ಲಿ ಘೋರರೂಪರಾದ ಯಮದೂತರು ಕ್ರೂರ ದೃಷ್ಟಿಯಿಂದ ಇವನನ್ನು ನೋಡುತ್ತಾ ಎದುರಿಗೆ ಬಂದು ನಿಲ್ಲುವರು. ಭಯಂಕರ ರೂಪರಾದ ಇವರನ್ನು ಆ ದುರ್ವ್ಯಾಪಾರ ನಿಷ್ಠನಾದ ಜೀವನು ನೋಡಿ ಭಯದಿಂದ ಮೂತ್ರ, ಪುರೀಷಗಳನ್ನು ವಿಸರ್ಜಿಸುತ್ತಾ ದೇಹದಿಂದಾಚೆಗೆ ಹಾಕಲ್ಪಡುವನಾಗೆ ಬರುವನು.

## ನರಕಾದಿಗಳ ಮಾರ್ಗ ಮತ್ತು ಶಿಕ್ಷೆ :-

ಆಗ ಇವನಿಗೆ ಯಾತನಾದೇಹವೆಂಬುದು ಪ್ರಾಪ್ತವಾಗುವುದು. ಯಮಭಟರು ಇವನ ಕುತ್ತಿಗೆಗೆ ಬಲವಾಗಿ ಹಗ್ಗವನ್ನು ಕಟ್ಟಿ, ಕಳ್ಳರನ್ನು ರಾಜಭಟರು ಬಂಧಿಸಿ ಹೇಗೆ ಕರೆದುಕೊಂಡು ಹೋಗುವರೋ, ಅದರಂತೆ ಇವನನ್ನು ಗಟ್ಟಿಯಾಗಿ ಇವನು ಮಾಡಿದ ಕ್ರೂರಕೃತ್ಯಗಳಿಗಾಗಿ ಬಯ್ಯುತ್ತಾ ಗದರಿಸುವರು. ಅದರಿಂದ ಇವನ ಮನನೊಂದು ಆಗ ತಾನುಮಾಡಿದ್ದು ಪಾಪವೆಂಬುದನ್ನು ತಿಳಿದು ಅವುಗಳನ್ನು ಸ್ಮರಿಸುವನು. ದಾರಿಯಲ್ಲಿ ಭಯಂಕರಗಳಾದ ನಾಯಿಗಳು ಇವನ ದೇಹವನ್ನು ಕಚ್ಚಿಕಿತ್ತು, ಸ್ವಲ್ಪಸ್ವಲ್ಪವಾಗಿ ತಿನ್ನುವವು. ಈ ರೀತಿಯಾಗಿ ಧೃತಿಗೆಟ್ಟು ನೋವಿನಿಂದ ಇವನು ಯಮಲೋಕಕ್ಕೆ ಎಳೆಯಲ್ಪಡುವನು. ದಾರಿಯಲ್ಲಿ ಅನ್ನನೀರುಗಳಿಲ್ಲದೇ ದಾಹ, ಹಸಿವುಗಳಿಂದ ಪೀಡಿತನಾಗಿ, ಸೂರ್ಯನ ತಾಪದಿಂದ ಚೆನ್ನಾಗಿ ಕಾದ ಗಾಳಿಬಡಿತದಿಂದಲೂ, ಕಾದಮರಳಿನ ಸುಡುವಿಕೆಯಿಂದಲೂ ವ್ಯಥೆಪಡುತ್ತಾ, ಬಳಲಿದ್ದರೂ, ಹೊಡೆಯುತ್ತಾ ಎಳೆಯುವರು. ಇವನು, ಅವರು ಎಳೆಯುವ ವೇಗದಿಂದ ಅಲ್ಲಲ್ಲಿ

ಬೀಳುತ್ತಾ ಮೂರ್ಛಿತನಾಗುವನು, ತಿರುಗಿ ಎಚ್ಚರವುಳ್ಳವನಾಗುವನು. ಈ ರೀತಿಯಾಗಿ ಪಾಪಿಗಳು ನರಕಕ್ಕೆ ಪ್ರಯಾಣಮಾಡುವರು.

ಯಮಲೋಕಕ್ಕೆ ಹೋಗುವ ಈ ದಾರಿಯು ತೊಂಭತ್ತೊಂಭತ್ತುಸಾವಿರಗಾವುದದಷ್ಟು ದೂರವಿರುವುದು. ಇದನ್ನು ಮೂರು ಅಥವ ಎರಡು ಮುಹೂರ್ತಗಳಲ್ಲಿಯೇ ಯಮಭಟರು ಜೀವನಯಾತನಾದೇಹ ವನ್ನೆಳೆದುಕೊಂಡು ನಡೆದು ಸೇರುವರು ಅಥವ ಹತ್ತುದಿನಗಳಲ್ಲಿ ಸೇರುವರು. ನರಕವೆಂಬ ಯಮಲೋಕದಲ್ಲಿ ಪಾಪಿಗಳು ತಾವುಮಾಡಿದ ಅನೇಕ ಪಾಪಗಳಿಗನುಸಾರವಾಗಿ ಯಾತನೆಗಳನ್ನನುಭವಿಸಬೇಕಾಗುವುದು. ಅಲ್ಲಿ ಪಾಪಿಯದೇಹವನ್ನು ಮುಳ್ಳುಗಳಿಂದ ಕಟ್ಟಿ ಸುಡುತ್ತಾರೆ. ಅವನಿಂದಲೇ ಅಥವ ಇನ್ನೊಬ್ಬರಿಂದ ಬೇಯಿಸಿದ ಅವನ ಮಾಂಸವನ್ನೇ ಅವನ ಆಹಾರಕ್ಕಾಗಿ ಕೊಡುತ್ತಾರೆ. ಜೀವಸಹಿತನಾಗಿರುವ ಇವನನ್ನು ನಾಯಿ, ಹದ್ದುಗಳು ಎಳೆದುಕೊಂಡುಹೋಗಿ ತಿನ್ನುತ್ತವೆ. ಸರ್ಪ, ಚೇಳುಗಳು ಅಲ್ಲಿ ಕಾದುಕೊಂಡಿದ್ದು ಭೂಲೋಕದಲ್ಲಿ ಇವನು ತಮಗೆ ಕೊಟ್ಟ ಹಿಂಸೆಯನ್ನು ಸ್ಮರಿಸಿಕೊಂಡು ಇವನನ್ನು ಕಚ್ಚುವವು.

ಯಮಭಟರು ಒಂದೊಂದವಯವವಾಗಿ ತುಂಡುಮಾಡುವರು. ಆನೆಯಿಂದ ತುಳಿಸಿ, ಓಡಿಸುವರು. ಬೆಟ್ಟದಿಂದ ಕೆಳಗೆ ತಳ್ಳುವರು. ಕೈಕಾಲ್ಕಟ್ಟಿ ಆಳವಾದ ಭಾವಿಗೆ ಹಾಕುವರು. ಇವುಗಳಲ್ಲದೆ ತಾಮಿಸ್ರ, ಅಂಧತಾಮಿಸ್ರ, ರೌರವಾದಿನರಕಗಳನ್ನೂ ಕೇವಲ ಕುಟುಂಬ, ಉದರಪೋಷಣೆಮಾಡಿಕೊಂಡು ಪರಮಾತ್ಮನಲ್ಲಿ ಭಗವದ್ಭಕ್ತಿ ಮುಂತಾದ ಸ್ವಧರ್ಮಾಚರಣೆಗಳನ್ನು ಮಾಡದೇ ವೃಥಾ ಜೀವನಮಾಡುವ ಜನರು ಅನುಭವಿಸುತ್ತಾರೆ.

ಇಷ್ಟೊಂದು ಯಮಲೋಕದ ನರಕಯಾತನೆಗಳನ್ನೇನು ವರ್ಣಿಸಬೇಕು? ಇಲ್ಲಿಯೇ ಆ ಎಲ್ಲಾನರಕಾನುಭವಗಳೂ ನಡೆಯುತ್ತಿರುವುದು ಜ್ಞಾನಿಗಳದೃಷ್ಟಿಗೆ ಗೋಚರವಾಗಿರುತ್ತವೆ. ಈ ರೀತಿಯಾಗಿ ನ್ಯಾಯದಿಂದಲೋ ಅನ್ಯಾಯದಿಂದಲೋ ದ್ರವ್ಯಾರ್ಜನೆಮಾಡಿ, ತನ್ನ ಕುಟುಂಬ ಉದರಪೋಷಣೆಯಲ್ಲಿಯೇ ನಿರತರನಾದವನು ತನ್ನ ದೇಹಬಿಟ್ಟನಂತರ ಯಮಯಾತನೆಗೆ ಗುರಿಯಾಗುತ್ತಾನೆ. ಆಗ ತನ್ನ ಪೋಷಕವರ್ಗವನ್ನೂ, ತನ್ನ ದೇಹವನ್ನೂ ಇಲ್ಲಿಯೇ ಬಿಟ್ಟು ಒಂಟಿಯಾಗಿಯೇ ಅವನು ಈ ಕಷ್ಟ, ದುಃಖಪರಂಪರೆಗಳಿಗೆ ಈಡಾಗುತ್ತಾನೆ. ಇದು ನ್ಯಾಯವಾದ ಧನಾರ್ಜನೆಯಿಂದ ಕುಟುಂಬ, ಉದರಪೋಷಣೆ ಮಾತ್ರ ಮಾಡತಕ್ಕವನಿಗೆ ಉಂಟಾಗತಕ್ಕ ವಿಪತ್ತುಗಳು.

ಅನ್ಯಾಯದಿಂದ ಧನಾರ್ಜನೆಯನ್ನು ಮಾಡಿ, ಪ್ರಾಣಿಹಿಂಸಕನಾಗಿ, ತನ್ನ ಕುಟುಂಬ ಉದರಪೋಷಣೆ

ಮಾಡುವವನು, ನರಕಗಳಲ್ಲೆಲ್ಲಾ ಘೋರವಾದ, ಅಂತ್ಯನರಕವಾದ ಅಂಧತಾಮಿಸ್ರ ನರಕವನ್ನೇ ಹೊಂದುವನು. ಭೂಲೋಕದ ಕೆಳಭಾಗದಲ್ಲಿರುವ ಈ ಯಮಲೋಕದ ನರಕಗಳಲ್ಲಿ ಸ್ವಕರ್ಮಾನುಸಾರ ನರಕದುಃಖಗಳನ್ನನುಭವಿಸಿ, ಪುನಃ ಆ ಪಾಪಕರ್ಮಗಳ ಫಲಾನುಭವರೂಪ, ಯಾತನಾನುಭವಗಳ ತರುವಾಯ ಅವನು ಪಾಪದಿಂದ ಮುಕ್ತನಾಗಿ, ಪುನಃ ಭೂಲೋಕದಲ್ಲಿಯೇ ಹುಟ್ಟುತ್ತಾನೆ. ಆಗ ಅವನು ಶುದ್ಧನಾಗಿರುತ್ತಾನೆ. ಆದುದರಿಂದ ಮನುಷ್ಯದೇಹವು ಬಂದಾಗ, ಪರಮಾತ್ಮನಲ್ಲಿ ಭಕ್ತಿಯನ್ನು ಪಡೆಯುವುದಕ್ಕಾಗಿ, ವೇದೋಕ್ತಶಾಸ್ತ್ರಜನ್ಯಜ್ಞಾನಪಡೆದು, ಸತ್ಕರ್ಮಾನುಷ್ಠಾನಗಳನ್ನು ಮಾಡಿ, ಪರಮಾತ್ಮನನ್ನು ಭಕ್ತಿಯಿಂದ ಆರಾಧಿಸಿ ಮೋಕ್ಷಕ್ಕಾಗಿ ಪ್ರಯತ್ನಿಸಿ ಸಾಧನೆಗಳನ್ನು ಮಾಡಬೇಕು. ಹಾಗೆಮಾಡದೆ ಕೇವಲ ಕುಟುಂಬ, ಉದರಪೋಷಣೆಗಾಗಿ ಧನಗಳಿಸಿ ಇಂದ್ರಿಯಾರಾಮರಾಗಿ ಜೀವಿಸುತ್ತಾ, ವಿಹಿತಕರ್ಮಧರ್ಮಾಚರಣೆಗಳನ್ನೂ, ದೇವರಲ್ಲಿ ಭಕ್ತಿಯನ್ನು ಬಿಡುವುದೇ, ಸಕಲನರಕಗಳನ್ನೂ ಹೊಂದುವುದಕ್ಕೆ ಬೇಕಾದ ಸಾಧಗಳಾಗಿವೆಯೆಂದು ನಿರೂಪಿಸಲ್ಪಟ್ಟಿತು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಮೂವತ್ತೊಂದನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ द्वात्रिंशोऽध्यायः

**भगवानुवाच**

कर्मणा दैवतन्त्रैण जन्तुर्देहोपपत्तये ।
स्त्रियाः प्रविष्ट उदरं पुंसो रेतःकणाश्रयः ॥ १ ॥

कलिलं त्वेकरात्रैण पञ्चरत्रेण बुद्बुदम् ।
दशाहेन तु ककन्धुः पेश्यण्डं वा ततः परम् ॥ २ ॥

मासेन तु शिरो द्वाभ्यां बाह्वङ्घ्र्याद्यङ्गविग्रहः ।
नखरोमास्थिचर्माणि लिङ्गच्छिद्रोद्भवस्त्रिभिः ॥ ३ ॥

चतुर्भिर्धातवः सप्त पञ्चभिः क्षुत्तृडुद्भवः ।
ष---भिर्जरायुणा वीतः कुक्षौ भ्रमति दक्षिणे ॥ ४ ॥

सप्तमे जन्मकर्माणि गतानि स्मरते ऋषिः ।
जगत्यां यानि देवस्य मायया बन्धमात्मनः ॥ ५ ॥

मातुर्जग्धान्नपानाद्यैरेधत्यातुरसम्मतः ।
आस्ते विण्मूत्रयोर्गर्ते सजन्तुर्जन्तुसम्भवे ॥ ६ ॥

कृमिभिः क्षतकण्---वङ्गः सौकुमार्यात् प्रतिक्षणम् ।
मूर्च्छामाप्नोत्युरुक्लेशस्तत्रत्यैः क्षुधितैर्मुहुः ॥ ७ ॥

कटुतीक्ष्णोष्णलवणक्षाराम्लादिभिरुल्बणैः ।
मातृभुक्तैरुपस्पृष्टः सर्वाङ्गोत्थितवेदनः ॥ ८ ॥

उल्बेन संवृतस्तस्मिन्नान्त्रैश्च बहिरावृतः ।
आस्ते कृत्वा शिरः कुक्षौ भुग्नपृष्ठशिरोधरः ॥ ९ ॥

अकल्पः स्वाङ्गचेष्टायां शकुन्त इव पञ्जरे ।
तत्र लब्धस्मृतिर्दैवात् कर्म जन्मशतोद्भवम् ।
स्मरन् दीर्घमनुष्वासं गर्भे किं नाम विन्दते ॥ १० ॥

आरभ्य सप्तमान्मासाल्लब्धबोधोऽपि वेपितः ।
नैकत्रास्ते सूतिवातैर्विष्ठाभूरिव सोदरः ॥ ११ ॥

नाथमानो ऋषिर्भीतः सप्तवध्रिः कृताञ्जलिः ।
स्तुवीत तं विक्लवया वाचा येनोदरेऽर्पितः ॥ १२ ॥

**जीव उवाच**

तस्योपसन्नमवितुर्जगदिच्छयाऽऽत्तलीलातनोर्भुवि लसच्चरणारविन्दम् ।
सोऽहं व्रजामि शरणं नकुतोभयं मे येनेदृशी गतिरदर्श्यसतोऽनुरूपा ॥ १३ ॥

यस्त्वत्र बद्ध इव कर्मभिरावृतात्मा भूतेन्द्रियाशयमयीमवलम्ब्य मायाम् ।
आस्ते विशुद्धमविकारमखण्डबोधमातप्यमानहृदयेऽवसितं तमेमि ॥ १४ ॥

यः पञ्चभूतरचिते रहितः शरीरे छन्नो यथेन्द्रियगुणार्थविदात्मकोऽहम् ।
तेनाविकुण्ठमहिमानमृषिं तमेनं वन्दे परं प्रकृतिपूरुषयोः पुमांसम् ॥ १५ ॥

यन्माययोरुगुणकर्मनिबन्धनेऽस्मिन् सांसारिके पथि चरंस्तदतिश्रमेण ।
नष्टस्मृतिः पुनरयं प्रवृणीत लोको युक्त्या कया महदनुग्रहमन्तरेण ॥ १६ ॥

ज्ञानं यदेतददधात् कतमः स देवस्त्रैकालिकं स्थिरचरेष्वनुवर्तितांशः ।
तं जीवकर्मपदवीमनुवर्तमानास्तापत्रयोपशमनाय वयं भजेम ॥ १७ ॥

देह्यन्यदेहविवरे जठराग्निनाऽसृग्विण्मूत्रकूपपतितो भृशतप्तदेहः ।
इच्छन्नितो विवसितुं गणयन् स्वमासान् निर्वास्यते कृपणधीर्भगवन् कदा नु ॥ १८ ॥

येनेदृशीं मतिमसौ दशमास्य ईश सङ्ग्राहितः पुरुदयेन भवादृशेन ।
स्वेनैव तुष्यतु कृतेन स दीननाथः को नाम तत्प्रति विनाऽञ्जलिमस्य कुर्यात् ॥ १९ ॥

पश्यत्ययं धिषणया ननु सप्तवध्रिः शारीरभेदमशरीरवदस्य देहे ।
यद्दत्तया स तमहं पुरुषं पुराणं पश्ये बहिर्हृदि च चैत्त्यमिव प्रतीतम् ॥ २० ॥

सोऽहं वसन्नपि विभो बहुदुःखवासं गर्भान्न निर्जिगमिषे बहिरन्धकूपे ।
यत्रोपयातमुपसर्पति देवमाया मिथ्यामतिर्यदनु संसृतिचक्रमेतत् ॥ २१ ॥

तस्मादहं विगतविक्लव उद्धरिष्य आत्मानमाशु तमसः सुहृदात्मनैव ।
भूयो यथा व्यसनमेदतनेकरन्ध्रं मा मे भविष्यदुपसादितविष्णुपादः ॥ २२ ॥

**भगवानुवाच**

एवं कृतमतिं गर्भे दशमास्यं सपद्यृषिम् ।
सद्यः क्षिपत्यवाचीनं प्रसूत्यै सूतिमारुतः ॥ २३ ॥

तेनोपसृष्टः सहसा कृत्वाऽवाक् शिर आतुरः ।
विनिष्क्रामति कृच्छ्रेण निरुच्छ्वासो गतस्मृतिः ॥ २४ ॥

पतितो भुव्यसृङ्मूत्रे विष्ठाभूरिव चेष्टते ।
रोरूयति गतज्ञानो विपरीतां गतिं गतः ॥ २५ ॥

परच्छन्दं नविदुषा पुष्यमाणो जनेन सः ।
अनभिप्रेतमापन्नः प्रत्याख्यातुमनीश्वरः ॥ २६ ॥

शायितोऽशुचिपर्यङ्के जन्तुः स्वेदजदूषिते ।
नेशः कण्डूयनेऽङ्गानामासनोत्थानचेष्टने ॥ २७ ॥

तदुन्त्यामत्वचं दंशा मशका मत्कुणादयः ।
रुदन्तं विगतज्ञानं कृमयः कृमिकं यथा ॥ २८ ॥

स त्वेवं शैशवं भुक्त्वा दुःखं पौगण्डमेव च।
अलब्धाभीप्सितोऽज्ञानादिद्धमन्युः शुचाऽर्पितः॥ २९ ॥

सह देहेन मानेन वर्धमानेन मन्युना।
करोति विग्रहं कामी कामिष्वन्ताय चात्मनः॥ ३० ॥

भूतैः पञ्चभिरारब्धे देहे देह्यबुधोऽसकृत्।
अहंममेत्यसाहां करोति कुमतिर्मतिम्॥ ३१ ॥

तदर्थं कुरुते कर्म यद्बद्धो याति संसृतिम्।
तमो विशति यद्बद्धो येनासौ मर्त्यजन्मनि॥ ३२ ॥

येन यातीदृशं क्लेशमविद्याकर्मबन्धनम्॥ ३३ ॥

यद्यसद्भिः पथि पुनः शिश्नोदरकृतोद्यमैः।
आस्थितो रमते जन्तुस्तमो विशति पूर्ववत्॥ ३४ ॥

सत्यं शौचं दया मौनं बुद्धिः श्रीर्ह्रीर्यशः क्षमा।
शमो दमो भगश्चेति यत्सङ्गाद् याति संक्षयम्॥ ३५ ॥

तेष्वशान्तेषु मूढेषु खण्डितात्मावसायिषु।
सङ्गं न कुर्याच्छोच्येषु योषित्क्रीडामृगेषु च॥ ३६ ॥

न तथाऽस्य भवेन्मोहो बन्धश्चान्यप्रसङ्गतः।
योषित्सङ्गाद् यथा पुंसां यथा तत्सङ्गिसङ्गतः॥ ३७ ॥

प्रजापतिर्दुहितरं दृष्ट्वा तद्रूपधर्षितः।
रोहिद्भूतां सोऽन्वधावद् ऋष्यरूपी गतत्रपः॥ ३८ ॥

तत्सृष्टिसृष्टसृष्टेषु कोन्वखण्डितधीः पुमान्।
ऋषिं नारायणमृते योषिन्मय्येह मायया॥ ३९ ॥

बलं मे पश्य मायायाः स्त्रीमय्या जयिनो दिशाम्।
या करोति निजायत्तान् भ्रूविजृम्भेण केवलम्॥ ४० ॥
सङ्गं न कुर्यात् प्रमदासु जातु योगस्य पारं परमारुरुक्षुः।

मत्सेवया प्रतिलब्धात्मलाभो वदन्ति यां निरयद्वारमस्य ॥ ४१ ॥

योपयाति शनैर्माया योषिद् देवविनिर्भिता ।
तामीक्षेतात्मनो मृत्युं तृणैः कूपमिवावृतम् ॥ ४२ ॥

यां मन्यते पतिर्मोहान्मन्मायामृषभायतीम् ।
स्त्रीत्वं स्त्रीसङ्गतः प्राप्तां वित्तापत्यगृहप्रदाम् ॥ ४३ ॥

तमात्मनो विजानीयाद् भृत्यापत्यगृहात्मकम् ।
दैवोपसादितं मृत्युं मृगयोर्गायनं यथा ॥ ४४ ॥

देहेन जीवभूतेन लोकाल्लोकमनुव्रजन् ।
भुञ्जान एव कर्माणि करोत्यविरतं पुमान् ॥ ४५ ॥

जीवो यस्यानुगो देहो भूतेन्द्रियमनोमयः ।
तन्निरोधोऽस्य मरणमाविर्भावस्तु सम्भवः ॥ ४६ ॥

द्रव्योपलब्धिस्थानस्य द्रव्येक्षाऽयोग्यता यदा ।
तत् पञ्चत्वमहंमानादुत्पत्तिर्द्रव्यदर्शनम् ॥ ४७ ॥

यथाऽक्ष्णोर्द्रव्यावयवदर्शनायोग्यता यदा ।
तदैव चक्षुषो द्रष्टुर्द्रष्टृत्वं योग्यताऽनयोः ॥ ४८ ॥

पुंसो यथैवेन्द्रियाणि विन्दन्ति स्वगतं परम् ।
सुखं दुःखं नान्यगतं तथेशांशाः पृथक्कलाः ॥ ४९ ॥

आत्मनः केवलं ज्ञानमर्थो देहाद्यसङ्गिनः ।
सुखदुःखादयो भावा न देहस्य न चात्मनः ॥ ५० ॥

तस्मान्न कार्यः सन्त्रासो न कार्पण्यं न सम्भ्रमः ।
बुद्ध्वा जीवगतिं धीरो मुक्तसङ्गश्चरेदिह ॥ ५१ ॥

सम्यग्दर्शनया बुद्ध्या योगवैराग्ययुक्तया ।
मायाविरचिते लोके चरेद् यस्य कलेवरम् ॥ ५२ ॥

**॥ इति श्रीमद्भागवते (तृतीयस्कन्धे(*3) द्वात्रिंशोऽध्यायः ॥**

॥ ಮೂವತ್ತೆರಡನೆಯ ಅಧ್ಯಾಯ ॥

## ಮಾನುಷ ದೇಹ ಪ್ರಾಪ್ತಿಯ ವಿವರಣೆ :-

ಹಿಂದಿನ ಅಧ್ಯಾಯದಲ್ಲಿ, ಕೇವಲ ಕುಟುಂಬ, ಉದರಪೋಷಣೆಗಳಲ್ಲಿಯೇ ಆಸಕ್ತರಾಗಿ, ಸ್ವವರ್ಣಾಶ್ರಮಧರ್ಮ ಕರ್ಮಗಳನ್ನು ಆಚರಿಸದೇಬಿಟ್ಟು, ದೇವರಲ್ಲಿ ಭಕ್ತಿಜ್ಞಾನಗಳನ್ನು ಸಂಪಾದಿಸದೇ ಇರತಕ್ಕವರು, ದುಷ್ಟಸ್ವಭಾವವುಳ್ಳವರೆಂದೂ, ದುಷ್ಟಕರ್ಮಗಳಲ್ಲೇ ನಿರತರೆಂದೂ; ಆ ಕರ್ಮಗಳಫಲವು ನ್ಯಾಯಧರ್ನಾರ್ಜನೆಯಿಂದ ಕೇವಲ, ಭಗವತ್ಪೂಜಾ, ಭಗದ್ಭಕ್ತಿ, ಸತ್ಕರ್ಮಾನುಷ್ಠಾನಗಳಿಲ್ಲದ ಉದರಪೋಷಣೆಯು ಮಾಡುವವರಿಗೆ ನರಕಮಾರ್ಗಕ್ಕೆ ದಾರಿಯಾಗಿ, ಅನೇಕ ದುಸ್ಸಹವಾದ ಯಾತನೆಗಳು ಲಭಿಸುವುದಕ್ಕೆ ಕಾರಣವೆಂದೂ, ಅಧರ್ಮದಿಂದ ದ್ರವ್ಯಾರ್ಜನೆಮಾಡಿ, ಕೇವಲ ತನ್ನ ಮತ್ತು ಕುಂಟುಂಬಗಳ ಹೊಟ್ಟೆಹೊರೆಯುತ್ತಾ, ಇಂದ್ರಿಯಭೋಗಗಳಲ್ಲಿ ನಿರತರಾಗಿ, ಪರಹಿಂಸಕರಾದವರು, ಅತ್ಯಂತ ಘೋರವಾದ ನರಕವಾದ ಅಂಧಂತಮಸ್ಸಿಗೇ ಹೋಗುವರೆಂದೂ; ನರಕಯಾತನೆಗಳು ಕರ್ಮಾನುಸಾರವಾಗಿ ಅನಂತವಿಧಗಳಾಗಿರುವುದರಿಂದ, ಅವುಗಳಲ್ಲಿ ಸಾಧಾರಣವಾಗಿ ಉಂಟಾಗುವ ಕೆಲವು ದುಃಖಗಳನ್ನು ಮಾತ್ರ, ಕಪಿಲದೇವರಿಂದ ದೇವಹೂತೀ ದೇವಿಗೆ, ವಿಷಯಭೋಗಗಳಲ್ಲಿ ಅನರ್ಥಜ್ಞಾನಪ್ರಾಪ್ತಿಗಾಗಿ ವೈರಾಗ್ಯ ಹುಟ್ಟುವುದಕ್ಕಾಗಿಯೂ, ಪರಮಾತ್ಮನಲ್ಲಿ ಜ್ಞಾನಪೂರ್ವಕ ಭಕ್ತಿ ಮಾಡುವುದರಿಂದ ಈ ಅನರ್ಥಗಳು ತಪ್ಪಿ ಇಹಪರಗಳಲ್ಲಿ, ಸುಖವುಂಟಾಗುತ್ತೆಂದೂ ನಿರೂಪಿತವಾಯಿತು.

ಈ ಅಧ್ಯಾಯದಲ್ಲಿ, ಸಂಸಾರಸುಖವು ಅಸಾರವಾದದ್ದೆಂಬ ಜ್ಞಾನದಿಂದ ವೈರಾಗ್ಯ ಉಂಟಾಗುವುದಕ್ಕಾಗಿ, ಯಾವ ದೇಹದಿಂದ ಮನುಷ್ಯನು ಸಂಸಾರಸುಖದುಃಖಗಳನ್ನು ಅನುಭವಿಸುವನೋ, ಆ ದೇಹದ ಗರ್ಭವಾಸಾದಿ ದುಃಖಗಳನ್ನು ಕಪಿಲದೇವರು ನಿರೂಪಿಸುತ್ತಾರೆ:-

ಎಲೈ ಮಾತೆಯೆ! ನರಕಾದ್ಯನುಭವಗಳಿಂದ ದುಷ್ಕರ್ಮಫಲಗಳನ್ನನುಭವಿಸಿ ಜೀವನು ಶುದ್ಧನಾಗಿ, ಪುನಃ ಪರಮಾತ್ಮನ ಇಚ್ಛೆಯಿಂದಲೂ, ದೇವತೆಗಳ ಯಜ್ಞರೂಪ ಹೋಮದಿಂದಲೂ, ಆ ಜೀವನು ಆಕಾಶ, ವಾಯುಮಂಡಲ, ಮೇಘ, ಮಳೆಯದ್ವಾರವಾಗಿ ಪುನಃ ಭೂಲೋಕಕ್ಕೆ ಬಂದು, ತಂದೆಯು ಭಕ್ಷಿಸುವ ಆಹಾರದ ದ್ವಾರ ಅವನನ್ನು ಪ್ರವೇಶಿಸಿ, ನಂತರ ವೀರ್ಯವನ್ನಾಶ್ರಯಿಸಿ ಮಾತೃಗರ್ಭವನ್ನು ಸೇರುವನು. ಒಚಿದನೇ ದಿನ ರಕ್ತಧಾತು ಮಿಶ್ರಿತವಾದ ಕಲಿಲರೂಪದಿಂದಲೂ, ಐದುದಿನಗಳಲ್ಲಿ ರೂಪದಿಂದಲೂ, ಹತ್ತುದಿನಗಳಲ್ಲಿ ಸ್ವಲ್ಪ ಕಠಿಣವಾದ ಮಾಂಸದ ಮುದ್ದೆಯಂತೆಯೂ,

ನಂತರ ಮಾಂಸದುಂಡೆಯಂತೆಯೂ ಆಗುತ್ತಾನೆ. ಒಂದು ತಿಂಗಳಲ್ಲಿ ಆ ಮಾಂಸದುಂಡೆಯೇ ಮುಖದಾಕಾರವಾಗುತ್ತವೆ. ಎರಡು ತಿಂಗಳಲ್ಲಿ ಹೊಟ್ಟೆ ಕೈಕಾಲು ಮುಂತಾದ ಅಂಗಗಳು ಹುಟ್ಟುತ್ತವೆ. ಮೂರುತಿಂಗಳಲ್ಲಿ ಉಗುರು, ಕೂದಲುಗಳು, ಮೂಳೆಗಳೂ, ಚರ್ಮವೂ, ಲಿಂಗಭೇದವೂ ಹುಟ್ಟುತ್ತವೆ. ನಾಲ್ಕು ತಿಂಗಳುಗಳಲ್ಲಿ ಸಪ್ತಧಾತುಗಳು ಹುಟ್ಟುತ್ತವೆ. ಐದನೆಯ ತಿಂಗಳಿಂದ ಹಸಿವು ಬಾಯಾರಿಕೆಗಳು ಹುಟ್ಟುತ್ತವೆ. ಆರನೆಯ ತಿಂಗಳಲ್ಲಿ ಇವನನ್ನು ಜರಾಯುವೆಂಬ ಗರ್ಭಕೋಶವು ಹುಟ್ಟಿ ಮುಚ್ಚುತ್ತದೆ. ಆ ಚೀಲದಲ್ಲಿ ಬಂಧಿತನಾಗಿ ಹೊಟ್ಟೆಯ ದಕ್ಷಿಣಭಾಗದಲ್ಲಿ ಇವನು ಸುತ್ತುತ್ತಿರುತ್ತಾನೆ. ಏಳನೆಯ ತಿಂಗಳಲ್ಲಿ ಆ ಜೀವನು ಜ್ಞಾನಿಯಾಗಿದ್ದರೆ ಅವನಿಗೆ ಪೂರ್ವಜನ್ಮ, ಕರ್ಮಗಳ ಸ್ಮರಣೆಯುಂಟಾಗುತ್ತದೆ. ಪರಮಾತ್ಮನ ಇಚ್ಛಾರೂಪ ಮಾಯೆಯೆನಿಸುವ ಪ್ರಕೃತಿಯ ಬಂಧನಕ್ಕೆ ತಾನು ಪುನಃ ಒಳಗಾದೆನೆಂದು ತಿಳಿಯುತ್ತಾನೆ.

ತಾಯಿಯು ಭುಂಜಿಸಿದ ಅನ್ನಪಾನರಸಗಳ ರಸವನ್ನು, ತಾಯಿಯ ನಾಭೀದ್ವಾರದಿಂದ ಜರಾಯು ಎಂಬ ಚೀಲಕ್ಕೆ ಸಂಬಂಧಿಸಿ ಹೊರಟ ಆಪ್ಯಾಯಿನೀ ಎಂಬ ಕೊಳವಿಯದ್ವಾರವಾಗಿ, ತನ್ನ ಬಾಯಿಯ ಸಮೀಪದವರಿಗೂ ಬಂದಿರುವ ನಾಳದದ್ವಾರ, ಆಹಾರರಸವನ್ನು ರೋಗಿಯು ಹೇಗೆ ಇತರರಿಂದ ಆಹಾರಸ್ವೀಕಾರ ಮಾಡುವನೋ ಅದರಂತೆ ಸ್ವೀಕರಿಸಿ ಜೀವಿಸುವನಾಗುತ್ತಾನೆ. ಅದರಿಂದ ಬೆಳೆಯುತ್ತಾನೆ. ಆ ಜರಾಯುಕೋಶದಲ್ಲಿ, ಮೂತ್ರಪುರೀಷಗಳಿಂದಲೂ, ಕ್ರಿಮಿಕೀಟಗಳ ಬಾಧೆಯಿಂದಲೂ, ಆವೃತನಾಗಿ, ತಾಯಿಯು ತಿಂದ ಖಾರ, ಹುಳಿ, ಉಪ್ಪು ಮುಂತಾದವುಗಳ ಬಾಧೆಯಿಂದಲೂ, ಮೃದುವಾದ ತನ್ನ ಶರೀರದಲ್ಲಿ ಬಹಳ ಯಾತನೆಗಳುಳ್ಳವನಾಗಿ, ಅದನ್ನು ಸಹಿಸಲಾರದೇ ಮೂರ್ಛಿಸುತ್ತಾ, ಎಚ್ಚರವಾಗುತ್ತಾ, ಅನೇಕ ಕ್ರಿಮಿಗಳ ನಡುವೆ ತಾನೂ ಒಂದು ಕ್ರಿಮಿಯಂತೆ, ಅಸಹ್ಯದ ಮಧ್ಯೆಬಿದ್ದು, ಚಲನೆಗೂ ಶಕ್ತಿಇಲ್ಲದೆ, ಗರ್ಭವಾಸ ಮಾಡುತ್ತಾನೆ. ಜರಾಯುಕೋಶದಲ್ಲಿ ಬಂಧಿತನಾದ ಇವನ ತಲೆಯು ಹೊಟ್ಟೆಯಮೇಲೆ ಹುದಿದು, ಪೃಷ್ಠಭಾಗವು ಮೇಲ್ಮುಖವಾಗಿ, ಕೈಕಾಲುಗಳೂ ಚಲಿಸದಂತೆ ಹೊಟ್ಟೆಯಭಾಗದಲ್ಲಿ ಬಂದಿತವಾಗಿ ನಿಶ್ಚೇಷ್ಟನಾಗಿ ನರಳುತ್ತಿರುವಾಗ, ಪರಮಾತ್ಮನ ದಯದಿಂದ ಇವನಿಗೆ ಇವನು ಭಗವದ್ಭಕ್ತನಾದ ಯೋಗಿಯಾಗಿದ್ದರೆ ಹಿಂದಿನ ನೂರುಜನ್ಮಗಳ ಸ್ಮರಣೆಗಳು ಉಂಟಾಗಿ, ಆ ಜನ್ಮಗಳಲ್ಲಿ ತಾನುಮಾಡಿದ ಕರ್ಮಗಳನ್ನು ನೆನೆದುಕೊಂಡು, ಇಂತಹ ಕಷ್ಟದುಃಖಗಳನ್ನನುಭವಿಸಬೇಕಾದ ಮಾತೃಗರ್ಭಕ್ಕೆ ಇನ್ನು ಎಂದೆಂದಿಗೂ ಬರದಿರುವುದಕ್ಕಾಗಿ, ಸೃಷ್ಟಿಕರ್ತನಾದ ಆ ಪರಮಾತ್ಮನನ್ನೇ ಮೊರೆಹೋಗುವೆನೆಂದು ಭಾವಿಸಿ, ದೇವರನ್ನು ಈ ರೀತಿಯಾಗಿ ಸ್ತೋತ್ರಮಾಡುತ್ತಿರುತ್ತಾನೆ:-

## ಗರ್ಭಸ್ಥನಾದ ಸುಜೀವಿಯ ಚಿಂತನೆ :-

ಯಾವ ಪರಮಾತ್ಮನು ತನ್ನ ದಯೆಯೆಂಬ ಭಕ್ತಾನುಗ್ರಹೇಚ್ಛೆಯಿಂದ ನನಗೆ ಈಗ, ಈ ಗರ್ಭವಾಸದಲ್ಲಿ ಕ್ರಿಮಿಸದೃಶನಾಗಿ, ಕ್ರಿಮಿಗಳಿಂದ ಕೂಡಿದ ಮೂತ್ರಪುರೀಷಗುಂಡಿಯಂತಿರುವ ಈ ಮಾತೃಗರ್ಭದಲ್ಲಿ ಪ್ರವಿಷ್ಟನಾಗಿರುವೆನೆಂಬ ಜ್ಞಾನವನ್ನು ಕೊಟ್ಟಿರುತ್ತಾನೋ ಮತ್ತು ನನಗೆ ಹಿಂದಿನ ನೂರುಜನ್ಮಗಳಲ್ಲಿ ಮಾಡಿದ ಕರ್ಮಗಳ ನೆನಪನ್ನೂ ಕೊಟ್ಟು, ನನ್ನ ಪಾಪಕರ್ಮಗಳಿಗಾಗಿ ನಾನು ಪಶ್ಚಾತ್ತಾಪಪಟ್ಟು ಈ ಗರ್ಭವಾಸದಿಂದ ಹೊರಗೆ ಹೋಗುವುದಕ್ಕಾಗಿಯೂ, ನಂತರ ನನ್ನ ಉದ್ಧಾರಕ್ಕಾಗಿಯೂ ತನ್ನನ್ನು ಸ್ತುತಿಸುವಂತೆ ಪ್ರೇರಿಸುತ್ತಿರುವನೋ, ಆ ಪರಮಾತ್ಮನ ಚರಣಕಮಲಗಳನ್ನೇ ಈಗ ನಾನು ಮೊರೆಹೋಗುವೆನು. ಸಕಲ ಭೂತದಯಾಪರನಾದ ಸ್ವಾಮಿಯೇ ಸಕಲರಿಗೂ ಅಭಯವನ್ನು ಕೊಡುವವನಾದುದರಿಂದ, ಪರಮಾತ್ಮನನ್ನು ಆಶ್ರಯಿಸಿದ ನನಗೆ ಈಗ ಗರ್ಭವಾಸ ಪ್ರಾಪ್ತಿಯಾಗಿದ್ದರೂ, ಪರಮಾತ್ಮನ ಕರುಣದಿಂದ ಇದೇ ಸಕಲಭಯನಿವೃತ್ತಿಗೂ ಕಾರಣವೆಂದು ತಿಳಿದು ನಿರ್ಭಯನಾಗಿರುತ್ತೇನೆ.

ಈಗ ಗರ್ಭವಾಸ ದುಃಖವು ನನಗೆ ಈಗ ಹಿಂದೆ ಮಾಡಿದ ದುಷ್ಟಕರ್ಮಗಳ ಫಲವಾಗಿ ಪುನಃ ಪ್ರಾಪ್ತವಾಗಿದೆ. ಭಕ್ತರ ಉದ್ಧಾರಕ್ಕಾಗಿಯೇ ಪರಮಾತ್ಮನು ಮತ್ಸ್ಯಾದಿ, ಕೇಶವಾದಿ, ವಿಶ್ವಾದಿ, ಚರಾದಿ ಅನಂತ ಲೀಲಾವಿಗ್ರಹರೂಪಗಳನ್ನು ಧರಿಸಿ ಅವತಾರಮಾಡುತ್ತಾನೆ. ಭೂತೇಂದ್ರಿಯ ಮನಸ್ಸು, ಜೀವರುಗಳಿಂದ ಕೂಡಿದ ಪ್ರಕೃತಿಯನ್ನು ತನ್ನ ಅಧೀನವಾಗಿ ಮಾಡಿಕೊಂಡಿರುವ ಸ್ವತಂತ್ರನಾದ ಆ ಪರಮಾತ್ಮನು, ಪಾಪಪುಣ್ಯಕರ್ಮಪ್ರವರ್ತಕನಾದ ಜೀವನಿಗೆ, ಪ್ರಾಕೃತಸ್ಥೂಲದೇಹವನ್ನು ಕೊಟ್ಟು, ಜೀವನಿಗೆ ಪ್ರವೃತ್ತಿಶಕ್ತಿ ಕೊಡುವುದಕ್ಕಾಗಿ ಜೀವನಾದ ನನ್ನನ್ನೂ ಈ ಸ್ಥೂಲದೇಹದಲ್ಲಿರಿಸಿ, ತಾನೂ ಅಂತರ್ಯಾಮಿಯಾಗಿ ಇರುತ್ತಾನೆಂಬುದು ನನ್ನ ಜ್ಞಾನದಿಂದ ತಿಳಿದುಬರುತ್ತದೆ. ಆದರೆ ಈ ಶಿಶುಶರೀರದಲ್ಲಿ ನಾನು ಬದ್ಧನಾಗಿಯೂ, ದುಃಖಿಯಾಗಿಯೂ, ವಿಕಾರಸಹಿತನಾಗಿಯೂ ಇರುವೆನು. ಪರಮಾತ್ಮನು ಸ್ವತಂತ್ರನಾಗಿಯೂ, ಸ್ವಾಮಿಯಾಗಿಯೂ, ಪೂರ್ಣಸುಖಿಯಾಗಿಯೂ, ನಿರ್ವಿಕಾರನಾಗಿಯೂ ಇರುವನು. ನಾನು ಅಜ್ಞಾನಿಯಾಗಿಯೂ, ತಾಪತ್ರಯದಿಂದ ಕೂಡಿದವನಾಗಿಯೂ ಇರುತ್ತೇನೆ. ಪರಮಾತ್ಮನು ಅಖಂಡಪೂರ್ಣಜ್ಞಾನಸಂಪನ್ನನಾಗಿಯೂ, ನನಗೆ ಜ್ಞಾನದಾತನಾಗಿಯೂ, ತಾಪತ್ರಯ ರಹಿತನಾಗಿಯೂ, ನನ್ನಿಂದ ಪೂರ್ಣವಿಲಕ್ಷಣನಾಗಿ, ನನ್ನ ಹೊರಗೂ ಒಳಗೂ ಪ್ರಕಾಶಿಸುತ್ತಾ ಜ್ಞಾನಗೋಚರನಾಗಿರುತ್ತಾನೆ. ಇಂತಹ ನನ್ನ ಹೃತ್ಕಮಲದಲ್ಲಿಯೇ ವಾಸವಾಗಿರುವ ಸರ್ವೇಶ್ವರಸ್ವಾಮಿಗೆ ನಮಸ್ಕಾರ ಮಾಡುತ್ತೇನೆ.

ಈ ಪಂಚಭೂತಾತ್ಮಕ ಶರೀರದಲ್ಲಿ ಮನಸ್ಸು ಮೊದಲಾದ ಏಕಾದಶೇಂದ್ರಿಯಗಳಿಂದ ಸಹಿತನಾಗಿ ನಾನು ಮುಚ್ಚಲ್ಪಟ್ಟಿದ್ದೇನೆ. ಬಂಧಿತನಾಗಿದ್ದೇನೆ. ಈ ಇಂದ್ರಿಯಗಳಿಂದ ನಾನು ಶಬ್ದಾದಿವಿಷಯಗಳನ್ನು ತಿಳಿಯುವನಾಗುತ್ತೇನೆ. ಪರಮಾತ್ಮನು, ಈ ದೇಹದಲ್ಲಿ ದೇಹಸ್ವಾಮಿಯಾಗಿಯೂ, ಇಂದ್ರಿಯಾದಿತತ್ವಗಳ, ವಿಷಯಾದಿಗಳ ಸ್ವರೂಪವನ್ನು ಚೆನ್ನಾಗಿ ತಿಳಿದವನಾಗಿಯೂ, ಅವುಗಳಿಗೆ ಪ್ರೇರಕನಾಗಿಯೂ, ನಿರ್ಲಿಪ್ತನಾಗಿಯೂ ಇರುತ್ತಾನೆ. ಇಂತಹ ಪ್ರತ್ಯಕ್ಷನಾಗಿರುವ ಶ್ರೀಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ಲಕ್ಷ್ಮೀಬ್ರಹ್ಮರುಗಳಿಗಿಂತ ಅತ್ಯಂತ ಉತ್ಕೃಷ್ಟನಾದ ಈ ಪರಮಾತ್ಮನ ಅನುಗ್ರಹದಿಂದಲ್ಲದೆ ಯಾರುತಾನೇ, ಪ್ರಕೃತಿಬಂಧನವೆಂಬ ಸಂಸಾರದಲ್ಲಿ ಬಿದ್ದು, ತಾಪತ್ರಯಗಳಿಂದ ಬೆಂದು, ಅಜ್ಞಾನಕ್ಕೊಳಗಾಗಿ, ಪರಮಾತ್ಮನ ವಿಸ್ಮರಣೆಯನ್ನು ಹೊಂದಿ, ದೇಹಾತ್ಮಭ್ರಮೆಯಿಂದ ಉದರಪೋಷಣೆಯಲ್ಲಿ ನಿರತನಾದವನು, ಈ ಅಜ್ಞಾನದಿಂದ ತಪ್ಪಿಸಿಕೊಂಡು ತನ್ನನ್ನು ಉದ್ಧಾರಮಾಡುವ ಪರಮಾತ್ಮನನ್ನು ಮೊರೆಹೋಗಲು ಪ್ರಯತ್ನಿಸಾನು?

ಪರಮಾತ್ಮನ ಅನುಗ್ರಹದಿಂದಲೆ ಪರಮಾತ್ಮವಿಷಯಕಜ್ಞಾನವೂ, ಅವನಲ್ಲಿ ಭಕ್ತಿಯೂ ಲಭಿಸುವುದು. ಪೂರ್ಣಸುಖ ಜ್ಞಾನಾತ್ಮನಾದ ಪರಮಾತ್ಮನ ಪರಮಾನುಗ್ರಹದಿಂದಲೇ ಈಗ ನನಗೆ ಹಿಂದಿನ ಜನ್ಮಗಳ ತ್ರಿಕಾಲಜ್ಞಾನವು ಉಂಟಾಗಿರುವದು. ಇಂತಹ ಕರುಣಾಳುವಾದ ನನ್ನ ಅಂತರ್ಯಾಮಿಯೇ, ಅನಂತಾನಂತರೂಪಗಳಿಂದ ಸರ್ವರಲ್ಲಿಯೂ ಅಂತರ್ಯಾಮಿಯಾಗಿರುವನು. ಈ ರೀತಿಯಾಗಿ ಸರ್ವಜೀವರಿಗೂ ಅವರವರ ಸ್ವಭಾವಗಳಲ್ಲಿ ಪ್ರವೃತ್ತಿಶಕ್ತಿಯನ್ನು ಕೊಡುವ ಸರ್ವಭೂತಾತ್ಮನಾದ ಆ ಪರಮಾತ್ಮನನ್ನೇ, ನಮ್ಮ ತಾಪತ್ರಯಗಳ ಪರಿಹಾರಕ್ಕಾಗಿ ನಮಸ್ಕರಿಸಿ ಮೊರೆಹೋಗೋಣ.

ಸ್ವಾಮಿಯೆ! ದೇಹದಿಂದ ಕೂಡಿದ ಈ ನಾನು, ಅನ್ಯದೇಹದ ಏಕದೇಶವೆಂಬ ಈ ಮೂತ್ರಭರಿತವಾದ ತಾಯಿಯಗರ್ಭವೆಂಬ ನರಕದಲ್ಲಿ ಬಿದ್ದು, ಬಹುಕ್ಲೇಶ, ಯಾತನೆಪಡುತ್ತಾ ಈ ಗರ್ಭವಾಸದಿಂದ ಪಾರಾಗಲು ನಿನ್ನನುಗ್ರಹವನ್ನು ನಿರೀಕ್ಷಿಸುತ್ತಾ, ದಿನಗಳನ್ನೂ ಮಾಸಗಳನ್ನೂ ಎಣಿಸುತ್ತಿರುತ್ತೇನೆ. ನೀನು ಯಾವಾಗ ದಯೆಯಿಂದ ನನ್ನನ್ನು ಗರ್ಭದಿಂದ ಹೊರಗೆ ಹಾಕುತ್ತೀಯೋ ಆ ಕಾಲವು ಬೇಗನೇ ಬರುವಂತಾಗಲೆಂದು ಕಾತುರನಾಗಿರುತ್ತೇನೆ. ಏಳನೆಯ ತಿಂಗಳಿಂದ, ಹತ್ತನೆಯ ತಿಂಗಳ ಪರ್ಯಂತವಾಗಿ, ಈ ದಿವ್ಯಜ್ಞಾನವನ್ನೂ, ನಿನ್ನ ಸ್ಮರಣೆಯನ್ನೂ, ದರ್ಶನವನ್ನು ನನಗೆ ಕರುಣಿಸಿದಂಥ ನಿನ್ನ ಹೊರತು ಬೇರೆಯಾರುತಾನೇ, ಬದ್ಧಾಂಜಲಿಯಿಂದ ಪ್ರಾರ್ಥಿಸುತ್ತಿರುವ ನನ್ನನ್ನು ಗರ್ಭವಾಸದುಃಖದಿಂದ ಪಾರುಮಾಡ್ಯಾರು? ನಿನ್ನ ಈ ಅಸಮವಾದ ಕರುಣೆಗೆ ಪ್ರತ್ಯುಪಕಾರವನ್ನು ನಿನಗೆ ನಮಸ್ಕಾರಮಾಡುವುದಲ್ಲದೆ ಬೇರೆ ಏನುತಾನೇ ನಾವು ಮಾಡಬಲ್ಲೆವು?

ಇಂದ್ರಿಯಗಳಿಂದಲೂ, ದೇಹದಿಂದಲೂ ಕೇವಲ ಸಂಬಂಧಹೊಂದಿ, ಸುಖದುಃಖಿಗಳಾಗಿ ಬಂಧಿತರಾಗಿರುತ್ತೇವೆ. ನೀನು ದೇಹೇಂದ್ರಿಯಗಳೊಳಗೆ ಹೊರಗೆ, ಅವುಗಳ ಸಂಬಂಧವಿಲ್ಲದೇ ಇದ್ದು, ಶುದ್ಧ ಚೈತನ್ಯಸ್ವರೂಪನಾಗಿ, ಸ್ವಪ್ರಕಾಶನಾಗಿ, ಜ್ಞಾನಾನಂದಮಯನಾಗಿ, ನನ್ನ ಒಳಗೂ ಹೊರಗೂ ಪ್ರತ್ಯಕ್ಷನಾಗಿರುವ ನಿನಗೆ ನಮಸ್ಕಾರಗಳು. ಎಲೈ! ಸ್ವಾಮಿಯೆ ನಿನ್ನ ದಿವ್ಯಜ್ಞಾನದಿಂದ ಕೂಡಿರುವನಾನು, ಈ ಹೊಲಸಿನ ಕೂಪವಾದ ತಾಯಿಯ ಉದರದಲ್ಲಿ ದುಃಖಿಸುತ್ತಿದ್ದರೂ, ಹೊರಗೆಹೋದರೆ ಪ್ರಕೃತಿಬಂಧನದಿಂದ ಈ ಜ್ಞಾನವುಹೋಗಿ, ಸಂಸಾರಬಂಧನಕ್ಕೆ ಪುನಃಪುನಃ ಸಿಕ್ಕಿಸುವ ಅಜ್ಞಾನಕ್ಕೆ ಒಳಗಾಗುತ್ತೇನಾದಕಾರಣ, ನಾನು ಇಲ್ಲಿಯೇ ನಿನ್ನನ್ನು ಧ್ಯಾನಿಸುತ್ತಾ ಇರುತ್ತೇನೆ. ಕರುಣಾಪೂರ್ಣನಾದ ನೀನು ನನಗೆ, ನಿನ್ನ ಸಂಕಲ್ಪಾ ನುಸಾರ ಈ ಗರ್ಭವಾಸದಿಂದ ನಾನು ಹೊರಗೆ ಹೋಗಬೇಕಾದರೆ, ಆಗ ಪರಮಾನುಗ್ರಹಮಾಡಿ, ಪುನರ್ಜನ್ಮಗಳು ಬಾರದಂತೆ, ಸಮಸ್ತದುಃಖಪರಿಹಾರಕಗಳಾದ ನಿನ್ನ ಪಾದಕಮಲಗಳಲ್ಲಿ ನಿರಂತರ ಭಕ್ತಿ ಯುಂಟಾಗುವಂತೆಯೂ, ನಿನ್ನನುಗ್ರಹ ಸಂಪಾದನೆಗೆ ಬೇಕಾದ ಸಾಧನಸಂಪತ್ತುಗಳನ್ನೂ ನನಗೆ ಅನುಗ್ರಹಿಸಬೇಕೆಂದು, ನಿನ್ನ ಪಾದಕಮಲಗಳಿಗೆ ನಮಸ್ಕರಿಸುತ್ತೇನೆ ಎಂದು ಜ್ಞಾನಿಜೀವನು ಪರಮಾತ್ಮನನ್ನು ತಾಯಿಯಗರ್ಭದಲ್ಲಿ ಸ್ತೋತ್ರಮಾಡುತ್ತಿರುತ್ತಾನೆ.

## ಜನನಾಂತರದಲ್ಲಿ ಜೀವನ ಅವಸ್ಥೆ:-

ಈ ರೀತಿಯಾಗಿ ಹತ್ತುತಿಂಗಳತನಕ ತಾಯಿಯಗರ್ಭದಲ್ಲಿ, ಜೀವನು ಪರಮಾತ್ಮನನ್ನು ಧ್ಯಾನಿಸುತ್ತಿರುವಾಗ, ಹತ್ತನೆಯತಿಂಗಳಲ್ಲಿ ಸೂತಿಕಾವಾಯುವು ಹುಟ್ಟಿ ತಕ್ಷಣ ಇವನನ್ನು ಗರ್ಭದಿಂದ ಹೊರಕ್ಕೆ ತಳ್ಳುವನು. ಇವನು ಹೊರಗೆ ರಕ್ತ, ಮೂತ್ರಗಳ ಮಧ್ಯದಲ್ಲಿ ಬಂದು ತಲೆಕೆಳಕಾಗಿ, ಯಾತನೆಯಿಂದ ಮೂರ್ಛಿಸುತ್ತಾ, ನಿಟ್ಟುಸುರುಬಿಡುತ್ತಾ ಬೀಳುವನು. ಆಗ ಪುರೀಷದಲ್ಲಿ ವದ್ದಾಡುವ ಕ್ರಿಮಿಯಂತೆ ವದ್ದಾಡುವನು. ಭೂಸ್ಪರ್ಶದಿಂದ ಜ್ಞಾನವುಹೋಗಿ, ಅಜ್ಞಾನವು ಇವನನ್ನು ಆವರಿಸುವದು. ಆಗ ಇವನು ಘಟ್ಟಿಯಾಗಿ ಅಳುವನು. ಇತರರು ಮಾಡುವ ಉಪಚಾರಗಳಿಂದ, ತನಗೆ ಬೇಡದ್ದನ್ನು ನಿರಾಕರಿಸಲು ಶಕ್ತಿಇಲ್ಲದವನಾಗಿ ದುಃಖದಿಂದ ಇವನು ಬೆಳೆಯುತ್ತಾನೆ. ಕೊಳಕಾದ, ಬೆವರವಾಸನೆಯಿಂದ ಕೂಡಿದ ತಗಣೆ, ಸೊಳ್ಳೆಗಳಿಂದ ಆಕ್ರಮಿಸಲ್ಪಟ್ಟ ಹಾಸಿಕೆಯಲ್ಲಿ ಮಲಗಿ, ಅವುಗಳು ಕಡಿದರೆ ಕೆರೆದುಕೊಳ್ಳಲೂ ಆಗದೆ ವ್ಯಥೆಪಡುತ್ತಾನೆ ಮತ್ತು ಸಹಾಯರಹಿತನಾಗಿ ಅಳುತ್ತಾನೆ. ಈ ರೀತಿಯಾಗಿ ತನಗೆ ಬೇಕಾದ್ದು ಸಿಗದೆ, ಬೇಡವಾದದ್ದನ್ನು ಇತರರಿಂದ ಹೊಂದುತ್ತಾ ನಾನಾವಿಧದುಃಖಗಳಿಂದ ಐದುವರ್ಷಗಳತನಕ ಶೈಶವಾವಸ್ಥೆಯನ್ನೂ, ಏಳುವರುಷದತನಕ ಕೌಮಾರಾವಸ್ಥೆಯನ್ನೂ, ಹತ್ತುವರ್ಷಗಳ ತನಕ ಪೌಗಂಡಾವಸ್ಥೆಯನ್ನೂ ಅನುಭವಿಸುವನು.

ದೇಹವು ಬೆಳೆದ ಹಾಗೆಲ್ಲಾ, ದೇಹಾಭಿಮಾನವೂ, ಅಹಂಮಮತಾದಿ ಅಜ್ಞಾನಗಳೂ ವೃದ್ಧಿಹೊಂದುವವು. ನಂತರ ಯೌವ್ವನಾವಸ್ಥೆಯು ಪ್ರಾಪ್ತವಾಗಲು, ಪಂಚಭೂತಾತ್ಮಕವಾದ ತನ್ನ ದೇಹದ ಸ್ವರೂಪವನ್ನೂ, ದೇಹದಲ್ಲಿ ಸ್ವಾಮಿಯಾಗಿರುವ ಪರಮಾತ್ಮನನ್ನೂ ತಿಳಿಯದೆ, ಅಹಂಕಾರದಿಂದ ಕೂಡಿದವನಾಗಿ, ಸ್ತ್ರೀಯರನ್ನು ಮೋಹಿಸಿ ಕಾಮಾತುರನಾಗಿ ಸಂಸಾರದಲ್ಲಿ ಕಟ್ಟಿಬೀಳುತ್ತಾನೆ. ಇದರಿಂದ ತನ್ನ ಮತ್ತು ಕುಟುಂಬಪೋಷಣೆಗಾಗಿ ದುರ್ಮಾರ್ಗಗಳಲ್ಲಿ ಪ್ರವೃತ್ತನಾಗಿ, ಸನ್ಮಾರ್ಗಗಳನ್ನು ತ್ಯಜಿಸುತ್ತಾನೆ. ಇದರಿಂದ ನರಕಸದೃಶಗಳಾದ ತಮೋಗುಣಕಾರ್ಯಗಳಾದ, ಕಾಮಭೋಗ, ಪಾನ, ಭೋಜನಾದಿಗಳಲ್ಲಿ ಆಸಕ್ತನಾಗುತ್ತಾನೆ. ಪರಮಾತ್ಮನನ್ನು ತಿಳಿಯುವುದಕ್ಕಾಗಲೀ, ಆರಾಧಿಸುವುದಕ್ಕಾಗಲೀ ಪ್ರಯತ್ನಿಸದೆ, ಪರಮಾತ್ಮನಲ್ಲಿ ದ್ವೇಷವನ್ನು ಮಾಡುತ್ತಾನೆ. ಇಂತಹವನೇ ಸಕಲನರಕಯಾತನೆಗಳಿಗೂ, ಯಮಲೋಕಶಿಕ್ಷೆಗೂ ಅರ್ಹನಾಗುತ್ತಾನೆ.

ದುಷ್ಟಪ್ರವರ್ತನೆಯಿಂದಲೂ, ಪ್ರಾಣಿಹಿಂಸೆ ಯಿಂದಲೂ, ಇವನು ಕ್ರೂರನಾಗಿ, ನಾನಾವಿಧ ಇಹಪರದುಃಖಗಳನ್ನು ಅದರ ಫಲವಾಗಿ ಹೊಂದುತ್ತಾನೆ. ಇಂತಹ ದುಷ್ಕಾರ್ಯಪ್ರವರ್ತನೆಯು, ಅಹಂಮಮತಾದಿಗಳಿಂದ ಹುಟ್ಟುತ್ತದೆ. ಈ ಅಹಂಮಮತಾದಿಗಳು ಹೋಗಬೇಕಾದರೆ ಇವನಿಗೆ ಅವಿದ್ಯಾಕಾಮೇಚ್ಛೆಯು ಇಲ್ಲದೆ ಸತ್ಯ, ಶೌಚ, ಭೂತದಯೆ, ಮೌನ, ಸದ್ಬುದ್ಧಿ, ಸಂಪತ್ತು, ದಾಕ್ಷಿಣ್ಯ, ಯಶಸ್ಸು, ಕ್ಷಮೆ, ಶಮೆ, ದಮೆ, ಐಶ್ವರ್ಯಗಳೆಂಬ ಸದ್ಗುಣಗಳನ್ನು ಆಚರಿಸುವುದರಿಂದ ನಿವೃತ್ತವಾಗುತ್ತದೆ.

## ಭಗವಂತನ ಬಂಧಕಶಕ್ತಿ

ಸದ್ವೃತ್ತಿಜ್ಞಾನಬಾಹಿರರಾದ ಮೂಢರು, ಯಾವಾಗಲೂ ತೃಪ್ತಿಇಲ್ಲದವರಾಗಿ ಕ್ರೂರರಾಗಿಯೂ, ಸ್ತ್ರೀಯರಕ್ರೀಡಾಮೃಗಗಳಂತೆ ಕಾಮಲೋಲುಪರಾಗುತ್ತಾರೆ. ಸಾಧಕನು ಇಂತಹವರ ಸಹವಾಸ ಮಾಡಬಾರದು. ಸಾಧಕನಿಗೆ ಬುದ್ಧಿಕೆಡಬೇಕಾದರೆ, ದುಷ್ಟಸ್ತ್ರೀಯರ ಸಹವಾಸ, ಸ್ತ್ರೀಕಾಮುಕರ ಸಹವಾಸ, ಇವೆರಡೇ ಪ್ರಬಲಕಾರಣಗಳಾಗಿರುತ್ತವೆ. ಸ್ತ್ರೀಯರು ರೂಪವಂತರಾಗಿದ್ದರೆ ಸಾಕ್ಷಾತ್ ನಾರಾಯಣಋಷಿಯಿಂದ ಬೇರೆಯಾದವನು ಯಾರುತಾನೇ ಮೋಹಿಸದೇ ಇದ್ದಾನು? ಸ್ತ್ರೀಮೋಹವು ಜ್ಞಾನಿಗಳನ್ನೂ ಮರುಳುಗೊಳಿಸುವುದೆಂದು ತೋರಿಸುವುದಕ್ಕಾಗಿ, ಬ್ರಹ್ಮದೇವರೂ ಕೂಡ ತಮ್ಮಿಂದ ಸೃಷ್ಟಳಾದ ಮಗಳ ಅತಿಮನೋಹರರೂಪಕ್ಕೆ ಸೋತು ಮೋಹಿಸಿದವರಂತೆ, ಅವಳನ್ನು ಆಲಿಂಗಿಸುವಂತೆ ಅವಳ ಸಮೀಪಕ್ಕೆ ಓಡಿಹೋಗಿ, ಮಕ್ಕಳಾದ ಮರೀಚ್ಯಾದಿಋಷಿಗಳ ಪ್ರಾರ್ಥನೆಯನ್ನು ಅಂಗೀಕರಿಸಿದವರಂತೆ, ಅವಳನ್ನು ಬಿಟ್ಟರು.

ಆದುದರಿಂದ ನನ್ನ ಮೋಹಕಶಕ್ತಿಸ್ವರೂಪಳಾದ ಸ್ತ್ರೀಯು, ಈ ದಶದಿಕ್ಕುಗಳನ್ನು ಗೆದ್ದ ಭುಜಪರಾಕ್ರಮಿಯನ್ನಾದರೂ, ತನ್ನ ಹುಬ್ಬಿನಾಟಮಾತ್ರದಿಂದ ತನ್ನ ಪಾದಾಕ್ರಾಂತನನ್ನಾಗಿ ಮಾಡುವಳು. ಅವಳ ಸಾಹಸವನ್ನು ನೋಡು! ಆದುದರಿಂದ ಯೋಗಿಗಳ ಮಾರ್ಗವನ್ನು ಅನುಸರಿಸುವವನು ಸ್ತ್ರೀಯರ ಸಹವಾಸವನ್ನು ಸರ್ವಥಾ ಮಾಡಬಾರದು. ಇದು ಬಹಳ ಕಷ್ಟವಾದುದರಿಂದ ಇದರ ಪ್ರಾಪ್ತಿಗಾಗಿ ಅವನು ನಿರಂತರ ನನ್ನ ಪಾದಸೇವೆಯಲ್ಲಿ ನಿಷ್ಠನಾಗಬೇಕು. ಸ್ತ್ರೀಯು ನರಕಕ್ಕೆ ಬಾಗಿಲಸದೃಶಳೆಂದು ತಿಳಿಯಬೇಕು.

ಭಗವನ್ಮಾಯೆಯಿಂದ ಮೋಹಿತನಾಗಿ ಯಾವನಾದರೂ ಸಾಧಕನು ಸ್ತ್ರೀಯರ ಸೌಂದರ್ಯದಿಂದ ಆಕರ್ಷಿಸಲ್ಪಟ್ಟು ಭ್ರಾಂತನಾದರೆ, ಆಗ ತಾನು ಆ ಸ್ತ್ರೀಯನ್ನು ಕಾಮದೃಷ್ಟಿಯಿಂದ ನೋಡದೇ, ಹುಲ್ಲಿಂದ ಮುಚ್ಚಲ್ಪಟ್ಟ ಹಾಳುಭಾವಿಯೆಂದೂ, ಸನ್ನಿಹಿತವಾದ ಮೃತ್ಯುವೆಂದೂ ನೋಡಬೇಕು. ಹರಿಭಕ್ತನಾದವನು ಹರಿಭಕ್ತಳಲ್ಲದ ತನ್ನ ಭಾರ್ಯೆಯನ್ನೂ, ಹರಿಭಕ್ತಳಾದ ಭಾರ್ಯೆಯು ಹರಿಭಕ್ತನಲ್ಲದ ಗಂಡನನ್ನು ತನಗೆ ಪ್ರಾಪ್ತವಾದ ಮರಣಸದೃಶವೆಂದು ತಿಳಿಯಬೇಕು.

ಜ್ಞಾನಭಕ್ತ್ಯಾದಿ ಸಂಸ್ಕಾರಗಳಿಲ್ಲದ ಪಶುಸದೃಶ ಜನರು, ಸ್ತ್ರೀಯರನ್ನು ಉಪಭೋಗಕ್ಕಾಗಿಯೂ, ಮಕ್ಕಳನ್ನು ಪಡೆಯುವುದಕ್ಕಾಗಿಯೂ, ದ್ರವ್ಯಾರ್ಜನೆ ಗೃಹಪಾಲನೆಗೆ ಸಹಾಯಕರನ್ನಾಗಿಯೂ ಭಾವಿಸಿ ಪತಿಪತ್ನೀಭಾವಗಳನ್ನು ಹೊಂದುತ್ತಾರೆ. ಇವರ ಜೀವನದ ಮಟ್ಟವು ಹೇಗಿರುತ್ತೆಂದರೆ, ಹೇಗೆ ಬೇಡನು ಬೇಟೆಗಾಗಿ ಮೃಗಗಳನ್ನು ನಿರೀಕ್ಷಿಸುತ್ತಾನೋ, ಹಾಗೆ ಇವರು ತಮ್ಮತಮ್ಮ ಅಪೇಕ್ಷೆಗಳನ್ನು ಹೊಂದುವುದಕ್ಕಾಗಿಯೇ ಪರಸ್ಪರ ನಿರೀಕ್ಷಿಸುವವರಾಗಿ, ಸಹಜಪ್ರೇಮದಿಂದರಹಿತರಾಗಿ, ಸ್ವಭಾವದಿಂದ ಅಂತರಂಗ ವೈರವುಳ್ಳವರಾದರೂ, ಪರಸ್ಪರ ಲಾಭದಾಶೆಯಿಂದ ಒಟ್ಟಿಗಿರುತ್ತಾರೆ.

ಆಶಾಭಂಗವಾದರೆ, ಬೇಟೆಗಾರನು ಮೃಗಕ್ಕೆ ಏನು ಮಾಡುತ್ತಾನೆಯೋ, ಅದನ್ನೇ ಪರಸ್ಪರ ಮಾಡುವವರಾಗುತ್ತಾರೆ. ಇದರಿಂದ ಇವರಿಗೆ ಕಾಲಾಂತರದಲ್ಲಿ ಹಾನಿಯೂ ದುಃಖವೂ ತಪ್ಪ ದು. ಆದುದರಿಂದ ಮಾನವಜನ್ಮಪಡೆದವರು ಸಕಲ ಸುಖ, ಶ್ರೇಯಸ್ಸುಗಳಿಗೆ ಮೂಲಕಾರಣವಾದ ಜ್ಞಾನಾರ್ಜನೆಯನ್ನು ಮಾಡಬೇಕು. ಈ ಜ್ಞಾನದಿಂದ, ಸುಖಸಾಧನಗಳಾದ ಪತ್ನೀ, ಪುತ್ರ, ಧನ, ಗೃಹಾದಿಗಳನ್ನು ಕೊಡತಕ್ಕ ಮತ್ತು ಹೊಂದಿದ್ದರೂ ಬೇಗನೇ ಸ್ವೇಚ್ಛೆಯಿಂದ ನಾಶಮಾಡತಕ್ಕ, ಇವುಗಳಲ್ಲೆಲ್ಲಾ ಅಂತರ್ಯಾಮಿಯಾಗಿ ಸುಖಕೊಡುವ ಶ್ರೀಪರಮಾತ್ಮನು ತಿಳಿಯಲ್ಪಡುವನು. ಅಜ್ಞಾನಿಯು ಧ್ವನಿಗೆ ಮರುಳಾಗಿ ಬೇಟೆಗಾರನಿಗೆ ಸಿಕ್ಕಿ ಬೀಳುವ ಜಿಂಕೆಯಂತೆ, ಧನ, ಪತ್ನೀ, ಪುತ್ರರೆಂಬ ಭಗವಂತನ ಮಾಯಾರೂಪ ಬಂಧನಗಳಿಗೆ ಸಿಕ್ಕಿ ಮೃತ್ಯುಪಾಲಾಗುವನು. ಅವನು ದೇಹದಿಂದ ಪುನಃಪುನಃ

ಕರ್ಮಗಳನ್ನು ಮಾಡಿ, ಸ್ವರ್ಗನರಕಾದಿ ಸಂಚಾರಗಳನ್ನು ಮಾಡುತ್ತಾ, ಲೋಕಗಳನ್ನೂ, ದೇಹಗಳನ್ನೂ ಪಡೆಯುತ್ತಾ, ಭಗವದ್ಭಕ್ತಿ ಇಲ್ಲದಕಾರಣ ಕರ್ಮಕ್ಷಯವಿಲ್ಲದೇ, ದುಷ್ಕರ್ಮವು ಪೂರ್ತಿಯಾದನಂತರ ಮಹಾದುಃಖಪ್ರದವಾದ ಅಂಧಂತಮಸ್ಸನ್ನು ಹೊಂದುವನು.

## ಕರ್ಮಕ್ಷಯ ಹೇಗೆ

ಜೀವನಿಗೆ ಪಂಚಭೂತಾತ್ಮಕವಾದ ಮನಾದಿಕರಣಗಳಿಂದ ಕೂಡಿದ ಶರೀರಪ್ರಾಪ್ತಿಯೇ ಜನ್ಮವೆನಿಸುವದು. ದೇಹವಿಯೋಗವು ಮರಣವೆನಿಸುವುದು. ಜೀವನು ಸ್ವರೂಪತಃ ಹುಟ್ಟುಸಾವಿಲ್ಲದೇ ನಿತ್ಯನಾದವನು. ಇವನು ದೇಹದಿಂದ ಸಹಿತನಾದಾಗ, ಈ ದೇಹವೇ ನಾನು, ಈ ದೇಹಪ್ರಾಪ್ತಿಗೆ ಕಾರಣವು. ಇದು ಅವಿದ್ಯಾಕಾಮಕರ್ಮಾಚರಣೆಗೆ ಸಹಕಾರವಾದ ಭಾವವು. ದುಷ್ಟವಾದ ಜ್ಞಾನವೂ, ಬಂಧಕಕ್ಕೆ ಕಾರಣವೂ ಆಗಿರುತ್ತದೆ. ಈ ಅಹಂಮಮತಾದಿಗಳು ಭಗವದ್ಭಕ್ತಿಯಿಂದಲೂ, ಶಾಸ್ತ್ರಜನ್ಯ ಜ್ಞಾನದಿಂದಲೂ, ಸತ್ಕರ್ಮಾನುಷ್ಠಾನದಿಂದಲೂ, ಭಗವದುಪಾಸನೆಯಿಂದಲೂ ನಿಶ್ಶೇಷವಾಗಿ ಹೋಗುವುದು. ಆಗ ಪುನಃ ದೇಹಾದಿಗಳಿಗೆ ಕಾರಣವಿಲ್ಲದೇ ಹೋಗುವದು. ಈ ರೀತಿ ಕರ್ಮಕ್ಷಯವಾಗುವುದು. ಈ ಉಪಾಸನೆಗಳಿಂದ ಪ್ರೀತನಾದ ಪರಮಾತ್ಮನ ಅನುಗ್ರಹದಿಂದ, ಮೋಕ್ಷವೂ ಲಭಿಸುವದು. ಹೇಗೆ ಚಕ್ಷುರಿಂದ್ರಿಯದಿಂದ ನೋಡುವುದಕ್ಕಲ್ಲದೇ, ಶ್ರವಣೇಂದ್ರಿಯದಂತೆ ಕೇಳುವುದಕ್ಕಾಗುವುದಿಲ್ಲವೋ, ಒಂದೇದೇಹದಲ್ಲಿ ಚಕ್ಷು, ಶ್ರೋತ್ರಗಳಿದ್ದರೂ ಅವು ಹೇಗೆ ಪರಸ್ಪರ ಸಂಬಂಧವಿಲ್ಲದೇ ಬೇರೆಬೇರೆಯಾಗಿಯೇ ಇರುತ್ತವೆಯೋ, ವಿಲಕ್ಷಣಗಳೋ, ಹಾಗೆಯೇ ಒಂದೇ ದೇಹದಲ್ಲಿರುವ ಪರಮಾತ್ಮನು ಸ್ವತಂತ್ರನು, ಸರ್ವಸದ್ಗುಣಪೂರ್ಣನು, ಸರ್ವಶಕ್ತನು, ಜೀವನಿಂದ ಅತ್ಯಂತ ಭಿನ್ನನು ಮತ್ತು ವಿಲಕ್ಷಣನು. ಇದನ್ನು ತಿಳಿಯುವುದೇ ಜ್ಞಾನಕ್ಕೆ ಅಂಕುರದಂತೆ ಇರುತ್ತದೆ.

ಜೀವನು ಸಚ್ಚಿದಾನಂದಸ್ವರೂಪನಾದ್ದರಿಂದ ಜೀವನಿಗೆ ಬಾಹ್ಯ ಸುಖದುಃಖಗಳ ಅಪೇಕ್ಷೆಗೆ ಕಾರಣವಿಲ್ಲ. ದೇಹವು ಜಡವಾದ್ದರಿಂದ ಅದು ಸುಖದುಃಖಗಳನ್ನು ಭರಿಸುವಂತಿಲ್ಲ. ಹಾಗಾದರೆ ಹೇಗೆ ಜೀವನಿಗೆ ಸುಖದುಃಖಗಳು ಉಂಟಾಗುತ್ತೆಂಬ ಭಾವವು ಪ್ರತ್ಯಕ್ಷವಾಗಿ ತೋರುತ್ತದೆ? ಎಂದರೆ, ಅಜ್ಞಾನದಿಂದ ಜೀವನು ದೇಹವೇ ತಾನೆಂದೂ, ಅಹಂಮಮತೆಯಿಂದ ಕೂಡಿರುವುದರಿಂದಲೇ, ಭ್ರಾಂತಿಯಿಂದ ತಾನು ಸುಖಿದುಃಖಿ ಎಂದು ಭಾವಿಸಿ ಕ್ಲೇಶಪಡುತ್ತಾನೆ. ಆದುದರಿಂದ ಶುದ್ಧಜ್ಞಾನವನ್ನು ಪಡೆದು ಮನಸ್ಸಿನ ಕಳವಳ, ಲೋಭವೆಂಬ ದುರಾಶೆ, ಆಶ್ಚರ್ಯ ಔತ್ಸುಕ್ಯವಿಷಯಭಾವನೆಗಳನ್ನು ಬಿಡಬೇಕು. ಇದರಿಂದ ಸುಖದುಃಖಗಳ ಸಂಬಂಧವು ಜೀವನಿಗೆ ತಪ್ಪುವುದು.

ಆದುದರಿಂದ ಕರ್ಮಾನುಸಾರವಾಗಿ ಭಗವಂತನಿಂದ ಸೃಷ್ಟವಾದ ಈ ಮಾನವದೇಹವು, ಭಗವದಿಚ್ಛೆಯಿಂದ ಲೋಕವ್ಯಾಪಾರಗಳುಳ್ಳದ್ದಾಗಿದೆ ಎಂದು ಭಾವಿಸಿ, ಜ್ಞಾನಿಯು ಸರ್ವತ್ರ ನಿಸ್ಸಂಗನಾಗಿ, ನಿರಪೇಕ್ಷೆಯಿಂದ ಪರಮಾತ್ಮನಲ್ಲೇ ದೃಢವಾದ ಚಿತ್ತವನ್ನಿಟ್ಟು, ವೈರಾಗ್ಯದಿಂದ ಸಂಸಾರ ಸಮುದ್ರವನ್ನು ದಾಟುವನು. ಸ್ವರೂಪಾವಿರ್ಭಾವರೂಪ ಮೋಕ್ಷವನ್ನು ಭಗವತ್ಪ್ರಸಾದದಿಂದ ಹೊಂದುವನು, ಎಂದನು.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಮುವ್ವತ್ತೆರಡನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ त्रयस्त्रिंशोऽध्यायः

**भगवानुवाच**

अथ यो गृहमेधीयान् धर्मानेवावसन् गृहे ।
काममर्थं च धर्मं च दोग्धि भूयः पिपर्ति तान् ॥ १ ॥

स चापि भगवद्धर्मात् काममूढः पराङ्मुखः ।
यजते क्रतुभिर्देवान् पितॄंश्च श्रद्धयाऽन्वितः ॥ २ ॥

तच्छ्रद्धयाऽऽक्रान्तमतिः पितृदेवव्रतः पुमान् ।
गत्वा चान्द्रमसं लोकं सोमपाः पुनरेष्यति ॥ ३ ॥

यदा चाहीन्द्रशय्यायां शेतेऽनन्तासनो हरिः ।
तदा लोका लयं यान्ति त एते गृहमेधिनाम् ॥ ४ ॥

ये स्वधर्मं न दुह्यन्ति धीराः कामार्थहेतवे ।
निःसङ्गा न्यस्तकर्माणः प्रशान्ताः शुद्धचेतसः ॥ ५ ॥

निवृत्तिधर्मनिरता निर्ममा निरहङ्कृताः ।
स्वधर्माख्येन सत्त्वेन परिशुद्धेन चेतसा ॥ ६ ॥

सूर्यद्वारेण ते यान्ति पुरुषं विश्वतोमुखम् ।
परावरेशं प्रकृतिमस्योत्पत्त्यन्तभावनम् ॥ ७ ॥

द्विपरार्धावसाने यः प्रलयो ब्रह्मणस्तु ते ।
तावदध्यासते लोके परस्य परचिन्तकाः ॥ ८ ॥

क्ष्माम्भोनलानिलावियन्मन इन्द्रियार्थभूतादिभिः परिवृतः प्रतिसंजिहीर्षुः ।
अव्याकृतं विशति यर्हि गुणत्रयात्मा कालं परं स्वमनुभूय परः स्वयम्भूः ॥ ९ ॥

एवं परेत्य भगवन्तमनुप्रविष्टा ये योगिनो जितमरुन्मनसो विरागाः ।
तेनैव साकममृतं पुरुषं पुराणं ब्रह्म प्रधानमुपयान्त्यगताभिमानाः ॥ १० ॥

आद्यः स्थिरचरणां यो वेदगर्भः सहर्षिभिः ।
योगेश्वरैः कुमाराद्यैः सिद्धैर्योगप्रवर्तकैः ॥ ११ ॥

भेददृष्ट्याऽभिमानेन निःसङ्गेनापि कर्मणा ।
कर्तृत्वात् सगुणं ब्रह्म पुरुषं पुरुषर्षभम् ॥ १२ ॥

स सङ्गत्य पुनः काले कालेनेश्वरमूर्तिना ।
जातेऽगुणव्यतिकरे यथापूर्वं प्रजायते ॥ १३ ॥

ऐश्वर्यं पारमेष्ठ्यं यत् तेऽपि धर्मविनिर्मितम् ।
निषेव्य पुनरायान्ति गुणव्यतिकरेऽसति ॥ १४ ॥

अथ तं सर्वभूतानां हृत्पद्मेषु कृतालयम् ।
श्रुतानुभावं शरणं व्रज भावेन भामिनि ॥ १५ ॥

ये त्विहासक्तमनसः कर्मसु श्रद्धयाऽन्विताः ।
कुर्वन्त्यप्रतिषिद्धानि नित्यान्यपि च कृत्स्नशः ॥ १६ ॥

रजसा कुण्ठमनसः कामात्मानोऽजितेन्द्रियाः ।
पितॄन् यजन्त्यनुदिनं गृहेष्वभिरताशयाः ॥ १७ ॥

त्रैवर्गिकास्ते पुरुषा विमुखा हरिमेधसः ।
कथायां कथनीयोरुविक्रमस्य मधुद्विषः ॥ १८ ॥

नूनं दैवेन विहता ये त्वच्युतकथासुधाम् ।
हित्वा शृण्वन्त्यसद्गाथाः पुरीषमिव वि---भुजः ॥ १९ ॥

दक्षिणेन पथाऽर्यम्णः पितृलोकं व्रजन्ति ते ।
प्रजायां तु प्रजायन्ते श्मशानान्तक्रियाकृतः ॥ २० ॥

ततस्ते क्षीणसुकृताः पुनर्लोकमिमं सति ।
पतन्ति विवशा देवैः सद्यो विभ्रंशितोदयाः ॥ २१ ॥

तस्मात् त्वं सर्वभावेन भजस्व परमेष्ठिनम् ।
तद्गुणाश्रयया भक्त्या भजनीयपदाम्बुजम् ॥ २२ ॥

वासुदेवे भगवति भक्तियोगः प्रयोजितः ।
जनयत्याशु वैराग्यं ज्ञानं यद् ब्रह्मदर्शनम् ॥ २३ ॥

यदाऽस्य चित्तमर्थेषु समेष्विन्द्रियवृत्तिभिः ।
न विगृह्णाति वैषम्यं प्रियमप्रियमप्युत ॥ २४ ॥

स तदैवात्मनाऽऽत्मानं निःसङ्गं समदर्शिनम् ।
हेयोपादेयरहितमारूढपदमीक्षते ॥ २५ ॥

ज्ञानमात्रं परंब्रह्म परमात्मेश्वरः पुमान् ।
दृश्यादिभिः पृथग्भावैर्भगवानेक ईयते ॥ २६ ॥

एतावानेव योगेन समग्रेणेह योगिनः ।
युज्यतेऽभिमतो ह्यर्थो यदसङ्गस्तु कृत्स्नशः ॥ २७ ॥

ज्ञानमेकं पराचीनैरिन्द्रियैर्ब्रह्म निर्गुणम् ।
अवभात्यर्थरूपेण भ्रान्त्या शब्दादिधर्मिणाम् ॥ २८ ॥

यथा महानहङ्कारस्त्रिवृत् पञ्चविधः स्वराट् ।
एकादशविधस्तस्य वपुरण्डं जगद् यतः ॥ २९ ॥

एतद् वै श्रद्धया भक्त्या योगाभ्यासेन नित्यशः ।
समाहितात्मा निःसङ्गो विरक्त्या परिपश्यति ॥ ३० ॥

इत्येतत् कथितं गुर्वि ज्ञानं तद् ब्रह्मदर्शनम् ।
येनैव बुध्यते तत्त्वं प्रकृतेः पुरुषस्य च ॥ ३१ ॥

ज्ञानं योगश्च मन्निष्ठो नैर्गुण्यो भक्तिलक्षणः ।
द्वयोरप्येक एवार्थो भगवच्छब्दलक्षणः ॥ ३२ ॥

यथेन्द्रियैः पृथक् चारैरर्थो बहुगुणाश्रयः ।
एको नानेयते तद्वद् भगवाञ्छास्त्रवर्त्मभिः ॥ ३३ ॥

क्रियया क्रतुभिर्दानैस्तपःस्वाध्यायदर्शनैः ।
आत्मेन्द्रियजयेनापि संन्यासेन च कर्मणाम् ॥ ३४ ॥

योगेन विविधांशेन भक्तियोगेन चैव हि ।
धर्मेणोभयचिह्नेन यः प्रवृत्तिनिवृत्तिमान् ॥ ३५ ॥

आत्मतत्त्वावबोधेन वैराग्येण दृढेन च ।
ईयते भगवानेभिः सगुणो निर्गुणः स्वदृक् ॥ ३६ ॥

प्रावोचं भक्तियोगस्य स्वरूपं ते चतुर्विधम् ।
कालस्य चाव्यक्तगतेर्योऽन्तर्धावति जन्तुषु ॥ ३७ ॥

जीवस्य संसृतीर्बह्वीरविद्याकर्मनिर्मिताः ।
याः स्वयं प्रविशन्नात्मा न वेद गतिमात्मनः ॥ ३८ ॥

नैतत् खलायोपदिशेन्नाविनीताय कर्हिचित् ।
न स्तब्धाय न भिन्नाय नैव धर्मध्वजाय च ॥ ३९ ॥

न लोलुपायोपदिशेन्न गृहारूढचेतसे ।
नाभक्ताय च मे जातु न मद्भक्तद्विषामपि ॥ ४० ॥

श्रद्दधानाय भक्ताय विनीतायानसूयवे ।
भूतेषु कृतमैत्राय शुश्रूषाभिरताय च ॥ ४१ ॥

बहिर्जातविरागाय शान्तचित्ताय दीयते ।
निर्मत्सराय शुचये यस्याहं प्रेयसां प्रियः ॥ ४२ ॥

य इदं श्रुणुयादम्ब श्रद्धया पुरुषः सुकृत् ।
यो वाभिधत्ते मच्चित्तः स ह्येति पदवीं च मे ॥ ४३ ॥

**॥ इति श्रीमद्भागवते (तृतीयस्कन्धे( *3) त्रयस्त्रिंशोऽध्यायः ॥**

### ॥ ಮೂವತ್ತೊಮ್ಮರನೆಯ ಅಧ್ಯಾಯ ॥

## ಸಾಂಸಾರಿಕ ವೃತ್ತಿ ಲಕ್ಷಣ ಹಾಗೂ ಧೂಮ ಮಾರ್ಗ :-

ಹಿಂದಿನ ಅಧ್ಯಾಯದಲ್ಲಿ ಕಪಿಲಪರಮಾತ್ಮನು ಗರ್ಭವಾಸಾದಿದುಃಖಗಳನ್ನೂ, ಜ್ಞಾನಿಯು ಗರ್ಭವಾಸದಲ್ಲಿರುವಾಗ ಅವನಿಗೆ ಉಂಟಾಗುವ ಪರಮಾತ್ಮನಲ್ಲಿ ಮನೋಯೋಗ ಲಕ್ಷಣವನ್ನೂ, ಕೇವಲ ಜೀವನಯಾತ್ರೆಗೆ ಮಾತ್ರ ಪ್ರಯತ್ನಿಸುತ್ತಾ, ಪರಮಾತ್ಮನಿಗೆ ವಿಮುಖರಾದ ಜೀವರ ನಿತ್ಯಜೀವನವಿಧಾನ, ಅವುಗಳಿಂದ ಪ್ರಾಪ್ತವಾಗುವ ಅನರ್ಥಗಳನ್ನೂ; ಭಕ್ತಿಜ್ಞಾನಗಳಿಗಾಗಿ ಪ್ರಯತ್ನಿಸುವವರು ಅನುಷ್ಠಿಸಬೇಕಾದ ಗುಣಗಳನ್ನೂ ದೇವಹೂತೀದೇವಿಗೆ ವಿವರಿಸಿ; ಈ ಅಧ್ಯಾಯದಲ್ಲಿ, ಭಕ್ತಿಯೋಗದಿಂದ ಸಾಧ್ಯವಾದ ಅರ್ಚಿರಾದಿ ಮಾರ್ಗದೇಹತ್ಯಾಗವೇ ಪುನರಾವೃತ್ತಿಇಲ್ಲದ ಸ್ವರೂಪಸುಖಾವಿರ್ಭಾವರೂಪ ಮೋಕ್ಷಕ್ಕೆ ಕಾರಣವೆಂದೂ; ಸ್ವಲ್ಪಭಕ್ತಿಯಿಂದ ಪಿತೃ, ದೇವತೆಗಳನ್ನುದ್ದೇಶಿಸಿ ಕರ್ಮಮಾಡುವ ತ್ರೈವರ್ತಕರೆಂಬುವರಿಗೆ, ಭೂ, ಸ್ವರ್ಗ, ನರಕಸಂಚಾರರೂಪ ಪುನರಾವೃತ್ತಿಯುಳ್ಳ, ದಕ್ಷಿಣಾಯನ, ಧೂಮಮಾರ್ಗಗಳಿಂದ ದೇಹತ್ಯಾಗಗಳಾಗುವವೆಂದೂ ನಿರೂಪಿಸಲ್ಪಡುತ್ತದೆ. ಇದಕ್ಕೆ ಪೂರ್ವಭಾವಿಯಾಗಿ ಕಪಿಲಪರಮಾತ್ಮನು ವಿವಿಧಜೀವರ ಸಾಂಸಾರಿಕ ವೃತ್ತಿಲಕ್ಷಣವನ್ನು ವಿವರಿಸುತ್ತಾನೆ:-

ಎಲೈ ತಾಯಿಯೆ! ಭಗವದ್ವಿಮುಖರಾದ ಕುಟುಂಬ, ಉದರಪೋಷಕರು, ಗೃಹಮೇಧಿಗಳೆಂದು ಕರೆಯಲ್ಪಡುತ್ತಾರೆ. ಅವರು ಸ್ವಭಾವದಿಂದ ಅನುಸರಿಸುವ ಪ್ರವೃತ್ತಿಧರ್ಮಗಳನ್ನು ಸಂಗ್ರಹಿಸಿ ಹೇಳುತ್ತೇನೆ, ಕೇಳು:- ಇವರು ತಮ್ಮ ಪತ್ನೀ, ಪುತ್ರಾದಿಗಳನ್ನು ಸಂರಕ್ಷಿಸುವುದನ್ನೂ, ತಮ್ಮ ದೇಹಪೋಷಣೆಯನ್ನು ತಮ್ಮ ಧರ್ಮವೆಂದು ತಿಳಿಯುತ್ತಾರೆ. ಇದರ ನಿರ್ವಾಹಕ್ಕಾಗಿ ಬೇಕಾದ ವ್ಯವಹಾರವನ್ನೇ ಮಾಡುತ್ತಾರೆ. ಇದೇ ಇವರಿಗೆ ಧರ್ಮವೆಂಬ ಜ್ಞಾನವಿರುತ್ತದೆ. ಕಾಮೋಪಭೋಗವೇ ಇವರಿಗೆ ಕಾಮ ಎಂದರೆ ಅಪೇಕ್ಷೆಯು. ಇದಕ್ಕಾಗಿ ದ್ರವ್ಯಾರ್ಜನೆಮಾಡುವುದೇ ಇವರಿಗೆ ಅರ್ಥ, ಎಂದರೆ ಸಂಪತ್ತು. ಈ ರೀತಿ ಧರ್ಮ, ಅರ್ಥ, ಕಾಮಗಳನ್ನು ಇವರು ಸಾಧಿಸುತ್ತಾ ಪರಂಪರೆಯಾಗಿ ತಮ್ಮ ಮಕ್ಕಳಿಗೂ ಇದನ್ನೇ ಉಪದೇಶಿಸಿ ಮಾಡಿಸುತ್ತಾರೆ. ಇವರಿಗೆ ಚತುರ್ವಿಧಪುರುಷಾರ್ಥಗಳಲ್ಲಿ ನಾಲ್ಕನೆಯದಾದ ಮೋಕ್ಷದಲ್ಲಿ, ನಂಬಿಕೆಯಾಗಲೀ, ಆಸಕ್ತಿಯಾಗಲೀ ಇರುವುದಿಲ್ಲ. ಆದ್ದರಿಂದ ಪರಮಾತ್ಮನನ್ನು ಉಪೇಕ್ಷೆಮಾಡುತ್ತಾರೆ. ಸದ್ಧರ್ಮಗಳನ್ನಾಚರಿಸುವುದಿಲ್ಲ. ವಿಷಯಭೋಗಗಳಲ್ಲೇ ಆಶೆಯುಳ್ಳವರಾದ್ದರಿಂದ, ಇವರಿಗೆ ಭಗವದ್ಜ್ಞಾನವು ಉಂಟಾಗುವುದಿಲ್ಲ. ಕೇವಲ ಮೂಢರೂ, ಮೂರ್ಖರೂ ಆಗಿರುತ್ತಾರೆ.

ಇವರು ಕೆಲವು ವೇಳೆ ಶ್ರದ್ಧೆಯಿಂದ ಇತರ ದೇವತೆಗಳ ಪೂಜೆಯನ್ನೂ, ಪಿತೃಶ್ರಾದ್ಧಾದಿಗಳನ್ನೂ

ಮಾಡುತ್ತಾರೆ. ಮಕ್ಕಳಿಗೂ ಅವುಗಳನ್ನು ಮಾಡುವಂತೆ ಬೋಧಿಸುತ್ತಾರೆ. ಇವರು ಕೆಲವು ಈ ಕಾರ್ಯಗಳನ್ನು ಮಾಡುವಾಗ ದೇವತೆಗಳ ಅಥವ ಪಿತೃಗಳ ತೃಪ್ತಿಗಾಗಿಯೇ ಉದ್ದೇಶಿಸಿ ಮಾಡುತ್ತಾರೆ. ದೇವರಲ್ಲಿ ಇವರಿಗೆ ಭಕ್ತಿ ಇರುವುದಿಲ್ಲ. ದೇವರ ಪ್ರೀತಿಗಾಗಿ ಯಾವ ಕಾರ್ಯವನ್ನೂ ಮಾಡುವುದಿಲ್ಲ. ಇವರು ದೇವತೆಗಳನ್ನೂ, ಪಿತೃಗಳನ್ನೂ ಅರ್ಚಿಸಿದ ಪುಣ್ಯದಿಂದ ಮರಣಾನಂತರ ಧೂಮಯಾನದಿಂದ ಚಂದ್ರಲೋಕಕ್ಕೆ ಹೋಗಿ, ಕೆಲವುಕಾಲ ಸುಖಾನುಭವ ಮಾಡಿ ಪುನಃ ಭೋಲೋಕದಲ್ಲಿ ಹುಟ್ಟುತ್ತಿರುತ್ತಾರೆ. ನರಕದಲ್ಲಿ ಪಾಪಫಲಗಳನ್ನೂ ಅನುಭವಿಸುತ್ತಾರೆ. ಇವರಲ್ಲಿ ಕೆಲವರು ಸ್ವಲ್ಪಭಕ್ತಿಯುಳ್ಳವರು ಸ್ವರ್ಗಸುಖವನ್ನೂ, ಸ್ವರ್ಗದ ಬಹಿರ್ಭಾಗದಲ್ಲಿ ಸ್ವಲ್ಪ ಅನುಭವಿಸಿ ಪುನಃ ಭೂಲೋಕಕ್ಕೆ ಬಂದು ಹುಟ್ಟುತ್ತಾರೆ. ಪರಮಾತ್ಮನು ಮಹಾಪ್ರಳಯಾನಂತರ ಅನಂತನೆಂಬ ಸಹಸ್ರಹೆಡೆಗಳುಳ್ಳ ಶೇಷಪರ್ಯಂಕದಲ್ಲಿ ಮಲಗುವಾಗ, ಇವರು ಪ್ರಾಣದೇವರ ಹೂಂಕಾರದಿಂದ ಲಿಂಗಭಂಗಹೊಂದಿ, ಅಲೋಕವೆಂಬ ಸಾಂತಾನಿಕಲೋಕವನ್ನು ಸೇರುವರು. ಇದೇ ಸಂಸಾರಮಾತ್ರದಲ್ಲಿ ಆಸಕ್ತರಾಗತಕ್ಕ ನಿತ್ಯಸಂಸಾರಿಗಳ ಮಾರ್ಗವು. ಲುಕ್‌ಧಾತುವು ಜ್ಞಾನಾರ್ಥಕವಾದದ್ದು. ಆದುದರಿಂದ ಲೋಕಶಬ್ದವು ಜ್ಞಾನಪ್ರಚುರವಾದ ಲೋಕವೆಂದು ಅರ್ಥವಾಗುತ್ತದೆ. ನಿತ್ಯಸಂಸಾರಿಗಳು ಅಜ್ಞಾನಪ್ರಚುರರು, ಅವಿದ್ಯಾಕಾಮಕರ್ಮನಿರತರು. ಇವರಿಗೆ ವಾಯುದೇವರ ಹೂಂಕಾರದಿಂದ ಲಿಂಗಭಂಗವೂ, ಸಾಂತಾನಿಕ ಅಥವ ಪುರಂಜನಲೋಕ ಪ್ರಾಪ್ತಿಯಾಗುತ್ತೆಂದು ಶಾಸ್ತ್ರಪ್ರಣೀತವಾಗಿರುವುದರಿಂದ, ಅಲೋಕ ಎಂದರೆ ಸಾಂತಾನಿಕಲೋಕವೆಂದು ಮೇಲೆ ಅರ್ಥಮಾಡಲ್ಪಟ್ಟಿದೆ.

## ನಿವೃತ್ತಿ ಕರ್ಮ ಲಕ್ಷಣ ಹಾಗೂ ಅರ್ಚಿರಾದಿ ಮಾರ್ಗ :-

ಯಾರು ಕಾಮ, ಅರ್ಥಗಳನ್ನು ಹೊಂದುವುದಕ್ಕಾಗಿ, ಸ್ವಧರ್ಮಕರ್ಮಗಳನ್ನು ಬಿಡುವುದಿಲ್ಲವೋ, ವೇದೋಕ್ತ ಧರ್ಮಕರ್ಮಗಳನ್ನು ಶ್ರದ್ಧೆಯಿಂದ ಮಾಡುವರೋ, ಅವರು ನಿವೃತ್ತಿಲಕ್ಷಣವಾದ ಕರ್ಮವುಳ್ಳವರು. ಇವರು ಕರ್ಮಫಲಾಪೇಕ್ಷೆ ಇಲ್ಲದೆ ಪರಮಾತ್ಮನ ಪೂಜಾರೂಪವಾಗಿ ಸ್ವವರ್ಣೋಚಿತಧರ್ಮಕರ್ಮಗಳನ್ನು, ಭಕ್ತಿಜ್ಞಾನಪೂರ್ವಕ ಆಚರಿಸುತ್ತಾರೆ. ಇವರು ಶಾಂತವಾದ ಸ್ವಭಾವವುಳ್ಳವರೂ, ನಿರ್ಮಲವಾದ ಮನಸ್ಸುಳ್ಳವರೂ ಆಗಿರುತ್ತಾರೆ. ನಾನು, ನನ್ನದು ಎಂಬ ಮಮತೆಇಲ್ಲದ್ದರಿಂದ ನಿರ್ಮಮರೆಂದೆನಿಸಿಯೂ, ನನ್ನ ಸಮಾನರಿಲ್ಲವೆಂಬ ಗರ್ವರಹಿತರಾದ್ದರಿಂದಲೂ, ನಮ್ರತೆ, ವಿನಯವುಳ್ಳವರಾದುದರಿಂದ ಅನಹಂಕಾರಿಗಳೆಂದೂ ಕರೆಯಲ್ಪಡುವರು. ಇವರಲ್ಲಿ ಪ್ರತೀಕಾಲಂಬನರೆಂಬುವರು, ಪರಮಾತ್ಮನ ನಾನಾ ಅವತಾರರೂಪಗಳಾದ ಪ್ರತಿಮಾಪೂಜೆಗಳನ್ನು, ವೇದೋಕ್ತಾನುಸಾರ ಮಾಡಿ, ವೇದೋಕ್ತಕರ್ಮಾನುಷ್ಠಾನದಿಂದ ಶುದ್ಧ ಮನಸ್ಸುಳ್ಳವರಾಗಿ,

ಪರಮಾತ್ಮನಲ್ಲಿ ಭಕ್ತಿಉಪಾಸನೆಯಿಂದ, ಅರ್ಚಿರಾದಿ ಮಾರ್ಗದಿಂದ ದೇಹತ್ಯಾಗಮಾಡಿ, ಕಾರ್ಯಬ್ರಹ್ಮ ನೆನಿಸುವ, ಸತ್ಯಲೋಕಾಧಿಪತಿಯಾದ ಚತುರ್ಮುಖಬ್ರಹ್ಮದೇವರ ಲೋಕಕ್ಕೆ ಹೋಗುವರು.

ಅಪ್ರತೀಕಾಲಂಬನರೆಂಬ, ದೇವತೆಗಳೂ, ಋಷಿಗಳೂ, ವ್ಯಾಪ್ತ್ಯೋಪಾಸಕರಾಗಿ ಸರ್ವತ್ರಭಗವದಾರಾಧನೆ ಜ್ಞಾನಪೂರ್ವಕವಾಗಿ ಮಾಡಿ, ಸರ್ವತ್ರಪರಮಾತ್ಮನ ಸಾಕ್ಷಾತ್ಕಾರದಿಂದ, ವೈಕುಂಠ, ಶ್ವೇತದ್ವೀಪ, ಅನಂತಾಸನಗಳಲ್ಲಿ ಅಮುಕ್ತಸ್ಥಾನಗಳನ್ನು ಸೇರುವರು. ಇವರೆಲ್ಲಾ ಸೂರ್ಯಮಂಡಲದ ಮುಖಾಂತರವಾಗಿ ಊರ್ಧ್ವಲೋಕಗಳಿಗೆ ಹೋಗುವರು. ಅಲ್ಲಿ ಅವರು ಪರಮಾತ್ಮನ ಉಪಾಸಕರಾಗಿ, ಜೀವನ್ಮುಕ್ತಾವಸ್ಥೆಯಲ್ಲಿ ವಾಸಿಸುತ್ತಾ, ಬ್ರಹ್ಮದೇವರ ದ್ವಿಪರಾರ್ಧಕಾಲವು ಮುಗಿದು ಮಹಾಪ್ರಳಯ ಉಂಟಾಗುವ ಪರ್ಯಂತರ ಇರುವರು. ಯಾವಾಗ ಸಕಲಜಗತ್ಸೃಷ್ಟಿ ಕರ್ತನಾದ ಕಾಲನಾಮಕಪರಮಾತ್ಮನು ಜಗತ್ಸಂಹಾರ ಮಾಡಬೇಕೆಂದು ಅಪೇಕ್ಷಿಸುತ್ತಾನೋ ಆಗ, ಬ್ರಹ್ಮಾಂಡಾಭಿಮಾನಿ, ಮನೋಭಿಮಾನಿದೇವತೆಗಳನ್ನೂ, ಇತರ ಮುಕ್ತಿಯೋಗ್ಯ ಜೀವರನ್ನೂ ಗರುಡ ಶೇಷಮಾರ್ಗಗಳಿಂದ ತಮ್ಮ ಸಮೀಪಕ್ಕೆ ಕರೆದುಕೊಂಡು, ಸತ್ಯಲೋಕವನ್ನೂ ಬಿಟ್ಟು, ಅವ್ಯಾಕೃತಾಕಾಶದ ಸಮೀಪದಲ್ಲಿ ಹರಿಯುವ, ಲಕ್ಷ್ಮ್ಯಾತ್ಮಕವಾದ ವಿರಜಾನದಿಯಲ್ಲಿ ಸರ್ವರಿಂದ ಒಡಗೂಡಿ ಸ್ನಾನಮಾಡುವರು. ಆಗ ಎಲ್ಲರ ಲಿಂಗಶರೀರಗಳೂ ನೀರಿನಲ್ಲಿ ಜಳ್ಳುಗಳಂತೆ ತೇಲಿಹೋಗುವವು.

ಎಲ್ಲರೂ, ಸ್ವರೂಪದೇಹಗಳಿಂದ ಸ್ವಪ್ರಕಾಶರಾದ ಜ್ಞಾನಾನಂದ ಸ್ವರೂಪರಾಗುವರು. ನಂತರ ಇವರನ್ನೆಲ್ಲಾ ಕರೆದುಕೊಂಡು ಬ್ರಹ್ಮದೇವರು, ಪರಮಾತ್ಮನ ಪಟ್ಟಣದ ದ್ವಾರಪಾಲಕರಾದ ಲಕ್ಷ್ಮೀದೇವಿಯರ ಸನ್ನಿಧಿಗೆ ಬರುವರು. ಯಾರು ಶ್ವಾಸಜಯ, ಇಂದ್ರಿಯಜಯ, ಯೋಗಾಭ್ಯಾಸ, ಪರಮಾತ್ಮನಲ್ಲಿ ಭಕ್ತಿಧ್ಯಾನರೂಪ ಯೋಗದಿಂದ, ಹೃತ್ಸ್ಥಲನಿವಾಸಿ, ಪೂರ್ಣಜ್ಞಾನಾನಂದಾತ್ಮಕನಾದ ಬಿಂಬಮೂರ್ತಿಯ ಸಾಕ್ಷಾತ್ಕಾರದಿಂದ, ಬ್ರಹ್ಮರಂಧ್ರವನ್ನು ಭೇದಿಸಿಕೊಂಡು, ಅರ್ಚಿರಾದಿ ಮಾರ್ಗದಿಂದ ಸೂರ್ಯಲೋಕದಾಟಿ, ಅಮುಕ್ತಸ್ಥಾನಗಳಿಗೆ ಬಂದು ಪರಮಾತ್ಮ ಧ್ಯಾನಾಸಕ್ತರಾಗಿರುವರೋ, ಅವರೂ ಸಹ ಬ್ರಹ್ಮದೇವರ ಜೊತೆಯಲ್ಲಿಯೇ ವಿರಜಾಸ್ನಾನ ಮಾಡಿ, ಲಿಂಗದೇಹ ಭಂಗಹೊಂದಿ, ಅವರೊಡನೆಯೇ ಲಕ್ಷ್ಮೀದೇವಿಯರ ಸನ್ನಿಧಾನವನ್ನು ಸೇರುವರು. ಲಕ್ಷ್ಮೀದೇವಿಯರ ಅಪ್ಪ ಣೆಯಿಂದ ಇವರು ಪರಮಾತ್ಮನ ದರ್ಶನ ಪಡೆದು ಪರಮಾತ್ಮನ ಆಜ್ಞೆಯಿಂದ ಮುಕ್ತರಾಗುವರು. ಆದುದರಿಂದ ಜೀವೇಶ್ವರಭೇದಜ್ಞಾನದಿಂದಲೂ, ಫಲಾಪೇಕ್ಷೆಇಲ್ಲದೇ ಜ್ಞಾನಪೂರ್ವಕ, ಭಕ್ತಿಪೂರ್ವಕ, ಭಗವದರ್ಪಣ ಬುದ್ಧಿಯಿಂದ, ವೇದೋಕ್ತಸತ್ಕರ್ಮಾನುಷ್ಠಾನದಿಂದಲೂ; ಪರಮಾತ್ಮನು ಜಗತ್ಸೃಷ್ಟ್ಯಾದಿ ಸಕಲಕರ್ತನು, ಜ್ಞಾನೈಶ್ವರ್ಯಾದ್ಯನಂತಗುಣಪರಿಪೂರ್ಣನು, ಭಕ್ತಾನುಗ್ರಹಕ್ಕಾಗಿ ರಾಮಕೃಷ್ಣಾದಿ

ಅವತಾರರೂಪಗಳಿಂದ ಆವಿರ್ಭವಿಸತಕ್ಕವನೂ, ಕ್ಷರಾಕ್ಷರಪುರುಷರಿಗೆ ಶ್ರೇಷ್ಠನಾದ ಪುರುಷೋತ್ತಮನೂ, ಎಂದು ಉಪಾಸಿಸುವವರಿಗೆ ಸಾಯುಜ್ಯಲಕ್ಷಣವಾದ ಮುಕ್ತಿಯು ಪ್ರಾಪ್ತವಾಗುತ್ತದೆ. ಪರಮಾತ್ಮನ ಸಮೀಪವನ್ನು ಹೊಂದಿದ ಬ್ರಹ್ಮಾದಿ ಸಕಲಮುಕ್ತರು, ಮಹಾಪ್ರಳಯಕಾಲದಲ್ಲಿ ಪರಮಾತ್ಮನ ಉದರ ಪ್ರವೇಶಮಾಡಿ, ಪುನಃ ಜಗತ್ಸೃಷ್ಟಿಪರ್ಯಂತರವಾಗಿ ಅಲ್ಲೇ ಸ್ವರೂಪಸುಖವುಳ್ಳವರಾಗಿ, ಪರಮಾತ್ಮನ ಧ್ಯಾನಾಸಕ್ತರಾಗಿರುತ್ತಾರೆ. ಪುನಃ ಸೃಷ್ಟಿಕಾಲದಲ್ಲಿ ಉದರದಿಂದ ಹೊರಗೆ ಬಂದು ಶ್ವೇತದ್ವೀಪ, ಅನಂತಾಸನ, ವೈಕುಂಠ, ಕ್ಷೀರಸಮುದ್ರ ಇತ್ಯಾದಿ ಮುಕ್ತಸ್ಥಾನಗಳಲ್ಲಿ ಅವರವರ ಯೋಗ್ಯತಾನುಸಾರ ವಾಸ ಮಾಡುವವರಾಗುತ್ತಾರೆ.

ಈ ರೀತಿಯಾಗಿ ಮುಕ್ತರು, ಸೃಷ್ಟಿಕಾಲದಲ್ಲಿ ಪರಮಾತ್ಮನ ದೇಹದಿಂದ ಹೊರಗೂ, ಲಯಕಾಲದಲ್ಲಿ ಪರಮಾತ್ಮನ ಒಳಗೂ, ಜ್ಞಾನೈಶ್ವರ್ಯ, ಆನಂದಾದಿ ಸಕಲಸ್ವಯೋಗ್ಯ ಭೋಗಗಳಿಂದ ಯಾವಾಗಲೂ ಆನಂದಿಸುತ್ತಲೇ ವಾಸವಾಗಿರುವರು. ಕೆಲವರು ಪರಮಾತ್ಮನ ಉದರದಿಂದ ಮುಕ್ತರು ಈಚೆಬರುವುದನ್ನು ಮುಕ್ತರಿಗೆ ಸೃಷ್ಟಿಯಂತೆಯೂ, ಪ್ರಳಯದಲ್ಲಿ ಉದರಪ್ರವೇಶ ಮಾಡುವುದನ್ನು ಮುಕ್ತರ ಸಂಹಾರವೆಂದೂ ಭಾವಿಸಿ ಅರ್ಥಮಾಡುತ್ತಾರೆ. ಜೀವರು ಸ್ವರೂಪದಿಂದ ಹುಟ್ಟುಸಾವಿಲ್ಲದವರೂ, ಮೋಕ್ಷಾನಂತರ ಶಾಶ್ವತಸುಖವುಳ್ಳವರೂ ಆದುದರಿಂದ ಈ ಭಾವನೆಯು ಶಾಸ್ತ್ರವಿರುದ್ಧವಾಗಿರುತ್ತದೆ. ಸಮಂಜಸವಾಗುವುದಿಲ್ಲ. ಇದರಿಂದ ಮೋಕ್ಷದಲ್ಲಿಯೂ ಜೀವರು ತಾರತಮ್ಯವುಳ್ಳವರಾಗಿಯೇ, ನೀಚೋಚ್ಚಭಾವದಿಂದ ಆನಂದಸುಖಾತಿಶಯಗಳಲ್ಲಿ ವೈಲಕ್ಷಣ್ಯವುಳ್ಳವರಾಗಿ, ಪರಸ್ಪರ ಗೌರವಾತಿಶಯಗಳಿಂದ ಸುಖಿಸುತ್ತಾರೆಂದೂ ವ್ಯಕ್ತವಾಗುತ್ತದೆ.

## ತ್ರಿವಿಧ ಜೀವಿಗಳಿಗಾಗುವ ಅಂತಿಮ ಗತಿ :-

ಎಲೈ ಭಾಮಿನಿ! ಭಗವದ್ಭಕ್ತಿಯಿಂದ ಪ್ರಕಾಶಿಸುವವಳೆ! ಭಕ್ತಿಯುಕ್ತ ಭಗವದುಪಾಸನೆಯಿಂದಲೇ ನಿತ್ಯಾನಂದ ಲಕ್ಷಣಮುಕ್ತಿಯು, ಸ್ತ್ರೀಯರಿಗಾಗಲೀ ಪುರುಷರಿಗಾಗಲೀ ಉಂಟಾಗುವುದರಿಂದ, ನೀನು ನಿನ್ನ ಹೃತ್ಸ್ಥಲದಲ್ಲಿ ವಾಸವಾಗಿರುವ ಅಂಗುಷ್ಠಮಾತ್ರನಾದ ಬಿಂಬನಾಮಕ ಪರಮಾತ್ಮನನ್ನು, ಯಾವರೀತಿ ನಾನು, ಶಾಸ್ತ್ರಗಳಲ್ಲಿ ಹೇಳಿರುವಂತೆ ನಿನಗೆ ರೂಪಲಕ್ಷಣವನ್ನು ಹಿಂದೆ ತಿಳಿಸಿದ್ದೆನೋ, ಅದರಂತೆ ಭಕ್ತಿಭಾವದಿಂದ ಮೋಕ್ಷಪ್ರಾಪ್ತಿಗಾಗಿ ಪ್ರಾರ್ಥಿಸುತ್ತಾ ಧ್ಯಾನಮಾಡುವಳಾಗು. ಆತನನ್ನೇ ಕರ್ಮಕ್ಷಯಕ್ಕಾಗಿ ಮೊರೆಹೋಗುವಳಾಗು. ಆತನನ್ನು ನಿನ್ನ ಸ್ವಾಮಿ ಎಂದೂ, ಬ್ರಹ್ಮಾದಿದೇವತೆಗಳಿಗೂ ಮುಕ್ತಿಪ್ರದನೆಂದೂ, ಸರ್ವಭೂತಾತ್ಮನೆಂದೂ, ನೀನು ಆತನ ಸೇವಕಳೆಂದೂ ಭಾವಿಸಿ ಉಪಾಸಿಸುವಳಾಗು. ಇದರಿಂದ

ನಿನಗೂ ನಿತ್ಯಾನಂದಲಕ್ಷಣ ಮುಕ್ತಿಉಂಟಾಗುವುದು.

ಈ ಭೂಲೋಕದಲ್ಲಿ ತ್ರೈವರ್ತಕರೆಂದು ಕರೆಯಲ್ಪಡುವ ಸಾಧಕರು, ಸಂಧ್ಯಾವಂದನಾದಿ ಕರ್ಮಗಳನ್ನೂ,ನಿತ್ಯನೈಮಿತ್ತಿಕಕರ್ಮಗಳನ್ನೂ,ಅಗ್ನಿಷ್ಟೋಮಾದಿಯಾಗಗಳನ್ನೂ,ತಮಗೆಸ್ವರ್ಗಸುಖವು ಪ್ರಾಪ್ತವಾಗಲಿಎಂಬ ಇಚ್ಛೆಯಿಂದ ಶ್ರದ್ಧೆಯುಳ್ಳವರಾಗಿ ಮಾಡುತ್ತಾರೆ. ಇವರು ರಾಜಸಗುಣಪ್ರಧಾನರು, ಕಾಮಪೇಕ್ಷೆಯುಳ್ಳವರು. ಇಂದ್ರಿಯಲೋಲುಪರು. ಇನ್ನು ಕೆಲವರು ಸ್ವರ್ಗಾಪೇಕ್ಷೆಯೂ ಇಲ್ಲದೆ, ಇಲ್ಲೇ ಮನೆಯಲ್ಲಿ ದಾಂಪತ್ಯಸುಖವನ್ನು ಭೋಗಿಸುತ್ತಾ, ದೇಹಪೋಷಣೆಯನ್ನು ಶ್ರದ್ಧೆಯಿಂದ ಮಾಡಲು ಇಚ್ಛಿಸುತ್ತಾರೆ. ಇವರು ಪಿತೃಕಾರ್ಯಗಳನ್ನು ಮಾತ್ರ ಶ್ರದ್ಧೆಯಿಂದ ಮಾಡುತ್ತಾರೆ. ಇವರು ಮಧುವೈರಿಯಾದ ಶ್ರೀಕೃಷ್ಣನ ಪರಮಮಂಗಳ ಕಥಾಶ್ರವಣವಿಚಾರದಲ್ಲಿ ಇಷ್ಟವಿಲ್ಲದವರಾಗಿ ವಿಮುಖರಾಗಿರುವರು. ಆದ್ದರಿಂದ ನಿರ್ಭಾಗ್ಯರಾದ ಇವರು ಅಮೃತಸದೃಶವಾದ ಪರಮಾತ್ಮನ ಕಥಾಶ್ರವಣವೆಂಬ ಸುಧಾಪಾನವನ್ನು ಬಿಟ್ಟು, ಸ್ತ್ರೀವರ್ಣನಾದಿ ದುಷ್ಟವಾರ್ತೆಗಳೆಂಬ ಅಸತ್ಕಥೆಗಳನ್ನು, ಹೇಗೆ ಮಲದಲ್ಲಿ ಹುಟ್ಟಿದ ಕ್ರಿಮಿಯು ಮಲವನ್ನೇ ಹುಡುಕಿಕೊಂಡುಹೋಗಿ ಭಕ್ಷಿಸುತ್ತದೆಯೋ, ಅದರಂತೆ ಆಸಕ್ತಿಯಿಂದ ಕೇಳುವವರಾಗುತ್ತಾರೆ.

ಇಂತಹವರು ಮರಣಾನಂತರ ಮಲಸದೃಶವಾದ ನರಕಪ್ರಾಪ್ತಿಗಳನ್ನೇ ಹೊಂದುತ್ತಾ, ಕೊನೆಗೆ ಶಾಶ್ವತನರಕವೆಂಬ ಅಂಧಂತಮಸ್ಸನ್ನು ಹೊಂದುತ್ತಾರೆ. ಸ್ವರ್ಗಕ್ಕಾಗಿ ಕಾಮ್ಯಕರ್ಮಮಾಡುವ ತ್ರೈವರ್ತಕರೆಂಬ ನಿತ್ಯಸಂಸಾರಿಗಳು, ಪಾಪಪುಣ್ಯಕರ್ಮಗಳಿಂದ ಭೂ, ನರಕ, ಸ್ವರ್ಗಗಳಲ್ಲಿಯೇ ಸಂಚಾರವುಳ್ಳವರಾಗಿ, ಕೊನೆಗೆ ಸುಖದುಃಖಗಳನ್ನು ಶಾಶ್ವತವಾಗಿ ಕೊಡುವ ಪುರಂಜನಲೋಕವನ್ನು, ಸಾಂತಾನಿಕಲೋಕವನ್ನು ಮೋಕ್ಷದಲ್ಲಿ ಸೇರುವರು. ಆದುದರಿಂದ, ಎಲೈ ತಾಯಿಯೆ! ನೀನು ಸಂಸಾರವು ಹೇಯವೆಂಬ ಜ್ಞಾನದಿಂದ ವೈರಾಗ್ಯವುಳ್ಳವರಾಗಿ, ಪರಮಾತ್ಮನನ್ನು ವೇದೋಕ್ತಗುಣಗಳಿಂದ ಸ್ತುತಿಸುತ್ತಾ, ಭಕ್ತಿಯುಕ್ತ ಏಕಾಗ್ರಚಿತ್ತಳಾಗಿ ಆತನನ್ನು ಆರಾಧಿಸುವಳಾಗು. ವಾಸುದೇವನಾಮಕನಾದ ಪರಮಾತ್ಮನಲ್ಲಿ ಮಾಡುವ ಭಕ್ತಿಯೋಗದಿಂದ ದೃಢವಾದ ವೈರಾಗ್ಯವೂ, ಭಗವದ್ದರ್ಶನವನ್ನು ಕೊಡುವ ಅಪರೋಕ್ಷಜ್ಞಾನವೂ ಹುಟ್ಟುವುದು. ಆ ದೃಢವೈರಾಗ್ಯವು ಪ್ರಾಪ್ತವಾದ ಕಾಲದಲ್ಲಿ ಸಾಧಕನಿಗೆ ಇಂದ್ರಿಯಗಳು ವಿಷಯಗಳಲ್ಲಿ ಪ್ರಿಯ, ಅಪ್ರಿಯವೆಂಬ ವೈಷಮ್ಯಭಾವವಿಲ್ಲದೇ, ನಿರಪೇಕ್ಷೆಯಿಂದ, ನಿಶ್ಚಂಚಲವಾಗಿ, ಶುದ್ಧವಾಗುತ್ತವೆ.

ಆಗ ಬಾಹ್ಯಂತಃಕರಣವಿಲ್ಲದ ಶುದ್ಧಸ್ವರೂಪಮನಸ್ಸಿಗೆ, ನಿರ್ಲಿಪ್ತನೂ, ನಿರ್ದೋಷಜ್ಞಾನಸ್ವರೂಪನೂ, ಸರ್ವೋತ್ತಮನೂ, ತನ್ನ ಹೃತ್ಸ್ಥಲದಲ್ಲೇ ವಾಸಿಸುವನೂ ಆದ

ಬಿಂಬರೂಪ ಪರಮಾತ್ಮನ ದರ್ಶನವಾಗುತ್ತದೆ. ಇವನು ಜ್ಞಾನಾನಂದಶರೀರನು, ಗುಣಪೂರ್ಣನು, ಬ್ರಹ್ಮನಾಮಕನು, ಸರ್ವೈಶ್ವರ್ಯಮಯನಾದ ಪರಮಾತ್ಮ ಶಬ್ದವಾಚ್ಯನು. ಇಂತಹ ಪರಮಾತ್ಮನು ದೃಷ್ಟಿಗೆ ವಿಷಯನಾದವನೆಂದು ಹೇಳಲ್ಪಡುತ್ತಾನೆ. ಈ ರೀತಿಯಾಗಿ ಯೋಗದಿಂದ ಸಕಲೇಷ್ಟಪ್ರಾಪ್ತಿಯೂ, ಅನಿಷ್ಟ ನಿವೃತ್ತಿಯೂ ಉಂಟಾಗುತ್ತದೆ. ನನ್ನಿಂದ ಭೇದಗಳಲ್ಲದ ಮತ್ಸ್ಯಾದ್ಯನಂತಾವತಾರಗಳನ್ನು ಜ್ಞಾನಾನಂದ ಸ್ವರೂಪವಾದವುಗಳೆಂದು ತಿಳಿಯಬೇಕು. ಪ್ರಾಕೃತದೇಹಸಂಬಂಧವುಳ್ಳವೆಂದು ಸರ್ವಥಾ ತಿಳಿಯಬಾರದು. ಹಾಗೆ ತಿಳಿದರೆ ಘೋರನರಕ ಪ್ರಾಪ್ತಿಯಾಗುತ್ತದೆ. ಶಬ್ದಾದಿ ವಿಷಯಕಗ್ರಾಹಕರಾದ ತಮೋಯೋಗ್ಯರು ಕೃಷ್ಣಾದ್ಯವತಾರಗಳನ್ನು ಪ್ರಾಕೃತಗಳೆಂದು ತಿಳಿದು ಅಂಧಂತಮಸ್ಸಿಗೆ ಹೋಗುತ್ತಾರೆ.

ಮಹತ್ತತ್ವಾಭಿಮಾನಿಗಳಾದ ಬ್ರಹ್ಮದೇವರು ಹೇಗೆ, ಅಹಂಕಾರತ್ರಯಶರೀರರಾದ ಗರುಡ, ಶೇಷ, ರುದ್ರರಲ್ಲಿ ಪ್ರವಿಷ್ಟರಗಿ ತ್ರಿವೃತ್ ಎಂದು ಕರೆಸುವರೋ, ಭೂತಪಂಚಕಾಭಿ ಮಾನಿಗಳಲ್ಲಿ ಪ್ರವೇಶಿಸಿ ಪಂಚವಿಧರೆಂದು ಕರೆಸುತ್ತಾರೋ, ಬ್ರಹ್ಮಾಂಡದಲ್ಲಿ ಪ್ರವೇಶಿಸಿ ಸ್ವರಾಟ್, ಎಂದು ಕರೆಸುತ್ತಾರೊ, ಅದರೂ, ಬ್ರಹ್ಮದೇವರು ಇವರಲ್ಲೆಲ್ಲಾ ಇರುವವರು ಒಬ್ಬರೇ ಅಗಿರುತ್ತಾರೆಯೋ, ಅದರಂತೆ ಮತ್ಸ್ಯಾದಿದಶರೂಪಿಯೂ, ವಿಶ್ವಾದಿಸಹಸ್ರ ರೂಪಿಯೂ, ಚರಾದಿ ಬಹುರೂಪಿಯೂ, ಅಜಾದ್ಯನಂತರೂಪಿಯೂ ಆದ ಪರಮಾತ್ಮನು ಒಬ್ಬನೇ ಈ ಎಲ್ಲಾ ಸಾಕ್ಷಾತ್ ಅವತಾರಗಳುಳ್ಳವನು ಒಬ್ಬನೇ ಆಗಿರುತ್ತಾನೆ. ಹಾಗೆಯೇ ಬ್ರಹ್ಮಾದಿಸಕಲ ಜೀವಾಂತರ್ಯಾಮಿಯಾಗಿಯೂ, ಆ ಜೀವರಿಂದ ಭಿನ್ನನಾಗಿ ಒಬ್ಬನೇ ಆಗಿರುತ್ತಾನೆ. ಇದನ್ನು ಬ್ರಹ್ಮದೇವರೂ, ಅಪರೋಕ್ಷಹೊಂದಿದವರೂ ಪ್ರತ್ಯಕ್ಷವಾಗಿ ಕಂಡುತಿಳಿಯುತ್ತಾರೆ.

ಎಲೈ ಸಾಧ್ವಿಯೆ! ಇಂತಹ ಪರಮಗಹನವಾದ ಭಗವತ್ಸಾಕ್ಷಾತ್ಕಾರಕ್ಕೆ ಅಪರೋಕ್ಷಜ್ಞಾನವಿಧಾನವು ನಿರೂಪಿತವಾಯಿತು. ಈ ಜ್ಞಾನದಿಂದ ಪ್ರಕೃತಿ, ಪುರುಷರ ಜ್ಞಾನವೂ ಉಂಟಾಗುತ್ತದೆ. ಭಕ್ತಿಜ್ಞಾನಯೋಗಗಳಿಂದ ಭಗವತ್ತತ್ವವೆಂಬ ಒಂದೇ ಫಲವು ಉಂಟಾಗುತ್ತದೆ. ಜೀವನು ಒಬ್ಬನೇ ಆದರೂ, ಕೇಳುವವನು, ಹೇಳುವವನು, ನೋಡುವವನು, ಬೆಳ್ಳಗಿರುವವನು, ಸುಂದರನು, ಕುರೂಪಿಯು ಇತ್ಯಾದಿ ಇಂದ್ರಿಯಕಾರ್ಯಭೇದ ಶರೀರಲಕ್ಷಣವೈಚಿತ್ರ್ಯಗಳಿಂದ ಅನೇಕಗುಣಗಳುಳ್ಳವನಂತೆ ಹೇಗೆ ಹೇಳಲ್ಪಡುತ್ತಾನೋ, ಅದರಂತೆ ವೇದಾದಿಶೃತಿಗಳು ಪರಮಾತ್ಮನು ಅನಂತಗುಣಪೂರ್ಣನೆಂದು ಹೊಗಳುತ್ತವೆ. ನಿತ್ಯಕರ್ಮ, ಯಜ್ಞ, ದಾನ, ತಪಸ್ಸು ವೇದಾಧ್ಯಯನ, ಉಪದೇಶ, ಆತ್ಮೇಂದ್ರಿಯ ಜಯ, ಯೋಗಾಭ್ಯಾಸ, ಭಕ್ತಿಯೋಗ, ಅಭಯಪ್ರದಾನ ಇವುಗಳಲ್ಲಿ ಪ್ರವೃತ್ತಿಯಿಂದಲೂ, ಪರಹಿಂಸೆ, ನಿಷೇಧಕರ್ಮಗಳ ತ್ಯಾಗರೂಪ ನಿವೃತ್ತಿಕರ್ಮದಿಂದಲೂ, ಭಗವತ್ಸಾಕ್ಷಾತ್ಕಾರ ಪ್ರಾಪ್ತಿಯಾಗುತ್ತದೆ.

ತತ್ವಜ್ಞಾನದಿಂದ ಉಂಟಾದ ವೈರಾಗ್ಯದಿಂದ ಸಗುಣಬ್ರಹ್ಮನೆಂಬ ಬ್ರಹ್ಮದೇವರ ಅಂತರ್ಯಾಮಿಯಾದ, ಗುಣಪ್ರೇರಕಸ್ವಾಮಿಯಾದ, ನಿರ್ಗುಣಬ್ರಹ್ಮನೆಂಬ ತ್ರೈಗುಣ್ಯವರ್ಜಿತ ಸರ್ವೇಶ್ವರನ ಪ್ರಸಾದವು ಲಭಿಸುವುದು.

ಈ ರೀತಿಯಾಗಿ ನಾಲ್ಕುವಿಧ ಭಕ್ತಿಯೋಗಲಕ್ಷಣಗಳನ್ನೂ, ಅವ್ಯಕ್ತಸ್ವರೂಪನೂ, ಕಾಲನಾಮಕನೂ, ಸರ್ವಜಗಚ್ಚೇಷ್ಟಕನೂ ಆದ ಕಾಲನಾಮಕನ ಸ್ವರೂಪವನ್ನೂ ನಿನಗೆ ಉಪದೇಶಿಸಿರುವೆನು. ಅವಿದ್ಯಾಕಾಮಕರ್ಮಗಳಿಗೆ ವಶರಾದ ಜೀವರಕರ್ಮಸಂಸ್ರತಿಗಳು ಅಸಂಖ್ಯಾತಗಳಾಗಿವೆ. ಇವುಗಳಿಂದ ಬದ್ಧನಾದ ಜೀವನು ತನ್ನ ಅಂತರ್ಯಾಮಿಯಾದ ಪರಮಾತ್ಮನನ್ನು ತಿಳಿಯುವುದಿಲ್ಲ.

**ಜ್ಞಾನಾಧಿಕಾರಿಗಳು ಹಾಗೂ ಅನಧಿಕಾರಿಗಳು**

ಈ ದಿವ್ಯವಾದ ತತ್ವಜ್ಞಾನವನ್ನೂ, ದುಷ್ಟನಿಗೂ, ಕ್ರೂರನಿಗೂ, ಜಡನಿಗೂ, ಜೀವೇಶ್ವರೈಕ್ಯಬುದ್ಧಿಯುಳ್ಳವನಿಗೂ, ಧರ್ಮಗಳನ್ನು ತಾನು ಆಚರಿಸದೇ ಇತರರಿಗೆ ಬೋಧಿಸತಕ್ಕವನಿಗೂ, ಇಂದ್ರಿಯಲೋಲುಪನಿಗೂ, ಕರ್ಮಭ್ರಷ್ಟನಾದ ಗೃಹಸ್ಥನಿಗೂ, ದೇವರಲ್ಲಿಭಕ್ತಿ ಇಲ್ಲದವನಿಗೂ, ಭಕ್ತರದ್ವೇಷಿಗೂ ತಿಳಿಸಬಾರದು.

ಯಾರುಪರಮಾತ್ಮನಭಕ್ತರೋ, ಶ್ರದ್ಧೆ, ವಿನಯಗಳಿಂದಕೂಡಿದವರೋ, ಅಸೂಯೆಇಲ್ಲದವರೋ, ಭೂತದಯಾಶೀಲರೋ, ಗುರುಪಿತೃಮಾತೃ ಶುಶ್ರೂಷೆಮಾಡತಕ್ಕವರೋ ಇಂದ್ರಿಯನಿಗ್ರಹವುಳ್ಳವರಾಗಿ ಶಾಂತಮನಸ್ಸುಳ್ಳವರೋ ಅವರಿಗೆ ಉಪದೇಶಿಸತಕ್ಕದ್ದು. ಯಾರು ಈ ತತ್ವರಹಸ್ಯಗಳನ್ನು ಭಕ್ತಿಆದರಗಳಿಂದ, ಹೇಳಿ, ಕೇಳುತ್ತಾರೋ ಅವರು ಮುಕ್ತರಾಗಿ ನನ್ನ ಸನ್ನಿಧಾನಕ್ಕೆ ಬರುವವರಾಗುತ್ತಾರೆ.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಮುವ್ವತ್ಮೂರನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ चतुस्त्रिंशोऽध्यायः

**मैत्रेय उवाच**

एवं निशम्य कपिलस्य वचो जनित्री सा कर्दमस्य दयिता किल देवहूतिः ।
विस्रस्तमोहपटला तमभिप्रणम्य तुष्टाव तत्त्वविषयाखिलसिद्धभूमिम् ॥ १ ॥

देवहूतिरुवाचअथाप्ययान्ते सलिले शयानं भूतेन्द्रियार्थात्ममयं वपुस्ते ।

गुणप्रवाहं सदशेषबीजं दध्यौ स्वयं यज्जठराब्जजातः ॥ २ ॥

स एव विश्वस्य भवान् विधत्ते गुणप्रवाहेषु विभक्तवीर्यः ।
सर्गाद्यनीहोऽवितथाभिसन्धिरात्मेश्वरोऽतर्क्यसहस्रशक्तिः ॥ ३ ॥

स त्वं भृतो मे जठरेण नाथ कथं नु यस्योदर एतदासीत् ।
विश्वं युगान्ते वटपत्र एकः शेते स्म मायाशिशुरङ्घ्रिपानः ॥ ४ ॥

त्वं देहतन्त्रः प्रशमाय पाप्मनां निदेशभाजां च विभो विभूतये ।
यथावतारास्तव सूकरादयस्तथाऽयमप्यात्मपथोपलब्धये ॥ ५ ॥

यन्नामधेयश्रवणानुकीर्तनाद् यत्प्रह्वणाद् यत्स्मरणादपि क्वचित् ।
श्वादोऽपि सद्यः सवनाय कल्पते कुतः पुनस्ते भगवन् नु दर्शनात् ॥ ६ ॥

अहो बत श्वपचोऽतो गरीयान् यज्जिह्वाग्रे वर्तते नाम तुभ्यम् ।
तेपुस्तपस्ते जुहुवुः सुराद्यान् ब्रह्मानूचुर्नाम गृणन्ति ये ते ॥ ७ ॥

तं त्वाऽद्धाऽहं ब्रह्म परं पुमांसं प्रत्यक् स्रोतस्यात्मनि संविभाव्यम् ।
स्वतेजसा ध्वस्तगुणप्रवाहं वन्दे विष्णुं कपिलं वेदगर्भम् ॥ ८ ॥

**मैत्रेय उवाच**

ईडितो भगवानेवं कपिलाख्यः परः पुमान् ।
वाचाऽविक्लवयेत्याह मातरं मातृवत्सलः ॥ ९ ॥

**भगवानुवाच**

मार्गेणानेन मातस्ते सुसेव्येनोदितेन मे ।
आस्थितेन परां काष्ठामचिरादवरोत्स्यसि ॥ १० ॥

श्रद्धत्स्वैतन्मतं मह्यं जुष्टं यद् ब्रह्मवादिभिः ।
येन मामभयं यायान्मृत्युमृच्छन्त्यतद्विदः ॥ ११ ॥

**मैत्रेय उवाच**

इति प्रदर्श्य भगवानुशतीमात्मनो गतिम् ।
स्वमात्रा ब्रह्मवादिन्या कपिलोऽनुमतो ययौ ॥ १२ ॥

सा चापि तनयोक्तेन योगादेशेन योगयुक् ।

तस्मिन्नाश्रम आसीना सरस्वत्याः समाहिता ॥ १३ ॥

अभीक्ष्णावगाहकपिशान् जटिलान् कुटिलालकान् ।
आत्मानं चोग्रतपसा बिभ्रती चीरिणं कृशम् ॥ १४ ॥

प्रजापतेः कर्दमस्य तपोयोगविजृम्भितम् ।
स्वगार्हस्थ्यमनौपम्यं प्रार्थ्यं वैमानिकैरपि ॥ १५ ॥

पयःफेननिभाः शय्या दान्ता रुक्मपरिच्छदाः ।
आसनानि च हैमानि सुस्पर्शास्तरणानि च ॥ १६ ॥

स्वच्छस्फटिककुड्येषु महामारकतेषु च ।
रत्नदीपार्चिषो भान्ति ललनारत्नसंयुताः ॥ १७ ॥

गृहोद्यानं कुसुमितै रम्यं बह्वमरद्रुमैः ।
कूजद्विहङ्गमिथुनं गायन्मत्तमधुव्रतम् ॥ १८ ॥

यत्र प्रविष्टमात्मानं विबुधानुचरा जगुः ।
वाप्यामुत्पलगन्धिन्यां कर्दमेनोपलालितम् ॥ १९ ॥

हित्वा तदीप्सिततमप्याखण्डलयोषिताम् ।
किञ्चिच्चकार वदनं पुत्रविश्लेषणातुरा ॥ २० ॥

वनं प्रव्रजिते पत्यावपत्यविरहातुरा ।
ज्ञाततत्त्वाऽप्यभून्नष्टवत्सा गौरिव वत्सला ॥ २१ ॥

तमेव ध्यायती देवमपत्यं कपिलं हरिम् ।
बभूवाविरतोत्साहा निःस्पृहा तादृशे गृहे ॥ २२ ॥

ध्यायती भगवद्रूपं यदाह ध्यानगोचरम् ।
सुतं प्रसन्नवदनं समस्तव्यस्तचिन्तया ॥ २३ ॥

भक्तिप्रवाहयोगेन वैराग्येण बलीयसा ।
युक्तानुष्ठानजातेन ज्ञानेन ब्रह्महेतुना ॥ २४ ॥

विशुद्धेन तदाऽऽत्मानमात्मना विश्वतोमुखम् ।

स्वानुभूत्या तिरोभूतमायागुणविशेषणम् ॥ २५ ॥

ब्रह्मण्यवस्थितमतिर्भगवत्यात्मसंश्रये ।
निवृत्तजीवोपाधित्वात् क्षीणक्लेशाऽऽप्तनिर्वृतिः ॥ २६ ॥

नित्यरूढसमाधित्वात् परावृत्तगुणभ्रमा ।
न सस्मार तदाऽऽत्मानं स्वप्नदृष्टमिवोत्थितः ॥ २७ ॥

तद्देहः परतः पोषोऽप्यकृशश्चाध्यसम्भवात् ।
बभौ मलैरवच्छन्नः सधूम इव पावकः ॥ २८ ॥

स्वाङ्गं तपोयोगमयं मुक्तकेशं गताम्बरम् ।
दैवगुप्तं न बुबुधे वासुदेवप्रविष्टधीः ॥ २९ ॥

एवं सा कपिलोक्तेन मार्गेणाविरतं परम् ।
आत्मानं ब्रह्म निर्वाणं भगवन्तमवाप ह ॥ ३० ॥

तद् वीरासीत् पुण्यतमं क्षेत्रं त्रैलोक्यविश्रुतम् ।
नाम्ना सिद्धपदं यत्र सा संसिद्धिमुपेयुषी ॥ ३१ ॥

तस्यास्तद् योगविधुतमाशु मर्त्यमभूत् सरित् ।
स्रोतसां प्रवरा सौम्य सिद्धिदा सिद्धसेविता ॥ ३२ ॥

कपिलोऽपि महायोगी भगवान् पितुराश्रमात् ।
मातरं समनुज्ञाप्य प्रागुदीचीं दिशं ययौ ॥ ३३ ॥

सिद्धचारणगन्धर्वैर्मुनिभिश्चाप्सरोगणैः ।
स्तूयमानः समुद्रेण दत्तार्हणनिकेतनः ॥ ३४ ॥

आस्ते योगं समाख्याय साङ्ख्याचार्यैरभिष्टुतः ।
त्रयाणामपि लोकानामुपशान्त्यै समाहितः ॥ ३५ ॥

**मैत्रेय उवाच**

एतन्निगदितं तात यत् पृष्टोऽहं त्वयाऽनघ ।
कपिलस्य च संवादो देवहूत्याश्च पावनः ॥ ३६ ॥

य इदमनुश्रुणोति योऽभिधत्ते कपिलमुनेर्मतमात्मयोगगुह्यम् ।
भगवति कृतधीः सुपर्णकेतावुप लभते भगवत्पदारविन्दम् ॥ ३७ ॥

## ॥ इति श्रीमद्भागवते (तृतीयस्कन्धे( *3) चतुस्त्रिंशोऽध्यायः ॥
## ॥ समाप्तश्च तृतीयस्कन्धः ॥

**॥ ಮುವ್ವತ್ನಾಲ್ಕನೆಯ ಅಧ್ಯಾಯ ॥**

ಹಿಂದಿನ ಅಧ್ಯಾಯಗಳಲ್ಲಿ ಕಪಿಲಪರಮಾತ್ಮನಿಂದ ಉಪದಿಷ್ಟಗಳಾದ ತತ್ವರಹಸ್ಯಗಳು, ದೇವಹೂತೀದೇವಿಯರಲ್ಲಿ ಹೇಗೆ ಸಿದ್ಧಿಯನ್ನು ಹೊಂದಿದವು? ಎಂಬ ವಿಚಾರವು ಈ ಅಧ್ಯಾಯದಲ್ಲಿ ನಿರೂಪಿಸಲ್ಪಡುತ್ತದೆ.

ಮೈತ್ರೇಯರು ವಿದುರನಿಗೆ ಹೇಳುತ್ತಾರೆ:- ಎಲೈ ವಿದುರನೆ! ದೇವಹೂತೀದೇವಿಯು ಕಪಿಲಪರಮಾತ್ಮನಿಂದ ತತ್ವರಹಸ್ಯಗಳನ್ನು ಕೇಳಿದ ನಂತರ, ತನ್ನ ವಿಷಯಾಭಿಲಾಷೆಗಳೆಂಬ ಮೋಹದ ಉಪಟಳವನ್ನು ಕಳೆದುಕೊಂಡವಳಾಗಿ, ಕಪಿಲಪನಾಮಕಪರಮಾತ್ಮನಿಗೆ ಪ್ರದಕ್ಷಿಣೆ ನಮಸ್ಕಾರಮಾಡಿ, ಕರ್ದಮರಸೇವೆಯಿಂದ ಅವರಿಗೆ ಪ್ರಿಯಳಾದ್ದರಿಂದ ಕರ್ದಮದಯಿತಳೆಂದು ಪ್ರಖ್ಯಾತಳಾದ, ಕಪಿಲಪರಮಾತ್ಮನು ತಾಯಿಯಾದ ಆ ದೇವಹೂತೀದೇವಿಯು, ಕಪಿಲಪರಮಾತ್ಮನ ಸಕಲತತ್ವ ಜ್ಞಾನಬೋಧಕನೂ, ಬ್ರಹ್ಮದೇವರನ್ನು ಸೃಷ್ಟಿಸಿದವನೂ ಸಾಕ್ಷಾದ್ವಿಷ್ಣುವಿನ ಅವತಾರನೆಂದೂ ಭಾವಿಸಿ, ಭಕ್ತಿಯಿಂದ ಈ ರೀತಿಯಾಗಿ ಸ್ತುತಿಸಿದಳು:-

### ದೇವಹೂತೀದೇವಿಯು ಮಾಡಿದ ಸ್ತುತಿ :-

ಎಲೈ ಸ್ವಾಮಿಯೆ! ಮಹಾಪ್ರಳಯಾನಂತರ ಜಗತ್ತೆಲ್ಲಾ ಪ್ರಳಯೋದಕದಿಂದ ತುಂಬಿದಾಗ, ನಿನ್ನಿಂದ ಪ್ರಳಯದಲ್ಲಿ ನಾಶಮಾಡಲ್ಪಟ್ಟ ಸ್ಥೂಲರೂಪದಿಂದಿದ್ದ ಸಚರಾಚರ ಜಗತ್ತು, ಸೂಕ್ಷ್ಮರೂಪವನ್ನು ಹೊಂದಿರಲಾಗಿ, ಆ ಸಕಲ ಜಡ, ಜೀವರನ್ನೂ ನಿನ್ನ ಉದರದೊಳಗೆ ಇಟ್ಟುಕೊಂಡು, ಒಬ್ಬನೇ ನೀನು ಚಿತ್ಪ್ರಕೃತಿಯಾದ ಲಕ್ಷ್ಮೀಸಮೇತನಾಗಿ ಶೇಷಪರ್ಯಂಕದಲ್ಲಿ ಮಲಗುತ್ತೀಯೆ. ಪುನಃ ಸೃಷ್ಟಿಕಾಲದಲ್ಲಿ, ನಿನ್ನ ನಾಭಿಯಿಂದ ಕಮಲರೂಪವಾದ ಹದಿನಾಲ್ಕು ಲೋಕ, ಜಡ, ಜೀವರಾಶಿಗಳಿಂದ ಕೂಡಿದ, ಚತುರ್ದಶಲೋಕಾತ್ಮಕವಾದ ಕಮಲದಲ್ಲಿ ನೀನು, ಜಗತ್ಸೃಷ್ಟಿಮಾಡುವುದಕ್ಕಾಗಿ ಬ್ರಹ್ಮದೇವರನ್ನು

ಸೃಷ್ಟಿಸುತ್ತೀಯೆ. ನೀನು ಸತ್ವಾದಿಗುಣಗಳನ್ನು ಪ್ರೇರಿಸಿ ಪ್ರವಾಹರೂಪವಾಗಿ ಸತ್ಯವಾದ ಜಗತ್ತನ್ನು ಸೃಷ್ಟಿಸುವವನೂ, ಸಕಲಗುಣಪೂರ್ಣನೂ, ಆದುದರಿಂದ ಗುಣಪ್ರವಾಹನೆಂದು ಕರೆಯಲ್ಪಡುತ್ತೀಯೆ. ಶಶ್ವದೇಕಪ್ರಕಾರನೂ, ಸಾಧುಗುಣಪೂರ್ಣನೂ, ಸ್ವತಂತ್ರನೂ, ಬಲಜ್ಞಾನಪೂರ್ಣನೂ ಆದ್ದರಿಂದ ಸತ್ ಎಂದು ಕರೆಸುತ್ತೀಯೆ. ಸಕಲಕ್ಕೂ ಮೂಲಕಾರಣನಾದ್ದರಿಂದ ಅಶೇಷಬೀಜನೆಂದು ಕರೆಸುತ್ತೀಯೆ. ಬ್ರಹ್ಮದೇವರನ್ನೂ, ದೇವ, ದಾನವ, ಮಾನವಾದಿ ಸಕಲರನ್ನೂ ಸೃಷ್ಟಿಸಿದ ನಂತರವೂ, ನೀನು ಅನಂತರೂಪಗಳಿಂದ ಬ್ರಹ್ಮಾದಿ ಸಕಲಜಗತ್ತಿನಲ್ಲೂ ಪ್ರವೇಶಿಸಿ, ನಿನ್ನ ಅಖಂಡವ್ಯಾಪ್ತಿಯಿಂದ ಎಲ್ಲವನ್ನೂ ಧರಿಸಿ, ಅವರವರ ಗುಣಕರ್ಮಗಳನ್ನು ಮಾಡಿಸುತ್ತೀಯೆ. ನೀನು ಸತ್ಯಸಂಕಲ್ಪನು. ವಿಚಿತ್ರಶಕ್ತಿಯುಳ್ಳವನು. ಯಾರಿಂದಲೂ ಸಾಕಲ್ಯವಾಗಿ ವಿಮರ್ಶಿಸಿ ತಿಳಿಯಲು ಸಾಧ್ಯನಲ್ಲ. ಆದುದರಿಂದ ಅತರ್ಕ್ಯಎಂದು ಕರೆಯಲ್ಪಡುತ್ತೀಯೆ.

ಇಂತಹ ನೀನು ಪ್ರಳಯಾಂತ್ಯದಲ್ಲಿ ವಟಪತ್ರಶಾಯಿಯಾಗಿ ಮಗುವಿನ ರೂಪದಿಂದ, ಪ್ರಪಂಚವನ್ನು ನಿನ್ನ ಉದರದೊಳಗೆ ಇಟ್ಟುಕೊಂಡು, ಬಲಗಾಲಿನ ಹೆಬ್ಬೆರಳನ್ನು ಎರಡುಕೈಲೂ ಹಿಡಿದುಕೊಂಡು ಎತ್ತಿ, ಬಾಯಿಂದ ಚೀಪುತ್ತಾ ಮಗುವಿನ ಚರ್ಯೆಯನ್ನು ಲೋಕಕ್ಕೆ ತೋರುವವನಾಗುತ್ತೀಯೆ ಸ್ವಾಮಿ. ಇಂತಹ ಅದ್ಭುತ ಬಾಲಕನು ಹೇಗೆ ನೀನು ನನ್ನ ಉದರದಲ್ಲಿ ವಾಸವಾಗಿದ್ದು, ನನಗೆ ಭಾರವಾಗದಂತೆ, ಗರ್ಭರೂಪದಿಂದ ನಿನ್ನನ್ನು ಧರಿಸುವಂತೆ ಮಾಡಿದೆಯೋ, ಅಂತಹ ನಿನ್ನ ಮಹಾಮಹಿಮೆಯನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ನೀನು ಹಿರಣ್ಯಾಕ್ಷಾದಿ ದೈತ್ಯರಾದ ಪಾಪಿಷ್ಠರನ್ನು ಸಂಹಾರಮಾಡಿ, ನಿನ್ನ ಭಕ್ತರಿಗೆ ಸುಖ, ಐಶ್ವರ್ಯಗಳನ್ನು ಕೊಡಲು ಕೈಕೊಂಡ, ಯಜ್ಞವರಾಹ ಅವತಾರದಂತೆಯೇ ಈ ಕಪಿಲರೂಪದಿಂದ ನನ್ನ ಜಠರದಿಂದಲೂ ಆವಿರ್ಭವಿಸಿರುತ್ತೀಯೆ. ನಿನಗೆ ನಮ್ಮಂತೆ ಭೌತಿಕ ಪ್ರಾಕೃತಶರೀರ ಸಂಬಂಧವಿಲ್ಲ. ನೀನು ಕೇವಲ ಚಿದಾನಂದಸ್ವರೂಪದೇಹನು.

ಎಲೈ ಸ್ವಾಮಿಯೆ! ನಿನ್ನ ನಾಮಸಂಕೀರ್ತನೆ, ಕಥಾಶ್ರವಣ, ಸ್ಮರಣೆಯಿಂದ ನಾಯಿಮಾಂಸಭಕ್ಷಕನಾದ ನೀಚನೂ ಸಹ ನಿನ್ನನ್ನು ಯಜ್ಞಾದಿಗಳಿಂದ ಆರಾಧಿಸಿದ ಜ್ಞಾನಿಗಳಂತೆ ಸೋಮಪಾನಾರ್ಹರಾಗುತ್ತಾನೆ. ಹಾಗಿರುವಾಗ, ನಿನ್ನ ಸಾಕ್ಷದ್ದರ್ಶನವಾದ ನನಗೆ ಸದ್ಗತಿಯುಂಟಾಗಲು ಅನುಮಾನವಿಲ್ಲ. ಭಕ್ತಿಯಿಂದ ನಿನ್ನ ನಾಮೋಚ್ಚಾರಣೆಯನ್ನು ಕೇವಲ ಒಬ್ಬ ಶ್ವಪಚನು ಮಾಡುತ್ತಿದ್ದರೂ, ಅವನು ಶ್ರೇಷ್ಠನು. ಆದುದರಿಂದ ಈಗ ನಾನು ಬ್ರಹ್ಮನಾಮಕನೂ, ಸರ್ವೋತ್ತಮನೂ, ಭಕ್ತಿಪ್ರವಾಹರೂಪವಾದ, ವಿಷಯಸಂಗರಹಿತವಾದ ಮನಸ್ಸಿಗೆ ಪ್ರತ್ಯಕ್ಷನಾಗತಕ್ಕವನೂ, ಸರ್ವವೇದಪ್ರತಿಪಾದ್ಯನೂ, ಸರ್ವತ್ರಪ್ರವಿಷ್ಟನಾದ ವಿಷ್ಣುನಾಮಕನೂ, ತಾನು ಸುಖಪೂರ್ಣನಾಗಿ ಲೋಕಕ್ಕೆ ಸುಖಜ್ಞಾನಾನಂದಪ್ರದನಾದಕಾರಣ, ಕಪಿಲನಾಮಕನೂ ಆದ ನಿನಗೆ

ನಮಸ್ಕರಿಸುತ್ತೇನೆ, ಎಂದಳು; ಎಂದು ಮೈತ್ರೇಯರು ವಿದುರನಿಗೆ ಹೇಳಿ, ಅದಕ್ಕೆ ಕಪಿಲಪರಮಾತ್ಮನು ಏನು ಹೇಳಿದನೆಂಬುವುದನ್ನು ವರ್ಣಿಸುತ್ತಾರೆ:-

## ದೇವಹೂತೀದೇವಿಯರ ದೇಹತ್ಯಾಗ :-

ಈ ರೀತಿಯಾಗಿ ಕಪಿಲಪರಮಾತ್ಮನು, ತಾನು ಉಪದೇಶಿಸಿದ್ದ ತತ್ವಗಳನ್ನು ತಿಳಿದುಕೊಂಡು ಅದರಂತೆ ತತ್ವಗರ್ಭಿತವಾದ ಸ್ತೋತ್ರದಿಂದ ತಾಯಿಯಾದ ದೇವಹೂತೀಯಿಂದ ಸ್ತುತಿಸಲ್ಪಟ್ಟವನಾಗಿ, ಮಾತೃಸ್ನೇಹದಿಂದಲೂ, ಸ್ತೋತ್ರದಿಂದ ಪ್ರೀತನಾದವನಾಗಿಯೂ, ಪುನಃ ಈ ರೀತಿಯಾಗಿ ಹೇಳಿದನು:-

ಎಲೈ! ತಾಯಿಯೆ! ನಾನು ಹೇಳಿದ ವಿಹಿತಮಾರ್ಗಗಳಿಂದ ನೀನು ಭಗವದುಪಾಸನೆಯನ್ನು ಮಾಡುವಳಾಗು. ಶೀಘ್ರದಲ್ಲಿಯೇ ನೀನು ಪರಮಾತ್ಮನ ಸಾನ್ನಿಧ್ಯವನ್ನು ಹೊಂದುವ ಮೋಕ್ಷವನ್ನೂ ಪಡೆಯುವಳಾಗುತ್ತೀಯೆ. ನಾನು ಹೇಳಿದ ತತ್ವವಿಷಯಗಳನ್ನು ಶ್ರದ್ಧೆಯಿಂದ ಕೇಳಿ, ಆಸ್ತಿಕ್ಯಬುದ್ಧಿಯಿಂದ ಅದರಂತೆ ಅನುಷ್ಠಾನ ಮಾಡುವವರು, ನಾನು ಹೇಳಿರುವುದು ವೇದಸಮ್ಮತವಾದುದರಿಂದಲೂ, ಕೇವಲತಂತ್ರವಿದ್ಯೆಯಲ್ಲವಾದ್ದರಿಂದಲೂ, ಸರ್ವಭಯಪರಿಹಾರವನ್ನು ಹೊಂದಿ ಮುಕ್ತರಾಗುವರು. ಶ್ರದ್ಧೆಇಲ್ಲದೇ ಬಿಟ್ಟವರು ಯಮಲೋಕದ ನರಕಯಾತನೆಗಳಿಗೆ ಭಾಗಿಗಳಾಗುವರು ಎಂದು ಹೇಳಿ ತಾಯಿಯ ಅನುಮತಿಯಿಂದ ಕರ್ದಮಾಶ್ರಮವನ್ನು ಬಿಟ್ಟು ಕಪಿಲಪರಮಾತ್ಮನು ಹೊರಟುಹೋದನು. ತಾಯಿಯಾದ ದೇವಹೂತೀದೇವಿಯು, ಕಪಿಲಪರಮಾತ್ಮನಿಂದ ಹೇಳಲ್ಪಟ್ಟ ಜ್ಞಾನಯೋಗಗಳಿಂದ ಪರಮಾತ್ಮನನ್ನು ಧ್ಯಾನಿಸುತ್ತಾ, ಆ ಸರಸ್ವತೀತೀರದಲ್ಲಿದ್ದ ಕರ್ದಮಾಶ್ರಮದಲ್ಲಿಯೇ ಇದ್ದಳು.

ತ್ರಿಕಾಲಸ್ನಾನ, ಪರ್ಣಾಹಾರ ಮುಂತಾದವುಗಳಿಂದ ಆಕೆಯ ಸುಂದರಗಳಾದ ಮುಂಗುರುಳುಗಳಿಂದ ಶೋಭಿಸುತ್ತಿದ್ದ ಕೇಶಪಾಶಗಳು ಜಟೆಗಟ್ಟಿದವು. ದೇಹವು ಕೃಶವಾಗುತ್ತಾ ಬಂತು. ಈಕೆಯ ತಪಸ್ಸು ಅತ್ಯಂತ ಶ್ರೇಷ್ಠವಾಗಿ ಅಭಿವೃದ್ಧವಾಯಿತು. ಯಾವ ಕರ್ದಮಪ್ರಜೇಶ್ವರರ ಮಹತ್ತಪೋಪ್ರಭಾವದಿಂದ ಕರ್ದಮ ಆಶ್ರಮವು ಹಾಲಿನಕೆನೆಯಂತೆ ಮೃದು, ಶುಭ್ರವಾದ ಹಾಸಿಕೆಗಳಿಂದಲೂ, ರತ್ನಖಚಿತಗಳಾದ ದಂತದಮಂಚ, ಸುಖಾಸನಾದಿಗಳಿಂದಲೂ, ಭಂಗಾರದ ಪೀಠಗಳಿಂದಲೂ, ಸುಖಸ್ಪರ್ಶಗಳಾದ ಪೀಠದ ಮೇಲೆ ಹಾಸುವ ಆಸ್ತರಣಗಳಿಂದಲೂ, ಶುಭ್ರಸ್ಫಟಿಕದ ಹಲಗೆಗಳಿಂದ ನಿರ್ಮಿತವಾದ ಗೋಡೆಗಳಲ್ಲಿ, ನವರತ್ನಖಚಿತಗಳಾದ ಸರ್ವಾಂಗಸುಂದರ ಭಂಗಾರದ ಸ್ತ್ರೀಪ್ರತಿಮೆಗಳ ಸಾಲಿನಿಂದ ಹಿಡಿಯಲ್ಪಟ್ಟ ಸ್ವಪ್ರಕಾಶರತ್ನ ದೀಪದ ಸಾಲುಗಳಿಂದಲೂ, ಫಲಪುಷ್ಪ ಭರಿತಗಳಾದ ದೇವಲೋಕ ಸದೃಶಗಳಾದ ವೃಕ್ಷಗಳಿಂದಲೂ, ನಿರ್ಮಲೋದಕದಿಂದ ಕೂಡಿದ ಮರಕತ ಸೋಪಾನಗಳಿಂದ ಶೋಭಿತವಾದ

ಕೊಳಗಳಿಂದಲೂ, ಹಂಸ, ಚಕ್ರವಾಕ ಪಕ್ಷಿಗಳೇನು, ದುಂಬಿಗಳೇನು, ಇವುಗಳ ಮೃದುಮಧುರಧ್ವನಿಗಳಿಂದ ಕೂಡಿದ್ದಾಗಿಯೂ, ಕೇವಲ ದೇವಲೋಕದಲ್ಲಿ ವಿಮಾನಗಳಲ್ಲಿ ಸಂಚಾರಮಾಡುವ ದೇವತೆಗಳಿಗಾದರೂ, ಆಶ್ಚರ್ಯಪಟ್ಟು ತಮಗೆ ಬೇಕೆಂಬ ಆಶೆಹುಟ್ಟಿಸುವಂತಿದ್ದ; ದೇವತೆಗಳು ಇಲ್ಲಿಗೆ ಪ್ರವೇಶಮಾಡಿದ್ದರೆ ಇದನ್ನು ಬಿಟ್ಟುಹೋಗಲು ಅಪೇಕ್ಷಿಸುತ್ತಿರಲಿಲ್ಲದಂತಹ ವೈಭವಗಳಿಂದ ಕೂಡಿದ ತನ್ನ ವಾಸಸ್ಥಳವಾದ ಈ ಆಶ್ರಮದಲ್ಲಿ ದೇವಹೂತೀದೇವಿಯು ಅಭಿಮಾನವಿಲ್ಲದವಳಾದಳು.

ಇಂದ್ರದೇವರ ಸ್ತ್ರೀಯರಿಂದಲೂ ಸಹ ಅಪೇಕ್ಷಿತವಾದ ಮಹಾಸುಖಸಾಧನವಾದ, ಅನರ್ಘ್ಯ ಐಶ್ವರ್ಯದಿಂದ ಕೂಡಿದ ಈ ಆಶ್ರಮವನ್ನು ಬಿಟ್ಟು ದೇವಹೂತೀದೇವಿಯು ಏಕಾಂತಸ್ಥಳಕ್ಕೆ ತಪಸ್ಸಿಗಾಗಿ ಹೋಗಲು ನಿರ್ಧರಿಸಿದಾಗ, ಸ್ವಲ್ಪವಾದರೂ ಇವುಗಳಲ್ಲಿ ಅಭಿಮಾನಮಾಡಲಿಲ್ಲ. ಆದರೆ ತನ್ನನ್ನು ಬಿಟ್ಟುಹೋದ ತನ್ನ ಮಗನ ಅಗಲಿಕೆಯಿಂದ ಸ್ವಲ್ಪದುಃಖಿಸುವಂತೆ ಮುಖವುಳ್ಳವಾದಳು. ಸಕಲತತ್ವಜ್ಞಾನಶ್ರವಣದಿಂದ ದೃಢಚಿತ್ತಳಾಗಿದ್ದರೂ, ಕರುವನ್ನು ಅಗಲಿದ ಗೋವಿನಂತೆ ಆಕೆಯು ತೋರುತ್ತಿದ್ದಳು. ತನ್ನ ಮಗನಾದ ಕಪಿಲಪರಮಾತ್ಮನ ಅಗಲಿಕೆಯಿಂದ ಖಿನ್ನಮನಸ್ಕಳಾಗಿ, ಆ ಕಪಿಲಪರಮಾತ್ಮನ ರೂಪ, ಗುಣಗಳನ್ನೇ ಸ್ಮರಿಸುತ್ತಾ, ಈ ತನ್ನ ಗೃಹಾದಿಗಳಲ್ಲಿ ಆಸಕ್ತಿಇಲ್ಲದವಳಾದಳು. ನಂತರ ಸರಸ್ವತೀನದೀತೀರದಲ್ಲಿ ಏಕಾಂತಸ್ಥಳದಲ್ಲಿ ಕುಳಿತು ಕಪಿಲೋಪದೇಶದಂತೆ ಧ್ಯಾನಾಸಕ್ತಳಾದಳು.

ಜಿತಾಸನದಲ್ಲಿ ಕುಳಿತವಳಾಗಿ, ಬಾಹ್ಯಪದಾರ್ಥಗಳಲ್ಲಿ ಜ್ಞಾನವಿಲ್ಲದೇ ಅತ್ಯಂತ ವೈರಾಗ್ಯದಿಂದಲೂ, ದೃಢಪ್ರವಾಹರೂಪವಾದ ಭಕ್ತಿಯಿಂದಲೂ, ಪ್ರಸನ್ನವದನನಾದ ಕಪಿಲಪರಮಾತ್ಮನನ್ನೇ ಧ್ಯಾನಿಸುತ್ತಾ, ಆ ಕಪಿಲನಲ್ಲಿಯೇ, ಉಪಾಸನೆ ಮಾಡಬೇಕಾದ ಯಾವ ರೂಪಲಕ್ಷಣಗಳುಳ್ಳ ಪರಮಾತ್ಮನು ಧ್ಯಾನಗೋಚರನಾಗುವನೆಂದು, ತಾನು ಉಪದೇಶಿಸಲ್ಪಟಿದ್ದಳೋ ಆ ಭಗವದ್ರೂಪವನ್ನು ಧ್ಯಾನಮಾಡಿದಳು. ಈ ಧ್ಯಾನದಿಂದ ಅಂತಃಕರಣವು ಪರಿಶುದ್ಧವಾಗಿ, ಕಣ್ಣಿಗೆ ಮರೆಯಾಗದಂತೆ, ಅವಿಚ್ಛಿನ್ನವಾಗಿ ದೇವಹೂತೀದೇವಿಗೆ ಭಗವದ್ದರ್ಶನ ಲಾಭವು ಪ್ರಾಪ್ತವಾಯಿತು. ಅವಳ ಮನಸ್ಸು ಪ್ರಕೃತಿಬಂಧನದಿಂದ ಬಿಡಲ್ಪಟ್ಟಿತು. ಬಾಹ್ಯಸುಖದುಃಖಗಳು ಸಂಬಂಧಿಸದೆ, ಕೇವಲ ಆಂತರ್ಯಸುಖಾನಂದಗಳನ್ನೇ ವುಳ್ಳವಳಾದಳು. ಆ ಸ್ಥಿತಿಯಲ್ಲಿ ಆಕೆಗೆ ತನಗೆ ಬಾಹ್ಯದೇಹವಿದೆ ಎಂಬ ಭಾವವೂ ಇರಲಿಲ್ಲ. ಅಂದರೆ ದೇಹಾಭಿಮಾನವು ಅಳಿಸಿಹೋಗಿತ್ತು. ದೇಹಪೋಷಣೆಯ ಪ್ರಯತ್ನವೇ ಇಲ್ಲದ್ದರಿಂದ ದೇಹವು ಕಾಷ್ಠದಂತೆ ಕೃಶವಾಯಿತು. ಧೂಳು ಮುಂತಾದ್ದರಿಂದ ಮಲಿನವಾಗಿ, ಹೊಗೆಯಿಂದವೃತವಾದ ಅಗ್ನಿಯಂತೆ ದೇವಹೂತೀದೇವಿಯ ದೇಹವು ಶೋಭಿಸುತ್ತಿತ್ತು. ಈ ರೀತಿಯಲ್ಲಿ ವಾಸುದೇವಮೂರ್ತಿಯ ಧ್ಯಾನೈಕನಿಷ್ಠೆಯಾದ ದೇವಹೂತೀದೇವಿಗೆ ಗೂಢಸಮಾಧಿ

ಯೋಗ ಮನೋರೂಪವುಂಟಾಗಿ, ತನ್ನ ಜಟೆಗಳು ಗಾಳಿಗೆ ಹಾರಾಡುತ್ತಿದ್ದರೂ, ಬಟ್ಟೆಯು ಜೀರ್ಣವಾಗಿ ಹೋಗಿದ್ದರೂ ಆಕೆಗೆ ತನ್ನ ದೇಹವೇ ತನಗೆ ತಿಳಿಯದೇ ಹೋಯಿತು.

ಈ ರೀತಿಯಾಗಿ ವಾಸುದೇವನ ನಿರಂತರ ದರ್ಶನದಿಂದ ದೇವಹೂತೀದೇವಿಗೆ ಆ ಜಡದೇಹಸಂಬಂಧವು ತಪ್ಪಿ ಪರಮಾತ್ಮನ ಲೋಕವು ಪ್ರಾಪ್ತವಾಯಿತು. ಅಂದರೆ ಜೀವನ್ಮುಕ್ತಾವಸ್ಥೆಯು, ಅಮುಕ್ತಸ್ಥಾನದಲ್ಲಿ ಪರಮಾತ್ಮನ ಸಾನ್ನಿಧ್ಯದಲ್ಲಿ ಪ್ರಾಪ್ತವಾಯಿತು. ದೇವಹೂತೀದೇವಿಯು ಯೋಗಸಿದ್ಧಿಯನ್ನು ಪಡೆದ ತಪಸ್ಸುಮಾಡಿದ ಸ್ಥಳವು ಸಿದ್ಧಪದವೆಂಬ ಹೆಸರಿನಿಂದ ಪ್ರಖ್ಯಾತವಾಯಿತು. ದೇವಹೂತೀದೇವಿಯ ಶರೀರವು, ಸಿದ್ಧರಿಂದಲೂ, ಸಾಧ್ಯರಿಂದಲೂ, ಸೇವಿತವಾದ ಪವಿತ್ರವಾದ ನದಿಯರೂಪವನ್ನು ಹೊಂದಿ ಪ್ರವಹಿಸಿತು. ತಾಯಿಯನ್ನು ಬಿಟ್ಟುಹೊರಟ ಕಪಿಲಪರಮಾತ್ಮನು ಉತ್ತರಾಭಿಮುಖವಾಗಿ ಹೊರಟು, ಸಮುದ್ರತೀರವನ್ನು ಸೇರಿ, ಸಮುದ್ರರಾಜನಾದ ವರುಣನಿಂದ ಸಮುದ್ರದಲ್ಲಿ ಸ್ಥಳವನ್ನು ಹೊಂದಿ, ಸಿದ್ಧ, ಚಾರಣ, ಗಂಧರ್ವರಿಂದ ಸೇವಿತನಾಗಿ, ಸಾಂಖ್ಯಶಾಸ್ತ್ರವನ್ನು ವೇದಸಮ್ಮತವಾಗುವಂತೆ ಸಾಂಖ್ಯಾಚಾರ್ಯರುಗಳಿಗೆ ಉಪದೇಶಿಸುತ್ತಾ, ಧರ್ಮಜ್ಞಾನಪ್ರಚಾರದಿಂದ ಮುರುಲೋಕಗಳಿಗೂ ಕ್ಷೇಮ ಉಂಟುಮಾಡುವುದಕ್ಕಾಗಿ ಅಲ್ಲಿ ವಾಸಿಸುತ್ತಾರೆ. ಎಲೈ ವಿದುರನೆ! ನೀನು ಏನು ಪ್ರಶ್ನೆಗಳನ್ನು ಮಾಡಿದ್ದಿಯೋ ಅವುಗಳಿಗೆ ನನ್ನಿಂದ ಉತ್ತರವು ಕೊಡಲ್ಪಟ್ಟಿತು. ಈ ದೇವಹೂತೀದೇವಿಯ, ಕಪಿಲಸಂವಾದರೂಪ ಆಖ್ಯಾನವನ್ನು ಯಾರು ಶ್ರದ್ಧೆಯಿಂದ ಕೇಳುತ್ತಾರೋ, ಅದನ್ನು ಸತ್ಯವೆಂದು ತಿಳಿದು ಅದರಂತೆ ಅನುಷ್ಠಾನಮಾಡಿ, ಗರುಡಧ್ವಜನಾದ ಶ್ರೀಪರಮಾತ್ಮನಲ್ಲಿ ಭಕ್ತಿರೂಪ ಮನೋಯೋಗವನ್ನು ಹೊಂದುತ್ತಾರೆಯೋ, ಅವರು ಮುಕ್ತರಾಗಿ ಭಗವತ್ಸನ್ನಿಧಾನವನ್ನೂ ಸೇರುತ್ತಾರೆ.

**ಇತಿ ಶ್ರೀಮದ್ಭಾಗವತ ತೃತೀಯಸ್ಕಂಧದ ಮೂವತ್ತಾಲ್ಕನೆಯ ಅಧ್ಯಾಯವು ಮುಗಿಯಿತು.**

**ಮೂರನೆಯ ಸ್ಕಂಧವು ಸಂಪೂರ್ಣವಾಯಿತು.**